

ಎಲ್ಲರ ಗಾಂಧೀಜಿ

ಮಹಾತ್ಮ ಗಾಂಧೀಜಿಯವರ
ಮಾತು ಬರಹ ಚಿಂತನೆ



ಸಂಪಾದಕ
ನಟರಾಜ್ ಹುಳಿಯಾರ್



"...ನಾನೊಬ್ಬ 'ಅನೇಕಾಂತವಾದಿ.'
ನಾನು ಒಂದು ಪ್ರಶ್ನೆಯ
ಹಲವು ಮಗ್ಗುಲುಗಳನ್ನು ನೋಡಬಲ್ಲೆ."

mkgandhi

ಪ್ರಿಯರಾದ ಶಿವಪ್ರಸಾದ್ ಅವರಿಗೆ
[illegible]
ನಟರಾಜ್ ಹುಳಿಯಾರ್
1 Oct 2024

ಎಲ್ಲರ ಗಾಂಧೀಜಿ

ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ

ಸಂಪಾದಕ

ನಟರಾಜ್ ಹುಳಿಯಾರ್

ಪಲ್ಲವ ಪ್ರಕಾಶನ
ಚನ್ನಪಟ್ಟಣ

ELLARA GANDHIJI:
MAHATMA GANDHIJIYAVARA MAATU, BARAHA, CHINTANE
(Everyman's Gandhiji:
Kannada Translations of Mahatma Gandhiji's Speeches, Writings and Thoughts)

Compiled and Edited by
Dr. Nataraj Huliyar

Published by
Pallava Prakashana
Channapattana Post
Via Emmiganur
Bellary 583 113
Cell: 88800 87235
Pallavaprakashan@gmail.com

ಮೊದಲ ಮುದ್ರಣ: 14 ಡಿಸೆಂಬರ್ 2022
ಎರಡನೇ ಮುದ್ರಣ: 25 ಡಿಸೆಂಬರ್ 2022
ಮೂರನೇ ಮುದ್ರಣ: 14 ಫೆಬ್ರವರಿ 2023

ಪ್ರತಿಗಳಿಗಾಗಿ: 88800 87235/ 94805 83913/ 94490 60393

Pages: xxii +386

Price: Rs. 300

ISBN: 97881- 955903-1-5

First Impression: 14 Dec 2022
Second Impression: 25 Dec 2022
Third Impression: 14 Feb 2023

Paper: 70 GSM NS Book Print

ಮುಖಪುಟ ಚಿತ್ರಗಳು: **ಸುದೇಶ್ ಮಹಾನ್**
ಮುಖಪುಟ ವಿನ್ಯಾಸ: **ಯು.ಟಿ. ಸುರೇಶ್**
ಪುಟ ವಿನ್ಯಾಸ: ನೀತು ಗ್ರಾಫಿಕ್ಸ್
ಮುದ್ರಣ: **ರೀಗಲ್ ಪ್ರಿಂಟ್ ಸರ್ವೀಸ್**
ಬೆಂಗಳೂರು
ಮೊ: 9964351655

ನಿನಗೊಂದು ತಾಯಿತ ಕೊಡುತ್ತೇನೆ

ನಿನಗೊಂದು ತಾಯಿತ ಕೊಡುತ್ತೇನೆ.
ನಿನಗೆ ಅನುಮಾನವಿದ್ದಾಗ,
ನಿನ್ನಲ್ಲಿ ನೀನೇ ಅತಿಯಾಗಿ ಮುಳುಗಿ ಹೋಗಿದ್ದಾಗ
ನಿನಗೆ ನೀನೇ ಈ ಪರೀಕ್ಷೆ ಮಾಡಿಕೋ:
ನೀನು ನೋಡಿರುವ ಕಡುಬಡವನನ್ನು,
ಅತ್ಯಂತ ದುರ್ಬಲ ಮನುಷ್ಯನನ್ನು ನೆನಸಿಕೋ;
ಬಳಿಕ ನಿನ್ನನ್ನು ನೀನೇ ಕೇಳಿಕೋ:

ನೀನೀಗ ಇಡಬೇಕೆಂದುಕೊಂಡಿರುವ ಹೆಜ್ಜೆಯಿಂದ
ಅವನಿಗೆ ಏನಾದರೂ ಉಪಯೋಗವಿದೆಯೆ?
ಅವನು ಈ ಹೆಜ್ಜೆಯಿಂದ ಏನನ್ನಾದರೂ ಪಡೆಯಬಲ್ಲನೆ?
ಈ ಹೆಜ್ಜೆ ಅವನಲ್ಲಿ ತನ್ನ ಬದುಕಿನ ಮೇಲೆ, ತನ್ನ ವಿಧಿಯ ಮೇಲೆ
ನಿಯಂತ್ರಣ ಸಾಧಿಸುವಂಥ ಶಕ್ತಿ ತುಂಬಬಲ್ಲದೆ?

ಅಂದರೆ, ನೀನು ಇಡಬೇಕೆಂದುಕೊಂಡಿರುವ ಈ ಹೆಜ್ಜೆ
ಹಸಿದವರಿಗೆ ಹಾಗೂ ಚೈತನ್ಯ ಬತ್ತಿದ ಲಕ್ಷಾಂತರ ಜನರಿಗೆ
ಸ್ವರಾಜ್ಯ ತಂದುಕೊಡಬಲ್ಲದೆ?

ಈ ಪ್ರಶ್ನೆಗಳನ್ನು ನಿನಗೆ ನೀನೇ ಕೇಳಿಕೊಂಡರೆ ಸಾಕು:
ನಿನ್ನೆಲ್ಲ ಅನುಮಾನಗಳೂ
ನಿನ್ನಲ್ಲಿ ನೀನೇ ಮುಳುಗಿಹೋಗುವ ಆತ್ಮವ್ಯಸನವೂ
ಕರಗಿಹೋಗುವುದನ್ನು ನೀನೇ ಕಾಣುವೆ.

ಮಹಾತ್ಮ ಗಾಂಧೀಜಿ

ಅರ್ಪಣೆ

ಒಂದು ಪುಟ್ಟ ಹೊಲಿಗೆ ಯಂತ್ರ ತುಳಿಯುತ್ತಾ
ಘನತೆಯಿಂದ ಬದುಕುತ್ತಾ
ನಾಲ್ಕು ಮಕ್ಕಳನ್ನು ಸಾಕಿ ಸಲಹಿ ಬೆಳೆಸುತ್ತಾ
ಎಲ್ಲರ ಬದುಕಿನಲ್ಲೂ ಇರುವ
ಗಾಂಧೀ ಮಾರ್ಗದ ಅನಂತ ಸಾಧ್ಯತೆಗಳನ್ನು
ಸದ್ದಿಲ್ಲದೆ ಸಾಕಾರ ಮಾಡಿ ತೋರಿಸಿದ
ನನ್ನ ತಾಯಿಗೆ
ಮತ್ತು ಇಂಥ ಕೋಟಿ ಕೋಟಿ ತಾಯಂದಿರಿಗೆ...

ಗಾಂಧೀ ಬರಹಗಳ ಸಖ್ಯದಲ್ಲಿ

೧

ಮಹಾತ್ಮ ಗಾಂಧೀಜಿಯವರ ಪಾರದರ್ಶಕ ವ್ಯಕ್ತಿತ್ವ ಮತ್ತು ಚಿಂತನೆಯ ಅಪೂರ್ವ ಹೊಳಹುಗಳನ್ನು ಕಾಣಿಸುವ ನೂರಿಪ್ಪತ್ನಾಲ್ಕು ಮಾತು–ಬರಹಗಳು ಹಾಗೂ ನೂರಕ್ಕೂ ಹೆಚ್ಚು ಗಾಂಧೀ ನುಡಿಗಳನ್ನು ಒಳಗೊಂಡ 'ಎಲ್ಲರ ಗಾಂಧೀಜಿ' ಸಂಕಲನವನ್ನು ಎಲ್ಲರ ಕೈಗೆ ಒಪ್ಪಿಸುತ್ತಿರುವೆ. ಈ ಬರಹಗಳನ್ನು ಮುಕ್ತ ಮನಸ್ಸಿನಿಂದ ಓದುವ ಎಲ್ಲರ ಪ್ರಜ್ಞೆ ಹಾಗೂ ಮನಸ್ಸಿನೊಳಗೆ ಗಾಂಧೀ ಚಿಂತನೆಗಳು ನಿಧಾನಕ್ಕೆ ಇಳಿಯಬಲ್ಲವು; ಗಾಂಧೀಜಿಯ ಬಗ್ಗೆ ಇರುವ ಅನಗತ್ಯ ಪೂರ್ವಗ್ರಹಗಳು ಚದುರಿಹೋಗಬಲ್ಲವು. ಯಾಕೆಂದರೆ ಅಂತಿಮವಾಗಿ ಗಾಂಧೀಜಿ ಮಾತಾಡುತ್ತಿರುವುದು ನಮ್ಮೊಳಗಿನ 'ಮನುಷ್ಯ'ನನ್ನು ಉದ್ದೇಶಿಸಿ. ಇಂಗ್ಲಿಷ್, ಗುಜರಾತಿ, ಹಿಂದಿಯಲ್ಲಿರುವ ಗಾಂಧೀಜಿಯ ಮಾತು–ಬರಹಗಳ ಪಾರದರ್ಶಕ ಭಾಷೆ ಮಕ್ಕಳಿಗೂ ಅರ್ಥವಾಗುವಷ್ಟು ಸರಳವಾಗಿದೆ.

ಮಾನವರೊಳಗೆ ಹುದುಗಿರುವ ಒಳಿತನ್ನು ಹೊರತರುವ ಹಾದಿಯಲ್ಲಿ ವಿಕಾಸಗೊಂಡ ಗಾಂಧೀ ನೋಟಗಳ ಆತ್ಮೀಯತೆ, ಮಾರ್ದವತೆ, ಸತ್ಯಗಳು ಈ ಪುಸ್ತಕದ ಪುಟಪುಟಗಳಲ್ಲೂ ನಮ್ಮನ್ನು ತಟ್ಟುತ್ತವೆ. ನ್ಯಾಯ ಮತ್ತು ಸಾಮಾಜಿಕ ನ್ಯಾಯ, ನೈತಿಕ ಬರವಣಿಗೆ, ಚಳುವಳಿ, ಸತ್ಯಾಗ್ರಹ, ಸತ್ಯಶೋಧನೆ, ತತ್ವಜ್ಞಾನ, ನಿರ್ಭಯತೆ ಮುಂತಾದ ಹಲವು ಆಯಾಮಗಳು ಬೆರೆತು ಹುಟ್ಟಿದ ಗಾಂಧೀ ಚಿಂತನೆಗಳು ಒಂದು ನಾಡಿನ ಹಾಗೂ ಮನುಷ್ಯನ ಆರೋಗ್ಯಕರ ದೇಹ–ಮನಸ್ಸುಗಳಿಗೆ ಬೇಕಾದದ್ದನ್ನೆಲ್ಲ ಹುಡುಕುತ್ತವೆ. ಇಲ್ಲಿನ ಪ್ರತಿ ಬರಹದಲ್ಲೂ ಒಂದಲ್ಲ ಒಂದು ವಿಶಿಷ್ಟ ಒಳನೋಟ, ಚಿಂತನೆಗಳು ನಿಮ್ಮ ವ್ಯಕ್ತಿತ್ವದಲ್ಲಿ ಬೆರೆಯುತ್ತವೆ. ನೀವು ಒಳ್ಳೆಯ ಲೇಖಕ ಅಥವಾ ಲೇಖಕಿ ಆಗಬೇಕೆಂದರೆ, ಗಾಂಧೀ ಬರವಣಿಗೆಯ ನೇರ ಗುಣ, ಸ್ಪಷ್ಟತೆ, ಪ್ರಾಮಾಣಿಕತೆಗಳು ನಿಮಗೆ ನಿಜಕ್ಕೂ ದಾರಿದೀಪವಾಗಬಲ್ಲವು.

೨

'ಗಾಂಧಿಯನ್ನು ಬಣ್ಣಿಸುವುದೆಂದರೆ ಹಿಮಾಲಯವನ್ನು ಬಣ್ಣಿಸಲು ಪ್ರಯತ್ನಿಸಿದಂತೆ' ಎಂಬ ಬರ್ನಾರ್ಡ್ ಶಾ ಅವರ ಮಾತು ಗಾಂಧೀಜಿಯನ್ನು ಬಣ್ಣಿಸುವ ಸವಾಲಿನ ಜೊತೆಗೇ ಅವರ ವ್ಯಕ್ತಿತ್ವದ ಸಂಕೀರ್ಣತೆ, ಅಗಾಧತೆಯನ್ನೂ ಹೇಳುತ್ತದೆ. ಗಾಂಧೀಜಿಯನ್ನು ಬಣ್ಣಿಸಲು ಹೊರಟರೆ ಅವರ ವ್ಯಕ್ತಿತ್ವದ ಹಲವಾರು ಮುಖಗಳು ಕಾಣತೊಡಗುತ್ತವೆ: ಬಾಲ್ಯದಲ್ಲಿ ಹರಿಶ್ಚಂದ್ರ, ಶ್ರವಣಕುಮಾರರ ಕತೆಗೆ ಮಿಡಿದು ಕಣ್ಣೀರಿಟ್ಟ ಮುಗ್ಧ ಮನಸ್ಸನ್ನು ಕೊನೆತನಕ ಉಳಿಸಿಕೊಂಡ ಮಗು. ಕಾನೂನು ಕಲಿತು, ಸ್ಪಷ್ಟವಾಗಿ ಯೋಚಿಸುವ, ನ್ಯಾಯಯುತ ಹೋರಾಟವನ್ನು ತರ್ಕಬದ್ಧವಾಗಿ ಕಟ್ಟುವ, ನ್ಯಾಯ-ನೈತಿಕತೆಗಳನ್ನು ಬೆಸೆದ ನ್ಯಾಯವಾದಿ. ನೈತಿಕತೆ-ಸತ್ಯ ಎರಡನ್ನೂ ಬೆಸೆದ ಪತ್ರಕರ್ತ. ಸತ್ಯಾಗ್ರಹವನ್ನು ಹೋರಾಟತತ್ವವನ್ನಾಗಿ ಮಾಡಿದ ತತ್ವಜ್ಞಾನಿ. ಅಹಿಂಸೆಯನ್ನು ದೈನಂದಿನ ತತ್ವವಾಗಿ, ಸಂಘಟಿತ ಜನತಾ ಹೋರಾಟದ ಪ್ರಬಲ ಅಸ್ತ್ರವನ್ನಾಗಿ ರೂಪಿಸಿಕೊಟ್ಟ ಮೊದಲ ಲೋಕನಾಯಕ. ಹಿಡಿ ಉಪ್ಪು ತಯಾರಿಸಿ ಸೂರ್ಯ ಮುಳುಗದ ಸಾಮ್ರಾಜ್ಯಕ್ಕೆ ಸವಾಲೆಸೆದ ನಿರ್ಭೀತ ಚಳುವಳಿಗಾರ. ಉಪ್ಪು, ಚರಕದಂಥ ಪರಿಚಿತ ವಸ್ತುಗಳಿಗೆ ವ್ಯಾಪಕಾರ್ಥ ಕೊಟ್ಟ ಕವಿ. 'ಸ್ವರಾಜ್ಯ'ವು ಒಂದು ದೇಶ ತನ್ನನ್ನು ತಾನು ಆಳಿಕೊಳ್ಳುವ ತತ್ವವಷ್ಟೇ ಅಲ್ಲ, ಅದು ಮನುಷ್ಯ ತನ್ನನ್ನು ತಾನು ಆಳಿಕೊಳ್ಳುವ ತತ್ವ ಕೂಡ ಎಂಬ ವ್ಯಾಖ್ಯಾನ ಕೊಟ್ಟ ಸೂಕ್ಷ್ಮ ಚಿಂತಕ...

ದೈಹಿಕ ದುಡಿಮೆಯ ಶ್ರೇಷ್ಠತೆಯನ್ನು ಪ್ರತಿಪಾದಿಸಿ, ಚರಕ, ಖಾದಿಗಳನ್ನು ಗ್ರಾಮದ ಸ್ವಾವಲಂಬನೆಯ ಸಹಜ ಸಾಧನಗಳನ್ನಾಗಿ ಮಾಡಿದ ಗ್ರಾಮಕೇಂದ್ರಿತ ಅರ್ಥಶಾಸ್ತ್ರಜ್ಞ. ಜಗತ್ತಿನ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ದೇಶದ ಸ್ವಾತಂತ್ರ್ಯ ಹೋರಾಟವನ್ನು ಒಂದು ಕೊಳೆತ ಸಮಾಜದ ಪರಿವರ್ತನೆಯ ಹೋರಾಟವನ್ನಾಗಿ ಪರಿವರ್ತಿಸಿದ ಸಾಮಾಜಿಕ ನಾಯಕ. ಅಸ್ಪೃಶ್ಯತೆಯ ವಿರುದ್ಧ ನಿರಂತರ ಹೋರಾಟ ಮಾಡಿದ ಸಮಾಜ ಸುಧಾರಕ. ಜಗತ್ತಿನ ಎಲ್ಲ ಧರ್ಮಗಳ ಒಳತಿರುಳನ್ನು ಬೆಸೆದು ಮಾನವೀಯ ಹಿಂದೂ ಧರ್ಮವನ್ನು ರೂಪಿಸಲು ಹೊರಟ ಧಾರ್ಮಿಕ ಚಿಂತಕ. ಆಧುನಿಕತೆ, ಆಧುನಿಕ ನಾಗರಿಕತೆ ಹಾಗೂ ಪಶ್ಚಿಮ ರೂಪಿಸಿಕೊಂಡ ದಮನದ ಅಸ್ತ್ರಗಳನ್ನು ಜಗತ್ತಿಗೆ ತೋರಿಸಿದ ಸಂಸ್ಕೃತಿ ವಿಮರ್ಶಕ. ಆಧುನಿಕ ಗುಜರಾತಿ ಗದ್ಯದ ಪ್ರವರ್ತಕ; ಗುಜರಾತಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಿರಂತರವಾಗಿ ಬರೆದು, ಸಾವಿರಾರು ಪುಟಗಳ ಸರಳ, ನೇರ ಬರವಣಿಗೆ ಮಾಡಿ ಕೋಟಿಗಟ್ಟಲೆ ಓದುಗರನ್ನು ತಲುಪಿದ ಹಾಗೂ ತಲುಪುತ್ತಲೇ ಇರುವ ಲೇಖಕ...

ತನ್ನ ಬದುಕು ಹಾಗೂ ಚಿಂತನೆಗಳಲ್ಲಿ ನುಸುಳಿದ ಹಲಬಗೆಯ ವೈರುಧ್ಯಗಳನ್ನು ಪರೀಕ್ಷೆಗೆ ಒಳಪಡಿಸಿಕೊಂಡ ಸ್ವ-ಪರೀಕ್ಷಕ. ಈ ದೇಶದ ಮೂಲ ಕಾಯಿಲೆಗಳಾದ ಅಸ್ಪೃಶ್ಯತೆ, ಅಸಮಾನತೆ, ಮೂಲಭೂತವಾದ, ಕೋಮುವಾದಗಳನ್ನು ಗುಣಪಡಿಸಲು ಸದಾ ಶ್ರಮಿಸಿದ ಡಾಕ್ಟರು. ದೇಹ ಕುರಿತು ಆಳವಾಗಿ ಚಿಂತಿಸಿ ಪ್ರಯೋಗಗಳನ್ನು ಮಾಡಿದ ಪ್ರಯೋಗಶೀಲ. ಮೊದಲ ಘಟ್ಟದ ಮುಖ್ಯ ನಿರ್ವಸಾಹತೀಕರಣ ತಾತ್ವಿಕ. ಎದುರಾಳಿಯೆದುರು ದಿಟ್ಟವಾಗಿ ನಿಲ್ಲಬಲ್ಲ ನಿರ್ಭೀತ; ಕುವೆಂಪು ಬಣ್ಣಿಸಿದಂತೆ, 'ಕ್ರೈಸ್ತ ಬುದ್ಧರ ಮೈತ್ರಿಯಂ ಸಾಧಿಸುತ ವಿಶ್ವನಾಯಕರ ಪಂಕ್ತಿಯಲಿ' ನಿಂತ, 'ಯಂತ್ರ ನಾಗರಿಕತೆಯ ರಾಜಕೀಯ ಕುಟಿಲ ತಂತ್ರಕಧ್ಯಾತ್ಮವನು' ತಂದ ಅನನ್ಯ ಸಂತ...

...ಹೀಗೆ ಗಾಂಧೀ ವ್ಯಕ್ತಿತ್ವ, ಚಿಂತನೆ, ಕ್ರಿಯೆ, ಪ್ರಭಾವಗಳನ್ನು ಬಣ್ಣಿಸುತ್ತಲೇ ಹೋಗಬಹುದು. 'ತಮ್ಮ ಜೀವನದ ಎರಡು ಘಟ್ಟಗಳಲ್ಲಿ ಮಾತ್ರ ಪೂರ್ಣ ಪ್ರಮಾಣದಲ್ಲಿ ಬೀದಿಗಿಳಿದಿದ್ದ ಗಾಂಧೀಜಿ, ಉಳಿದಂತೆ ಬಹುತೇಕ ವರ್ಷಗಳನ್ನು ಚಿಂತನೆ ಹಾಗೂ ಬರಹಗಳಲ್ಲಿ ಕಳೆದಿದ್ದರು' ಎಂದು ಶ್ರೀಲಂಕಾದ ಗಾಂಧೀವಾದಿ ಟಿ.ಕೆ.ಮಹದೇವನ್ ಬರೆಯುತ್ತಾರೆ. ಇಂಥ ಹರಹುಳ್ಳ ಗಾಂಧೀಚಿಂತನೆ, ಬರಹ, ಮಾತುಗಳನ್ನು ಸುಮಾರು ೯೭ ಸಂಪುಟಗಳಲ್ಲಿ ದಾಖಲಿಸಿ ಮುಂದಿನ ತಲೆಮಾರಿಗೆ ಉಳಿಸಿರುವ ನವಜೀವನ್ ಟ್ರಸ್ಟ್ ಪ್ರಕಟಿಸಿರುವ ಸಂಪುಟಗಳಿಗೆ ಈ ಪುಸ್ತಕ ಪೂರ್ಣ ಋಣಿಯಾಗಿದೆ. ಸತ್ಯದೊಂದಿಗೆ ಸದಾ ಪ್ರಯೋಗ ಮಾಡಿ ಒಳ್ಳೆಯದನ್ನೇ ಹುಡುಕಿದ, ಗಾಂಧೀ ಅಭಿವ್ಯಕ್ತಿಯ ಸಾವಿರಾರು ಪುಟಗಳಲ್ಲಿ ಇಂದಿಗೆ ಅತ್ಯಗತ್ಯವಾದ, ಅರ್ಥಪೂರ್ಣ, ವೈವಿಧ್ಯಮಯ ಬರಹಗಳು, ಬರಹಗಳ ಸಂಗ್ರಹರೂಪಗಳು ಇಲ್ಲಿವೆ. ಇವತ್ತು ಕೊಂಚ ಅಸಂಗತ ಎನ್ನಬಹುದಾದ ಗಾಂಧೀ ಚಿಂತನೆಗಳನ್ನು ಕೈ ಬಿಟ್ಟು, ಈ ಕಾಲಕ್ಕೆ ಅತ್ಯಗತ್ಯವಾದ ಚಿಂತನೆಗಳನ್ನು ಇಲ್ಲಿ ಆರಿಸಿಕೊಳ್ಳಲಾಗಿದೆ. ಗಾಂಧೀಜಿ ಯಾವುದೋ ಕಾಲದ ಸವಕಲು ಚಿಂತಕರಲ್ಲ, ಎಲ್ಲ ಕಾಲಕ್ಕೂ ಬೇಕಾದ ಮಹತ್ವದ ಚಿಂತಕರು ಎಂಬುದನ್ನು ಮನದಟ್ಟು ಮಾಡುವ ಈ ಬರಹಗಳು ಸಂಪಾದಕನ ವ್ಯಾಖ್ಯಾನಗಳಿಲ್ಲದೆ ಓದುಗರೊಡನೆ ನೇರವಾಗಿ ಮಾತಾಡಲೆಂದು ಈ ಮುನ್ನುಡಿಯನ್ನು ಇಲ್ಲಿಗೇ ನಿಲ್ಲಿಸುತ್ತಿದ್ದೇನೆ. ಯಾವ ಪುಟದಿಂದ ಬೇಕಾದರೂ ಆರಾಮಾಗಿ ಓದಬಹುದಾದ ಈ ಪುಸ್ತಕ ನಿಮ್ಮ ನಿತ್ಯ ಸಂಗಾತಿಯಾಗಿರಲಿ.

೩

ಈ ಸಂಕಲನದ ಹಲವು ಬರಹಗಳನ್ನು ಅನುವಾದಿಸಿ, ಪ್ರೂಫ್ ತಿದ್ದಿಕೊಟ್ಟ ಗೆಳೆಯ ಶ್ರೀನಿವಾಸರಾಜು ದೊಡ್ಡೇರಿಗೆ, ನೆರವಾದ ಮೋಹನ್ ಮಿರ್ಲೆಯವರಿಗೆ;

ಪ್ರೀತಿಯಿಂದ ಅನುವಾದ ಮಾಡಿಕೊಟ್ಟ ಕೇಶವ ಮಳಗಿ, ಜಗದೀಶ ಕೊಪ್ಪ, ಶಾಕೀರಾ ಖಾನುಂ, ಶೋಯಿಂಕಾ, ಸದಾನಂದ ಆರ್., ಹಾಗೂ ಅಗಲಿದ ಗೆಳೆಯ ಎಸ್.ಬಿ. ಜೋಗುರ ಅವರಿಗೆ ನನ್ನ ಕೃತಜ್ಞತೆಗಳು. ಅರವತ್ತು ವರ್ಷಗಳ ಕೆಳಗೆ ಗಾಂಧೀ ಆತ್ಮಕತೆಯನ್ನು ಅನನ್ಯವಾಗಿ ಕನ್ನಡಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಅನುವಾದದಿಂದ ಆಯ್ದ ಕೆಲವು ಭಾಗಗಳನ್ನು ಇಲ್ಲಿ ಬಳಸಿಕೊಂಡಿದ್ದೇನೆ. ಕೆಲವೆಡೆ ಈ ಅನುವಾದಗಳಿಗೆ ತ್ರಿದೀಪ್ ಸುಹೃದ್ ಸಂಪಾದಿಸಿರುವ ಗಾಂಧೀ ಆತ್ಮಕತೆಯ 'ಕ್ರಿಟಿಕಲ್ ಎಡಿಶನ್'ನಿಂದ ವಿವರಗಳನ್ನು ಸೇರಿಸಿದ್ದೇನೆ. ಹಿರಿಯರಾದ ವಿ.ಎಸ್. ಸೇತೂರಾವ್, ಬಿ.ಎ. ಶ್ರೀಧರ, ಎನ್. ಬಾಲಸುಬ್ರಹ್ಮಣ್ಯ, ರಾಮಚಂದ್ರದೇವ, ಜಯಂತ ಕಾಯ್ಕಿಣಿ ಅವರ ಅನುವಾದಗಳು ಹಾಗೂ ಸಿದ್ದವನಹಳ್ಳಿ ಕೃಷ್ಣಶರ್ಮ ಸಂಪಾದಿಸಿದ 'ಗಾಂಧಿ ಮತ್ತು ಕರ್ನಾಟಕ' ಸಂಕಲನದ ವರದಿಗಳು ಇಲ್ಲಿವೆ. ಈ ಎಲ್ಲರಿಗೂ ನಾನು ಋಣಿ.

ಈ ಸಂಕಲನ ಮಾಡಲು ಪ್ರೇರೇಪಿಸಿದ ಪ್ರೊ. ಕೆ. ಮರುಳಸಿದ್ಧಪ್ಪ ಹಾಗೂ ಗೆಳೆಯ ಎಚ್. ದಂಡಪ್ಪ ಇವರಿಗೆ; ಅರ್ಥಪೂರ್ಣ ಸಲಹೆಗಳನ್ನು ಕೊಟ್ಟ ಪ್ರೊ. ಜಿ.ಬಿ. ಶಿವರಾಜ್ ಹಾಗೂ ಈ ಸಂಕಲನಕ್ಕಾಗಿ ಕಾತರಿಸಿದ ಗೆಳೆಯ ಪಲ್ಲವ ವೆಂಕಟೇಶ್; ಗಾಂಧೀ ಚಿಂತನೆಗಳನ್ನು ಕುರಿತು ಮತ್ತೆ ಮತ್ತೆ ಬರೆಸಿದ 'ಮಯೂರ'ದ ಗೆಳೆಯ ಸಂದೀಪ ನಾಯಕ್; ಗಾಂಧೀಜಿಯೆಡೆಗೆ ಮತ್ತೆ ನನ್ನನ್ನು ಸೆಳೆದ ಪ್ರೊ. ಜೀವನ್‌ಕುಮಾರ್; ಖ್ಯಾತ ಕಲಾವಿದರಾದ ಸುದೇಶ್ ಮಹಾನ್, ಯು.ಟಿ. ಸುರೇಶ್; ವಿನ್ಯಾಸ ಮಾಡಿದ ಶಾರದಾ ಬಸು...ಎಲ್ಲರಿಗೂ ನನ್ನ ಕೃತಜ್ಞತೆಗಳು.

ನಟರಾಜ್ ಹುಳಿಯಾರ್

ಹೊಸ ಮುದ್ರಣಗಳಿಗೆ ಮುನ್ನುಡಿ

'ಎಲ್ಲರ ಗಾಂಧೀಜಿ' ಪುಸ್ತಕ ಓದುಗ, ಓದುಗಿಯರ ಕೈ ಸೇರಿ, ಕನ್ನಡನಾಡಿನ ಎಲ್ಲೆಡೆಯಲ್ಲಿ ಗಾಂಧೀ ಚಿಂತನೆಗಳಿಗೆ ಸಿಗುತ್ತಿರುವ ಪ್ರೀತಿಯ ಸ್ವಾಗತ ಕಂಡು ಎದೆ ತುಂಬಿ ಬರುತ್ತಿದೆ. ಮೊದಲ ಮುದ್ರಣದ ಪ್ರತಿಗಳು ಹತ್ತೇ ದಿನದಲ್ಲಿ ಮುಗಿದ ಮೇಲೆ, ಎರಡನೇ ಮುದ್ರಣವೂ ಬಹು ಬೇಗ ಮುಗಿದು, ಹೊಸ ಮುದ್ರಣಕ್ಕೆ ಕ್ಷಿಪ್ರ ಬೇಡಿಕೆಗಳು ಬರುತ್ತಿವೆ. ಈ ಅನನ್ಯ ಗಾಂಧೀ ಸ್ವೀಕಾರಕ್ಕೆ ಕಾರಣರಾದ ಎಲ್ಲರಿಗೆ, ವಿನ್ಯಾಸ ವಿಜ್ಞಾನಿ, ಗೆಳೆಯ ಬಿ. ಸುಜ್ಞಾನಮೂರ್ತಿಯವರಿಗೆ ಪ್ರೀತಿಯ ಕೃತಜ್ಞತೆಗಳು.

ಸಂಪಾದಕ

ಪರಿವಿಡಿ

ಭಾಗ : ೨

ಹಿಂದ್ ಸ್ವರಾಜ್

ಭಾಗ : ೩

ಗಾಂಧೀ ಪರಿಕಲ್ಪನೆಗಳು

ಭಾಗ : ೫

ವ್ಯಕ್ತಿ ಚಿತ್ರ

ಭಾಗ : ೬

ಸಮಾಜ, ಸಮುದಾಯ, ಸಂಸ್ಕೃತಿ

ಭಾಗ : ೭

ಮಾತುಕತೆ

ಭಾಗ : ೮

ಭಾಷಣ, ಪತ್ರ, ಪ್ರತಿಕ್ರಿಯೆ

ಭಾಗ : ೯

ಹೋರಾಟ, ರಾಜಕಾರಣ

ಭಾಗ : ೧೦

ಒಳನೋಟ

ಭಾಗ : ೧೧

ವಿದಾಯ

ಭಾಗ : ೧೨

ಗಾಂಧೀ ನುಡಿ ಸಂಚಯ

ಭಾಗ : ೧೩
ಗಾಂಧೀ ಜೀವನಯಾನ

ಭಾಗ : ೧೪
ಗಾಂಧೀಜಿಯವರ ಪ್ರಿಯ ಪ್ರಾರ್ಥನೆಗಳು

ಭಾಗ : ೧

ಗಾಂಧಿ ಕಂಡಂತೆ ಗಾಂಧಿ

‘ಸತ್ಯನಿಷ್ಠ ನಿರೂಪಣೆ ಮಾಡುವ ಹಾದಿಯಲ್ಲಿ ಎದುರಾಗುವ ಯಾವ ಕಷ್ಟ ಕೋಟಲೆಗಳನ್ನೂ ನಾನು ಎದುರಿಸದೆ ಬಿಟ್ಟಿಲ್ಲ.’

'I hope I am never guilty of putting a sting in any of my writings'

‘ನಾನೆಂದೂ ಆತ್ಮಚರಿತ್ರೆ ಬರೆಯಲಿಲ್ಲ. ಸತ್ಯದೊಂದಿಗೆ ನನ್ನ ಪ್ರಯೋಗ ಕುರಿತ ಲೇಖನಗಳ ಸರಣಿ ಬರೆದೆ; ಅವು ನಂತರ ಪುಸ್ತಕ ರೂಪದಲ್ಲಿ ಪ್ರಕಟವಾದವು. ಇದಾಗಿ ಇಪ್ಪತ್ತಕ್ಕಿಂತ ಹೆಚ್ಚು ವರ್ಷಗಳಾದವು. ಅದಾದ ನಂತರ ನಾನು ಏನು ಮಾಡಿದೆ, ಏನು ಯೋಚಿಸಿದೆ... ಇವೆಲ್ಲವನ್ನೂ ಕಾಲಾನುಕ್ರಮದಲ್ಲಿ ಬರೆದಿಲ್ಲ. ಹಾಗೆ ಬರೆಯುವ ಆಸೆಯೇನೋ ಇದೆ. ಆದರೆ ನನಗೆ ಬಿಡುವೆಲ್ಲಿದೆ?’

ಮೋಹನದಾಸ್ ಕರಮಚಂದ್ ಗಾಂಧಿ

೧

ಹುಟ್ಟು, ಬಾಲ್ಯ

ಗಾಂಧೀ ಮನೆತನದವರು ಬನಿಯಾ ಜಾತಿಯವರು. ಅವರು ಮೊದಲಿಗೆ ಕಿರಾಣಿ ಅಂಗಡಿ ವ್ಯಾಪಾರಿಗಳೆಂದು ಕಾಣುತ್ತದೆ. ಆದರೆ ನಮ್ಮ ತಾತನಿಂದ ಮೂರು ತಲೆಮಾರಿನವರು ಕಾಥೇವಾಡದ ಬೇರೆ ಬೇರೆ ಸಂಸ್ಥಾನಗಳಲ್ಲಿ ದಿವಾನರಾಗಿದ್ದರು. ನಮ್ಮ ತಾತ ಉತ್ತಮ್‌ಚಂದ್ ಅಥವಾ ಓತಾ ಗಾಂಧಿ ತತ್ವನಿಷ್ಠ ವ್ಯಕ್ತಿಯಾಗಿದ್ದಿರಬೇಕು. ಪೋರ್‌ಬಂದರಿನ ದಿವಾನನಾಗಿದ್ದ ಅವರು ಅಲ್ಲಿ ನಡೆದ ಆಸ್ಥಾನದ ಪಿತೂರಿಗಳಿಂದಾಗಿ ಆ ಸಂಸ್ಥಾನವನ್ನು ಬಿಟ್ಟು ಜುನಾಗಢದಲ್ಲಿ ಆಶ್ರಯವನ್ನು ಪಡೆಯಬೇಕಾಯಿತು. ಅಲ್ಲಿ ಅವರು ನವಾಬನಿಗೆ ಎಡಗೈಯಿಂದ ಸಲಾಮು ಮಾಡಿದರು. ಇದನ್ನು ನೋಡಿದವರೊಬ್ಬರು, ಎದ್ದು ಕಾಣುವ ನಿಮ್ಮ ಈ ಅವಿನಯಕ್ಕೆ ಕಾರಣವೇನೆಂದು ಕೇಳಿದರು. ಆಗ ತಾತ 'ಬಲಗೈ ಮೊದಲೇ ಪೋರ್‌ಬಂದರ್ ಸಂಸ್ಥಾನಕ್ಕೆ ಮೀಸಲಾಗಿದೆ' ಎಂದು ಉತ್ತರ ಕೊಟ್ಟರು.

ನಮ್ಮ ತಂದೆ ಕರಮಚಂದ ಗಾಂಧಿ ಅಥವಾ ಕಬಾ ಗಾಂಧಿ ಕುಟುಂಬಪ್ರೇಮಿ, ಸತ್ಯಪ್ರಿಯ ಶೂರ ಮತ್ತು ಉದಾರಿ, ಜೊತೆಗೆ ಕೋಪದ ಸ್ವಭಾವದವರು. ಸ್ವಲ್ಪಮಟ್ಟಿಗೆ ವಿಷಯಾಸಕ್ತರಾಗಿದ್ದಿರಬಹುದೆಂದೂ ನನ್ನ ಭಾವನೆ. ಯಾಕೆಂದರೆ, ಅವರು ತಮಗೆ ನಲವತ್ತು ವರ್ಷಗಳಾದ ಮೇಲೆ ನಾಲ್ಕನೆಯ ಮದುವೆಯನ್ನು ಮಾಡಿಕೊಂಡರು. ಆದರೆ ಅವರನ್ನು ಯಾರೂ ಭ್ರಷ್ಟರಾಗಿಸಲು ಸಾಧ್ಯವಿರಲಿಲ್ಲ. ಕುಟುಂಬದಲ್ಲಿಯೂ ಹೊರಗಡೆಯೂ ನಿಷ್ಪಕ್ಷವಾದ ಮನೋವೃತ್ತಿಗೆ ಅವರು ಹೆಸರಾಗಿದ್ದರು. ಅವರ ರಾಜನಿಷ್ಠೆ ಎಲ್ಲರಿಗೂ ತಿಳಿದಿತ್ತು. ಒಂದು ಸಲ ಒಬ್ಬ ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟ್ ರಾಜಕೋಟೆ ಠಾಕೂರ್ ಸಾಹೇಬರಿಗೆ ಅವಮಾನ ಮಾಡಿದಾಗ ಅವರು ಅವನಿಗೆ ಪ್ರತ್ಯುತ್ತರ ಕೊಟ್ಟರು. ಇದರಿಂದ ಏಜೆಂಟ್‌ಗೆ ಕೋಪ ಬಂದು, 'ಕ್ಷಮೆ

ಯಾಚಿಸು' ಎಂದು ಕಬಾ ಗಾಂಧಿಗೆ ಹೇಳಿದ. ಕಬಾ ಗಾಂಧಿ ಕ್ಷಮೆ ಕೇಳಲು ಒಪ್ಪಲಿಲ್ಲ. ಆ ಏಜೆಂಟ್ ಅವರನ್ನು ಕೆಲವು ಗಂಟೆ ಕಾಲ ಸೆರೆಯಲ್ಲಿಟ್ಟನು. ಆದರೆ ಕಬಾ ಗಾಂಧಿ ಮಣಿಯದೆ ಇರುವುದನ್ನು ಏಜೆಂಟ್ ಕಂಡುಕೊಂಡ; ನಂತರ ಅವರ ಬಿಡುಗಡೆಗೆ ಅಪ್ಪಣೆ ಮಾಡಿದ.

ನಮ್ಮ ತಾಯಿ ಪುತಲಿಬಾಯಿಯವರನ್ನು ಕುರಿತು ನನ್ನ ಮನಸ್ಸಿನಲ್ಲಿ ಬಹು ಮುಖ್ಯವಾಗಿ ನಿಂತಿರುವ ನೆನಪು ಅವರು ಪರಮ ಸಾಧ್ವಿ ಎಂಬುದು. ಅವರು ಬಹಳ ಧಾರ್ಮಿಕ ಸ್ವಭಾವದವರು. ದಿನವೂ ಪ್ರಾರ್ಥನಾ ಕಾರ್ಯ ಮುಗಿಯುವವರೆಗೆ ಅವರು ಎಂದೂ ಊಟದ ಯೋಚನೆಯನ್ನು ಮಾಡುತ್ತಿರಲಿಲ್ಲ. ದಿನವೂ ವಿಷ್ಣು ದೇವಾಲಯಕ್ಕೆ ಹೋಗುವುದು ಅವರ ರೂಢಿಯಾಗಿತ್ತು. ಚಾತುರ್ಮಾಸದ ಆಚರಣೆಯನ್ನು ಅವರು ಒಂದು ಸಲವಾದರೂ ಬಿಟ್ಟಿದ್ದು ನನಗೆ ಜ್ಞಾಪಕವಿಲ್ಲ. ಅವರು ಅತ್ಯಂತ ಕಠಿಣವಾದ ವ್ರತಗಳನ್ನು ಆರಂಭಿಸಿ ಅವುಗಳನ್ನು ನಿರ್ವಿಘ್ನವಾಗಿ ಪೂರ್ತಿಗೊಳಿಸುತ್ತಿದ್ದರು. ಬೇನೆ ಬಿದ್ದರೂ ಹಿಡಿದ ವ್ರತವನ್ನು ಬಿಡುತ್ತಿರಲಿಲ್ಲ. ಒಂದು ಸಲ ಚಾಂದ್ರಾಯಣ ವ್ರತವನ್ನು ಹಿಡಿದಿದ್ದಾಗ, ಅವರು ರೋಗದಿಂದ ನರಳುತ್ತಿದ್ದರೂ ಬಿಡದೆ ಅದನ್ನು ಪೂರೈಸಿದುದು ನನಗೆ ನೆನಪಿದೆ. ಚಾತುರ್ಮಾಸದಲ್ಲಿ ಒಪ್ಪೊತ್ತಿನ ಊಟ ಅವರಿಗೆ ಸಾಮಾನ್ಯ ರೂಢಿಯಾಗಿತ್ತು. ಅಷ್ಟರಿಂದ ತೃಪ್ತರಾಗದೆ ದಿನ ಬಿಟ್ಟು ದಿನ ಉಪವಾಸ ಮಾಡುತ್ತಿದ್ದರು. ಒಟ್ಟಿಗೆ ಎರಡು, ಮೂರು ದಿನ ಉಪವಾಸ ಮಾಡುವುದು ಅವರಿಗೆ ದೊಡ್ಡ ವಿಷಯವಾಗಿರಲಿಲ್ಲ. ಒಂದು ಸಲ ಚಾತುರ್ಮಾಸದಲ್ಲಿ ಸೂರ್ಯನ ದರ್ಶನ ಮಾಡದೆ ಊಟ ಮಾಡೆನೆಂಬ ನಿಯಮವನ್ನು ಹಿಡಿದರು. ಆಗ ಹುಡುಗರಾಗಿದ್ದ ನಾವು ಸೂರ್ಯ ಕಾಣಿಸಿಕೊಂಡಾಗ ನಮ್ಮ ತಾಯಿಗೆ ತಿಳಿಸಲು ಆಕಾಶದ ಕಡೆಗೆ ನೋಡುತ್ತಾ ನಿಂತಿರುತ್ತಿದ್ದೆವು. ಮಳೆಗಾಲ ಅಧಿಕವಾದಾಗ ಸೂರ್ಯದರ್ಶನ ದುರ್ಲಭವೆಂಬುದು ಎಲ್ಲರಿಗೂ ಗೊತ್ತು. ಸೂರ್ಯ ಕಾಣಿಸಿಕೊಂಡ ಕೂಡಲೇ ನಾವು 'ಅಮ್ಮಾ! ಅಮ್ಮಾ! ಸೂರ್ಯ ಕಾಣ್ತಿದಾನೆ' ಎಂದು ಆನಂದದಿಂದ ಕೂಗುತ್ತಿದ್ದೆವು. ಅಮ್ಮ ಆತುರದಿಂದ ಹೊರಗೆ ಬರುವಷ್ಟರಲ್ಲಿ ಸೂರ್ಯ ಕಣ್ಮರೆಯಾಗಿ ಹೋಗುತ್ತಿದ್ದ. ಇದರಿಂದ ಅಮ್ಮನಿಗೆ ಊಟ ಇಲ್ಲವಾಗುತ್ತಿತ್ತು. ಆಗಲೂ ಅವರು ಹರ್ಷಚಿತ್ತರಾಗಿ, 'ಏನೂ ಚಿಂತೆಯಿಲ್ಲ, ನಾನು ಈ ದಿನ ಊಟ ಮಾಡಬೇಕಾದುದು ದೇವರ ಚಿತ್ತದಲ್ಲಿಲ್ಲ' ಎನ್ನುತ್ತಿದ್ದರು. ಎಂದಿನಂತೆ ತಮ್ಮ ಕೆಲಸಕ್ಕೆ ಹಿಂದಿರುಗುತ್ತಿದ್ದರು.

ನನ್ನ ಬಾಲ್ಯವನ್ನು ಪೋರ್‌ಬಂದರಿನಲ್ಲಿ ಕಳೆದೆ. ಯಾವುದೋ ಪಾಠಶಾಲೆಗೆ ನನ್ನನ್ನು ಸೇರಿಸಿದುದರ ನೆನಪಿದೆ. ಮಗ್ಗಿ ಕೋಷ್ಟಕವನ್ನು ಒಂದಿಷ್ಟು ಕಷ್ಟಪಟ್ಟು

ಕಲಿತುಕೊಂಡೆ. ಇತರ ಹುಡುಗರ ಸಹವಾಸದಿಂದ ಉಪಾಧ್ಯಾಯರನ್ನು ಬಯ್ಯಲು ಕಲಿತುಕೊಂಡೆ. ಇದರ ಹೊರತು, ಅಂದಿನ ದಿನಗಳ ಬಗೆಗೆ ನನಗೆ ಮತ್ತೇನೂ ನೆನಪಿಲ್ಲ. ಇದರಿಂದ ನನ್ನ ಬುದ್ಧಿ ಮಂದವಾಗಿಯೂ, ಜ್ಞಾಪಕ ಶಕ್ತಿ ಅಪಕ್ವವಾಗಿಯೂ ಇದ್ದಿರಬೇಕು ಎಂದು ನನಗೆ ಭಾಸವಾಗುತ್ತಿದೆ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ-೧, ಅಧ್ಯಾಯ-೧, 'ಬರ್ತ್ ಅಂಡ್ ಪೇರೆಂಟೇಜ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

ಟಿಪ್ಪಣಿ

ಗಾಂಧೀಜಿ ತಮ್ಮ **ಸತ್ಯಾ ನ ಪ್ರಯೋಗೊ ಅಥವಾ ಆತ್ಮಕಥಾ** ಎಂಬ ಶೀರ್ಷಿಕೆಯ ಆತ್ಮಕತೆಯನ್ನು ಮೊದಲು ಗುಜರಾತಿ ಭಾಷೆಯಲ್ಲಿ ಬರೆದರು. ನಂತರ ಮಹದೇವ ದೇಸಾಯಿ ಈ ಆತ್ಮಕತೆಯನ್ನು ಇಂಗ್ಲಿಷಿಗೆ ಅನುವಾದಿಸಿದರು. ಗೊರೂರರು ಗಾಂಧೀಜಿಯವರ ಆತ್ಮಕತೆಯನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದರು. ಈ ಆತ್ಮಕತೆ ಗುಜರಾತಿ ಮೂಲದಿಂದ ಇಂಗ್ಲಿಷಿಗೆ ಅನುವಾದಗೊಂಡಾಗ ಬಿಟ್ಟು ಹೋದ ಕೆಲವು ಸಣ್ಣಪುಟ್ಟ ವಿವರಗಳನ್ನು ಈ ಅನುವಾದದಲ್ಲಿ ಸೇರಿಸಲಾಗಿದೆ. ೨೦೧೮ರಲ್ಲಿ ತ್ರಿದಿಪ್ ಸುಹೃದ್ ಅವರು ಹೊರ ತಂದಿರುವ ಗಾಂಧೀಜಿಯವರ ಆತ್ಮಚರಿತ್ರೆಯ 'ಕ್ರಿಟಿಕಲ್ ಎಡಿಶನ್'ನಲ್ಲಿ ಸೇರಿಸಲಾಗಿರುವ ಗಾಂಧೀಜಿಯವರ ಆತ್ಮಚರಿತ್ರೆಯ ಗುಜರಾತಿ ಮೂಲ ಪಠ್ಯವನ್ನು ಆಧರಿಸಿ ಈ ತಿದ್ದುಪಡಿಗಳನ್ನು ಮಾಡಲಾಗಿದೆ.

೨

ವಿದ್ಯಾರ್ಥಿ ದೆಸೆಯಲ್ಲಿ

ನಮ್ಮ ತಂದೆ ಪೋರ್‌ಬಂದರನ್ನು ಬಿಟ್ಟು ರಾಜಕೋಟೆಯ ರಾಜಾಸ್ಥಾನಿಕ ನ್ಯಾಯಾಲಯದ ಸದಸ್ಯರಾಗಿ ಹೊರಟಾಗ, ನನಗೆ ಕೇವಲ ಏಳು ವರ್ಷ. ಅಲ್ಲಿ ನನ್ನನ್ನು ಪ್ರಾಥಮಿಕ ಶಾಲೆಗೆ ಸೇರಿಸಿದರು. ಆ ದಿನಗಳಲ್ಲಿ ನನಗೆ ಬೋಧಿಸಿದ ಉಪಾಧ್ಯಾಯರ ಹೆಸರುಗಳು ಮೊದಲಾದ ವಿವರಗಳೆಲ್ಲ ನನಗೆ ಚೆನ್ನಾಗಿ ನೆನಪಿದೆ. ಪೋರ್‌ಬಂದರಿನಲ್ಲಿ ಇದ್ದಂತೆಯೇ ಇಲ್ಲಿಯೂ ನನ್ನ ವಿದ್ಯಾಭ್ಯಾಸದ ವಿಷಯದಲ್ಲಿ ಹೇಳಬೇಕಾದ ಹೆಚ್ಚಿನದೇನೂ ಇಲ್ಲ. ನಾನು ಸಾಮಾನ್ಯ ಯೋಗ್ಯತೆಯುಳ್ಳ ವಿದ್ಯಾರ್ಥಿಯಾಗಿದ್ದೆನು. ಆ ಪಾಠಶಾಲೆಗೆ ಸಮೀಪದಲ್ಲಿದ್ದ ಮತ್ತೊಂದು ಶಾಲೆ ಮುಗಿಸಿ ಮುಂದೆ ಪ್ರೌಢಶಾಲೆಯನ್ನು ಮುಟ್ಟುವ ವೇಳೆಗೆ ನನಗೆ ಹನ್ನೆರಡು ವರ್ಷ ತುಂಬಿತ್ತು. ಆ ಕಾಲದಲ್ಲಿ ನಾನು ಶಿಕ್ಷಕರಿಗಾಗಲಿ, ಸ್ನೇಹಿತರಿಗಾಗಲಿ ಎಂದೂ ಸುಳ್ಳು ಹೇಳಿದ ನೆನಪಿಲ್ಲ. ನಾನು ಬಹಳ ನಾಚಿಕೆಯ ಸ್ವಭಾವದವನಾಗಿದ್ದೆನು. ಯಾರ ಜತೆಗೂ ಸೇರುತ್ತಿರಲಿಲ್ಲ. ನನ್ನ ಪುಸ್ತಕ, ಪಾಠಗಳು, ಇವೇ ನನ್ನ ಮಿತ್ರರು. ಗಂಟೆ ಹೊಡೆಯುವ ಹೊತ್ತಿಗೆ ಶಾಲೆಗೆ ಹೋಗುವುದು, ಶಾಲೆ ಮುಗಿಯುತ್ತಲೇ ಮನೆಗೆ ಓಡುವುದು–ಇದು ನನ್ನ ದಿನನಿತ್ಯದ ಅಭ್ಯಾಸವಾಗಿತ್ತು. ನಾನು ನಿಜವಾಗಿಯೂ ಓಡಿಯೇ ಮನೆ ಸೇರುತ್ತಿದ್ದೆ. ಏಕೆಂದರೆ ನನಗೆ ಯಾರೊಂದಿಗೂ ಮಾತನಾಡುವ ಧೈರ್ಯವಿರಲಿಲ್ಲ. ಯಾರಾದರೂ ನನ್ನನ್ನು ಕುಚೋದ್ಯ ಮಾಡುವರೋ ಎಂಬ ಭಯ ನನಗಿತ್ತು.

ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆಯೊಂದನ್ನು ಹೇಳಬೇಕು. ಇನ್‌ಸ್ಪೆಕ್ಟರ್ ಮಿ. ಗೈಲ್ಸ್ ಪರಿಶೀಲನೆಗಾಗಿ ಶಾಲೆಗೆ ಬಂದಿದ್ದರು. ಅವರು ಮೊದಲನೆಯ ತರಗತಿಯ ವಿದ್ಯಾರ್ಥಿಗಳಿಗೆ ಐದು ಪದಗಳನ್ನು

ಬರೆಯಲು ಕೊಟ್ಟರು. ಅವುಗಳ ಪೈಕಿ ಕೆಟಲ್ (Kettle) ಎಂಬ ಪದವೂ ಒಂದು. ನಾನು ಅದನ್ನು ತಪ್ಪಾಗಿ ಬರೆದೆ. ನಮ್ಮ ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ನನ್ನನ್ನು ಎಚ್ಚರಿಸಲು ಪ್ರಯತ್ನಿಸಿದರು. ನಾನು ಆ ಸೂಚನೆಯಂತೆ ನಡೆಯಲಿಲ್ಲ. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ನನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ನಮ್ಮ ಉಪಾಧ್ಯಾಯರ ಉದ್ದೇಶ. ಅದು ನನಗೆ ಒಪ್ಪಿಗೆಯಾಗಲಿಲ್ಲ. ಏಕೆಂದರೆ ನಾವು ಕಾಪಿ ಮಾಡದಂತೆ ನೋಡಿಕೊಳ್ಳುವುದೇ ಉಪಾಧ್ಯಾಯರ ಕೆಲಸವೆಂದು ನಾನು ತಿಳಿದಿದ್ದೆ. ಇದರ ಪರಿಣಾಮವಾಗಿ ನನ್ನನ್ನು ಹೊರತು ಉಳಿದ ಹುಡುಗರೆಲ್ಲ ಐದು ಪದಗಳನ್ನೂ ಸರಿಯಾಗಿ ಬರೆದಿದ್ದರು. ನಾನೊಬ್ಬನೇ ದಡ್ಡ. ಇದಾದ ಮೇಲೆ. ಉಪಾಧ್ಯಾಯರು ನನ್ನ ಮೂರ್ಖತನವನ್ನು ನನಗೆ ತೋರಿಸುವುದಕ್ಕೆ ಪ್ರಯತ್ನಪಟ್ಟರು. ಅದರಿಂದ ಅವರಿಗೆ ವೃಥಾ ಶ್ರಮವಾಯಿತೇ ಹೊರತು ಕಾಪಿ ಮಾಡುವ ಕಲೆ ನನಗೆ ಕೊನೆಗೂ ಬರಲೇ ಇಲ್ಲ.

ಇಷ್ಟಾದರೂ ಉಪಾಧ್ಯಾಯರಲ್ಲಿ ನನಗಿದ್ದ ಗೌರವ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಏಕೆಂದರೆ ಹಿರಿಯರ ದೋಷಗಳನ್ನು ಎಣಿಸದಿರುವುದು ನನ್ನ ಸ್ವಾಭಾವಿಕ ಗುಣವಾಗಿತ್ತು. ಅನಂತರ ಆ ಉಪಾಧ್ಯಾಯರ ಇತರ ದೋಷಗಳೂ ನನಗೆ ತಿಳಿದು ಬಂದವು. ಆದರೆ ಅವರಲ್ಲಿ ನನ್ನ ಆದರ ಭಾವ ಕಡಿಮೆಯಾಗಲಿಲ್ಲ. ಹಿರಿಯರ ಆಣತಿಯನ್ನು ಪಾಲಿಸುವುದು ನಮ್ಮ ಕರ್ತವ್ಯ; ಅವರ ಕಾರ್ಯವನ್ನು ಪರೀಕ್ಷಿಸುವುದಲ್ಲ ಎಂಬುದನ್ನು ನಾನು ಅರಿತಿದ್ದೆ.

ಇದೇ ಸಮಯದಲ್ಲಿ ನಡೆದ ಮತ್ತೆರಡು ಸಂಗತಿಗಳು ಯಾವಾಗಲೂ ನನ್ನ ನೆನಪಿನಲ್ಲಿ ಉಳಿದಿವೆ. ಪಠ್ಯಪುಸ್ತಕಗಳನ್ನು ಹೊರತು ಬೇರೆ ಏನನ್ನೂ ಓದುವುದು ಸಾಧಾರಣವಾಗಿ ನನಗೆ ಸೇರುತ್ತಿರಲಿಲ್ಲ. ನಿತ್ಯ ಪಾಠಗಳನ್ನಂತೂ ಓದಲೇಬೇಕಾಗಿತ್ತು. ಉಪಾಧ್ಯಾಯರು ನನ್ನನ್ನು ಗದರಿಸುವುದು ನನಗೆ ಇಷ್ಟವಿರಲಿಲ್ಲ. ಅವರಿಗೆ ಮೋಸ ಮಾಡಲು ನನಗೆ ಇಷ್ಟವಿರಲಿಲ್ಲ. ಆದುದರಿಂದ ಪಾಠವನ್ನೇನೋ ಓದುತ್ತಿದ್ದೆ. ಆದರೆ ಪಾಠದಲ್ಲಿ ಮನಸ್ಸು ಇರುತ್ತಿರಲಿಲ್ಲ. ಹೀಗೆ ಪಾಠಗಳನ್ನೇ ಸರಿಯಾಗಿ ಓದುತ್ತಿರಲಿಲ್ಲವೆಂದ ಮೇಲೆ ಇನ್ನು ಇತರ ಹೆಚ್ಚಿನ ವ್ಯಾಸಂಗದ ಪ್ರಶ್ನೆ ಎಲ್ಲಿ ಬಂತು. ಆದರೆ ಹೇಗೋ ನಮ್ಮ ತಂದೆ ಕೊಂಡುಕೊಂಡು ಬಂದಿದ್ದ ಪುಸ್ತಕ ನನ್ನ ಕಣ್ಣಿಗೆ ಬಿತ್ತು. ಅದರ ಹೆಸರು 'ಶ್ರವಣ ಪಿತೃಭಕ್ತಿ ನಾಟಕ'. ಅದನ್ನು ನಾನು ಅತ್ಯಂತ ಆಸಕ್ತಿಯಿಂದ ಓದಿದೆ. ಅದೇ ಸಮಯದಲ್ಲಿ ಸಂಚಾರಿ ಬೊಂಬೆ ಪ್ರದರ್ಶಕರು ನಮ್ಮ ಊರಿಗೆ ಬಂದರು. ಅವರು ನನಗೆ ತೋರಿಸಿದ ಒಂದು ಚಿತ್ರ– ಶ್ರವಣ ತನ್ನ ಕುರುಡು ತಂದೆ,ತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ

ಹೋಗುತ್ತಿದ್ದ ಚಿತ್ರ. ಆ ಪುಸ್ತಕ, ಆ ದೃಶ್ಯ, ಎರಡೂ ನನ್ನ ಅಂತರಂಗದಲ್ಲಿ ಶಾಶ್ವತವಾಗಿ ನೆಲೆಸಿದವು. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ, ಅದನ್ನು ಅನುಸರಿಸು ಎಂದು ನನಗೆ ನಾನು ಹೇಳಿಕೊಂಡೆ. ಶ್ರವಣ ಮರಣ ಹೊಂದಿದಾಗ, ಅವನ ಮಾತಾಪಿತೃಗಳ ಆರ್ತವಿಲಾಪ ನನ್ನ ಕಿವಿಗೆ ಈಗಲೂ ಕೇಳುವಂತಿದೆ. ಆ ರಾಗ ನನ್ನ ಹೃದಯವನ್ನು ಕರಗಿಸಿತು. ನಮ್ಮ ತಂದೆ ಕೊಂಡುಕೊಟ್ಟಿದ್ದ ರಾಗಮಾಲಿಕೆ ವಾದ್ಯದಲ್ಲಿ ಅದನ್ನು ಬಾರಿಸಲು ಕಲಿತೆ.

ಮತ್ತೊಂದು ನಾಟಕಕ್ಕೆ ಸಂಬಂಧಿಸಿದಂತೆ ಇದೇ ಬಗೆಯ ಪ್ರಸಂಗ ನಡೆಯಿತು. ಆ ಕಾಲದಲ್ಲಿ ಒಂದು ನಾಟಕಮಂಡಳಿಯವರು ಪ್ರದರ್ಶಿಸುತ್ತಿದ್ದ ನಾಟಕವೊಂದನ್ನು ನೋಡಲು ನಮ್ಮ ತಂದೆಯವರು ನನಗೆ ಅನುಮತಿ ಕೊಟ್ಟಿದ್ದರು. ಅದು ಹರಿಶ್ಚಂದ್ರ ನಾಟಕ. ಅದು ನನ್ನ ಮನಸ್ಸನ್ನು ಸೂರೆಗೊಂಡಿತು. ಅದನ್ನು ಎಷ್ಟು ನೋಡಿದರೂ ನನಗೆ ತೃಪ್ತಿಯೇ ಆಗಲಿಲ್ಲ. ಆದರೆ ಎಷ್ಟು ಸಲ ನೋಡಲು ಅನುಮತಿ ಕೊಟ್ಟಾರು? ಅದರ ಹುಚ್ಚು ನನ್ನನ್ನು ಹಗಲುರಾತ್ರಿ ಬಿಡಲೇ ಇಲ್ಲ. ಲೆಕ್ಕವಿಲ್ಲದಷ್ಟು ಸಲ ನಾನೇ ಹರಿಶ್ಚಂದ್ರನಾಗಿ ಆ ನಾಟಕವನ್ನು ಅಭಿನಯಿಸಿಕೊಂಡೆ. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧನಾಗಿರಬಾರದು? ಇದೇ ಹಗಲೂರಾತ್ರಿ ನನ್ನನ್ನು ನಾನೇ ಕೇಳಿಕೊಳ್ಳುತ್ತಿದ್ದ ಪ್ರಶ್ನೆ. ಸತ್ಯವನ್ನು ಅನುಸರಿಸಬೇಕು. ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕಷ್ಟವನ್ನೆಲ್ಲ, ಆಪತ್ತುಗಳನ್ನೆಲ್ಲ ನಾನೂ ಪಡಬೇಕು. ಇದೊಂದೇ ನನ್ನ ಮನಸ್ಸಿನಲ್ಲಿ ಸ್ಫೂರ್ತಿ ತುಂಬಿದ ಆದರ್ಶ. ಹರಿಶ್ಚಂದ್ರನ ಕಥೆಯನ್ನು ನಾನು ಅಕ್ಷರಶಃ ನಂಬಿದೆನು. ಕತೆಯನ್ನು ನೆನಪು ಮಾಡಿಕೊಂಡು ಪದೇಪದೇ ಅಳುತ್ತಿದ್ದೆನು. ಹರಿಶ್ಚಂದ್ರ ಐತಿಹಾಸಿಕ ವ್ಯಕ್ತಿ ಆಗಿರಲಾರ ಎಂಬುದು ಇಂದು ನನ್ನ ಬುದ್ಧಿಗೆ ಗೋಚರಿಸುತ್ತಿದೆ. ಆದರೆ ನನ್ನ ಮಟ್ಟಿಗೆ ಹರಿಶ್ಚಂದ್ರ, ಶ್ರವಣ ಇಬ್ಬರೂ ಜೀವಂತ ವ್ಯಕ್ತಿಗಳು. ಆ ನಾಟಕಗಳನ್ನು ಓದಿದರೆ ಮತ್ತೆ ಮೊದಲಿನಂತೆ ನಾನು ಕಣ್ಣೀರು ಹಾಕದೆ ಇರಲಾರೆನೆಂಬುದು ನನ್ನ ನಂಬಿಕೆ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ–೧, ಅಧ್ಯಾಯ–೨. 'ಚೈಲ್ಡ್ ಹುಡ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೩

ಬಾಲ್ಯ ವಿವಾಹ

ಈ ಅಧ್ಯಾಯವನ್ನು ಬರೆಯುವ ಸಂಭವವಿರದಿದ್ದರೆ ಒಳ್ಳೆಯದಾಗುತ್ತಿತ್ತೆಂದು ನನ್ನ ಅನಿಸಿಕೆ. ಆದರೆ ಆತ್ಮಕಥೆಯ ನಿರೂಪಣೆಯಲ್ಲಿ ಈ ಬಗೆಯ ಅನೇಕ ಕಹಿ ಗುಳಿಗೆಗಳನ್ನು ನುಂಗಬೇಕಾಗುವುದೆಂಬುದು ನನಗೆ ಗೊತ್ತು. ನಾನು ಸತ್ಯದ ಆರಾಧಕನಾಗಿರುವುದಾದರೆ ಇದರ ಹೊರತು ಬೇರೆ ದಾರಿ ಇಲ್ಲ. ಕಸ್ತೂರ್‌ಬಾಯಿಯ ಜೊತೆ ನನ್ನ ಮದುವೆ ನನ್ನ ಹದಿಮೂರನೆಯ ವಯಸ್ಸಿನಲ್ಲಿ ನಡೆಯಿತೆಂಬುದನ್ನು ನಾನು ವ್ಯಥೆಯಿಂದ ಇಲ್ಲಿ ಬರೆಯಬೇಕಾಗಿದೆ.

ಪಾಣಿಗ್ರಹಣವಾದುದು, ವಧೂವರರು ಒಟ್ಟಾಗಿ ಕುಳಿತುದು, ಸಿಹಿಯಾದ 'ಕನ್ಸಾರ'ವನ್ನು ನಾವಿಬ್ಬರೂ ಒಬ್ಬರ ಬಾಯೊಳಗೆ ಒಬ್ಬರು ಇಟ್ಟುದು, ಸಪ್ತಪದಿ, ನಾವು ಒಟ್ಟಾಗಿ ಇರಲು ಪ್ರಾರಂಭಿಸಿದುದು... ಇದರ ಚಿತ್ರ ನನ್ನ ಮನಸ್ಸಿನ ಮುಂದೆ ಇಂದೂ ಸ್ಪಷ್ಟವಾಗಿ ನಿಂತಿದೆ. ಓ! ಆ ಪ್ರಥಮ ರಾತ್ರಿ! ಏನೂ ಅರಿಯದ ಇಬ್ಬರು ಮಕ್ಕಳು ಸಂಸಾರಸಾಗರಕ್ಕೆ ದೂಡಲ್ಪಟ್ಟರು. ಮೊದಲ ರಾತ್ರಿ ಏನು ಮಾಡಬೇಕೆಂಬುದನ್ನು ನಮ್ಮ ಅತ್ತಿಗೆ ನನಗೆ ಚೆನ್ನಾಗಿ ತಿಳಿಸಿದ್ದಳು. ನನ್ನ ಧರ್ಮಪತ್ನಿಗೆ ಯಾರು ಕಲಿಸಿದರೆಂದು ನಾನು ಕೇಳಿದ್ದ ಜ್ಞಾಪಕವಿಲ್ಲ. ಈಗಲೂ ಕೇಳಬಹುದು. ಆದರೆ ಆ ಇಚ್ಛೆಯಿಲ್ಲ. ನಮ್ಮಲ್ಲಿ ಪರಸ್ಪರ ಸ್ವಲ್ಪ ಭಯವೂ ಲಜ್ಜೆಯೂ ಇದ್ದಿತು. ಅವಳೊಂದಿಗೆ ಏನನ್ನು ಮಾತನಾಡುವುದು? ಹೇಗೆ ಮಾತನಾಡುವುದು? ಅತ್ತಿಗೆ ಹೇಳಿಕೊಟ್ಟದ್ದು ಬಹುದೂರ ಸಹಾಯಕವಾಗಲಿಲ್ಲ. ಆದರೆ ಅಂತಹ ವಿಷಯಗಳಲ್ಲಿ ಯಾರ ಬೋಧನೆಯೂ ಅವಶ್ಯಕವಿಲ್ಲ. ಪೂರ್ವಜನ್ಮ ಸಂಸ್ಕಾರದ ವಾಸನೆ ಪ್ರಬಲವಾಗಿರುವಾಗ ಈ ವಿಷಯದಲ್ಲಿ ಶಿಕ್ಷಣದ ಅವಶ್ಯಕತೆಯೇ ಇಲ್ಲ. ಕ್ರಮೇಣ ಒಬ್ಬರ

ನ್ನೊಬ್ಬರು ಅರಿತುಕೊಂಡು ನಿರಾತಂಕದಿಂದ ಮಾತನಾಡತೊಡಗಿದೆವು. ನಾವಿಬ್ಬರೂ ಒಂದೇ ವಯಸ್ಸಿನವರಾಗಿದ್ದೆವು. ಆದರೆ ನಾನು ಗಂಡನ ಅಧಿಕಾರವನ್ನು ವಹಿಸಿಕೊಳ್ಳಲು ತಡಮಾಡಲಿಲ್ಲ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ-೧, ಅಧ್ಯಾಯ-೩, 'ಚೈಲ್ಡ್ ಮ್ಯಾರೇಜ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೪

ಗಂಡನಾಗುವುದು

ನನ್ನ ಮದುವೆಯಾದ ಸಮಯದಲ್ಲಿ ದಾಂಪತ್ಯ ಪ್ರೇಮ, ಮಿತವ್ಯಯ, ಬಾಲ್ಯವಿವಾಹ ಇವೇ ಮುಂತಾದ ವಿಷಯಗಳನ್ನು ಕುರಿತು ಕಿರುಹೊತ್ತಿಗೆಗಳು ಅಚ್ಚಾಗಿ, ಕಾಸಿಗೊಂದರಂತೆಯೋ, ಕಾಲಾಣೆಗೆ ಒಂದರಂತೆಯೋ–ಈಗ ಸರಿಯಾಗಿ ನೆನಪಿಲ್ಲ–ಮಾರಾಟವಾಗುತ್ತಿದ್ದವು. ಅವು ನನ್ನ ಕೈಗೆ ಸಿಕ್ಕಿದಾಗ ನಾನು ಅವುಗಳನ್ನು ಮೊದಲಿನಿಂದ ಕೊನೆಯವರೆಗೆ ಓದುತ್ತಿದ್ದೆ. ನನಗೆ ಇಷ್ಟವಿಲ್ಲದುದನ್ನು ಮರೆಯುವುದು, ಒಪ್ಪಿಗೆಯಾದುದನ್ನು ಆಚರಿಸುವುದು ನನ್ನ ಸ್ವಭಾವವಾಗಿತ್ತು. ಏಕಪತ್ನೀವ್ರತ ಪತಿಯ ಧರ್ಮವೆಂದು ಅದರಲ್ಲಿ ಓದಿದ್ದೆ. ಸರಿ, ಅದು ನನ್ನ ಹೃದಯದ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು.

ಆದರೆ ಈ ಒಳ್ಳೆಯ ವಿಚಾರದಿಂದಲೂ ಒಂದು ಕೆಟ್ಟ ಪರಿಣಾಮ ಉಂಟಾಯಿತು. ನಾನು ಏಕಪತ್ನೀವ್ರತ ಪಾಲನೆಯನ್ನು ಮಾಡಿದ ಮೇಲೆ ನನ್ನ ಹೆಂಡತಿಯೂ ಏಕಪತಿವ್ರತ ಪಾಲನೆಯನ್ನು ಮಾಡಬೇಕು. ಈ ವಿಚಾರ ಹೊಳೆದ ಕೂಡಲೇ ನಾನು ಅಸೂಯೆ ಮತ್ತು ಅಸಹಿಷ್ಣುತೆಗೆ ಗುರಿಯಾದೆ. ಅವಳು ಪತಿವ್ರತೆಯಾಗಿರಬೇಕು ಎಂಬುದರ ಬದಲು ಅವಳನ್ನು ನಾನು ಪತಿವ್ರತೆಯಾಗಿಟ್ಟಿರಬೇಕು ಎಂದು ನನಗೆ ತೋರಿತು. ಅದಕ್ಕಾಗಿ ನಾನು ಅವಳ ಮೇಲೆ ಕಾವಲುಗಾರನಾಗಿರಬೇಕೆಂದುಕೊಂಡೆ. ಹೆಂಡತಿಯ ಮೇಲೆ ಸಂದೇಹಕ್ಕೆ ನನಗೆ ಏನೂ ಕಾರಣವಿರಲಿಲ್ಲ. ಆದರೆ ಅಸೂಯೆಗೆ ಕಾರಣ ಬೇಕಿಲ್ಲ. ಅವಳು ಎಲ್ಲೆಲ್ಲಿಗೆ ಹೋಗುತ್ತಾಳೆ, ಅದು ನನಗೆ ತಿಳಿಯಬೇಕು, ಅಂದರೆ ನನ್ನ ಅಪ್ಪಣೆಯಿಲ್ಲದೆ ಆಕೆ ಎಲ್ಲಿಗೂ ಹೋಗಕೂಡದು. ಈ ಭಾವನೆ ನಮ್ಮಿಬ್ಬರ ನಡುವೆ ಇರಿಸುಮುರುಸಿಗೆ ಕಾರಣವಾಯಿತು. ಅಪ್ಪಣೆಯಿಲ್ಲದೆ ಎಲ್ಲಿಗೂ ಹೋಗಕೂಡದೆಂಬುದು ಆಕೆಗೆ ಒಂದು ಬಗೆಯ ಬಂಧನವಾಯಿತು. ಆದರೆ

ಕಸ್ತೂರ್‌ಬಾಯಿ ಈ ಬಗೆಯ ಬಂಧನವನ್ನು ಸಹಿಸುವ ಹುಡುಗಿಯಾಗಿರಲಿಲ್ಲ. ಅವಳು ಇಷ್ಟಬಂದಾಗ ಇಷ್ಟ ಬಂದಲ್ಲಿಗೆ ಹೋಗಿಬಿಡುತ್ತಿದ್ದಳು. ನನ್ನ ಹತೋಟಿಯನ್ನು ನಾನು ಇನ್ನೂ ಹೆಚ್ಚು ಬಿಗಿಪಡಿಸಿದೆನು. ಆಕೆ ಮತ್ತೂ ಹೆಚ್ಚು ಸ್ವತಂತ್ರಳಾದಳು. ಇದರಿಂದ ನನ್ನ ಕೋಪ ಹೆಚ್ಚಿತು. ಒಬ್ಬರೊಂದಿಗೆ ಒಬ್ಬರು ಮಾತನಾಡದೆ ಇರುವುದೇ ಬಾಲದಂಪತಿಗಳಾದ ನಮ್ಮ ನಿತ್ಯ ನಿಯಮವಾಯಿತು. ಕಸ್ತೂರ್‌ಬಾಯಿಯ ಸ್ವತಂತ್ರ ಪ್ರವೃತ್ತಿ ದೋಷರಹಿತವಾದುದೆಂದು ನನಗೆ ಈಗ ತೋರುತ್ತಿದೆ. ನಿರ್ದೋಷಿಯಾದ ಒಬ್ಬ ಹುಡುಗಿ ದೇವಾಲಯಕ್ಕೆ ಹೋಗುವುದಕ್ಕಾಗಲೀ, ಗೆಳತಿಯರ ಮನೆಗೆ ಹೋಗುವುದಕ್ಕಾಗಲೀ ಅಡ್ಡಿಪಡಿಸಿದರೆ ಹೇಗೆ ಸಹಿಸಿಯಾಳು?

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ–೧, ಅಧ್ಯಾಯ–೪, 'ಪ್ಲೇಯಿಂಗ್ ದ ಹಸ್ಬೆಂಡ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೫

ಇಂಗ್ಲಿಷ್ ಜಂಟ್ಲ್‌ಮನ್ ಆದ ಕತೆ

[ಸ್ವಜಾತಿಯವರ ವಿರೋಧದ ನಡುವೆಯೂ, ಗಾಂಧಿ ೧೮೮೮ರ ಸೆಪ್ಟೆಂಬರ್‌ನಲ್ಲಿ ಬ್ಯಾರಿಸ್ಟರ್ ಆಗಲು ಇಂಗ್ಲೆಂಡಿಗೆ ಹೊರಟರು. ಅಲ್ಲಿನ ಆರಂಭದ ಅನುಭವ.]

ಸಸ್ಯಾಹಾರ ಕುರಿತ ನನ್ನ ನಂಬಿಕೆ, ವಿಶ್ವಾಸ ದಿನೇ ದಿನೇ ಬೆಳೆಯತೊಡಗಿತು... ಈ ನಡುವೆ ನನ್ನ ಗೆಳೆಯ [ನನ್ನ ಸಸ್ಯಾಹಾರ ಕುರಿತ ವ್ಯಸನ ಕುರಿತು] ಚಿಂತಿತನಾಗಿದ್ದ. ನಾನು ಮಾಂಸಾಹಾರ ಸೇವನೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಲೇ ಇದ್ದರೆ, ನನ್ನ ದೇಹ ದುರ್ಬಲವಾಗುವುದಷ್ಟೇ ಅಲ್ಲ, ನಾನೊಬ್ಬ ಗೊಡ್ಡು ಮನುಷ್ಯನಾಗಿ ಬಿಡುತ್ತೇನೆ, ನಾನು ಇಂಗ್ಲಿಷ್ ಸಮಾಜದಲ್ಲಿ ಆರಾಮಾಗಿ ಬೆರೆಯಲಾರೆ ಎಂಬುದು ಅವನ ಚಿಂತೆ; ನನ್ನ ಬಗೆಗೆ ಅವನಿಗಿದ್ದ ಪ್ರೀತಿಯಿಂದಾಗಿಯೇ ಅವನು ಚಿಂತಿತನಾಗಿದ್ದ. ಹೀಗಾಗಿ ನನ್ನನ್ನು ಸುಧಾರಣೆ ಮಾಡಲು ಅವನು ತನ್ನ ಕೊನೆಯ ಪ್ರಯತ್ನ ಮಾಡಿದ. ಒಂದು ದಿನ ನನ್ನನ್ನು ನಾಟಕಕ್ಕೆ ಹೋಗಲು ಕರೆದ.

ನಾಟಕಕ್ಕೆ ಮೊದಲು ಹಾಲ್‌ಬಾರ್ನ್ ರೆಸ್ಟೋರೆಂಟ್‌ನಲ್ಲಿ ನಾವಿಬ್ಬರೂ ಊಟಕ್ಕೆ ಹೋದೆವು. ಮೊದಲು ಸೂಪ್ ಬಂತು. ನಾನು ಅಳುಕುತ್ತಲೇ, ಈ ಸೂಪ್ ಸಸ್ಯಾಹಾರದ್ದೋ ಹೇಗೆ ಎಂದು ಕೇಳಿದೆ. ಗೆಳೆಯ ಕೋಪದಿಂದ, 'ನೀನು ಸಭ್ಯ ಸಮಾಜಕ್ಕೆ ತಕ್ಕವನಲ್ಲ. ನಿನಗೆ ಹೇಗೆ ನಡೆದುಕೊಳ್ಳುವುದು ಎಂಬುದು ಗೊತ್ತಿರದಿದ್ದರೆ, ನೀನು ಬೇರೆ ರೆಸ್ಟೋರೆಂಟಿಗೆ ಹೋಗಿ ಊಟ ಮಾಡು' ಎಂದ. ಅದು ನನಗೆ ಸಂತೋಷವನ್ನೇ ಉಂಟು ಮಾಡಿತು. ಸಸ್ಯಾಹಾರಿ ರೆಸ್ಟೋರೆಂಟ್ ಮುಚ್ಚಿತ್ತು. ಆ ರಾತ್ರಿ ಹೊಟ್ಟೆಗೆ ಏನೂ ಇಲ್ಲದೆ ಕಳೆದೆ.

...ಆದರೆ ನನ್ನ ಗೆಳೆಯನ ಇರಿಸುಮುರಿಸನ್ನು ತೊಡೆಯಲು ತೀರ್ಮಾನಿಸಿದೆ. ಇನ್ನು ಮುಂದೆ ಕೊಂಚ ಥಿಕಾವಾಗಿರಲು ನಿರ್ಧರಿಸಿದೆ...ಆ ಕಾರಣಕ್ಕಾಗಿ ಇಂಗ್ಲಿಷ್ ಜಂಟ್ಲ್‌ಮನ್ (ಸಭ್ಯ ನಾಗರಿಕ) ಆಗುವ ಅಸಾಧ್ಯ ಕಾರ್ಯವನ್ನು ಕೈಗೆತ್ತಿಕೊಂಡೆ.

ನಾನು ಹಾಕಿಕೊಂಡ ಬಟ್ಟೆಗಳು ಬಾಂಬೆಯಲ್ಲಿ ಹೊಲಿಸಿದಂಥವು; ಅವು ಇಂಗ್ಲೆಂಡ್ ಸಮಾಜಕ್ಕೆ ಒಪ್ಪುವುದಿಲ್ಲ ಎನ್ನಿಸಿತು. ಆರ್ಮಿ ಮತ್ತು ನೇವಿ ಅಂಗಡಿಗೆ ಹೋಗಿ ಹೊಸ ಬಟ್ಟೆಗಳನ್ನು ಕೊಂಡೆ. ಆ ಕಾಲಕ್ಕೆ ದುಬಾರಿಯಾದ ಚಿಮ್ನಿ-ಪಾಟ್ ಹ್ಯಾಟನ್ನು ೧೯ ಶಿಲ್ಲಿಂಗ್ಸ್ ಕೊಟ್ಟು ಕೊಂಡುಕೊಂಡೆ. ಅಷ್ಟೇ ಸಾಲದೆಂಬಂತೆ ಲಂಡನ್ ನಗರದ ಫ್ಯಾಷನ್ ಜೀವನಶೈಲಿಯ ಕೇಂದ್ರವಾದ ಬಾಂಡ್ ಸ್ಟ್ರೀಟ್‌ನಲ್ಲಿ ವ್ಯರ್ಥವಾಗಿ ಹತ್ತು ಪೌಂಡ್ ಖರ್ಚು ಮಾಡಿ, ಒಂದು ಸಂಜೆ ಸೂಟ್ ಕೊಂಡುಕೊಂಡೆ. ಹಾಗೇ ನನ್ನ ಉದಾರಿ ಅಣ್ಣನಿಗೆ ಒಂದು ಎರಡೆಳೆಯ ಚಿನ್ನದ ವಾಚ್ ಚೈನ್ ಕಳುಹಿಸಲು ಕೇಳಿಕೊಂಡೆ. ರೆಡಿಮೇಡ್ ಟೈ ಧರಿಸುವುದು ಸರಿಯಲ್ಲವೆಂದು ತಿಳಿದು ಟೈ ಕಟ್ಟಿಕೊಳ್ಳುವ ಕಲೆಯನ್ನು ಕಲಿತೆ. ಭಾರತದಲ್ಲಿದ್ದಾಗ ನನ್ನ ಕುಟುಂಬದ ಕ್ಷೌರಿಕ ಕ್ಷೌರ ಮಾಡುವಾಗ ಕನ್ನಡಿ ಕಾಣುವುದೇ ಒಂದು ಐಷಾರಾಮವಾಗಿತ್ತು; ಇಲ್ಲಿ ನಾನು ದಿನಾ ಕನ್ನಡಿ ಮುಂದೆ ನಿಂತು ಟೈ ಕಟ್ಟಿಕೊಂಡು, ಕೂದಲು ಬಾಚಿಕೊಂಡು ಸಿಂಗಾರಗೊಳ್ಳಲು ಹತ್ತು ನಿಮಿಷ ವ್ಯರ್ಥ ಮಾಡತೊಡಗಿದೆ.

ಇಷ್ಟೇ ಸಾಲದು ಎಂಬಂತೆ ಇಂಗ್ಲಿಷ್ ಜಂಟ್ಲ್‌ಮನ್ ಆಗುವ ಇನ್ನಿತರ ವಿಷಯಗಳ ಕಡೆಗೂ ಗಮನ ಹರಿಸಿದೆ: ಫ್ರೆಂಚ್, ನೃತ್ಯ ಹಾಗೂ ವಾಗ್ಮಿತೆ (ಎಲೊಕ್ಯೂಶನ್) ಕೂಡ ಇಂಗ್ಲಿಷ್ ಜಂಟ್ಲ್‌ಮನ್ ಆಗಲು ಅಗತ್ಯ ಎಂದು ಯಾರೋ ಹೇಳಿದರು. ನೃತ್ಯ ಪಾಠಗಳಿಗಾಗಿ ಮೂರು ಪೌಂಡ್ ಟರ್ಮ್ ಫೀಸ್ ತುಂಬಿದೆ. ಆರು ಪಾಠಗಳಾಗಿದ್ದವೆಂದು ಕಾಣುತ್ತದೆ. ಲಯಬದ್ಧ ಚಲನೆ ಕಲಿಯುವುದು ನನ್ನ ಅಳತೆಗೆ ಮೀರಿದ್ದಾಗಿತ್ತು. ಪಿಯಾನೋವನ್ನು ಅನುಸರಿಸುವುದು ಅಸಾಧ್ಯವಾಗಿ, ಲಯದ ಗಳಿಗೆಗೆ ಸರಿಯಾಗಿ ಚಲಿಸಲು ಕಷ್ಟವಾಗುತ್ತಿತ್ತು. ನಾನಿನ್ನೇನು ಮಾಡಬಹುದಿತ್ತು? ನೀತಿಕತೆಯೊಂದರಲ್ಲಿ ಸನ್ಯಾಸಿಯೊಬ್ಬ ಇಲಿಗಳನ್ನು ದೂರ ಇಡಲು ಬೆಕ್ಕು ಸಾಕಿದ. ಆ ಬೆಕ್ಕಿಗೆ ಹಾಲಿಡಲು ಹಸು ತಂದ. ಹಸು ಸಾಕುವುದಕ್ಕೆ ಆಳನ್ನು ತಂದ... ಹೀಗೇ ಕತೆ ಬೆಳೆಯುತ್ತದೆ. ನನ್ನ ಮಹದಾಸೆಗಳೂ ಸನ್ಯಾಸಿಯ ಸಂಸಾರದ ಹಾಗೆ ಬೆಳೆಯತೊಡಗಿದವು. ಪಾಶ್ಚಾತ್ಯ ಸಂಗೀತದ ಕಡೆ ಒಲವು ಬೆಳೆಸಿಕೊಳ್ಳಲು ವಯೊಲಿನ್ ಕಲಿಯಬೇಕೆಂದು, ಮೂರು ಪೌಂಡ್ ಕೊಟ್ಟು ವಯೊಲಿನ್ ಕೊಂಡುಕೊಂಡೆ. ವಾಗ್ಮಿತೆ ಅಥವಾ ಮಾತಾಡುವ ಕಲೆ ಕಲಿಯಲು ಒಂದು ಗಿನಿ ಆರಂಭದ ಫೀಸ್ ಕೊಟ್ಟು ಮೂರನೆಯ ಶಿಕ್ಷಕನನ್ನು ಹುಡುಕಿಕೊಂಡೆ. ಬೆಲ್ ಬರೆದ 'ಸ್ಟ್ಯಾಂಡರ್ಡ್

ಎಲೊಕ್ಯೂಷನಿಸ್ಟ್' ಪುಸ್ತಕವನ್ನು ಪಠ್ಯ ಪುಸ್ತಕವನ್ನಾಗಿ ಆ ಮೇಷ್ಟ್ರು ಶಿಫಾರಸು ಮಾಡಿದರು. ಅದನ್ನೂ ಕೊಂಡುಕೊಂಡೆ.

ಶ್ರೀ ಬೆಲ್ ಹೊಡೆದ ಎಚ್ಚರಿಕೆಯ ಗಂಟೆ ನನ್ನ ಕಿವಿಯಲ್ಲಿ ಮೊಳಗಿತು.ನಾನುಎಚ್ಚೆತ್ತೆ.

ನಾನು ಇಡೀ ಜೀವನವನ್ನು ಇಂಗ್ಲೆಂಡಿನಲ್ಲಿ ಕಳೆಯಬೇಕಿಲ್ಲ ಎಂದು ನನಗೆ ನಾನೇ ಹೇಳಿಕೊಂಡೆ. ಮಾತಾಡುವ ಕಲೆ ಕಲಿತು ಪ್ರಯೋಜನವೇನು? ನೃತ್ಯ ನನ್ನನ್ನು ಹೇಗೆ 'ಜಂಟ್ಲ್‌ಮನ್' ಆಗಿಸಬಲ್ಲದು? ವಯೊಲಿನ್ನನ್ನು ಇಂಡಿಯಾದಲ್ಲೂ ಕಲಿಯಬಹುದು. ನಾನೊಬ್ಬ ವಿದ್ಯಾರ್ಥಿ; ಸದಾ ಓದುವುದು ನನ್ನ ಕೆಲಸ. ನಾನು ನ್ಯಾಯವಾದಿಯಾಗಿ ಕೋರ್ಟಿಗೆ ಸೇರುವ ಅರ್ಹತೆ ಪಡೆಯಬೇಕು. ನನ್ನ ನಡತೆ ನನ್ನನ್ನು ಒಬ್ಬ ಸಭ್ಯ ನಾಗರಿಕನನ್ನಾಗಿ ಮಾಡಿದರೆ ಅಷ್ಟೇ ಸಾಕು...

ಈ ಬಗೆಯ ಆಲೋಚನೆಗಳು ನನ್ನನ್ನು ಮುತ್ತಿದವು. ಈ ಆಲೋಚನೆಗಳನ್ನು ನಾನು ವಾಗ್ಮಿತೆಯ ಮೇಷ್ಟರಿಗೆ ಬರೆದು ತಿಳಿಸಿ, ಮುಂದಿನ ತರಗತಿಗಳಿಗೆ ಬರುವುದಿಲ್ಲ, ಕ್ಷಮಿಸಿ ಎಂದು ಹೇಳಿದೆ. ಇಂಥದೇ ಪತ್ರವನ್ನು ಡ್ಯಾನ್ಸ್ ಟೀಚರ್‌ಗೂ ಬರೆದೆ. ವಯೊಲಿನ್ ಶಿಕ್ಷಕಿಯ ಬಳಿ ಖುದ್ದಾಗಿ ಹೋಗಿ, ಎಷ್ಟು ದುಡ್ಡಿಗಾದರೂ ಪರವಾಯಿಲ್ಲ, ಈ ವಯೊಲಿನ್ ಮಾರಿಬಿಡಿ ಎಂದು ಕೇಳಿಕೊಂಡೆ. ಆಕೆ ನನ್ನೊಡನೆ ಸ್ನೇಹದಿಂದ ನಡೆದುಕೊಳ್ಳುತ್ತಿದ್ದರು; ಹೀಗಾಗಿ, ನಾನೊಂದು ಹುಸಿ ಆದರ್ಶದ ಬೆನ್ನು ಹತ್ತಿರುವೆನೆಂಬುದನ್ನು ಆಕೆಯ ಬಳಿ ಹೇಳಿಕೊಂಡೆ. ಸಂಪೂರ್ಣವಾಗಿ ಬದಲಾಗುವ ನನ್ನ ನಿರ್ಧಾರವನ್ನು ಆಕೆ ಪ್ರೋತ್ಸಾಹಿಸಿದರು.

[ಇಂಗ್ಲಿಷ್ ಜಂಟ್ಲ್‌ಮನ್ ಆಗುವ] ನನ್ನ ಈ ವ್ಯಾಮೋಹ ಮೂರು ತಿಂಗಳು ಕಾಲ ಇತ್ತು. ಉಡುಗೆ ತೊಡುಗೆಯ ಠಾಕು ಠೀಕು ಕೆಲವು ವರ್ಷ ಕಾಲ ಮುಂದುವರಿಯಿತು. ಆದರೆ ಇಲ್ಲಿಂದಾಚೆಗೆ ನಾನು ವಿದ್ಯಾರ್ಥಿಯಾದೆ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ–೧, ಅಧ್ಯಾಯ–೧೫, 'ಪ್ಲೇಯಿಂಗ್ ದ ಇಂಗ್ಲಿಷ್ ಜಂಟ್ಲ್‌ಮನ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಎಚ್. ಎಸ್. ಶೋಯಿಂಕಾ**

೬

ವಿದೇಶ ಯಾತ್ರೆಯ ನಂತರ

ನನ್ನ ವಿದೇಶ ಯಾತ್ರೆ ಕುರಿತು ನನ್ನ ಜಾತಿಯಲ್ಲಿ ಎದ್ದಿದ್ದ ಬಿರುಗಾಳಿ ಇದ್ದೇ ಇದ್ದಿತು. ನಾನು ವಿದೇಶದಿಂದ ಮರಳಿ ಬಂದಾಗ ನಮ್ಮ ಜಾತಿಯವರಲ್ಲಿಯೇ ಎರಡು ಪಂಗಡಗಳಾಗಿದ್ದವು. ಒಂದು ಪಂಗಡ ನನ್ನನ್ನು ಜಾತಿಗೆ ಸೇರಿಸಿಕೊಂಡಿತು. ನನ್ನನ್ನು ಹೊರಗೇ ಇಟ್ಟಿರಬೇಕೆಂಬುದು ಮತ್ತೊಂದು ಪಂಗಡದ ನಿರ್ಣಯವಾಗಿತ್ತು. ನಮ್ಮಣ್ಣ ನನ್ನನ್ನು ನಾಸಿಕಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನದಿಯಲ್ಲಿ ಪವಿತ್ರ ಸ್ನಾನ ಮಾಡಿಸಿದ. ರಾಜಕೋಟೆಗೆ ಹಿಂದಿರುಗಿ ಜಾತಿಯವರಿಗೆ ಒಂದು ಊಟವನ್ನು ಕೊಟ್ಟ. ನನಗೆ ಇದಾವುದೂ ಇಷ್ಟವಿರಲಿಲ್ಲ. ಆದರೆ ನನ್ನ ಬಗ್ಗೆ ನಮ್ಮಣ್ಣನ ಪ್ರೀತಿ ಅಮಿತವಾಗಿತ್ತು. ಆತನಲ್ಲಿ ನನ್ನ ಭಕ್ತಿಯೂ ಹಾಗೆಯೇ ಇತ್ತು. ಆದುದರಿಂದ ನಾನು ಆತನ ಇಚ್ಛೆಯನ್ನೇ ಆಜ್ಞೆಯಂತೆ ಭಾವಿಸಿ ಯಂತ್ರದಂತೆ ನೆರವೇರಿಸಿದೆ. ಹೀಗೆ ಜಾತಿಯವರಲ್ಲಿ ಮತ್ತೆ ಸೇರಿಕೊಳ್ಳುವುದು ಸುಲಭವಾಯಿತು.

ನನ್ನನ್ನು ಬಹಿಷ್ಕರಿಸಿದ್ದ ನಮ್ಮ ಜಾತಿಯವರ ಪಂಗಡವನ್ನು ಪ್ರವೇಶಿಸಲು ನಾನು ಮತ್ತೆ ಎಂದೂ ಪ್ರಯತ್ನ ಮಾಡಲಿಲ್ಲ. ಅಷ್ಟೇ ಅಲ್ಲ, ಆ ಪಂಗಡದ ಮುಖಂಡರ ಬಗ್ಗೆ ನನ್ನ ಮನಸ್ಸಿನಲ್ಲಿ ಸಹ ಎಂದೂ ಕ್ರೋಧ ಉಂಟಾಗಲಿಲ್ಲ. ಕೆಲವರಿಗೆ ನನ್ನಲ್ಲಿ ತಿರಸ್ಕಾರ ದೃಷ್ಟಿ ಸಹ ಇತ್ತು. ಆದರೆ ನಾನು ಅವರ ಮನಸ್ಸಿಗೆ ನೋವಾಗುವಂತೆ ಎಂದೂ ನಡೆಯಲಿಲ್ಲ. ನಾನು ಬಹಿಷ್ಕಾರದ ನಿಯಮಗಳನ್ನು ಪೂರ್ಣವಾಗಿ ಪಾಲಿಸುತ್ತಿದ್ದೆ. ಆ ನಿಯಮಕ್ಕೆ ಅನುಗುಣವಾಗಿ ನಮ್ಮ ಅತ್ತೆ ಮಾವಂದಿರು, ನಮ್ಮ ಸಹೋದರಿಯರು ಭಾವ ಮುಂತಾದ ಯಾವ ಬಂಧುಗಳೂ ನನ್ನೊಂದಿಗೆ ಯಾವ ಸಂಪರ್ಕವನ್ನೂ ಇಟ್ಟುಕೊಳ್ಳುವಂತೆ ಇರಲಿಲ್ಲ. ನನಗೆ ತಮ್ಮ ಮನೆಗಳಲ್ಲಿ ಆತಿಥ್ಯ ಮಾಡುವಂತೆ ಇರಲಿಲ್ಲ. ನಾನು ಅವರ ಪೈಕಿ ಯಾರ ಮನೆಯಲ್ಲಿಯೂ ನೀರನ್ನು

ಕೂಡ ಕುಡಿಯುತ್ತಿರಲಿಲ್ಲ. ಅವರು ಗುಟ್ಟಾಗಿ ಬಹಿಷ್ಕಾರ ನಿಯಮವನ್ನು ಉಲ್ಲಂಘಿಸಲು ಸಿದ್ಧರಾಗಿದ್ದರು. ಆದರೆ ಅದು ನನ್ನ ಸ್ವಭಾವಕ್ಕೆ ವಿರುದ್ಧವಾಗಿತ್ತು. ಯಾವ ಕಾರ್ಯವನ್ನು ನಾಲ್ಕು ಜನರ ಎದುರಿಗೆ ಮಾಡುವುದಿಲ್ಲವೋ ಅದನ್ನು ರಹಸ್ಯದಲ್ಲಿ ಮಾಡಲು ನನಗೆ ಇಷ್ಟವಿರಲಿಲ್ಲ.

ನನ್ನ ಈ ಪ್ರಾಮಾಣಿಕ ನಡತೆಯ ಪರಿಣಾಮವಾಗಿ, ಜಾತಿಯವರಿಂದ ನನಗೆ ಯಾವಾಗಲೂ ಉಪದ್ರವವಾಗುವ ಸಂದರ್ಭವೇ ಉಂಟಾಗಲಿಲ್ಲ. ಅಷ್ಟೇ ಅಲ್ಲ. ನಾನು ಬಹಿಷ್ಕೃತ ಎಂದು ತಿಳಿದ ಜಾತಿಬಂಧುಗಳೂ ಸಹ ನನ್ನಲ್ಲಿ ಪ್ರೇಮ, ಔದಾರ್ಯಗಳನ್ನು ಪೂರ್ಣವಾಗಿ ಇಟ್ಟಿದ್ದಾರೆ. ನಾನು ಜಾತಿಗಾಗಿ ಏನನ್ನು ಮಾಡಬೇಕೆಂದೂ ಸಹ ನಿರೀಕ್ಷಿಸದೆ ಅವರು ನನ್ನ ಕಾರ್ಯದಲ್ಲಿ ನನಗೆ ಸಹಾಯ ಮಾಡಿದ್ದಾರೆ. ಇದಕ್ಕೆಲ್ಲ ಕಾರಣ ನನ್ನ ಪ್ರತೀಕಾರರಹಿತ ಬುದ್ಧಿ ಎಂದು ನನ್ನ ನಂಬಿಕೆ. ಜಾತಿಗೆ ಮತ್ತೆ ನನ್ನನ್ನು ಸೇರಿಸಬೇಕೆಂದು ನಾನು ಹೋರಾಡಿದ್ದರೆ ಅಥವಾ ಜಾತಿಯ ಮುಖಂಡರನ್ನು ನಾನು ಎದುರಿಸಿ ರೇಗಿಸಿದ್ದರೆ ಇಂಗ್ಲೆಂಡಿನಿಂದ ಹಿಂದಿರುಗಿದ ಮೇಲೆ ನಾನು ಅಶಾಂತಿಯ ಬಿರುಗಾಳಿಯಲ್ಲಿ ಸಿಕ್ಕಿಕೊಳ್ಳುತ್ತಿದ್ದೆ ಮತ್ತು ಪ್ರಾಯಶಃ ಢಂಬಾಚಾರಿಯೂ ಆಗಿಬಿಡುತ್ತಿದ್ದೆ.

ನನ್ನ ಪತ್ನಿಯೊಂದಿಗೆ ನನ್ನ ಸಂಬಂಧ ಹೇಗಿರಬೇಕೆಂಬುದು ನನ್ನ ಇಷ್ಟವಾಗಿದ್ದಿತೋ ಅದು ಇನ್ನೂ ಹಾಗೆ ಆಗಿರಲಿಲ್ಲ. ಇಂಗ್ಲೆಂಡಿಗೆ ಹೋಗಿ ಬಂದಿದ್ದರೂ ಸಹ ಆಕೆಯ ವಿಷಯದಲ್ಲಿ ನನ್ನ ಅಸೂಯಾ ಬುದ್ಧಿ ಹೋಗಿರಲಿಲ್ಲ. ಯಾವ ಸಣ್ಣ ವಿಷಯದಲ್ಲಿಯೂ ನನ್ನ ಸಂದೇಹ ಮತ್ತು ಗೊಣಗಾಟದ ಬುದ್ಧಿ ಮರೆಯಾಗಿರಲೇ ಇಲ್ಲ. ಇದರಿಂದ ನನ್ನ ಪ್ರಿಯವಾದ ಮನೋರಥಗಳಾವುವೂ ಈಡೇರಲೇ ಇಲ್ಲ. ನನ್ನ ಹೆಂಡತಿ ಬರೆಯುವುದನ್ನೂ, ಓದುವುದನ್ನೂ ಕಲಿಯಬೇಕು, ನಾನು ಅವಳಿಗೆ ಪಾಠ ಹೇಳಿಕೊಡಬೇಕು ಎಂದು ನಾನು ನಿಶ್ಚಯ ಮಾಡಿಕೊಂಡಿದ್ದೆ. ಆದರೆ ನನ್ನ ವಿಷಯಾಸಕ್ತಿಯಿಂದ ಅದಾವುದೂ ಸಾಧ್ಯವಾಗಲಿಲ್ಲ. ನನ್ನ ಈ ದೋಷದ ಫಲವನ್ನು ನನ್ನ ಹೆಂಡತಿ ಅನುಭವಿಸಬೇಕಾಯಿತು.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ-೨, ಅಧ್ಯಾಯ-೨, 'ಹೌ ಐ ಬಿಗ್ಯಾನ್ ಲೈಫ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೭

ದಕ್ಷಿಣ ಆಫ್ರಿಕಾ: ಕೋರ್ಟಿನಲ್ಲಿ ಮತ್ತು ರೈಲುಗಾಡಿಯಲ್ಲಿ

ನಾನು ಪ್ರತಿನಿಧಿಸುತ್ತಿದ್ದ ಕಂಪನಿಯಲ್ಲಿ ಪಾಲುದಾರರಾಗಿದ್ದ ಅಬ್ದುಲ್ ಸೇಠ್ ನನ್ನನ್ನು ಬರಮಾಡಿಕೊಳ್ಳಲು ಡರ್ಬನ್ ನಗರದಲ್ಲಿ ಹಾಜರಿದ್ದರು. ಹಡಗಿನಲ್ಲಿ ಇದ್ದವರನ್ನು ಭೇಟಿ ಮಾಡಲು ಆಗಮಿಸುತ್ತಿದ್ದವರನ್ನು ನಾನು ಹತ್ತಿರದಿಂದ ಗಮನಿಸಿದೆನು. ಭಾರತೀಯರ ಕುರಿತು ಅಷ್ಟೇನೂ ಗೌರವ ಅವರಲ್ಲಿ ಇರುತ್ತಿರಲಿಲ್ಲ. ಅಬ್ದುಲ್ ಸೇಠರನ್ನು ಬಲ್ಲವರು ಅವರೊಂದಿಗೆ ವಿಚಿತ್ರ ರೀತಿಯಲ್ಲಿ ವರ್ತಿಸುವುದನ್ನು ನಾನು ಗಮನಿಸಿದೆನು.

ನಾನು ದಕ್ಷಿಣ ಆಫ್ರಿಕಾಕ್ಕೆ ಆಗಮಿಸಿ ಎರಡು ಮೂರು ದಿನಗಳು ಕಳೆದಿದ್ದವು. ಅಬ್ದುಲ್ ಸೇಠ್ ನನ್ನನ್ನು ಡರ್ಬನ್‌ನ ನ್ಯಾಯಾಲಯಕ್ಕೆ ಕರೆದುಕೊಂಡು ಹೋದರು. ಅಲ್ಲಿ ನ್ಯಾಯಾಧೀಶರು ನನ್ನನ್ನೇ ಸ್ವಲ್ಪಕಾಲ ದಿಟ್ಟಿಸಿ ನೋಡುತ್ತಿದ್ದರು. ಸ್ವಲ್ಪ ಸಮಯ ಕಳೆದ ನಂತರ ಅವರು ನನಗೆ ನನ್ನ ತಲೆಯ ಮೇಲಿದ್ದ ಪೇಟವನ್ನು ತೆಗೆಯಲು ಹೇಳಿದರು. ಪೇಟವನ್ನು ತೆಗೆಯಲು ನಿರಾಕರಿಸಿದ ನಾನು ನ್ಯಾಯಾಲಯದಿಂದ ಹೊರಗೆ ಬಂದೆ. ನಂತರ, ಈ ಘಟನೆಯನ್ನು ಪತ್ರಿಕೆಗಳಿಗೆ ಪತ್ರ ಬರೆದು ವಿವರಿಸಿದೆ ಮತ್ತು ಪೇಟವನ್ನು ಧರಿಸುವುದು ನನ್ನ ಹಕ್ಕೆಂದು ಪ್ರತಿಪಾದಿಸಿದೆ. ಈ ಘಟನೆಯನ್ನು ಪತ್ರಿಕೆಗಳಲ್ಲಿ ಸಾಕಷ್ಟು ಚರ್ಚೆಗೆ ಒಳಪಡಿಸಲಾಯಿತು ಮತ್ತು ನನ್ನನ್ನು 'ಬೇಡದ ಅತಿಥಿ' ಎಂದು ಪರಿಗಣಿಸಲಾಯಿತು. ಇಡೀ ಘಟನಾವಳಿ ನನಗೆ ದಕ್ಷಿಣ ಆಫ್ರಿಕಾದಲ್ಲಿ ಅನಿರೀಕ್ಷಿತವಾದ ಪ್ರಚಾರವನ್ನು ನೀಡಿತು. ಆದರೆ, ನಾನು ಅಲ್ಲಿರುವವರೆಗೂ ನನ್ನ ಪೇಟ ನನ್ನೊಂದಿಗೆ ಉಳಿಯಿತು.

* * *

ಹೀಗೆ ನಾನು ನನ್ನ ಪರಿಚಯದ ವಲಯವನ್ನು ವಿಸ್ತರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ನಮ್ಮ ಕಂಪನಿಯ ವಕೀಲರಿಂದ ಪತ್ರ ಬಂದಿತು. ಅದರಲ್ಲಿ ಕೇಸು ದಾಖಲಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿತ್ತು. ಅಬ್ದುಲ್ ಸೇಠ್ ಅವರ ಪ್ರತಿನಿಧಿಯಾಗಿ ನಾನು ಪ್ರಿಟೋರಿಯಾ ನಗರಕ್ಕೆ ಹೋಗಲು ಸಾಧ್ಯವೇ ಎಂದು ಅವರು ನನ್ನಲ್ಲಿ ಕೇಳಿದ್ದರು. ಇದಕ್ಕೆ ಒಪ್ಪಿದ ನಾನು ಕೆಲವು ದಿನಗಳ ನಂತರ, ಪ್ರಿಟೋರಿಯಾ ನಗರಕ್ಕೆ ಪ್ರಯಾಣ ಬೆಳೆಸಿದೆ.

ನನಗಾಗಿ ರೈಲಿನಲ್ಲಿ ಫಸ್ಟ್‌ಕ್ಲಾಸ್ ಟಿಕೆಟ್ ಬುಕ್ ಮಾಡಲಾಗಿತ್ತು. ರೈಲು ರಾತ್ರಿ ೯ರ ವೇಳೆಗೆ ನಟಾಲ್‌ನ ರಾಜಧಾನಿ ಮಾರ್ಟಿಜ್‌ಬರ್ಗ್ ಅನ್ನು ತಲುಪಿತು. ಇಲ್ಲಿ ಓರ್ವ ಪ್ರಯಾಣಿಕ ಬೋಗಿಯೊಳಗೆ ಪ್ರವೇಶಿಸಿ ನನ್ನನ್ನು ಮೇಲಿಂದ ಕೆಳಗಿನವರೆಗೆ ಒಮ್ಮೆ ನೋಡಿದ. ತಕ್ಷಣವೇ ಹೊರಗೆ ಹೋದ ಆತ, ಮತ್ತೆ ಒಳಗೆ ಬರುವಾಗ ಇಬ್ಬರು ಅಧಿಕಾರಿಗಳನ್ನು ತನ್ನೊಂದಿಗೆ ಕರೆತಂದ.

ಆತನೊಂದಿಗೆ ಬಂದಿದ್ದ ಅಧಿಕಾರಿಗಳಲ್ಲಿ ಓರ್ವ ಅಧಿಕಾರಿ ನನ್ನ ಬಳಿ ಬಂದು ಹೇಳಿದ: 'ನೀನು ಈಗ ನನ್ನೊಂದಿಗೆ ಬಾ. ನೀನು ವ್ಯಾನ್ ಬೋಗಿಗೆ ಹೋಗಿ ಕೂರಬೇಕು.'

'ಆದರೆ ನನ್ನ ಬಳಿ ಫಸ್ಟ್‌ಕ್ಲಾಸ್‌ನ ಟಿಕೆಟ್ ಇದೆ' ಎಂದು ನಾನು ಹೇಳಿದೆ.

'ಟಿಕೆಟ್ ಇದ್ದರೂ ಏನೂ ಪ್ರಯೋಜನವಿಲ್ಲ. ನೀನು ಈ ಕೂಡಲೆ ವ್ಯಾನ್ ಬೋಗಿಗೆ ಹೋಗಿ ಕೂರಬೇಕು' ಎಂದವನು ಮತ್ತೆ ಹೇಳಿದ.

ನಾನು ಹೊರಹೋಗಲು ಮತ್ತೆ ನಿರಾಕರಿಸಿದಾಗ, ಪೊಲೀಸರನ್ನು ಕರೆತರುವುದಾಗಿ ನನಗೆ ಆತ ಧಮಕಿ ಹಾಕಿದ.

ಇದಾದ ನಂತರ ಓರ್ವ ಪೋಲೀಸ್ ಪೇದೆ ನನ್ನ ಬಳಿ ಬಂದ. ಆತ ನನ್ನ ಕೈಗಳನ್ನು ಬಲವಾಗಿ ಹಿಡಿದು ರೈಲಿನಿಂದ ಹೊರ ದಬ್ಬಿದ. ನನ್ನ ಲಗೇಜ್ ಅನ್ನು ಹೊರಗೆ ಎಸೆಯಲಾಯಿತು. ನಾನು ವ್ಯಾನ್ ಬೋಗಿಯಲ್ಲಿ ಹೋಗಿ ಕೂರಲು ನಿರಾಕರಿಸಿದೆ. ರೈಲು ನನ್ನನ್ನು ಫ್ಲಾಟ್‌ಫಾರಂನ ಮೇಲೆ ಬಿಟ್ಟು ಹೊರಟುಹೋಯಿತು. ಆನಂತರ, ನಾನು ನಿಲ್ದಾಣದಲ್ಲಿದ್ದ ವಿಶ್ರಾಂತಿ ಕೊಠಡಿಯಲ್ಲಿ ಹೋಗಿ ಕುಳಿತೆ.

ಅದು ಚಳಿಗಾಲವಾಗಿತ್ತು. ಎತ್ತರ ಪ್ರದೇಶದಲ್ಲಿರುವ ಮಾರ್ಟಿಜ್‌ಬರ್ಗ್ ನಗರದಲ್ಲಿ ಚಳಿ ಅಸಾಧ್ಯವಾಗಿತ್ತು. ನನ್ನ ಓವರ್‌ಕೋಟ್ ಸೂಟ್‌ಕೇಸ್‌ನಲ್ಲಿತ್ತು. ಆದರೆ ಅದನ್ನು ಅವರಿಂದ ಕೇಳಿ ಪಡೆಯಬೇಕೆಂದು ನನಗೆ ಅನ್ನಿಸಲಿಲ್ಲ. ನಾನು ಇದ್ದ ಕೊಠಡಿಯಲ್ಲಿ ದೀಪದ ವ್ಯವಸ್ಥೆ ಇರಲಿಲ್ಲ. ಅಲ್ಲಿ ಕುಳಿತ ನಾನು ಗಡಗಡ ನಡುಗಲಾರಂಭಿಸಿದೆ.

ನಾನು ಈಗ ಏನು ಮಾಡಬೇಕೆಂದು ಆಲೋಚಿಸಲಾರಂಭಿಸಿದೆ. ನನ್ನ ಹಕ್ಕುಗಳಿಗಾಗಿ ನಾನು ಹೋರಾಡಬೇಕೆ? ನಾನು ಭಾರತಕ್ಕೆ ಹಿಂತಿರುಗಬೇಕೆ? ಇಲ್ಲವೇ ಪ್ರಿಟೋರಿಯಾದೆಡೆಗೆ ನನ್ನ ಪ್ರಯಾಣ ಮುಂದುವರಿಸಿ ನನ್ನ ಕೇಸು ಮುಗಿದ ನಂತರ ಭಾರತಕ್ಕೆ ಮರಳಿ ಹೋಗಬೇಕೆ? ನನ್ನ ಕರ್ತವ್ಯಗಳನ್ನು ಪೂರೈಸದೆ ಭಾರತಕ್ಕೆ ಹಿಂತಿರುಗುವುದು ಪಲಾಯನವಾಗುತ್ತದೆ. ನನಗೀಗ ಒದಗಿರುವ ಕಷ್ಟವು ವರ್ಣಭೇದವನ್ನು ಆಧರಿಸಿದ ಪೂರ್ವಗ್ರಹಗಳ ಕುರುಹಾಗಿದೆ. ನನಗೆ ಸಾಧ್ಯವಾದರೆ, ಈ ಪೂರ್ವಗ್ರಹದ ಮೂಲ ಬೇರನ್ನು ಕಿತ್ತುಹಾಕಬೇಕು ಮತ್ತು ಈ ಪ್ರಕ್ರಿಯೆಯಲ್ಲಿ ಲಭಿಸುವ ಎಲ್ಲಾ ಕಷ್ಟಗಳನ್ನು ಮತ್ತು ನೋವುಗಳನ್ನು ಸಹಿಸಿಕೊಳ್ಳಬೇಕು ಎಂದು ನಿರ್ಧರಿಸಿದೆ. ಹೀಗಾಗಿ, ಪ್ರಿಟೋರಿಯಾಕ್ಕೆ ಮರುದಿನ ಲಭ್ಯವಿರುವ ಮೊದಲ ರೈಲನ್ನು ಹತ್ತಲು ತೀರ್ಮಾನಿಸಿದೆ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ–೨, ಅಧ್ಯಾಯ–೭, 'ಸಮ್ ಎಕ್ಸ್‌ಪೀರಿಯನ್ಸಸ್', ಹಾಗೂ ಅಧ್ಯಾಯ–೮, 'ಆನ್ ದ ವೇ ಟು ಪ್ರಿಟೋರಿಯಾ' ಇವುಗಳಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: ಸದಾನಂದ ಆರ್.

೮

ದಕ್ಷಿಣ ಆಫ್ರಿಕಾ: ಕೋರ್ಟಿನಲ್ಲಿ ವರ್ಣದ್ವೇಷ

'ಮಿಸ್ಟರ್ ಗಾಂಧಿ, ನೀವು ಈಗ ಪ್ರಮಾಣವಚನವನ್ನು ಸ್ವೀಕರಿಸಿ' ಎಂದು ಮುಖ್ಯ ನ್ಯಾಯಾಧೀಶರು ಹೇಳಿದರು.

ನಾನು ಎದ್ದು ನಿಂತು, ರಿಜಿಸ್ಟ್ರಾರ್‌ರವರ ಮುಂದೆ ಪ್ರಮಾಣವಚನವನ್ನು ತೆಗೆದುಕೊಂಡೆ. ನನ್ನ ಪ್ರಮಾಣವಚನವಾದ ಕೂಡಲೇ ಮುಖ್ಯ ನ್ಯಾಯಾಧೀಶರು ಹೇಳಿದರು:

'ಮಿಸ್ಟರ್ ಗಾಂಧಿ, ಈಗ ನೀವು ನಿಮ್ಮ ರುಮಾಲನ್ನು ತೆಗೆಯಬೇಕು. ವಕೀಲರು ಹಾಕಿಕೊಳ್ಳಬೇಕಾದ ಉಡುಪಿಗೆ ಸಂಬಂಧಪಟ್ಟ ಕೋರ್ಟ್ ನಿಯಮಗಳನ್ನು ನೀವು ಅನುಸರಿಸಬೇಕು.'

ನನ್ನ ಮಿತಿಯನ್ನು ನಾನು ಅರಿತೆ, ಜಿಲ್ಲಾ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ರುಮಾಲನ್ನು ತೆಗೆಯುವುದಿಲ್ಲವೆಂದು ನಾನು ಸ್ಪಷ್ಟಪಡಿಸಿದ್ದರೂ, ಇಲ್ಲಿ ಸುಪ್ರೀಂ ಕೋರ್ಟಿನ ಆಜ್ಞೆಗನುಸಾರವಾಗಿ ತೆಗೆದಿಟ್ಟೆ. ಸುಪ್ರಿಂಕೋರ್ಟಿನ ಆಜ್ಞೆಯನ್ನು ನಾನು ವಿರೋಧಿಸಿದ್ದರೆ ಅದು ನ್ಯಾಯವಾಗುತ್ತಿರಲಿಲ್ಲ ಎಂದಲ್ಲ. ಆದರೆ ಇನ್ನೂ ದೊಡ್ಡ ಹೋರಾಟವನ್ನು ನಡೆಸಲು ನನ್ನ ಶಕ್ತಿಯನ್ನು ಉಳಿಸಿಕೊಳ್ಳುವುದು ನನಗೆ ಬೇಕಾಗಿತ್ತು. ರುಮಾಲನ್ನು ಧರಿಸಿಯೇ ತೀರುತ್ತೇನೆ ಎಂದು ಹೋರಾಡುವುದಕ್ಕಾಗಿಯೇ ನನ್ನ ಬುದ್ಧಿಯನ್ನೆಲ್ಲ ವೆಚ್ಚ ಮಾಡಿಬಿಡಬಾರದು. ಈ ಬುದ್ಧಿ ಇನ್ನೂ ಹೆಚ್ಚು ಮಹತ್ವದ ಸಮಯಕ್ಕೆ ಅರ್ಹವಾಗಿದೆ ಎನಿಸಿತು ನನಗೆ.

ಅಬ್ದುಲ್ಲಾ ಸೇಠ್ ಮತ್ತು ಇತರ ಮಿತ್ರರು ನನ್ನ ಈ ವಿಧೇಯತೆಯನ್ನು (ಅಥವಾ ದೌರ್ಬಲ್ಯವನ್ನು) ಒಪ್ಪಲಿಲ್ಲ. ನ್ಯಾಯಸ್ಥಾನದಲ್ಲಿ ವಕೀಲವೃತ್ತಿಯಲ್ಲಿ ತೊಡಗಿರುವಾಗ

ನಾನು ರುಮಾಲು ಧರಿಸಿಕೊಂಡೇ ಇರುವ ಹಕ್ಕನ್ನು ಬಿಡಕೂಡದಾಗಿತ್ತೆಂಬುದು ಅವರ ಅಭಿಪ್ರಾಯವಾಗಿತ್ತು. ನಾನು ಅವರನ್ನು ಸಮಾಧಾನಪಡಿಸಿದೆನು. 'ದೇಶಕ್ಕೆ ತಕ್ಕ ವೇಷ. ಭಾರತದಲ್ಲಿ ಇಂಗ್ಲಿಷ್ ಅಧಿಕಾರಿಯಾಗಲಿ, ನ್ಯಾಯಾಧಿಪತಿಯಾಗಲಿ ನಮ್ಮ ರುಮಾಲನ್ನು ತೆಗೆಯಿರಿ ಎಂದು ಹೇಳಿದರೆ ಅವರ ಮಾತನ್ನು ತಿರಸ್ಕರಿಸುವುದು ನ್ಯಾಯ. ಆದರೆ ನೆಟಾಲ್‌ನಲ್ಲಿ ನಾನೂ ಕೋರ್ಟಿನ ಒಬ್ಬ ಅಧಿಕಾರಿಯೇ ಆಗಿದ್ದು, ಕೋರ್ಟಿನ ಪದ್ಧತಿಗಳಿಗೆ ವಿರೋಧವಾಗಿ ನಡೆಯುವುದೂ ಸರಿಯಲ್ಲ.'

ನಾನು ಮಿತ್ರರನ್ನು ತಕ್ಕಮಟ್ಟಿಗೆ ಸಮಾಧಾನಪಡಿಸಿದೆ. ಆದರೆ ಒಂದು ವಿಷಯವನ್ನು ಬೇರೆ ಬೇರೆ ಪರಿಸ್ಥಿತಿಯಲ್ಲಿ ಬೇರೆ ಬೇರೆ ದೃಷ್ಟಿಕೋನದಿಂದ ನೋಡಬೇಕು ಎಂಬುದನ್ನು ಈ ಸಂದರ್ಭದಲ್ಲಿ ಅವರು ಮನಗಾಣುವಂತೆ ಮಾಡಿದೆನೆಂದು ಹೇಳಲಾರೆ. ಆದರೆ ನನ್ನ ಜೀವಮಾನವೆಲ್ಲ ನಾನು ಮಾಡಿರುವ ಅನ್ವೇಷಣೆಯು ಭಿನ್ನಾಭಿಪ್ರಾಯಗಳನ್ನು ಹೊಂದಿಕೆಯಿಂದ ಏಕಮಾರ್ಗಕ್ಕೆ ತರುವ ಕ್ರಮದ ಸೊಗಸನ್ನು ನನಗೆ ಕಲಿಸಿದೆ. ಈ ರಾಜಿಯ ಮನೋಭಾವ ಸತ್ಯಾಗ್ರಹದ ಒಂದು ಅವಶ್ಯಕ ಅನಿವಾರ್ಯ ಭಾಗ ಎಂಬುದು ನನಗೆ ಮುಂದೆ ಗೊತ್ತಾಯಿತು. ನನ್ನ ಈ ರಾಜಿ ಸ್ವಭಾವದಿಂದ ನನಗೆ ಅನೇಕ ಬಾರಿ ಪ್ರಾಣಾಪಾಯವೂ, ಮಿತ್ರರ ಅಸಂತೋಷವೂ ಸಂಭವಿಸಿದೆ. ಆದರೆ ಸತ್ಯವು ವಜ್ರದಂತೆ ಕಠಿಣ, ತಾವರೆಯಂತೆ ಕೋಮಲ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ-೨, ಅಧ್ಯಾಯ-೧೮, 'ಕಲರ್ ಬಾರ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೯

ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ಹಲ್ಲೆ

[ಗಾಂಧೀಜಿ ಎರಡನೇ ಬಾರಿ ಭಾರತದಿಂದ ಆಫ್ರಿಕಾದ ಡರ್ಬಾನ್ ನಗರಕ್ಕೆ ಹಿಂತಿರುಗಿದಾಗ, ಅವರಿದ್ದ ಹಡಗನ್ನು ಒಂದೆಡೆ ಪ್ರತ್ಯೇಕಿಸಿ ನಿಲ್ಲಿಸಲಾಯಿತು. ಯೂರೋಪಿಯನ್ ಸಮುದಾಯದ ಸದಸ್ಯರು ಗಾಂಧೀಜಿಯವರನ್ನು ಹಡಗಿನಲ್ಲಿರುವ ಇತರರೊಂದಿಗೆ ಮುಳುಗಿಸಿಬಿಡುವ ಬೆದರಿಕೆಯನ್ನು ಹಾಕಿದ್ದರು. ಗಾಂಧೀಜಿ ತಮ್ಮ ಕರಪತ್ರಗಳಲ್ಲಿ ಯೂರೋಪಿಯನ್ನರ ಕುರಿತು ತುಚ್ಛವಾಗಿ ಬರೆದಿದ್ದಾರೆಂಬುದು ಅವರ ಆರೋಪವಾಗಿತ್ತು. ಗಾಂಧೀಜಿ ಮತ್ತೊಮ್ಮೆ ಬೇಡದ ಅತಿಥಿಯಾಗಿದ್ದರು.]

[ಡರ್ಬಾನ್‌ನಲ್ಲಿ] ನನ್ನನ್ನು ಕೆಲವು ಯುವಕರು ಗುರುತಿಸಿದರು. ನನ್ನನ್ನು ಗುರುತಿಸಿದ ಕೂಡಲೇ 'ಗಾಂಧೀ ಗಾಂಧೀ' ಎಂದವರು ಕೂಗಲು ಆರಂಭಿಸಿದರು. ಸುಮಾರು ಅರ್ಧದಷ್ಟು ಜನರು ನನ್ನೆಡೆಗೆ ನುಗ್ಗಿಬಂದರು. ನಾವು ಮುಂದೆ ಹೋದಷ್ಟೂ ಜನದಟ್ಟಣೆ ಹೆಚ್ಚಾಗತೊಡಗಿತು. ಕೊನೆಗೆ ಅದು ನಿಯಂತ್ರಿಸಲಾಗದ ಸ್ಥಿತಿಯನ್ನು ತಲುಪಿತು. ಅವರು ಮೊದಲು ನನ್ನ ಜೊತೆಯಲ್ಲಿದ್ದ ಲೌಟನ್ ಅವರನ್ನು ನನ್ನಿಂದ ಬೇರ್ಪಡಿಸಿ ಹೊರಗೆಳೆದುಕೊಂಡರು. ಅನಂತರ ನನ್ನೆಡೆಗೆ ಕಲ್ಲು, ಇಟ್ಟಿಗೆ, ಮೊಟ್ಟೆಗಳನ್ನು ತೂರತೊಡಗಿದರು. ಅವರಲ್ಲಿ ಒಬ್ಬರು ನನ್ನ ಪೇಟವನ್ನು ಕಿತ್ತು ಹಾಕಿದರು. ಉಳಿದವರು ನನ್ನನ್ನು ಕೈಯಿಂದ ಹೊಡೆಯತೊಡಗಿದರು, ಕಾಲಿನಿಂದ ಒದೆಯತೊಡಗಿದರು. ಪೊಲೀಸ್ ವರಿಷ್ಠಾಧಿಕಾರಿಯವರ ಪತ್ನಿಯಾದ ಶ್ರೀಮತಿ ಅಲೆಗ್ಸಾಂಡರ್ ಅವರು ಆಗ ಅದೇ ದಾರಿಯಲ್ಲಿ ಸಾಗುತ್ತಿದ್ದರು. ಅವರು ನನ್ನನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅವರು ನನ್ನ ಮತ್ತು ಗುಂಪಿನ ಮಧ್ಯೆ ಬಂದು ನಿಂತುಬಿಟ್ಟರು. ಇದು ಗುಂಪಿನ ಕೋಪವನ್ನು ನಿಯಂತ್ರಣಕ್ಕೆ ತಂದಿತು. ಶ್ರೀಮತಿ ಅಲೆಗ್ಸಾಂಡರ್ ಅವರಿಗೆ ತೊಂದರೆ ನೀಡದೆ ನನ್ನನ್ನು ಹೊಡೆಯಲು ಆಗದ ಸ್ಥಿತಿಯಲ್ಲಿ ಅವರು ಇದ್ದರು.

ಇದೇ ಸಮಯಕ್ಕೆ ಇಡೀ ಘಟನೆಯನ್ನು ಕಂಡ ಭಾರತೀಯ ಯುವಕನೋರ್ವ ಪೊಲೀಸ್ ಠಾಣೆಗೆ ಧಾವಿಸಿ ಹೋಗಿ ಸುದ್ದಿಯನ್ನು ತಿಳಿಸಿದ್ದನು. ಪೊಲೀಸ್ ವರಿಷ್ಠಾಧಿಕಾರಿಯಾದ ಶ್ರೀ ಅಲೆಗ್ಸಾಂಡರ್ ಅವರು ನನ್ನ ರಕ್ಷಣೆಗೆಂದು ಕೆಲವು ಪೊಲೀಸರನ್ನು ಕಳುಹಿಸಿದ್ದರು. ಅವರು ನನ್ನನ್ನು ನನ್ನ ಸ್ಥಳಕ್ಕೆ ತಲುಪಿಸುವಲ್ಲಿ ಯಶಸ್ವಿಯಾದರು. ನನ್ನ ಮೈ ತುಂಬಾ ಗಾಯಗಳಾಗಿದ್ದವು.

ನಾನು ತಲುಪಿದ ಮನೆಯ ಒಳಗೆ ಎಲ್ಲವೂ ಶಾಂತವಾಗಿತ್ತು. ಆದರೆ ಹೊರಗಡೆ ಬಿಳಿಯರು ಮನೆಯನ್ನು ಸುತ್ತುವರಿದಿದ್ದರು. ರಾತ್ರಿ ಆವರಿಸುತ್ತಿತ್ತು. ಹೊರಗೆ ನಿಂತಿದ್ದ ಗುಂಪು 'ಗಾಂಧಿಯನ್ನು ನಮ್ಮ ವಶಕ್ಕೆ ನೀಡಿ' ಎಂದು ಕೂಗು ಹಾಕುತ್ತಿತ್ತು. ಆಗ ಪೊಲೀಸ್ ವರಿಷ್ಠಾಧಿಕಾರಿಗಳು ನಾನೀಗ ವೇಷ ಮರೆಸಿಕೊಂಡು ಅಲ್ಲಿಂದ ಹೊರಗೆ ಹೋಗಬೇಕೆಂದು ನನಗೆ ಹೇಳಿದರು.

ಹಾಗಾಗಿ ನಾನು ಓರ್ವ ಭಾರತೀಯ ಪೇದೆಯ ಸಮವಸ್ತ್ರವನ್ನು ತೊಟ್ಟೆನು. ತಲೆಯ ಮೇಲೊಂದು ತಟ್ಟೆಯನ್ನು ಹೆಲ್ಮೆಟ್‌ನಂತೆ ಇರಿಸಿ ಅದನ್ನು ಮದರಾಸಿ ಸ್ಕಾರ್ಫ್‌ನಿಂದ ಬಿಗಿಯಾಗಿ ಬಿಗಿದುಕೊಂಡೆನು. ಇಬ್ಬರು ಗೂಢಚಾರ ಪೊಲೀಸರು ನನ್ನೊಂದಿಗೆ ಬಂದರು. ಒಂದು ಸಣ್ಣ ಗಲ್ಲಿಯ ಮೂಲಕ ಪಕ್ಕದ ರಸ್ತೆಯಲ್ಲಿದ್ದ ಅಂಗಡಿಯೊಂದನ್ನು ತಲುಪಿದೆವು. ಅಲ್ಲಿ ನನಗಾಗಿ ಕಾಯುತ್ತಿದ್ದ ಕುದುರೆಗಾಡಿಯನ್ನು ಏರಿ ಅಲ್ಲಿಂದ ತಪ್ಪಿಸಿಕೊಂಡೆನು.

ಇದಾದ ನಂತರ, ಕ್ಯಾಬಿನೆಟ್ ಸದಸ್ಯರಾದ ಶ್ರೀ ಎಸ್ಕೋಂಬ್ ಅವರು ನನ್ನನ್ನು ತಮ್ಮಲ್ಲಿಗೆ ಕರೆಸಿಕೊಂಡರು. ಅವರು ನನಗಾಗಿರುವ ಗಾಯಗಳಿಗೆ ವಿಷಾದ ವ್ಯಕ್ತಪಡಿಸಿದರು. ನನ್ನ ಈ ಸ್ಥಿತಿಗೆ ಕಾರಣರಾದವರನ್ನು ಬಂಧಿಸುವ ಮತ್ತು ಶಿಕ್ಷಿಸುವ ಕ್ರಮ ಜರುಗಿಸುವುದಾಗಿ ಅವರು ನನ್ನಲ್ಲಿ ಹೇಳಿದರು.

ಆದರೆ ನಾನು ಯಾರ ಮೇಲೂ ದೂರು ನೀಡಲು ಸಿದ್ಧನಿಲ್ಲವೆಂದು ಶ್ರೀ ಎಸ್ಕೋಂಬ್ ಅವರಿಗೆ ಸ್ಪಷ್ಟವಾದ ಮಾತುಗಳಲ್ಲಿ ಹೇಳಿದೆ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್ ' ಕೃತಿಯ ಭಾಗ-೩, ಅಧ್ಯಾಯ-೩, 'ದ ಟೆಸ್ಟ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: ಸದಾನಂದ ಆರ್.

೧೦

ಅಗಸನಾದೆ, ಕ್ಷೌರಿಕನಾದೆ...

[ದಕ್ಷಿಣ ಆಫ್ರಿಕಾದಲ್ಲಿ] ನಾನು ಭೋಗಜೀವನವನ್ನೇನೋ ಪ್ರಾರಂಭಿಸಿದ್ದೆ. ಆದರೆ ಅದು ಬಹುಕಾಲ ನಡೆಯಲಿಲ್ಲ. ನಾನು ಎಚ್ಚರಿಕೆಯಿಂದ ಮನೆಯನ್ನು ಸಾಮಾನುಗಳಿಂದ ಸಜ್ಜುಗೊಳಿಸಿದ್ದರೂ, ಅದರಿಂದ ಮೋಹಿತನಾಗಲಿಲ್ಲ. ಆ ಜೀವನವನ್ನು ನಾನು ಪ್ರಾರಂಭಿಸಿದುದೇ ತಡ, ಕೂಡಲೇ ನನ್ನ ವೆಚ್ಚಗಳನ್ನೆಲ್ಲ ಕಡಿಮೆ ಮಾಡತೊಡಗಿದೆ. ಅಗಸನಿಗೆ ತಿಂಗಳು ತಿಂಗಳೂ ಕೊಡಬೇಕಾದ ಹಣ ಹೆಚ್ಚಾಗುತ್ತಿತ್ತು. ಅವನು ಕಾಲಕ್ಕೆ ಸರಿಯಾಗಿ ಬಟ್ಟೆಗಳನ್ನು ಮಡಿ ಮಾಡಿ ತಂದು ಕೊಡುತ್ತಿರಲಿಲ್ಲವಾಗಿ ಎರಡು ಮೂರು ಡಜನ್ ಷರ್ಟ್ ಕಾಲರುಗಳು ನನ್ನಲ್ಲಿ ಇದ್ದರೂ ನನಗೆ ಸಾಕಾಗುತ್ತಿರಲಿಲ್ಲ. ಪ್ರತಿದಿನವೂ ಮಡಿ ಮಾಡಿದ ಕಾಲರುಗಳನ್ನು ಹಾಕಿಕೊಳ್ಳಬೇಕಾಗುತ್ತಿತ್ತು; ಷರ್ಟ್‌ಗಳನ್ನು ನಿತ್ಯವೂ ಬದಲಾಯಿಸದಿದ್ದರೂ ದಿನಬಿಟ್ಟು ದಿನ ಬದಲಾಯಿಸಬೇಕಾಗಿತ್ತು. ಇದರಿಂದ ವೆಚ್ಚ ಇಮ್ಮಡಿಯಾಗುತ್ತಿತ್ತು. ಅದು ಅನವಶ್ಯಕವೆಂದು ನನಗೆ ತೋರಿತು. ಈ ಹಣವನ್ನು ಉಳಿಸಲು ನಾನೇ ಒಗೆಯುವ ಉಪಕರಣಗಳನ್ನು ಒದಗಿಸಿಕೊಂಡೆ. ಬಟ್ಟೆಗಳನ್ನು ಮಡಿ ಮಾಡುವ ವಿಷಯವನ್ನು ಕುರಿತು ಒಂದು ಪುಸ್ತಕವನ್ನು ನಾನು ಕೊಂಡುಕೊಂಡೆ. ಅದನ್ನು ಅಧ್ಯಯನ ಮಾಡಿ ನನ್ನ ಹೆಂಡತಿಗೂ ಹೇಳಿಕೊಟ್ಟೆ. ಇದರಿಂದ ನನ್ನ ಕೆಲಸವೇನೋ ಹೆಚ್ಚಾಯಿತು. ಆದರೆ ಈ ಹೊಸ ಉದ್ಯಮದಿಂದ ಮನಸ್ಸಿಗೆ ಆನಂದವೂ ಆಗುತ್ತಿತ್ತು.

ನಾನೇ ಸ್ವತಃ ಮಡಿ ಮಾಡಿದ ಮೊದಲನೆಯ ಕಾಲರನ್ನು ಎಂದಿಗೂ ಮರೆಯಲಾರೆ. ನಾನು ಬೇಕಾದುದಕ್ಕಿಂತ ಹೆಚ್ಚು ಗಂಜಿಯನ್ನು ಹಾಕಿಬಿಟ್ಟಿದ್ದೆ. ಇಸ್ತ್ರೀಪೆಟ್ಟಿಗೆಯನ್ನು ಎಷ್ಟು ಬೇಕೋ ಅಷ್ಟು ಬಿಸಿ ಮಾಡಿರಲಿಲ್ಲ. ಕಾಲರು ಎಲ್ಲಿ ಸುಟ್ಟು ಹೋಗುವುದೋ ಎಂದು ನನಗೆ ಭಯವಾಗಿದ್ದುದರಿಂದ, ಇಸ್ತ್ರೀಪೆಟ್ಟಿಗೆಯನ್ನು

ಚೆನ್ನಾಗಿ ಊರಿ ಇಸ್ತ್ರಿ ಮಾಡಲಿಲ್ಲ. ಇದರ ಫಲವಾಗಿ ಕಾಲರು ತಕ್ಕಮಟ್ಟಿಗೆ ಬಿರುಸಾಗಿದ್ದರೂ ಅದರಿಂದ ಹಿಟ್ಟು ಉದುರುತ್ತಲೇ ಇದ್ದಿತು. ಆ ಕಾಲರನ್ನೇ ಧರಿಸಿಕೊಂಡು ನಾನು ಕೋರ್ಟ್‌ಗೆ ಹೋಗಿ ಇತರ ಬ್ಯಾರಿಸ್ಟರ್‌ಗಳ ಅಪಹಾಸ್ಯಕ್ಕೆ ಗುರಿಯಾದೆ. ಆ ಕಾಲದಲ್ಲಿಯೂ ಸಹ ನಾನು ಅಂತಹ ಕುಚೋದ್ಯಗಳನ್ನು ಸಹಿಸುವ ಶಕ್ತಿಯುಳ್ಳವನಾಗಿದ್ದೆ.

'ನನ್ನ ಬಟ್ಟೆಗಳನ್ನು ನಾನೇ ಮಡಿ ಮಾಡಿಕೊಳ್ಳುವುದು ಇದೇ ಮೊದಲನೆಯ ಪ್ರಯೋಗ. ಆದುದರಿಂದ ಗಂಜಿ ಹೆಚ್ಚಾಗಿ ಹಿಟ್ಟು ಉದುರುತ್ತಿದೆ. ಇದರಿಂದ ನನಗೇನೂ ತೊಂದರೆಯಿಲ್ಲ. ಇದರಿಂದ ನಿಮ್ಮ ವಿನೋದಕ್ಕೆ ಇಷ್ಟೊಂದು ಅವಕಾಶವಾಯಿತಲ್ಲ, ಅದೂ ಒಂದು ಲಾಭವೇ' ಎಂದು ನಾನು ವಿವರಿಸಿದೆ.

ಒಬ್ಬ ಮಿತ್ರರು 'ಆದರೆ ಇಲ್ಲಿ ಅಗಸರು ಇಲ್ಲದೆ ಬರಗಾಲ ಬಂತೆ?' ಎಂದು ಕೇಳಿದರು.

ನಾನು ಹೇಳಿದೆ: 'ಅಗಸರವನಿಗೆ ಕೊಡುವ ಹಣ ಬಹಳ ಹೆಚ್ಚಾಗುತ್ತಿದೆ. ಒಂದು ಕಾಲರನ್ನು ಮಡಿ ಮಾಡುವ ಕೂಲಿ ಆ ಕಾಲರಿನ ಬೆಲೆಯಷ್ಟೇ ಆಗುತ್ತಿದೆ. ಜತೆಗೆ ನಾವು ಯಾವಾಗಲೂ ಅಗಸರ ಮೇಲೆ ಅವಲಂಬಿಸಿರಬೇಕಾಗುತ್ತದೆ. ಆದುದರಿಂದ ನನ್ನ ವಸ್ತ್ರಗಳನ್ನು ನಾನೇ ಮಡಿ ಮಾಡಿಕೊಳ್ಳುವುದು ಒಳ್ಳೆಯದೆಂದು ನನಗೆ ತೋರುತ್ತದೆ.'

ಆದರೆ ನನ್ನ ಮಿತ್ರರಿಗೆ ಈ ಸ್ವಾವಲಂಬನ ಸುಖ ಅರ್ಥವಾಗಲಿಲ್ಲ. ಸ್ವಲ್ಪ ಕಾಲದೊಳಗೆ ನಾನು ನನ್ನ ಬಟ್ಟೆಗಳಿಗೆ ನಿಪುಣನಾದ 'ಅಗಸ'ನೇ ಆದೆ. ನಾನು ಮಡಿ ಮಾಡುತ್ತಿದ್ದುದು ಅಗಸರ ಮಡಿಗೆ ಯಾವ ವಿಧದಲ್ಲಿಯೂ ಕಡಿಮೆಯಾಗಲಿಲ್ಲ. ನನ್ನ ಕಾಲರುಗಳು ಇತರರು ಧರಿಸುತ್ತಿದ್ದ ಕಾಲರುಗಳಿಗಿಂತ ಗಟ್ಟಿಯಲ್ಲಿಯೂ ಹೊಳಪಿನಲ್ಲಿಯೂ ಕಡಿಮೆಯಾಗಿರಲಿಲ್ಲ.

[ದಕ್ಷಿಣ ಆಫ್ರಿಕಾದಲ್ಲಿದ್ದಾಗ] ಅಗಸರ ಮೇಲೆ ನನ್ನ ಅವಲಂಬನೆಯನ್ನು ತಪ್ಪಿಸಿಕೊಂಡಂತೆ ನಾನು ಕ್ಷೌರಿಕನ ಕೈಯಿಂದಲೂ ತಪ್ಪಿಸಿಕೊಂಡೆ. ಇಂಗ್ಲೆಂಡಿಗೆ ಹೋಗುವವರೆಲ್ಲ ಮುಂಚೆ ಕ್ಷೌರ ಮಾಡಿಕೊಳ್ಳುವುದನ್ನು ಕಲಿತುಕೊಳ್ಳುತ್ತಾರೆ. ಆದರೆ ಸ್ವಂತವಾಗಿ ಕೂದಲನ್ನು ಕತ್ತರಿಸಿಕೊಳ್ಳುವುದನ್ನು ಕಲಿತವರು ನನಗೆ ತಿಳಿಯದು. ನಾನು ಅದನ್ನು ಕಲಿಯಬೇಕಾಗಿತ್ತು. ನಾನು ಪ್ರಿಟೋರಿಯಾದಲ್ಲಿ ಒಂದು ಬಾರಿ ಇಂಗ್ಲಿಷ್ ಕ್ಷೌರಿಕನ ಅಂಗಡಿಗೆ ಹೋದೆನು. ಅವನು ನನ್ನ ಕೂದಲನ್ನು ಕತ್ತರಿಸಲು ಒಪ್ಪಲಿಲ್ಲ. ಅವನು ತೋರಿಸಿದ ತಿರಸ್ಕಾರ ಅಸಹನೀಯವಾಗಿತ್ತು. ನನಗೆ ಬಹಳ ದುಃಖ ಉಂಟಾಯಿತು. ನಾನು ಕೂಡಲೇ ಅಂಗಡಿಗೆ ಹೋಗಿ ಕತ್ತರಿಯನ್ನು

ಕೊಂಡುಕೊಂಡು ಬಂದು ಕನ್ನಡಿಯ ಮುಂದೆ ನಿಂತುಕೊಂಡು ನನ್ನ ಕೂದಲನ್ನು ಸ್ವಲ್ಪ ಹೆಚ್ಚುಕಡಿಮೆ ಸರಿಯಾಗಿಯೇ ಕತ್ತರಿಸಿದೆ. ಆದರೆ ಹಿಂಭಾಗದಲ್ಲಿ ಕೆಟ್ಟು ಹೋಯಿತು. ಕೋರ್ಟ್‌ನಲ್ಲಿ ಮಿತ್ರರೆಲ್ಲ ಬಿದ್ದು ಬಿದ್ದು ನಕ್ಕರು.

'ಗಾಂಧೀ, ನಿಮ್ಮ ಕೂದಲಿಗೆ ಏನಾಗಿದೆ? ಅದನ್ನು ಇಲಿಗಳು ತಿಂದಂತೆ ಕಾಣುತ್ತಿದೆಯಲ್ಲ?'

'ಇಲ್ಲ, ಬಿಳಿಯ ಕ್ಷೌರಿಕ ನನ್ನ ಕಪ್ಪು ತಲೆಕೂದಲನ್ನು ಹೇಗೆ ಮುಟ್ಟಿಯಾನು! ಆದುದರಿಂದ ನಾನೇ ಅದನ್ನು ಕತ್ತರಿಸಿಕೊಂಡೆ. ಎಷ್ಟು ಕೆಟ್ಟು ಹೋದರೂ ಚಿಂತೆಯಿಲ್ಲ' ಎಂದು ಉತ್ತರ ಕೊಟ್ಟೆ. ಈ ಉತ್ತರದಿಂದ ಮಿತ್ರರಿಗೆ ಆಶ್ಚರ್ಯವಾಗಲಿಲ್ಲ.

ನನ್ನ ಕೂದಲನ್ನು ಕತ್ತರಿಸುವುದಕ್ಕೆ ನಿರಾಕರಿಸಿದುದರಲ್ಲಿ ಕ್ಷೌರಿಕನದೇನೂ ತಪ್ಪು ಇರಲಿಲ್ಲ. ಅವನು ಕಪ್ಪು ಜನರ ಸೇವೆ ಮಾಡಿದ್ದರೆ, ಅವನ ಬಿಳಿಯ ಗಿರಾಕಿಗಳೆಲ್ಲ ಅವನನ್ನು ಬಿಟ್ಟು ಹೋಗುವ ಸಂಭವವಿದ್ದಿತು. ನಾವು ನಮ್ಮ ಕ್ಷೌರಿಕರು ನಮ್ಮ ದೇಶದ ಅಸ್ಪೃಶ್ಯ ಬಂಧುಗಳಿಗೆ ಕ್ಷೌರ ಮಾಡಲು ಅವಕಾಶ ಕೊಡುವುದಿಲ್ಲ. ನನಗೆ ಇದಕ್ಕಾಗಿ ದಕ್ಷಿಣ ಆಫ್ರಿಕಾದಲ್ಲಿ ಒಂದು ಸಲವಲ್ಲ, ಅನೇಕ ಸಲ ತಕ್ಕ ಶಿಕ್ಷೆ ದೊರಕಿತು. ಇದು ನಮ್ಮ ಪಾಪಕ್ಕೆ ಪ್ರಾಯಶ್ಚಿತ್ತವೆಂಬುದು ನನಗೆ ಮನವರಿಕೆಯಾಗಿದ್ದುದರಿಂದ ನನಗೆ ಅದರಿಂದ ಕೋಪ ಬರಲಿಲ್ಲ.

ಸ್ವಾವಲಂಬನೆ ಮತ್ತು ಸರಳತೆಯ ನನ್ನ ಇಚ್ಛೆ...ಹಾಗೂ ಅದರ ಬೀಜಾರೋಹಣ ಬಹಳ ಹಿಂದೆಯೇ ಆಗಿತ್ತು. ಬೇರು ಬಿಟ್ಟು ಹೂವು ಹಿಡಿದು ಫಲ ಬಿಡಲು ನೀರೆರೆಯುವುದು ಮಾತ್ರ ಅವಶ್ಯಕವಾಗಿತ್ತು. ಈ ನೀರೆರೆಯುವುದೂ ಸಕಾಲದಲ್ಲಿ ಉಂಟಾಯಿತು.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ–೩, ಅಧ್ಯಾಯ–೯, 'ಸಿಂಪಲ್ ಲೈಫ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೧೧

ಕಸ್ತೂರಬಾ ಮತ್ತು ಅಸ್ಪೃಶ್ಯರು

ನಾನು ಡರ್ಬಾನ್‌ನಲ್ಲಿ ವಕೀಲಿ ವೃತ್ತಿಯನ್ನು ಮಾಡುತ್ತಿದ್ದಾಗ ನನ್ನ ಕಚೇರಿಯ ಗುಮಾಸ್ತರು ಅನೇಕ ವೇಳೆ ನನ್ನ ಮನೆಯಲ್ಲಿಯೇ ವಾಸಿಸುತ್ತಿದ್ದರು. ಅವರಲ್ಲಿ ಹಿಂದೂಗಳು, ಕ್ರೈಸ್ತರು, ಅಥವಾ ಅವರ ಪ್ರಾಂತೀಯ ಭೇದವನ್ನು ಹೇಳಬೇಕಾದರೆ ಗುಜರಾತಿಗಳು, ತಮಿಳರು ಇವರೆಲ್ಲ ಇದ್ದರು. ಅವರನ್ನು ನನ್ನ ಅಣ್ಣತಮ್ಮಂದಿರಂತಲ್ಲದೆ ಬೇರೆಯಾಗಿ ನಾನು ಯಾವಾಗಲಾದರೂ ಕಂಡುದು ನನಗೆ ಜ್ಞಾಪಕವಿಲ್ಲ. ನಾನು ಅವರನ್ನು ಸಂಸಾರದವರಂತೆ ಪರಿಗಣಿಸಿದ್ದೆನು. ನನ್ನ ಹೆಂಡತಿ ಆ ವಿಷಯದಲ್ಲಿ ನನಗೆ ಅಡ್ಡಿ ಬಂದಾಗ ನಾನು ಅವಳೊಡನೆ ಜಗಳವಾಡುತ್ತಿದ್ದೆನು. ಗುಮಾಸ್ತರ ಪೈಕಿ ಒಬ್ಬ ಕ್ರೈಸ್ತನಾಗಿದ್ದ; ಅವನ ತಂದೆ-ತಾಯಿಗಳು ಪಂಚಮರು.

ನಾನು ವಾಸವಾಗಿದ್ದ ಮನೆ ಪಾಶ್ಚಾತ್ಯ ರೀತಿಯಲ್ಲಿ ಸಜ್ಜಾಗಿದ್ದಿತು. ಆದುದರಿಂದ ಅದರ ಕೊಠಡಿಗಳಲ್ಲಿ ಅಶುದ್ಧವಾದ ನೀರು, ಮಲಮೂತ್ರಾದಿಗಳು ಹರಿದು ಹೋಗಲು ಮೋರಿಗಳನ್ನು ಇಟ್ಟಿರಲಿಲ್ಲ. ಆದುದರಿಂದ ಪ್ರತಿಯೊಂದು ಕೊಠಡಿಗೂ ಇದಕ್ಕಾಗಿ ಒಂದು ಮಡಕೆ ಇರುತ್ತಿದ್ದಿತು. ಅವುಗಳನ್ನು ಸೇವಕರಿಂದಾಗಲೀ ಗುಡಿಸುವವರಿಂದಾಗಲೀ ಶುದ್ಧಿ ಮಾಡಿಸುವ ಬದಲು ನಾನಾಗಲೀ ನನ್ನ ಹೆಂಡತಿಯಾಗಲೀ ಅದನ್ನು ಶುದ್ಧಿ ಮಾಡುತ್ತಿದ್ದೆವು. ಮನೆಯವರಂತೆಯೇ ಇರುತ್ತಿದ್ದ ಗುಮಾಸ್ತರು, ತಮ್ಮ ಮಡಕೆಗಳನ್ನು ಸ್ವಾಭಾವಿಕವಾಗಿ ತಾವೇ ಶುದ್ಧಿ ಮಾಡಿಕೊಳ್ಳುತ್ತಿದ್ದರು. ಆದರೆ ಕ್ರೈಸ್ತ ಗುಮಾಸ್ತ ಹೊಸದಾಗಿ ಬಂದಿದ್ದನು. ಅವನು ಮಲಗುವ ಕೊಠಡಿಯನ್ನು ನೋಡಿಕೊಳ್ಳುವುದು ನಮ್ಮ ಕೆಲಸವಾಗಿದ್ದಿತು. ನನ್ನ ಹೆಂಡತಿ ಇತರರ ಮಡಕೆಯನ್ನು ವ್ಯವಸ್ಥೆಗೊಳಿಸುತ್ತಿದ್ದಳು. ಆದರೆ ಪಂಚಮನಾಗಿದ್ದವನು ಉಪಯೋಗಿಸಿದ್ದ ಮಡಕೆಯನ್ನು ಶುದ್ಧಿ ಮಾಡುವುದೆಂದರೆ ಆಕೆಯ ಸಹನೆಗೆ ಮೀರಿದುದಾಯಿತು.

ಇದರಿಂದ ನಮ್ಮಲ್ಲಿ ಜಗಳವುಂಟಾಯಿತು. ನಾನು ಮಡಕೆಗಳನ್ನು ಶುದ್ಧಿ ಮಾಡುವುದನ್ನೂ ಅವಳು ಸಹಿಸಲಾರದಾದಳು. ತಾನೇ ಮಾಡುವುದಕ್ಕೂ ಅವಳಿಗೆ ಇಷ್ಟವಿರಲಿಲ್ಲ. ಕೋಪದಿಂದ ಕಣ್ಣನ್ನು ಕೆಂಪಗೆ ಮಾಡಿಕೊಂಡು, ಕೆನ್ನೆಗಳ ಮೇಲೆ ಮುತ್ತಿನ ಕಣ್ಣೀರನ್ನು ಸುರಿಸುತ್ತಾ, ನನಗೆ ಛೀಮಾರಿ ಹಾಕುತ್ತಾ, ಮಡಕೆ ಕೈಯಲ್ಲಿ ಹಿಡಿದು, ಏಣಿಯಿಂದ ಇಳಿಯುತ್ತಿರುವ ಕಸ್ತೂರಬಾ ಚಿತ್ರ ನನ್ನ ಕಣ್ಣ ಮುಂದೆ ಕಟ್ಟಿದೆ. ಆದರೆ ನಾನು ನಿಷ್ಠುರತೆಯಿಂದಲೂ, ಪ್ರೇಮದಿಂದಲೂ ಕೂಡಿದ ಪತಿಯಾಗಿದ್ದೆನು. ನಾನು ಅವಳ ಶಿಕ್ಷಕನೆಂದೂ ಭಾವಿಸಿಕೊಂಡಿದ್ದೆನು. ಆದುದರಿಂದ ಅವಳಲ್ಲಿದ್ದ ಅಂಥ ಪ್ರೇಮದಿಂದಲೇ ಅವಳನ್ನು ಬಹಳವಾಗಿ ಗೋಳಾಡಿಸುತ್ತಿದ್ದೆನು.

ಅವಳು ಮಡಕೆಯನ್ನು ಎತ್ತಿಕೊಂಡು ಹೋದಷ್ಟರಿಂದಲೇ ನನಗೆ ಸಮಾಧಾನವಾಗಲಿಲ್ಲ. ಅವಳು ನಗುನಗುತ್ತಾ ಅದನ್ನು ಮಾಡಬೇಕೆಂಬುದು ನನ್ನ ಇಷ್ಟ. ಆದುದರಿಂದ ನಾನು ಗಟ್ಟಿಯಾಗಿ 'ನನ್ನ ಮನೆಯಲ್ಲಿ ಈ ಅವಿವೇಕವೆಲ್ಲ ನಡೆಯುವುದಿಲ್ಲ' ಎಂದೆನು.

ಮಾತು ಅವಳನ್ನು ಬಾಣದಂತೆ ಚುಚ್ಚಿತು. 'ನಿಮ್ಮ ಮನೆಯನ್ನು ನೀವೇ ಇಟ್ಟುಕೊಳ್ಳಿ. ನಾನು ಹೊರಟೆ' ಎಂದು ಗಟ್ಟಿಯಾಗಿ ಪ್ರತ್ಯುತ್ತರವಿತ್ತಳು. ನನ್ನನ್ನೇ ನಾನು ಮರೆತೆ. ನನ್ನ ಹೃದಯದಲ್ಲಿ ದಯೆಯ ಸೆಲೆ ಬತ್ತಿ ಹೋಯಿತು. ನಾನು ಅವಳ ಕೈಯನ್ನು ಹಿಡಿದುಕೊಂಡು ಏಣಿಯ ಎದುರಿಗೆ ಇದ್ದ ಬಾಗಿಲಿಗೆ ಆ ನಿಸ್ಸಹಾಯಕ ಸ್ತ್ರೀಯನ್ನು ದರದರನೆ ಎಳೆದುಕೊಂಡು ಹೋಗಿ, ಅವಳನ್ನು ಹೊರಕ್ಕೆ ತಳ್ಳುವ ಉದ್ದೇಶದಿಂದ ಬಾಗಿಲನ್ನು ತೆರೆಯತೊಡಗಿದೆನು. ಅವಳ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯುತ್ತಿದ್ದಿತು. ಆಕೆ 'ನಿಮಗೆ ಸ್ವಲ್ಪವೂ ನಾಚಿಕೆಯೇ ಬೇಡವೆ? ಇಷ್ಟರ ಮಟ್ಟಿಗೆ ನೀವು ಮೈಮರೆಯುವುದೆ? ನಾನು ಎಲ್ಲಿಗೆ ಹೋಗಲಿ? ಇಲ್ಲಿ ನಾನು ಹೋಗುವುದಕ್ಕೆ ನಮ್ಮ ತಂದೆ-ತಾಯಿಗಳ ಮನೆ ಇದೆಯೇ? ನಿಮ್ಮ ಹೆಂಡತಿಯಾದ ಮೇಲೆ ನಿಮ್ಮ ಹೊಡೆತ ಒದೆತಗಳನ್ನೆಲ್ಲ ನಾನು ತಿನ್ನಬೇಕೆಂದು ನೀವು ಭಾವಿಸಿದ್ದೀರಿ. ಅಯ್ಯೋ ದೇವರೇ, ಸ್ವಲ್ಪವಾದರೂ ನಾಚಿಕೆ ಬೇಡವೆ? ಬಾಗಿಲನ್ನು ಹಾಕಿ. ನಮ್ಮ ಈ ರಾದ್ಧಾಂತವನ್ನು ಯಾರಾದರೂ ಬಂದು ಕಂಡಾರು!'

ನಾನು ನನ್ನ ಮುಖದಲ್ಲಿ ಧೈರ್ಯವನ್ನು ತೋರಿಸಿದರೂ, ನಿಜವಾಗಿಯೂ ನನಗೆ ನಾಚಿಕೆಯಾಗಿದ್ದಿತು. ನಾನು ಬಾಗಿಲನ್ನು ಮುಚ್ಚಿದೆನು. ನನ್ನ ಹೆಂಡತಿ ನನ್ನನ್ನು ಬಿಡಲಾರದ ಮೇಲೆ, ನಾನೂ ಅವಳನ್ನು ಬಿಡಲಾರದವನಾಗಿದ್ದೆನು. ನಮ್ಮನಮ್ಮಲ್ಲಿ ಬೇಕಾದಷ್ಟು ಜಗಳವಾಗಿದೆ. ಆದರೆ ಪರಿಣಾಮ ಯಾವಾಗಲೂ ಶಾಂತಿದಾಯಕ

ವಾಗಿದೆ. ನನ್ನ ಹೆಂಡತಿ ತನ್ನ ಅದ್ಭುತ ಸಹನಾಶಕ್ತಿಯಿಂದ ತಾನು ಯಾವಾಗಲೂ ಜಯಶಾಲಿಯಾಗಿದ್ದಾಳೆ.

ಈ ಘಟನೆ ನಡೆದ ಕಾಲದಲ್ಲಿ ನನಗಿದ್ದ ಮನೋವೃತ್ತಿಯನ್ನು ನಾನು ಸುದೈವದಿಂದ ದಾಟಿ ಬಂದಿರುವುದರಿಂದ, ಈಗ ಈ ವಿಷಯವನ್ನು ನಾನು ಸ್ವಲ್ಪ ನಿರ್ಲಿಪ್ತವಾಗಿ ವಿವರಿಸುವ ಸ್ಥಿತಿಯಲ್ಲಿದ್ದೇನೆ. ನಾನು ಇಂದು ಮೋಹಾಂಧ ಪತಿಯಲ್ಲ. ನನ್ನ ಹೆಂಡತಿಗೆ ನಾನು ಶಿಕ್ಷಕನೂ ಅಲ್ಲ. ಕಸ್ತೂರಬಾ, ಅವಳಿಗೆ ಇಷ್ಟ ಬಂದರೆ, ನಾನು ಹಿಂದೆ ಅವಳ ಬಗ್ಗೆ ಅಪ್ರಿಯವಾಗಿ ನಡೆದುಕೊಂಡಂತೆ ಈಗ ಅವಳೂ ನನ್ನಲ್ಲಿ ಅಪ್ರಿಯವಾಗಿ ನಡೆಯಬಹುದು. ನಾವು ಒಬ್ಬರನ್ನೊಬ್ಬರು ಭೋಗ ವಸ್ತುವನ್ನಾಗಿ ಪರಿಗಣಿಸುತ್ತಿಲ್ಲ. ಆಕೆ ಬಹಳ ಶ್ರದ್ಧಾಳುವಾದ ಸೇವಿಕೆಯಾಗಿ ನನ್ನ ಕಾಯಿಲೆಯ ಕಾಲದಲ್ಲೆಲ್ಲ ಯಾವ ಪ್ರತಿಫಲದ ಅಪೇಕ್ಷೆಯೂ ಇಲ್ಲದೆ ನನ್ನ ಶುಶ್ರೂಷೆ ಮಾಡಿದ್ದಾಳೆ.

ಈ ಸಂಗತಿ ನಡೆದುದು ೧೮೯೮ರಲ್ಲಿ. ಆಗ ನನಗೆ ಬ್ರಹ್ಮಚರ್ಯದ ಕಲ್ಪನೆ ಇರಲಿಲ್ಲ. 'ಹೆಂಡತಿ ಗಂಡನ ಸುಖದುಃಖಗಳಲ್ಲಿ ಭಾಗಿಯಾಗಿ ಅವನ ಸಹಧರ್ಮಿಣಿ, ಸಹಚಾರಿಣಿಯಾಗಿರುವುದಕ್ಕಿಂತ ಹೆಚ್ಚಾಗಿ, ಆಕೆ ಗಂಡನ ಭೋಗ ಸಾಮಗ್ರಿಯಾಗಿ ಅವನ ಎಲ್ಲ ಅಪ್ಪಣೆಗಳನ್ನೂ ಪಾಲಿಸುವುದಕ್ಕೆ ಇರುವುದು' ಎಂಬ ಭಾವನೆ ನನ್ನಲ್ಲಿದ್ದ ಕಾಲ ಅದು.

೧೯೦೦ರಲ್ಲಿ ಈ ಭಾವನೆಗಳೆಲ್ಲ ಪೂರ್ಣವಾಗಿ ಬದಲಾವಣೆಯಾದವು. ೧೯೦೬ರಲ್ಲಿ ಆ ಬದಲಾವಣೆಯಾದ ಭಾವನೆಗಳು ಸ್ಪಷ್ಟವಾದ ಆಕಾರವನ್ನು ಹೊಂದಿದವು. ಇಷ್ಟನ್ನು ಹೇಳಿದರೆ ಸಾಕು: ನನ್ನಲ್ಲಿ ಇಂದ್ರಿಯ ಸುಖದ ಆಸೆ ನಿಧಾನವಾಗಿ ಮರೆಯಾದ ಮೇಲೆ ನನ್ನ ಸಂಸಾರ ಜೀವನ, ಹೆಚ್ಚು ಶಾಂತಿಯುತವೂ ಮಧುರವೂ ನಿರ್ಮಲವೂ ಸುಖಕರವೂ ಆಗಿದೆ; ಆಗುತ್ತಿದೆ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ-೪, ಅಧ್ಯಾಯ-೧೧, 'ಎ ಸೇಕ್ರೆಡ್ ರಿಕಲೆಕ್ಷನ್ ಅಂಡ್ ಪೆನಾನ್ಸ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೧೨

ಭಾರತದಲ್ಲಿ ಸತ್ಯಾಗ್ರಹ

[ಗಾಂಧೀಜಿ ಭಾರತಕ್ಕೆ ಬಂದ ಮೇಲೆ ಸ್ವಾತಂತ್ರ್ಯ ಚಳುವಳಿಯನ್ನು ಮುನ್ನಡೆಸುವ ಹೊಣೆ ಅವರ ಪಾಲಿಗೆ ಬಂತು. ಏಪ್ರಿಲ್ ೬, ೧೯೧೯ರಂದು ಇಡೀ ಭಾರತ ದೇಶವೇ ಬ್ರಿಟಿಷರ ವಿರುದ್ಧ ಒಗ್ಗಟ್ಟಾಗಿತ್ತು. ಹಳ್ಳಿಗಳು, ನಗರಗಳು ಅಚ್ಚರಿಯಾಗುವ ರೀತಿಯಲ್ಲಿ ಸ್ತಬ್ಧವಾಗಿಬಿಟ್ಟಿದ್ದವು. ಗಾಂಧೀಜಿ ತಮ್ಮ ನಿಯಂತ್ರಣಕ್ಕೆ ದಕ್ಕದ ಶಕ್ತಿಗಳನ್ನು ಚಾಲನೆಗೆ ತಂದಿದ್ದರು. ಭಾರತೀಯರು ಹರತಾಳದ ನಂತರ ಹಿಂಸಾಚಾರದಲ್ಲಿ ತೊಡಗಿ ದರೋಡೆ ಮತ್ತು ಕೊಲೆಗಳಿಗೆ ಮುಂದಾಗಿದ್ದನ್ನು ಕಂಡು ಗಾಂಧೀಜಿ ದುಃಖಿತರಾಗಿದ್ದರು.]

ಏಪ್ರಿಲ್ ೭ರ ರಾತ್ರಿ ನಾನು ದೆಹಲಿ ಮತ್ತು ಅಮೃತಸರಗಳೆಡೆಗೆ ಪ್ರಯಾಣ ಬೆಳೆಸಿದೆ. ಆದರೆ ನನ್ನನ್ನು ಪಂಜಾಬಿನ ಗಡಿ ದಾಟದಂತೆ ನಿರ್ಬಂಧಿಸಲಾಯಿತು. ಪಲವಾಲ್ ರೈಲು ನಿಲ್ದಾಣದಲ್ಲಿ ನನ್ನನ್ನು ರೈಲಿನಿಂದ ಇಳಿಸಿ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಯಿತು. ಮರುದಿನ ಮುಂಜಾನೆ ನನ್ನನ್ನು ಗೂಡ್ಸ್ ರೈಲಿನಲ್ಲಿ ಇರಿಸಿ ಬಾಂಬೆಗೆ ತರಲಾಯಿತು. ಬಾಂಬೆಯಲ್ಲಿ ನನ್ನನ್ನು ಬಿಡುಗಡೆ ಮಾಡಲಾಯಿತು.

ನನ್ನ ಬಂಧನದಿಂದಾಗಿ ಬಾಂಬೆ ನಗರದಲ್ಲಿ ಭಾರಿ ಪ್ರಮಾಣದ ಸಮಸ್ಯೆಗಳು ಉಂಟಾದವು. ದೊಡ್ಡ ಗುಂಪೊಂದು ಅಲ್ಲಿ ಸೇರಿತ್ತು. ನನ್ನನ್ನು ನೋಡಿದ ಕೂಡಲೇ ಜನ ಉತ್ಸಾಹದಿಂದ, ಸಂತೋಷದಿಂದ ಹುಚ್ಚರಾದರು. ಮೆರವಣಿಗೆಯೊಂದು ತಕ್ಷಣವೇ ಏರ್ಪಾಡಾಯಿತು. ಆಗ ಇದ್ದಕ್ಕಿದಂತೆ ಸ್ಥಳಕ್ಕೆ ಆಗಮಿಸಿದ ಅಶ್ವಾರೋಹಿ ಪೊಲೀಸರು ಮೆರವಣಿಗೆ ಮುಂದುವರಿಯದಂತೆ ಜನರನ್ನು ತಡೆದರು. ಅಲ್ಲೇ ಸ್ಥಳದಲ್ಲಿದ್ದ ಅಧಿಕಾರಿಯು ಜನರನ್ನು ಚದುರಿಸುವಂತೆ ಆದೇಶಿಸಿದ. ಅದರಂತೆ ಅಶ್ವಾರೋಹಿ ಪೊಲೀಸರು ತಮ್ಮ ಲಾಠಿಗಳನ್ನು ಜನರ ಮೇಲೆ ಬೀಸಿದರು; ಕುದುರೆಗಳನ್ನು ಜನರ ನಡುವೆ ಓಡಾಡಿಸಿದರು. ಇದರ ಪರಿಣಾಮ ಜನರು ಚದುರುವಂತಾಯಿತು ಮತ್ತು ಅಲ್ಲಿ ಗೊಂದಲ ನಿರ್ಮಾಣವಾಯಿತು. ಎಲ್ಲಾ ದಿಕ್ಕುಗಳ

ಕಡೆಗೂ ಜನ ಓಡತೊಡಗಿದರು. ಕೆಲವರು ಕಾಲ್ತುಳಿತಕ್ಕೆ ಸಿಲುಕಿದರು. ಹಲವರು ಗಾಯಗೊಂಡರು. ಕಣ್ಣಿಂದ ನೋಡಲು ಆಗದ ಭಯಾನಕ ದೃಶ್ಯ ಅಲ್ಲಿ ನಿರ್ಮಾಣವಾಯಿತು.

ಅಹ್ಮದಾಬಾದ್‌ನಲ್ಲೂ ಹಿಂಸಾಚಾರ ನಡೆದ ಕುರಿತು ಸುದ್ದಿಗಳು ಬಂದವು. ಮಿಲ್ಲಿನ ಕಾರ್ಮಿಕರು ಹಿಂಸಾಚಾರಕ್ಕೆ ಇಳಿದಿರುವುದಾಗಿ ಯಾರೋ ಸುಳ್ಳು ಸುದ್ದಿ ಹಬ್ಬಿಸಿದ್ದರು. ಮಾರ್ಷಲ್ ಲಾ ಜಾರಿಗೆ ತರಲಾಗಿತ್ತು. ನಾನು ಅಹ್ಮದಾಬಾದಿನೆಡೆಗೆ ಹೊರಟೆ.

ನಾನು ಸಬರಮತಿ ಆಶ್ರಮದ ಅಂಗಳದಲ್ಲಿ ಸಾರ್ವಜನಿಕ ಸಭೆ ನಡೆಸಲು ಕಮೀಷನರ್ ಅವರ ಅನುಮತಿ ಕೋರಿದೆ. ಅಲ್ಲಿ ನೆರೆದಿದ್ದ ಜನರಿಗೆ ಅವರು ಮಾಡುತ್ತಿರುವ ತಪ್ಪನ್ನು ಅರ್ಥ ಮಾಡಿಸುವ ಕೆಲಸ ಮಾಡಿದೆ. ನಾನು ಸೇವೆ ಮಾಡಿದ್ದ ಕೂಲಿಕಾರರು ಹಿಂಸಾಚಾರದಲ್ಲಿ ತೊಡಗಿದ್ದು ನನಗೆ ಅತೀವ ದುಃಖವನ್ನು ನೀಡಿತು. ನಾನು ಅವರಿಂದ ಇನ್ನೂ ಉತ್ತಮವಾದ ವರ್ತನೆಯನ್ನು ನಿರೀಕ್ಷಿಸಿದ್ದೆ. ನಾನು ಅವರ ಪಾಪದಲ್ಲಿ ಒಂದು ಪಾಲನ್ನು ಸ್ವೀಕರಿಸುವುದಾಗಿ ಹೇಳಿದೆ. ಜನರಿಗೆ ಅವರ ಪಾಪಕೃತ್ಯವನ್ನು ಒಪ್ಪಿಕೊಳ್ಳುವಂತೆ ಹೇಳಿದ ಹಾಗೆಯೇ, ಸರ್ಕಾರಕ್ಕೂ ಜನರ ತಪ್ಪನ್ನು ಕ್ಷಮಿಸುವಂತೆ ಕೋರಿದೆ. ಇಬ್ಬರೂ ನನ್ನ ಸಲಹೆಯನ್ನು ಸ್ವೀಕರಿಸಲಿಲ್ಲ.

ಎಲ್ಲಿಯವರೆಗೆ ಜನರು ಶಾಂತಿಯಿಂದಿರುವ ಪಾಠವನ್ನು ಕಲಿಯಲು ಸಿದ್ಧರಿಲ್ಲವೋ ಅಲ್ಲಿಯವರೆಗೆ ನಾನು ಸತ್ಯಾಗ್ರಹವನ್ನು ಕೈಬಿಡುವ ನಿರ್ಧಾರವನ್ನು ತಳೆದೆ. ಯಾರೊಂದಿಗೆ ನಾನು ಸತ್ಯಾಗ್ರಹವನ್ನು ಆಯೋಜಿಸಬೇಕೆಂದು ಬಯಸಿದ್ದೆನೋ, ಅವರು ಅಹಿಂಸೆಯ ಮೂಲಾಂಶಗಳನ್ನು ಮತ್ತು ನೋವನ್ನು ಅನುಭವಿಸುವ ಸಹನೆಯನ್ನು ರೂಢಿಸಿಕೊಳ್ಳದೇ ಹೋದಲ್ಲಿ, ಇಡೀ ಸತ್ಯಾಗ್ರಹವು ವಿಫಲವಾಗುತ್ತದೆ. ಅದು ಅಸಾಧ್ಯವಾದ ಕಾರ್ಯವಾಗುತ್ತದೆ. ನಾನು ಅಗಾಧವಾದ ತಪ್ಪು ('ಹಿಮಾಲಯನ್ ಬ್ಲಂಡರ್') ಮಾಡಿದೆ ಎಂದು ಸಾರ್ವಜನಿಕವಾಗಿ ನದಿಯಾದ್‌ನಲ್ಲಿ ಒಪ್ಪಿಕೊಂಡೆ. ನಾನು ಹೀಗೆ ಎಲ್ಲರ ಮುಂದೆ ತಪ್ಪು ಒಪ್ಪಿಕೊಂಡಿದ್ದು ನನ್ನನ್ನು ಸಾಕಷ್ಟು ಅವಹೇಳನಕ್ಕೆ ಒಳಪಡಿಸಿತು. ಆದರೆ ಇಂದಿಗೂ ನಾನು ಅಂದು ತೆಗೆದುಕೊಂಡ ನಿರ್ಧಾರದ ಬಗ್ಗೆ ಯಾವುದೇ ಬೇಸರವಿಲ್ಲ. ಏಕೆಂದರೆ ಒಬ್ಬ ತನ್ನ ತಪ್ಪುಗಳನ್ನು ಭೂತಗನ್ನಡಿಯಲ್ಲಿ ನೋಡಿಕೊಳ್ಳುವ ಮತ್ತು ಅನ್ಯರ ತಪ್ಪುಗಳನ್ನು ದೂರದಿಂದ ನೋಡುವುದನ್ನು ರೂಢಿಸಿಕೊಂಡಾಗ ಮಾತ್ರ ಇಬ್ಬರ ತಪ್ಪಿನ ಕುರಿತು ಒಂದಿಷ್ಟು ಸ್ಪಷ್ಟತೆಯನ್ನು ಗಳಿಸಿಕೊಳ್ಳಲು ಸಾಧ್ಯವೆಂದು ಈಗಲೂ ನಂಬಿದ್ದೇನೆ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ–೫, ಅಧ್ಯಾಯ–೩೧, ೩೨, ೩೩ ಇವುಗಳಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೧೩

ಕುಂಭಮೇಳದಲ್ಲಿ ಕಂಡ ದೃಶ್ಯಗಳು

ಕಲ್ಕತ್ತಾದಿಂದ ಹರಿದ್ವಾರದ ಪ್ರಯಾಣ ತುಂಬ ಆಯಾಸಕರವಾಗಿತ್ತು. ಕೆಲವು ವೇಳೆ ರೈಲುಗಾಡಿಗಳಲ್ಲಿ ದೀಪಗಳೇ ಇರುತ್ತಿರಲಿಲ್ಲ. ಸಹರನ್‌ಪುರದಿಂದ ಮುಂದಕ್ಕೆ, ನಮ್ಮನ್ನೆಲ್ಲ ದನಕರುಗಳಂತೆ, ಪದಾರ್ಥಗಳಂತೆ ಗಾಡಿಗಳಿಗೆ ತುಂಬಿದರು. ಈ ಗಾಡಿಗಳಿಗೆ ಮೇಲ್ಛಾವಣಿಯಿರಲಿಲ್ಲ. ಮೇಲೆ ಉರಿಯುತ್ತಿರುವ ಸೂರ್ಯ, ಕೆಳಗಡೆ ಕಬ್ಬಿಣದ ನೆಲ, ಇವುಗಳ ಮಧ್ಯೆ ನಾವು ಬೆಂದು ಹೋದೆವು. ಇಂತಹ ಪ್ರಯಾಣದಿಂದ ಉಂಟಾದ ಬಾಯಾರಿಕೆಯಲ್ಲಿಯೂ, ನಿಷ್ಠ ಹಿಂದೂಗಳು ಮುಸಲ್ಮಾನರು ಕೊಟ್ಟ ನೀರನ್ನು ಕುಡಿಯುವವರಾಗಿರಲಿಲ್ಲ. ಹಿಂದೂ ನೀರು ಬರುವವರೆಗೆ ಅವರು ಬಾಯಾರಿ ಕಾದಿರುತ್ತಿದ್ದರು. ಈ ಹಿಂದೂಗಳೇ ತಮ್ಮ ಕಾಯಿಲೆಯಲ್ಲಿ, ಡಾಕ್ಟರು ಅವರಿಗೆ ಮದ್ಯವನ್ನಾಗಲೀ, ಗೋಮಾಂಸದ ಟೀಯನ್ನಾಗಲೀ ಕುಡಿಯಲು ಹೇಳಲಿ ಮತ್ತು ಮುಸಲ್ಮಾನ ಅಥವಾ ಕ್ರೈಸ್ತ ಕಾಂಪೌಂಡರು ನೀರು ಕೊಡಲಿ, ವಿಚಾರಿಸದೆ ಕುಡಿಯುತ್ತಾರೆ.

ಭಾರತದಲ್ಲಿ, ನಮ್ಮ ವಿಶೇಷವಾದ ಕಾರ್ಯ ಜಾಡಮಾಲಿಯ ಕಾರ್ಯವೇ ಎಂಬುದು ಶಾಂತಿನಿಕೇತನದ ವಾಸದಿಂದ ನಮಗೆ ಗೊತ್ತಾಗಿದ್ದಿತು. ಹರಿದ್ವಾರದಲ್ಲಿ ಸ್ವಯಂ ಸೇವಕರಿಗಾಗಿ ಒಂದು ಧರ್ಮಶಾಲೆಯಲ್ಲಿ ಗುಡಾರವನ್ನು ಹಾಕಿದ್ದರು. ಕಕ್ಕಸು ಗಳಿಗಾಗಿ ಡಾ.ಮೆಹತಾರವರು ಕೆಲವು ಗುಂಡಿಗಳನ್ನು ತೋಡಿಸಿದ್ದರು. ಇವುಗಳನ್ನು ನೋಡಿಕೊಳ್ಳಲು ಸಂಬಳದ ಆಳುಗಳನ್ನು ಅವರು ನಿಯಮಿಸಬೇಕಾಗಿದ್ದಿತು. ಫೀನಿಕ್ಸ್ ತಂಡಕ್ಕೆ ಅದು ಕೆಲಸವಾಯಿತು. ಪಾಯಖಾನೆಯನ್ನೆಲ್ಲ ಮಣ್ಣಿನಿಂದ ಮುಚ್ಚಿ ಅವುಗಳನ್ನು ಸಾಗಿಸಿ ಶುಚಿಯಾಗಿಡುವೆವು ಎಂದು ನಾವು ಹೇಳಿದೆವು. ಡಾ.ಮೆಹತಾ ಸಂತೋಷದಿಂದ ಒಪ್ಪಿದರು. ಈ ಜವಾಬ್ದಾರಿಯನ್ನು ಸ್ವಾಭಾವಿಕವಾಗಿ

ವಹಿಸಿಕೊಂಡವನು ನಾನು. ಆದರೆ ಮಾಡುತ್ತಿದ್ದವರು ಮಗನ್‌ಲಾಲ್ ಗಾಂಧಿಯವರು. ಬಂದವರಿಗೆ ದರ್ಶನವನ್ನು ಕೊಡುತ್ತಾ, ಅಸಂಖ್ಯಾತ ಯಾತ್ರಿಕರೊಡನೆ ಧಾರ್ಮಿಕ ಚರ್ಚೆಯನ್ನು ಮಾಡುತ್ತಾ ಕುಳಿತಿರುವುದು ನನ್ನ ಕೆಲಸವಾಗಿದ್ದಿತು. ಇದರಿಂದ ನನಗೆ ಒಂದು ಗಳಿಗೆಯೂ ವಿರಾಮ ದೊರೆಯುತ್ತಿರಲಿಲ್ಲ. ಈ ದರ್ಶನಾಕಾಂಕ್ಷಿಗಳು ಸ್ನಾನಘಟ್ಟಕ್ಕೂ ನನ್ನನ್ನು ಅನುಸರಿಸುತ್ತಿದ್ದರು. ಊಟ ಮಾಡುವಾಗಲೂ ಬಿಡುತ್ತಿರಲಿಲ್ಲ. ನಾನು ದಕ್ಷಿಣ ಆಫ್ರಿಕಾದಲ್ಲಿ ಮಾಡಿದ್ದ ನಮ್ರ ಸೇವೆಯಿಂದ ಭಾರತದಲ್ಲೆಲ್ಲ ಉಂಟಾಗಿದ್ದ ಆಳವಾದ ಪರಿಣಾಮ ನನಗೆ ಗೊತ್ತಾದುದು ಹರಿದ್ವಾರದಲ್ಲಿಯೇ.

ಆದರೆ ಇದು ನನಗೆ ಸಂತೋಷದಾಯಕ ಪರಿಸ್ಥಿತಿಯಾಗಿರಲಿಲ್ಲ. ನನ್ನ ಸ್ಥಿತಿ ಇತ್ತ ಪುಲಿ ಅತ್ತ ದರಿ ಎಂಬಂತೆ ಆಗಿದ್ದಿತು. ನನ್ನನ್ನು ಯಾರೂ ಗುರುತಿಸದ ಎಡೆಯಲ್ಲಿ, ಈ ದೇಶದ ಲಕ್ಷಾವಧಿ ಜನ ಅನುಭವಿಸುವ ಕಷ್ಟ ನಿಷ್ಠುರ–ಉದಾಹರಣೆಗೆ ರೈಲ್ವೆ ಪ್ರಯಾಣ–ನನಗೂ ಉಂಟಾಗುತ್ತಿದ್ದಿತು. ನನ್ನ ವಿಷಯವನ್ನು ಕೇಳಿದ್ದವರ ಮಧ್ಯೆ ನಾನು ಇದ್ದರೆ, ಅವರ ದರ್ಶನದ ಹುಚ್ಚಿಗೆ ನಾನು ಬಲಿಯಾಗುತ್ತಿದ್ದೆನು. ಇವೆರಡರಲ್ಲಿ ಯಾವುದು ಹೆಚ್ಚು ಕರುಣಾಜನಕವೆಂಬುದನ್ನು ನಿರ್ಧರಿಸುವುದು ನನಗೆ ಎಷ್ಟೋ ಬಾರಿ ಕಷ್ಟವಾಗಿದೆ. ದರ್ಶನಾರ್ಥಿಗಳ ಈ ಕುರುಡು ಪ್ರೇಮದಿಂದ ನನಗೆ ಅನೇಕ ವೇಳೆ ಕೋಪ ಬಂದಿರುವುದಂತೂ ನನಗೆ ಗೊತ್ತು. ನನ್ನ ಮನಸ್ಸಿಗೆ ನೋವು ಸಹ ಉಂಟಾಗಿದೆ. ಆದರೆ ಪ್ರಯಾಣವೊ? ಅದು ಕಷ್ಟವಾದರೂ ಉನ್ನತಿಗೆ ಸಾಧಕವಾಗಿದೆಯೇ ಹೊರತು ಎಂದೂ ಕೋಪೋದ್ರೇಕಕ್ಕೆ ಕಾರಣವಾಗಿಲ್ಲ.

ಆ ಕಾಲದಲ್ಲಿ ನನಗೆ ಬೇಕಾದಂತೆ ತಿರುಗಾಡುವ ದೇಹಶಕ್ತಿಯಿತ್ತು. ಅದೃಷ್ಟವಶದಿಂದ ಬೀದಿಯಲ್ಲಿ ನಾನು ಹೊರಟರೆ ಜನ ಸಂಭ್ರಮಗೊಳ್ಳುವಷ್ಟು ನಾನು ಪ್ರಸಿದ್ಧನಾಗಿರಲಿಲ್ಲ. ಈ ತಿರುಗಾಟದಲ್ಲಿ ಯಾತ್ರಿಕರ ಧರ್ಮಭಾವನೆಗಿಂತ, ಅಲಕ್ಷ್ಯ, ಬೂಟಾಟಿಕೆ ಮತ್ತು ಕೊಳಕು ನನಗೆ ಹೆಚ್ಚಾಗಿ ಕಂಡಿತು. ಅಲ್ಲಿ ಬಂದು ಸೇರಿದ್ದ ಸಾಧುಗಳು ಸುಖ ಜೀವನವನ್ನು ನಡೆಸುವುದಕ್ಕಾಗಿಯೇ ಬಂದು ಸೇರಿದ್ದಂತೆ ಕಂಡರು.

ಇಲ್ಲಿ ನಾನು ಐದು ಕಾಲಿನ ಆಕಳನ್ನು ನೋಡಿದೆನು. ನನಗೆ ಆಶ್ಚರ್ಯವಾಯಿತು. ಆದರೆ ತಿಳಿವಳಿಕೆಯುಳ್ಳ ಜನ, ನನ್ನ ಅಜ್ಞಾನವನ್ನು ನೀಗಿಸಿದರು. ಐದು ಕಾಲಿನ ಆ ಬಡ ಆಕಳು ಜನತೆಯ ದುರಾಸೆಗೆ ಬಲಿಯಾಗಿದ್ದಿತು. ಸಜೀವವಾಗಿದ್ದ ಕರುವಿನ ಕಾಲನ್ನು ಕತ್ತರಿಸಿ ಅದನ್ನು ಈ ಹಸುವಿನ ಭುಜಕ್ಕೆ ಅಂಟಿಸಿ ಉಂಟಾದುದೇ ಈ ಐದನೆಯ ಕಾಲು. ಈ ಇಜ್ಜೋಡಿ ಕ್ರೌರ್ಯದ ಫಲವನ್ನು ಬಡವರ ಹಣವನ್ನು ಸುಲಿಗೆ ಮಾಡಲು ಉಪಯೋಗಿಸುತ್ತಿದ್ದರು. ಇಂತಹ ಹಸುವಿನಿಂದ ಆಕರ್ಷಿತನಾಗದ ಹಿಂದೂ ಯಾರೂ ಇರಲಿಲ್ಲ. ಈ ಆಶ್ಚರ್ಯಕರ ಹಸುವಿಗಾಗಿ ಎಲ್ಲರೂ ವಿಪುಲವಾಗಿ ದಾನ ಮಾಡುತ್ತಿದ್ದರು.

ಕುಂಭಮೇಳದ ದಿನ ಬಂದಿತು. ನನಗೆ ಅದು ಚಿರಸ್ಮರಣೀಯ ಪ್ರಾಮುಖ್ಯದ ದಿನವಾಯಿತು. ನಾನು ಹರಿದ್ವಾರಕ್ಕೆ ಯಾತ್ರಿಕನ ಮನೋಭಾವನೆಯಿಂದ ಹೋಗಿರಲಿಲ್ಲ. ಧರ್ಮವನ್ನು ಹುಡುಕುತ್ತಾ ಯಾತ್ರಾಕ್ಷೇತ್ರಗಳಿಗೆ ಹೋಗುವುದು ನನ್ನ ಇಷ್ಟವಾಗಿರಲಿಲ್ಲ. ಆದರೆ ಅಲ್ಲಿ ಸೇರಿದ್ದರೆಂದು ಹೇಳಲಾದ ಹದಿನೇಳು ಲಕ್ಷ ಜನರು ಬರಿಯ ಬೂಟಾಟಿಕೆಯವರೂ, ನೋಟವನ್ನು ನೋಡುವವರೂ ಮಾತ್ರವೇ ಆಗಿದ್ದಿರಲಾರರು. ಅಸಂಖ್ಯಾತ ಯಾತ್ರಿಕರು ಧರ್ಮಾರ್ಜನೆಗಾಗಿಯೂ, ಅಂತಃಕರಣ ಪರಿಶುದ್ಧತೆಯನ್ನು ಸಂಪಾದಿಸಿಕೊಳ್ಳಲೂ ಅಲ್ಲಿ ಬಂದಿದ್ದರೆಂಬುದರಲ್ಲಿ ನನಗೆ ಸಂದೇಹವಿಲ್ಲ. ಇಂತಹ ನಂಬಿಕೆ ಜನರನ್ನು ಎಷ್ಟರಮಟ್ಟಿಗೆ ಉನ್ನತಿಗೇರಿಸುತ್ತದೆ ಎಂಬುದನ್ನು ಹೇಳುವುದು ಅಸಾಧ್ಯವಲ್ಲ; ಆದರೆ ಹೇಳುವುದು ಮಾತ್ರ ಬಲು ಕಷ್ಟ.

ಆದುದರಿಂದ ನಾನು ರಾತ್ರಿಯನ್ನು ಆಳವಾದ ಆಲೋಚನೆಯಲ್ಲಿ ಕಳೆದೆನು. ಸುತ್ತಲಿನ ಬೂಟಾಟಿಕೆಯ ಮಧ್ಯೆ ಪವಿತ್ರಾತ್ಮರೂ ಇದ್ದರು. ಅವರು ದೇವರ ಎದುರಿಗೆ ಅಪರಾಧದಿಂದ ಬಿಡುಗಡೆಯಾಗುವರು. ಹರಿದ್ವಾರಕ್ಕೆ ಯಾತ್ರೆ ಹೋಗುವುದೇ ಪಾಪಕರವಾದರೆ, ನಾನು ಬಹಿರಂಗವಾಗಿ ಆ ಕಾರ್ಯವನ್ನು ವಿರೋಧಿಸಿ ಕುಂಭಮೇಳದ ದಿನವೇ ಹರಿದ್ವಾರವನ್ನು ಬಿಡಬೇಕು. ಹರಿದ್ವಾರಕ್ಕೂ ಕುಂಭಮೇಳಕ್ಕೂ ಹೋಗುವುದು ಪಾಪಕಾರ್ಯವಲ್ಲವಾದರೆ ಆಗ ನಾನು ಅಲ್ಲಿ ನಡೆಯುತ್ತಿರುವ ಅನ್ಯಾಯಕ್ಕೆ ಪ್ರಾಯಶ್ಚಿತ್ತವಾಗಿ ಯಾವುದಾದರೂ ತ್ಯಾಗವನ್ನು ಕೈಗೊಂಡು ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು. ಇದು ನನಗೆ ಸ್ವಾಭಾವಿಕವಾಗಿತ್ತು.

(‘ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್’ ಕೃತಿಯ ಭಾಗ-೫, ಅಧ್ಯಾಯ-೭, ‘ಕುಂಭಮೇಳ’ದಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೧೪

ಧಾರ್ಮಿಕ ಸಂಕೇತಗಳು

ಹೃಷಿಕೇಶದಲ್ಲಿ ಅನೇಕ ಸನ್ಯಾಸಿಗಳು ಬಂದು ನನ್ನನ್ನು ನೋಡಿದರು...

ನಾವು ಧರ್ಮವನ್ನು ಕುರಿತು ಚರ್ಚೆ ಮಾಡಿದೆವು. ಧಾರ್ಮಿಕ ವಿಷಯಗಳಲ್ಲಿ ನನಗೆ ಆಳವಾದ ಶ್ರದ್ಧೆ ಇರುವುದು ಅವರಿಗೆ ಗೊತ್ತಾಯಿತು. ಗಂಗಾನದಿಯಿಂದ ನಾನು ಸ್ನಾನ ಮಾಡಿ ಹಿಂದಿರುಗುತ್ತಿರುವಾಗ ಅವರು ನನ್ನನ್ನು ನೋಡಿದರು. ನಾನು ಷರಟನ್ನು ಧರಿಸಿರಲಿಲ್ಲ. ನನ್ನ ತಲೆ ಬರಿದಾಗಿದ್ದಿತು. ನನ್ನ ತಲೆಯಲ್ಲಿ ಶಿಖೆ(ಜುಟ್ಟು) ಇರಲಿಲ್ಲ. ಭುಜದಲ್ಲಿ ಜನಿವಾರ ಇರಲಿಲ್ಲ. ನೋಡಿ ಅವರಿಗೆ ದುಃಖವಾಯಿತು. ಅವರು ಹೀಗೆ ಹೇಳಿದರು:

'ಆಸ್ತಿಕ ಹಿಂದೂವಾದ ನೀವು ಶಿಖೆ, ಯಜ್ಞೋಪವೀತಗಳಿಲ್ಲದೆ ಇರುವುದನ್ನು ನೋಡಿ ನನಗೆ ದುಃಖವಾಗುತ್ತಿದೆ. ಇವೆರಡೂ ಹಿಂದೂಧರ್ಮದ ಶಾಶ್ವತ ಚಿಹ್ನೆಗಳು. ಪ್ರತಿಯೊಬ್ಬ ಹಿಂದುವೂ ಇವನ್ನು ಧರಿಸಿರಬೇಕು.'

ಇವೆರಡನ್ನೂ ನಾನು ಬಿಟ್ಟುದಕ್ಕೆ ಒಂದು ಕತೆಯಿದೆ. ನಾನು ಹತ್ತು ವರುಷದ ಹುಡುಗನಾಗಿದ್ದಾಗ, ಬ್ರಾಹ್ಮಣ ಬಾಲಕರು ಜನಿವಾರಕ್ಕೆ ಬೀಗದ ಕೈಗೊಂಚಲುಗಳನ್ನು ಸಿಕ್ಕಿಸಿಕೊಂಡು ಆಟವಾಡುತ್ತಿದ್ದುದನ್ನು ನೋಡಿ ನಾನು ಹೊಟ್ಟೆಕಿಚ್ಚು ಪಡುತ್ತಿದ್ದೆ. ನಾನೂ ಹಾಗೆಯೇ ಮಾಡಬೇಕೆನ್ನಿಸಿತು. ಜನಿವಾರವನ್ನು ಹಾಕಿಕೊಳ್ಳುವುದು ಆಗ ಕಾಥೇವಾಡದ ವೈಶ್ಯರಲ್ಲಿ ಅಷ್ಟು ರೂಢಿಗೆ ಬಂದಿರಲಿಲ್ಲ. ಆದರೆ ಪ್ರಥಮ ಮೂರು ವರ್ಣದವರಿಗೂ ಅದನ್ನು ಕಡ್ಡಾಯವಾಗಿ ಮಾಡುವ ಒಂದು ಪ್ರಚಾರ (ಚಳವಳಿ) ಆಗ ತಾನೆ ಪ್ರಾರಂಭವಾಗಿದ್ದಿತು. ಪರಿಣಾಮವಾಗಿ ಗಾಂಧೀ ಪಂಗಡದ ಅನೇಕ ಸದಸ್ಯರು ಜನಿವಾರ ಹಾಕಿಕೊಳ್ಳುವುದನ್ನು ಮೊದಲು ಮಾಡಿದರು. ನಮಗೆ ರಾಮರಕ್ಷೆಯನ್ನು ಕಲಿಸುತ್ತಿದ್ದ ಬ್ರಾಹ್ಮಣರು ಬಂದು ನಮಗೆ (ಇಬ್ಬರು ಮೂರು

ಹುಡುಗರಿಗೆ) ಯಜ್ಞೋಪವೀತ ಧಾರಣೆಯನ್ನು ಮಾಡಿಸಿದರು. ನನಗೆ ಬೀಗದ ಕೈಸರವನ್ನು ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲದಿದ್ದರೂ ನಾನು ಒಂದನ್ನು ಜನಿವಾರಕ್ಕೆ ಸಿಕ್ಕಿಸಿಕೊಂಡು ಆಡಿಸತೊಡಗಿದೆ. ಆಮೇಲೆ ಜನಿವಾರ ಕಿತ್ತು ಹೋಯಿತು. ಅದು ಇಲ್ಲವೆಂದು ನಾನು ದುಃಖಪಟ್ಟುದು ಜ್ಞಾಪಕವಿಲ್ಲ. ನಾನು ಹೊಸ ಜನಿವಾರ ಹಾಕಿಕೊಳ್ಳಲಿಲ್ಲ.

ನನಗೆ ವಯಸ್ಸಾಗುತ್ತಾ ಬಂದಂತೆ, ಭಾರತದಲ್ಲಿಯೂ ದಕ್ಷಿಣ ಆಫ್ರಿಕಾದಲ್ಲಿಯೂ ನನಗೆ ಮತ್ತೆ ಜನಿವಾರವನ್ನು ಹಾಕಿಸುವ ಕೆಲವು ಸದುದ್ದೇಶಪೂರಿತ ಪ್ರಯತ್ನಗಳು ನಡೆದವು. ಅವು ಯಾವುವೂ ಜಯಶಾಲಿಯಾಗಲಿಲ್ಲ. ಜನಿವಾರವನ್ನು ಧರಿಸಲು ಶೂದ್ರರಿಗೆ ಅಧಿಕಾರವಿಲ್ಲದ ಮೇಲೆ ಅದನ್ನು ಧರಿಸಲು ಇತರೆ ವರ್ಣಗಳವರಿಗೆ ಯಾವ ಅಧಿಕಾರವಿದೆ? ಇದು ನನಗೆ ಅನವಶ್ಯಕವಾದ ಪದ್ಧತಿಯಾಗಿ ತೋರಿದುದರಿಂದ ಅದನ್ನು ಅಂಗೀಕರಿಸಲು ನನಗೆ ಸರಿಯಾದ ಕಾರಣಗಳು ತೋರಲಿಲ್ಲ. ಜನಿವಾರದ ಮೇಲೆ ನನ್ನ ಆಕ್ಷೇಪಣೆ ಏನೂ ಇರಲಿಲ್ಲ. ಆದರೆ ಅದನ್ನು ಧರಿಸುವುದಕ್ಕೆ ನನಗೆ ಯಾವ ಕಾರಣವೂ ತೋರಲಿಲ್ಲ.

ನಾನು ವೈಷ್ಣವನಾಗಿದ್ದುದರಿಂದ, ಸಹಜವಾಗಿ ಕತ್ತಿನಲ್ಲಿ ಕಂಠಿಯನ್ನು ಧರಿಸಿದ್ದೆನು. ಶಿಖೆ ಕಡ್ಡಾಯವಾಗಿ ಇರಲೇಬೇಕೆಂಬುದು ಹಿರಿಯರ ಮತವಾಗಿದ್ದಿತು. ಆದರೆ ನಾನು ಇಂಗ್ಲೆಂಡಿಗೆ ಹೊರಟ ಸಂದರ್ಭದಲ್ಲಿ ನನ್ನ ಶಿಖೆಯನ್ನು ತೆಗೆಸಿದೆನು. ಇಲ್ಲದಿದ್ದರೆ ಬರಿ ತಲೆಯಲ್ಲಿರುವಾಗ ಅದು ನನ್ನನ್ನು ಹಾಸ್ಯಕ್ಕೆ ಈಡುಮಾಡಬಹುದು ಮತ್ತು ಆಂಗ್ಲೇಯರ ದೃಷ್ಟಿಯಲ್ಲಿ ನಾನು ಅನಾಗರಿಕನಾಗಿ ತೋರಬಹುದು ಎಂದು ಎಣಿಸಿದ್ದೆನು. ವಾಸ್ತವವಾಗಿ ಈ ಹೇಡಿತನ ನನ್ನನ್ನು ಎಲ್ಲಿಗೆ ಕರೆದೊಯ್ಯಿತೆಂದರೆ ನಿಷ್ಠೆಯಿಂದ ಶಿಖೆಯನ್ನು ಧರಿಸಿದ್ದ ನಮ್ಮಣ್ಣನ ಮಗ ಛಗನ್‌ಲಾಲ್ ಗಾಂಧಿಯೂ ಶಿಖೆಯನ್ನು ತೆಗೆಯುವಂತೆ ಮಾಡಿದೆನು. ಶಿಖೆ ಇದ್ದರೆ ಅವನು ಮಾಡುತ್ತಿದ್ದ ಸಾರ್ವಜನಿಕ ಕಾರ್ಯಕ್ಕೆ ತೊಂದರೆಯುಂಟಾಗಬಹುದೆಂದು ನಾನು ಭಾವಿಸಿದೆನು. ಅವನಿಗೆ ದುಃಖವಾದರೂ, ಅದನ್ನು ತೆಗೆದು ಹಾಕುವಂತೆ ಮಾಡಿದೆನು. ಆದುದರಿಂದ ನಾನು ವಿಷಯವನ್ನೆಲ್ಲ ಸ್ವಾಮೀಜಿಗೆ ಸ್ಪಷ್ಟಪಡಿಸಿ ಹೀಗೆ ಹೇಳಿದೆನು:

'ನಾನು ಜನಿವಾರವನ್ನು ಧರಿಸುವುದಿಲ್ಲ. ನನಗೆ ಅದರ ಅವಶ್ಯಕತೆ ತೋರುವುದಿಲ್ಲ. ಅಸಂಖ್ಯಾತ ಹಿಂದೂಗಳು ಜನಿವಾರವಿಲ್ಲದೆ ಇದ್ದಾರೆ, ಆದರೂ ಹಿಂದೂಗಳಾಗಿಯೇ ಇದ್ದಾರೆ. ಜನಿವಾರ ಆತ್ಮ ಪುನರುದ್ಧಾರದ ಒಂದು ಸಂಕೇತವಾಗಿರಬೇಕು. ಅದನ್ನು ಧರಿಸುವವನು ಹೆಚ್ಚು ಉನ್ನತವಾದ, ಹೆಚ್ಚು ಪರಿಶುದ್ಧವಾದ ಜೀವನದ ಕಡೆಗೆ ಉದ್ದೇಶಪೂರ್ವಕ ಪ್ರಯತ್ನಪಡಬೇಕು. ಹಿಂದೂಧರ್ಮದ, ಭಾರತದ, ಇಂದಿನ

ಸ್ಥಿತಿಯಲ್ಲಿ ಇಂತಹ ಅರ್ಥದ ಒಂದು ಸಂಕೇತವನ್ನು ಧರಿಸುವ ಅಧಿಕಾರವನ್ನು ಹಿಂದೂಗಳು ಸಮರ್ಥನೆಗೊಳಿಸಿಕೊಳ್ಳಬಲ್ಲರೆ ಎಂಬುದು ನನಗೆ ಸಂಶಯವಾಗಿದೆ. ಹಿಂದೂಧರ್ಮ ಅಸ್ಪೃಶ್ಯತೆಯನ್ನು ತನ್ನಿಂದ ತೊಡೆದು ಹಾಕಬೇಕು, ಮೇಲು ಕೀಳು ಎಂಬ ಭೇದಭಾವಗಳನ್ನೆಲ್ಲ ತೊಲಗಿಸಬೇಕು. ತನ್ನಲ್ಲಿ ವಿಪುಲವಾಗಿ ಬೆಳೆದಿರುವ ಇತರ ಅನೇಕ ದೋಷಗಳಿಂದಲೂ, ಬೂಟಾಟಿಕೆಗಳಿಂದಲೂ ಬಿಡುಗಡೆಯಾಗಬೇಕು. ಆಗ ಮಾತ್ರ ಹಿಂದೂಗಳಿಗೆ ಜನಿವಾರವನ್ನು ಧರಿಸುವ ಹಕ್ಕು ಬರುತ್ತದೆ. ಆದ್ದರಿಂದ ಜನಿವಾರವನ್ನು ಧರಿಸಲು ನನ್ನ ಮನಸ್ಸು ನಿರಾಕರಿಸುತ್ತದೆ. ಆದರೆ ಶಿಖೆಯ ವಿಷಯದಲ್ಲಿ ನಿಮ್ಮ ಸೂಚನೆ ಪರಿಗಣಿಸಲು ಅರ್ಹವಾಗಿದೆ. ನಾನು ಹಿಂದೆ ಶಿಖೆಯನ್ನು ಇಟ್ಟುಕೊಂಡಿದ್ದೆನು. ಆದರೆ ಸುಳ್ಳು ನಾಚಿಕೆಯಿಂದ ಅದನ್ನು ತೆಗೆದುಬಿಟ್ಟೆನು. ಮತ್ತೆ ಶಿಖೆಯನ್ನು ಬೆಳೆಸುವುದು ಸರಿ ಎಂದು ನಾನು ಭಾವಿಸುತ್ತೇನೆ. ನನ್ನ ಸಂಗಡಿಗರೊಡನೆ ಈ ವಿಷಯವನ್ನು ಚರ್ಚಿಸುವೆನು.'

ಯಜ್ಞೋಪವೀತದ ವಿಷಯದಲ್ಲಿ ನಾನು ಹೇಳಿದುದನ್ನು ಸ್ವಾಮಿಗಳು ಒಪ್ಪಲಿಲ್ಲ. ಜನಿವಾರವನ್ನು ಹಾಕಿಕೊಳ್ಳಬಾರದೆಂಬುದಕ್ಕೆ ನನಗೆ ಯಾವ ಕಾರಣಗಳಿದ್ದವೋ, ಅವೇ ಕಾರಣಗಳೇ ಜನಿವಾರವನ್ನು ಧರಿಸಬೇಕೆಂಬುದಕ್ಕೆ ಕಾರಣಗಳಾಗಿ ಸ್ವಾಮಿಗಳಿಗೆ ತೋರಿದವು. ಇಂದಿಗೂ ಸಹ ಆ ವಿಷಯದಲ್ಲಿ ನನ್ನ ಅಭಿಪ್ರಾಯಗಳು ಸ್ವಲ್ಪ ಹೆಚ್ಚು ಕಡಿಮೆ ಹೃಷಿಕೇಶದಲ್ಲಿ ಇದ್ದಂತೆಯೇ ಇವೆ. ಎಲ್ಲಿಯವರೆಗೆ ಬೇರೆ ಬೇರೆ ಧರ್ಮಗಳಿರುತ್ತವೆಯೋ ಅಲ್ಲಿಯವರೆಗೆ ಅವುಗಳಿಗೆಲ್ಲ ಪ್ರತ್ಯೇಕವಾದ ಬಾಹ್ಯ ಸಂಕೇತ ಬೇಕಾಗಬಹುದು. ಆದರೆ ಈ ಸಂಕೇತವೇ ದೇವರೆಂದು ಭಾವಿಸಿ, ಒಂದು ಧರ್ಮಕ್ಕಿಂತ ಇನ್ನೊಂದು ಧರ್ಮ ಉತ್ತಮ ಎಂಬುದನ್ನು ಸಾಧಿಸುವ ಉಪಕರಣವಾದರೆ, ಆ ಸಂಕೇತ ತ್ಯಾಜ್ಯ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ-೫, ಅಧ್ಯಾಯ-೮, 'ಲಕ್ಷ್ಮಣ್ ಝೂಲಾ'ದಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೧೫

ಖಾದಿಯ ಜನನ

ನಾನು ೧೯೦೮ರಲ್ಲಿ, 'ಹಿಂದ್ ಸ್ವರಾಜ್' ಪುಸ್ತಕದಲ್ಲಿ, ಭಾರತದಲ್ಲಿ ಬೆಳೆಯುತ್ತಿರುವ ದಾರಿದ್ರ್ಯಕ್ಕೆ ರಾಟೆ (ಚರಕ) ಮತ್ತು ಕೈಮಗ್ಗ ಬ್ರಹ್ಮಾಸ್ತ್ರವೆಂದು ವಿವರಿಸಿದ್ದೆನು. ಆದರೆ ಆಗ ರಾಟೆಯನ್ನಾಗಲಿ ಕೈಮಗ್ಗವನ್ನಾಗಲಿ ನೋಡಿದ್ದೆನೆಂದು ನನಗೆ ನೆನಪಿಲ್ಲ. ಆ ಪುಸ್ತಕ ಬರೆಯುವಾಗ ಯಾವುದು ಭಾರತದ ದಾರಿದ್ರ್ಯವನ್ನು ಹೋಗಲಾಡಿಸುವುದೋ ಅದೇ ಸ್ವರಾಜ್ಯವನ್ನೂ ಸ್ಥಾಪಿಸುವುದೆಂದು ನಾನು ಭಾವಿಸಿದ್ದೆನು. ೧೯೧೫ರಲ್ಲಿ ನಾನು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದಾಗ, ರಾಟೆಯನ್ನು ಕಣ್ಣಿನಿಂದಲೂ ನೋಡಿರಲಿಲ್ಲ. ಸಬರಮತಿಯಲ್ಲಿ ಸತ್ಯಾಗ್ರಹಾಶ್ರಮ ಸ್ಥಾಪನೆಯಾದ ಮೇಲೆ ಇಲ್ಲಿ ಕೆಲವು ಕೈಮಗ್ಗಗಳನ್ನು ಹೂಡಿಸಿದೆವು. ಆದರೆ ನಾವು ಆ ಸಂದರ್ಭದಲ್ಲಿ ಕಷ್ಟವನ್ನು ಎದುರಿಸಬೇಕಾಯಿತು. ನಾವೆಲ್ಲ ಓದಿ, ವ್ಯಾಪಾರ, ಉದ್ಯೋಗಕ್ಕೆ ಸೇರಿದವರಾಗಿದ್ದೆವು. ಕೈಗಾರಿಕಾ ಕುಶಲಕಲೆ ನಮಗಾರಿಗೂ ತಿಳಿದಿರಲಿಲ್ಲ. ನಮಗೆ ಕೈಮಗ್ಗದಲ್ಲಿ ಕೆಲಸ ಮಾಡುವುದನ್ನು ಕಲಿಸಲು ಒಬ್ಬ ನಿಪುಣ ಕೈಮಗ್ಗ ಶಿಕ್ಷಕ ಬೇಕಾಗಿದ್ದಿತು. ಕೊನೆಗೆ ಪಾಲನ್‌ಪುರದಿಂದ ಒಬ್ಬ ಶಿಕ್ಷಕನನ್ನು ಕರೆಸಿದೆವು. ಆತ ತನ್ನ ವಿದ್ಯೆಯನ್ನೆಲ್ಲ ನಮಗೆ ಹೇಳಿಕೊಡಲಿಲ್ಲ. ಆದರೆ ಮಗನ್‌ಲಾಲ್ ಗಾಂಧಿ ಅಷ್ಟು ಸುಲಭವಾಗಿ ಸೋತುಹೋಗುವವನಾಗಿರಲಿಲ್ಲ. ಯಂತ್ರೋಪಕರಣಗಳ ವಿಷಯದಲ್ಲಿ ಆತನಿಗೆ ಸಹಜವಾದ ಅಭಿರುಚಿಯಿದ್ದಿತು. ಅವನು ಬಹಳ ಬೇಗ ಆ ಕಲೆಯಲ್ಲಿ ಪ್ರವೀಣನಾದನು. ಸ್ವಲ್ಪ ಕಾಲದಲ್ಲಿ ಆಶ್ರಮದಲ್ಲಿ ಅನೇಕ ನೇಯ್ಗೆಯವರು ತರಬೇತಾದರು.

ನಮ್ಮ ಮುಂದೆ ಇದ್ದ ಗುರಿ ಇದು. ನಮ್ಮ ಕೈಯಿಂದ ಸಿದ್ಧವಾದ ಬಟ್ಟೆಗಳನ್ನು ಮಾತ್ರವೇ ನಾವು ಧರಿಸಬೇಕು. ಆದುದರಿಂದ ನಾವು ಮಿಲ್ ಬಟ್ಟೆಗಳನ್ನು ಬಿಟ್ಟು

ಬಿಟ್ಟೆವು. ಆಶ್ರಮವಾಸಿಗಳೆಲ್ಲ ಭಾರತದ ಗಿರಣಿಗಳ ನೂಲಿನಿಂದ ತಯಾರಾದ ಕೈಮಗ್ಗದ ವಸ್ತ್ರಗಳನ್ನೇ ಧರಿಸಬೇಕೆಂದು ನಿರ್ಣಯಿಸಿಕೊಂಡೆವು. ಈ ಅಭ್ಯಾಸವನ್ನು ಪ್ರಾರಂಭಿಸಿದುದರಿಂದ ನಮಗೆ ಒಂದು ಅನುಭವಪ್ರಪಂಚವೇ ತೆರೆಯಿತು. ಇದರಿಂದ ನೇಕಾರರ ಜೀವನದ ಸ್ಥಿತಿಗತಿಗಳು, ಅವರು ಮಾಡುತ್ತಿದ್ದ ವಸ್ತ್ರೋತ್ಪಾದನೆ, ನೂಲು ದೊರಕಲು ಅವರು ಪಡುತ್ತಿದ್ದ ಕಷ್ಟ, ಅವರು ಮೋಸಕ್ಕೆ ಒಳಗಾಗುತ್ತಿದ್ದುದು, ಅವರ ಹೆಚ್ಚುತ್ತಿರುವ ಸಾಲ ಇವನ್ನೆಲ್ಲ ಅವರೊಂದಿಗಿನ ನೇರ ಸಂಪರ್ಕದಿಂದ ಅರಿಯಲು ನಮಗೆ ಸಾಧ್ಯವಾಯಿತು. ನಮಗೆ ಅವಶ್ಯಕವಾದಷ್ಟು ಬಟ್ಟೆಗಳನ್ನು ಕೂಡಲೇ ತಯಾರಿಸಲು ನಮಗೆ ಶಕ್ತಿಯಿರಲಿಲ್ಲ. ಆದುದರಿಂದ ನಮಗೆ ಉಳಿದ ಮಾರ್ಗವೆಂದರೆ ನೇಕಾರರಿಂದ ಕೈಮಗ್ಗದ ಬಟ್ಟೆಗಳನ್ನು ಕೊಳ್ಳುವುದೇ ಆಗಿದ್ದಿತು. ಭಾರತದ ಗಿರಣಿ ನೂಲಿನಿಂದ ನೇಯಲ್ಪಟ್ಟ ಬಟ್ಟೆಗಳು ಬಟ್ಟೆಯ ವ್ಯಾಪಾರಿಗಳಲ್ಲಾಗಲಿ, ನೇಯ್ಗೆಯವರಲ್ಲಾಗಲಿ ಸಿದ್ಧವಾಗಿ ದೊರಕುವಂತಿರಲಿಲ್ಲ. ನೇಕಾರರು ನೇಯುತ್ತಿದ್ದ ನವಿರಾದ ಕೈಮಗ್ಗದ ಬಟ್ಟೆಗಳೆಲ್ಲ ಗಿರಣಿ ನೂಲಿನಿಂದ ನೇಯ್ದುವಾಗಿದ್ದವು. ಏಕೆಂದರೆ ಗಿರಣಿಗಳಲ್ಲಿ ಹೆಚ್ಚಿನ ನಂಬರಿನ ನೂಲುಗಳು ತಯಾರಾಗುತ್ತಿರಲಿಲ್ಲ. ಇಂದಿಗೂ ಸಹ ಭಾರತದ ಗಿರಣಿಗಳಲ್ಲಿ ಉತ್ತಮವಾದ (ಹೆಚ್ಚಿನ ನಂಬರಿನ) ನೂಲು ಮಿತವಾಗಿ ತಯಾರಾಗುತ್ತಿದೆ. ಅತ್ಯುತ್ತಮವಾದ ನೂಲು–ಅತ್ಯಂತ ಹೆಚ್ಚು ನಂಬರಿನ ನೂಲು– ಇಲ್ಲಿ ತಯಾರಾಗುವುದೇ ಇಲ್ಲ. ನಾವು ಅತ್ಯಂತ ಶ್ರಮಪಟ್ಟು ನಮಗಾಗಿ ಸ್ವದೇಶಿ ನೂಲನ್ನು ನೇಯುವ ಕೆಲವು ನೇಕಾರರನ್ನು ಕಂಡುಹಿಡಿದೆವು. ಅದಕ್ಕೂ ಸಹ ಅವರು ಒಂದು ನಿಯಮವನ್ನು ಒಡ್ಡಿದರು; ಅದೇನೆಂದರೆ ಅವರು ತಯಾರಿಸಿದ ಬಟ್ಟೆಯನ್ನೆಲ್ಲ ಆಶ್ರಮ ತೆಗೆದುಕೊಳ್ಳಬೇಕು. ಹೀಗೆ ಭಾರತದ ಗಿರಣಿಗಳಲ್ಲಿ ತಯಾರಾದ ನೂಲಿನ ಬಟ್ಟೆಗಳನ್ನು ನಮ್ಮ ಉಡುಪಾಗಿ ಅಂಗೀಕರಿಸಿ ಮತ್ತು ನಮ್ಮ ಸ್ನೇಹಿತರಲ್ಲಿ ಅದನ್ನು ಪ್ರಚಾರ ಮಾಡುವ ಮೂಲಕ ನಾವು ಭಾರತದ ಗಿರಣಿಗಳ ಸ್ವಯಂ ಪ್ರೇರಿತ ಪ್ರತಿನಿಧಿಗಳಾದೆವು. ಇದರಿಂದ ನಮಗೆ ಸ್ವಾಭಾವಿಕವಾಗಿ ಗಿರಣಿಗಳ ಸಂಪರ್ಕ ವುಂಟಾಯಿತು. ಅವರ ಆಡಳಿತ ವ್ಯವಸ್ಥೆ ಮತ್ತು ಕಷ್ಟ ನಿಷ್ಠುರಗಳ ಪರಿಚಯವು ನಮಗೆ ತಕ್ಕಮಟ್ಟಿಗೆ ಆಯಿತು.

ತಾವು ಮಾಡಿದ ನೂಲನ್ನು ತಾವೇ ನೇಯಬೇಕು ಎಂಬುದು ಗಿರಣಿಗಳ ಗುರಿಯಾಗಿತ್ತೆಂಬುದು ನಮಗೆ ಕಂಡಿತು. ಅವರು ಕೈಮಗ್ಗದವರೊಂದಿಗೆ ಸಹಕರಿಸಿ ದ್ದುದು ಇಚ್ಛಾಪೂರ್ವಕವಾಗಿ ಅಲ್ಲ; ಬದಲಿಗೆ, ವಿಧಿಯಿಲ್ಲದೆ ಮತ್ತು ತಾತ್ಕಾಲಿಕವಾಗಿ. ನಮಗೆ ಬೇಕಾಗುವ ನೂಲನ್ನು ನಾವು ಎಷ್ಟು ಬೇಗ ನೂಲಲು ಸಾಧ್ಯವಾದೀತು ಎಂದು ನಾವು ಕಾತರರಾದೆವು. ನಾವು ನಮ್ಮ ನೂಲನ್ನು ನೂತುಕೊಳ್ಳುವವರೆಗೆ

ಗಿರಣಿಗಳ ಮೇಲೆ ನಾವು ಅವಲಂಬಿಸಬೇಕಾಗುವುದೆಂಬುದು ನನಗೆ ಸ್ಪಷ್ಟವಾಗಿದ್ದಿತು. ಭಾರತದ ಗಿರಣಿಗಳ ಪ್ರತಿನಿಧಿಗಳಾಗಿ ಮುಂದುವರಿಯುವುದರಿಂದ ನಾವು ದೇಶಕ್ಕೆ ಸೇವೆಯನ್ನೂ ಮಾಡಿದಂತೆ ಆಗುವುದಿಲ್ಲವೆಂಬುದು ನಮಗೆ ತೋರಿತು.

ಈ ಪ್ರಯತ್ನದಲ್ಲಿಯೂ ನಾವು ಬಹಳ ಕಷ್ಟಗಳನ್ನು ಎದುರಿಸಬೇಕಾಯಿತು. ನಮಗೆ ಒಂದು ರಾಟೆಯೂ ಸಿಕ್ಕಲಿಲ್ಲ. ನೂಲುವುದನ್ನು ಕಲಿಸುವವರೂ ಸಿಕ್ಕಲಿಲ್ಲ. ನಾವು ನೂಲಿನ ಉಂಡೆಗಳನ್ನೂ, ಕಂಟಿಕಗಳನ್ನೂ ಮಾಡಲು ಆಶ್ರಮದಲ್ಲಿ ಕೆಲವು ರಾಟೆಗಳನ್ನು ಉಪಯೋಗಿಸುತ್ತಿದ್ದೆವು. ಒಂದು ಸಲ ಕಾಳಿದಾಸ್ ಜವೇರಿಯವರು ನೂಲುವುದನ್ನು ನಮಗೆ ತೋರಿಸಿಕೊಡಬಲ್ಲ ಒಬ್ಬ ಮಹಿಳೆಯನ್ನು ಕಂಡುಹಿಡಿದರು. ನಾವು ಆಕೆಯ ಬಳಿಗೆ ನಮ್ಮ ಆಶ್ರಮದಿಂದ ಒಬ್ಬರನ್ನು ನೂಲುವುದನ್ನು ಕಲಿತುಕೊಂಡು ಬರಲು ಕಳುಹಿಸಿದೆವು. ಅವರು ವಿಷಯಗಳನ್ನು ಹೊಸದಾಗಿ ಕಲಿಯುವುದರಲ್ಲಿ ನಿಪುಣರೆಂದು ಹೆಸರಾಗಿದ್ದರು. ಅವರೂ ಸಹ ಈ ಕಲೆಯ ಮರ್ಮವನ್ನು ಸ್ವಾಧೀನಪಡಿಸಿಕೊಳ್ಳದೆ ಹಿಂದಿರುಗಿದರು.

ಹೀಗೇ ಕಾಲ ಕಳೆಯಿತು. ಜತೆಯಲ್ಲಿ ನನ್ನ ಆತುರವೂ ಹೆಚ್ಚುತ್ತಾ ಬಂದಿತು. ಆಶ್ರಮಕ್ಕೆ ಅನಿರೀಕ್ಷಿತವಾಗಿ ಬರುವವರನ್ನೆಲ್ಲ ಅವರಿಗೆ ಈ ವಿಷಯದಲ್ಲಿ ಏನಾದರೂ ತಿಳಿದಿರುವುದೆಂಬ ಸಂಭವ ತೋರಿದರೆ, ನಾನು ಈ ಕಲೆಯ ವಿಷಯಗಳಲ್ಲಿ ಅಸಂಖ್ಯಾತ ಪ್ರಶ್ನೆಗಳನ್ನು ಕೇಳುತ್ತಿದ್ದೆನು. ಆದರೆ ಈ ವಿದ್ಯೆ ಗೊತ್ತಿದ್ದುದು ಮಹಿಳೆಯರಿಗೆ ಮಾತ್ರ; ಅದೂ ಬಹಳ ಅಪರೂಪವಾಗಿ, ಎಲ್ಲಿಯಾದರೂ ಮೂಲೆಯಲ್ಲಿ ಅಂತಹ ನೂಲುವವರು ಉಳಿದಿದ್ದರೆ ಅವರ ವಿಷಯ ಗೊತ್ತಿರಬಹುದಾದುದು ಮಹಿಳೆಯರಿಗೆ ಮಾತ್ರವೇ.

೧೯೧೭ನೇ ವರ್ಷದಲ್ಲಿ ಬರೋಡದ ಶಿಕ್ಷಣ ಸಮ್ಮೇಳನದ ಅಧ್ಯಕ್ಷತೆ ವಹಿಸಲು ನನ್ನನ್ನು ನನ್ನ ಗುಜರಾತಿ ಮಿತ್ರರು ಕರೆದುಕೊಂಡು ಹೋದರು. ಅಲ್ಲಿ ನಾನು ಆ ಅದ್ವಿತೀಯಳಾದ ಶ್ರೀಮತಿ ಗಂಗಾಬೆಹನ್ ಮಜುಂದಾರಳನ್ನು ನೋಡಿದೆನು. ಆಕೆ ಆಗ ವಿಧವೆ. ಆದರೆ ಆಕೆಯ ಸಾಹಸಕ್ಕೆ ಕೊನೆಯೇ ಇರಲಿಲ್ಲ. ಸಾಮಾನ್ಯ ಅರ್ಥದಲ್ಲಿ ಆಕೆ ಅಷ್ಟೇನೂ ಶಿಕ್ಷಿತಳಲ್ಲ. ಆದರೆ ಧೈರ್ಯ, ವಿವೇಕ ಇವುಗಳಲ್ಲಿ ಆಕೆ ನಮ್ಮ ಸಾಧಾರಣ ಸುಶಿಕ್ಷಿತ ಸ್ತ್ರೀಯರನ್ನು ಸುಲಭವಾಗಿ ಮೀರಿಸಿದಳು. ಆಕೆ ಆಗಲೇ ಅಸ್ಪೃಶ್ಯತೆಯ ಶಾಪದಿಂದ ಬಿಡಿಸಿಕೊಂಡು, ನಿರ್ಭಯವಾಗಿ ದಮನಿತ ವರ್ಗಗಳ ಸೇವೆ ಮಾಡುತ್ತಿದ್ದಳು. ಆಕೆಗೆ ಸ್ವಂತ ಆಸ್ತಿಯಿದ್ದಿತು ಮತ್ತು ಆಕೆಯ ಅವಶ್ಯಕತೆಗಳು ಬಹಳ ಮಿತವಾಗಿದ್ದವು. ಆಕೆ ದೃಢಕಾಯಳಾಗಿದ್ದಳು; ಎಲ್ಲಿಗೆ ಬೇಕಾದರೂ ನಿರ್ಭಯಳಾಗಿ ಒಬ್ಬಳೇ ಹೋಗುತ್ತಿದ್ದಳು. ಕುದುರೆ ಸವಾರಿ ಆಕೆಗೆ ಚೆನ್ನಾಗಿ

ಅಭ್ಯಾಸವಾಗಿದ್ದಿತು. ಗೋಧ್ರಾ ಸಮ್ಮೇಳನದಲ್ಲಿ ನನಗೆ ಇನ್ನೂ ಚೆನ್ನಾಗಿ ಆಕೆಯ ಪರಿಚಯವಾಯಿತು. ನೂಲುವವರನ್ನು ಕಂಡುಹಿಡಿಯಲು ನಾನು ಪಡುತ್ತಿದ್ದ ಕಷ್ಟದ ಕತೆಯನ್ನು ಆಕೆಗೆ ಹೇಳಿದೆನು. 'ರಾಟೆಯನ್ನು ಹುಡುಕಲು ನಾನು ಶ್ರದ್ಧೆಯಿಂದ ಸತತ ಪ್ರಯತ್ನ ಮಾಡುತ್ತೇನೆ' ಎಂದು ನನಗೆ ವಾಗ್ದಾನ ಮಾಡಿ ಆಕೆ ನನ್ನ ಹೊರೆಯನ್ನು ಕಡಿಮೆ ಮಾಡಿದಳು.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ-೫, ಅಧ್ಯಾಯ-೩೯, 'ದ ಬರ್ತ್ ಆಫ್ ಖಾದಿ'ಯಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೧೬

ಕೊನೆಗೂ ಸಿಕ್ಕಿತು ಚರಕಾ!

ಗುಜರಾತಿನುದ್ದಕ್ಕೂ ಎಡೆಬಿಡದೆ ಅಲೆದ ಗಂಗಾಬೆಹನ್‌ಗೆ ಕೊನೆಗೂ ಬರೋಡ ರಾಜ್ಯದ ವಿಜಾಪುರ ಎಂಬ ಊರಿನಲ್ಲಿ ಚರಕಾ (ರಾಟೆ) ಸಿಕ್ಕಿತು. ವಿಜಾಪುರದಲ್ಲಿ ಅನೇಕರ ಮನೆಯಲ್ಲಿ ಚರಕಾಗಳಿದ್ದರೂ, ಅವು ಕೆಲಸಕ್ಕೆ ಬಾರದ ವಸ್ತುಗಳೆಂದು ಅವರು ಅವನ್ನೆಲ್ಲ ಅಟ್ಟದ ಮೇಲೆ ಒಟ್ಟಿದ್ದರು. ಗಂಗಾಬೆಹನ್ ಆ ನೇಕಾರರನ್ನು ಕಂಡಾಗ, ಅವರು, 'ನೀವು ಹಂಜಿ ಕೊಡಿಸಿದರೆ ಹಾಗೂ ನಾವು ತೆಗೆದ ನೂಲನ್ನು ನೀವು ಕೊಳ್ಳುವುದಿದ್ದರೆ, ನಾವು ಚರಕಾ ತಿರುಗಿಸಲು ಸಿದ್ಧ' ಎಂದರು. ಗಂಗಾಬೆಹನ್ ಈ ಸುದ್ದಿ ಹೇಳಿದಾಗ, ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಆದರೆ ಹಂಜಿ ತರುವುದು ಕಷ್ಟದ ಕೆಲಸವಾಗಿತ್ತು. ಈ ಕಷ್ಟವನ್ನು ಗೆಳೆಯರಾದ –ಈಗ ಅವರಿಲ್ಲ– ಉಮರ್ ಹಾಜಿ ಯೂಸುಫ್ ಸುಭಾನಿಯವರಿಗೆ ಹೇಳಿಕೊಂಡೆ; ತನ್ನ ಗಿರಣಿಯಿಂದ ಸಾಕಷ್ಟು ಹಂಜಿ ಒದಗಿಸುವ ಮೂಲಕ ಸುಭಾನಿ ತಕ್ಷಣ ಈ ಸಮಸ್ಯೆಯನ್ನು ಬಗೆಹರಿಸಿದರು. ಉಮರ್ ಸುಭಾನಿ ಕೊಟ್ಟ ಹಂಜಿಯನ್ನು ಗಂಗಾಬೆಹನ್‌ಗೆ ಕಳಿಸಿದೆ. ಬರಬರುತ್ತಾ ವಿಜಾಪುರದಿಂದ ಎಷ್ಟೊಂದು ನೂಲು ಬರಲಾರಂಭಿಸಿತೆಂದರೆ ಅದನ್ನು ನಿಭಾಯಿಸುವುದು ನನ್ನನ್ನು ಸುಸ್ತು ಮಾಡಿತು.

ಉಮರ್ ಸುಭಾನಿಯವರ ಔದಾರ್ಯವೇನೋ ದೊಡ್ಡದು; ಆದರೆ ಅವರ ಔದಾರ್ಯವನ್ನು ಎಲ್ಲ ಕಾಲಕ್ಕೂ ಬಳಸಿಕೊಳ್ಳುವುದು ಸರಿಯಲ್ಲವೆನ್ನಿಸಿತು. ಹಣ ಕೊಟ್ಟು ಹಂಜಿಯನ್ನು ಕೊಳ್ಳುವುದು ಸರಿಯೇ ಎಂಬ ಪ್ರಶ್ನೆಯನ್ನು ಬಗೆಹರಿಸಿಕೊಳ್ಳಲು ಕೂಡ ನನಗೆ ಸಂಕೋಚವಾಯಿತು. ಅದೇಕೋ ಸರಿ ಅನ್ನಿಸಲಿಲ್ಲ. ಅದಕ್ಕಿಂತ ಮುಖ್ಯವಾಗಿ, ಗಿರಣಿಯಲ್ಲಿ ತಯಾರಾದ ಹಂಜಿಯನ್ನು ಬಳಸುವುದು ಮೂಲತಃ ತಪ್ಪು ಎಂದು ನನಗನ್ನಿಸಿತು. ಗಿರಣಿಯಿಂದ ತಂದ ಹಂಜಿಯನ್ನು ಬಳಸುವುದಾದರೆ,

ಗಿರಣಿಯಿಂದ ತಂದ ನೂಲನ್ನೇಕೆ ಬಳಸಬಾರದು? ನಮ್ಮ ಹಿರೀಕರಿಗೆ ಯಾವ ಗಿರಣಿಗಳೂ ಹಂಜಿ ಒದಗಿಸಿರಲಿಲ್ಲವಲ್ಲ? ಹಾಗಾದರೆ ಅವರು ಹಂಜಿಯನ್ನು ಹೇಗೆ ಮಾಡಿಕೊಳ್ಳುತ್ತಿದ್ದರು? ಇದನ್ನೆಲ್ಲ ಯೋಚಿಸುತ್ತಾ, ಹಂಜಿ ಮಾಡಿಕೊಡುವ ಪಿಂಜಾರರನ್ನು ಹುಡುಕಲು ಗಂಗಾಬೆಹನ್‌ಗೆ ಹೇಳಿದೆ. ಗಂಗಾಬೆಹನ್ ಆ ಕೆಲಸವನ್ನೂ ಮಾಡಿಯೇ ತೀರುವೆನೆಂದು ಆತ್ಮವಿಶ್ವಾಸದಿಂದ ಹೊರಟಳು. ಹತ್ತಿಯನ್ನು ಹಲ್ಲುಹಣಿಗೆಯಿಂದ ಒಪ್ಪ ಮಾಡಿ ಹಂಜಿ ಮಾಡುವ ಒಬ್ಬ ಪಿಂಜಾರನನ್ನು ಈ ಕೆಲಸಕ್ಕೆ ತೊಡಗಿಸಿಯೇಬಿಟ್ಟಳು. ಆ ಕೆಲಸಕ್ಕೆ ಅವನಿಗೆ ಮೂವತ್ತೈದು ರೂಪಾಯಿಯೋ ಅಥವಾ ಅದಕ್ಕಿಂತ ಹೆಚ್ಚೋ ಸಂಬಳವನ್ನು ನಿಗದಿ ಮಾಡಿದೆವು. ಆ ಘಟ್ಟದಲ್ಲಿ ಎಷ್ಟು ಸಂಬಳವಾದರೂ ಅದು ದೊಡ್ಡದಲ್ಲ ಎಂದು ನನಗನ್ನಿಸಿತ್ತು. ಹದ ಮಾಡಿದ ಹತ್ತಿಯಿಂದ ಹಂಜಿ ತೆಗೆಯಬಲ್ಲ ಕೆಲವು ತರುಣರನ್ನೂ ಗಂಗಾಬೆಹನ್ ತಯಾರು ಮಾಡಿದಳು. ನಾನು ಬೊಂಬಾಯಿಯಲ್ಲಿ ಹತ್ತಿಗಾಗಿ ಬೇಡಿದೆ. ಯಶವಂತಪ್ರಸಾದ್ ದೇಸಾಯಿ ಹತ್ತಿ ಮೂಟೆಗಳನ್ನು ಕೊಡುವ ಜವಾಬ್ದಾರಿ ವಹಿಸಿಕೊಂಡರು. ಗಂಗಾಬೆಹನ್ ತಕ್ಷಣ ತನ್ನ ಕೆಲಸವನ್ನು ವಿಸ್ತರಿಸಿದಳು. ವಿಜಾಪುರದಲ್ಲಿ ತಯಾರಾದ ನೂಲನ್ನು ನೇಯಲು ಮಗ್ಗದವರನ್ನು ಕರೆತಂದು ಆಶ್ರಮದಲ್ಲಿ ನೆಲೆಸುವಂತೆ ಮಾಡಿದಳು. 'ವಿಜಾಪುರ ಖಾದಿ' ಬಹುಬೇಗ ಎಲ್ಲೆಡೆ ಹೆಸರಾಯಿತು.

ವಿಜಾಪುರದಲ್ಲಿ ಈ ಬೆಳವಣಿಗೆಗಳು ನಡೆಯುತ್ತಿರುವಾಗಲೇ ಆಶ್ರಮದಲ್ಲಿ ಚರಕಾ ಶರವೇಗದಲ್ಲಿ ನೆಲೆಯೂರತೊಡಗಿತು. ಮಗನ್‌ಲಾಲ್ ಗಾಂಧಿ ಯಂತ್ರಗಳನ್ನು ಕುರಿತಂತೆ ತಮಗಿದ್ದ ಅದ್ಭುತ ಪ್ರತಿಭೆಯನ್ನು ಚರಕಾದ ವಿಷಯದಲ್ಲೂ ಬಳಸಿ, ಅದರಲ್ಲಿ ಅನೇಕ ಉತ್ತಮ ಬದಲಾವಣೆಗಳನ್ನು ಮಾಡಿದರು; ಚರಕಾದ ಚಕ್ರಗಳು ಹಾಗೂ ತಿರುಗುವ ಅಚ್ಚುಗಳು ಆಶ್ರಮದಲ್ಲೇ ತಯಾರಾಗಲಾರಂಭಿಸಿದವು. ಆಶ್ರಮದಲ್ಲಿ ತಯಾರಾದ ಮೊದಲ ಖಾದಿ ವಸ್ತ್ರದ ತಯಾರಿಕೆಯ ವೆಚ್ಚ ಒಂದು ಗಜಕ್ಕೆ ಹದಿನೇಳು ಆಣೆಯಾಗಿತ್ತು. ಅಷ್ಟೇ ಬೆಲೆಗೆ ಈ ಒರಟು ಖಾದಿಯನ್ನು ನನ್ನ ಗೆಳೆಯರಿಗೆ ಮಾರಲು ನಾನು ಹಿಂಜರಿಯಲಿಲ್ಲ. ಅವರೆಲ್ಲಾ ಸ್ವ-ಇಚ್ಛೆಯಿಂದಲೇ ಅಷ್ಟು ಬೆಲೆ ಕೊಟ್ಟು ಈ ಖಾದಿಯನ್ನು ಕೊಂಡರು.

ಇತ್ತ ನಾನು ಬಾಂಬೆಯಲ್ಲಿ ಹಾಸಿಗೆ ಹಿಡಿದು ಮಲಗಿದ್ದೆ; ಆದರೂ ಚರಕಾ ಕುರಿತು ವಿಚಾರಿಸುತ್ತಲೇ ಇದ್ದೆ. ಕೊನೆಗೂ ಚರಕಾದಿಂದ ನೂಲುವ ಇಬ್ಬರು ಹೆಂಗಸರು ಇದ್ದಕ್ಕಿದ್ದಂತೆ ಸಿಕ್ಕರು. ಅವರು ಒಂದು ಸೇರು- ಅಂದರೆ, ಇಪ್ಪತ್ತೆಂಟು ತೊಲ- ನೂಲು ತೆಗೆಯಲು ಒಂದು ರೂಪಾಯಿ ತೆಗೆದುಕೊಳ್ಳುತ್ತಿದ್ದರು. ಅಲ್ಲಿಯತನಕ ಖಾದಿ ತಯಾರಿಕೆಯ ಒಟ್ಟು ಸ್ವರೂಪದ ಬಗ್ಗೆ ನಾನು ಪೂರಾ ಅಜ್ಞಾನಿಯಾಗಿದ್ದೆ. ಆಗ ನನಗೆ ತಕ್ಷಣ ಬೇಕಾದದ್ದು ಕೈಯಿಂದ ನೂತ ನೂಲು ಹಾಗೂ ನೂಲಬಲ್ಲ

ಮಹಿಳೆಯರು. ಈ ನೂಲು ಪಡೆಯಲು ಯಾವ ಬೆಲೆಯೂ ದೊಡ್ಡದಲ್ಲ ಎಂದು ನಾನು ತೀರ್ಮಾನಿಸಿದ್ದೆ. ಆದರೆ ವಿಜಾಪುರದಲ್ಲಿ ತಯಾರಾಗುತ್ತಿದ್ದ ಖಾದಿಗೆ ಗಂಗಾಬೆಹನ್ ಕೊಡುತ್ತಿದ್ದ ಬೆಲೆಗೆ ನಾನು ಕೊಡುತ್ತಿದ್ದ ಬೆಲೆಯನ್ನು ಹೋಲಿಸಿ ನೋಡಿದಾಗ, ನಾನು ಇಲ್ಲಿ ಮೋಸ ಹೋಗಿರುವುದು ತಿಳಿಯಿತು. ಆದರೆ ಆಶ್ರಮದಲ್ಲಿ ನೂಲುತ್ತಿದ್ದ ಆ ಇಬ್ಬರೂ ಬೆಲೆ ಕಡಿಮೆ ಮಾಡಲು ಒಪ್ಪಲಿಲ್ಲ. ಹೀಗಾಗಿ ಅವರ ಸೇವೆಯನ್ನು ನಿಲ್ಲಿಸುವುದು ಅನಿವಾರ್ಯವಾಯಿತು. ಆದರೆ ಆ ಮಹಿಳೆಯರು ಆಶ್ರಮಕ್ಕೆ ಬಂದ ಉದ್ದೇಶ ಸಫಲವಾಗಿತ್ತು. ಅವರು ಶ್ರೀಮತಿ ಅವಂತಿಕಾ ಬಾಯಿ, ಶಂಕರ್‌ಲಾಲ್ ಬ್ಯಾಂಕರ್ ಅವರ ವಿಧವೆ ತಾಯಿ ಶ್ರೀಮತಿ ರಮಿಬಾಯಿ ಕಾಮ್‌ದಾರ್, ಶಂಕರಲಾಲ್ ಬ್ಯಾಂಕರ್ ಹಾಗೂ ವಸುಮತಿ ಬೆಹನ್ ಇವರಿಗೆ ತಕಲಿ ತಿರುಗಿಸುವುದನ್ನು ಕಲಿಸಿದ್ದರು. ಚರಕಾ ನನ್ನ ಕೊಠಡಿಯಲ್ಲಿ ಸಡಗರದಿಂದ ತಿರುಗಲಾರಂಭಿಸಿತು. ನನ್ನ ಆರೋಗ್ಯ ಸುಧಾರಿಸುವಲ್ಲಿ ಚರಕಾದ ಝೇಂಕಾರದ ಪಾತ್ರವೇನೂ ಕಡಿಮೆಯಿರಲಿಲ್ಲ ಎಂದು ಯಾವುದೇ ಉತ್ಪ್ರೇಕ್ಷೆಯೂ ಇಲ್ಲದೆ ಹೇಳಬಲ್ಲೆ. ಚರಕಾದ ಈ ಪರಿಣಾಮ ದೈಹಿಕ ಎನ್ನುವುದಕ್ಕಿಂತ ಹೆಚ್ಚು ಮಾನಸಿಕವೇ ಆಗಿತ್ತು ಎಂಬುದನ್ನೂ ನಾನು ಒಪ್ಪಲು ಸಿದ್ಧನಿರುವೆ. ಆದರೆ, ಒಬ್ಬ ಮನುಷ್ಯನನ್ನು ಆರೋಗ್ಯವಾಗಿಡುವಲ್ಲಿ ಅಥವಾ ಅವನನ್ನು ಕಾಯಿಲೆಗೆ ಈಡು ಮಾಡುವಲ್ಲಿ ಮನಸ್ಸಿನ ಕೊಡುಗೆಯೇನು ಕಡಿಮೆಯೇ? ಆ ಗಳಿಗೆಯಲ್ಲಿ ನಾನೂ ಚರಕಾದ ಮೇಲೆ ಕೈಯಾಡಿಸಲೆತ್ನಿಸಿದೆ; ಆದರೆ ಹೆಚ್ಚೇನೂ ಕೆಲಸ ಸಾಗಲಿಲ್ಲ.

ಈ ಬೊಂಬಾಯಿಯಲ್ಲಿ, ಕೈಯಿಂದ ಮಾಡಿದ ಹಂಜಿಗಳನ್ನು ಎಲ್ಲಿಂದ ಪಡೆಯುವುದು? ರೇವಾಶಂಕರರ ಮನೆ ಬಳಿ ಹತ್ತಿ ಹದ ಮಾಡುವ ಪಿಂಜಾರನೊಬ್ಬ ಆಗಾಗ ತನ್ನ ಬಿಲ್ಲನ್ನು ಟೊಂಯ್‌ಗುಟ್ಟಿಸುತ್ತಾ ಹೋಗುತ್ತಾ ಇರುತ್ತಿದ್ದ. ಅವನನ್ನು ಕರೆಸಿ ಕೇಳಿದಾಗ ಅವನು ಮೆತ್ತೆಗಳಿಗಾಗಿ ಹತ್ತಿಯನ್ನು ಕೊಡವಿ ಹದ ಮಾಡುವವನು ಎಂಬುದು ತಿಳಿಯಿತು. ಅವನು ಹಂಜಿಯನ್ನು ಹದ ಮಾಡಿ ಹತ್ತಿ ಮಾಡಲು ಒಪ್ಪಿದರೂ ದುಬಾರಿ ಕೂಲಿಯನ್ನೇ ಕೇಳಿದ. ಆದರೂ ನಾನು ಅಷ್ಟನ್ನು ಕೊಟ್ಟೆ.

ಹೀಗೆ ತಯಾರಾದ ನೂಲನ್ನು ಪವಿತ್ರ ಏಕಾದಶಿಗಾಗಿ ಹಾರಗಳನ್ನು ಮಾಡಿಕೊಳ್ಳಲು ಕೆಲವು ವೈಷ್ಣವ ಗೆಳೆಯರಿಗೆ ಕೊಟ್ಟೆ. ಸಾರ್ಜೆಂಟ್ ಶಿವ್‌ಜಿ ಬೊಂಬಾಯಿಯಲ್ಲಿ ಚರಕಾ ನೂಲುವುದನ್ನು ಹೇಳಿಕೊಡುವ ತರಗತಿಗಳನ್ನು ಶುರು ಮಾಡಿದರು. ಈ ಎಲ್ಲ ಪ್ರಯೋಗಗಳಿಗೆ ಸಾಕಷ್ಟು ಹಣ ಬೇಕಾಗುತ್ತಿತ್ತು. ಆದರೆ ಖಾದಿಯಲ್ಲಿ ನಂಬಿಕೆಯಿಟ್ಟ ದೇಶಭಕ್ತ ಗೆಳೆಯರು, ತಾಯ್ನಾಡನ್ನು ಪ್ರೀತಿಸುವವರು ಆ ಹಣವನ್ನು ಕೊಡಲು ತಂತಾವೇ ಮುಂದೆ ಬಂದರು. ನನ್ನ ವಿನಮ್ರ ಅಭಿಪ್ರಾಯದ ಪ್ರಕಾರ, ಹೀಗೆ ವೆಚ್ಚವಾದ ಹಣ ವ್ಯರ್ಥವಾಗಲಿಲ್ಲ. ಅದು ನಮಗೆ ಅನುಭವದ ಸಮೃದ್ಧ ನಿಧಿಯನ್ನೇ

ತಂದುಕೊಟ್ಟಿತು; ಜೊತೆಗೆ, ಚರಕಾದ ಸಾಧ್ಯತೆಗಳನ್ನೂ, ನಮ್ಮ ಮಿತಿಗಳನ್ನೂ ತೋರಿಸಿಕೊಟ್ಟಿತು.

ಇನ್ನು ಮುಂದೆ ನನ್ನ ಉಡುಗೆಗಳಲ್ಲಿ ಖಾದಿಯನ್ನೇ ಬಳಸಬೇಕೆಂಬ ನನ್ನ ಚಡಪಡಿಕೆ ಹೆಚ್ಚತೊಡಗಿತು. ನಾನು ಆಗ ಭಾರತದ ಗಿರಣಿಗಳಲ್ಲಿ ತಯಾರಾದ ಧೋತರವನ್ನೇ ಇನ್ನೂ ಉಡುತ್ತಿದ್ದೆ. ಆಶ್ರಮದಲ್ಲಿ ಹಾಗೂ ವಿಜಾಪುರದಲ್ಲಿ ತಯಾರಾದ ಒರಟು ಖಾದಿ ಮೂವತ್ತು ಅಂಗುಲ ಅಗಲವಷ್ಟೇ ಇರುತ್ತಿತ್ತು. ಇನ್ನು ಒಂದು ತಿಂಗಳೊಳಗೆ ನನಗೆ ನಲವತ್ತೈದು ಅಂಗುಲ ಅಗಲದ ಧೋತರವನ್ನು ಒದಗಿಸಿಕೊಡದಿದ್ದರೆ, ನಾನು ಈ ಒರಟಾದ, ಸಣ್ಣ ಅಳತೆಯ ಖಾದಿಯನ್ನೇ ಉಡುತ್ತೇನೆಂದು ಗಂಗಾಬೆಹನ್‌ಗೆ ಖಡಾಖಂಡಿತವಾಗಿ ಹೇಳಿಬಿಟ್ಟೆ. ಈ ಗಡುವು ಗಂಗಾಬೆಹನಳನ್ನು ಬೆಚ್ಚಿಸುವಂತಿತ್ತು. ಆದರೆ ಆ ಸವಾಲನ್ನು ಆಕೆ ಅಷ್ಟೇ ಧೈರ್ಯದಿಂದ ಕೈಗೆತ್ತಿಕೊಂಡಳು. ಮುಂದಿನ ಒಂದು ತಿಂಗಳೊಳಗೆ ನಲವತ್ತೈದು ಇಂಚು ಅಗಲದ ಖಾದಿ ಧೋತರವನ್ನು ನನಗೆ ಕಳಿಸಿದಳು; ಅದು ನನಗೆ ಸರಿಯಾಗಿ ಹೊಂದುತ್ತಿತ್ತು. ಅದೇ ಸರಿಸುಮಾರಿಗೆ ಲಕ್ಷ್ಮಿದಾಸರು ಲಾಥಿ ಎಂಬ ಊರಿನಿಂದ ನೇಕಾರ ರಾಮ್‌ಜಿ ಮತ್ತು ಅವನ ಪತ್ನಿ ಗಂಗಾಬೆಹನ್ ಇಬ್ಬರನ್ನೂ ಆಶ್ರಮಕ್ಕೆ ಕರೆತಂದರು. ಈ ಗಂಡಹೆಂಡಿರಿಬ್ಬರೂ ಆಶ್ರಮದಲ್ಲಿ ಉದ್ದ ಅಳತೆಯ ಖಾದಿ ಧೋತರಗಳನ್ನು ನೇಯ್ದು ಕೊಡತೊಡಗಿದರು. ಖಾದಿಯನ್ನು ಎಲ್ಲ ಕಡೆ ಹಬ್ಬಿಸುವಲ್ಲಿ ಈ ಜೋಡಿಯ ಕೊಡುಗೆ ಯಾವ ದೃಷ್ಟಿಯಿಂದಲೂ ಕಡಿಮೆಯೆನ್ನುವಂತಿಲ್ಲ. ಇವರಿಬ್ಬರೂ ಗುಜರಾತಿನ ಎಷ್ಟೋ ಜನರಿಗಷ್ಟೇ ಅಲ್ಲ, ಗುಜರಾತಿನ ಹೊರಗಿರುವ ಹಲವರಿಗೂ ಚರಕಾದಿಂದ ತಯಾರಾದ ನೂಲನ್ನು ನೇಯುವ ಕಲೆಯನ್ನು ಕಲಿಸಿದರು.

ಮಗ್ಗದೆದುರು ಕೂತು ನೇಯುವ ಗಂಗಾಬೆಹನ್‌ಳನ್ನು ನೋಡುವುದೇ ಒಂದು ಎದೆ ತುಂಬಿ ಬರುವ ದೃಶ್ಯ... ಈ ಅನಕ್ಷರಸ್ಥಳಾದ, ಆದರೆ ಸುಸಂಸ್ಕೃತಳಾದ, ಸೋದರಿ ಮಗ್ಗದೆದುರು ಕೂತು ನೇಯುತ್ತಿರುವಾಗ ಅದರಲ್ಲಿ ಎಷ್ಟು ಮುಳುಗಿರುತ್ತಾಳೆಂದರೆ, ಅವಳ ಗಮನವನ್ನು ಬೇರೆಡೆಗೆ ಸೆಳೆಯುವುದು ತೀರಾ ಕಷ್ಟ; ಜೊತೆಗೆ, ತನ್ನ ಪ್ರೀತಿಯ ಮಗ್ಗದಿಂದ ಆಕೆಯ ಕಣ್ಣು ಬೇರೆಡೆಗೆ ಹೊರಳುವಂತೆ ಮಾಡುವುದು ಇನ್ನೂ ಕಷ್ಟ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ–೫, ಅಧ್ಯಾಯ–೪೦, 'ಫೌಂಡ್ ಅಟ್ ಲಾಸ್ಟ್!'ನ ಜೊತೆಗೆ, ತ್ರಿದಿಪ್ ಸುಹೃದ್ ಅವರು ಹೊರ ತಂದಿರುವ ಗಾಂಧೀಜಿಯವರ ಆತ್ಮಚರಿತ್ರೆಯ 'ಕ್ರಿಟಿಕಲ್ ಎಡಿಶನ್'ನಲ್ಲಿ ಸೇರಿಸಲಾಗಿರುವ ಗಾಂಧೀಜಿಯವರ ಗುಜರಾತಿ ಮೂಲ ಪಠ್ಯದ ಕೆಲವು ಅಂಶಗಳನ್ನೂ ಒಳಗೊಂಡಿದೆ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೭

ಬೀಳ್ಕೊಳ್ಳುವೆನು

ಇನ್ನು ಈ ಅಧ್ಯಾಯಗಳನ್ನು ಮುಗಿಸುವ ಕಾಲ ಬಂದಿದೆ. ಇಲ್ಲಿಂದ ಮುಂದೆ ನನ್ನ ಜೀವನ ಎಷ್ಟು ಬಹಿರಂಗವಾಗಿದೆಯೆಂದರೆ, ಸಾರ್ವಜನಿಕರಿಗೆ ತಿಳಿಯದಿರುವ ಸಂಗತಿ ಏನೇನೂ ಇಲ್ಲ. ಅಲ್ಲದೆ ೧೯೨೧ರಿಂದ ನಾನು ಕಾಂಗ್ರೆಸ್ ಮುಖಂಡರೊಂದಿಗೆ ಎಷ್ಟು ನಿಕಟ ಸಂಬಂಧವನ್ನಿಟ್ಟುಕೊಂಡು ಕೆಲಸ ಮಾಡಿದ್ದೇನೆಂದರೆ, ಅವರಿಗೂ ನನಗೂ ಇರುವ ಸಂಬಂಧವನ್ನು ಹೇಳದೆ, ಅಲ್ಲಿಂದ ಈಚಿನ ಯಾವ ಘಟನೆಯನ್ನೂ ಅರ್ಥಪೂರ್ಣವಾಗಿ ವಿವರಿಸುವುದು ನನಗೆ ಸಾಧ್ಯವಿಲ್ಲ. ಈ ಸಂಬಂಧಗಳು ಇನ್ನೂ ಹಸಿರಾಗಿವೆ. ದೇಶಬಂಧು ಶ್ರದ್ಧಾನಂದಜೀ, ಹಕೀಂ ಸಾಹೇಬ್, ಲಾಲಾಜೀ ನಮ್ಮ ಜತೆಯಲ್ಲಿ ಇಂದು ಇಲ್ಲದಿದ್ದರೂ, ನಮ್ಮ ಸುದೈವದಿಂದ ನುರಿತ ಕಾಂಗ್ರೆಸ್ಸಿಗರ ದೊಡ್ಡ ಸಮೂಹವೇ ನಮ್ಮ ಜತೆಗೆ ಇದ್ದು ನಮ್ಮೊಂದಿಗೆ ಕೆಲಸ ಮಾಡುತ್ತಿದೆ. ಕಾಂಗ್ರೆಸ್‌ನಲ್ಲಿ ನಾನು ಮೇಲೆ ಹೇಳಿದ ದೊಡ್ಡ ಬದಲಾವಣೆಗಳ ನಂತರ, ಅದರ ಇತಿಹಾಸ ಇನ್ನೂ ರೂಪುಗೊಳ್ಳುತ್ತಿದೆ. ಕಳೆದ ಏಳು ವರುಷಗಳಿಂದ ನನ್ನ ಮುಖ್ಯ ಪ್ರಯೋಗಗಳನ್ನೆಲ್ಲ ಕಾಂಗ್ರೆಸ್ಸಿನ ಮೂಲಕವೇ ನಡೆಸಿದ್ದೇನೆ. ಆದುದರಿಂದ ಈ ಪ್ರಯೋಗಗಳ ವಿವರಣೆಯನ್ನು ಮುಂದುವರಿಸುವುದಾದರೆ ಕಾಂಗ್ರೆಸ್ ಮುಖಂಡರ ವಿಷಯವನ್ನು ಹೇಳದಿರುವುದು ಸಾಧ್ಯವಿಲ್ಲ. ಅದರಲ್ಲೂ ಈಗಂತೂ ಹಾಗೆ ಮಾಡಲಾರೆ; ಮತ್ತಾವ ಕಾರಣಕ್ಕಾಗಿ ಅಲ್ಲದಿದ್ದರೂ ಇದು ಉಚಿತವಲ್ಲ ಎನ್ನುವ ಕಾರಣಕ್ಕಾಗಿ. ಕೊನೆಯದಾಗಿ, ಈವರೆಗಿನ ನನ್ನ ಪ್ರಯೋಗಗಳಿಂದ ದೊರೆತ ನಿರ್ಣಯಗಳನ್ನು ನಾವು ಅಂತಿಮ ತೀರ್ಮಾನಗಳೆಂದು ಪರಿಗಣಿಸಲು ಆಗುವುದಿಲ್ಲ. ಆದುದರಿಂದ ಈ ಕಥೆಯನ್ನು ಇಲ್ಲಿಗೆ ಮುಗಿಸುವುದು ನನ್ನ ಸರಳ ಕರ್ತವ್ಯ. ವಾಸ್ತವವಾಗಿ ನನ್ನ ಲೇಖನಿ ಮುಂದುವರಿಯಲು ಸ್ವಾಭಾವಿಕವಾಗಿಯೇ ಹಿಂಜರಿಯುತ್ತದೆ.

ವಾಚಕರಿಂದ ಬೀಳ್ಕೊಳ್ಳುವುದು ನನ್ನ ಮನಸ್ಸಿಗೆ ನೋವಾಗದೇ ಇಲ್ಲ. ನನ್ನ ಪ್ರಯೋಗಗಳಿಗೆ ನಾನು ಹೆಚ್ಚು ಬೆಲೆಯನ್ನು ಕಟ್ಟುತ್ತೇನೆ. ಅವುಗಳನ್ನು ಸತ್ಯಬದ್ಧವಾಗಿ ವರ್ಣಿಸುವಲ್ಲಿ ಯಶಸ್ವಿಯಾಗಿದ್ದೇನೋ ಇಲ್ಲವೋ ನನಗೆ ತಿಳಿಯದು. ಪ್ರಾಮಾಣಿಕವಾದ ನಿರೂಪಣೆಯನ್ನು ಮಾಡಲು ನಾನು ಸರ್ವ ಪ್ರಯತ್ನಗಳನ್ನೂ ಮಾಡಿದ್ದೇನೆಂದು ಮಾತ್ರ ಹೇಳಬಲ್ಲೆ. ಸತ್ಯವು ನನಗೆ ಹೇಗೆ ತೋರಿತೋ ಹಾಗೆ ವಿವರಿಸುವುದು ಹಾಗೂ ನಾನು ಆ ಸತ್ಯವನ್ನು ಕಂಡುಕೊಂಡ ಮಾರ್ಗವನ್ನು ವಿವರಿಸುವುದು ನನ್ನ ನಿರಂತರ ಪ್ರಯತ್ನವಾಗಿದೆ. ಇವನ್ನೆಲ್ಲ ಓದುಗರಿಗೆ ವಿವರಿಸಿ ಹೇಳುವಾಗ ನನಗೆ ವರ್ಣನಾತೀತವಾದ ಮಾನಸಿಕ ಶಾಂತಿ ಸಿಕ್ಕಿದೆ; ಯಾಕೆಂದರೆ ಇದು ಓದುಗರಲ್ಲಿ ಸತ್ಯ, ಅಹಿಂಸೆಗಳಲ್ಲಿ ನಂಬಿಕೆ ಹುಟ್ಟಿಸಬಹುದೆಂಬುದು ನನ್ನ ನೆಚ್ಚಿನ ಆಸೆಯಾಗಿದೆ.

ಸತ್ಯವಲ್ಲದೆ ಬೇರೆ ದೇವರಿಲ್ಲ ಎಂಬುದು ಅನೇಕ ಅನುಭವಗಳಿಂದ ನನಗೆ ಮನವರಿಕೆಯಾಗಿದೆ. ಈ ಕಥೆಯ ಪ್ರತಿ ಪುಟವೂ ಅಹಿಂಸೆಯಿಲ್ಲದೆ ಸತ್ಯ ಸಾಕ್ಷಾತ್ಕಾರ ಸಾಧ್ಯವಿಲ್ಲ ಎಂಬುದನ್ನು ವಾಚಕರಿಗೆ ಸಾರಿ ಹೇಳದಿದ್ದಲ್ಲಿ ಇದನ್ನು ಬರೆಯಲು ಪಟ್ಟ ಶ್ರಮವೆಲ್ಲ ವ್ಯರ್ಥವಾಯಿತೆಂದು ಭಾವಿಸುತ್ತೇನೆ. ಈ ಕಾರ್ಯದಲ್ಲಿ ನನ್ನ ಪ್ರಯತ್ನ ಫಲರಹಿತವಾದರೂ, ದೋಷವು ಅಹಿಂಸೆಯ ಸಾಧಕನದೇ ಹೊರತು ಆ ತತ್ವದ್ದಲ್ಲವೆಂಬುದನ್ನು ವಾಚಕರು ಅರಿಯಲಿ. ಏಕೆಂದರೆ ಅಹಿಂಸೆಯ ಸಿದ್ಧಿಗಾಗಿ ನನ್ನ ಪ್ರಯತ್ನಗಳು ಎಷ್ಟೇ ಪ್ರಾಮಾಣಿಕವಾಗಿದ್ದರೂ ಅವು ಅಪರಿಪೂರ್ಣ ಮತ್ತು ಅಪೂರ್ಣವಾಗಿವೆ. ಸತ್ಯದ ಪ್ರಕಾಶ ವರ್ಣನಾತೀತ. ನಿತ್ಯವೂ ನಾವು ನೋಡುವ ಸೂರ್ಯನಿಗಿಂತ ದಶಲಕ್ಷ ಸಹಸ್ರಮಡಿ ಉಜ್ವಲ. ಅದರ ನೋಟ ಎಲ್ಲಿಯೋ ಒಂದೊಂದು ಸಲ ನನ್ನ ಕಣ್ಣಿಗೆ ಬಿದ್ದು ತತ್‌ಕ್ಷಣ ಮರೆಯಾಗಿದೆ. ವಾಸ್ತವವಾಗಿ ನಾನು ನೋಡಿರುವುದು ಅದ್ಭುತ ಕೋಟಿ ಸೂರ್ಯಪ್ರಕಾಶದ ಒಂದು ಕಿರಣ ಮಾತ್ರ. ಆದರೆ ನನ್ನ ಪ್ರಯೋಗಗಳ ಫಲವಾಗಿ ನಾನು ಇಷ್ಟನ್ನು ಮಾತ್ರ ದೃಢತೆಯಿಂದ ಹೇಳಬಲ್ಲೆ: ಸತ್ಯದ ನಿಜವಾದ ದರ್ಶನವಾಗುವುದು ಅಹಿಂಸೆಯ ಸಾಕ್ಷಾತ್ಕಾರವಾದ ನಂತರವೇ.

ಸರ್ವವ್ಯಾಪಿಯಾದ ಸರ್ವಾಂತರ್ಯಾಮಿಯಾದ ಸತ್ಯದ ದರ್ಶನವನ್ನು ಸಾಕ್ಷಾತ್ತಾಗಿ ಮಾಡಬೇಕಾದರೆ, ಸಕಲಜೀವಿಗಳನ್ನೂ ತನ್ನಂತೆ ಪ್ರೀತಿಸಲು ಶಕ್ತನಾಗಬೇಕು. ಈ ಧ್ಯೇಯ ಸಾಧನೆಗಾಗಿ ಪ್ರಯತ್ನಿಸುವವನು ಜೀವನದ ಯಾವ ಕ್ಷೇತ್ರದಿಂದಲೂ ಹೊರತಾಗಿ ನಿಲ್ಲುವುದು ಸಾಧ್ಯವಿಲ್ಲ. ಆದುದರಿಂದಲೇ ನನ್ನ ಸತ್ಯಪ್ರಿಯತೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಎಳೆದಿದೆ. ಧರ್ಮಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲವೆಂದು ಹೇಳುವವರಿಗೆ ಧರ್ಮವೆಂದರೇನೆಂಬುದು ಗೊತ್ತಿಲ್ಲವೆಂದು ನಾನು ನಿಸ್ಸಂದೇಹವಾಗಿ, ಆದರೂ ಪೂರ್ಣ ನಮ್ರತೆಯಿಂದ ಹೇಳಬಲ್ಲೆ.

ಆತ್ಮಶುದ್ಧಿಯಿಲ್ಲದೆ ಎಲ್ಲಾ ಜೀವಿಗಳೊಂದಿಗೂ ಒಂದಾಗುವುದು ಅಸಾಧ್ಯ. ಆತ್ಮಶುದ್ಧಿಯಿಲ್ಲದೆ ಅಹಿಂಸಾ ಧರ್ಮವನ್ನು ಅನುಸರಿಸುತ್ತೇನೆನ್ನುವುದು ಅಸಾಧ್ಯ. ಹೃದಯ ಶುದ್ಧಿಯಿಲ್ಲದವರಿಗೆ ಎಂದಿಗೂ ಪರಮಾತ್ಮನ ಸಾಕ್ಷಾತ್ಕಾರವಾಗುವುದಿಲ್ಲ. ಆದುದರಿಂದ ಆತ್ಮಶುದ್ಧಿಯೆಂದರೆ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಶುದ್ಧಿ ಎಂದು ಅರ್ಥವಾಗಬೇಕು. ಶುದ್ಧಿಯ ಸ್ವಭಾವ ಎಲ್ಲೆಡೆಯೂ ಹರಡುವುದಾದುದರಿಂದ, ಒಬ್ಬನು ಆತ್ಮಶುದ್ಧಿಯುಳ್ಳವನಾದರೆ, ಅವನ ಸುತ್ತಲ ವಾತಾವರಣವೆಲ್ಲ ಶುದ್ಧವಾಗುವುದು.

ಆದರೆ ಆತ್ಮಶುದ್ಧಿಯ ಮಾರ್ಗ ಕಠಿಣವಾದುದು ಹಾಗೂ ಕಡಿದಾದುದು. ಇದನ್ನು ನಾನು ಪ್ರತಿಕ್ಷಣವೂ ಅನುಭವಿಸಿದ್ದೇನೆ. ಪೂರ್ಣಶುದ್ಧತೆಯನ್ನು ಸಾಧಿಸಬೇಕಾದರೆ ಕಾಯಾ, ವಾಚಾ, ಮನಸಾ ಪೂರ್ಣ ನಿರ್ವಿಕಾರರಾಗಬೇಕು. ಪ್ರೀತಿ, ದ್ವೇಷ, ರಾಗ, ತಿರಸ್ಕಾರ ಮುಂತಾದ ದ್ವಂದ್ವಗಳಿಂದ ಮುಕ್ತರಾಗಬೇಕು. ನಾನು ಅವಿಚ್ಛಿನ್ನವಾಗಿ ಪ್ರಯತ್ನ ಪಡುತ್ತಿದ್ದರೂ ಆ ತ್ರಿಕರಣ ಶುದ್ಧಿಯನ್ನು ಇನ್ನೂ ಸಾಧಿಸಿಕೊಂಡಿಲ್ಲವೆಂಬುದು ನನಗೆ ಗೊತ್ತು. ಆದುದರಿಂದಲೇ ಜಗತ್ತಿನ ಹೊಗಳಿಕೆಯಿಂದ ನನಗೆ ಸಂತೋಷ ವಾಗುವುದಿಲ್ಲ. ನಿಜವಾಗಿ ಅದು ಅನೇಕ ವೇಳೆ ನನ್ನ ಮನಸ್ಸನ್ನು ನೋಯಿಸುತ್ತದೆ. ಶಸ್ತ್ರಯುದ್ಧದಿಂದ ಬಾಹ್ಯ ಜಗತ್ತನ್ನು ಜಯಿಸುವುದಕ್ಕಿಂತ, ಸೂಕ್ಷ್ಮವಾದ ತೀವ್ರಕಾಮನೆ ಗಳನ್ನು ಗೆಲ್ಲುವುದು ಹೆಚ್ಚು ಕಷ್ಟವೆಂದು ನನಗೆ ತೋರುತ್ತದೆ. ಭಾರತಕ್ಕೆ ನಾನು ಹಿಂದಿರುಗಿದ ನಂತರವೂ ನನ್ನೊಳಗೆ ಸುಪ್ತವಾಗಿರುವ ಕಾಮನೆಗಳು ನನ್ನ ಅನುಭವಕ್ಕೆ ಬಂದಿವೆ. ಈ ಅರಿವು ನನ್ನನ್ನು ಪರಾಜಿತಗೊಳಿಸದಿದ್ದರೂ, ಕಸಿವಿಸಿಗೊಳಿಸಿದೆ. ಸತ್ಯದೊಂದಿಗಿನ ನನ್ನ ಪ್ರಯೋಗಗಳು ನನಗೆ ಅಪಾರ ಆನಂದವನ್ನು ನೀಡಿವೆ; ಈಗಲೂ ಆನಂದ ನೀಡುತ್ತಿವೆ. ಆದರೆ ಇನ್ನೂ ಕ್ರಮಿಸಬೇಕಾದ ಕಠಿಣ ಮಾರ್ಗ ಮುಂದೆ ಇರುವುದು ನನಗೆ ಗೊತ್ತು. ನನ್ನನ್ನು ನಾನು ಶೂನ್ಯವನ್ನಾಗಿ ಮಾಡಿಕೊಳ್ಳಬೇಕು. ಎಲ್ಲಿಯವರೆಗೆ ಮನುಷ್ಯ ತನ್ನ ಸ್ವಂತ ಇಚ್ಛೆಯಿಂದ ತಾನು ಎಲ್ಲರಿಗಿಂತಲೂ ಕಿರಿಯ ಎಂದು ಭಾವಿಸುವುದಿಲ್ಲವೋ, ಅಲ್ಲಿಯವರೆಗೆ ಮನುಷ್ಯನಿಗೆ ಮೋಕ್ಷವಿಲ್ಲ. ನಮ್ರತೆಯ ಅಂತಿಮ ತುದಿಯೇ ಅಹಿಂಸೆ. ಈ ನಮ್ರತೆಯಿರದಿದ್ದರೆ ಎಂದೆಂದಿಗೂ ಮೋಕ್ಷ ಸಾಧ್ಯವಿಲ್ಲ ಎನ್ನುವುದನ್ನು ನನ್ನ ಅನುಭವದಿಂದ ಕಲಿತ ಪಾಠಗಳು ಹೇಳಿಕೊಟ್ಟಿವೆ.

ಇಂಥ ನಮ್ರತೆಗಾಗಿ ಪ್ರಾರ್ಥಿಸುತ್ತಾ, ಈ ನನ್ನ ಪ್ರಾರ್ಥನೆಯಲ್ಲಿ ಜಗತ್ತೂ ಸೇರಿಕೊಳ್ಳಲಿ ಎಂದು ಕೇಳಿಕೊಳ್ಳುತ್ತಾ, ಕೊನೇ ಪಕ್ಷ ತಾತ್ಕಾಲಿಕವಾಗಿಯಾದರೂ ಈ ಅಧ್ಯಾಯಗಳನ್ನು ಮುಗಿಸುತ್ತಿದ್ದೇನೆ.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಕೊನೆಯ ಅಧ್ಯಾಯ, 'ಫೇರ್ ವೆಲ್' ಜೊತೆಗೆ, ತ್ರಿದಿಪ್ ಸುಹೃದ್ ಅವರು ಹೊರ ತಂದಿರುವ ಗಾಂಧೀಜಿಯವರ ಆತ್ಮಚರಿತ್ರೆಯ 'ಕ್ರಿಟಿಕಲ್ ಎಡಿಶನ್'ನಲ್ಲಿ ಸೇರಿಸಲಾಗಿರುವ ಗಾಂಧೀಜಿಯವರ ಗುಜರಾತಿ ಮೂಲ ಪಠ್ಯದ ಕೆಲವು ಅಂಶಗಳನ್ನೂ ಈ ಅನುವಾದ ಒಳಗೊಂಡಿದೆ.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೧೮

ಮಹಿಳೆಯರ ಒಡನಾಟ

ನನ್ನ ಮೈಗೆ ಮಸಾಜ್ ಮಾಡಿದ್ದಕ್ಕಾಗಿ ಹಾಗೂ ವೈದ್ಯಕೀಯ ಅಗತ್ಯಕ್ಕೆ ಅನುಗುಣವಾಗಿ ಸ್ನಾನ ಮಾಡಿಸಿದ 'ಅಪರಾಧ'ಕ್ಕಾಗಿ ಬಡಪಾಯಿ ಡಾ. ಸುಶೀಲಾ ನಯ್ಯರ್ ಅವರನ್ನು [ಪತ್ರಿಕೆಯೊಂದರಲ್ಲಿ] ಸಾರ್ವಜನಿಕ ಚರ್ಚೆಗೆ ಗುರಿಪಡಿಸಲಾಗಿದೆ. ನನ್ನ ಜೊತೆಗಿರುವ ಜನರಲ್ಲಿ ಈ ಎರಡೂ ಕೆಲಸ ಮಾಡಲು ಅತ್ಯಂತ ವಿದ್ಯಾರ್ಹತೆಯಿರುವ ವ್ಯಕ್ತಿಯೆಂದರೆ ಡಾ. ಸುಶೀಲಾ. ಈ ಬಗ್ಗೆ ಕುತೂಹಲಿಗಳಾಗಿರುವ ಜನರಿಗೆ ಹೇಳಬೇಕಾದ ಕೆಲವು ಮಾತುಗಳಿವೆ: ಈ ಚಟುವಟಿಕೆಗಳೆಲ್ಲ ಬಹಿರಂಗವಾಗಿ ನಡೆಯುವಂಥವು. ಇಡೀ ಚಟುವಟಿಕೆ ಒಂದರಿಂದ ಒಂದೂವರೆ ಗಂಟೆ ಕಾಲ ನಡೆಯುತ್ತದೆ. ಆ ನಡುವೆ ನಾನು ನಿದ್ದೆ ಹೋಗುವುದೂ ಉಂಟು; ನಡುನಡುವೆ ಪ್ಯಾರೇಲಾಲ್, ಮಹದೇವ ದೇಸಾಯಿ ಅಥವಾ ಇನ್ನಿತರ ಕಾರ್ಯಕರ್ತರ ಜೊತೆ ಕೆಲವು ಬಗೆಯ ಕೆಲಸಗಳಲ್ಲಿ ತೊಡಗಿರುವುದೂ ಉಂಟು.

ನಾನು ಬಲ್ಲಂತೆ, ಈ ಸ್ನಾನ, ಮಸಾಜುಗಳನ್ನು ಕುರಿತ ದೂರು ಶುರುವಾದದ್ದು ನಾನು ಅಸ್ಪೃಶ್ಯತೆಯ ವಿರುದ್ಧ ತೀವ್ರ ಚಳುವಳಿ ಶುರು ಮಾಡಿದ ಕಾಲದಲ್ಲಿ. ನಾನು ಅಸ್ಪೃಶ್ಯತಾ ನಿವಾರಣೆಯನ್ನು ಕಾಂಗ್ರೆಸ್ಸಿನ ಕಾರ್ಯಕ್ರಮದ ಭಾಗವನ್ನಾಗಿ ಮಾಡಿದೆ; ಈ ಕುರಿತು ಸಾರ್ವಜನಿಕ ಭಾಷಣಗಳನ್ನು ಮಾಡಲಾರಂಭಿಸಿದೆ; ಕಾಂಗ್ರೆಸ್ ಸಭೆಗಳಲ್ಲಿ ಹಾಗೂ ಆಶ್ರಮದಲ್ಲಿ ಹರಿಜನರು ಕಡ್ಡಾಯವಾಗಿ ಇರಲೇಬೇಕು ಎಂದು ಹೇಳಲಾರಂಭಿಸಿದೆ. ಆಗ, ಅಲ್ಲಿಯವರೆಗೆ ನನ್ನೊಡನೆ ಸ್ನೇಹದಿಂದಿದ್ದು, ನನಗೆ ನೆರವಾಗುತ್ತಿದ್ದ ಕೆಲವು ಸನಾತನವಾದಿಗಳು ನನ್ನಿಂದ ದೂರಾದರು, ಹಾಗೂ ಈ ಬಗೆಯ ಅಪಪ್ರಚಾರ ಶುರು ಮಾಡಿದರು.

ನನಗೆ ಐಂದ್ರಿಕ ಒಲವುಗಳಿದ್ದರೆ, ಆ ಕುರಿತು ಹೇಳಿಕೊಳ್ಳಬಲ್ಲ ಧೈರ್ಯವೂ ನನಗಿದೆ.

ಬ್ರಹ್ಮಚರ್ಯ ನನಗೆ ಒದಗಿ ಬಂದ ರೀತಿಯ ಪ್ರಭಾವದಿಂದಾಗಿ ಸ್ತ್ರೀಯನ್ನು ಕುರಿತ ನನ್ನ ಸೆಳೆತದಲ್ಲಿ ಆಕೆ ಗಂಡಿನ ತಾಯಿ ಎಂಬ ಭಾವವೇ ಪ್ರಬಲವಾಗಿದೆ. ಆಕೆ ನನಗೆ ಎಷ್ಟು ಪವಿತ್ರಳೆಂದರೆ, ಆಕೆಯ ಬಗ್ಗೆ ನಾನು ಲೈಂಗಿಕ ಪ್ರೀತಿಯನ್ನು ತೋರಲಾರೆ. ಹೀಗಾಗಿ ಪ್ರತಿ ಹೆಣ್ಣೂ ನನಗೆ ತಂಗಿಯೋ, ಮಗಳೋ ಆಗಿ ಕಾಣತೊಡಗಿದ್ದಾಳೆ.

ನಾನು ದಕ್ಷಿಣ ಆಫ್ರಿಕಾದಲ್ಲಿದ್ದಾಗ ಯೂರೋಪಿನ ಹಾಗೂ ಇಂಡಿಯಾದ ಹಲವು ಸೋದರಿಯರ ವಿಶ್ವಾಸವನ್ನು ಆನಂದದಿಂದ ಅನುಭವಿಸಿರುವೆ. ದಕ್ಷಿಣ ಆಫ್ರಿಕಾದಲ್ಲಿ ನಾಗರಿಕ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ನನ್ನ ಆಹ್ವಾನಕ್ಕೆ ಓಗೊಟ್ಟು, ಸೋದರಿಯರು ಬಂದು ನಮ್ಮೊಡನೆ ಸೇರಿಕೊಂಡಾಗ ನಾನೂ ಅವರಲ್ಲಿ ಒಬ್ಬನಾಗಿದ್ದೇನೆ ಎಂದು ನನಗನ್ನಿಸಿತು. ಸ್ತ್ರೀ ಸಮುದಾಯದ ಸೇವೆ ಮಾಡಲು ನಾನು ವಿಶೇಷ ಅರ್ಹತೆ ಪಡೆದಿದ್ದೇನೆ ಎಂಬುದನ್ನು ಆಗ ಕಂಡುಕೊಂಡೆ.

ನನಗೆ ಪ್ರಿಯವಾದ ಈ ಸುದೀರ್ಘ ಕತೆಯನ್ನು ಸಂಕ್ಷಿಪ್ತವಾಗಿ ಹೇಳುವೆ: ಇಂಡಿಯಾಕ್ಕೆ ವಾಪಸ್ ಬಂದ ಮೇಲೆ ಬಹು ಬೇಗ ನಾನು ಇಲ್ಲಿನ ಮಹಿಳೆಯರೊಡನೆ ಬೆರೆತು ಹೋದೆ. ನಾನು ಅವರ ಹೃದಯಕ್ಕೆ ಹತ್ತಿರವಾದ ರೀತಿಯಂತೂ ನನಗೇ ಅಚ್ಚರಿ ಹುಟ್ಟಿಸಿತ್ತು. ದಕ್ಷಿಣ ಆಫ್ರಿಕಾದಲ್ಲಾಗಲೀ, ಇಂಡಿಯಾದಲ್ಲಾಗಲೀ ಮುಸ್ಲಿಂ ಮಹಿಳೆಯರು ನನ್ನೆದುರು ಪರದಾ ಧರಿಸುತ್ತಿರಲಿಲ್ಲ.

ನಾನು ಆಶ್ರಮದಲ್ಲಿ ಮಲಗಿರುವಾಗಲೂ ನನ್ನ ಸುತ್ತ ಮಹಿಳೆಯರು ಮಲಗಿರುತ್ತಾರೆ. ಎಲ್ಲ ದೃಷ್ಟಿಯಿಂದಲೂ ನನ್ನೊಡನೆ ಇರುವುದು ಕ್ಷೇಮವೆಂದು ಅವರಿಗೆ ಮನವರಿಕೆಯಾಗಿರುವುದು ಇದಕ್ಕೆ ಕಾರಣ. ಸೇವಾಗ್ರಾಮ ಆಶ್ರಮದಲ್ಲಿ ಯಾವುದೇ ಪ್ರೈವೆಸಿ ಅಥವಾ ಗೋಪ್ಯತೆ ಇಲ್ಲ ಎನ್ನುವುದನ್ನು ಇಲ್ಲಿ ನೆನಪಿಸುತ್ತೇನೆ.

ನನ್ನೊಳಗೆ ಮಹಿಳೆಯರ ಬಗ್ಗೆ ನಿಜಕ್ಕೂ ಲೈಂಗಿಕ ಆಕರ್ಷಣೆ ಬೆಳೆದರೆ ನನ್ನ ಬದುಕಿನ ಈ ಘಟ್ಟದಲ್ಲೂ ಬಹು ಪತ್ನಿತ್ವವಾದಿಯಾಗುವ ಧೈರ್ಯ ನನ್ನಲ್ಲಿ ಸಾಕಷ್ಟಿದೆ. ಗುಪ್ತವಾದ ಅಥವಾ ಬಹಿರಂಗವಾದ, ಸ್ವಚ್ಛಂದ ಲೈಂಗಿಕತೆಯಲ್ಲಿ ನನಗೆ ನಂಬಿಕೆಯಿಲ್ಲ.

(ಹರಿಜನ್, ೪ ನವೆಂಬರ್ ೧೯೩೯. ಆಕರ: 'ಮೋಹನ್‌ದಾಸ್: ಎ ಟ್ರೂ ಸ್ಟೋರಿ', ಪು. ೪೩೭–೪೩೮)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೯

ಆತ್ಮಕತೆಯ ಮುಂದಿನ ಭಾಗಕ್ಕಾಗಿ ಬೇಡಿಕೆ...

ಆತ್ಮಕತೆಯನ್ನು ಎಲ್ಲಿಗೆ ನಿಲ್ಲಿಸಿದ್ದೇನೋ ಅಲ್ಲಿಂದ ಮತ್ತೆ ಮುಂದುವರಿಸಬೇಕೆಂದು, ಅಹಿಂಸಾ ತತ್ವವನ್ನು ವಿವರಿಸುವ ಒಂದು ಗ್ರಂಥದ ರಚನೆಗೂ ನಾನು ಶೀಘ್ರದಲ್ಲೇ ಕೈಹಾಕಬೇಕೆಂದು ನನ್ನ ಸ್ನೇಹಿತರೊಬ್ಬರು ಬೇಡಿಕೆಯಿಟ್ಟಿದ್ದಾರೆ.

ನಿಜ ಹೇಳಬೇಕೆಂದರೆ ನನ್ನ ಆತ್ಮಕತೆಯನ್ನು ಬರೆಯಬೇಕೆಂದು ತೀರ್ಮಾನಿಸಿ ನಾನು ಬರೆದದ್ದಲ್ಲ. ಬದುಕಿನ ಯಥಾರ್ಥ ಅನುಭವಗಳನ್ನು ಒಂದು ಅಂದಾಜಿನಲ್ಲಿ ನಾನು ದಾಖಲಿಸುತ್ತಾ ಹೋದೆನಷ್ಟೆ. ಪತ್ರಿಕೆಯಲ್ಲಿ ಪ್ರಕಟವಾದ ಈ ಬರಹ ಸರಣಿ, ನಂತರ ಪುಸ್ತಕವಾಗಿ ಪ್ರಕಟವಾಯಿತು.

ಆಗಿನಿಂದ ಇಲ್ಲಿಗೆ ಇಪ್ಪತ್ತು ವರ್ಷ ಸಂದಿವೆ. ನಾನು ಚಿಂತಿಸಿದ, ಕ್ರಿಯೆಯಲ್ಲಿ ತೊಡಗಿದ ವಿವರಗಳು ಈ ಅವಧಿಯಲ್ಲಿ ಅಷ್ಟು ವ್ಯವಸ್ಥಿತವಾಗಿ ಬರಹ ರೂಪಕ್ಕಿಳಿದಿಲ್ಲ. ಅವನ್ನು ಕ್ರಮಬದ್ಧವಾಗಿ ದಾಖಲಿಸುವುದು ನನಗೂ ಸಹ ಇಷ್ಟವೇ. ಆದರೆ ಅಷ್ಟು ಪುರಸತ್ತಾದರೂ ಎಲ್ಲಿದೆ? 'ಹರಿಜನ್' ಪತ್ರಿಕೆಯ ಪ್ರಕಟಣೆ ಇಲ್ಲಿಯವರೆಗೂ ನಿಲ್ಲದಂತೆ ನಾನು ನೋಡಿಕೊಂಡಿದ್ದೇನೆ. ಆ ಪ್ರಕಟಣೆಯ ಕೆಲಸಗಳನ್ನು ನನ್ನ ಕರ್ತವ್ಯವೆಂದೇ ತಿಳಿದು ಮಾಡಿಕೊಂಡು ಬಂದಿದ್ದೇನೆ. ಇವೆಲ್ಲ ಕೆಲಸ ಕಾರ್ಯಗಳು ಅಷ್ಟು ಸಲೀಸಾಗಿಯೇನೂ ಆದವಲ್ಲ.

ಆತ್ಮಕತೆಯನ್ನು ಮತ್ತೆ ಮುಂದುವರಿಸಲು ಸಮಯಾವಕಾಶವಂತೂ ಸದ್ಯಕ್ಕೆ ನನ್ನ ಬಳಿ ಇಲ್ಲ. ದೈವಸಂಕಲ್ಪ ಹೇಗಿದೆಯೋ ನೋಡಬೇಕು. ಆದರೆ ಅಹಿಂಸಾ ತತ್ವದ ಕುರಿತು ಗ್ರಂಥವನ್ನು ಬರೆಯುವಷ್ಟು ಖಂಡಿತ ನಾನು ಶಕ್ತನಲ್ಲ. ಪಾಂಡಿತ್ಯ ಪೂರ್ಣ ಬರವಣಿಗೆ ನನ್ನ ಕೈಲಾಗದು...

(೧೯೪೬, 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೮೩, ಪು. ೧೭೯–೧೮೦)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೨೦

ನನ್ನ ಹತ್ಯೆಯ ಯತ್ನ...

ನನ್ನ ಜೀವನದಲ್ಲಿ ಎಷ್ಟೋ ಸಲ ಸಾವಿನ ದವಡೆಯಿಂದ ತಪ್ಪಿಸಿಕೊಂಡಿದ್ದೇನೆ; ಇಂದಿನ ಹೊಸ ಪ್ರಯತ್ನ ನನಗೇನೂ ಅಚ್ಚರಿ ಹುಟ್ಟಿಸಿಲ್ಲ. ದೇವರ ದಯೆ, ಈಗ ಎಸೆಯಲಾದ ಬಾಂಬಿನಿಂದ ಯಾರೂ ತೀವ್ರ ಪ್ರಾಣಾಪಾಯಕ್ಕೆ ತುತ್ತಾಗಿಲ್ಲ.

ಈ ದುಃಖದಾಯಕ ಘಟನೆ ಹರಿಜನರ ವಿಮೋಚನೆಯ ಕೆಲಸವನ್ನು ಇನ್ನಷ್ಟು ಹೆಚ್ಚು ಹೆಚ್ಚು ಮುಂದುವರಿಸುವಂತೆ ನನ್ನನ್ನು ನಿಸ್ಸಂದೇಹವಾಗಿ ಪ್ರೇರೇಪಿಸಿದೆ. ನಾನು ಹುತಾತ್ಮ ಪಟ್ಟಕ್ಕಾಗಿ ಕಾತರಿಸುತ್ತಿಲ್ಲ. ಆದರೆ ಯಾವುದನ್ನು ನಾನು ನನ್ನ ಪರಮ ಕರ್ತವ್ಯವೆಂದು ತಿಳಿದಿದ್ದೇನೋ ಅದನ್ನು ಮಾಡುವ ಹಾದಿಯಲ್ಲಿ ಆ ಹುತಾತ್ಮ ಪಟ್ಟ ಲಭಿಸಿದರೆ, ನಾನು ಅದನ್ನು ಗಳಿಸಿರುವೆ ಎಂದುಕೊಳ್ಳುವೆ.

ಇನ್ನೂ ಉಳಿದಿರುವ ಈ ನನ್ನ ಬದುಕಿನ ಬಗ್ಗೆ ಅಸೂಯೆ ಪಡುವವರಿಗೆ ಈ ನನ್ನ ದೇಹವನ್ನು ಕೊನೆಗಾಣಿಸುವುದು ತೀರಾ ಸುಲಭದ ಕೆಲಸ ಎಂಬುದು ಗೊತ್ತಿರಲಿ. ಆದರೆ ಅವರು ಪಾಪಮಯವೆಂದು ಪರಿಗಣಿಸಿರುವ ಈ ನನ್ನ ದೇಹವನ್ನು ಕೊನೆಗಾಣಿಸುವ ಹಾದಿಯಲ್ಲಿ ಅನೇಕ ಮುಗ್ಧ ಜೀವಗಳಿಗೆ ಯಾಕೆ ಅಪಾಯ ತಂದೊಡ್ಡುತ್ತಿದ್ದಾರೆ?

ಬಾಂಬ್ ಎಸೆದ ಆ ಅಜ್ಞಾತ ವ್ಯಕ್ತಿಯ ಬಗ್ಗೆ ಆಳವಾದ ಮರುಕ ಬಿಟ್ಟರೆ ಬೇರಾವ ಭಾವವೂ ನನ್ನಲ್ಲಿಲ್ಲ. ಆತ ಯಾರೆಂಬುದು ಗೊತ್ತಾದರೆ, ನನ್ನ ಮಾತನ್ನು ನೀವು ಕೇಳುವುದಾದರೆ, 'ಅವನನ್ನು ಬಿಟ್ಟುಬಿಡಿ' ಎಂದು ಖಂಡಿತಾ ಹೇಳುತ್ತೇನೆ.

(೧೯೩೪ರಲ್ಲಿ ಗಾಂಧೀಜಿ ದೇಶದುದ್ದಕ್ಕೂ ಹರಿಜನ ಪ್ರವಾಸದಲ್ಲಿದ್ದರು. ಅಸ್ಪೃಶ್ಯತೆಯ ಪರವಾಗಿದ್ದ ಸನಾತನಿಗಳು ಹಲವು ಸಲ ಅವರ ಮೇಲೆ ಹಲ್ಲೆಗೆ ಪ್ರಯತ್ನಿಸಿದರು. ೧೯೩೪ರಲ್ಲಿ ಪೂನಾದಲ್ಲಿ ಬಾಂಬ್ ಎಸೆದಾಗ ಗಾಂಧೀಜಿ ಆಡಿದ ಮಾತುಗಳು.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೨೧

'ಅದು ಸೈನಿಕರ ಪ್ರಾಕ್ಟೀಸಿನ ಸದ್ದು ಎಂದುಕೊಂಡೆ!'

೨೦ ಜನವರಿ ೧೯೪೮

ನಿನ್ನೆಯ ಬಾಂಬ್ ಘಟನೆಯ ಬಗ್ಗೆ ಮೊದಲು ಮಾತಾಡುವೆ. ಎಲ್ಲ ಕಡೆಯಿಂದ ಜನರು ನನ್ನನ್ನು ಅಭಿನಂದಿಸುತ್ತಾ, ಹೊಗಳುತ್ತಾ ತಂತಿ ಸಂದೇಶಗಳನ್ನು ಕಳಿಸುತ್ತಿದ್ದಾರೆ. ವಾಸ್ತವವಾಗಿ ನಾನು ಈ ಅಭಿನಂದನೆಗಳಿಗೆ ಅರ್ಹನಲ್ಲ. ನಾನು ಧೈರ್ಯವನ್ನೇನೂ ಪ್ರದರ್ಶಿಸಿಲ್ಲ. ಆ ಸದ್ದು ಎಲ್ಲೋ ಸೈನಿಕರು ಮಾಡುತ್ತಿರುವ ಪ್ರಾಕ್ಟೀಸಿನ ಸದ್ದಿರಬೇಕೆಂದು ಕೊಂಡೆ. ಅದು ಬಾಂಬ್ ಎಂದೂ, ಇನ್ನು ಇವನು ಬದುಕುವುದು ಬೇಡ ಎಂಬುದು ದೇವರ ಇಚ್ಛೆಯಾಗಿದ್ದರೆ ಅದು ನನ್ನನ್ನು ಮುಗಿಸಿಬಿಟ್ಟಿರುತ್ತದೆಂದೂ ಆಮೇಲೆ ನನಗೆ ತಿಳಿಯಿತು...

ಈ ಕೃತ್ಯಕ್ಕೆ ಕಾರಣನಾದ ವ್ಯಕ್ತಿಯ ಬಗ್ಗೆ ನೀವು ಯಾವುದೇ ರೀತಿಯ ದ್ವೇಷವನ್ನು ಇರಿಸಿಕೊಳ್ಳತಕ್ಕದ್ದಲ್ಲ. ನಾನು ಹಿಂದೂ ಧರ್ಮದ ಶತ್ರುವೆಂದು ಅವನು ಅದು ಹೇಗೋ ನಂಬಿಕೊಂಡಿದ್ದ. ಭಗವದ್ಗೀತೆಯ ನಾಲ್ಕನೆಯ ಅಧ್ಯಾಯದಲ್ಲಿ ದುಷ್ಟರು ಪ್ರಬಲರಾಗಿ ಧರ್ಮವನ್ನು ಹಾನಿಗೊಳಿಸಿದಾಗ ದೇವರು ಯಾರನ್ನಾದರೂ ಕಳಿಸಿ ಅಂಥವರನ್ನು ನಾಶ ಮಾಡುತ್ತಾನೆಂದು ಹೇಳಿದೆಯಲ್ಲವೆ? ನಿನ್ನೆ ಬಾಂಬ್ ಸ್ಫೋಟಿಸಿದ ವ್ಯಕ್ತಿ ನನ್ನನ್ನು ನಾಶ ಮಾಡಲು ದೇವರೇ ತನ್ನನ್ನು ಕಳಿಸಿದ್ದಾನೆಂದು ಸಹಜವಾಗಿಯೇ ನಂಬಿಕೊಂಡಿದ್ದಾನೆ. ಆತನನ್ನು ನಾನು ನೋಡಿಲ್ಲ. ಆದರೆ, ಪೊಲೀಸರು ಅವನನ್ನು ಪ್ರಶ್ನಿಸಿದಾಗ ಅವನು ಹೀಗೆ ಹೇಳಿದನೆಂದು ಯಾರೋ ನನಗೆ ಹೇಳಿದರು. ಅವನು ಒಳ್ಳೆಯ ಬಟ್ಟೆ ತೊಟ್ಟಿದ್ದನಂತೆ.

ಆದರೆ, ನಾವು ಯಾರನ್ನಾದರೂ ಇಷ್ಟಪಡುವುದಿಲ್ಲವೆಂದರೆ, ಅದರ ಅರ್ಥ ಅವನೊಬ್ಬ ದುಷ್ಟ ಎಂದೇನು? ಒಂದು ವೇಳೆ ಯಾರಾದರೂ ನಾನೊಬ್ಬ ದುಷ್ಟನೆಂದು

ತಿಳಿದು ನನ್ನನ್ನು ಕೊಲ್ಲುತ್ತಾನೆಂದುಕೊಳ್ಳಿ; ಅಂಥವನು ದೇವರ ಮುಂದೆ ಉತ್ತರಿಸಲೇ ಬೇಕಾಗುವುದಲ್ಲವೆ? ತಾನು ದೇವರು ಹೇಳಿದ ಹಾಗೆ ನಡೆದುಕೊಳ್ಳುತ್ತಿದ್ದೇನೆಂದು ಅವನು ಹೇಳಿದರೆ, ಅವನು ತನ್ನ ಈ ದುಷ್ಟ ಕೆಲಸಕ್ಕೆ ದೇವರನ್ನು ಭಾಗಿಯಾಗಿಸಿ ಕೊಂಡಂತೆ ಅಲ್ಲವೆ?

ಆ ವ್ಯಕ್ತಿಯ ಹಿಂದೆ ಇರುವವರು ಅಥವಾ ಅವನನ್ನು ಸಾಧನವಾಗಿರಿಸಿಕೊಂಡವರು ಈ ರೀತಿಯ ಕೆಲಸಗಳು ಹಿಂದೂ ಧರ್ಮವನ್ನು ಉಳಿಸುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಯಬೇಕು. ಹಿಂದೂ ಧರ್ಮ ಉಳಿಯುವುದಾದರೆ, ಅದು ನಾನು ಮಾಡುತ್ತಿರುವ ರೀತಿಯ ಕೆಲಸದಿಂದ ಮಾತ್ರ ಉಳಿಯಬಲ್ಲದು. ನಾನು ನನ್ನ ಬಾಲ್ಯದಿಂದಲೂ ಹಿಂದೂ ಧರ್ಮವನ್ನು ದತ್ತವಾಗಿ ಪಡೆದುಕೊಂಡೇ ಬೆಳೆದವನು. ನನ್ನನ್ನು ಪೋಷಿಸಿ ಬೆಳೆಸಿದ ದಾದಿ ನನಗೆ ಭಯವಾದಾಗಲೆಲ್ಲ ರಾಮನಾಮ ಸ್ಮರಣೆ ಮಾಡುವುದನ್ನು ಹೇಳಿಕೊಟ್ಟಳು.

ಎಲ್ಲ ಪರೀಕ್ಷೆಗಳನ್ನು ಹಾದು ಬಂದು, ಇಂದಿಗೂ ಕೂಡ ನಾನು ನನ್ನ ಐದು, ಆರನೆಯ ವಯಸ್ಸಿನಲ್ಲಿ ಎಷ್ಟು ಅಂತಃಪ್ರೇರಣೆಯಿಂದ ಹಿಂದೂವಾಗಿದ್ದೆನೋ ಇಂದಿಗೂ ಅಷ್ಟೇ ಹಿಂದೂವಾಗಿ ಉಳಿದಿದ್ದೇನೆ. ನನ್ನಂಥ ಶ್ರದ್ಧಾಳು ಹಿಂದೂವನ್ನು ಕೊಂದು ನೀವು ಹಿಂದೂ ಧರ್ಮವನ್ನು ಉಳಿಸಬಯಸುತ್ತೀರೇನು? ಕೆಲವು ಜನ ಸಿಖ್ ಧರ್ಮೀಯರು ಬಂದು, 'ಈ ಕೃತ್ಯದಲ್ಲಿ ಯಾರಾದರೂ ಸಿಖ್ ಧರ್ಮೀಯನ ಕೈವಾಡವಿದೆಯೆಂದು ನಿಮಗೆ ಅನುಮಾನವಿದೆಯೇ?' ಎಂದು ನನ್ನನ್ನು ಕೇಳಿದರು. ಅವನು ಸಿಖ್ ಧರ್ಮೀಯನಲ್ಲ ಎಂಬುದು ನನಗೆ ಗೊತ್ತು. ಆದರೆ, ಅವನು ಸಿಖ್ ಧರ್ಮೀಯನಾಗಿದ್ದರೆ ತಾನೆ ಏನು? ಅಥವಾ ಅವನು ಒಬ್ಬ ಹಿಂದುವೋ ಅಥವಾ ಮುಸ್ಲಿಮನೋ ಆಗಿದ್ದರೆ ತಾನೇ ಏನು? ಅವನಿಗೆ ದೇವರು ಸದ್ಬುದ್ಧಿಯನ್ನು ಕರುಣಿಸಲಿ.

ನಿನ್ನೆ ಒಬ್ಬ ಅನಕ್ಷರಸ್ಥ ಮಹಿಳೆ [ಸುಲೋಚನಾ ದೇವಿ] ಅಪರಾಧಿಯನ್ನು ಹಿಡಿದುಕೊಡುವ ಧೈರ್ಯ ತೋರಿದಳು. ನಾನು ಅವಳ ಧೈರ್ಯವನ್ನು ಮೆಚ್ಚುತ್ತೇನೆ.

(೨೦ ಜನವರಿ ೧೯೪೮ರ ಸಂಜೆ ಗಾಂಧೀ ಹತ್ಯೆಯ ಸಂಚು ನಡೆಯಿತು. ನಂತರ ೨೧ ಜನವರಿ ೧೯೪೮ರ ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ಆಡಿದ ಮಾತುಗಳಿವು.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೨೨

ಸಾವೆಂದರೇನು?

ನಾನು ನನ್ನ ಅಂಗಾಂಗಗಳೆಲ್ಲ ನಿಷ್ಕ್ರಿಯವಾಗಿ, ಸೋತ ಮನುಷ್ಯನಂತೆ ಸಾಯಲು ಬಯಸುವುದಿಲ್ಲ. ಒಬ್ಬ ಕೊಲೆಗಾರನ ಗುಂಡು ನನ್ನ ಜೀವನಕ್ಕೆ ಕೊನೆ ಹಾಡಬಹುದು. ನಾನದನ್ನು ಸ್ವಾಗತಿಸುತ್ತೇನೆ. ಎಲ್ಲಕ್ಕಿಂತ ಮುಖ್ಯವಾಗಿ, ಕೊನೆಯ ಉಸಿರಿನ ತನಕ ನನ್ನ ಕರ್ತವ್ಯ ಮಾಡುತ್ತಾ ಸುಮ್ಮನೆ ಚದುರಿ ಹೋಗುವುದನ್ನು ಹೆಚ್ಚು ಇಷ್ಟಪಡುತ್ತೇನೆ...

...ಧೀರನೊಬ್ಬನಿಗೆ ಸಾಧ್ಯವಾಗುವ ಅಹಿಂಸೆ ನನ್ನೊಳಗಿದೆಯೆ? ಇದನ್ನು ನನ್ನ ಸಾವು ಮಾತ್ರ ತೋರಿಸಬಲ್ಲದು. ಯಾರಾದರೂ ನನ್ನನ್ನು ಕೊಂದಾಗ, ನನ್ನ ತುಟಿಗಳು ಕೊಲೆಗಾರನಿಗಾಗಿ ಪ್ರಾರ್ಥನೆ ಮಾಡುತ್ತಾ, ದೇವರು ನನ್ನದೆಯ ಗೂಡಿನಲ್ಲಿ ಜೀವಂತವಾಗಿ ಇರುವನೆಂಬ ಪ್ರಜ್ಞೆಯಿಂದ ಸತ್ತರೆ ಮಾತ್ರ ನಾನು ಧೀರನೊಬ್ಬನಿಗೆ ಸಾಧ್ಯವಾಗುವ ಅಹಿಂಸೆಯನ್ನು ಸಾಧಿಸಿರುವೆ ಎನ್ನಬಹುದು.

...ನಾನು ತೀರಿಕೊಂಡ ಮೇಲೆ ಯಾವುದೇ ಒಬ್ಬ ವ್ಯಕ್ತಿ ನನ್ನನ್ನು ಪ್ರತಿನಿಧಿಸಲಾರ. ಆದರೆ ನಿಮ್ಮಲ್ಲಿ ಹಲವರೊಳಗೆ ನನ್ನ ತುಣುಕು ಇರುತ್ತದೆ. ಪ್ರತಿಯೊಬ್ಬನೂ 'ಜೀವನದ ಧ್ಯೇಯೋದ್ದೇಶ ಮೊದಲು, ನಾನೇನಿದ್ದರೂ ಕೊನೆಗೆ' ಎಂದು ಹೊರಟಾಗ ಈ [ಸಾವಿನ] ಶೂನ್ಯ ಬಹುಪಾಲು ತುಂಬಿಕೊಳ್ಳುತ್ತದೆ... ನನ್ನ ಸಾವು ಗಲ್ಲುಗಂಬದ ಮೇಲೋ, ಗುಂಡೇಟಿನಿಂದಲೋ ಸಂಭವಿಸುತ್ತದೆ. ಅದು ಧೀರೋದಾತ್ತ ಸಾವೇ ಹೊರತು, ಹಾಸಿಗೆಯ ಮೇಲೆ ಉಪವಾಸ ಮಾಡುವಾಗ ಬರುವ ಸಾವಲ್ಲ.

(ವಿವಿಧ ಹೇಳಿಕೆಗಳಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

ಭಾಗ : ೨

ಹಿಂದ್ ಸ್ವರಾಜ್

ಈ ಪುಸ್ತಕವನ್ನು ಎಳೆಯ ಮಗುವಿಗೂ ಕೊಡಬಹುದು. ಇದು ದ್ವೇಷದ ಬದಲು ಪ್ರೀತಿಯನ್ನು ಬೋಧಿಸುತ್ತದೆ. ಹಿಂಸೆಗೆ ಬದಲಾಗಿ ಪ್ರೀತಿಯನ್ನು ಕಲಿಸುತ್ತದೆ. ಪಶುಬಲದ ಎದುರು ಆತ್ಮಬಲವನ್ನು ನಿಲ್ಲಿಸುತ್ತದೆ.

ಮೋಹನದಾಸ್ ಕರಮಚಂದ್ ಗಾಂಧಿ

೨೩

ನಾಗರಿಕತೆ

ಓದುಗ: ನಿಮ್ಮ ಪ್ರಕಾರ ನಾಗರಿಕತೆ (ಸಿವಿಲೈಜೇಶನ್) ಎಂದರೆ ಏನು?

ಸಂಪಾದಕ: ನಾನು 'ನಾಗರಿಕತೆ'ಯನ್ನು ಹೇಗೆ ಅರ್ಥೈಸಿಕೊಂಡಿರುವೆ ಎನ್ನುವುದು ಇಲ್ಲಿ ಮುಖ್ಯವಲ್ಲ. ಇಂಗ್ಲಿಷ್ ಲೇಖಕರು ಬಳಸುವ ರೀತಿಯ ನಾಗರಿಕತೆಯ ಅರ್ಥವನ್ನು ನಾನು ಒಪ್ಪುವುದಿಲ್ಲ. ನಾಗರಿಕತೆ ಎಂಬುದರ ಕುರಿತು ಅನೇಕ ಪುಸ್ತಕಗಳನ್ನು ಬರೆಯಲಾಗಿದೆ. ಒಬ್ಬ ಇಂಗ್ಲಿಷ್ ಲೇಖಕ 'ಸಿವಿಲೈಜೇಶನ್– ಇಟ್ಸ್ ಕಾಸ್ ಅಂಡ್ ಕ್ಯೂರ್' ಎನ್ನುವ ಕೃತಿಯನ್ನು ರಚಿಸಿದ್ದಾನೆ. ಇದರಲ್ಲಿ ನಾಗರಿಕತೆಯನ್ನು ಒಂದು ಕಾಯಿಲೆ ಎಂದು ಆತ ಗುರುತಿಸಿದ್ದಾನೆ.

ಓದುಗ: ಸಾಮಾನ್ಯವಾಗಿ ಇಂತಹ ವಿಷಯಗಳು ನಮಗೆ ತಿಳಿಯದೆ ಹೋಗುತ್ತವೆ, ಏಕೆ?

ಸಂಪಾದಕ: ಇದಕ್ಕೆ ಉತ್ತರ ಬಹಳ ಸರಳವಾಗಿದೆ. ಜನರು ತಮ್ಮ ವಿರುದ್ಧ ತಾವೇ ವಾಗ್ವಾದ ನಡೆಸುವುದು ತೀರಾ ಅಪರೂಪ. ಆಧುನಿಕ ನಾಗರಿಕತೆಯ ಮತ್ತಿನಲ್ಲಿರುವವರು ಅದರ ವಿರುದ್ಧ ಬರೆಯುವ ಸಾಧ್ಯತೆ ಕಡಿಮೆ. ಕನಸು ಕಾಣುತ್ತಿರುವವನು ತಾನು ಕಾಣುತ್ತಿರುವ ಕನಸನ್ನೇ ದಿಟವೆಂದು ನಂಬುತ್ತಾನೆ. ಅವನಿಗೆ ಎಚ್ಚರವಾದ ಮೇಲೆಯೇ ತಾನು ಕಂಡಿದ್ದು ಕನಸು ಎಂದು ಅವನಿಗೆ ತಿಳಿಯುವುದು.

ಓದುಗ: ನೀವು ನಾಗರಿಕತೆ ಕುರಿತು ಏನೆಲ್ಲಾ ಓದಿದ್ದೀರಿ ಮತ್ತು ಆಲೋಚಿಸಿದ್ದೀರಿ ಎನ್ನುವುದನ್ನು ಸ್ವಲ್ಪ ದಯಮಾಡಿ ತಿಳಿಸಿ.

ಸಂಪಾದಕ: ಮೊದಲಿಗೆ ನಾಗರಿಕತೆ ಎಂದರೇನು ಎಂಬ ಕುರಿತು ಆಲೋಚಿಸೋಣ. ಈ ನಾಗರಿಕತೆಯಲ್ಲಿ ಜೀವಿಸುವವರಿಗೆ ಶಾರೀರಿಕ ಸುಖವೇ ಬದುಕಿನ ಉದ್ದೇಶ. ಕೆಲವು ಉದಾಹರಣೆಗಳನ್ನು ನೋಡಬಹುದು:

ಯೂರೋಪಿನ ಜನರು ನೂರು ವರ್ಷಗಳ ಹಿಂದೆ ಇದ್ದ ಮನೆಗಳಿಗಿಂತ ಉತ್ತಮವಾದ ಮನೆಗಳಲ್ಲಿ ಇಂದು ಬದುಕುತ್ತಿದ್ದಾರೆ. ಹೀಗೆ ಉತ್ತಮವಾದ ಮನೆಗಳಲ್ಲಿ ಬದುಕುವುದನ್ನು ನಾಗರಿಕತೆಯ ಮುನ್ನಡೆ ಎಂದು ಪರಿಗಣಿಸಲಾಗುತ್ತದೆ. ಬಹಳ ಹಿಂದೆ ಇವರೆಲ್ಲರೂ ಚರ್ಮದ ಉಡುಗೆಗಳನ್ನು ತೊಡುತ್ತಿದ್ದರು; ಭರ್ಜಿಗಳನ್ನು ಅಸ್ತ್ರಗಳಾಗಿ ಬಳಸುತ್ತಿದ್ದರು. ಈಗ ಅವರು ಶರೀರವನ್ನು ಇಡಿಯಾಗಿ ಮುಚ್ಚುವ ಬಟ್ಟೆಗಳನ್ನು ತೊಡುತ್ತಾರೆ; ಭರ್ಜಿಗಳ ಬದಲು ಪಿಸ್ತೂಲುಗಳನ್ನು ಬಳಸುತ್ತಾರೆ. ಈಗಿನ ಯೂರೋಪಿಯನ್ನರ ಹಾಗೆ ಯಾರು ಬಟ್ಟೆಗಳನ್ನು ತೊಡುತ್ತಿರಲಿಲ್ಲವೋ ಅಂತಹವರು ಯೂರೋಪಿಯನ್ನರಂತೆ ಉಡುಗೆ ಧರಿಸತೊಡಗಿದರೆ, ಅವರನ್ನು ನಾಗರಿಕರೆಂದು ಕರೆಯಲಾಗುತ್ತದೆ!

ಹಿಂದೆ, ಯೂರೋಪಿಯನ್ನರು ಜಮೀನುಗಳಲ್ಲಿ ತಾವೇ ಸ್ವತಃ ದುಡಿಯುತ್ತಿದ್ದರು. ಈಗ, ಲಭ್ಯವಿರುವ ಅಸಂಖ್ಯಾತ ಯಂತ್ರಗಳ ಮೂಲಕ, ವಿಸ್ತಾರವಾದ ಜಮೀನುಗಳಲ್ಲಿ ವ್ಯವಸಾಯ ಮಾಡಿ ಹೆಚ್ಚಿಗೆ ಹಣ ಸಂಪಾದಿಸುತ್ತಿದ್ದಾರೆ. ಇದನ್ನು ನಾಗರಿಕತೆಯ ಲಕ್ಷಣವೆಂದು ಕರೆಯಲಾಗುತ್ತದೆ. ಹಿಂದೆ, ಜನರು ಟಾಂಗಾಗಳಲ್ಲಿ ಚಲಿಸುತ್ತಿದ್ದರು. ಈಗ, ಇವರು ರೈಲು ವಿಮಾನಗಳಲ್ಲಿ ವೇಗವಾಗಿ ಚಲಿಸಬಲ್ಲರು.

ಜನರಿಗೀಗ ಕೈ ಕಾಲುಗಳನ್ನು ಬಳಸುವ ಅಗತ್ಯವೇ ಇಲ್ಲ. ಪ್ರತಿಯೊಂದು ಕೆಲಸವನ್ನೂ ಯಂತ್ರಗಳ ಸಹಾಯದಿಂದ ಮಾಡಲಾಗುತ್ತಿದೆ. ಹಿಂದೆ, ಪರಸ್ಪರ ಜಗಳವಾಡಬೇಕೆಂದಾಗ ಇಬ್ಬರ ತೂಕವನ್ನು, ದೈಹಿಕ ಸಾಮರ್ಥ್ಯವನ್ನು ಹೋಲಿಕೆ ಮಾಡಿ ನೋಡುತ್ತಿದ್ದರು. ಈಗ ದೂರದ ಬೆಟ್ಟದ ಮೇಲೆ ಬಂದೂಕು ಇಟ್ಟು ಕುಳಿತುಕೊಂಡಿರುವ ಒಬ್ಬ ವ್ಯಕ್ತಿಗೆ ಅನೇಕರನ್ನು ಏಕಕಾಲದಲ್ಲಿ ಕೊಲ್ಲುವ ಸಾಮರ್ಥ್ಯವಿದೆ.

ಹಿಂದೆ, ಜನ ತಮಗೆ ಇಷ್ಟವಾಗುವಷ್ಟು ಸಮಯ ಹೊಲಗಳಲ್ಲಿ ದುಡಿಯುತ್ತಿದ್ದರು. ಈಗ ಸಾವಿರಾರು ಕಾರ್ಮಿಕರು ಕಾರ್ಖಾನೆಯ ಒಳಗೆ, ಇಲ್ಲವೇ ಗಣಿಗಳಲ್ಲಿ ನಿಗದಿತ ವೇಳೆಯವರೆಗೂ ದುಡಿಯುತ್ತಾರೆ; ಶ್ರೀಮಂತ ಮಾಲೀಕರ ಆದಾಯವನ್ನು ಹೆಚ್ಚಿಸಲು ತಮ್ಮ ಜೀವವನ್ನು ಪಣಕ್ಕಿಟ್ಟು ದುಡಿಯುವ ಅನಿವಾರ್ಯತೆಗೆ ಸಿಲುಕಿರುತ್ತಾರೆ. ಹಿಂದೆ, ಮಾನವರನ್ನು ದೈಹಿಕವಾಗಿ ಬಂಧಿಸಿಟ್ಟು ಗುಲಾಮಗಿರಿಗೆ ದೂಡುತ್ತಿದ್ದರು. ಈಗ, ಜನರು ಹಣ ಗಳಿಸುವ ಸುಖ ಕುರಿತು ಮತ್ತು ಅದರಿಂದ ತಾವು ಹೆಚ್ಚಿಸಿಕೊಳ್ಳಬಹುದಾದ ಅಂತಸ್ತನ್ನು ಕುರಿತು ಕನಸು ಕಾಣುತ್ತಾ ತಮ್ಮನ್ನು ತಾವೇ ಗುಲಾಮಗಿರಿಗೆ ಒಡ್ಡಿಕೊಳ್ಳುತ್ತಿದ್ದಾರೆ.

ಈ ನಾಗರಿಕತೆಯು ಪೂರ್ಣವಾಗಿ ಧರ್ಮವನ್ನು ತನ್ನಿಂದ ಹೊರತು ಪಡಿಸಿಕೊಂಡಿದೆ. ಇದು ಯೂರೋಪಿಯನ್ನರ ಮೇಲೆ ಎಂತಹ ಹಿಡಿತವನ್ನು

ಹೊಂದಿದೆ ಎಂದರೆ, ಯೂರೋಪಿಯನ್ನರನ್ನು ಅರೆ ಹುಚ್ಚರೆಂದು ಪರಿಗಣಿಸಬಹುದಾಗಿದೆ! ಇವರು ನಿಜವಾದ ದೈಹಿಕ ಇಲ್ಲವೇ ಮಾನಸಿಕ ಬಲವನ್ನು ಹೊಂದಿಲ್ಲ. ತಮ್ಮ ಬಲವನ್ನು ಮದ್ಯಪಾನದ ಮೂಲಕ ಪಡೆದುಕೊಳ್ಳುತ್ತಾರೆ! ಏಕಾಂತದಲ್ಲಿ ಸಂತೋಷವಾಗಿರುವುದೇ ಇವರಿಗೆ ತಿಳಿದಿಲ್ಲ. ಬಿಡಿಗಾಸಿಗಾಗಿ ಇಂಗ್ಲೆಂಡಿನ ಅರ್ಧ ಮಿಲಿಯನ್ನಿನಷ್ಟು ಮಹಿಳೆಯರು ಫ್ಯಾಕ್ಟರಿಗಳಲ್ಲಿ ದುಡಿಯುತ್ತಾರೆ. ಈ ಅಂಶಗಳೇ ಇಂಗ್ಲೆಂಡಿನಲ್ಲಿ ಶ್ರಮಿಕರ ಚಳುವಳಿಗಳಿಗೆ ನೇರ ಕಾರಣ.

ಈಗ ಕಂಡುಕೇಳರಿಯದ ಕಾಯಿಲೆಗಳು ಮನುಷ್ಯರನ್ನು ಬಾಧಿಸತೊಡಗಿವೆ. ಇವುಗಳಿಗೆ ಸೂಕ್ತ ಚಿಕಿತ್ಸೆ ಕಂಡುಹಿಡಿಯಲು ವೈದ್ಯರ ದೊಡ್ಡ ದಂಡೇ ಇದೆ. ಇದರ ಪರಿಣಾಮವಾಗಿ ಆಸ್ಪತ್ರೆಗಳು ತುಂಬಿ ತುಳುಕುತ್ತಿವೆ.

ಇನ್ನು ಹೆಚ್ಚಿನ ವಿಷಯ ಏನು ಹೇಳಲಿ? ಇದುವರೆಗೆ ಹೇಳಿದ ಎಲ್ಲಾ ಅಂಶಗಳನ್ನು ಪರಿಣತರು ಬರೆದಿರುವ ಪುಸ್ತಕಗಳನ್ನು ಓದಿ, ಪರಾಮರ್ಶಿಸಿ ನೋಡಲು ಅವಕಾಶವಿದೆ. ಇವೆಲ್ಲವೂ ನಾಗರಿಕತೆಯ ನೈಜ ಪರೀಕ್ಷೆಗಳಾಗಿವೆ. ಇಂದಿನ ನಾಗರಿಕತೆ ಯಾವುದೇ ನೈತಿಕ ಅಂಶವನ್ನಾಗಲೀ, ಧಾರ್ಮಿಕ ವಿಚಾರವನ್ನಾಗಲೀ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದೊಂದು ಹುಸಿ ಬೆಳವಣಿಗೆ ಎಂದು ಭಾವಿಸುವವರಿದ್ದಾರೆ. ಹಲವರು ನಾಗರಿಕತೆಯ ಮೇಲೆ ಹುಸಿ ಧರ್ಮದ ಪರದೆಯನ್ನು ಎಳೆದು ತರುವುದರ ಜೊತೆಗೆ ನೈತಿಕತೆಯ ಕುರಿತು ಒಣ ಹರಟೆಯನ್ನೂ ಹೊಡೆಯುತ್ತಾರೆ. ನೈತಿಕತೆಯ ಹೆಸರಿನಲ್ಲಿ ಅನೈತಿಕ ವಿಚಾರಗಳನ್ನೇ ಹೆಚ್ಚು ಕಲಿಸಲಾಗುತ್ತದೆ ಎನ್ನುವುದನ್ನು ನಾನು ನನ್ನ ಇಪ್ಪತ್ತು ವರ್ಷದ ಅನುಭವದಲ್ಲಿ ಅರ್ಥ ಮಾಡಿಕೊಂಡಿದ್ದೇನೆ.

ನಾನು ಇದುವರೆಗೆ ಹೇಳಿರುವ ಅಂಶಗಳನ್ನು ಆಧರಿಸಿ, ನಾಗರಿಕತೆಯಲ್ಲಿ ನೈತಿಕ ವಿಚಾರಗಳಿಗೆ ಯಾವುದೇ ಬೆಂಬಲ ಇಲ್ಲದಿರುವುದನ್ನು ಯಾರೂ ಗುರುತಿಸಬಹುದು. ನಾಗರಿಕತೆಯು ಮನುಷ್ಯರ ದೈಹಿಕ ಸುಖವನ್ನು ಹೆಚ್ಚಿಸುವ ಕಾರ್ಯದಲ್ಲಿ ನಿರತವಾಗಿದೆ; ಅದನ್ನು ಕೂಡ ಸರಿಯಾಗಿ ಸಾಧಿಸದ ಸ್ಥಿತಿಯಲ್ಲಿದೆ.

ನಾವು ತಾಳ್ಮೆಯಿಂದ ಇದ್ದರೆ, ಈ ನಾಗರಿಕತೆ ತನ್ನಿಂದ ತಾನೇ ನಾಶವಾಗುತ್ತದೆ. ಪ್ರವಾದಿ ಮಹಮ್ಮದರ ಪ್ರಕಾರ ಈಗಿರುವುದು ಸೈತಾನನ ನಾಗರಿಕತೆ. ಹಿರಿದೂ ಧರ್ಮ ಇದನ್ನು ಕತ್ತಲ ಯುಗವೆಂದು ಕರೆಯುತ್ತದೆ. ಇದರ ಕುರಿತು ಪೂರ್ಣ ಚಿತ್ರಣ ನೀಡಲು ಆಗುವುದಿಲ್ಲ. ಈ ನಾಗರಿಕತೆಯು ಇಂಗ್ಲೆಂಡನ್ನು ಹಂತಹಂತವಾಗಿ ತಿಂದು ಹಾಕುತ್ತಿದೆ. ಈ ಕುರಿತು ನೀವು ಇನ್ನೂ ಒಂದಿಷ್ಟು ಗಹನವಾಗಿ ಚಿಂತಿಸಿದರೆ, ನೀವುಗಳೂ ಸಹ ಇಂತಹುದೇ ತೀರ್ಮಾನಕ್ಕೆ ಬರುತ್ತೀರಿ.

ಇಂಗ್ಲಿಷ್ ಜನರು ನಿಜಕ್ಕೂ ಬುದ್ಧಿವಂತರು, ಉದ್ಯಮಶೀಲರು ಮತ್ತು ಶ್ರಮಜೀವಿಗಳು. ಅವರ ಆಲೋಚನಾ ವಿಧಾನದಲ್ಲಿ ಅನೈತಿಕತೆ ಇರುವುದಿಲ್ಲ ಮತ್ತು ಸ್ವಭಾವತಃ ಅವರು ಕೆಟ್ಟವರಲ್ಲ. ಹಾಗಾಗಿ ಅವರನ್ನು ನಾನು ಗೌರವಿಸುತ್ತೇನೆ. ನಾಗರಿಕತೆ ಎನ್ನುವುದು ಗುಣಪಡಿಸಲಾಗದ ಕಾಯಿಲೆಯೇನೂ ಅಲ್ಲ. ಆದರೆ, ಈ ಕ್ಷಣದಲ್ಲಿ ಇಂಗ್ಲಿಷ್ ಜನತೆ ಈ ಕಾಯಿಲೆಯಿಂದ ಪೀಡಿತರಾಗಿದ್ದಾರೆ ಎನ್ನುವುದನ್ನು ಮಾತ್ರ ನಾವು ಮರೆಯಬಾರದು.

('ಹಿಂದ್ ಸ್ವರಾಜ್' ಪುಸ್ತಕದಿಂದ.)

ಕನ್ನಡಕ್ಕೆ: **ಸದಾನಂದ ಆರ್.**

೨೪

ಹಿಂದೂಗಳು ಮತ್ತು ಮುಸ್ಲಿಮರು

ಓದುಗ: ಇಸ್ಲಾಂ ಧರ್ಮದ ಪ್ರವೇಶದಿಂದ ಭಾರತಕ್ಕೆ ಘಾಸಿಯಾಯಿತೆ?

ಸಂಪಾದಕ: ಭಿನ್ನ ಧರ್ಮಗಳಿಗೆ ಸೇರಿದ ಜನರು ಭಾರತದಲ್ಲಿ ಜೀವಿಸುತ್ತಾರೆ ಎನ್ನುವ ಏಕೈಕ ಕಾರಣಕ್ಕೆ, ಭಾರತವು ಒಂದು ರಾಷ್ಟ್ರವಾಗದೆ ಇರಲು ಸಾಧ್ಯವಿಲ್ಲ. ಪರಕೀಯರು ಭಾರತವನ್ನು ಪ್ರವೇಶಿಸಿದ ನಂತರ ಅವರು ಇಲ್ಲಿರುವ ಎಲ್ಲರಲ್ಲಿ ಒಂದಾಗುತ್ತಾರೆ. ಇಂತಹ ಸನ್ನಿವೇಶಗಳು ಸೃಷ್ಟಿಯಾದ ನಂತರವೇ ದೇಶವು ರಾಷ್ಟ್ರವಾಗಿ ರೂಪುಗೊಳ್ಳಲು ಸಾಧ್ಯವಾಗುವುದು. ಯಾವುದೇ ದೇಶಕ್ಕೆ ಹೊಸದನ್ನು ಒಳಗೊಳ್ಳುವ ಅವಕಾಶವಿರಬೇಕು. ಹಾಗೆ ನೋಡಿದರೆ, ವ್ಯಕ್ತಿಗಳು ಎಷ್ಟು ಸಂಖ್ಯೆಯಲ್ಲಿದ್ದಾರೋ ಅಷ್ಟೇ ಸಂಖ್ಯೆಯ ಧರ್ಮಗಳಿವೆ. ಯಾರಿಗೆ ರಾಷ್ಟ್ರದ ಪರಿಕಲ್ಪನೆ ಸ್ಪಷ್ಟವಾಗಿರುತ್ತದೋ ಅವರು ಇನ್ನೊಬ್ಬರ ಧರ್ಮದ ವಿಚಾರದಲ್ಲಿ ಮೂಗು ತೂರಿಸದೆ ಇರುವಂಥವರಾಗಿರುತ್ತಾರೆ.

ಹಿಂದೂಗಳು ಮಾತ್ರ ಭಾರತದಲ್ಲಿ ಜೀವಿಸಬೇಕೆಂದು ಹಿಂದೂಗಳು ಭಾವಿಸಿದ್ದಲ್ಲಿ, ಅವರು ಮೂರ್ಖರ ಪ್ರಪಂಚದಲ್ಲಿ ಇದ್ದಾರೆಂದು ತಿಳಿಯಬೇಕು. ಹಿಂದೂಗಳು, ಮುಸ್ಲಿಮರು, ಪಾರಸಿಗಳು ಮತ್ತು ಕ್ರಿಶ್ಚಿಯನ್ನರು ಎಲ್ಲರೂ ಸೇರಿ ಭಾರತವನ್ನು ನಿರ್ಮಿಸಿದ್ದಾರೆ. ಇವರೆಲ್ಲರೂ ಭಾರತದ ನಿವಾಸಿಗಳು. ಇವರು ತಮ್ಮ ಒಳಿತಿಗಾಗಿಯೇ ಐಕ್ಯತೆಯಿಂದ ಜೀವಿಸಬೇಕಾಗುತ್ತದೆ. ವಿಶ್ವದ ಯಾವುದೇ ಮೂಲೆಯಲ್ಲೂ ಸಹ ರಾಷ್ಟ್ರ ಮತ್ತು ಧರ್ಮ ಸಮಾನಾರ್ಥಕ ಪರಿಕಲ್ಪನೆಗಳೆಂದು ಪರಿಗಣಿತವಾಗಿಲ್ಲ. ಹಾಗೆಯೇ ಭಾರತದಲ್ಲಿಯೂ ಸಹ ಇಂತಹ ಪರಿಸ್ಥಿತಿ ಎಂದಿಗೂ ಇರಲಿಲ್ಲ.

ಓದುಗ: ಹಾಗಿದ್ದರೆ, ಹಿಂದೂಗಳು ಹಾಗೂ ಮುಸ್ಲಿಮರ ನಡುವಿನ ಜನ್ಮಜಾತ ವೈರತ್ವದ ಕುರಿತು ಏನು ಹೇಳುತ್ತೀರಿ?

ಸಂಪಾದಕ: ಅದು ವೈರಿಗಳು ಸೃಷ್ಟಿಸಿರುವ ಕತೆ. ಹಿಂದೂಗಳು ಮತ್ತು ಮುಸಲ್ಮಾನರು ಪರಸ್ಪರ ಹೊಡೆದಾಡುವುದನ್ನು ನಿಲ್ಲಿಸಿ ಬಹಳ ಕಾಲವಾಯ್ತು. ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡ ನಂತರವಷ್ಟೇ ಅವರು ಹೊಡೆದಾಡುವುದನ್ನು ನಿಲ್ಲಿಸಲಿಲ್ಲ. ನೀವು ಇದನ್ನು ಸರಿಯಾಗಿ ಗಮನಿಸಬೇಕು. ಮುಸ್ಲಿಮರ ಆಳ್ವಿಕೆಯಲ್ಲಿ ಹಿಂದೂಗಳು ಪ್ರವರ್ಧಮಾನಕ್ಕೆ, ಹಿಂದೂಗಳ ಆಳ್ವಿಕೆಯಲ್ಲಿ ಮುಸ್ಲಿಮರು ಪ್ರವರ್ಧಮಾನಕ್ಕೆ ಬಂದರು ಎನ್ನುವುದನ್ನೂ ಸಹ ಇಲ್ಲಿ ಗುರುತಿಸಬೇಕು. ಪರಸ್ಪರ ಹೊಡೆದಾಡುವುದು ಆತ್ಮಹತ್ಯಾಕಾರಿ ಎನ್ನುವುದು ಎರಡೂ ಕಡೆಯವರಿಗೂ ಅರ್ಥವಾಗಿದೆ.

ಆದರೆ ಬ್ರಿಟಿಷರ ಆಗಮನದಿಂದ ಈ ಇಬ್ಬರ ನಡುವಿನ ಜಗಳಗಳಿಗೆ ಹೊಸದಾಗಿ ಕುಮ್ಮಕ್ಕು ದೊರೆತಿದೆ. ನೀವು ಹೇಳಿದ ಈರ್ವರೂ ಹೊಡೆದಾಡುತ್ತಿದ್ದಾಗ ಸೃಷ್ಟಿಯಾದ ಈ ಮಾತು ಸಾಂಪ್ರದಾಯಿಕ ಅರ್ಥದ ಮಾತು. ಅದನ್ನು ಈಗ ಬಳಕೆ ಮಾಡುವುದು ಅಪಾಯಕಾರಿ. ಅನೇಕ ಹಿಂದೂಗಳು ಮತ್ತು ಮುಸ್ಲಿಮರು ಸಮಾನ ಪೂರ್ವಜರನ್ನು ಹೊಂದಿದ್ದು, ಒಂದೇ ರಕ್ತವನ್ನು ಹಂಚಿಕೊಂಡವರು ಎನ್ನುವುದನ್ನು ನಾವು ಮರೆಯಬಾರದು, ಅಲ್ಲವೆ? ಕೇವಲ ಧರ್ಮವನ್ನು ಬದಲಾಯಿಸಿದ ಒಂದೇ ಕಾರಣಕ್ಕೆ ಜನರು ಪರಸ್ಪರ ಶತ್ರುಗಳಾಗಬೇಕೆಂದು ಇದೆಯೆ? ಹಿಂದೂಗಳ ದೇವರಿಗಿಂತ ಮುಸ್ಲಿಮರ ದೇವರು ಭಿನ್ನವೆ? ಧರ್ಮಗಳು ಒಂದೇ ಗುರಿಯೆಡೆಗೆ ಪಯಣಿಸುವ ಭಿನ್ನ ದಾರಿಗಳು ಮಾತ್ರ. ನಾವೆಲ್ಲಾ ಒಂದೇ ಗುರಿಯೆಡೆಗೆ ಸಾಗುತ್ತಿರುವಾಗ ಭಿನ್ನ ಹಾದಿಗಳನ್ನು ಹಿಡಿಯುವುದರಿಂದ ಆಗುವ ವ್ಯತ್ಯಾಸವಾದರೂ ಏನು?

ಎಲ್ಲಕ್ಕಿಂತ ಹೆಚ್ಚಾಗಿ, ಶೈವ ಮತ್ತು ವೈಷ್ಣವರ ವಿಷಯದಲ್ಲಿ ನೀವು ಹೇಳಿದ ಜನ್ಮಜಾತ ವೈರತ್ವದ ಕುರಿತು ಭೀಕರ ಕತೆಗಳಿವೆ. ಆದರೆ ಈ ಇಬ್ಬರೂ ಒಂದೇ ರಾಷ್ಟ್ರಕ್ಕೆ ಸೇರಿದವರಲ್ಲ ಎಂದು ಯಾರೂ ಹೇಳುತ್ತಿಲ್ಲ, ಅಲ್ಲವೆ?

ಮೂರ್ತಿಭಂಜಕರು ಹಿಂದೂಗಳಲ್ಲೂ ಇದ್ದಾರೆ, ಮುಸ್ಲಿಮರಲ್ಲೂ ಇದ್ದಾರೆ. ಈ ಸತ್ಯವನ್ನು ನಾವು ಅರ್ಥಮಾಡಿಕೊಂಡಷ್ಟೂ ಪರಸ್ಪರ ತಿಳುವಳಿಕೆಯನ್ನು ಮೂಡಿಸಿ ಕೊಳ್ಳಲು ಅವಕಾಶವಿದೆ. ಯಾವುದೇ ಧರ್ಮವನ್ನು ನಾವು ಅನುಸರಿಸಿದರೂ ಪರಸ್ಪರ ಜಗಳ ಆಡಬೇಕಿಲ್ಲ ಎನ್ನುವ ಅರಿವು ನಮ್ಮಲ್ಲಿ ಮೂಡಬೇಕು.

ಓದುಗ: ಗೋ ಸಂರಕ್ಷಣೆ ಕುರಿತು ನಿಮ್ಮ ಅಭಿಪ್ರಾಯ ತಿಳಿಸುವಿರಾ?

ಸಂಪಾದಕ: ನಾನು ಗೋವನ್ನು ಗೌರವಿಸುತ್ತೇನೆ; ಅದನ್ನು ಬಹಳ ಆದರದಿಂದ ಕಾಣುತ್ತೇನೆ. ಒಂದು ಕೃಷಿ ಪ್ರಧಾನ ದೇಶವಾಗಿ ಭಾರತವು ಗೋವನ್ನು ಅವಲಂಬಿಸಿದೆ. ಗೋವು ನೂರಾರು ರೀತಿಯಲ್ಲಿ ಪ್ರಯೋಜನಕಾರಿಯಾದ ಪ್ರಾಣಿ. ಇದನ್ನು ನನ್ನ

ಮುಸಲ್ಮಾನ ಸಹೋದರರು ಕೂಡ ಒಪ್ಪುತ್ತಾರೆ. ನಾನು ಹೇಗೆ ಗೋವನ್ನು ಗೌರವಿಸುತ್ತೇನೋ, ಅದೇ ರೀತಿಯಲ್ಲಿ ನನ್ನ ದೇಶವಾಸಿಗಳನ್ನೂ ಸಹ ಗೌರವಿಸುತ್ತೇನೆ. ಓರ್ವ ಹಿಂದೂ ಇಲ್ಲವೇ ಮುಸ್ಲಿಂ ವ್ಯಕ್ತಿ ಗೋವಿನಷ್ಟೇ ಉಪಯುಕ್ತನಾಗಿದ್ದಾನೆ. ಹೀಗಿದ್ದಾಗ, ನಾನು ಗೋ ಸಂರಕ್ಷಣೆಗೋಸ್ಕರ ಓರ್ವ ಮುಸ್ಲಿಮನನ್ನು ಕೊಲ್ಲಲು ಮುಂದಾಗುತ್ತೇನೆಯೆ? ಅಥವಾ ಅವನೊಂದಿಗೆ ಜಗಳಕ್ಕೆ ನಿಲ್ಲುತ್ತೇನೆಯೆ? ಒಂದು ವೇಳೆ ನಾನು ಹೀಗೆ ಮಾಡಿದೆ ಎಂದಾದರೆ, ನಾನು ಏಕಕಾಲಕ್ಕೆ ಗೋವಿನ ಮತ್ತು ಮುಸ್ಲಿಮರ ಶತ್ರುವಾದೆ ಎಂದರ್ಥ.

ಗೋವನ್ನು ರಕ್ಷಿಸಿಕೊಳ್ಳಲು ನನಗಿರುವ ಏಕೈಕ ಮಾರ್ಗವೆಂದರೆ, ಗೋವನ್ನು ರಕ್ಷಿಸುವಲ್ಲಿ ಕೈಜೋಡಿಸುವಂತೆ ನನ್ನ ದೇಶವಾಸಿಗಳಾದ ಮುಸಲ್ಮಾನರ ಸಹಕಾರವನ್ನು ಕೋರುವುದು. ಒಂದು ವೇಳೆ ನಾನು ಇದನ್ನು ಸಾಧಿಸುವಲ್ಲಿ ವಿಫಲಗೊಂಡರೆ, ಗೋವನ್ನು ಬಿಟ್ಟು ಬಿಡುತ್ತೇನೆ. ಗೋವಿನ ಜೀವ ನನಗೆ ಮುಖ್ಯವೆನಿಸಿದರೆ, ನನ್ನನ್ನು ನಾನು ಬಲಿಕೊಟ್ಟುಕೊಳ್ಳುತ್ತೇನೆಯೇ ವಿನಃ, ನನ್ನ ಸಹೋದರನ ಪ್ರಾಣ ತೆಗೆಯಲು ಮುಂದಾಗುವುದಿಲ್ಲ. ಇದು ನನ್ನ ಧರ್ಮ ನನಗೆ ವಿಧಿಸಿರುವ ನಿಯಮವೆಂದು ತಿಳಿದಿದ್ದೇನೆ.

ಹಿಂದೂಗಳು ಹಠಕ್ಕೆ ಇಳಿದಾಗಲೆಲ್ಲಾ, ಗೋವುಗಳ ಹತ್ಯೆಯ ಪ್ರಮಾಣ ಹೆಚ್ಚಾಗಿದೆ. ನನ್ನ ಒಡಹುಟ್ಟಿದ ಸಹೋದರ ಗೋವನ್ನು ಹತ್ಯೆ ಮಾಡುವಾಗ ನಾನೇನು ಮಾಡಬೇಕು? ಅವನನ್ನು ಕೊಲ್ಲಲು ಮುಂದಾಗಬೇಕೇ, ಇಲ್ಲಾ ಆತನ ಕಾಲಿಗೆ ಬಿದ್ದು ಅಂತಹ ಕಾರ್ಯವನ್ನು ಮಾಡಬೇಡವೆಂದು ಕೋರಬೇಕೆ? ನಾನಂತೂ ಅವನ ಕಾಲಿಗೆ ಬಿದ್ದು ಬೇಡಿಕೊಳ್ಳುವುದನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತೇನೆ. ಇದನ್ನೇ ನನ್ನ ಮುಸ್ಲಿಂ ಸಹೋದರರ ಜೊತೆಗೂ ಮಾಡುತ್ತೇನೆ.

ಜನರು ಹಠಕ್ಕೆ ಬಿದ್ದಾಗ ಎಲ್ಲವೂ ಕಠಿಣವಾಗಿಬಿಡುತ್ತದೆ. ನಾನು ಒಂದು ಕಡೆಗೆ ಜಗ್ಗಿದರೆ, ನನ್ನ ಮುಸಲ್ಮಾನ ಸಹೋದರ ಇನ್ನೊಂದು ಕಡೆಗೆ ಜಗ್ಗಲು ಆರಂಭಿಸುತ್ತಾನೆ. ನಾನೊಂದು ವೇಳೆ ಮೇಲರಿಮೆಯ ವರ್ತನೆಯನ್ನು ತೋರಿದರೆ, ಪ್ರತಿಯಾಗಿ ಅದಕ್ಕೆ ಸಮನಾದ ವರ್ತನೆಯನ್ನು ಅವನು ತೋರುತ್ತಾನೆ. ಒಂದು ವೇಳೆ ನಾನು ಅವನಿಗೆ ಗೌರವದಿಂದ ಬಾಗಿ ವಂದಿಸಿದರೆ, ಆತನೂ ಬಾಗಿ ವಂದಿಸುತ್ತಾನೆ. ಹಾಗೊಂದು ವೇಳೆ ಆತ ವಂದಿಸಲಿಲ್ಲ ಎಂದಾದರೂ, ನಾನು ಆತನಿಗೆ ವಂದಿಸಿ ತಪ್ಪು ಮಾಡಿದೆ ಎನ್ನಲು ಕಾರಣವಂತೂ ಇಲ್ಲ.

ಅಂತಿಮವಾಗಿ ಹೇಳುವುದಾದರೆ, ಹಿಂದೂಗಳು ಅಹಿಂಸೆಯಲ್ಲಿ ನಂಬಿಕೆ ಹೊಂದಿದ್ದಾರೆ, ಮುಸ್ಲಿಮರು ಹೊಂದಿಲ್ಲ ಎನ್ನುವುದಾದಲ್ಲಿ, ಹಿಂದೂಗಳ ಕರ್ತವ್ಯ

ಏನಾಗುತ್ತದೆ? ಅಹಿಂಸೆಯಲ್ಲಿ ನಂಬಿಕೆಯಿಟ್ಟವರು ವ್ಯಕ್ತಿಯನ್ನು ಕೊಲ್ಲಬಹುದು ಎಂದು ಯಾವ ಶಾಸ್ತ್ರವೂ ಹೇಳಿಲ್ಲ. ಇಂತಹವರಿಗೆ ಇರುವ ಮಾರ್ಗ ನೇರವೂ, ಸ್ಪಷ್ಟವೂ ಆಗಿದೆ. ಒಂದು ಜೀವವನ್ನು ರಕ್ಷಿಸಲು ಇನ್ನೊಂದು ಜೀವವನ್ನು ಹತ್ಯೆಗೈಯುವಂತಿಲ್ಲ.

ಆದರೆ ಪ್ರತಿಯೊಬ್ಬ ಹಿಂದೂವಿಗೂ ಅಹಿಂಸೆಯಲ್ಲಿ ನಂಬಿಕೆ ಇದೆಯೇ? ವಿಷಯದ ಆಳಕ್ಕೆ ಇಳಿದು ನೋಡುವುದಾದರೆ, ಪಾಪಕೃತ್ಯಕ್ಕೆಳಸಲು ಯಾವುದೇ ವ್ಯಕ್ತಿ ಧರ್ಮವನ್ನೂ ಆಚರಿಸುವುದಿಲ್ಲ; ಜೀವಹಾನಿಯನ್ನು ಮಾಡದಿರುವುದಕ್ಕಾಗಿಯೇ ಧರ್ಮವನ್ನು ಆಚರಿಸುವುದು ಎಂದು ಹೇಳಲಾಗುತ್ತದೆ. ಹಿಂದೂಗಳು ಮತ್ತು ಮುಸಲ್ಮಾನರು ಒಟ್ಟಿಗೆ ವಿಶ್ವಾಸದಿಂದ ಸ್ನೇಹದಿಂದ ಇರಲು ಸಾಧ್ಯವಿಲ್ಲ ಎನ್ನುವುದು ನಿಜಕ್ಕೂ ಹುಸಿ ನಂಬಿಕೆ.

ತಪ್ಪುಗ್ರಹಿಕೆಗೆ ಒಳಗಾಗಬಾರದೆಂದು ಬಯಸುವವರು ಕುರಾನ್ ಓದಿ ನೋಡ ಬೇಕು. ಒಮ್ಮೆ ಓದಿದರೆ, ಅದರಲ್ಲಿ ಹಿಂದೂಗಳಿಗೂ ಸಹ್ಯವಾಗುವ ನೂರಾರು ಸಾಲುಗಳಿವೆ ಎನ್ನುವುದು ಅರಿವಾಗುತ್ತದೆ. ಹಾಗೆಯೇ ಭಗವದ್ಗೀತೆಯಲ್ಲಿ ಮುಸ್ಲಿಮರಿಗೆ ಇಷ್ಟವಾಗುವ ಅನೇಕ ಸಾಲುಗಳಿವೆ ಎನ್ನುವುದು ತಿಳಿಯುತ್ತದೆ. ನನಗೆ ಅಷ್ಟೇನೂ ತಿಳಿಯದ ಕುರಾನ್‌ನ ಹಾದಿಯಲ್ಲಿ ಮುಸಲ್ಮಾನರು ಸಾಗುತ್ತಾರೆ ಅನ್ನುವ ಏಕೈಕ ಕಾರಣಕ್ಕೆ ಅವರನ್ನು ನಾನು ಇಷ್ಟಪಡದಿರಲೆ?

ಪ್ರತಿಯೊಬ್ಬರೂ ತಮ್ಮ ಧರ್ಮವನ್ನು ಸೂಕ್ತ ರೀತಿಯಲ್ಲಿ ಅರ್ಥಮಾಡಿಕೊಂಡು ಅದರ ಪ್ರಕಾರ ನಡೆದುಕೊಂಡಲ್ಲಿ, ಸುಳ್ಳು ಪ್ರಚಾರಕರ ಮಾತಿಗೆ ಬೆಲೆ ಕೊಡದೇ ಹೋದಲ್ಲಿ, ಯಾವುದೇ ಜಗಳಕ್ಕೆ ಆಸ್ಪದ ನೀಡದೆ ಬದುಕಲು ಅವಕಾಶವಾಗುತ್ತದೆ.

ಓದುಗ: ಆದರೆ ಇಂಗ್ಲಿಷರು ಹಿಂದೂ ಮತ್ತು ಮುಸ್ಲಿಮರನ್ನು ಜೊತೆಯಲ್ಲಿರಲು ಬಿಡುವರೆ?

ಸಂಪಾದಕ: ಇಬ್ಬರು ಸಹೋದರರು ಒಟ್ಟಿಗೆ ಇರಲು ನಿರ್ಧರಿಸಿದಾಗ, ಮೂರನೇ ವ್ಯಕ್ತಿ ಇದಕ್ಕೆ ಅಡೆತಡೆಗಳನ್ನು ನಿರ್ಮಿಸಲು ಸಾಧ್ಯವೆ? ಒಂದು ವೇಳೆ ಇಬ್ಬರೂ ಇಂತಹ ಧೂರ್ತ ಬುದ್ಧಿವಾದಕ್ಕೆ ಕಿವಿಕೊಟ್ಟಿದ್ದೇ ಆದಲ್ಲಿ, ಇಬ್ಬರನ್ನೂ ಮೂರ್ಖರು ಎನ್ನಬೇಕಾಗುತ್ತದೆ. ಹಿಂದೂಗಳು ಹಾಗೂ ಮುಸ್ಲಿಮರು ಒಟ್ಟಿಗೆ ಬದುಕಲಾಗದ ಪರಿಸ್ಥಿತಿಯನ್ನು ನಾವು ನಿರ್ಮಿಸಿಕೊಂಡರೆ ಅದಕ್ಕೆ ನಮ್ಮ ಮೂರ್ಖತನ ಕಾರಣವೇ ಹೊರತು, ಬ್ರಿಟಿಷರನ್ನು ದೂರಿ ಪ್ರಯೋಜನವಿಲ್ಲ. ಮಣ್ಣಿನ ಮಡಕೆ ಒಂದು ಕಲ್ಲಿನಿಂದ ಅಲ್ಲದಿದ್ದರೂ, ಇನ್ನೊಂದು ಕಲ್ಲಿನಿಂದಾದರೂ ಒಡೆದೇ ಒಡೆಯುತ್ತದೆ. ಹಾಗಾಗಿ, ಮಡಕೆ ಒಡೆಯದಂತೆ ಮಾಡಲು ಕಲ್ಲುಗಳಿಂದ ದೂರವಿಡುವುದು

ಸರಿಯಾದ ಕ್ರಮವಲ್ಲ. ಬದಲಿಗೆ ಮಡಕೆಯನ್ನು ಯಾವ ಕಲ್ಲೂ ಚೂರು ಮಾಡಲಾಗದಂತೆ ಸೂಕ್ತ ರೀತಿಯಲ್ಲಿ ತಯಾರಿಸಬೇಕು. ನಮ್ಮ ಹೃದಯಗಳನ್ನು ಸೂಕ್ತವಾಗಿ ಬೆಂದಿರುವ ಮಡಕೆಯಂತೆ ನಿರ್ಮಿಸಿಕೊಳ್ಳಬೇಕಾಗಿದೆ.

ಈಗ ಎರಡೂ ಸಮುದಾಯಗಳ ನಡುವೆ ಅಪನಂಬಿಕೆ ಇದೆ. ಹಾಗಾಗಿ ಮುಸಲ್ಮಾನರು ಲಾರ್ಡ್ ಮಾರ್ಲೆಯಿಂದ ಕೆಲವು ವಿನಾಯಿತಿಗಳನ್ನು ಕೋರಿದ್ದಾರೆ. ಹಿಂದೂಗಳು ಇದನ್ನು ಏಕೆ ವಿರೋಧಿಸಬೇಕು? ಒಂದು ವೇಳೆ ಇಂತಹ ವಿರೋಧಗಳಿಂದ ಹಿಂದೂಗಳು ದೂರ ಉಳಿದರೆ, ಬ್ರಿಟಿಷರು ಇದನ್ನು ಗಮನಿಸಲು ಶುರು ಮಾಡುತ್ತಾರೆ ಮತ್ತು ಮುಸಲ್ಮಾನರು ನಿಧಾನವಾಗಿ ಹಿಂದೂಗಳನ್ನು ನಂಬಲು ಶುರು ಮಾಡುತ್ತಾರೆ; ಹಂತಹಂತವಾಗಿ ಸಹೋದರತ್ವ ಇಬ್ಬರ ನಡುವೆ ಮೂಡಲು ಅವಕಾಶವಾಗುತ್ತದೆ. ಮತ್ತೊಬ್ಬರಲ್ಲಿ ವಿಶ್ವಾಸವನ್ನು ಮೂಡಿಸಲು ಸಫಲನಾದ ವ್ಯಕ್ತಿ ಯಾವ ಹಂತದಲ್ಲೂ ಸೋತ ಉದಾಹರಣೆ ಈ ಜಗತ್ತಿನಲ್ಲಿ ಇಲ್ಲ.

ನಾನು ಹೀಗೆ ಹೇಳುತ್ತಿರುವಾಗ, ಭವಿಷ್ಯದಲ್ಲಿ ಹಿಂದೂ-ಮುಸ್ಲಿಮರು ಪರಸ್ಪರ ಜಗಳವಾಡುವುದೇ ಇಲ್ಲ ಎಂದು ಅರ್ಥವಲ್ಲ. ಜೊತೆಯಲ್ಲಿ ಬದುಕುವ ಇಬ್ಬರು ಸಹೋದರರ ನಡುವೆ ಆಗಾಗ್ಗೆ ಜಗಳಗಳಾಗುವುದು ಸಹಜವಲ್ಲವೆ? ಇಂತಹ ಸನ್ನಿವೇಶಗಳು ಅನಿವಾರ್ಯವಲ್ಲದಿದ್ದರೂ, ಎಲ್ಲರೂ ಒಂದೇ ರೀತಿಯಲ್ಲಿ ಯೋಚನೆ ಮಾಡಲು ಅಸಮರ್ಥರು ಎನ್ನುವುದು ಮಾತ್ರ ವಾಸ್ತವವೇ ಆಗಿದೆ.

('ಹಿಂದ್ ಸ್ವರಾಜ್' ಪುಸ್ತಕದಿಂದ.)

ಕನ್ನಡಕ್ಕೆ: ಸದಾನಂದ ಆರ್.

೨೫

ಸ್ವದೇಶಿ ಮತ್ತು ಸ್ವರಾಜ್ಯ

ಓದುಗ: ನೀವು ಹೇಳುತ್ತಿರುವ [ಸ್ವರಾಜ್ಯದ ಕಲ್ಪನೆ] ತೀರಾ ವಿಶಾಲವಾದುದು. ಇದನ್ನು ಎಲ್ಲರೂ ಸೇರಿ ಯಾವ ಕಾಲಕ್ಕೆ ಮುಂದೊಯ್ಯಬಲ್ಲರು?

ಸಂಪಾದಕ: ಇದೇ ನೀವು ಮಾಡುತ್ತಿರುವ ತಪ್ಪು. ಇತರರು ಏನು ಮಾಡುತ್ತಾರೆ ಎಂಬುದು ನನಗೂ ನಿಮಗೂ ಸಂಬಂಧಿಸಿದ್ದಲ್ಲ. ಮೊದಲು ಪ್ರತಿಯೊಬ್ಬರೂ ತಂತಮ್ಮ ಕರ್ತವ್ಯ ಮಾಡಲಿ. ನಾನು ನನ್ನ ಕರ್ತವ್ಯ ಮಾಡಿದರೆ, ನನ್ನ ಸೇವೆಯನ್ನು ನಾನು ಮಾಡಿದರೆ, ಇತರರ ಸೇವೆಯನ್ನೂ ಮಾಡಲು ಸಾಧ್ಯ. ಈ ಮಾತುಗಳನ್ನು ಮುಗಿಸುವ ಮೊದಲು, [ಈವರೆಗೆ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ] ಹೇಳಿದ್ದನ್ನೆಲ್ಲ ಮತ್ತೆ ಸಾರಾಂಶ ರೂಪದಲ್ಲಿ ಹೇಳುತ್ತೇನೆ:

೧. ನಿಜವಾದ ಸ್ವರಾಜ್ಯ ಎಂದರೆ ತನ್ನ ಮನಸ್ಸನ್ನು ತಾನೇ ಆಳುವುದು.

೨. ಈ ಆಳ್ವಿಕೆಯನ್ನು ಸಾಧಿಸುವ ಮಾರ್ಗವೆಂದರೆ ನಿಷ್ಕ್ರಿಯ ಪ್ರತಿರೋಧ: ಅಂದರೆ, ಆತ್ಮಬಲ ಹಾಗೂ ಪ್ರೀತಿಬಲ.

೩. ಈ ಬಲವನ್ನು ಪ್ರತಿಪಾದಿಸಲು ಎಲ್ಲ ಅರ್ಥದಲ್ಲೂ ಸ್ವದೇಶಿ ಅತ್ಯಗತ್ಯ.

೪. ನಾವು ಮಾಡಬಯಸುವುದನ್ನು ಮಾಡಲೇಬೇಕಾಗಿರುವುದು ನಾವು ಇಂಗ್ಲಿಷರನ್ನು ವಿರೋಧಿಸುತ್ತೇವೆಂದಾಗಲೀ, ಅವರಿಗೆ ಬುದ್ಧಿ ಕಲಿಸಬೇಕೆಂದಾಗಲೀ ಅಲ್ಲ; ಇದು ನಮ್ಮ ಕರ್ತವ್ಯವೆಂದು ತಿಳಿದು ಮಾಡಬೇಕು... ನಾವು ಈವರೆಗೆ ಸ್ವರಾಜ್ಯದ ನಿಜ ಅರ್ಥ ತಿಳಿಯದೇ ಅದನ್ನು ಬಳಸುತ್ತಾ ಬಂದಿದ್ದೇವೆ. ನಾನು ಅದನ್ನು ಅರ್ಥ ಮಾಡಿಕೊಂಡಿರುವ ರೀತಿಯನ್ನು ಮಂಡಿಸುವ ಪ್ರಯತ್ನ ಮಾಡಿದ್ದೇನೆ. ನನ್ನ ಜೀವನ ಆ ಸ್ವರಾಜ್ಯವನ್ನು ಗಳಿಸಲು ಮುಡಿಪಾಗಿದೆ ಎಂದು ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೇನೆ.

('ಹಿಂದ್ ಸ್ವರಾಜ್' ಪುಸ್ತಕದ ಸಮಾರೋಪ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

ಭಾಗ : ೩

ಗಾಂಧೀ ಪರಿಕಲ್ಪನೆಗಳು

ಎರಡು ಬಗೆಯ ಚಿಂತನೆಗಳಿವೆ: ಒಂದು, ನಿಷ್ಕ್ರಿಯ ಚಿಂತನೆ. ಎರಡು, ಕ್ರಿಯಾಶೀಲ ಚಿಂತನೆ. ನಮ್ಮ ತಲೆಯಲ್ಲಿ ಸಾವಿರಾರು ಚಿಂತನೆಗಳು ಸುತ್ತುತ್ತಿರಬಹುದು. ಅವು ಲೆಕ್ಕಕ್ಕಿಲ್ಲ. ನಮ್ಮ ಆಳದಲ್ಲಿ ಮೂಡಿ, ನಮ್ಮ ವ್ಯಕ್ತಿತ್ವದ ಅಖಂಡ ತೀವ್ರತೆಯಿಂದ ಮೂಡಿಬರುವ ಒಂದು ಶುದ್ಧ ಕ್ರಿಯಾಶೀಲ ಚಿಂತನೆ ಚಾಲಕ ಶಕ್ತಿಯುಳ್ಳದ್ದಾಗಿರುತ್ತದೆ; ಅದು ಫಲಿತ ಅಂಡಾಣುವಿನಂತೆ ಕೆಲಸ ಮಾಡುತ್ತಿರುತ್ತದೆ.

ಮೋಹನದಾಸ್ ಕರಮಚಂದ್ ಗಾಂಧಿ

೨೬

ಸ್ವರಾಜ್ಯ

ಸ್ವರಾಜ್ಯ ಎನ್ನುವುದು ಪವಿತ್ರವಾದ ಶಬ್ದ. ವೇದಗಳ ಶಬ್ದವಾದ ಇದು ಸ್ವಯಮಾಡಳಿತವನ್ನು ಮತ್ತು ಸಂಯಮವನ್ನು ಸೂಚಿಸುತ್ತದೆ. 'ಸ್ವಾತಂತ್ರ್ಯ' ಎಂಬ ಶಬ್ದವು ಸೂಚಿಸುವಂತೆ 'ಎಲ್ಲ ಮಿತಿಗಳಿಂದ ದೂರವಿರುವುದು' ಎನ್ನುವ ಅರ್ಥವನ್ನು ಇದು ಕೊಡುವುದಿಲ್ಲ. 'ಸ್ವರಾಜ್' ಎಂದರೆ ನನ್ನನ್ನು ನಾನು ನಿಯಂತ್ರಿಸಿಕೊಳ್ಳುವುದು, ನನ್ನನ್ನು ನಾನು ಆಳಿಕೊಳ್ಳುವುದು ಎಂಬ ಅರ್ಥವೂ ಇದೆ.

ಪ್ರತಿಯೊಂದು ದೇಶಕ್ಕೂ ತನ್ನದೇ ಆದ ರೀತಿಯಲ್ಲಿ ಆಹಾರವನ್ನು ಸೇವಿಸುವ ಮತ್ತು ಉಸಿರಾಡುವ ಹಕ್ಕು ಇರುವಂತೆ, ಪ್ರತಿಯೊಂದು ದೇಶವೂ ತನ್ನ ವ್ಯವಹಾರವನ್ನು ತಾನೇ ನಿಭಾಯಿಸುವ ಹಕ್ಕನ್ನೂ ಹೊಂದಿದೆ. ಇಂತಹ ನಿಭಾಯಿಸುವಿಕೆ ದಯನೀಯ ಸ್ಥಿತಿಯಲ್ಲಿದ್ದರೂ ಸರಿಯೇ, ಅದು ಸ್ವಯಂ ನಿಭಾಯಿಸುವಿಕೆ ಆಗಿರತಕ್ಕದ್ದು.

ನನ್ನ ಪ್ರಕಾರ ಸ್ವರಾಜ್ ಎಂದರೆ ಹೀಗಿರುತ್ತದೆ: ಅದು ಜನರ ಒಪ್ಪಿಗೆಯಿಂದ ರಚಿತವಾದ ಭಾರತ ಸರ್ಕಾರವಾಗಿರುತ್ತದೆ. ಈ ಸರ್ಕಾರವು ಮತದಾರರಾಗಿ ನೋಂದಾಯಿತರಾದ ವಯಸ್ಕರ–ಹೆಣ್ಣಿರಲಿ, ಗಂಡಿರಲಿ– ಬಹುಮತದ ಬೆಂಬಲವನ್ನು ಪಡೆದಿರುತ್ತದೆ. ಈ ಮತದಾರರು ಸಹಜವಾಗಿ ಇಲ್ಲಿಯೇ ಜನಿಸಿದವರಾಗಿರಬಹುದು ಇಲ್ಲವೇ ಪೌರತ್ವವನ್ನು ಪಡೆದವರಾಗಿರಬಹುದು. ಅವರು ದೇಶದ ಉನ್ನತಿಗಾಗಿ ಶ್ರಮಿಸಿರುತ್ತಾರೆ ಮತ್ತು ಮತದಾರರಾಗಿ ತಮ್ಮನ್ನು ತಾವು ನೋಂದಾಯಿಸಿಕೊಂಡಿರುತ್ತಾರೆ.

ನಿಜವಾದ ಸ್ವರಾಜ್ಯವು ಕೆಲವೇ ಕೆಲವು ಜನರು ಅಧಿಕಾರವನ್ನು ಹಿಡಿಯುವುದರಿಂದ ಲಭ್ಯವಾಗುವುದಿಲ್ಲ. ಅಧಿಕಾರವನ್ನು ದುರುಪಯೋಗಪಡಿಸಿಕೊಂಡಾಗ ಅದನ್ನು ಪೂರ್ಣವಾಗಿ ವಿರೋಧಿಸುವ ಅಧಿಕಾರವನ್ನು ಜನರು ಪಡೆಯುವುದರಿಂದ ಸ್ವರಾಜ್ಯವು

ಲಭ್ಯವಾಗುತ್ತದೆ. ಅಧಿಕಾರವನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವ ಸಾಮರ್ಥ್ಯವನ್ನು ಜನರು ಹೊಂದಿದ್ದಾರೆ ಎಂಬ ತಿಳಿವಳಿಕೆಯನ್ನು ಜನರಿಗೆ ನೀಡುವ ಮೂಲಕ ಸ್ವರಾಜ್ಯವು ಅಸ್ತಿತ್ವಕ್ಕೆ ಬರಲು ಸಾಧ್ಯವಾಗುತ್ತದೆ.

ರಾಜಕೀಯ ಸ್ವಾತಂತ್ರ್ಯವೆಂದರೆ ಕೇವಲ ಬ್ರಿಟಿಷರ ಹೌಸ್ ಆಫ್ ಕಾಮನ್ಸ್‌ನ ಪ್ರತಿರೂಪವನ್ನು ಭಾರತದಲ್ಲಿ ಸ್ಥಾಪಿಸುವುದೆಂದು ನನ್ನ ಅರ್ಥವಲ್ಲ. ಅದೇ ರೀತಿ ರಷ್ಯಾದ ಮಾದರಿಯ ಆಡಳಿತವನ್ನೋ, ಇಟಲಿಯ ಫ್ಯಾಸಿಸ್ಟ್ ಆಡಳಿತವನ್ನೋ, ಇಲ್ಲವೇ ಜರ್ಮನಿಯ ನಾಜಿ ಆಡಳಿತವನ್ನೋ ಜಾರಿಗೆ ತರುವುದು ರಾಜಕೀಯ ಸ್ವಾತಂತ್ರ್ಯ ಎಂದು ನಾನು ಭಾವಿಸುವುದಿಲ್ಲ. ತಮ್ಮ ತಮ್ಮ ದೇಶದ ಬುದ್ಧಿಶಕ್ತಿಗೆ ಹೊಂದುವ ವ್ಯವಸ್ಥೆಗಳನ್ನು ಈ ದೇಶಗಳು ಹೊಂದಿವೆ. ನಮಗೆ ಸರಿಹೊಂದುವ ವ್ಯವಸ್ಥೆಯನ್ನು ನಾವು ನಿರ್ಮಿಸಿಕೊಳ್ಳಬೇಕು. ನಾನು ಈ ವ್ಯವಸ್ಥೆಯನ್ನು 'ರಾಮರಾಜ್ಯ' ಎಂದು ಕರೆದಿದ್ದೇನೆ. ರಾಮರಾಜ್ಯದಲ್ಲಿ ಜನರು ನೈತಿಕ ಬಲದ ಆಧಾರದ ಮೇಲೆ ತಮ್ಮ ರಾಜ್ಯಾಡಳಿತವನ್ನು ರೂಪಿಸಿಕೊಳ್ಳುತ್ತಾರೆ.

ಸ್ವಯಂ ಆಡಳಿತವು ಪೂರ್ಣವಾಗಿ ನಮ್ಮ ಸ್ವಶಕ್ತಿಯನ್ನು ಅವಲಂಬಿಸಿದೆ. ಎಂತಹುದೇ ಅಪಾಯ ಬಂದರೂ ಒಟ್ಟಾಗಿ ನಿಂತು ಹೋರಾಡುವ ಸನ್ನಿವೇಶವನ್ನು ಅವಲಂಬಿಸಿದೆ. ಇಂತಹ ಸಾಮರ್ಥ್ಯವನ್ನು ಗಳಿಸಿಕೊಳ್ಳುವ ಗುರಿಯಿಲ್ಲದ ಸ್ವಯಂ ಆಡಳಿತ ಪ್ರಯೋಜನಕ್ಕೆ ಬಾರದ ಕೆಲಸಕಾರ್ಯಗಳಲ್ಲಿ ತೊಡಗುತ್ತದೆ. ಹಾಗಾಗಿ, ನಾನು ನನ್ನ ಮಾತು ಮತ್ತು ಕೃತಿ ಎರಡರಲ್ಲೂ ರಾಜಕೀಯ ಸ್ವಯಂ ಆಡಳಿತವನ್ನು ಸಾಧಿಸುವ ಗುರಿಯಿರಿಸಿಕೊಂಡಿರುವೆ. ಅಂದರೆ, ವೈಯಕ್ತಿಕ ಸ್ವ-ಸರ್ಕಾರವು ಅನೇಕರ ಸ್ವ-ಸರ್ಕಾರಕ್ಕಿಂತ ಭಿನ್ನವಾದುದಲ್ಲವೆಂದು ನನ್ನ ಗ್ರಹಿಕೆ. ವೈಯಕ್ತಿಕ 'ಸ್ವ-ಸರ್ಕಾರವನ್ನು' ಮತ್ತು 'ಸ್ವ-ಆಡಳಿತವನ್ನು' ಹೇಗೆ ಸಾಧಿಸುತ್ತೇವೆಯೋ ಹಾಗೆಯೇ ಸಮುದಾಯದ 'ಸ್ವ-ಸರ್ಕಾರವನ್ನು' ಸಾಧಿಸಬೇಕು.

ಸರ್ಕಾರ ಎನ್ನುವುದು ಸ್ವದೇಶಿಯಾಗಿರಬಹುದು ಇಲ್ಲವೇ ವಿದೇಶಿಯಾಗಿರ ಬಹುದು; ಆದರೆ ತಮ್ಮ ಅನುದಿನದ ಬದುಕನ್ನು ಸರ್ಕಾರವೇ ನಿರ್ದೇಶಿಸಬೇಕೆಂದು ಜನ ಸ್ವರಾಜ್ಯದ ಸರ್ಕಾರದೆಡೆ ನೋಡಿದರೆ, ಅದೊಂದು ಶೋಚನೀಯ ಸನ್ನಿವೇಶ ವಾಗಿರುತ್ತದೆ.

ನನ್ನ ಸ್ವರಾಜ್ಯದ ಉದ್ದೇಶ ನನ್ನ ನಾಗರಿಕತೆಯ ಬುದ್ಧಿಮತ್ತೆಯನ್ನು ಸಂರಕ್ಷಿಸಿ ಕೊಳ್ಳುವ ಉದ್ದೇಶವನ್ನು ಹೊಂದಿದೆ. ನಾನು ಅನೇಕ ಹೊಸ ವಿಷಯಗಳನ್ನು ಬರೆದಿಡಬೇಕೆಂದಿರುವೆ. ಇವೆಲ್ಲವೂ ಭಾರತದ ಕಪ್ಪುಹಲಗೆಯ ಮೇಲೆ ಸ್ಪಷ್ಟವಾಗಿ ಬರೆದಿಡಬೇಕಾಗಿರುವ ಅಂಶಗಳಾಗಿವೆ. ನನಗೆ ಅವಕಾಶವಾದಾಗ ಪಶ್ಚಿಮದಿಂದ

ಎರವಲು ಪಡೆದುಕೊಂಡ ಅಂಶಗಳನ್ನು ಗೌರವಯುತ ಬಡ್ಡಿಯೊಂದಿಗೆ ಅವರಿಗೇ ಹಿಂತಿರುಗಿಸುವ ಆಸೆ ಕೂಡ ನನಗಿದೆ.

ಯಾವುದೇ ವೈಯಕ್ತಿಕ ಲಾಭಕ್ಕಿಂತ ದೇಶದ ಹಿತಾಸಕ್ತಿಯೇ ಮುಖ್ಯವೆಂದು ಅನ್ನಿಸುವ ದೇಶಪ್ರೇಮಿಗಳು ಬಹುಸಂಖ್ಯೆಯಲ್ಲಿದ್ದಾಗ, ಸ್ವರಾಜ್ಯವನ್ನು ಕಾಪಾಡಿಕೊಳ್ಳಲು ಅವಕಾಶವಿದೆ. ಒಂದು ವೇಳೆ ಬಹುತೇಕರು ನೈತಿಕ ಪ್ರಜ್ಞೆ ಇಲ್ಲದವರೂ ಸ್ವಾರ್ಥಿಗಳೂ ಆದಾಗ, ಅಂಥ ಜನರ ಸರ್ಕಾರವು ಅರಾಜಕವಾಗಿರುತ್ತದೆ.

ಭಾರತೀಯ ಸ್ವರಾಜ್ಯವು ಬಹುಸಂಖ್ಯಾತರ (ಹಿಂದೂಗಳ) ಸರ್ಕಾರವಾಗಿರುತ್ತದೆ ಎಂದು ಹೇಳಲಾಗುತ್ತಿದೆ. ಇದು ಶುದ್ಧ ಸುಳ್ಳು. ಒಂದು ವೇಳೆ ಈ ಮಾತೇ ನಿಜವಾಗಿದ್ದಲ್ಲಿ, ಇದನ್ನು ಸ್ವರಾಜ್ಯ ಎಂದು ನಾನು ಕರೆಯುವುದಿಲ್ಲ. ಇಂತಹ ಸರ್ಕಾರದ ವಿರುದ್ಧ ನಾನು ನನ್ನ ಪೂರ್ಣ ಶಕ್ತಿಯನ್ನು ಬಳಸಿ ಹೋರಾಡುತ್ತೇನೆ. ನಮ್ಮ ಆಶಯದ ಸ್ವರಾಜ್ಯವು ಎಲ್ಲರ ಅಧಿಕಾರದ ಸರ್ಕಾರವನ್ನು ಹಾಗೂ ನ್ಯಾಯಯುತ ಆಡಳಿತವನ್ನು ಹೊಂದಿರುವಂತಹುದು.

ಸ್ವರಾಜ್ಯವು ನಮ್ಮ ನಾಗರಿಕತೆಯನ್ನು ಶುದ್ಧಿಗೊಳಿಸುವ ಮೂಲಕ ಅದನ್ನು ಸ್ಥಿರೀಕರಿಸಿ ಉತ್ತಮಗೊಳಿಸದೆ ಹೋದಲ್ಲಿ, ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ. ಪೂರ್ಣ ಸ್ವರಾಜ್ಯವು ಪೂರ್ಣವಾಗಿರುವಂತಹುದು. ಏಕೆಂದರೆ ಅದು ಎಲ್ಲರಿಗೂ ಪೂರ್ಣವಾಗಿ ಮತ್ತು ಸಮಾನವಾಗಿ ಅನ್ವಯಿಸುತ್ತದೆ. ರಾಜನಿಗೆ, ರೈತನಿಗೆ, ಶ್ರೀಮಂತನಿಗೆ, ಭೂರಹಿತ ಕೂಲಿ ಕಾರ್ಮಿಕನಿಗೆ, ಹಿಂದೂಗಳಿಗೆ, ಮುಸಲ್ಮಾನರಿಗೆ, ಕ್ರೈಸ್ತರಿಗೆ ಮತ್ತು ಪಾರ್ಸಿಗಳಿಗೆ, ಜೈನರಿಗೆ ಹಾಗೂ ಸಿಖ್ಖರಿಗೆ ಸಮಾನವಾಗಿ ಅನ್ವಯಿಸುತ್ತದೆ. ಯಾವುದೇ ಜಾತಿ, ಧರ್ಮ ಇಲ್ಲವೇ ಅಂತಸ್ತನ್ನು ಆಧರಿಸಿ ಅಲ್ಲಿ ವ್ಯತ್ಯಾಸಗಳು ಇರುವುದಿಲ್ಲ.

ಸ್ವರಾಜ್ಯವು ಒಬ್ಬರಿಗೆ ಒಂದು, ಮತ್ತೊಬ್ಬರಿಗೆ ಇನ್ನೊಂದು ಅರ್ಥವನ್ನು ನೀಡಲು ಸಾಧ್ಯವಿಲ್ಲ. ಏಕೆಂದರೆ, ಸ್ವರಾಜ್ಯದ ಅರ್ಥವು 'ಸತ್ಯ ಮತ್ತು ಅಹಿಂಸೆ'ಗೆ ನಿಷ್ಠವಾಗಿದೆ. ಈ ಎರಡು ತತ್ವಗಳಿಗೆ ನಿಷ್ಠವಾಗಿ ಯಾವುದೇ ಸಾಧನೆಯನ್ನು ಮಾಡುವ ದಾರಿಯನ್ನು ಸ್ವರಾಜ್ಯವು ಆರಿಸಿಕೊಳ್ಳುತ್ತದೆ.

ಬಡವರ ಸ್ವರಾಜ್ಯವೇ ನನ್ನ ಕನಸಿನ ಸ್ವರಾಜ್ಯ ಆಗಿರುತ್ತದೆ. ಬದುಕಿನ ಎಲ್ಲ ಮೂಲಭೂತ ಅಗತ್ಯಗಳನ್ನು ರಾಜಕುಮಾರರಾಗಲೀ, ಹಣವಂತರಾಗಲೀ, ಇಲ್ಲವೇ ಜನಸಾಮಾನ್ಯರಾಗಲೀ ಎಲ್ಲರೂ ಅನುಭವಿಸುವಂತೆ ಇರಬೇಕು. ಇದರರ್ಥ ಎಲ್ಲರೂ ಅರಮನೆಗಳನ್ನು ಹೊಂದಬೇಕೆಂದಲ್ಲ. ಸುಖವಾಗಿರಲು ಅರಮನೆಗಳ ಅಗತ್ಯವಿಲ್ಲ. ನೀವು ಇಲ್ಲವೇ ನಾನು ಇಂತಹ ಅರಮನೆಗಳಲ್ಲಿ ಕಳೆದುಹೋಗುವುದೇ ಹೆಚ್ಚು.

ಒಬ್ಬ ಶ್ರೀಮಂತನ ಎಲ್ಲ ಸಾಮಾನ್ಯ ಅನುಕೂಲಗಳೂ ಜನಸಾಮಾನ್ಯರು ಎನಿಸಿದವರಿಗೆ ಲಭ್ಯವಿರಬೇಕು ಎನ್ನುವುದೇ ನನ್ನ ನಿರೀಕ್ಷೆ. ಮೂಲಭೂತ ಅಗತ್ಯಗಳು ಎಲ್ಲರಿಗೂ ದೊರೆಯುವಂತಾಗುವವರೆಗೆ ಪೂರ್ಣ ಸ್ವರಾಜ್ಯವು ಸಾಧಿತವಾಗಿರುವುದಿಲ್ಲ ಎನ್ನುವುದರ ಕುರಿತು ನನಗೆ ಯಾವುದೇ ಸಂಶಯವಿಲ್ಲ.

ನನ್ನ ಅರ್ಥದ ಪೂರ್ಣ ಸ್ವರಾಜ್ಯವು ಆರೋಗ್ಯಕರವಾದ ಮತ್ತು ಪರಸ್ಪರ ಅವಲಂಬಿತ ಸ್ವರಾಜ್ಯವೇ ಹೊರತು ಅದೊಂದು ಪ್ರತ್ಯೇಕ ವ್ಯವಸ್ಥೆಯಾಗಿರುವುದಿಲ್ಲ. ನನ್ನ ಕಲ್ಪನೆಯ ರಾಷ್ಟ್ರೀಯತೆಯು ಅತ್ಯಂತ ಉಗ್ರವಾಗಿರುವುದಾದರೂ, ಅದು ಯಾವುದೇ ವ್ಯಕ್ತಿಯನ್ನಾಗಲೀ ದೇಶವನ್ನಾಗಲೀ ಘಾಸಿಗೊಳಿಸುವ ಉದ್ದೇಶವನ್ನು ಹೊಂದಿರುವುದಿಲ್ಲ. 'ನಿನ್ನ ಆಸ್ತಿಯನ್ನು ನಿನ್ನ ಪಕ್ಕದವರಿಗೆ ಧಕ್ಕೆಯುಂಟು ಮಾಡದ ರೀತಿಯಲ್ಲಿ ಬಳಸಿಕೋ' ಎನ್ನುವ ಸತ್ಯದಲ್ಲಿ ನನಗೆ ಗಾಢವಾದ ನಂಬಿಕೆಯಿದೆ.

ಸತ್ಯ ಮತ್ತು ಅಹಿಂಸೆಯ ಮೂಲಕ ಪಡೆದುಕೊಳ್ಳುವ ಸ್ವಾತಂತ್ರ್ಯವು ಪರಿಪೂರ್ಣವಾದ ಸ್ವಾತಂತ್ರ್ಯವಾಗಿರುತ್ತದೆ. ಇಲ್ಲಿ ಯಾವುದೇ ಜಾತಿ, ಬಣ್ಣ, ಪಂಗಡ, ಇಲ್ಲವೇ ಜನಾಂಗಾಧಾರಿತ ತಾರತಮ್ಯವಿರುವುದಿಲ್ಲ. ಅನೇಕ ವೇಳೆ ಆಚರಣೆಗಳು ನಂಬಿಕೆಯಿಟ್ಟಿರುವ ತತ್ವಗಳಿಂದ ದೂರವಿರುತ್ತವೆ. ಹಾಗಾಗಿ, ಸತ್ಯ ಮತ್ತು ಅಹಿಂಸೆಯ ಆಚರಣೆಯಲ್ಲಿ ನುಡಿದಂತೆ ನಡೆಯುವುದಾದರೆ ಮಾತ್ರ ಪೂರ್ಣ ಸ್ವರಾಜ್ಯವು ಸಾಧ್ಯವಾಗುತ್ತದೆ.

ನಮಗೆ ಪೂರ್ಣ ಸ್ವರಾಜ್ಯದಿಂದ ಏನು ಬೇಕು ಮತ್ತು ಅದರ ಮೂಲಕ ನಾವು ಏನನ್ನು ಸಾಧಿಸಲು ಉದ್ದೇಶಿಸಿದ್ದೇವೆ ಎನ್ನುವುದು ಮುಖ್ಯ. ಒಂದು ವೇಳೆ ಜನಮಾನಸದಲ್ಲಿ ಅರಿವಿನ ಆಂದೋಲನ ನಡೆಸಲು ನಾವು ಉದ್ದೇಶಿಸಿದ್ದೇವೆ ಹಾಗೂ ಆ ಮೂಲಕ ನಮ್ಮ ನೈಜ ಉದ್ದೇಶವನ್ನು ಈಡೇರಿಸಿಕೊಳ್ಳುವ –ಇಡೀ ವಿಶ್ವವನ್ನು ಎದುರು ಹಾಕಿಕೊಂಡಾದರೂ ಸರಿಯೇ– ಸಾಮರ್ಥ್ಯವನ್ನು ಗಳಿಸಿಕೊಳ್ಳುವ ಕೆಚ್ಚನ್ನು ನಾವು ಜನರಲ್ಲಿ ಮೂಡಿಸಲು ಸಿದ್ಧರಿದ್ದೇವೆ ಎಂದಾದಲ್ಲಿ, ಸ್ವರಾಜ್ಯವು ಯಶ ಗಳಿಸುತ್ತದೆ. ಹಾಗೆಯೇ, ಪೂರ್ಣ ಸ್ವರಾಜ್ಯದ ಮೂಲಕ ಸಾಮರಸ್ಯ ಸಾಧಿಸುವುದು, ಹೊರಗಿನ ಇಲ್ಲವೇ ಒಳಗಿನ ಆಕ್ರಮಣಗಳಿಂದ ಮುಕ್ತರಾಗುವುದು, ಜನರ ಆರ್ಥಿಕ ಸ್ಥಿತಿಗತಿಯಲ್ಲಿ ಸುಧಾರಣೆ ತರುವುದು– ಇವು ನಮ್ಮ ಉದ್ದೇಶವಾದಲ್ಲಿ, ಯಾವುದೇ ರಾಜಕೀಯ ಅಧಿಕಾರದ ಅಗತ್ಯವೂ ಇಲ್ಲದೆ, ಕೇವಲ ಈಗ ಇರುವ ಅಧಿಕಾರದ ರಚನೆಗಳ ಮೇಲೆ ಒತ್ತಡ ಹಾಕುವುದರ ಮೂಲಕವೇ ಇದನ್ನು ಈಡೇರಿಸಿಕೊಳ್ಳಬಹುದಾಗಿದೆ.

ನನ್ನ ಸ್ವರಾಜ್ಯದ ಕಲ್ಪನೆ ಯಾವುದೇ ಅಧಿಕಾರಕ್ಕೆ ಅಡಿಯಾಳಾಗದ ಸ್ಥಿತಿಯನ್ನು ಮತ್ತು ಸಂಪೂರ್ಣ ಆರ್ಥಿಕ ಸ್ವಾತಂತ್ರ್ಯವನ್ನು ಒಳಗೊಂಡಿರುತ್ತದೆ. ಹಾಗಾಗಿ, ಜನರಿಗೆ ಇಲ್ಲಿ ಒಂದು ಕಡೆ ರಾಜಕೀಯ ಸ್ವಾತಂತ್ರ್ಯವೂ, ಇನ್ನೊಂದು ಕಡೆ ಆರ್ಥಿಕ ಸ್ವಾತಂತ್ರ್ಯವೂ ಇರುತ್ತದೆ. ಇವಲ್ಲದೆ ಸ್ವರಾಜ್ಯಕ್ಕೆ ಇನ್ನೂ ಎರಡು ಅರ್ಥಗಳಿವೆ. ತನ್ನ ಧರ್ಮವನ್ನು ನಿಭಾಯಿಸುವುದನ್ನು ಸೂಚಿಸುವ ಇದು ಒಂದು ಅಂಚಿನಲ್ಲಿ ನೈತಿಕತೆಯನ್ನು, ಮತ್ತೊಂದು ಅಂಚಿನಲ್ಲಿ ಸಾಮಾಜಿಕತೆಯನ್ನು ಹೊಂದಿರುತ್ತದೆ. ಇದು ಧರ್ಮದ ಗುರಿಯನ್ನು ಕೂಡ ಸೂಚಿಸುತ್ತದೆ. ಇದು ಇಸ್ಲಾಂ, ಹಿಂದೂ, ಕ್ರೈಸ್ತ ಮತ್ತಿತರ ಧರ್ಮಗಳನ್ನು ಒಳಗೊಂಡಿರುತ್ತದೆ ಮತ್ತು ಈ ಎಲ್ಲವನ್ನೂ ಮೀರಿದ ವ್ಯವಸ್ಥೆಯಾಗಿರುತ್ತದೆ. ನಾವಿದನ್ನು ಸ್ವರಾಜ್ಯದ ಚೌಕವೆಂದು ಕರೆಯೋಣ. ಈ ಚೌಕದ ಯಾವುದೇ ಮೂಲೆ ಅಸತ್ಯವನ್ನು ಒಳಗೊಂಡರೆ, ಇಡೀ ಚೌಕವೇ ವಿಕಾರವಾಗುತ್ತದೆ.

ಸತ್ಯ ಮತ್ತು ಅಹಿಂಸೆಯ ಮೂಲಕವೇ ನಾವು ಸ್ವರಾಜ್ಯವನ್ನು ಗಳಿಸಬೇಕು ಮತ್ತು ಅದನ್ನು ಕಾಪಾಡಿಕೊಳ್ಳಬೇಕೆಂದು ನಾವೆಲ್ಲರೂ ಖಚಿತವಾಗಿ ನಂಬಿ ಕಾರ್ಯೋನ್ಮುಖರಾದಾಗ ಮಾತ್ರ ನನ್ನ ಕಲ್ಪನೆಯ ಪೂರ್ಣ ಸ್ವರಾಜ್ಯವು ಜಾರಿಯಾಗಲು ಸಾಧ್ಯವಿದೆ. ನಿಜವಾದ ಸ್ವರಾಜ್ಯವು ಅಸತ್ಯದಿಂದ, ಇಲ್ಲವೇ ಹಿಂಸೆಯಿಂದ ದಕ್ಕಲು ಸಾಧ್ಯವಿಲ್ಲ. ಏಕೆಂದರೆ, ಹಿಂಸೆಯು ಪ್ರತಿಹಿಂಸೆಗೆ ದಾರಿಯಾಗುತ್ತದೆ. ವಿರೋಧಿಗಳನ್ನು ನಿರ್ನಾಮ ಮಾಡುವುದರಿಂದ ನಮ್ಮ ವೈಯಕ್ತಿಕ ಸ್ವಾತಂತ್ರ್ಯ ಸಿಗುವುದಿಲ್ಲ. ಯಾವುದೇ ದೋಷವಿಲ್ಲದ ಅಹಿಂಸೆಯ ಅಧಿಕಾರದ ಅಡಿಯಲ್ಲಿ ಮಾತ್ರ ನಿಜವಾದ ವ್ಯಕ್ತಿಗತ ಸ್ವಾತಂತ್ರ್ಯವನ್ನು ಹೊಂದುವುದು ಸಾಧ್ಯ.

ಅಹಿಂಸೆಯನ್ನು ಆಧರಿಸಿದ ಜನರು ತಮ್ಮ ಕರ್ತವ್ಯಗಳನ್ನು ಅರಿತಿರಬೇಕಾಗಿರುತ್ತದೆ. ವ್ಯಕ್ತಿಯ ಕರ್ತವ್ಯ ನಿರ್ವಹಣೆಯ ಖಚಿತತೆಯನ್ನು ಆಧರಿಸಿ, ಹಕ್ಕುಗಳು ಅವನನ್ನು ಹಿಂಬಾಲಿಸುತ್ತವೆ. ಆದ ಕಾರಣ, ಯಾರು ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಾರೋ, ಅಂತಹವರಿಗೆ ಮಾತ್ರವೇ ಪೌರತ್ವದ ಹಕ್ಕುಗಳ ಅರಿವು ಮೂಡುವುದು ಸಾಧ್ಯವಿದೆ.

ತಮ್ಮ ಕರ್ತವ್ಯ ನಿರ್ವಹಣೆಯ ಕಾರಣದಿಂದ ಹಕ್ಕುಗಳನ್ನು ಪಡೆದವರು ಸಮಾಜದ ಒಳಿತಿಗಾಗಿ ತಮ್ಮ ಹಕ್ಕುಗಳನ್ನು ಚಲಾಯಿಸುತ್ತಾರೆಯೇ ವಿನಃ, ಅವನ್ನು ತಮ್ಮ ವೈಯಕ್ತಿಕ ಉದ್ದೇಶಗಳಿಗೆ ಎಂದೂ ಬಳಸಲಾರರು. ಇಂತಹ ಸನ್ನಿವೇಶದಲ್ಲಿ ಯಾವುದೇ ವ್ಯಕ್ತಿ ಕೇವಲ ತನ್ನ ವೈಯಕ್ತಿಕ ಹಕ್ಕಿನ ಕುರಿತು ಮಾತ್ರ ಚಿಂತಿಸುವುದಿಲ್ಲ. ಯಾಕೆಂದರೆ ಹಕ್ಕುಗಳು ಉತ್ತಮ ಕರ್ತವ್ಯ ನಿರ್ವಹಣೆಯ ಭಾಗವಾಗಿ ತಾವಾಗಿಯೇ ಲಭಿಸುತ್ತವೆ.

(ವಿವಿಧ ಬರಹ, ಭಾಷಣಗಳಿಂದ.)

ಕನ್ನಡಕ್ಕೆ: ಸದಾನಂದ ಆರ್.

೨೭

ನಾಗರಿಕ ಪ್ರತಿಭಟನೆ

ನಾಗರಿಕ ಅವಿಧೇಯತೆಯ ತತ್ವವನ್ನು ನಾನು ಥೋರೋನ ಬರಹಗಳಿಂದ ಪಡೆದೆ ಎಂಬುದು ಅಷ್ಟು ಸರಿಯಲ್ಲ. ನಾನು ಥೋರೋ 'ಸಿವಿಲ್ ಡಿಸೊಬಿಡಿಯೆನ್ಸ್' ಕುರಿತು ಬರೆದ ಬರಹವನ್ನು ಓದುವ ಮೊದಲೇ ದಕ್ಷಿಣ ಆಫ್ರಿಕಾದ ಆಳ್ವಿಕೆಯ ವಿರುದ್ಧ ನಮ್ಮ ಪ್ರತಿಭಟನೆ ಶುರುವಾಗಿತ್ತು. ನಾವು ಆಗ ಈ ಪ್ರತಿಭಟನೆಯನ್ನು 'ಪ್ಯಾಸಿವ್ ರೆಸಿಸ್ಟೆನ್ಸ್' (ಶಾಂತ ಪ್ರತಿಭಟನೆ) ಎಂದು ಕರೆದಿದ್ದವು. ಥೋರೋನ 'ಸಿವಿಲ್ ಡಿಸೊಬಿಡಿಯೆನ್ಸ್' ಎಂಬ ಅಪೂರ್ವ ಪ್ರಬಂಧ ಓದಿದ ಮೇಲೆ ಇಂಗ್ಲಿಷ್ ಓದುಗರನ್ನು ಗಮನದಲ್ಲಿಟ್ಟುಕೊಂಡು ನಾನು 'ನಾಗರಿಕ ಅವಿಧೇಯತೆ' ಎಂಬ ಪದವನ್ನು ಬಳಸತೊಡಗಿದೆ. ಆದರೆ ಯಾಕೋ ಈ ಪದ ನಮ್ಮ ಹೋರಾಟದ ಅರ್ಥವನ್ನು ಪೂರ್ತಿಯಾಗಿ ಹೇಳುತ್ತಿಲ್ಲ ಅನ್ನಿಸಿತು. ಆಗ 'ನಾಗರಿಕ ಪ್ರತಿಭಟನೆ' ಎಂಬ ಪದವನ್ನು ಬಳಸತೊಡಗಿದೆ.

ಆದರೆ 'ಪ್ಯಾಸಿವ್ ರೆಸಿಸ್ಟೆನ್ಸ್' ಅಥವಾ 'ನಾಗರಿಕ ಅವಿಧೇಯತೆ' ಎಂಬ ಪದದ ಅರ್ಥ ಸೀಮಿತವಾಗಿದೆ ಎಂದು ನಮಗೆಲ್ಲ ಅನ್ನಿಸತೊಡಗಿತು. ನಾವಾಗ ಹೊಸ ಪದವೊಂದನ್ನು ಹುಡುಕತೊಡಗಿದೆವು. ಆಗ ಮಗನ್‌ಲಾಲ್ ಗಾಂಧಿ 'ಸದಾಗ್ರಹ' (ಒಳ್ಳೆಯದಕ್ಕಾಗಿ ಆಗ್ರಹ) ಎಂಬ ಪದವನ್ನು ರೂಪಿಸಿದರು. ಅದರ ಅರ್ಥ ಇನ್ನಷ್ಟು ಸ್ಪಷ್ಟವಾಗಲೆಂದು, ಸಕಾರಾತ್ಮಕವಾಗಲೆಂದು ನಾನು ಅದನ್ನು 'ಸತ್ಯಾಗ್ರಹ' ಎಂದು ಕರೆದೆ.

(ವಿವಿಧ ಭಾಷಣ, ಬರಹಗಳಿಂದ.)

ಕನ್ನಡಕ್ಕೆ: ನಟರಾಜ್ ಹುಳಿಯಾರ್

೨೮

ಸತ್ಯಾಗ್ರಹ

ಸತ್ಯಾಗ್ರಹ ಎನ್ನುವುದು ಆಧ್ಯಾತ್ಮಿಕ ಯುದ್ಧ. ಪ್ರತಿ ಸತ್ಯಾಗ್ರಹಿಯೂ ಒಬ್ಬ ಸೈನಿಕ. ಸತ್ಯಾಗ್ರಹ ಸೈನ್ಯವನ್ನು ಸೇರುವವನು ಆಲೋಚಿಸಿಯೇ ಸೇರುತ್ತಾನೆ. ಅಹಿಂಸೆಯ ಭಾಗವಾದ ಸತ್ಯಾಗ್ರಹ ಎರಡು ಹಂತದಲ್ಲಿ ಕೆಲಸ ಮಾಡುತ್ತದೆ, ಒಂದು: ಖಾಸಗಿ ಜೀವನದಲ್ಲಿ, ಅಂದರೆ ವ್ಯಕ್ತಿಯ ಬದುಕಿನಲ್ಲಿ; ಎರಡು: ಸಾರ್ವಜನಿಕ ಜೀವನದಲ್ಲಿ, ಸಾಮೂಹಿಕವಾಗಿ. ಸ್ವಇಚ್ಛೆಯಿಂದ ಪಡುವ ಯಾತನೆಗೆ ಮತ್ತೊಂದು ಹೆಸರೇ ಸತ್ಯಾಗ್ರಹ. ಸತ್ಯಾಗ್ರಹ ಪರಿಶುದ್ಧವಾದ ಸಂವಿಧಾನಾತ್ಮಕ ಪ್ರತಿಭಟನೆ. ನೇರ ಕಾರ್ಯಾಚರಣೆಗೆ–'ಡೈರೆಕ್ಟ್ ಆ್ಯಕ್ಷನ್'ಗೆ– ಸತ್ಯಾಗ್ರಹ ಅತ್ಯಂತ ಪರಿಣಾಮಕಾರಿ ಸಾಧನ. ಸತ್ಯಾಗ್ರಹ ಸಭ್ಯವಾದುದು; ಅದು ಯಾರಿಗೂ ಗಾಯವುಂಟುಮಾಡುವುದಿಲ್ಲ. ಹಿಂಸೆಯ ಮೂಲಕ ನಡೆಯುವ 'ದುರಾಗ್ರಹ'ಕ್ಕೆ ಸತ್ಯಾಗ್ರಹ ವಿರುದ್ಧವಾದುದು. ಸತ್ಯಾಗ್ರಹವನ್ನು ಅನ್ಯಾಯದ ಆಡಳಿತಗಾರರ ವಿರುದ್ಧ ಬಳಸಬಹುದು ಹಾಗೂ ಬಳಸಲೇಬೇಕು.

...ಸತ್ಯಾಗ್ರಹಿ ಕೋಪಕ್ಕೆ ವಿದಾಯ ಹೇಳಿರುವವನು. ಆದ್ದರಿಂದ ಅವನು ಎದುರಾಳಿಯನ್ನು ನಂಬಲು ಹಿಂಜರಿಯುವುದಿಲ್ಲ. ಸತ್ಯಾಗ್ರಹಿಯ ಎದುರಾಳಿ ಇಪ್ಪತ್ತು ಸಲ ಅವನಿಗೆ ಮೋಸ ಮಾಡಿದರೂ ಇಪ್ಪತ್ತೊಂದನೆಯ ಸಲ ಕೂಡ ಸತ್ಯಾಗ್ರಹಿ ತನ್ನ ಎದುರಾಳಿಯನ್ನು ನಂಬಲು ಸಿದ್ಧನಿರುತ್ತಾನೆ. ಯಾಕೆಂದರೆ ಅವನು ನಂಬಿದ ತತ್ವದ ಮೂಲ ಸತ್ವವೇ ಮಾನವನ ಸ್ವಭಾವದಲ್ಲಿ ನಂಬಿಕೆಯಿಡುವಂತೆ ಅವನನ್ನು ಪ್ರೇರೇಪಿಸುತ್ತದೆ. ಹೋರಾಟದ ಎಲ್ಲ ಮಾರ್ಗಗಳೂ ಕೊನೆಗೊಂಡ ಮೇಲೆ ಉಪವಾಸ ಸತ್ಯಾಗ್ರಹಕ್ಕೆ ಮುಂದಾಗಬಹುದು...ಸತ್ಯಾಗ್ರಹಕ್ಕೆ ಸೋಲು ಎನ್ನುವುದೇ ಗೊತ್ತಿಲ್ಲ. ಪ್ರತಿ ಹೊಡೆತದಿಂದಲೂ ಅದು ಮರು ಹುಟ್ಟು ಪಡೆಯುತ್ತಿರುತ್ತದೆ.

(ವಿವಿಧ ಭಾಷಣ, ಬರಹಗಳಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೨೯

ಸರ್ವೋದಯ

ಸರ್ವೋದಯ ಎಂದರೆ ಎಲ್ಲರ ಕಲ್ಯಾಣ. ಜಾನ್ ರಸ್ಕಿನ್ ಹೇಳಿದಂತೆ ನಮ್ಮ ಗುರಿ 'ಎಲ್ಲರ ಪ್ರಗತಿ ಆಗಿರಬೇಕೇ ಹೊರತು, ಕೇವಲ ಅತಿ ಹೆಚ್ಚು ಜನರ ಪ್ರಗತಿಯಲ್ಲ'. ಸತ್ಯಾಗ್ರಹವಿಲ್ಲದೆ ಸರ್ವೋದಯವಿಲ್ಲ. ಎಲ್ಲಿ ಅಹಿಂಸೆಗೆ ಜಾಗವಿಲ್ಲವೋ ಅಲ್ಲಿ ಸತ್ಯಕ್ಕೆ ಸ್ಥಾನವಿಲ್ಲ. ಆದ್ದರಿಂದಲೇ ಸರ್ವೋದಯವನ್ನು ಸಾಧಿಸುವುದು ಅಹಿಂಸೆಯ ಮೇಲೆ ನಿಂತಿದೆ. ಜನ ಅಹಿಂಸೆಯ ಬಗ್ಗೆ ಮಾತಾಡುತ್ತಿದ್ದರೂ ಅವರು ಒಳಗೊಳಗೇ ಎಷ್ಟು ಸೋಮಾರಿಗಳಾಗಿದ್ದಾರೆಂದರೆ, ವಾಸ್ತವಾಂಶಗಳನ್ನು ಅರ್ಥ ಮಾಡಿಕೊಳ್ಳಲು ಹೋಗುವುದೇ ಇಲ್ಲ. ಒಂದು ಉದಾಹರಣೆ ನೋಡಿ: ಇಂಡಿಯಾ ಒಂದು ಬಡ ದೇಶ. ಆದರೆ ಈ ಬಡತನ ಹೇಗೆ ಬಂತು? ಅದರ ಪರಿಣಾಮಗಳೇನು? ಅದನ್ನು ಹೋಗಲಾಡಿಸುವುದು ಹೇಗೆ? ಈ ಬಗ್ಗೆ ಎಷ್ಟು ಜನ ಅಧ್ಯಯನ ಮಾಡಿದ್ದಾರೆ?

ಗಂಡು, ಹೆಣ್ಣುಗಳು ತಮ್ಮ ಸಂಪತ್ತು, ಸಾಮರ್ಥ್ಯಗಳನ್ನು ಎಲ್ಲರಿಗಾಗಿ ಆನಂದದಿಂದ ವಿನಿಯೋಗಿಸುತ್ತಾ ತಮ್ಮೊಳಗಿನ ಸುಪ್ತ ದೈವಿಕ ಗುಣವನ್ನು ಸಾಕಾರ ಮಾಡಿಕೊಳ್ಳಬಹುದು... ನಮ್ಮ ನಿಜವಾದ ಸಂತೋಷ ಮತ್ತು ಆರೋಗ್ಯ ನಮ್ಮ ಕೈ ಕಾಲುಗಳನ್ನು ಬಳಸಿ ಮಾಡುವ ಕೆಲಸದಿಂದ ಹುಟ್ಟುತ್ತದೆ ಎಂದು ನಮ್ಮ ಹಿರಿಯರು ನಂಬಿದ್ದರು... ಸಾಮಾನ್ಯ ಜನರು ಕೃಷಿಯನ್ನು ಅವಲಂಬಿಸಿದ್ದರು. ಅವರು ನಿಜವಾದ ಹೋಂ ರೂಲ್ (ಸ್ವಯಮಾಡಳಿತ) ಅನುಭವಿಸುತ್ತಿದ್ದರು.

'ಅತಿ ಹೆಚ್ಚು ಜನರಿಗೆ ಅತಿ ಹೆಚ್ಚು ಒಳಿತು ಮಾಡಬಹುದು' ಎಂಬ ಪ್ರಯೋಜನವಾದಿ ತತ್ವವನ್ನು ಅಹಿಂಸೆಯ ಪರಿಪಾಲಕ ಒಪ್ಪುವುದಿಲ್ಲ. ಅಹಿಂಸೆಯ ಪರಿಪಾಲಕ ಎಲ್ಲರ ಅತ್ಯುತ್ತಮ ಒಳಿತಿಗಾಗಿ [ಸರ್ವೋದಯಕ್ಕಾಗಿ] ಕೆಲಸ ಮಾಡುವನು. ಆ ಆದರ್ಶ ಸಾಧಿಸುವಲ್ಲಿ ಪ್ರಾಣವನ್ನೂ ಕೊಡುವನು. ಇತರರು ಬದುಕಲೆಂದು

ತಾನು ಸಾಯಲು ಸಿದ್ಧನಿರುವನು... ನಮ್ಮ ಸೇವೆ ಪ್ರೀತಿ ಅಥವಾ ಅಹಿಂಸೆಯಲ್ಲಿ ಬೇರೂರದಿದ್ದರೆ ನಿಜವಾದ ಸೇವೆ ಸಾಧ್ಯವಿಲ್ಲ. ನಿಜವಾದ ಪ್ರೀತಿ ಎಲ್ಲೆಯಿಲ್ಲದ ಕಡಲಿನಂತೆ; ಅದು ತನ್ನೊಳಗೇ ಉಕ್ಕುತ್ತಾ, ಎಲ್ಲ ಎಲ್ಲೆಗಳನ್ನೂ ಮೀರುತ್ತಾ ಇಡೀ ಜಗತ್ತನ್ನೇ ತಬ್ಬಿಕೊಳ್ಳುತ್ತದೆ. ರೊಟ್ಟಿಗಾಗಿ ಮಾಡುವ ದುಡಿಮೆಯ ಬಲವಿಲ್ಲದೆ ಈ ಬಗೆಯ ಸೇವೆ ಅಸಾಧ್ಯ. ಗಂಡಾಗಲೀ, ಹೆಣ್ಣಾಗಲೀ ಸೇವೆಗಾಗಿ ದೈಹಿಕ ಶ್ರಮ ಮಾಡಿದಾಗ ಮಾತ್ರ ಅವರಿಗೆ ಬದುಕುವ ಹಕ್ಕಿರುತ್ತದೆ.

ಸರ್ವೋದಯ ರಾಜ್ಯ ಸ್ಥಾಪನೆಗೆ ಅಹಿಂಸಾ ಮಾರ್ಗ ಅತ್ಯಗತ್ಯ. 'ನೀವು ಜನ ಸಮುದಾಯಕ್ಕೆ ಅಹಿಂಸೆಯನ್ನು ಹೇಳಿಕೊಡುವುದು ಸಾಧ್ಯವಿಲ್ಲ. ಎಲ್ಲೋ ಅಪರೂಪಕ್ಕೆ ವ್ಯಕ್ತಿಗಳಿಗೆ ಮಾತ್ರ ಅಹಿಂಸೆಯನ್ನು ಹೇಳಿಕೊಡಬಹುದು' ಎಂದು ಹೇಳುವವರಿದ್ದಾರೆ. ಆದರೆ ಹೀಗೆ ಹೇಳುವವರು ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಿರುತ್ತಾರೆ. ಮಾನವ ಕುಲ ಸಹಜವಾಗಿಯೇ ಅಹಿಂಸಾತ್ಮಕವಾಗಿರದಿದ್ದರೆ ಅದು ತನ್ನನ್ನು ತಾನೇ ಎಂದೋ ನಾಶ ಮಾಡಿಕೊಂಡಿರುತ್ತಿತ್ತು. ಹಿಂಸಾಶಕ್ತಿಗಳು ಹಾಗೂ ಅಹಿಂಸಾ ಶಕ್ತಿಗಳ ನಡುವಣ ಕಾಳಗದಲ್ಲಿ ಕೊನೆಗೆ ಅಹಿಂಸೆಯೇ ಗೆದ್ದಿದೆ. ನಿಜ ಸಂಗತಿಯೇನೆಂದರೆ, ಅಹಿಂಸೆಯನ್ನು ಜನಮಾನಸದಲ್ಲಿ ಹಬ್ಬಿಸಿ, ಅದು ರಾಜಕೀಯ ಗುರಿಯನ್ನು ಸಾಧಿಸಬಲ್ಲ ಸಾಧನ ಎಂದು ಜನರಿಗೆ ತೋರಿಸಿಕೊಡುವ ನಿಟ್ಟಿನಲ್ಲಿ ನಾವು ಮನಸ್ಸಿಟ್ಟು ತೊಡಗಿಸಿಕೊಂಡಿಲ್ಲ. ಹಾಗೆ ತೊಡಗಿಸಿಕೊಂಡು ತಾಳ್ಮೆಯಿಂದ ಕಾಯುವ ಮನಸ್ಥಿತಿಯೂ ನಮಗಿಲ್ಲ.

(ವಿವಿಧ ಬರಹಗಳಿಂದ. ಆಕರ: 'ಇಂಡಿಯಾ ಆಫ್ ಮೈ ಡ್ರೀಮ್ಸ್'.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

ಟಿಪ್ಪಣಿ

ಜಾನ್ ರಸ್ಕಿನ್ ಬರೆದ 'ಅನ್ ಟು ದಿಸ್ ಲಾಸ್ಟ್' ಪುಸ್ತಕದ ಗ್ರಹಿಕೆಗಳು ಗಾಂಧೀಜಿಗೆ ತುಂಬ ಹಿಡಿಸಿದವು. ಗಾಂಧೀಜಿ ಈ ಪುಸ್ತಕವನ್ನು ಗುಜರಾತಿ ಭಾಷೆಗೆ ಅನುವಾದಿಸಿದಾಗ 'ಸರ್ವೋದಯ' ಎಂದು ಹೆಸರಿಟ್ಟರು. ಮುಂದೆ ಗಾಂಧೀಜಿ ಸರ್ವೋದಯದ ಅರ್ಥವನ್ನು ಅಹಿಂಸೆ, ಸತ್ಯಾಗ್ರಹಗಳ ಜೊತೆಗೆ ಬೆಸೆದು ವಿಸ್ತರಿಸಿದರು. ಸ್ವಾತಂತ್ರ್ಯಾನಂತರ ವಿನೋಬಾ ಭಾವೆ, ಜಯಪ್ರಕಾಶ ನಾರಾಯಣ ಮೊದಲಾದ ಗಾಂಧೀ ಸಂಗಾತಿಗಳು ಸರ್ವೋದಯ ಚಳುವಳಿಯನ್ನು ಮುನ್ನಡೆಸಿದರು.

೩೦

ಸತ್ಯ

ಸತ್ಯ, ಅಹಿಂಸೆ ಎರಡೂ ಬೆಟ್ಟ, ಗುಡ್ಡಗಳಷ್ಟು ಪ್ರಾಚೀನವಾದವು. ನನ್ನ ಕೈಲಾದಷ್ಟು ಅವುಗಳಲ್ಲಿ ಪ್ರಯೋಗ ಮಾಡಿರುವುದಷ್ಟೇ ನಾನು ಮಾಡಿರುವ ಕೆಲಸ. ನನ್ನ ದೃಷ್ಟಿಯಲ್ಲಿ ಸತ್ಯ, ಅಹಿಂಸೆಗಳ ನಡುವೆ ಸತ್ಯಕ್ಕೆ ಮೊದಲ ಸ್ಥಾನ. ಸತ್ಯದ ಹುಡುಕಾಟದಲ್ಲಿ ನಾನು ಅಹಿಂಸೆಯನ್ನು ಹುಡುಕಿಕೊಂಡೆ. ಸತ್ಯ, ಅಹಿಂಸೆಗಳು ಮಾನವ ಸ್ವಭಾವದಲ್ಲಿ ಸಹಜವಾಗಿ ಸೇರಿಕೊಂಡಿವೆ. ಇವೆರಡೂ ಇಲ್ಲದಿದ್ದರೆ ಮಾನವ ಸಮಾಜವೇ ಇರಲಾರದು.

ಎಲ್ಲಿ ಸತ್ಯವಿದೆಯೋ ಅಲ್ಲಿ ಜ್ಞಾನವಿದೆ. ಸತ್ಯ ಕುರಿತ ಬದ್ಧತೆಯೇ ಮಾನವನ ಅಸ್ತಿತ್ವಕ್ಕೆ ಇರುವ ಏಕ ಮಾತ್ರ ಸಕಾರಣ. ದೈಹಿಕವಾಗಿ ಕೂಡ ಸತ್ಯ ನನ್ನನ್ನು ಹೇಗೆ ಹಿಡಿದಿದೆಯೆಂದರೆ, ಅಸತ್ಯ ನುಡಿಯುವುದು ನನ್ನ ನಾಲಿಗೆಗೇ ಅಸಾಧ್ಯವಾಗಿದೆ.

ಸತ್ಯವನ್ನು ಪಾಲಿಸುವುದು ಎಂದರೆ, ಸತ್ಯ ನುಡಿಯುವುದಷ್ಟೇ ಅಲ್ಲ. ಸತ್ಯ ಎಂಬ ಶಬ್ದವನ್ನು ಇನ್ನಷ್ಟು ವಿಶಾಲವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಆಲೋಚನೆಯಲ್ಲಿ ಸತ್ಯ, ಮಾತಿನಲ್ಲಿ ಸತ್ಯ, ಕ್ರಿಯೆಯಲ್ಲಿ ಸತ್ಯ ಈ ಮೂರನ್ನೂ ಸತ್ಯದ ಪರಿಕಲ್ಪನೆ ಒಳಗೊಂಡಿರಬೇಕಾಗುತ್ತದೆ.

ಸತ್ಯವು ನಮ್ಮ ಬದುಕು ಮತ್ತು ನಡವಳಿಕೆಗಳ ಸಾರ್ವಭೌಮ ನೀತಿತತ್ವ. ಈ ತತ್ವದಲ್ಲಿ ಇನ್ನಿತರ ಅಸಂಖ್ಯಾತ ತತ್ವಗಳು ಅಡಗಿವೆ.

ದೈವವೇ ಸತ್ಯ ಎಂದು ನಾನು ಹಿಂದೊಮ್ಮೆ ಹೇಳುತ್ತಿದ್ದೆ; ಎರಡು ವರ್ಷಗಳ ಕೆಳಗೆ ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದೆ: 'ಸತ್ಯವೇ ದೇವರು.'

ಎಂದೂ ಹುಸಿಹೋಗದ ಸತ್ಯದ ಪರೀಕ್ಷೆಯನ್ನು ಅರ್ಥ ಮಾಡಿಕೊಂಡರೆ ನಾವು ಅರ್ಥಪೂರ್ಣವಾದ ಏನನ್ನು ನೋಡಬೇಕು, ಏನನ್ನು ಮಾಡಬೇಕು, ಏನನ್ನು ಓದಬೇಕು ಎಲ್ಲವೂ ನಮಗೆ ಅರಿವಾಗುತ್ತದೆ.

ಸತ್ಯ ಮಾನವನ ಪ್ರಾಥಮಿಕ ತತ್ವ.

ಸತ್ಯಶೋಧನೆ ತಪಸ್ಸು ಅಥವಾ ನಮ್ಮ ಒಳಯಾತನೆಯನ್ನು ಒಳಗೊಂಡಿದೆ.

ಸತ್ಯಶೋಧನೆಯಲ್ಲಿ ಸ್ವಹಿತಾಸಕ್ತಿಯ ಲವಲೇಶವೂ ಇಲ್ಲ.

ನಾನೊಬ್ಬ ಸತ್ಯಶೋಧಕ. ಸತ್ಯ ಹುಡುಕಲು ನಾನು ದಣಿವರಿಯದೆ ಪ್ರಯತ್ನ ಮಾಡುತ್ತಲೇ ಇದ್ದೇನೆ. ಆದರೆ ಅದು ಇನ್ನೂ ನನಗೆ ಸಿಕ್ಕಿಲ್ಲ ಎಂಬುದನ್ನೂ ಒಪ್ಪಿಕೊಳ್ಳುತ್ತೇನೆ. ಸತ್ಯವನ್ನು ಪೂರ್ಣವಾಗಿ ಹುಡುಕುವುದೆಂದರೆ ತನ್ನನ್ನು, ತನ್ನ ಬಾಳಿನ ದಿಕ್ಕನ್ನು ಅರಿಯುವುದು. ಅಂದರೆ, ಪರಿಪೂರ್ಣನಾಗುವುದು. ನನ್ನ ಅಪರಿಪೂರ್ಣತೆಗಳನ್ನು ನಾನು ನೋವಿನಿಂದಲೇ ಒಪ್ಪಿಕೊಳ್ಳುತ್ತೇನೆ. ಮನುಷ್ಯನ ಶಕ್ತಿಯಿರುವುದು ತನ್ನ ಮಿತಿಗಳನ್ನು ಅರಿಯುವುದರಲ್ಲೇ ಎಂದು ನನ್ನ ನಂಬಿಕೆ.

ಮನುಷ್ಯರನ್ನು ಬೆಸೆಯುವ ತತ್ವಗಳನ್ನೇ ನಾನು ಸತ್ಯ ಎನ್ನುತ್ತೇನೆ.

ಸತ್ಯದ ಹುಡುಕಾಟದಲ್ಲಿ ಮುಂದುವರಿದಂತೆಲ್ಲಾ ಸತ್ಯ ಎಲ್ಲವನ್ನೂ ಗ್ರಹಿಸಬಲ್ಲದು ಎಂಬುದು ನನಗೆ ಅರಿವಾಗತೊಡಗುತ್ತದೆ. ಪರಿಶುದ್ಧ ಹೃದಯ ಹಾಗೂ ಪರಿಶುದ್ಧ ಬುದ್ಧಿಶಕ್ತಿಗೆ ಕಂಡಿದ್ದು ಆ ಕ್ಷಣದ ಸತ್ಯ. ನಾನು ಆ ಸತ್ಯಕ್ಕೆ ಆತುಕೊಳ್ಳುತ್ತೇನೆ. ಅದು ನನ್ನನ್ನು ಪರಿಶುದ್ಧ ಸತ್ಯದೆಡೆಗೆ ಕರೆದೊಯ್ಯುತ್ತದೆ. ಸತ್ಯದ ಪರಿಪಾಲಕ ಧೂಳಿನಂತೆ ವಿನಮ್ರನಾಗಿರಬೇಕಾಗುತ್ತದೆ. ಅವನ ನಮ್ರತೆ ಸತ್ಯದ ಒಡನಾಟದೊಂದಿಗೆ ಇನ್ನಷ್ಟು ಹೆಚ್ಚುತ್ತದೆ.

(ವಿವಿಧ ಬರಹ, ಭಾಷಣಗಳಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೩೧

ದರಿದ್ರನಾರಾಯಣ

ಮನುಷ್ಯ ಅರಿಯಲಾರದ ಹಾಗೂ ಹೆಸರಿಸಲಾಗದ ದೇವರ ಲಕ್ಷಾಂತರ ಹೆಸರುಗಳಲ್ಲಿ ದರಿದ್ರನಾರಾಯಣ ಎಂಬುದೂ ಒಂದು. ದರಿದ್ರನಾರಾಯಣ ಎಂದರೆ ಬಡವರ ದೇವರು, ಬಡವರ ಹೃದಯದಲ್ಲಿ ಪ್ರತ್ಯಕ್ಷವಾಗುವ ದೇವರು.

ಬಡವರ ದೃಷ್ಟಿಯಲ್ಲಿ ಆರ್ಥಿಕತೆಯೇ ಪಾರಮಾರ್ಥಿಕತೆ. ಹಸಿದಿರುವ ಅಸಂಖ್ಯಾತ ಜನಕೋಟಿಗೆ ನೀವು ಇದನ್ನು ಬೇರಾವ ರೀತಿಯಲ್ಲೂ ವಿವರಿಸಲಾರಿರಿ. ಅದು ಅವರಿಗೆ ತಲುಪುವುದಿಲ್ಲ. ಆದರೆ ಅವರಿಗೆ ಆಹಾರ ಕೊಡಿ, ಅವರು ನಿಮ್ಮನ್ನು ತಮ್ಮ ಪಾಲಿನ ದೇವರಂತೆ ಕಾಣುವರು. ಅವರ ಕಂಬಳಿಯ ತುದಿಯಲ್ಲಿ ಬಿಗಿಯಾಗಿ ಕಟ್ಟಿಕೊಂಡ ಗಂಟಿನೊಳಗಿಂದ ಕೊಳಕಾದ ನಾಣ್ಯಗಳನ್ನು ನನ್ನ ಇದೇ ಕೈಗಳಿಂದ ಪಡೆದಿದ್ದೇನೆ. ಆಧುನಿಕ ಪ್ರಗತಿಯ ಬಗ್ಗೆ ಅವರೆದುರು ಮಾತಾಡಿ, ದೇವರ ಹೆಸರಿನಲ್ಲಿ ಅವರನ್ನು ಬೈಯ್ಯಿರಿ. ಅದೆಲ್ಲವೂ ವ್ಯರ್ಥ. ಅವರೆದುರು ನಾವೇನಾದರೂ ದೇವರ ಬಗ್ಗೆ ಮಾತಾಡಿದರೆ ಅವರು ನಮ್ಮನ್ನು ರಾಕ್ಷಸರೆನ್ನುವರು. ಅಕಸ್ಮಾತ್ ಅವರಿಗೆ ದೇವರು ಎನ್ನುವವನು ಗೊತ್ತಿದ್ದರೆ, ಆ ದೇವರು ಅವರಿಗೆ ಭಯ ಹುಟ್ಟಿಸುವವನಾಗಿ, ಸೇಡಿನವನಾಗಿ, ನಿರ್ದಯ ಸರ್ವಾಧಿಕಾರಿಯಾಗಿ ಕಾಣುವನು.

...ಅವರೆದುರು ದೇವರ ಸಂದೇಶವನ್ನು ಇಡುವ ಧೈರ್ಯ ಮಾಡಲಾರೆ...ಪವಿತ್ರವಾದ ಕೆಲಸ ಕಾರ್ಯದ ಸಂದೇಶದ ಮೂಲಕ ಮಾತ್ರ ಅವರೆದುರು ದೇವರ ಸಂದೇಶವನ್ನು ಒಯ್ಯಬಲ್ಲೆ. ಇಲ್ಲಿ ಆರಾಮಾಗಿ ಕೂತು, ಬೆಳಗ್ಗೆ ಒಳ್ಳೆಯ ತಿಂಡಿ ತಿಂದು, ಮಧ್ಯಾಹ್ನ ಮತ್ತಷ್ಟು ಒಳ್ಳೆಯ ಊಟಕ್ಕಾಗಿ ಕಾಯುತ್ತಾ, ದೇವರ ಬಗ್ಗೆ ಮಾತಾಡುವುದು ಸುಲಭ. ಆದರೆ ಎರಡು ಹೊತ್ತಿನ ಊಟವೂ ಇಲ್ಲದೆ ಹಸಿದಿರುವ ಲಕ್ಷಾಂತರ ಜನರಿಗೆ ದೇವರ ಬಗ್ಗೆ ಹೇಗೆ ಮಾತಾಡಲಿ? ಅವರಿಗೆ ದೇವರು ರೊಟ್ಟಿ, ಬೆಣ್ಣೆಯಲ್ಲಿ

ಮಾತ್ರ ಕಾಣುವನು. ನೋಡಿ, ಇಂಡಿಯಾದ ರೈತರು ನೆಲದಿಂದ ತಮ್ಮ ರೊಟ್ಟಿ ಪಡೆಯುತ್ತಿದ್ದರು. ಅವರು ಒಂದಿಷ್ಟು ಬೆಣ್ಣೆಯನ್ನೂ ಪಡೆಯಲಿ ಎಂದು ನಾನು ಚರಕವನ್ನು ಬಳಸಲು ಕೇಳಿಕೊಂಡೆ. ನಾನು ಇವತ್ತು ತುಂಡು ಬಟ್ಟೆ ತೊಡುವುದು ಯಾಕೆಂದರೆ, ನಾನು ಆ ಅರೆಹೊಟ್ಟೆಯ, ಅರೆ ಬೆತ್ತಲೆಯ ಮೂಕ ಜನಕೋಟಿಯ ಏಕಮಾತ್ರ ಪ್ರತಿನಿಧಿಯಾಗಿ ಇಲ್ಲಿ ಬಂದಿದ್ದೇನೆ.

ಮೂಕ ಜನಕೋಟಿಯ ಹೃದಯಗಳಲ್ಲಿ ಸಿಗುವ ದೇವರನ್ನು ಬಿಟ್ಟರೆ ನಾನು ಇನ್ನಾವ ದೇವರನ್ನೂ ಗುರುತಿಸಲಾರೆ. ಆ ಮೂಕ ಜನಕೋಟಿ ಆ ದೇವರನ್ನು ಗುರುತಿಸಲಾರದು. ಆದರೆ ನಾನು ಗುರುತಿಸುವೆ. ಈ ಮೂಕ ಜನಕೋಟಿಯ ಸೇವೆಯ ಮೂಲಕ, ಸತ್ಯವಾಗಿರುವ ದೇವರನ್ನು ಅಥವಾ ದೇವರಾಗಿರುವ ಸತ್ಯವನ್ನು ನಾನು ಆರಾಧಿಸುತ್ತೇನೆ.

ಸಿರಿವಂತರ ಬಳಿ ಅವರಿಗೆ ಬೇಡದ ವಸ್ತುಗಳ ಅನವಶ್ಯಕ ಉಗ್ರಾಣಗಳಿವೆ. ಈ ಬೇಡದ ವಸ್ತುಗಳು ನಿಜಕ್ಕೂ ವ್ಯರ್ಥ. ಅತ್ತ ಕೋಟಿಗಟ್ಟಲೆ ಜನ ಈ ವಸ್ತುಗಳಿಲ್ಲದೆ ಸಾಯುತ್ತಿದ್ದಾರೆ. ಪ್ರತಿಯೊಬ್ಬರೂ ತಮಗೆ ಬೇಕಾದಷ್ಟನ್ನು ಮಾತ್ರ ಇಟ್ಟುಕೊಂಡರೆ ಯಾರಿಗೂ ಕೊರತೆಯಾಗದು ಹಾಗೂ ಎಲ್ಲರೂ ನೆಮ್ಮದಿಯಿಂದ ಬದುಕಬಹುದು... ಸಿರಿವಂತರು ತಮ್ಮ ಆಸ್ತಿಪಾಸ್ತಿಗಳನ್ನು ತಕ್ಕಮಟ್ಟಿನ ಮಿತಿಯಲ್ಲಿ ಇಟ್ಟುಕೊಂಡರೆ ಬಡವರಿಗೂ ಊಟ ಸಿಗುತ್ತದೆ; ಅವರೂ ಸಿರಿವಂತರಂತೆಯೇ ನೆಮ್ಮದಿಯಿಂದ ಬದುಕುವುದನ್ನು ಕಲಿಯುತ್ತಾರೆ.

ಏಸು ಕ್ರಿಸ್ತ, ಪ್ರವಾದಿ ಮಹಮ್ಮದ್, ಬುದ್ಧ, ಗುರು ನಾನಕ್, ಕಬೀರ್, ಚೈತನ್ಯ, ಶಂಕರಾಚಾರ್ಯ, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ ಇವರೆಲ್ಲ ಸಹಸ್ರಾರು ಜನರ ಮೇಲೆ ವ್ಯಾಪಕ ಪ್ರಭಾವ ಬೀರಿದವರು; ಜನರ ಚಾರಿತ್ರ್ಯವನ್ನು ರೂಪಿಸಿದವರು. ಇವರೆಲ್ಲ ಈ ಜಗತ್ತಿನಲ್ಲಿ ಬದುಕಿದ್ದರಿಂದಲೇ ಈ ಜಗತ್ತು ಹೆಚ್ಚು ಶ್ರೀಮಂತವಾಗಿದೆ. ಈ ಎಲ್ಲ ಮಹನೀಯರು ತಮ್ಮ ಆಯ್ಕೆಯೆಂಬಂತೆ ಉದ್ದೇಶಪೂರ್ವಕವಾಗಿಯೇ ಬಡತನವನ್ನು ಅಪ್ಪಿಕೊಂಡವರು.

(ವಿವಿಧ ಬರಹ, ಭಾಷಣಗಳಿಂದ: ಆಕರ: 'ಇಂಡಿಯಾ ಆಫ್ ಮೈ ಡ್ರೀಮ್ಸ್', ಪು. ೫೨-೫೫)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

ಟಿಪ್ಪಣಿ

ಗಾಂಧೀಜಿಯವರ 'ದರಿದ್ರನಾರಾಯಣ'ನ ಕಲ್ಪನೆ ಭಾರತದಲ್ಲಿ ಸಮಾಜವಾದದ ಆರಂಭ ಘಟ್ಟವೆಂದು ರಾಮಮನೋಹರ ಲೋಹಿಯಾ 'ಸಮಾಜವಾದದ ಮುಖಗಳು' ಲೇಖನದಲ್ಲಿ ಬರೆಯುತ್ತಾರೆ.

೩೨

ಅಸಹಕಾರ ತತ್ವ

ನಾವು ಬ್ರಿಟಿಷ್ ಸರ್ಕಾರದ ವಿರುದ್ಧ ಚಲಾಯಿಸಿರುವ ಅಸಹಕಾರ ತತ್ವವನ್ನೇ ಇನ್ನೂ ಕೆಲವು ವಿಷಯಗಳಿಗೂ ಅನ್ವಯಿಸಬಹುದು. ಒಂದು ವ್ಯವಸ್ಥೆಯನ್ನು ಮುಂದುವರಿಸಲು ಜನರು ಸಿದ್ಧರಿಲ್ಲದೇ ಹೋದಲ್ಲಿ, ಆ ವ್ಯವಸ್ಥೆಯ ಅಡಿಪಾಯವೇ ಬಿದ್ದುಹೋಗುವುದರಿಂದ, ಅದು ಸಂಪೂರ್ಣವಾಗಿ ನಾಶವಾಗುತ್ತದೆ. ಹಾಗೆಯೇ, ದುಷ್ಟ ಆಚರಣೆಗಳನ್ನು ಅಂತ್ಯಗೊಳಿಸಬೇಕೆಂದು ಇಚ್ಛಿಸಿ ಅದಕ್ಕೆ ಸಂಪೂರ್ಣ ಅಸಹಕಾರವನ್ನು ತೋರಿದಲ್ಲಿ, ಆ ಕೇಡಿನ ಸಾಮ್ರಾಜ್ಯ ಬಹು ಬೇಗನೆ ಕುಸಿದು ಹೋಗುತ್ತದೆ...

ನಾನು ಹೀಗೆ ಹೇಳಿದಾಗ ಕೆಲವು ಪ್ರಶ್ನೆಗಳು ಸಹಜವಾಗಿ ಮೂಡಿ ಬರುತ್ತವೆ: ಒಬ್ಬ ವ್ಯಕ್ತಿಯ ಅಸಹಕಾರದಿಂದ ಏನು ಪ್ರಯೋಜನವಾಗುತ್ತದೆ? ಯಾವ ರೀತಿಯ ಪರಿಣಾಮವನ್ನು ಬೀರಲು ಸಾಧ್ಯವಿದೆ? ಈ ಪ್ರಶ್ನೆಗಳಿಗೆ ಈ ರೀತಿಯ ಉತ್ತರವನ್ನು ನೀಡಬಹುದು: ಒಬ್ಬ ವ್ಯಕ್ತಿಯು ತನ್ನ ಅಸಹಕಾರವನ್ನು ತೋರುವುದರ ಮೂಲಕ ಆತನು ಮೊದಲು [ಕೆಟ್ಟ ವ್ಯವಸ್ಥೆಗೆ ಸಹಕಾರ ಕೊಡುವ] ದೋಷದಿಂದ ಮುಕ್ತನಾಗುತ್ತಾನೆ; ಓರ್ವನ ಅಸಹಕಾರವು ವ್ಯವಸ್ಥೆಯ ಕುಸಿತದ ಮೊದಲ ನಡೆಯಾಗುತ್ತದೆ. ಕೇವಲ ಒಂದು ಇಟ್ಟಿಗೆಯನ್ನು ಮನೆಯೊಂದರ ಕಟ್ಟಡದಿಂದ ಹೊರಗೆಳೆದಾಗ, ಇಡೀ ಮನೆಯು ಕುಸಿಯುವ ಯಾವುದೇ ಅವಕಾಶವಿಲ್ಲ ಎನ್ನುವುದು ಸತ್ಯವೇ. ಆದರೆ, ಒಂದು ಇಟ್ಟಿಗೆಯ ಕೊರತೆಯಿಂದಾಗಿ, ನೋಡುವವರಿಗೆ ಮನೆಯು ಶಿಥಿಲಗೊಳ್ಳಲು ಆರಂಭಿಸಿದೆ ಎನ್ನುವ ವಿಷಯವಂತೂ ಅರಿವಾಗುತ್ತದೆ. ಮನೆಯೊಂದರ ಕಟ್ಟಡದಿಂದ ಮೊದಲ ಇಟ್ಟಿಗೆಯನ್ನು ಹೊರಗೆಳೆಯುವುದು ತುಸು ಕಷ್ಟವಾದ ವಿಷಯವಾದರೂ, ಎರಡನೆಯ ಇಟ್ಟಿಗೆಯನ್ನು ಹೊರಗೆಳೆಯುವುದು ಮೊದಲಿನಷ್ಟು ಕಷ್ಟವನ್ನು ಸೃಷ್ಟಿಸುವುದಿಲ್ಲ.

ಜಗತ್ತಿನಲ್ಲಿ ಇದುವರೆಗೂ ಉಂಟಾಗಿರುವ ಎಲ್ಲಾ ಸುಧಾರಣೆಗಳು ಒಬ್ಬ ವ್ಯಕ್ತಿಯ ಶ್ರಮದಿಂದ ಆರಂಭವಾದ ಕಾರ್ಯಗಳಾಗಿವೆ. ಬಾಲ್ಯ ವಿವಾಹದಂತಹ ಕೆಟ್ಟ ವ್ಯವಸ್ಥೆಗಳ ವಿರುದ್ಧವಾದ ಸನ್ನಿವೇಶವಂತೂ ಇಂದು ಸೃಷ್ಟಿಯಾಗಿದೆ. ಆದರೆ, ಇಂತಹ ಆಚರಣೆಗಳನ್ನು ಕೆಡುಕಿನ ಆಚರಣೆಗಳೆಂದು ಪ್ರತಿಪಾದಿಸುವವರು ಅವುಗಳ ವಿರುದ್ಧ ಯಾವುದೇ ಕ್ರಿಯೆಗೆ ಮುಂದಾಗುತ್ತಿಲ್ಲ. ಇಂದು ನಾವೇನಾದರೂ ಈ ಎಲ್ಲಾ ಆಚರಣೆಗಳ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದರೆ, ಬಹುತೇಕರು ಇವೆಲ್ಲವೂ ಅನಿಷ್ಟದ ಆಚರಣೆಗಳೆಂದು ಖಂಡಿತ ತಮ್ಮ ಅಭಿಪ್ರಾಯವನ್ನು ನೀಡುತ್ತಾರೆ. ಇಷ್ಟೆಲ್ಲಾ ವಿರೋಧವಿದ್ದರೂ, ಈ ಎಲ್ಲಾ ಆಚರಣೆಗಳು ಈಗಲೂ ಜೀವಂತವಿರಲು ವಿರೋಧಿಸುವವರ ದೌರ್ಬಲ್ಯವೇ ಕಾರಣವಾಗಿದೆ. ವಿರೋಧಿಸುವವರು ದುಷ್ಟ ಆಚರಣೆಗಳ ವಿರುದ್ಧ ಕ್ರಮ ಜರುಗಿಸುವಲ್ಲಿ ಸೋತಿದ್ದಾರೆ. ಕೇವಲ ಮಾತನಾಡುವುದರಲ್ಲಿ ಕಾಲ ಕಳೆಯುವ ಇವರು, ತಮ್ಮ ಮಾತುಗಳನ್ನು ನಿರ್ಧಾರದಿಂದ ಕಾರ್ಯರೂಪಕ್ಕೆ ತರುವಲ್ಲಿ ವಿಫಲರಾಗಿದ್ದಾರೆ. ಬಹುಸಂಖ್ಯಾತರು ಇಂತಹ ಆಚರಣೆಗಳಿಂದ ದೂರವಿರುವ ನಿರ್ಧಾರಕ್ಕೆ ಎಲ್ಲಿಯವರೆಗೂ ಬರುವುದಿಲ್ಲವೋ ಅಲ್ಲಿಯವರೆಗೆ ಇಂತಹ ಹೇಡಿತನ ಉಳಿದಿರುತ್ತದೆ.

('ನವಜೀವನ್', ಮಾರ್ಚ್ ೧೪, ೧೯೨೬)

ಕನ್ನಡಕ್ಕೆ: ಸದಾನಂದ ಆರ್.

೩೩

ಚರಕ

ಚರಕವನ್ನು ನಾನು ಕಂಡು ಹಿಡಿಯಲಿಲ್ಲ. ಅದು ಈ ಮೊದಲೇ ಇತ್ತು. ಒಮ್ಮೆ ದೇವರು ನನ್ನ ಕಿವಿಯಲ್ಲಿ ಉಸುರಿದ ಮಾತು: 'ನೀನು ಅಹಿಂಸಾ ಮಾರ್ಗ ಹಿಡಿದು ಕೆಲಸ ಮಾಡುವುದಾದರೆ ಪುಟ್ಟ ಪುಟ್ಟ ವಸ್ತುಗಳೊಡನೆ ಕೆಲಸ ಮಾಡುತ್ತಾ ನಡೆಯಬೇಕೇ ಹೊರತು ಬೃಹತ್ ವಸ್ತುಗಳ ಜೊತೆಗಲ್ಲ.'

...ನಾನು ಗೀತೆ, ಕುರಾನ್, ರಾಮಾಯಣ ಓದುತ್ತಿರುವಾಗ ಕೆಲವು ಸಲ ನನ್ನ ಮನಸ್ಸು ಎಲ್ಲೆಲ್ಲೋ ಅಲೆದಾಡುತ್ತಿರುತ್ತದೆ. ಆದರೆ ನಾಲ್ಕು ಗಂಟೆಗಳ ಕಾಲ ಚರಕದಿಂದ ನೂಲುವಾಗ ಮಾತ್ರ ಒಂದೇ ಒಂದು ಅಶುದ್ಧ ಯೋಚನೆಯೂ ನನ್ನ ಮನಸ್ಸಿನಲ್ಲಿ ಸುಳಿಯುವುದಿಲ್ಲ...

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೩೪

ಚರಕವೆಂಬ ಸಾಧನ

ಖಾದಿಯು ಈ ನಾಡಿನ ಏಕತೆಯ ಮತ್ತು ಸ್ಪಂದನಶೀಲ ಗುಣದ ದಾಖಲೆ! ಜವಾಹರ್‌ಲಾಲ್ ಅದನ್ನು ಸುಂದರವಾಗಿ 'ಸ್ವಾತಂತ್ರ್ಯ ಚಳುವಳಿಯ ಸಮವಸ್ತ್ರ' ಎಂದು ಕರೆದಿದ್ದಾರೆ. ತನಗೆ ಬೇಕಾಗುವ ವಸ್ತುಗಳನ್ನು ತಾನೇ ಉತ್ಪಾದಿಸಿಕೊಳ್ಳುವುದು ಮತ್ತು ಲಾಭದಾಯಕ ಉದ್ದೇಶಗಳಿಗೆ ಹೆಚ್ಚುವರಿ ಉತ್ಪಾದನೆ ಮಾಡುವುದು– ಇದು ಗ್ರಾಮ ಸಮುದಾಯಗಳಿಗೆ ಖಾದಿ ತಯಾರಿಕೆಯು ಹೇಳಿಕೊಟ್ಟಿರುವ ವಾಣಿಜ್ಯ ಸೂತ್ರ. ಉತ್ಪಾದನೆಯ ವಿಕೇಂದ್ರೀಕರಣ, ಉತ್ಪನ್ನಗಳ ಹಂಚಿಕೆ ಮತ್ತು ವಿತರಣೆಗೆ ಖಾದಿಯೇ ಪ್ರಾಯೋಗಿಕ ನಿದರ್ಶನ.

ಖಾದಿ ತಯಾರಿಕೆ ಎಂಬುದು ಜೀವನೋಪಾಯದ ದಾರಿ ಮಾತ್ರವೇ ಅಲ್ಲ ಎಂಬುದನ್ನು ನಾವೀಗ ಮನಗಾಣಬೇಕಿದೆ. ಸ್ಥಗಿತಗೊಂಡಿರುವ ಸಮಾಜದಲ್ಲಿ ಚಲನೆಯನ್ನು ಮೂಡಿಸಲು ಇದರಿಂದ ಸಾಧ್ಯವಾದೀತು. ಖಾದಿಯು ಸ್ವದೇಶಿ ಚಿಂತನೆಯ ಅಭಿವ್ಯಕ್ತಿ ಕ್ರಮ. ಅದನ್ನು ಉತ್ಪಾದಿಸಲು ಬೇಕಾದ ಎರಡು ಸಾಧನಗಳೆಂದರೆ ಗ್ರಾಮ ಸಮುದಾಯದ ಶ್ರಮ ಹಾಗೂ ಕೌಶಲ್ಯ. ಆಧುನಿಕ ಜಗತ್ತು ಪಡೆಯಬೇಕಿರುವುದು ಈ ಗ್ರಾಮೀಣ ಕೌಶಲ್ಯದ ಪ್ರಯೋಜನವನ್ನು. ನಮ್ಮ ನಾಡಿನ ಬಹುಪಾಲು ಜನಕ್ಕೆ ನೂಲುವುದು ಗೊತ್ತು. ಕಲಿಯಲು ಅದು ತೀರಾ ಕಷ್ಟವೆನಿಸುವ ಕೆಲಸ ಕೂಡ ಅಲ್ಲ. ಖಾದಿಯ ತಯಾರಿಕೆಗೆ ದೊಡ್ಡ ಬಂಡವಾಳವೂ ಬೇಕಿಲ್ಲ. ಬೇರೆ ಬಟ್ಟೆಗಳಿಗಿಂತ ಖಾದಿ ಅಗ್ಗವಾಗಿ ದೊರಕುವುದರಿಂದ ಜನರಿಗೆ ಇದರಿಂದ ಅನುಕೂಲವೇ ಇದೆ.

ನಾನು ನನ್ನ ಅನೇಕ ತಪ್ಪುಗಳಿಗಾಗಿ ಟೀಕೆಗೆ ಅರ್ಹವಾಗಿರಬಹುದು. ಆದರೆ ಚರಕವನ್ನು ವ್ಯಾಪಕವಾಗಿ ಬಳಕೆಗೆ ತಂದದ್ದಕ್ಕೆ ಮಾತ್ರ ಖಂಡಿತವಾಗಿಯೂ ನನಗೆ ಅಭಿನಂದನೆಗಳು ಸಲ್ಲಬೇಕು. ಲೆಕ್ಕವಿಲ್ಲದಷ್ಟು ತೊಂದರೆ, ತಾಪತ್ರಯಗಳ ಮಧ್ಯೆ

ನಾವು ಇದನ್ನು ನೆಲೆಗೊಳಿಸಿದ್ದೇವೆ. ನಾವೆಲ್ಲ ಸಣ್ಣ ಮಟ್ಟದಲ್ಲಿ ಶುರುಮಾಡಿದ ಈ ನೂಲುವ ಕಾಯಕ ಇಂದು ಭಾರತದ ಎರಡು ಕೋಟಿ ಜನ ಅದರ ಪ್ರಭಾವಕ್ಕೆ ಒಳಗಾಗುವಲ್ಲಿಗೆ ಬಂದುಮುಟ್ಟಿದೆ. ಶೂನ್ಯದಿಂದ ನಾವು ಏನನ್ನಾದರೂ ಸೃಷ್ಟಿಸಿದ್ದೇವೆ ಎನ್ನುವುದಕ್ಕೆ ಚರಕವೇ ಒಳ್ಳೆಯ ಉದಾಹರಣೆ.

ಕಾರ್ಖಾನೆಗಳನ್ನು ಸ್ಥಾಪಿಸುವುದರಿಂದಾಗಲೀ, ನಗರಗಳನ್ನು ಬೆಳೆಸುವುದರಿಂದಾಗಲೀ ನಮ್ಮ ಜನಕ್ಕೆ ಹಾಗೆ ಉದ್ಯೋಗಗಳು ಸಿಕ್ಕಿಬಿಡುವುದಿಲ್ಲ. ನಗರವಾಸಿಗಳು ಈ ಬೆಳವಣಿಗೆಗಳನ್ನು ಸಹಿಸಿಕೊಂಡರಂತೂ ಅದು ಇನ್ನಷ್ಟು ಕಷ್ಟ. ನಗರಗಳು ರೋಗದ ಗೂಡಾಗುತ್ತವೆ; ಸಮಾಜದಲ್ಲಿ ತಳಮಳ, ಅಶಾಂತಿ ಹೆಚ್ಚುತ್ತವೆ; ಹಿಂಸೆ ನಿಧಾನವಾಗಿ ಜನಜೀವನದಲ್ಲಿ ನುಸುಳತೊಡಗುತ್ತದೆ. ನಮ್ಮ ಕಳಕಳಿ ಇರಬೇಕಾದ್ದು ಗ್ರಾಮೀಣ ಆರ್ಥಿಕತೆಯ ಬಗ್ಗೆ. ಹಸಿವಿನಿಂದ ತತ್ತರಿಸುತ್ತಿರುವ ಕೋಟಿ ಕೋಟಿ ಜನರ ಬಗ್ಗೆ. ಅವರ ಉಳಿವಿನ ಖಾತ್ರಿ ಆಗಬೇಕೆಂದರೆ ಚರಕವನ್ನು ಸಮುದಾಯದತ್ತ ಕೊಂಡೊಯ್ಯಲೇಬೇಕು.

ಸಮುದಾಯದ ಬದುಕನ್ನು ಕಟ್ಟುವ ಸೃಜನಶೀಲ ಸಾಧನವನ್ನಾಗಿ ನಾವಿದನ್ನು ನೋಡಬೇಕಿದೆ. ಹಳ್ಳಿಗಳತ್ತ ಉದ್ದಿಮೆ, ನವ ತಾಲೀಮು– ಇಂತಹ ನಮ್ಮ ಕಾರ್ಯಕ್ರಮಗಳ ಜೊತೆಗೆ ಖಾದಿ ತಯಾರಿಕೆ ಕೂಡ ಸೇರ್ಪಡೆಯಾಗಬೇಕು. ಇದರಿಂದ ಚರಕಕ್ಕೆ ಮಾನ್ಯತೆ ಸಿಗುವುದಷ್ಟೇ ಅಲ್ಲ, ಹಳ್ಳಿಗಳ ಆರ್ಥಿಕತೆಗೆ ಚಲನೆ ಮೂಡುತ್ತದೆ. ಅದರ ಸಹಾಯದಿಂದ ನಾವು ಜನರಿಗೆ ಹೆಚ್ಚಿನ ನೆರವು ಒದಗಿಸುವುದು ಸಾಧ್ಯವಾಗುತ್ತದೆ.

ನೂಲುವ ಮತ್ತು ನೇಯುವ ಕೆಲಸಗಳು ಭಾರತದ ಆರ್ಥಿಕತೆಗೆ ದೊಡ್ಡ ಕೊಡುಗೆ ನೀಡಬಲ್ಲಂಥವು. ಇವು ಬೇಸಾಯಕ್ಕೆ ಪೂರಕವಾದ ಉದ್ಯೋಗಗಳು. ಶೇಕಡ ಎಂಬತ್ತರಷ್ಟು ಜನ ಈ ದೇಶದಲ್ಲಿ ಬೇಸಾಯವನ್ನು ನಂಬಿ ಬದುಕುತ್ತಿದ್ದಾರೆ. ಉಳಲು ಕೆಲವರಿಗೆ ಇಲ್ಲಿ ಭೂಮಿಯಿದೆ; ಇನ್ನು ಕೆಲವರಿಗೆ ಇಲ್ಲ. ಆದರೂ ಇವರೆಲ್ಲರ ಬದುಕು ನಡೆಯುವುದು ಮೇಟಿಯ ಬಲದಿಂದಲೇ. ವರ್ಷದಲ್ಲಿ ನಾಲ್ಕು ತಿಂಗಳು ನಮ್ಮ ಗ್ರಾಮ ಸಮುದಾಯಗಳು ಬೇಸಾಯದಿಂದ ವಿರಾಮವನ್ನು ಪಡೆಯುವಂತಾಗುತ್ತದೆ. ಈ ಅವಧಿಯಲ್ಲಿ ಅವರಿಗೆ ಬೇರೆ ಗಳಿಕೆಯೂ ಇರುವುದಿಲ್ಲ. ಹಾಗಾಗಿ ದೊಡ್ಡ ಸಂಖ್ಯೆಯಲ್ಲಿ ಜನರು ಹಸಿದುಕೊಂಡಿರಬೇಕಾಗುತ್ತದೆ. ಇದಲ್ಲದೆ ಆಗಾಗ ಮುತ್ತುವ ಬರಗಾಲಗಳೂ ಈ ಜನರ ಬೇಗೆಯನ್ನು ಇನ್ನಷ್ಟು ಹೆಚ್ಚಿಸುತ್ತವೆ. ಖಾದಿ ತಯಾರಿಕೆ ಈ ಸಮುದಾಯಗಳಿಗೆ ಸುಲಭ ಜೀವನೋಪಾಯವನ್ನು ಕಲ್ಪಿಸಬಲ್ಲದು.

ಖಾದಿ ತಯಾರಿಕೆಯಿಂದ ಕೆಲವು ಕೋಟಿ ರೂಪಾಯಿಗಳ ಸರಕನ್ನು ನಾವು ಉತ್ಪಾದಿಸಬಲ್ಲೆವಾದರೆ ರಾಷ್ಟ್ರೀಯ ಆದಾಯಕ್ಕೆ ಅದು ಬಹು ದೊಡ್ಡ ಕೊಡುಗೆಯೇ. ಇದರಿಂದ ಹಳ್ಳಿಗಳನ್ನು ಸರಿಯಾದ ರೀತಿಯಲ್ಲಿ, ಸಮಾನತೆಯ ನೆಲೆಯಲ್ಲಿ ನಾವು ಕಟ್ಟಬಹುದು. ಅಂದಾಜು ಮುನ್ನೂರು ಕೋಟಿ ರೂಪಾಯಿ ಮೌಲ್ಯದ ಖಾದಿಯು ದೇಶದೊಳಗೆ ಉತ್ಪಾದನೆಯಾಗಿದ್ದೇ ಆದರೆ, ಗ್ರಾಮೀಣ ಆರ್ಥಿಕತೆ, ಗ್ರಾಮೀಣ ಅಭಿವೃದ್ಧಿ ಯಾವ ಮಟ್ಟ ತಲುಪುತ್ತದೆ ಎಂಬುದನ್ನು ಊಹಿಸಿ ನೋಡಿ.

ನೂಲುವುದು ಸಹಕಾರಿ ತತ್ವದ ಪಾಠಗಳನ್ನು ಕಲಿಸಿಕೊಡಬಲ್ಲದು. ದೇಶಸೇವೆಗೆ ಜನರನ್ನು ಅಣಿಗೊಳಿಸಬಲ್ಲದು. ನಮ್ಮ ಇಚ್ಛಾಶಕ್ತಿಯನ್ನು ಒರೆಗೆ ಹಚ್ಚುವ ಮೂಲಕ ಸಮೂಹ ಸಾಧ್ಯತೆಗಳನ್ನು ತೆರೆದಿಡಬಲ್ಲದು. ಒಮ್ಮೆ ಈ ಉದ್ಯಮವನ್ನು ನಾವು ಯಶಸ್ವಿಗೊಳಿಸಿದರೆ ಇನ್ನುಳಿದವನ್ನು ಹಳ್ಳಿಗಳ ಮಟ್ಟದಲ್ಲಿ ಯಶಸ್ವಿಯಾಗಿ ರೂಪಿಸುವುದು ನಮಗೆ ಕಷ್ಟವಾಗಲಿಕ್ಕಿಲ್ಲ.

ಸಮುದಾಯಗಳು ಕ್ರಿಯಾಶೀಲವಾದಂತೆಲ್ಲ ಸ್ವಾತಂತ್ರ್ಯ ಚಳುವಳಿಗೆ ಕಸುವು ಬರುತ್ತದೆ. ದೇಶದ ಸ್ವಾತಂತ್ರ್ಯವನ್ನು ಹಿಂಸಾತ್ಮಕ ಹೋರಾಟದಿಂದಲ್ಲ, ಅಹಿಂಸೆಯ ಮಾರ್ಗದಲ್ಲಿ ನಾವು ಗಳಿಸಿದ್ದಾದರೆ ಚರಕದ ಜಯಂತಿಯನ್ನು ಆಚರಿಸಿದಂತೆ. ಚರಕ ತಿರುಗುವ ಸದ್ದು ಪ್ರತಿ ಮನೆಯಲ್ಲಿ ಕೇಳತೊಡಗಿದ ದಿನ, ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ಭಾವ ಸಮುದಾಯಗಳಲ್ಲಿ ಮೂಡತೊಡಗಿದ ದಿನ, ಚರಕದ ಜಯಂತಿಯನ್ನು ನಾವು ಆಚರಿಸಿದಂತೆ.

ಅಹಿಂಸೆ, ಆರ್ಥಿಕ ಸಂತೃಪ್ತಿ–ಇವುಗಳನ್ನು ಚರಕದ ಮೂಲಕ ನಾವು ಸಾಧಿಸಿಕೊಳ್ಳಬೇಕಿದೆ. ಈ ಅಂಶವನ್ನು ನಾವು ಗಣನೆಗೆ ತೆಗೆದುಕೊಂಡಷ್ಟೂ ಚರಕದ ಪ್ರಚಾರಕ್ಕೆ ವ್ಯಯಿಸಬೇಕಾದ ಶ್ರಮ ತಪ್ಪುವುದು. ಆಗ ನಮ್ಮ ಬಳಿ ಜನ ವಿಶ್ವಾಸವಿಟ್ಟು ಬರಬಹುದು. ಅವರಿಗೆ ಉದ್ಯೋಗದ ಭರವಸೆ ಕೊಡಬೇಕಾದವರು ನಾವು; ದೇಶದ ಏಳು ಲಕ್ಷ ಹಳ್ಳಿಗಳಲ್ಲಿ ವಾಸಿಸುವ ನಾನೂರು ದಶಲಕ್ಷ ಜನರಿಗೆ ಆತ್ಮವಿಶ್ವಾಸ ಕೊಡಬೇಕಾದವರು ನಾವು. ಈ ಜನತೆ ಒಟ್ಟುಗೂಡಿ ದೇಶವನ್ನು ನಿರ್ಮಿಸಬಲ್ಲದು. ಆಗ ಕೋಮುದ್ವೇಷ, ಅಸ್ಪೃಶ್ಯತೆ, ಸಮುದಾಯಗಳ ನಡುವಿನ ಗೊಂದಲಗಳು, ಜಗಳಗಳು ನಿಲುಗಡೆ ತಲುಪಬಲ್ಲವು.

ಇಷ್ಟೆಲ್ಲ ಹೇಳಿದ ಮೇಲೆ ಖಾದಿಯ ಮಹತ್ವವನ್ನು ಜನತೆಗೆ ತಿಳಿಸಿಕೊಡಲು ಕಾಂಗ್ರೆಸ್ಸಿಗರು ಏನು ಮಾಡಬೇಕು ಎಂಬುದನ್ನೂ ಹೇಳಿಬಿಡಬೇಕು. ಖಾದಿಯ ತಯಾರಿಕೆಯಲ್ಲಿ–ಹತ್ತಿಯನ್ನು ಬೆಳೆಯುವುದು, ಕಾಳಿನಿಂದ ಹತ್ತಿಯನ್ನು ಬೇರ್ಪಡಿಸುವುದು, ಅರಳೆಯನ್ನು ಒಟ್ಟುಗೂಡಿಸುವುದು, ಹಿಂಜುವುದು, ಹಂಜುವುದು, ನೇಯು

ವುದು, ಬಣ್ಣ ಹಾಕುವುದು, ಗಂಜಿ ಮಾಡುವುದು ಮುಂತಾದ ಚಟುವಟಿಕೆಗಳೆಲ್ಲ ಸೇರಿರುತ್ತವೆ. ಈ ಪೈಕಿ ಬಣ್ಣ ಕೊಡುವ ಕೆಲಸವೊಂದನ್ನು ಬಿಟ್ಟು ಉಳಿದವುಗಳನ್ನು ಯಾರು ಬೇಕಾದರೂ ಮಾಡಬಹುದು.

ಕಾಲಕಾಲಕ್ಕೆ ಅಖಿಲ ಭಾರತ ಖಾದಿ ಉತ್ಪಾದಕರ ಸಂಘವು ಹೊರಡಿಸಿರುವ ಸೂಚನೆಗಳನ್ನು ಕಾಂಗ್ರೆಸ್ ಪಕ್ಷವು ತಪ್ಪದೆ ಗಮನಿಸಿ ಈ ಕೆಳಕಂಡ ಅಂಶಗಳ ಕಡೆಗೆ ಜನರ ಮನಸ್ಸನ್ನು ಸೆಳೆಯಬೇಕು:

ಭೂಮಿಯನ್ನು ಹೊಂದಿರುವ ಪ್ರತಿಯೊಂದು ಕುಟುಂಬವೂ ತನಗೆ ಅಗತ್ಯವಿರುವಷ್ಟು ಹತ್ತಿಯನ್ನು ಬೆಳೆದುಕೊಳ್ಳುವಂತೆ ಪ್ರೋತ್ಸಾಹಿಸತಕ್ಕದ್ದು. ಹತ್ತಿಯನ್ನು ಬೆಳೆಯುವುದು ಅಷ್ಟು ತ್ರಾಸದಾಯಕವೇನಲ್ಲ. ಅದನ್ನು ಪ್ರೋತ್ಸಾಹಿಸತಕ್ಕದ್ದು. ಬಿಹಾರದಲ್ಲಿ ರೈತರು ತಮ್ಮ ಜಮೀನಿನ ಕಾಲುಭಾಗದಲ್ಲಿ ನೀಲಿ ಬಣ್ಣವನ್ನು ಉತ್ಪಾದಿಸುವ ಇಂಡಿಗೊ ತಳಿಯ ಸಸ್ಯಗಳನ್ನು ಬೆಳೆದುಕೊಡಬೇಕೆಂದು ಬ್ರಿಟಿಷ್ ಸರ್ಕಾರ ಆದೇಶ ಹೊರಡಿಸಿತ್ತು. ವಿದೇಶಿ ಬಟ್ಟೆ ಗಿರಣಿಗಳ ಅನುಕೂಲವನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡು ಈ ಆದೇಶ ಹೊರಬಿದ್ದಿತ್ತು. ಆದಾಗಿಯೂ ಆದೇಶ ಪಾಲನೆಯಾಯಿತು. ಯಾರದೋ ಒತ್ತಾಯಕ್ಕೆ ನಾವು ಎಂತೆಂಥವೋ ಬೆಳೆಯನ್ನು ಬೆಳೆಯಬಲ್ಲೆವೆಂದರೆ ನಮ್ಮದೇ ಬಳಕೆಗಾಗಿ ಯಾಕೆ ಬೆಳೆಯನ್ನು ತೆಗೆಯಬಾರದು?

ಹತ್ತಿಯನ್ನು ಬೆಳೆಯಲು ಸಾಧ್ಯವಿಲ್ಲದೆಡೆ ಸಹಕಾರ ಸಂಘಗಳ ಮೂಲಕ ಹತ್ತಿಯನ್ನು ಸುಲಭ ದರಗಳಲ್ಲಿ ಕೊಂಡು ವಿತರಿಸುವಂತಾಗಬೇಕು. ಅಲ್ಲದೆ ಸಹಕಾರ ಸಂಘಗಳ ಮೂಲಕ ಗ್ರಾಮಗಳಲ್ಲಿ ಹತ್ತಿ ಹಿಂಜುವ ಸಲಕರಣೆಯನ್ನೂ ಬಳಕೆದಾರರಿಗೆ ವಿತರಿಸಬಹುದು. ಹತ್ತಿಯ ಉಂಡೆಗಳು ಬಳಕೆಗೆ ಲಭಿಸತೊಡಗಿದಂತೆ ನೂಲುವ ಪ್ರಕ್ರಿಯೆ ವೇಗ ಪಡೆದುಕೊಳ್ಳುತ್ತದೆ. ಈ ಪ್ರಕ್ರಿಯೆ ಸಾಮೂಹಿಕವಾಗತೊಡಗಿದಂತೆ ಸಮುದಾಯಗಳನ್ನು ಒಟ್ಟಿಗೆ ಒಂದು ನೆಲೆಗೆ ತರುವ ಕೆಲಸವನ್ನು ಅದು ಮಾಡುತ್ತದೆ. ಕಾಂಗ್ರೆಸ್ಸಿಗರು ಈ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಆದಷ್ಟೂ ದುಡಿಯಬೇಕು. ಸಾಧ್ಯವಾದಲ್ಲಿ ಹೊಸ ದಾರಿಗಳನ್ನು ಹುಡುಕಬೇಕು.

ಜನತೆ ತಮ್ಮ ಕೈಯಾರೆ ತಿರುಗಿಸುವ ಚರಕದ ಗಾಲಿಯು ಅವರ ಬದುಕಿನಲ್ಲಿ ಸಂಚಲನವನ್ನು ಉಂಟುಮಾಡುವಂಥದ್ದು. ಚರಕದ ಸಂದೇಶ ಅದರ ಚಕ್ರದ ಸುತ್ತಳತೆಯನ್ನು ಮೀರಿ ವಿಸ್ತಾರ ಪಡೆಯುವಂಥದ್ದು.

ಅಂದಮೇಲೆ ಚರಕದ ಸಂದೇಶವೇನು? ಸರಳತೆ, ಸಮಾನತೆಗಳೇ ಅದರ ಸಂದೇಶ. ಸೇವೆ, ದುಡಿಮೆ ಅದರ ಸಂದೇಶ. ಅಹಿಂಸೆ ಅದರ ಸಂದೇಶ. ಏಕಾಗ್ರತೆ ಅದರ ಸಂದೇಶ. ಆಧ್ಯಾತ್ಮ ಬೇರೆಯಲ್ಲ, ಪರಿಶ್ರಮ ಬೇರೆಯಲ್ಲ ಎಂಬುದೇ ಆ

ಸಂದೇಶ. ದಿನದ ಒಂದು ತಾಸನ್ನು ನೂಲು ತೆಗೆಯಲು ಪ್ರತಿಯೊಬ್ಬರೂ ವಿನಿಯೋಗಿಸಿದಂತೆಲ್ಲ, ಖಾದಿ ತಯಾರಿಕೆಯಲ್ಲಿ ತೊಡಗಿಸಿಕೊಂಡಂತೆಲ್ಲ, ದುಡಿಮೆಯೇ ಗಳಿಕೆಯ ದಾರಿ ಎಂಬುದು ಅವರಿಗೆ ಅರಿವಾಗತೊಡಗುತ್ತದೆ. ಚರಕವು ಅವರಿಗೆ ಉದ್ಯೋಗ ಒದಗಿಸುವ ಹೊಣೆಯನ್ನು ನಿರ್ವಹಿಸುವುದರಿಂದ ಅದು ನಿಜಕ್ಕೂ ಗೌರವಕ್ಕೆ ತಕ್ಕುದಾಗುತ್ತದೆ. ನಮ್ಮ ಬಡ, ನಿರ್ಗತಿಕ ಜನರ ಕಣ್ಣಲ್ಲಿ ಭರವಸೆಯ ಪಸೆ ಕೂಡ ಇಲ್ಲ. ನೂಲುವ ಪ್ರಕ್ರಿಯೆ ಮಾತ್ರ ಅವರಲ್ಲಿ ಭರವಸೆಯನ್ನು ಹುಟ್ಟಿಸಬಲ್ಲದು.

ಗಿರಣಿಗಳಲ್ಲಿ ತಯಾರಾದ ನುಣುಪು ವಸ್ತ್ರಗಳಿಗಿಂತ ಖಾದಿಯ ಒರಟುತನ ನಮ್ಮಲ್ಲಿ ಆತ್ಮೀಯ ಭಾವ ಮೂಡಿಸಲಿ. ಖಾದಿಯು ಮಾನ ಮುಚ್ಚುವ ತುಂಡುಬಟ್ಟೆ ಮಾತ್ರವಲ್ಲ, ಅದು ಆತ್ಮಗೌರವದ ಪ್ರತೀಕ ಎಂಬುದನ್ನು ಎಲ್ಲರೂ ಅರಿಯುವಂತಾಗಲಿ. ತಾನು ಬೆಳೆದಿದ್ದನ್ನು ಉಣ್ಣುವ, ತಾನು ನೂಲುವುದನ್ನು ತೊಡುವ ಸವಲತ್ತು ಎಲ್ಲರಿಗೂ ಸಿಕ್ಕಲಿ. ಹಾಗಾದಾಗ ಇಡೀ ಜಗತ್ತೇ ಭಾರತದತ್ತ ಹೊರಳಿ ನೋಡೀತು.

('ವಿಲೇಜ್ ಸ್ವರಾಜ್' ಪುಸ್ತಕದಿಂದ.)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೩೫

ಚರಕ ಮತ್ತು ಅಸಹಾಯಕ ಮಹಿಳೆಯರು

ಚರಕ ಎಂದರೆ ಬರೀ ನೂಲು ತೆಗೆಯುವ ಯಂತ್ರವಲ್ಲ. ಶುದ್ಧವಾದ ಸಾರ್ವತ್ರಿಕ ಬದುಕಿಗೆ ಚರಕ ಒಳ್ಳೆಯ ಬುನಾದಿ. ನಮ್ಮ ದೇಶದ ಮುಕ್ಕಾಲು ಪಾಲು ಜನಸಂಖ್ಯೆ ರೈತರದು. ಅವರು ವರ್ಷವಿಡೀ ಕೆಲಸದಲ್ಲಿ ನಿರತರಾಗಿರುವುದಿಲ್ಲ. ಬಿಡುವಿನ ವೇಳೆಯಲ್ಲಿ ಚರಕದಿಂದ ನೂಲು ತೆಗೆದರೆ ಸಮಾಜದ ದಾರಿದ್ರ್ಯ, ನಿರುದ್ಯೋಗ ಮತ್ತು ಅಜ್ಞಾನಗಳಂತಹ ಹಲವಾರು ಸಮಸ್ಯೆಗಳು ಬರೆಹರಿಯುತ್ತವೆ. ಚರಕ ಭಾರತೀಯ ಬದುಕಿಗೆ ಭರವಸೆಯ ಚಿಹ್ನೆಯಾಗಬೇಕು ಹಾಗೂ ಚರಕ ಭಾರತೀಯ ಸಮಾಜದ ನೈತಿಕ ಸ್ಥೈರ್ಯದ ಪ್ರತೀಕವಾಗಬೇಕು.

ಬಿರ್‌ಸಾಲ್‌ನಲ್ಲಿ ಮೂರು ವರ್ಷಗಳ ಕೆಳಗೆ ಕಾಮ ತೃಷೆಗೆ ಬಲಿಯಾದ ಕೆಲವು ವೇಶ್ಯೆಯರನ್ನು ಭೇಟಿಯಾಗಿದ್ದೆ. ಅವರಲ್ಲಿ ಕೆಲವರು, 'ನಾವು ದಿನಕ್ಕೆ ಎರಡು ಮೂರು ರೂಪಾಯಿಗಳನ್ನು ಸಂಪಾದಿಸುತ್ತೇವೆ. ಯಾರಾದರೂ ಅಷ್ಟೇ ಆದಾಯ ತರುವ ಯಾವುದಾದರೂ ಕೆಲಸ ಕೊಟ್ಟರೂ ಸಾಕು. ನಾವು ನಮ್ಮ ವೃತ್ತಿಯನ್ನು ಬಿಡುತ್ತೇವೆ' ಎಂದು ಹೇಳಿದರು. ಕೆಲವು ಕ್ಷಣಗಳು ನಾನು ಅವರಿಗೆ ಏನೆಂದು ಉತ್ತರಿಸಬೇಕೆಂಬುದೇ ತಿಳಿಯಲಿಲ್ಲ. ಸ್ವಲ್ಪ ಹೊತ್ತಿನ ನಂತರ ಸುಧಾರಿಸಿಕೊಂಡು, 'ನಿಮಗೆ ಎರಡು ಅಥವಾ ಮೂರು ರೂಪಾಯಿಗಳ ವರಮಾನ ಬರುವ ಯಾವ ಕೆಲಸವನ್ನೂ ಸೂಚಿಸುವ ಸ್ಥಿತಿಯಲ್ಲಿ ನಾನಿಲ್ಲ. ನೀವು ಒಂದು ವೇಳೆ ಹಸಿವಿನಿಂದ ಇರಬೇಕಿದ್ದರೂ ಚಿಂತೆಯಿಲ್ಲ. ಆದರೆ, ಈ ವೃತ್ತಿಯನ್ನು ಮಾತ್ರ ಬಿಡಿ. ನಿಮಗಿರುವ ಒಂದೇ ದಾರಿಯೆಂದರೆ ಚರಕದಿಂದ ನೂಲು ತೆಗೆಯಲಾರಂಭಿಸುವುದು. ಅದೊಂದೇ ನಿಮಗಿರುವ ಪರಿಹಾರ' ಎಂದು ಹೇಳಿದೆ.

ವೇಶ್ಯೆಯರು ಮಣ್ಣುಪಾಲಾದ ಭಾರತೀಯ ಮಾನವಕೋಟಿಯ ಒಂದು ಸಣ್ಣ ಭಾಗವಷ್ಟೇ. ದಾರಿದ್ರ್ಯದಿಂದ ಬರೀ ಮೂಳೆ ಚಕ್ಕಳವಾಗಿರುವ ಲಕ್ಷಾಂತರ ಮಂದಿ ಕೂಡ ಅಂತಹ ಮಾನವಕೋಟಿಯ ಭಾಗವೇ. ವೇಶ್ಯೆಯರು ನಮ್ಮ ಕಾಮಕ್ಕೆ ಬಲಿಯಾದರೆ, ಬಡತನದ ಬೇಗೆಯಲ್ಲಿ ಬೇಯುತ್ತಿರುವವರು ಹಣ ಮಾಡುವ ನಮ್ಮ ಮೃಗೀಯ ಆಸೆಗೆ ಸಿಲುಕಿ ಮೂಳೆ ಚಕ್ಕಳವಾದವರು. ಉಳಿದವರು ಶ್ರೀಮಂತರಾಗಲಿ ಎಂದು ತಮ್ಮ ರಕ್ತ ಬಸಿಯುವವರು.

ದೈವವಶಾತ್ ಈಗ ವಿದ್ಯಾವಂತ ಮಧ್ಯಮ ವರ್ಗ ಸಮಾಜದಿಂದ ದೂರ ಹೋದ ಅಕ್ಕತಂಗಿಯರ ಜೊತೆ ಮತ್ತು ದಾರಿದ್ರ್ಯದಿಂದ ನರಳುತ್ತಿರುವ ಸಹೋದರರುಗಳ ಜೊತೆ ಗುರುತಿಸಿಕೊಳ್ಳಲಾರಂಭಿಸಿದೆ. ನಾವೆಲ್ಲರೂ ಸುಖವಾಗಿ ಬಾಳಬೇಕು, ಅದಕ್ಕಾಗಿ ಸ್ವರಾಜ್ಯ ಬೇಕು ಎಂದು ಬಯಸಲಾರಂಭಿಸಿದ್ದೇವೆ... ನಾವೆಲ್ಲರೂ ಹಳ್ಳಿಗಳಿಗೆ ಹೋಗಿ ಎಲ್ಲರನ್ನೂ ಸಂತೈಸುವುದು ಸಾಧ್ಯವಿಲ್ಲ. ಹಾಗಾದರೆ ಅವರಿಗೆ ನಾವು ಸಹಾಯ ಮಾಡುವುದಾದರೂ ಹೇಗೆ? ಸ್ವತಃ ನಾವೇ ಎಷ್ಟರಮಟ್ಟಿಗೆ ನಿಶ್ಶಕ್ತರು ಎಂದರೆ, ನಮ್ಮಿಂದ ಅಲ್ಪಮಟ್ಟದ ಸಹಾಯ ಮಾತ್ರ ಮಾಡಲು ಸಾಧ್ಯ. ಆ ಅಲ್ಪ ಮಟ್ಟದ ಸಹಾಯ ಯಾವುದು? ಚರಕವನ್ನು ಬಿಟ್ಟು ಮತ್ತಾವುದೂ ನನ್ನ ಆಲೋಚನೆಗೆ ಬರುವುದೇ ಇಲ್ಲ. ಕೆಲಸ ಸುಲಭವಾಗಿರಬೇಕು. ಕಲಿತವರು, ಕಲಿಯದವರು, ಬಲಿಷ್ಠರು, ನಿಶ್ಶಕ್ತರು, ಹುಡುಗರು, ಮುದುಕರು ಮತ್ತು ಎಲ್ಲ ಧರ್ಮಗಳಿಗೆ ಸೇರಿದವರಿಂದಲೂ ಮಾಡುವಂತಹ ಕೆಲಸವಾಗಿರಬೇಕು. ಈ ಎಲ್ಲ ನಿಯಮಗಳಿಗೂ ಹೊಂದಿಕೊಳ್ಳುವಂತಹುದೆಂದರೆ ಚರಕ ಒಂದೇ. ಆದ್ದರಿಂದ ಪ್ರತಿದಿನ ಕನಿಷ್ಠ ಅರ್ಧಗಂಟೆಗಳ ಕಾಲ ಚರಕ ನೂಲುವವರು ಭಾರತೀಯ ಸಮಾಜಕ್ಕೆ ಅಗಾಧವಾದ ಸೇವೆ ಮಾಡಿದಂತೆ. ಅಂತಹವರು ಮಾನವೀಯ ಮೌಲ್ಯಗಳನ್ನು ಮತ್ತೆ ಮೇಲೆತ್ತ ಬಲ್ಲವರು ಮಾತ್ರವಲ್ಲ, ದೇಶವನ್ನು ಸ್ವರಾಜ್ಯ ಸಂಪಾದನೆಯ ಹತ್ತಿರಕ್ಕೆ ಕೊಂಡೊಯ್ಯ ಬಲ್ಲರು.

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: ಬಿ.ಎ. ಶ್ರೀಧರ

೩೬

ಖಾದಿ, ಚರಕ ಮತ್ತು ಕಾಂಗ್ರೆಸ್

ನೂರೈವತ್ತು ವರ್ಷಗಳ ಹಿಂದೆ ನಮ್ಮ ಬಟ್ಟೆಗಳನ್ನು ನಾವೇ ತಯಾರಿಸಿಕೊಳ್ಳುತ್ತಿದ್ದೆವು. ನಮ್ಮ ಹೆಣ್ಣುಮಕ್ಕಳು ಒಳ್ಳೊಳ್ಳೆಯ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಸಂಸಾರದ ಹೆಚ್ಚುವರಿ ಆದಾಯಕ್ಕೂ ಈ ದುಡಿಮೆಯೇ ಮೂಲವಾಗಿತ್ತು.

ಪ್ರತಿಯೊಬ್ಬ ಭಾರತೀಯರಿಗೆ ವರ್ಷಕ್ಕೆ ಹದಿಮೂರು ಗಜ ಬಟ್ಟೆಯ ಅವಶ್ಯಕತೆಯಿದೆ; ಆದರೆ ಈಗ ತಯಾರಾಗುತ್ತಿರುವ ಬಟ್ಟೆಯ ಪ್ರಮಾಣ ಅದರ ಅರ್ಧದಷ್ಟೂ ಇಲ್ಲ. ಈ ದೇಶ ಸಾಕಷ್ಟು ಪ್ರಮಾಣದಲ್ಲಿ ಹತ್ತಿಯನ್ನು ಬೆಳೆಯುತ್ತಿದೆ; ಆದರೆ ಲಕ್ಷಗಟ್ಟಲೆ ಮೂಟೆಗಳಷ್ಟು ಹತ್ತಿಯನ್ನು ಜಪಾನಿಗೂ, ಇಂಗ್ಲೆಂಡಿಗೂ ರಫ್ತು ಮಾಡಿ, ಅಲ್ಲಿಂದ ಬಳಕೆಗೆ ಸಿದ್ಧವಾಗಿರುವ ಬಟ್ಟೆ ತರಿಸಿಕೊಳ್ಳುತ್ತಿದ್ದೇವೆ. ತನ್ನ ಅಗತ್ಯಕ್ಕೆ ತಕ್ಕಂತೆ ಕೈಮಗ್ಗಗಳಲ್ಲಿ ಬಟ್ಟೆ ತಯಾರಿಸಿಕೊಳ್ಳುವ ಸಾಮರ್ಥ್ಯವಿದ್ದೂ ಭಾರತವು ಹೊರಗಿನಿಂದ ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತಿರುವುದು ತಪ್ಪು.

ವರ್ಷವೊಂದರಲ್ಲಿ ಕನಿಷ್ಠ ನಾಲ್ಕು ತಿಂಗಳು ಯಾವುದೇ ಚಟುವಟಿಕೆಗಳಿಲ್ಲದೆ ಬಿಡುವಿನ ವೇಳೆಯನ್ನು ಕಳೆಯುತ್ತಿರುವ ನಮ್ಮ ಜನರನ್ನು ದುಡಿಮೆಗೆ ಹಚ್ಚಲೆಂದೇ ನಾನು ಈ ದೇಶಕ್ಕೆ ಚರಕವನ್ನು ಸಾಧನವನ್ನಾಗಿ ಕೊಟ್ಟಿದ್ದೇನೆ. ಹೊರದೇಶಗಳಿಂದ ತರಿಸಿಕೊಳ್ಳುತ್ತಿರುವ ಬಟ್ಟೆಗೆ ನಾವು ಪ್ರತಿವರ್ಷ ವ್ಯಯಿಸುತ್ತಿರುವ ಹೆಚ್ಚೂಕಡಿಮೆ ಅರವತ್ತು ಕೋಟಿ ರೂಪಾಯಿಯಷ್ಟು ಹಣ ಇದರಿಂದ ನಮ್ಮಲ್ಲೇ ಉಳಿಯುವಂತಾಗುವುದು.

ನಾನು ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಿ ಎಂದು ಹೇಳುತ್ತಿರುವುದು ಅತ್ಯಂತ ಉಪಯುಕ್ತವಾದ ಯೋಜನೆಯೂ ಹೌದು. ಯಾಕೆಂದರೆ, ಇಂಡಿಯಾದ ಬಟ್ಟೆ ಗಿರಣಿಗಳು ಹಾಗೂ ಚರಕ ಇವೆರಡೂ ಒಗ್ಗೂಡಿದರೆ ಇಡೀ ಇಂಡಿಯಾಕ್ಕೆ ಅಗತ್ಯವಿರುವ ಬಟ್ಟೆಯನ್ನು ತಯಾರು ಮಾಡಬಹುದು.

('ಗಾಂಧಿ ಇನ್ ಇಂಡಿಯಾ' ಪುಸ್ತಕದಿಂದ.)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೩೭

ಚರಕ ಮತ್ತು ಅಹಿಂಸಾ ತತ್ವ

ದೇಶದಲ್ಲಿ ಖಾದಿಯ ಶಕೆ ಇದೀಗ ತಾನೆ ಇಳಿಮುಖ ಕಾಣುತ್ತಿರುವಂತಿದೆ. ಬಡವರ ಹಿತಾಸಕ್ತಿಯನ್ನು ಕಾಯುವ ತನ್ನ ಕೆಲಸವನ್ನು ಅದು ಎಷ್ಟೋ ಪಾಲು ಮಾಡಿ ಮುಗಿಸಿದೆ ಎಂಬುದರಲ್ಲಿ ಯಾರಿಗೂ ಸಂದೇಹ ಬೇಕಿಲ್ಲ. ಆದರೆ ಖಾದಿಯ ಬಗೆಗಿನ ಜನರ ಧೋರಣೆ ಮತ್ತು ಅಭಿರುಚಿಯಲ್ಲಿ ಸಾಕಷ್ಟು ಬದಲಾವಣೆ ಆಗಬೇಕಾಗಿದೆ. ಅಹಿಂಸೆಯ ಪಥದಲ್ಲಿ ಸಾಗುವುದು ಕೆಲವರಿಗೆ ಹೇಗೆ ಸುಲಭವೋ ಮತ್ತೆ ಕೆಲವರು ಹೇಗೆ ಕಷ್ಟಪಟ್ಟು ಅದನ್ನು ರೂಢಿಸಿಕೊಳ್ಳಬೇಕಾಗುವುದೋ, ಹಾಗೆಯೇ ಇದು.

ಅಹಿಂಸೆ ಎಂಬುದು ಮೇಲಿನಿಂದ ಇಳಿದದ್ದೇನಲ್ಲ; ಈ ನೆಲದಿಂದಲೇ ಮೂಡಿದ್ದು. ಅಹಿಂಸೆಯು ಒಳ್ಳೆಯ ಪ್ರತಿಫಲವನ್ನು ಕೊಡಬಲ್ಲದು ಎಂದಾದರೆ, ಆ ಪ್ರತಿಫಲವನ್ನು ನಾನು ಇಲ್ಲೇ, ಈ ಜನ್ಮದಲ್ಲೇ ಕಾಣಬಯಸುವೆ!

ಆಯುಧಗಳು ಹಿಂಸೆಯನ್ನು ಪ್ರತಿನಿಧಿಸುವಂತೆ ಚರಕವು ಅಹಿಂಸೆಯನ್ನು ಪ್ರತಿನಿಧಿಸುತ್ತದೆ. ಆದರೆ ಅಹಿಂಸೆಯು ನೈತಿಕ ಬಲದಿಂದಲ್ಲದೆ ಶೂನ್ಯದಲ್ಲಿ ಹುಟ್ಟಿಕೊಳ್ಳುವುದು ಸಾಧ್ಯವಿಲ್ಲವಲ್ಲ? ಹಾಗಾಗಿ ನೈತಿಕ ಬಲವನ್ನು ನಾವು ಚರಕಕ್ಕೆ ಧಾರೆ ಎರೆಯಬೇಕಿದೆ.

ಒಂದು ಹೋಲಿಕೆ ಕೊಡುವೆ. ನೀವು ಯಾರಾದರೂ ದೊಡ್ಡವರ ಮನೆಗೆ ಭೇಟಿ ಕೊಟ್ಟು ನೋಡಿ– ಅವರ ನಡುಮನೆಯಲ್ಲೇ ಹುಲಿಯ ಚರ್ಮ, ಜಿಂಕೆಯ ಕೋಡು, ಕತ್ತಿ, ಕಠಾರಿ, ಬಂದೂಕು ಮುಂತಾದವನ್ನು ತೂಗುಹಾಕಿರುತ್ತಾರೆ. ನಾನು ಶಿಮ್ಲಾದ ರಾಷ್ಟ್ರಪತಿ ನಿವಾಸಕ್ಕೂ ಹೋಗಿದ್ದೇನೆ, ಇಟಲಿಯ ಮುಸೊಲಿನಿಯ ನಿವಾಸಕ್ಕೂ ಹೋಗಿದ್ದೇನೆ. ಅಲ್ಲೆಲ್ಲ ನನಗೆ ಆಯುಧಗಳಿಂದ ಗೋಡೆಗಳನ್ನು ಸಿಂಗರಿಸಿರುವುದು ಕಂಡುಬಂದಿದೆ. ಈ ಸ್ಥಳಗಳಿಗೆಲ್ಲ ನಾನು ಭೇಟಿ ಕೊಟ್ಟಾಗ ಬಂದೂಕಿನ ಸಲಾಮು ನೀಡುವ ಮೂಲಕ ನನ್ನನ್ನು ಸ್ವಾಗತಿಸಲಾಯಿತು! ಯಾರಿಗಾದರೂ

ವಂದನೆ ಸಲ್ಲಿಸಲು ಬಂದೂಕಿನಂಥ ಆಯುಧ ಯೋಗ್ಯವಾದದ್ದೇ ಎಂದು ನನಗೆ ವ್ಯಸನವಾಯಿತು.

ಅದಕ್ಕಾಗಿಯೇ ಚರಕವನ್ನು ನಾವು ಅಹಿಂಸೆಯ ಸಾಧನವನ್ನಾಗಿಸಬೇಕಿದೆ. ಮುಸೊಲಿನಿಯ ಬಂಗಲೆಯ ಗೋಡೆಗೆ ತೂಗುಹಾಕಿರುವ ಬಂದೂಕು ತನ್ನ ನೋಟ ಮಾತ್ರದಿಂದಲೇ ನೋಡುಗರಲ್ಲಿ ಹಿಂಸೆಯ ಭಾವನೆಯನ್ನು ಉಂಟುಮಾಡಿದಂತೆ ಚರಕವೂ ತನ್ನ ಉಪಸ್ಥಿತಿಯಿಂದಲೇ ಅಹಿಂಸೆಯ ಸಂದೇಶವನ್ನು ಸಾರುವಂತಾಗಬೇಕು.

ನನಗೆ ಗೊತ್ತಿದೆ- ಅಹಿಂಸೆಯ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿ ಕೊಡುವುದು ಬಲು ತ್ರಾಸಿನ ಕೆಲಸ. ನಾವು ಕೂಡ ಅಹಿಂಸೆಯ ಮಹತ್ವದ ಕುರಿತು ಹೆಚ್ಚಿನ ವಿಚಾರ ಮಾಡಬೇಕು. ಈ ವಿಷಯದಲ್ಲಿ ಜಗತ್ತು ನಮ್ಮನ್ನು ಸತ್ವಪರೀಕ್ಷೆಗೆ ಗುರಿಮಾಡಬಹುದು. ಚರಕದ ಪ್ರಚಾರದ ಬಗ್ಗೆ ಭಾಷಣ ಮಾಡಿಕೊಂಡು ಕೂತಿದ್ದಕ್ಕೆ ಜಗತ್ತು ನಮ್ಮನ್ನು ಗೇಲಿ ಮಾಡಲೂಬಹುದು. ಯಾವ ಕಾಲದಿಂದಲೋ ಬಡತನ, ಅಸಹಾಯಕತೆ, ಅನ್ಯಾಯ, ದಬ್ಬಾಳಿಕೆಗಳ ಸಂಕೇತವಾಗಿರುವ ಚರಕವನ್ನು ಅಹಿಂಸೆಯ, ಸಮಾನತೆಯ, ನವ ಆರ್ಥಿಕತೆಯ ಸಂಕೇತವನ್ನಾಗಿಸುವ ಜವಾಬ್ದಾರಿ ಈಗ ನಮ್ಮ ಹೆಗಲ ಮೇಲಿದೆ.

ಚರಕವು ಅಹಿಂಸೆಯ ಸಂಕೇತವಾಗಬೇಕು ಎಂದೆ. ಆದರೆ ಈ ಸಂಕೇತದಿಂದ ಆಗುವ ಅನುಕೂಲಗಳೇನು? ಇದನ್ನು ಹೀಗೆ ನೋಡಬಹುದು: ದೇವರಿದ್ದಾನೋ ಇಲ್ಲವೋ ಎನ್ನುವ ಹಿಂದೂ ಧರ್ಮದ ವಾದ ನಮಗೆಲ್ಲ ಪರಿಚಿತವಾದದ್ದೇ. ದೇವರನ್ನು ನಂಬುವವರು ಅವನನ್ನು ವಿಗ್ರಹದ ಮೂಲಕ ಸಾಂಕೇತಿಕವಾಗಿ ಪೂಜಿಸುತ್ತಾರೆ. ಅಹಿಂಸಾ ತತ್ವಕ್ಕೂ ಅಂತಹದೊಂದು ಸಾಂಕೇತಿಕವಾದ ಪೂಜನೀಯ ವಸ್ತು ಅವಶ್ಯಕ ಎಂದಾದರೆ, ಅದು ಚರಕವಾಗಬಹುದು. ಎಷ್ಟೆಂದರೂ ಅಹಿಂಸೆಯನ್ನು ಅಮೂರ್ತ ರೂಪದಲ್ಲಿ ಸ್ಮರಣೆಗೆ ತಂದುಕೊಳ್ಳಲಾಗುವುದಿಲ್ಲ. ಹಾಗಾಗಿ ಅದನ್ನು ಚರಕವೆಂಬ ಮೂರ್ತ ರೂಪದಲ್ಲಿ ನಾವು ಕಣ್ಮುಂದೆ ಇರಿಸಿಕೊಳ್ಳಬೇಕಿದೆ. ಚರಕ ನನ್ನ ಆಧ್ಯಾತ್ಮಿಕ ಸಾಧನ. ಈ ತತ್ವವನ್ನು ನನ್ನಷ್ಟೇ ಶ್ರದ್ಧೆಯಿಂದ ನೀವೂ ಆಚರಣೆಗೆ ತನ್ನಿ.

ನನ್ನ ಜೊತೆಯಲ್ಲಿ ನೀವು ಸಾಗಬಯಸುವಿರಾದರೆ ನಾನು ಹೇಳಿದ್ದನ್ನು ನಂಬಿ ಪಾಲಿಸುವ ಸಂಕಲ್ಪ ಬಲ ನಿಮ್ಮಲ್ಲಿರಬೇಕಾಗುತ್ತದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ- ನಾನು ಹೇಳಿದ್ದು ಒಪ್ಪಿಗೆಯಾದರೆ ಮಾತ್ರ ನೀವು ನನ್ನ ಜೊತೆಗೂಡಿ. ನನ್ನ ಕಳಕಳಿ ನಿಮಗೆ ತಿಳಿಯುತ್ತಿದೆ ಎಂದಾದರೆ ಚರಕವನ್ನು ಅಹಿಂಸೆಯ ಸಾಧನವಾಗಿಸಲು ಸಂಕೇತವಾಗಿಸಲು ಶ್ರಮಿಸುತ್ತೇವೆ ಎಂದು ನನಗೆ ವಾಗ್ದಾನ ಮಾಡಿ. ಈ ನಿರ್ಧಾರವನ್ನು

ನೀವು ತ್ವರೆಯಿಂದ ಕೈಗೊಳ್ಳಬೇಕಿದೆ. 'ಚರಕ ಸಂಘ'ದ ಅವಶ್ಯಕತೆಯೇ ಯಾರಿಗೂ ಇಲ್ಲ ಎಂದಾದರೆ ಅದನ್ನು ವಿಸರ್ಜನೆ ಮಾಡಿಬಿಡೋಣ. ಆಗ ಚರಕವು ಅದನ್ನು ನಂಬುವವರ ಕೈಯಲ್ಲಿ ಸಾಧನವಾಗಿ ಉಳಿಯುತ್ತದೆ. ಅದು ತನ್ನ ನಿಜವಾದ ಶಕ್ತಿಯನ್ನು ಆಮೇಲೆ ತೋರಿಸಿಕೊಟ್ಟೀತು.

ನನ್ನ ಚರಕ ಪೂಜೆಯು ವಿಗ್ರಹಾರಾಧನೆಯ ಇನ್ನೊಂದು ಬಗೆ ಎಂದು ನಿಮಗೆ ಭಾಸವಾದಲ್ಲಿ ಚರಕದ ಜೊತೆಗೆ ನನ್ನನ್ನೂ ಸುಟ್ಟುಬಿಡಿ. ಅಥವಾ ನನಗೇ ಹಾಗೆ ತೋರಿದಲ್ಲಿ ನಾನೇ ನನ್ನ ಕೈಯಾರೆ ಚರಕಕ್ಕೆ ಬೆಂಕಿ ಕೊಟ್ಟುಬಿಡುವೆ. ಅಥವಾ ಈ ಇಡೀ ಕಾರ್ಯಯೋಜನೆ ದೋಷಪೂರ್ಣವಾದುದು ಎಂದು ನಿಮಗೆ ತೋರಿದಲ್ಲಿ ಅದನ್ನೂ ಹೇಳಿಬಿಡಿ... ಯಾಕೆಂದರೆ ನಾನು ಗಾಂಪರ ಸಂಘವನ್ನು ಕಟ್ಟಿಕೊಂಡು ಮುನ್ನಡೆಯಲು ತಯಾರಿಲ್ಲ. ಹಾಗೆ ಮಾಡುವುದು ಈ ದೇಶಕ್ಕೆ ಕಳಂಕ ಹಚ್ಚಿದಂತಾಗುವುದು.

ಯಾಕೆಂದರೆ ನಾವು ನಮ್ಮ ಆಶಯವನ್ನು ಜನರಿಗೆ ತಲುಪಿಸುವಲ್ಲಿ ಸೋಲುತ್ತಿದ್ದೇವೆ. ಚರಕವು ಎಂತಹ ಸಾಧನ ಎಂಬುದರ ಕಲ್ಪನೆಯಾಗಲಿ, ಚರಕದ ಬಗ್ಗೆ ಕನಿಷ್ಠ ಕುತೂಹಲವಾಗಲಿ ಜನರಿಗೆ ಇಲ್ಲ. ಇಷ್ಟು ವರ್ಷ ಚರಕವನ್ನು ತಿರುಗಿಸಿ ನೀವು ಸಾಧಿಸಿದ್ದೇನು ಎಂದು ಸರಿಯಾಗಿಯೇ ಪ್ರಶ್ನಿಸುತ್ತಿರುವ ಸಮಾಜವಾದಿಗಳಿಗೆ ಕೊಡುವಂಥ ಉತ್ತರವೂ ನಮ್ಮ ಬಳಿ ಇಲ್ಲ. ಕಾಂಗ್ರೆಸ್ ಪಕ್ಷವು ಚರಕವನ್ನು ಒಪ್ಪಿಕೊಂಡು ಸಾಗಿದ್ದು ನಿಜ. ಆದರೆ ಅದು ಪ್ರಾಮಾಣಿಕ ನಡೆಯಾಗಿತ್ತೇನು? ಹಾಗೇನೂ ಅನ್ನಿಸುತ್ತಿಲ್ಲ. ಕಾಂಗ್ರೆಸ್ ಪಕ್ಷ ನನ್ನ ಸಲುವಾಗಿ ಮಾತ್ರವೇ ಚರಕಕ್ಕೆ ಅಂಟಿ ಕೂತಂತಿದೆ! ಚರಕದ ನೆರವಿಲ್ಲದೆ ಸ್ವರಾಜ್ ಹುಟ್ಟು ಪಡೆಯದು ಎಂದು ನಾವೊಮ್ಮೆ ನಂಬಿದ್ದಂತೆ ಮತ್ತು ಈಗಲೂ ನಂಬಿರುವಂತೆ ನಿಜಕ್ಕೂ ಪರಿಸ್ಥಿತಿ ಇದೆಯೆ? ಹಾಗೆ ನಮ್ಮ ಆಶಯಗಳಿಗೆ ಪೂರಕವಾದ ಪರಿಸ್ಥಿತಿ ಇದೆ ಎಂಬುದಕ್ಕೆ ಆಧಾರಗಳು ಸಿಕ್ಕುವವರೆಗೂ ಚರಕ ವೆಂಬುದು ನಮಗೆಲ್ಲ ಒಂದು ಆಸರೆಯ ನೆಪವಾಗಬಹುದು, ಅಷ್ಟೆ.

ಚರಕದ ನೆರವಿಲ್ಲದೆ ಸ್ವರಾಜ್ ಸ್ಥಾಪನೆ ಸಾಧ್ಯವಿಲ್ಲ ಎಂಬುದನ್ನೇನೂ ನಾವು ಪ್ರಯೋಗ ಮಾಡಿ ದೃಢಪಡಿಸಿಕೊಂಡಿಲ್ಲ. ಈ ಪ್ರಯೋಗ ಸಾಧ್ಯತೆಯ ಕುರಿತು ಹೆಚ್ಚಿನ ಅರಿವು ಇರಬೇಕಾದ್ದದ್ದು ಕಾಂಗ್ರೆಸ್ಸಿಗರಿಗೆ. ಚರಕ ಮತ್ತು ಕಾಂಗ್ರೆಸ್–ಇವೆರಡೂ ಸಮನಾರ್ಥಕ ಪದಗಳಾಗಿ ಬದಲಾಗಬೇಕು. ಹಾಗಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ; ಇತಿಹಾಸದ ಗತಿಯನ್ನು ನಾವು ಬದಲಿಸಬೇಕಿದೆ ಎಂಬ ಕಾರಣಕ್ಕೆ ನಿಮ್ಮನ್ನು ನಂಬಿದ್ದೇನೆ. ನನ್ನ ನಂಬಿಕೆಯನ್ನು ಉಳಿಸಿಕೊಡಿ.

('ವಿಲೇಜ್ ಸ್ವರಾಜ್' ಪುಸ್ತಕದಿಂದ.)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೩೮

ಸ್ವದೇಶಿ

ಸ್ವದೇಶಿ ತತ್ತ್ವ ಮಾನವನ ಸಹಜ ಸ್ವಭಾವದಲ್ಲಿ ಹಾಸುಹೊಕ್ಕಾಗಿದೆ. ಆದರೆ ಇಂದು ಅದು ಮೂಲೆ ಸೇರಿಬಿಟ್ಟಿದೆ. ಆದ್ದರಿಂದಲೇ ಇಂದು ಸ್ವದೇಶಿಯನ್ನು ಕುರಿತು ಪ್ರತಿಜ್ಞೆ ಕೈಗೊಳ್ಳುವ ಅಗತ್ಯ ಎದುರಾಗಿದೆ...ಸ್ವದೇಶಿಯ ಪರಿಪಾಲಕನ ಮೊಟ್ಟಮೊದಲ ಕರ್ತವ್ಯವೆಂದರೆ ತನ್ನ ನೆರೆಹೊರೆಯವರ ಸೇವೆಗಾಗಿ ತನ್ನನ್ನು ತಾನು ಮುಡಿಪಾಗಿಟ್ಟು ಕೊಳ್ಳುವುದು. ಸ್ವದೇಶಿಯಲ್ಲಿ ಸ್ವಾರ್ಥಕ್ಕೆ ಎಡೆಯಿಲ್ಲ. ಸ್ವದೇಶಿ ತನ್ನ ಪವಿತ್ರ ರೂಪದಲ್ಲಿ ವಿಶ್ವ ಸೇವೆಯ ಸಂಕೇತ.

ಈ ದಿಸೆಯಲ್ಲಿ ಯೋಚಿಸುತ್ತಿರುವಾಗ ಸ್ವದೇಶಿಯನ್ನು ಸಮಾಜಕ್ಕೆ ಅನ್ವಯಗೊಳಿಸಲು ಅಗತ್ಯವಾದ ಹಾಗೂ ಅತಿ ಮುಖ್ಯವಾದ ಸಾಧನವೆಂದರೆ ಖಾದಿ ಎಂಬುದು ನನಗೆ ಹೊಳೆಯಿತು. ಎಲ್ಲರಿಗೂ ಅರ್ಥವಾಗುವ, ಎಲ್ಲರೂ ಒಪ್ಪುವ, ಯಾರು ಬೇಕಾದರೂ ತೊಡಗಬಲ್ಲ ಸೇವೆ ಯಾವುದು? ಲಕ್ಷಾಂತರ ಭಾರತೀಯರಿಗೆ ಈ ಕಾಲದಲ್ಲಿ ಅಗತ್ಯವಿರುವ ಹಾಗೂ ಕೋಟ್ಯಂತರ ಅರೆ ಹೊಟ್ಟೆಯ ಭಾರತೀಯರಿಗೆ ನೆರವಾಗುವ ಅಂಶ ಯಾವುದು? ಈ ಪ್ರಶ್ನೆಗಳು ಎದುರಾದಾಗ ನನಗೆ ಹೊಳೆದ ಉತ್ತರ: ಖಾದಿ ಹಾಗೂ ಚರಕ. ಇವೆರಡೂ ಎಲ್ಲರಿಗೂ ದಕ್ಕುವಂತೆ ಮಾಡುವುದೇ ಈ ಎಲ್ಲ ಪ್ರಶ್ನೆಗಳಿಗೂ ಉತ್ತರ.

ಖಾದಿಯ ಮೂಲಕ ಆರಂಭವಾಗುವ ಸ್ವದೇಶಿ ಕಾಯಕ ವಿದೇಶಿ ಗಿರಣಿ ಮಾಲೀಕರಿಗೆ ಧಕ್ಕೆಯುಂಟು ಮಾಡುತ್ತದೆ ಎಂದು ತಿಳಿಯಬೇಡಿ. ಕಳ್ಳನ ದುರ್ಗುಣವನ್ನು ಬಿಡಿಸಿದರೆ ಅಥವಾ ಅವನು ಕದ್ದ ಮಾಲನ್ನು ವಾಪಸ್ ಕೊಡುವಂತೆ ಮಾಡಿದರೆ, ಅದರಿಂದ ಅವನಿಗೆ ಏನೂ ಕೆಡುಕಾಗುವುದಿಲ್ಲ; ಬದಲಿಗೆ, ದುರ್ಗುಣ ಬಿಟ್ಟಿದ್ದರಿಂದ

ಅವನಿಗೆ ಪ್ರಜ್ಞಾಪೂರ್ವಕವಾಗಿ ಲಾಭವಾಯಿತು; ಮಾಲು ಹಿಂತಿರುಗಿಸಿದ್ದರಿಂದ ಅವನ ಅಂತಸ್ಸಾಕ್ಷಿಗೆ ಲಾಭವಾಯಿತು...

...ಈ ಹಿಂದೆ ವಿದೇಶಿ ಬಟ್ಟೆ ತಯಾರಕರ ದುರಾಸೆಯನ್ನು ತಣಿಸಲು ಇಂಡಿಯಾವನ್ನು ಗುಲಾಮಗಿರಿಗೆ ತಳ್ಳಲಾಯಿತು. ಈಸ್ಟ್ ಇಂಡಿಯಾ ಕಂಪನಿ ಬರುವ ಮುನ್ನ ನಾವು ನಮಗೆ ಅಗತ್ಯವಾಗಿದ್ದಷ್ಟು ಬಟ್ಟೆಯನ್ನು ತಯಾರಿಸಿಕೊಳ್ಳುತ್ತಿದ್ದೆವು. ಬಟ್ಟೆಯನ್ನು ರಫ್ತು ಕೂಡ ಮಾಡುತ್ತಿದ್ದೆವು. ಅನಂತರ ಇಂಡಿಯಾ ತನ್ನ ಬಟ್ಟೆಬರೆಗಳಿಗಾಗಿ ವಿದೇಶಿ ಬಟ್ಟೆ ತಯಾರಕರನ್ನು ಅವಲಂಬಿಸಬೇಕಾಯಿತು; ಅದರ ಕಾರಣಗಳನ್ನು ಇಲ್ಲಿ ಮತ್ತೆ ವಿವರಿಸಬೇಕಾಗಿಲ್ಲ.

ಆದರೆ ನಾವು ಈಗ ಈ ವಿಚಾರದಲ್ಲಿ ವಿದೇಶವನ್ನು ಅವಲಂಬಿಸಬೇಕಾಗಿಲ್ಲ. ಇಂಡಿಯಾದ ಪ್ರಜೆಗಳು ಈ ನಿಟ್ಟಿನಲ್ಲಿ ದುಡಿದರೆ ಇಂಡಿಯಾ ತನ್ನೆಲ್ಲ ಬಟ್ಟೆಯನ್ನು ತಾನೇ ಉತ್ಪಾದಿಸಿಕೊಳ್ಳಬಲ್ಲದು. ಇಲ್ಲಿನ ಗಿರಣಿಗಳಿಗೆ ಉತ್ಪನ್ನ ತಯಾರಿಸಿಕೊಡಬಲ್ಲ ಸಾಕಷ್ಟು ನೇಕಾರರು ಇಂಡಿಯಾದಲ್ಲಿದ್ದಾರೆ. ಈ ಗಳಿಗೆಯಲ್ಲಿ ಬಟ್ಟೆ ಗಿರಣಿಗಳಲ್ಲಿ ತಯಾರಾಗುತ್ತಿರುವ ಬಟ್ಟೆಗಿಂತ ಹೆಚ್ಚು ಬಟ್ಟೆಯನ್ನು ನಮ್ಮ ನೇಕಾರರು ನೇಯುತ್ತಿದ್ದಾರೆ. ಆದ್ದರಿಂದ ವಿದೇಶಿ ಬಟ್ಟೆಗಳನ್ನು ಯಶಸ್ವಿಯಾಗಿ ಬಹಿಷ್ಕರಿಸುವ ಮಾರ್ಗವೆಂದರೆ ನೂಲಿನ ಉತ್ಪಾದನೆಯನ್ನು ಹೆಚ್ಚಿಸುವುದು. ಇದು ಕೈಯಿಂದ ನೂಲುವುದರಿಂದ ಸಾಧ್ಯ.

ವಿದೇಶಿ ಬಟ್ಟೆಗಳ ಬಹಿಷ್ಕಾರ ಯಶಸ್ವಿಯಾಗುವುದು ನಮ್ಮ ವರ್ತಕರು ವಿದೇಶಿ ಆಮದನ್ನು ನಿಲ್ಲಿಸಿದಾಗ. ಈ ವರ್ತಕರು ತಮಗೆ ನಷ್ಟವಾದರೂ ಪರವಾಗಿಲ್ಲ, ಈಗಾಗಲೇ ದಾಸ್ತಾನು ಮಾಡಿದ ವಿದೇಶಿ ಬಟ್ಟೆಗಳನ್ನು ವಿದೇಶಿಯರಿಗೇ ಮಾರುವುದು ಒಳಿತು. ಹತ್ತಿ ಮಾರಾಟವನ್ನೂ ಅವರು ನಿಲ್ಲಿಸಬೇಕು. ಎಲ್ಲ ಹತ್ತಿಯನ್ನೂ ನಮ್ಮ ಬಳಕೆಗೇ ಇಟ್ಟುಕೊಳ್ಳಬೇಕು. ವಿದೇಶಿ ಹತ್ತಿಯನ್ನು ಕೊಳ್ಳುವುದನ್ನು ಮೊದಲು ನಿಲ್ಲಿಸಬೇಕು. ...ಜೊತೆಗೆ ತಮ್ಮ ಬಿಡುವಿನ ವೇಳೆಯಲ್ಲಿ ಹಣಕ್ಕಾಗಲೀ, ಅಥವಾ ಪ್ರೀತಿಯಿಂದಾಗಲೀ ದೇಶದ ಪ್ರತಿಯೊಬ್ಬರೂ ನೂಲಬೇಕು...ನೂಲುವುದರಲ್ಲಿ ಸ್ವರಾಜ್ಯ ಅಡಗಿದೆ. ವಿದೇಶಿ ಬಟ್ಟೆ ತಯಾರಕರ ರಾಕ್ಷಸ ಪ್ರಭಾವಕ್ಕೆ ಬಲಿಯಾದ ನಮ್ಮ ಹಿರಿಯರ ಪಾಪಕ್ಕಾಗಿ ನಾವು ಮಾಡಬೇಕಾದ ಸಣ್ಣ ಪ್ರಾಯಶ್ಚಿತ್ತವೆಂದರೆ ಚರಕದಿಂದ ನೂಲುವುದು.

ಈ ದಿಸೆಯಲ್ಲಿ ನಮ್ಮ ಸ್ವದೇಶಿ ಪ್ರತಿಜ್ಞೆ ಇದು: ದೈವಸಾಕ್ಷಿಯಾಗಿ ನಾನಿಂದು ಪ್ರಮಾಣ ಮಾಡುತ್ತೇನೆ– ಇನ್ನು ಮುಂದೆ ಇಂಡಿಯಾದ ಹತ್ತಿ, ಉಣ್ಣೆ, ರೇಶ್ಮೆಯಿಂದ

ತಯಾರಾದ ಬಟ್ಟೆಯನ್ನು ಬಳಸುತ್ತೇನೆ ಹಾಗೂ ವಿದೇಶಿ ಬಟ್ಟೆಯನ್ನು ಬಳಸುವುದನ್ನು ಕೈ ಬಿಡುತ್ತೇನೆ ಹಾಗೂ ನನ್ನಲ್ಲಿರುವ ಎಲ್ಲ ವಿದೇಶಿ ಬಟ್ಟೆಯನ್ನು ನಾಶ ಮಾಡುತ್ತೇನೆ.

...ಈ ಗಳಿಗೆಯಲ್ಲಿ ತ್ಯಾಗ ಮನೋಭಾವ ಇಂಡಿಯಾದ ವಾತಾವರಣದಲ್ಲಿ ತುಂಬಿ ತುಳುಕಾಡುತ್ತಿದೆ. ಇಂಥ ಅಮೃತಗಳಿಗೆಯಲ್ಲಿ ಸ್ವದೇಶಿಯನ್ನು ಹಬ್ಬಿಸದಿದ್ದರೆ ನಾವು ಮುಂದೆ ನಿರಾಶೆಯಿಂದ ಕೈ ಕೈ ಹಿಸುಕಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಗಂಭೀರವಾಗಿ ಯೋಚಿಸುವವರು ಇದರಲ್ಲಿ ಶುದ್ಧ ಆರ್ಥಿಕತೆಯ ಪ್ರಶ್ನೆ ಅಡಗಿದೆ ಎಂಬುದನ್ನು ಅರಿಯಬಲ್ಲರು. ಇಂಗ್ಲಿಷ್ ಆರ್ಥಿಕತೆಯನ್ನು ಅನುಕರಿಸುವುದು ನಮ್ಮನ್ನು ವಿನಾಶದೆಡೆಗೆ ಒಯ್ಯುತ್ತದೆ.

(ವಿವಿಧ ಬರಹ, ಭಾಷಣಗಳಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೩೯

ಅಹಿಂಸೆ ಮತ್ತು ಪ್ರಜಾಪ್ರಭುತ್ವ

ಪ್ರಶ್ನೆ: ಜಗತ್ತಿನ ಚರಿತ್ರೆಯಲ್ಲಿ ಯುದ್ಧದಿಂದ ಎಂದೂ ಕಾಣದಷ್ಟು ವಿನಾಶವನ್ನು ನೀವು ಸ್ವತಃ ಕಂಡಿದ್ದೀರಿ. ಹಾಗಿದ್ದೂ ಹೊಸ ನಾಗರಿಕತೆಗೆ ಅಹಿಂಸೆಯೇ ತಳಹದಿ ಎಂಬುದರಲ್ಲಿ ನಿಮಗೆ ಇನ್ನೂ ನಂಬಿಕೆಯಿದೆಯೇ? ನಿಮ್ಮ ಜನತೆ ಇದನ್ನು ಯಾವುದೇ ಹಿಂಜರಿಕೆಯಿಲ್ಲದೆ ಒಪ್ಪುತ್ತಾರೆ ಎಂಬುದರಲ್ಲಿ ನಿಮಗೆ ವಿಶ್ವಾಸವಿದೆಯೇ? ಅಸಹಕಾರ ಚಳವಳಿಯನ್ನು ಪ್ರಾರಂಭಿಸುವ ಮುನ್ನ ನಿಮ್ಮ ಎಲ್ಲ ಷರತ್ತುಗಳನ್ನು ಈಡೇರಿಸಬೇಕು ಎಂದು ಪದೇ ಪದೇ ಪ್ರಸ್ತಾಪಿಸುತ್ತೀರಿ. ನೀವು ಅದಕ್ಕೆ ಇನ್ನೂ ಬದ್ಧರಾಗಿದ್ದೀರಾ?

ಉತ್ತರ: ಎಂದೂ ಕೇಳರಿಯದ ವಿಧ್ವಂಸಕ ಕಾರ್ಯ ಜಗತ್ತಿನಲ್ಲಿ ನಡೆಯುತ್ತಿದೆ ಎಂಬುದು ಸತ್ಯಸಂಗತಿ. ಆದರೆ, ಇದು ನಿಜವಾಗಿಯೂ ಅಹಿಂಸೆಯಲ್ಲಿ ನಾನು ಇಟ್ಟಿರುವ ನನ್ನ ನಂಬಿಕೆಯ ಸತ್ವಪರೀಕ್ಷೆಯ ಕಾಲ. ಅಹಿಂಸೆಯಲ್ಲಿ ನನ್ನ ನಂಬಿಕೆ ಅಚಲವಾದದ್ದು. ಅದು ಎಳ್ಳಷ್ಟೂ ಅಲುಗಾಡಿಲ್ಲ. ನನ್ನ ಕಾಲದಲ್ಲಿಯೇ ಅಹಿಂಸೆ ವ್ಯಾಪಕವಾಗಿ ಹರಡಲು ಸಾಧ್ಯವಾಗದಿರಬಹುದು. ಇದರಿಂದ ನನ್ನ ನಂಬಿಕೆಗೆ ಚ್ಯುತಿ ಬರುವುದಿಲ್ಲ... ನೂಲುವ ಚರಕ ಮತ್ತು ಅಹಿಂಸೆಗೆ ಬೇರ್ಪಡಿಸಲಾರದ ನಂಟಿದೆ ಎಂಬ ನನ್ನ ನಂಬಿಕೆ ಉಳಿದ ಜಗತ್ತಿಗೆ ಹಾಸ್ಯಾಸ್ಪದವಾಗಿ ಕಾಣಬಹುದಾದರೂ ಸಹ ನಾನು ಅದಕ್ಕೆ ಬದ್ಧನಾಗಿರುತ್ತೇನೆ. ಹಿಂಸೆಯನ್ನು ನಿಮ್ಮ ಕಣ್ಣಿನಿಂದ, ಕೆಲವು ಸಂಗತಿಗಳ ಮೂಲಕ ನೀವು ಗುರುತಿಸುವಂತೆ, ನನಗೆ ನೂಲುವ ಚರಕ ಅಹಿಂಸೆಯನ್ನು ಗುರುತಿಸುವ ಸಾಧನ. ನನ್ನ ಕಾರ್ಯದಿಂದ ಯಾವ ಸಂಗತಿಯೂ ನನ್ನನ್ನು ವಿಚಲಿತಗೊಳಿಸುವುದಿಲ್ಲ. ಭಾರತವನ್ನು ಬಾಧಿಸುತ್ತಿರುವ ಅನೇಕ ಸಮಸ್ಯೆಗಳನ್ನು ಪರಿಹರಿಸಲು ನನ್ನಲ್ಲಿ ಮತ್ತಾವ ವಿಧಾನವೂ ಇಲ್ಲ.

ಪ್ರಶ್ನೆ: ಪ್ರಜಾಪ್ರಭುತ್ವವನ್ನು ಕೇವಲ ಅಹಿಂಸೆಯಿಂದ ಮಾತ್ರ ಕಾಪಾಡಬಹುದು ಎಂದು ನೀವು ಹೇಗೆ ಹೇಳುತ್ತೀರಿ?

ಉತ್ತರ: ಹೇಗೆಂದರೆ, ಪ್ರಜಾಪ್ರಭುತ್ವ ಹಿಂಸೆಯ ಬೆಂಬಲದ ಮೇಲೆ ನಿಂತಿರುವಷ್ಟೂ ಕಾಲ ಬಲಹೀನರಿಗೆ ರಕ್ಷಣೆ ಸಿಗುವ ಸಾಧ್ಯತೆಯಿಲ್ಲ. ಪ್ರಜಾಪ್ರಭುತ್ವದ ಬಗ್ಗೆ ನನ್ನ ಭಾವನೆಯೆಂದರೆ, ಬಲಾಢ್ಯರಿಗೆ ದೊರೆಯುವ ಎಲ್ಲ ಅವಕಾಶಗಳೂ ದುರ್ಬಲರಿಗೂ ಸಿಗುವಂತಿರಬೇಕು. ಇದು ಅಹಿಂಸೆಯ ಮೂಲಕ ಮಾತ್ರ ಈಡೇರಲು ಸಾಧ್ಯ. ಜಗತ್ತಿನ ಯಾವುದೇ ದೇಶ ಕೂಡ ದುರ್ಬಲರ ಬಗ್ಗೆ ಆಸಕ್ತಿ ತೋರುತ್ತಿಲ್ಲ. ಬದಲಿಗೆ, ಈ ದೇಶಗಳು ದುರ್ಬಲರಿಗೆ ತಾವು ಆಶ್ರಯದಾತನೆಂಬ ಅಹಂಕಾರ ತೋರುತ್ತಿವೆ. ನಿಮ್ಮ ಅಮೆರಿಕಾ ದೇಶದ ಉದಾಹರಣೆಯನ್ನೇ ತೆಗೆದುಕೊಳ್ಳಿ. ನಿಮ್ಮ ಇಡೀ ದೇಶ ಬಂಡವಾಳಶಾಹಿಗಳ ಹಿಡಿತದಲ್ಲಿದೆ. ದಕ್ಷಿಣ ಆಫ್ರಿಕಾದಲ್ಲಿಯೂ ಇದೇ ಪರಿಸ್ಥಿತಿಯಿದೆ. ಈ ದೊಡ್ಡ ಸ್ವಾಮ್ಯವನ್ನು ಹಿಡಿದಿಟ್ಟುಕೊಳ್ಳಲು ಪರೋಕ್ಷವಾಗಿ ಅಥವಾ ಅಪರೋಕ್ಷವಾಗಿ ಹಿಂಸೆಯ ಅಗತ್ಯವಿರುತ್ತದೆ. ಪಶ್ಚಿಮದಲ್ಲಿ ಈಗ ಇರುವ ಪ್ರಜಾಪ್ರಭುತ್ವ ನಾಝಿಸಂ ಅಥವಾ ಫ್ಯಾಸಿಸಂನ ತೆಳು ರೂಪ. ಹೆಚ್ಚೆಂದರೆ ಅದನ್ನು ಅಧಿಕಾರಶಾಹಿಯ ನಾಝೀ ಮತ್ತು ಫ್ಯಾಸಿಸ್ಟ್ ನಡವಳಿಕೆಗಳನ್ನು ಮುಚ್ಚಿಡಲು ಇರುವ ಸಾಧನ ಎನ್ನಬಹುದು. ನಾಶವಾಗಿ ಉಳಿಯುವುದನ್ನು ಹರಿದು ಹಂಚಿಕೊಳ್ಳಬೇಕೆನ್ನುವ ಆಸೆಯನ್ನು ಈಡೇರಿಸಿಕೊಳ್ಳುವುದಕ್ಕಲ್ಲದೆ ಮತ್ತಾವ ಕಾರಣಕ್ಕೆ ಇಂದು ಯುದ್ಧ ನಡೆಯುತ್ತಿದೆ? ಯಾವುದೇ ಪ್ರಜಾಪ್ರಭುತ್ವ ವಿಧಾನಗಳ ಮೂಲಕ ಬ್ರಿಟನ್ ಭಾರತವನ್ನೇನೂ ಪಡೆಯಲಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಪ್ರಜಾಪ್ರಭುತ್ವ ಎಂಬುದಕ್ಕೆ ಅರ್ಥವೇನು? ಆ ನೆಲದ ಸಹಜ ಒಕ್ಕಲುಗಳಾದ ಕರಿಯರಿಂದ ಬಿಳಿಯರನ್ನು ರಕ್ಷಿಸುವುದಕ್ಕೋಸ್ಕರ ಅಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ರಚನೆಯಾಗಿದೆ. ಉತ್ತರ ರಾಜ್ಯಗಳು ಗುಲಾಮಗಿರಿಯನ್ನು ತೊಡೆದು ಹಾಕಲು ನಡೆಸಿದ ಎಲ್ಲ ಪ್ರಯತ್ನಗಳ ನಡುವೆಯೂ ನಿಮ್ಮ-ಪಶ್ಚಿಮದ- ಚರಿತ್ರೆಯಲ್ಲಿ ಕಪ್ಪು ಮಸಿ ಎದ್ದು ಕಾಣುತ್ತದೆ. ನೀಗ್ರೋಗಳನ್ನು ನೀವು ನಡೆಸಿಕೊಂಡ ರೀತಿಯ ಅಪಖ್ಯಾತಿ ಲಿಖಿತವಾಗಿ ಸದಾ ಉಳಿದಿರುತ್ತದೆ. ಇಂತಹ ಪ್ರಜಾಪ್ರಭುತ್ವಗಳನ್ನು ಕಾಪಾಡಲು ಯುದ್ಧಗಳು ನಡೆಯುತ್ತವೆ! ಇದರಲ್ಲಿ ಬೂಟಾಟಿಕೆ ಎದ್ದು ತೋರುತ್ತದೆ. ಅಹಿಂಸೆಯ ಮೂಲಕ ಹಿಂಸೆಯ ನಗ್ನಸತ್ಯವನ್ನು ತೋರಿಸಲು ಪ್ರಯತ್ನಿಸಬೇಕು ಎಂದು ನಾನು ಈಗ ತಾನೇ ಯೋಚಿಸುತ್ತಿದ್ದೆ. ನಿಮ್ಮ ಯುದ್ಧಗಳು ಪ್ರಜಾಪ್ರಭುತ್ವದ ರಕ್ಷಣೆಯನ್ನು ಎಂದೂ ಮಾಡಲಾರವು. ದೇವರು ಒಂದು ವೇಳೆ ನನಗೆ ಅವಶ್ಯಕವಾದ ತಿಳಿವಳಿಕೆ ಮತ್ತು ಶಕ್ತಿಯನ್ನು ಕೊಟ್ಟರೆ ಭಾರತದಲ್ಲಿ ನಡೆದಿರುವ ಅಹಿಂಸೆಯ ಈ ಪ್ರಯೋಗ ಫಲಪ್ರದವಾಗಿಯೇ ಆಗುತ್ತದೆ.

(ಏಪ್ರಿಲ್ ೧೯೪೦. ಅಮೆರಿಕದ ಪತ್ರಕರ್ತರೊಬ್ಬರ ಜೊತೆಗಿನ ಪ್ರಶ್ನೋತ್ತರ.)

ಕನ್ನಡಕ್ಕೆ: **ಬಿ.ಎ. ಶ್ರೀಧರ**

೪೦

ಅಹಿಂಸೆ: ಧೀರರ ಅಸ್ತ್ರ

ಅದು ಹೇಗೋ ಏನೋ, ಇಂಡಿಯಾದಲ್ಲಿ ಅಹಿಂಸಾಮಾರ್ಗದ ಫಲವಾಗಿ ಸಮುದಾಯವೇ ಎಚ್ಚೆತ್ತಿತು. ಕುಗ್ರಾಮಗಳು ತಮ್ಮ ಜಡತೆಯಿಂದ ಎಚ್ಚೆತ್ತವು. ದುರ್ನಡತೆಗಳು ಕೊಚ್ಚಿಕೊಂಡು ಹೋದವು. ಜನರಿಗೆ ತಮ್ಮೊಳಗೆ ಅಡಗಿದ್ದ ಶಕ್ತಿಯ ಬಗ್ಗೆ ಅರಿವಾಗತೊಡಗಿದಂತೆ ಇಂಡಿಯಾದ ಹಲವು ಭಾಗಗಳಲ್ಲಿ ಕೆಲವು ಸಮುದಾಯಗಳ ಜನರಿಂದ ಬಲವಂತವಾಗಿ ದುಡಿಸಿಕೊಳ್ಳುತ್ತಿದ್ದ ವ್ಯವಸ್ಥೆ ಮಂಜಿನಂತೆ ಕರಗಿಹೋಯಿತು. ಇದು ಜನಸಮುದಾಯ ತಂತಾನೇ ಗಳಿಸಿಕೊಂಡ ನಿಜವಾದ ಸ್ವರಾಜ್ಯವಾಗಿತ್ತು. 'ಸ್ವರಾಜ್ಯ' ಎಂದರೆ ತನ್ನನ್ನು ತಾನು ನಿಯಂತ್ರಿಸಿಕೊಳ್ಳುವುದು, ಆಳಿಕೊಳ್ಳುವುದು ಎಂಬರ್ಥವೂ ಇದೆ.

ಅದರ ಜೊತೆಗೆ, ನಿಮಗೆ ನೆನಪಿರಲಿ: ಈಗ ನಾವು ಯಾರನ್ನು ಕೆಳವರ್ಗದವರು ಎಂದು ಕರೆಯುತ್ತಿರುವೆವೋ ಆ ವರ್ಗದಿಂದ ಬಂದವರು, ಮುಂದೆ ನಾವು ಸ್ವರಾಜ್ಯ ಗಳಿಸಿದಾಗ ಇಂಡಿಯಾದ ದಿಕ್ಕನ್ನು ನಿರ್ಧರಿಸುವ ನಾಯಕತ್ವ ವಹಿಸುವುದನ್ನು ನಾವು ಎದುರು ನೋಡುತ್ತೇವೆ.

ಅಹಿಂಸೆ ದುರ್ಬಲರ ಅಸ್ತ್ರವಲ್ಲ; ಅದು ಧೀರರ ಅಸ್ತ್ರ. ಅಹಿಂಸೆ ಕುರಿತ ನನ್ನ ಗ್ರಹಿಕೆಗಳು ಪಶ್ಚಿಮದ ಶಿಕ್ಷಣದ ಫಲವಾಗಿ ಬಂದಂಥವು ಎಂದು ಯಾರಾದರೂ ಹೇಳಿದರೆ ಆ ಬಗ್ಗೆ ನನಗೇನೂ ಸಂಕೋಚವಿಲ್ಲ. ನಾನು ಪಶ್ಚಿಮದ ಎಲ್ಲಾ ಚಿಂತನೆಗಳನ್ನೇನೂ ಹೊರಗಿಟ್ಟಿಲ್ಲ. ಪಶ್ಚಿಮದಿಂದ ಬಂದ ಎಲ್ಲವೂ ಕೆಟ್ಟದ್ದೆಂದು ಬಹಿಷ್ಕಾರ ಹಾಕಲು ನಾನು ಸಿದ್ಧನಿಲ್ಲ.

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೪೧

ರಾಮರಾಜ್ಯ

ನನ್ನ ಆದರ್ಶವೆಂದರೆ ಭಾರತದ ಪ್ರತಿಯೊಂದು ಪ್ರಾಂತ್ಯವೂ ರಾಮರಾಜ್ಯ ಆಗಬೇಕು. ಅಗಸನ ಮಾತುಗಳಲ್ಲಿ ರಾಮ ತನ್ನ ಆಡಳಿತದ ನ್ಯೂನತೆಯನ್ನು ಗುರುತಿಸಿದ. ಪ್ರಜೆಗಳ ತೃಪ್ತಿಗಾಗಿ ತನಗೆ ಅತ್ಯಂತ ಪ್ರಿಯಳಾದ ಸೀತೆಯನ್ನು ಕಾಡಿಗೆ ಕಳುಹಿಸಲು ಆತ ಹಿಂಜರಿಯಲಿಲ್ಲ. ನಾಯಿಗೂ ನ್ಯಾಯ ಸಿಗಬೇಕೆಂಬುದು ಆತನ ಆಡಳಿತದ ನೀತಿಯಾಗಿತ್ತು. ಕೊಟ್ಟ ಮಾತಿನ ಪಾಲನೆಗಾಗಿ, ಸತ್ಯಶೋಧನೆಗಾಗಿ ಆತ ತನ್ನ ರಾಜ್ಯ, ಅಧಿಕಾರ ಮತ್ತು ಸುಖಗಳನ್ನೆಲ್ಲಾ ತ್ಯಾಗ ಮಾಡಿ ಅರಣ್ಯವಾಸ ಮಾಡಿದ. ರಾಮನ ಏಕಪತ್ನಿನಿಷ್ಠೆ ರಾಜರು ಮತ್ತು ಆಡಳಿತಗಾರರಿಗೆ ಮಾದರಿ ಯಾಗುವಂತಹುದು. ಜನಪ್ರಿಯ ಆಡಳಿತದಿಂದ ರಾಮ ತನ್ನ ಆಡಳಿತಕ್ಕೊಂದು ಶೋಭೆ ತಂದುಕೊಟ್ಟ. ಅಂತಹ ಆಡಳಿತ ಸ್ವರಾಜ್ಯದ ತಿರುಳಾಗಬೇಕು. ಓಟುಗಳ ಆಧಾರದ ಮೇಲೆ ರಾಮ ತನ್ನ ಜನಪ್ರಿಯತೆಯನ್ನು ಅಳೆಯುತ್ತಿರಲಿಲ್ಲ. ಅಂತಹ ಯಾವುದೇ ಸಾಧನಗಳ ನೆರವಿಲ್ಲದೆ, ಪ್ರಜೆಗಳ ಅಭಿಪ್ರಾಯವನ್ನು ಗ್ರಹಿಸುವ ಕಲೆ ಅವನಿಗೆ ತಿಳಿದಿತ್ತು. ಆತನ ಆಳ್ವಿಕೆಯಲ್ಲಿ ಜನ ಸಂತೋಷದಿಂದಿದ್ದರು.

ಅಂತಹ ರಾಮರಾಜ್ಯ ಈಗಲೂ ಸಾಧ್ಯ. ರಾಮನ ಗುಂಪಿಗೆ ಸೇರಿದ ಜನ ಈಗಲೂ ನಮ್ಮ ನಡುವೆ ಇದ್ದಾರೆ. ಆಧುನಿಕ ಕಾಲದಲ್ಲಿ ಖಲೀಫರು ಅದ್ಭುತ ಆಡಳಿತಗಾರರಾಗಿದ್ದರು. ಅಬೂಬಕರ್ ಮತ್ತು ಹಜರತ್ ಉಮರ್‌ಗಳು ಲಕ್ಷಾಂತರ ರೂಪಾಯಿಗಳ ತೆರಿಗೆ ಸಂಗ್ರಹಿಸುತ್ತಿದ್ದರು. ಸಾರ್ವಜನಿಕ ಉಪಯೋಗಕ್ಕಲ್ಲದೆ ಮತ್ತಾವುದಕ್ಕೂ ಒಂದೇ ಒಂದು ಕಾಸನ್ನು ಅವರು ಉಪಯೋಗಿಸುತ್ತಿರಲಿಲ್ಲ. ಖಾಸಗಿಯಾಗಿ ಅವರು ಫಕೀರರ ಬದುಕು ನಡೆಸುತ್ತಿದ್ದರು. ಜನಗಳಿಗೆ ನ್ಯಾಯ ದೊರಕಿಸುವುದರತ್ತ ಸದಾ ಮುತುವರ್ಜಿ ವಹಿಸುತ್ತಿದ್ದರು. ಶತ್ರುವಿನ ಜೊತೆಯಲ್ಲಿ ಕೂಡ ನ್ಯಾಯದಿಂದ ನಡೆದುಕೊಳ್ಳಬೇಕೆಂಬುದು ಅವರ ತತ್ವವಾಗಿತ್ತು.

(ವಿವಿಧ ಭಾಷಣ, ಬರಹಗಳಿಂದ.)

ಕನ್ನಡಕ್ಕೆ: ಬಿ.ಎ. ಶ್ರೀಧರ

೪೨

ಟ್ರಸ್ಟೀಶಿಪ್

ನನ್ನ ಹಕ್ಕಿನಿಂದಲೋ, ವ್ಯಾಪಾರ, ಕೈಗಾರಿಕೋದ್ಯಮದಿಂದಲೋ ನನಗೆ ಸಾಕಷ್ಟು ಸಂಪತ್ತು ಬಂದಿದೆಯೆಂದಾದರೆ ಅದೆಲ್ಲವೂ ನನಗೆ ಮಾತ್ರ ಸೇರಿದೆಯೆಂದು ನಾನು ತಿಳಿಯಬಾರದು; ಬದಲಿಗೆ, ಕೋಟಿಗಟ್ಟಲೆ ಜನರು ತಮ್ಮ ಗೌರವಯುತ ಜೀವನಕ್ಕೆ ಎಷ್ಟನ್ನು ಪಡೆಯುತ್ತಾರೋ ಅಷ್ಟು ಮಾತ್ರ ನನ್ನದೆಂದು ನಾನು ತಿಳಿಯಬೇಕು. ಉಳಿದೆಲ್ಲ ನನ್ನ ಸಂಪತ್ತೂ ಸಮುದಾಯಕ್ಕೆ ಸೇರಿದ್ದು, ಅದು ಸಮುದಾಯದ ಏಳಿಗೆಗಾಗಿ ಬಳಕೆಯಾಗಬೇಕಾದುದು. ಈ ತತ್ವವನ್ನು ನಾನು ರೂಪಿಸಿಕೊಂಡಿದ್ದು–ಜಮೀನ್ದಾರರು ಹಾಗೂ ರಾಜರುಗಳ ಆಸ್ತಿ, ಸಂಪತ್ತನ್ನು ವಶಪಡಿಸಿಕೊಳ್ಳಬೇಕೆಂಬ ಸಮಾಜವಾದಿ [ಕಮ್ಯುನಿಸ್ಟ್] ಸಿದ್ಧಾಂತವನ್ನು ಕೆಲವರು ದೇಶದೆದುರು ಇಟ್ಟಾಗ. ಈ ವಿಶೇಷ ಸವಲತ್ತುಗಳ ವರ್ಗವೇ ಇರಬಾರದೆಂದು ಈ ಸಿದ್ಧಾಂತದ ಪ್ರತಿಪಾದಕರು ಹೇಳುತ್ತಿದ್ದರು. ಆದರೆ ನಾನು ಹೇಳುವುದು ಇದು: ಈ ವಿಶೇಷ ಸವಲತ್ತುಗಳ ವರ್ಗ ತನ್ನ ದುರಾಸೆಯಿಂದ ಹಾಗೂ ಆಸ್ತಿ, ಸಂಪತ್ತನ್ನು ಸದಾ ತನ್ನ ವಶದಲ್ಲಿಟ್ಟುಕೊಳ್ಳುವ ಲೋಭದಿಂದ ಹೊರಬರಬೇಕು; ಅವರಿಗೆ ಎಷ್ಟೇ ಸಂಪತ್ತಿದ್ದರೂ ಅವರು ಕೂಡ ಶ್ರಮದಿಂದ ತಮ್ಮ ನಿತ್ಯದ ರೊಟ್ಟಿ ದುಡಿದುಕೊಳ್ಳುವವರ ಮಟ್ಟಕ್ಕೆ ತಲುಪಬೇಕು.

ಈ ವಿವರಣೆಗೆ ಅನುಗುಣವಾಗಿ ಎಷ್ಟು ಜನ ನಿಜವಾದ ಟ್ರಸ್ಟಿಗಳು ಇರಬಲ್ಲರು ಎಂಬ ಪ್ರಶ್ನೆಯನ್ನು ಆಮೇಲೆ ನೋಡೋಣ. ಟ್ರಸ್ಟೀಶಿಪ್‌ನ ತತ್ವ ನಿಜವೇ ಆಗಿರುವುದಾದರೆ, ಒಬ್ಬ ಮನುಷ್ಯ ಈ ತತ್ವಕ್ಕೆ ಅನುಗುಣವಾಗಿ ನಡೆದುಕೊಳ್ಳಬಲ್ಲನೋ ಅಥವಾ ಹಲವರು ಈ ಪ್ರಕಾರ ನಡೆದುಕೊಳ್ಳಬಲ್ಲರೋ ಎಂಬ ಪ್ರಶ್ನೆ ಮುಖ್ಯವಲ್ಲ. ಇಲ್ಲಿರುವುದು ನಂಬಿಕೆಯ ಪ್ರಶ್ನೆ. ನೀವು ಅಹಿಂಸಾ ತತ್ವವನ್ನು ಒಪ್ಪಿಕೊಂಡ ಮೇಲೆ ಅದಕ್ಕೆ ತಕ್ಕಂತೆ ನಡೆದುಕೊಳ್ಳಲು ನೀವು ಶ್ರಮಪಡಲೇಬೇಕು. ನೀವು ಅದರಲ್ಲಿ ಗೆಲ್ಲುವಿರೋ, ಸೋಲುವಿರೋ ಎಂಬ ಪ್ರಶ್ನೆ ಬೇರೆ. ಈ ಟ್ರಸ್ಟೀಶಿಪ್ ತತ್ವವನ್ನು ಆಚರಣೆಗೆ ತರುವುದು ಕಷ್ಟ ಎಂದು ನೀವು ಹೇಳಬಹುದು; ಆದರೆ ಈ ತತ್ವದಲ್ಲಿ ನೀವು ಅರ್ಥ ಮಾಡಿಕೊಳ್ಳಲಾರದಿರುವುದು ಏನೂ ಇಲ್ಲ ಎನ್ನುವುದಂತೂ ನಿಜ.

...ಟ್ರಸ್ಟೀಶಿಪ್ ಎನ್ನುವುದು ಕಾನೂನಿನ ಕಟ್ಟುಕತೆ ಎಂದು ನೀವೆನ್ನಬಹುದು. ಆದರೆ ಈ ಬಗ್ಗೆ ಜನರು ಮತ್ತೆ ಮತ್ತೆ ಧ್ಯಾನಿಸಿದರೆ, ಇದನ್ನು ಆಚರಣೆಗೆ ತರಲೆತ್ನಿಸಿದರೆ, ಈ ಭೂಮಿಯ ಮೇಲಿನ ಬದುಕು ಈಗಿರುವುದಕ್ಕಿಂತ ಹೆಚ್ಚು ಪ್ರೀತಿಯಿಂದ ನಡೆಯಬಲ್ಲದು... ನಾವು ನಿಜಕ್ಕೂ ಪ್ರಯತ್ನ ಮಾಡಿದರೆ, ಈ ಭೂಮಿಯ ಮೇಲೆ ಸಮಾನತೆಯನ್ನು ತರುವ ಇನ್ನಾವುದೇ ವಿಧಾನಕ್ಕಿಂತ ಈ ವಿಧಾನದ ಮೂಲಕ ಸಮಾನತೆಯನ್ನು ತರುವ ಪ್ರಯತ್ನ ಫಲಕಾರಿಯಾಗಬಲ್ಲದು...

ಪ್ರಭುತ್ವದ ಕೈಗೆ ಎಲ್ಲ ಅಧಿಕಾರವನ್ನೂ ಕೊಡುವುದನ್ನು ನಾನು ಒಪ್ಪುವುದಿಲ್ಲ. ಬದಲಿಗೆ ಪ್ರಭುತ್ವದಲ್ಲಿ ಕೂಡ ಟ್ರಸ್ಟೀಶಿಪ್ಪಿನ ವಿಸ್ತರಣೆಯೇ ಆಗಬೇಕೆಂದು ನನ್ನ ಆಸೆ... ಟ್ರಸ್ಟೀಶಿಪ್ ಕುರಿತ ನನ್ನ ತತ್ವ ತಾತ್ಕಾಲಿಕ ವ್ಯವಸ್ಥೆಯಲ್ಲ. ಇದೊಂದು ಮುಖವಾಡವಂತೂ ಅಲ್ಲವೇ ಅಲ್ಲ. ಇದು ಎಲ್ಲ ತತ್ವಗಳಿಗಿಂತ ಹೆಚ್ಚು ಕಾಲ ಉಳಿಯುತ್ತದೆ ಎಂಬುದು ನನ್ನ ದೃಢ ನಂಬಿಕೆ. ಈ ತತ್ವಕ್ಕೆ ಧರ್ಮ ಹಾಗೂ ತತ್ವಜ್ಞಾನದ ಒಪ್ಪಿಗೆಯಿದೆ. ಸಂಪತ್ತನ್ನು ಸಂಗ್ರಹಿಸಿ ಇಟ್ಟುಕೊಂಡಿರುವವರು ಈ ತತ್ವವನ್ನು ಅನುಸರಿಸುತ್ತಿಲ್ಲ ಎಂದ ಮಾತ್ರಕ್ಕೆ ತತ್ವವೇ ಹುಸಿ ಎನ್ನಲಾಗದು...ಸಾಮಾನ್ಯವಾಗಿ ಸಿರಿವಂತರಿಗೆ, ಅಷ್ಟೇ ಯಾಕೆ ಬಹುತೇಕ ಜನರಿಗೆ, ತಾವು ಯಾವ ಮಾರ್ಗದಲ್ಲಿ ಹಣ ಗಳಿಸುತ್ತಿದ್ದೇವೆ ಎಂಬುದು ಮುಖ್ಯವೇ ಆಗಿಲ್ಲ. ಮಾನವೀಯವಾಗಿ ಹಾಗೂ ಚೆನ್ನಾಗಿ ನೋಡಿಕೊಂಡಾಗ ಎಂಥ ನೀಚ ಮನುಷ್ಯನೂ ಸುಧಾರಿಸುತ್ತಾನೆ ಎಂಬ ಸಾಧ್ಯತೆಯ ಬಗ್ಗೆ ಅಹಿಂಸಾ ತತ್ವ ಅನುಸರಿಸುವವರಿಗೆ ನಂಬಿಕೆಯಿರಬೇಕು. ಮನುಷ್ಯನ ಒಳಗಿರುವ ಒಳಿತಿನ ಭಾವವನ್ನು ಉದ್ದೇಶಿಸಿ ನಾವು ಮಾತಾಡಬೇಕು ಹಾಗೂ ಒಳ್ಳೆಯ ಭಾವನೆಯೇ ಅವನಿಂದ ಹೊರಬರುತ್ತದೆಂದು ನಿರೀಕ್ಷಿಸಬೇಕು. ಪ್ರತಿಯೊಬ್ಬನೂ ತನ್ನ ಸ್ವಪ್ರತಿಷ್ಠೆ ಹಾಗೂ ಸಂಪತ್ತನ್ನು ಹೆಚ್ಚಿಸಿಕೊಳ್ಳಲಷ್ಟೇ ತನ್ನ ಪ್ರತಿಭೆಯನ್ನು ಬಳಸದೆ, ಎಲ್ಲರ ಒಳಿತಿಗಾಗಿ ಆ ಪ್ರತಿಭೆಯನ್ನು ಬಳಸುವುದು ಸಮಾಜದ ಒಳಿತಿಗೆ ಪೂರಕವಾಗಿ ಇರುತ್ತದೆಯಲ್ಲವೆ? ಪ್ರತಿ ಮನುಷ್ಯನೂ ತನ್ನ ಸಾಮರ್ಥ್ಯವನ್ನು ತನ್ನ ಸಾಧ್ಯತೆಗೆ ತಕ್ಕಷ್ಟು ಸಂಪೂರ್ಣವಾಗಿ ಬಳಸಿಕೊಳ್ಳದೆ ಅಸಮರ್ಥನಾಗುವ ಮೃತ ಸಮಾನತೆಯನ್ನು ನಾವು ಉತ್ಪಾದಿಸಲು ಬಯಸುವುದಿಲ್ಲ. ಅಂಥ ಸಮಾಜ ಕ್ರಮೇಣ ನಾಶವಾಗುತ್ತದೆ. ಆದ್ದರಿಂದಲೇ, 'ಸಿರಿವಂತರು ಪ್ರಾಮಾಣಿಕವಾದ ಹಾದಿಯಲ್ಲಿ ಕೋಟಿಗಳನ್ನು ಸಂಪಾದಿಸಬಹುದು; ಆದರೆ ಆ ಹಣವನ್ನು ಎಲ್ಲರ ಸೇವೆಗಾಗಿ ಮುಡಿಪಾಗಿಡಬೇಕು' ಎಂಬ ನನ್ನ ನಿಲುವು ಸರಿಯೆಂದೇ ನನ್ನ ನಂಬಿಕೆ. ತನ್ನ ನೆರೆಹೊರೆಯವನಿಗೆ ಏನಾಗುತ್ತಿದೆ ಎಂಬುದನ್ನು ನೋಡದೆ ತನಗಾಗಿ ಮಾತ್ರ ಬದುಕುವ ಇಂದಿನ ಜೀವನ ಮಾದರಿಯ ಬದಲಿಗೆ, ಇಡೀ

ಜಗತ್ತಿಗೇ ಉಪಯುಕ್ತವಾಗಬಲ್ಲ ಹೊಸ ಜೀವನವ್ಯವಸ್ಥೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಟ್ರಸ್ಟೀಶಿಪ್ ಅತ್ಯಂತ ಫಲಕಾರಿಯಾದ ವಿಧಾನ.

(೧೯೩೫- ೧೯೩೯-೧೯೪೭ರ ನಡುವೆ ಬರೆದ ಬರಹಗಳಿಂದ. ಆಕರ: 'ಇಂಡಿಯಾ ಆಫ್ ಮೈ ಡ್ರೀಮ್ಸ್', ನವಜೀವನ್ ಪಬ್ಲಿಷಿಂಗ್ ಹೌಸ್, ಅಹ್ಮದಾಬಾದ್, ೧೯೪೭)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೪೩

ಪ್ರಾರ್ಥನೆ

ನನ್ನ ಜೀವನವನ್ನು ಕಾಪಾಡಿಕೊಂಡು ಬಂದಿರುವುದೇ ಪ್ರಾರ್ಥನೆ. ಅದಿಲ್ಲದೇ ಹೋಗಿದ್ದರೆ ಇಷ್ಟರಲ್ಲಿ ನಾನು ಹುಚ್ಚನಾಗಿಬಿಟ್ಟಿರುತ್ತಿದ್ದೆ. ನನಗೆ ಸಾರ್ವಜನಿಕ ಮತ್ತು ಸ್ವಂತದ ಬದುಕುಗಳೆರಡರಲ್ಲೂ ಕಹಿಯಾದ ಅನುಭವಗಳಾಗಿವೆ. ಅದನ್ನು ನನ್ನ ಆತ್ಮಚರಿತ್ರೆಯಲ್ಲಿ ಬರೆದಿದ್ದೇನೆ. ಅನೇಕ ಸಲ ಸಂಕಟಗಳಿಗೆ ಸಿಲುಕಿದ್ದೇನೆ. ಅವುಗಳಿಂದ ನಾನು ಹೊರಬಂದದ್ದೇ ಪ್ರಾರ್ಥನೆಯ ಮೂಲಕ.

ಮೊದಮೊದಲಿಗೆ ಸತ್ಯವು ನನ್ನ ಜೀವನದ ಅಂಗವಾದಂತೆ ಪ್ರಾರ್ಥನೆ ನನ್ನ ಜೀವನದ ಒಂದು ಭಾಗವಾಗಿರಲಿಲ್ಲ. ಅಗತ್ಯ ಇದ್ದಾಗ ಮಾತ್ರ ಪ್ರಾರ್ಥನೆಯನ್ನು ಮಾಡುತ್ತಿದ್ದೆ. ನಾನು ತೊಂದರೆಯಲ್ಲಿದ್ದಾಗ ಪ್ರಾರ್ಥನೆ ಮಾಡಿದರೆ ಸಂತೋಷ ಸಿಗುತ್ತಿತ್ತು. ದಿನ ಕಳೆದಂತೆ ದೇವರಲ್ಲಿ ನನ್ನ ನಂಬಿಕೆ ಜಾಸ್ತಿಯಾಯಿತು. ಪ್ರಾರ್ಥನೆ ಮಾಡುವ ಹಂಬಲ ಕೂಡ ಹೆಚ್ಚಾಯಿತು. ಪ್ರಾರ್ಥನೆ ಇಲ್ಲದಿದ್ದರೆ ಬದುಕು ಶೂನ್ಯವೆನಿಸಲಾರಂಭಿಸಿತು.

ದಕ್ಷಿಣ ಆಫ್ರಿಕಾದಲ್ಲಿ ಕ್ರಿಶ್ಚಿಯನ್ ಪ್ರಾರ್ಥನಾ ಸಭೆಗಳಿಗೆ ಹಾಜರಾಗಿದ್ದೇನೆ. ಆದರೆ, ಅದು ನನ್ನನ್ನು ಆಕರ್ಷಿಸಲಿಲ್ಲ. ಅವರ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಅವರು ದೇವರನ್ನು ದೈನ್ಯದಿಂದ ಬೇಡುತ್ತಿದ್ದರು. ಅದು ನನ್ನಿಂದ ಸಾಧ್ಯವಾಗಲಿಲ್ಲ. ಆದರೆ, ದೇಹಕ್ಕೆ ಊಟದ ಅವಶ್ಯಕತೆ ಹೇಗಿದೆಯೋ ಹಾಗೆಯೇ ಆತ್ಮಕ್ಕೆ ಪ್ರಾರ್ಥನೆಯ ಅಗತ್ಯತೆಯಿರುವುದು ನಿಧಾನವಾಗಿ ನನ್ನ ಅರಿವಿಗೆ ಬರಲಾರಂಭಿಸಿತು. ನಿಜ ಹೇಳಬೇಕೆಂದರೆ, ಆತ್ಮಕ್ಕೆ ಪ್ರಾರ್ಥನೆಯ ಅಗತ್ಯ ಇರುವಷ್ಟು ದೇಹಕ್ಕೆ ಊಟದ ಅವಶ್ಯಕತೆಯಿರುವುದಿಲ್ಲ. ದೇಹವನ್ನು ಆರೋಗ್ಯವಾಗಿ ಇಡಬೇಕಾದರೆ ಉಪವಾಸದ ಅಗತ್ಯವಿದೆ. ಆದರೆ, ಪ್ರಾರ್ಥನೆಗೆ ಉಪವಾಸ ಎಂಬುದೊಂದು ಇಲ್ಲ.

ಪ್ರಪಂಚದಲ್ಲಿ ಅತಿಮುಖ್ಯ ಬೋಧಕರೆನಿಸಿದ ಬುದ್ಧ, ಕ್ರಿಸ್ತ ಮತ್ತು ಮಹಮ್ಮದರ ಪ್ರಕಾರ, ಅವರು ಜ್ಞಾನದ ಬೆಳಕನ್ನು ಕಂಡಿದ್ದೇ ಪ್ರಾರ್ಥನೆಯ ಮೂಲಕ. ಅದನ್ನು ಬಿಟ್ಟು ಬದುಕುವುದು ಅವರಿಗೆ ಅಸಾಧ್ಯವಾಗಿತ್ತು.

ಸಾವಿರಾರು ಮಂದಿ ಹಿಂದೂಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ತಮ್ಮ ಬದುಕಿನಲ್ಲಿ ನೆಮ್ಮದಿ ಕಾಣುವುದು ಪ್ರಾರ್ಥನೆಯ ಮೂಲಕವೇ. ಅವರನ್ನು ನೀವು ಸುಳ್ಳುಗಾರರೆಂದೋ ಅಥವಾ ಆತ್ಮವಂಚನೆ ಮಾಡಿಕೊಳ್ಳುವವರೆಂದೋ ಕರೆಯ ಬಹುದು. ಆದರೆ, ಈ 'ಸುಳ್ಳು' ಕೂಡ ನನಗೆ ಹಿತವೆನಿಸುತ್ತದೆ. ರಾಜಕೀಯ ರಂಗದ ಅನೇಕ ಆತಂಕಗಳು ನನ್ನ ಎದುರಿಗಿದ್ದರೂ ಕೂಡ ನಾನು ಒಂದು ದಿನವೂ ಶಾಂತಿಯನ್ನು ಕಳೆದುಕೊಂಡಿಲ್ಲ. ಬಹಳ ಜನ ನನ್ನ ಈ ನೆಮ್ಮದಿಯ ಸ್ಥಿತಿಯನ್ನು ನೋಡಿ ಅಸೂಯೆ ಪಡುವುದೂ ಉಂಟು. ಈ ಶಾಂತಿ ನನಗೆ ಪ್ರಾರ್ಥನೆಯಿಂದ ದೊರೆಯುತ್ತದೆ.

ನಾನು ವಿದ್ವಾಂಸನೆಂದು ಹೇಳಿಕೊಳ್ಳುವುದಿಲ್ಲ. ಆದರೆ, ನಾನೊಬ್ಬ ಪ್ರಾರ್ಥನೆ ಮಾಡುವವನು ಎಂದು ಹೇಳಿಕೊಳ್ಳುತ್ತೇನೆ. ಸಂಪ್ರದಾಯ ಎನ್ನುವುದನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ, ಪ್ರತಿಯೊಬ್ಬ ಜೀವಿಗೂ ತನ್ನದೇ ಆದ ವ್ಯಕ್ತಿಗತ ಸ್ವಾತಂತ್ರ್ಯವಿರಬೇಕು. ಆದರೆ, ಕೆಲವು ನೇರ ಮಾರ್ಗಗಳಿವೆ. ಹಳೆಯ ತತ್ವಜ್ಞಾನಿಗಳು ತುಳಿದಿರುವ ಆ ಹಾದಿಯಲ್ಲಿ ನಡೆಯುವುದು ನನಗೆ ಕ್ಷೇಮ. ನನ್ನ ಹೇಳಿಕೆಯನ್ನು ನಾನು ನೀಡಿದ್ದೇನೆ. ದಿನನಿತ್ಯ ಪ್ರಾರ್ಥನೆ ಮಾಡುವುದರಿಂದ ಜೀವನಕ್ಕೆ ಹೊಸತನ ಬರುತ್ತದೆ ಎಂಬುದನ್ನು ಪ್ರತಿಯೊಬ್ಬರೂ ಪ್ರಾರ್ಥನೆ ಮಾಡಿ ಅನುಭವ ಮಾಡಿಕೊಳ್ಳಲು ಪ್ರಯತ್ನಿಸಲಿ.

(ವಿವಿಧ ಭಾಷಣ, ಬರಹಗಳಿಂದ.)

ಕನ್ನಡಕ್ಕೆ: ಬಿ.ಎ. ಶ್ರೀಧರ

ೞೞ

ದಾರಿ ಮತ್ತು ಗುರಿ

ನಾವು ಕೆಟ್ಟ ಬೀಜವನ್ನು ಬಿತ್ತಿ ಗುಲಾಬಿ ಬೆಳೆಯಲಾಗದು. ನಾವು ಗುರಿ ತಲುಪಲು ಬಳಸುವ ದಾರಿಯನ್ನು ನಾನು ಬೀಜಕ್ಕೆ ಹೋಲಿಸುವೆ; ನಾವು ತಲುಪುವ ಗುರಿಯನ್ನು ಮರಕ್ಕೆ ಹೋಲಿಸುವೆ. ಬೀಜ ಮತ್ತು ಮರದ ನಡುವೆ ಇರುವಂಥ, ಎಂದೆಂದೂ ಉಲ್ಲಂಘಿಸಲಾಗದಂಥ, ಸಂಬಂಧ ಗುರಿ ಮತ್ತು ದಾರಿಗಳ ನಡುವೆಯೂ ಇದೆ.

ದಾರಿ ಯಾವುದು ಎಂಬುದನ್ನು ನಾನು ತಿಳಿದರೆ ಸಾಕು; ಕಾರಣ, ನನ್ನ ಜೀವನ ತತ್ವದಲ್ಲಿ ಗುರಿ ಮತ್ತು ದಾರಿಗಳೆರಡೂ ಪರಸ್ಪರ ಬದಲಾಯಿಸಬಲ್ಲಂಥವು. ಗುರಿಯೆಡೆಗಿನ ನಮ್ಮ ಪಯಣದ ಪ್ರಗತಿ ನಮ್ಮ ದಾರಿಯ ಶುದ್ಧಿಗೆ ಸಮಾನವಾಗಿ ತಳಕು ಹಾಕಿಕೊಂಡಿರುತ್ತದೆ.

'ದಾರಿ ಎನ್ನುವುದು ಏನು ಮಹಾ, ಅದು ಕೇವಲ ದಾರಿ, ಅಷ್ಟೆ' ಎನ್ನುವವರಿದ್ದಾರೆ; ಆದರೆ ನಾನು ಹೇಳುತ್ತೇನೆ: ದಾರಿಯೇ ಎಲ್ಲವೂ ಆಗಿದೆ. ದಾರಿ ಹೇಗಿರುತ್ತದೋ, ಗುರಿಯೂ ಹಾಗೇ ಇರುತ್ತದೆ. ಸಹಜವಾದ ಒಳ್ಳೆಯ ಗುರಿಯನ್ನು ತಲುಪಲು ಸಹಜವಾದ ಕೆಟ್ಟ ಹಾದಿಯನ್ನು ಬಳಸುವುದು ತಿಳಿಗೇಡಿತನ ಮತ್ತು ಪ್ರಮಾದ.

ನಾವು ಬಳಸುವ ದಾರಿಯ ಶುದ್ಧಿಯ ಬಗ್ಗೆ ನಮಗೆ ಖಾತ್ರಿಯಿದ್ದರೆ, ನಾವು ನಂಬಿಕೆಯಿಂದ ಮುನ್ನಡೆಯುವೆವು; ಆ ನಂಬಿಕೆಯೆದುರು ಎಲ್ಲ ಭಯ, ನಡುಕಗಳೂ ಕರಗಿ ಹೋಗುವುವು...ನಮ್ಮ ಗುರಿಯಂತೆ ದಾರಿಯೂ ನ್ಯಾಯಯುತವಾಗಿರಬೇಕು ಹಾಗೂ ಸ್ಪಷ್ಟವಾಗಿರಬೇಕು. ಅಶುದ್ಧ ದಾರಿ ಕೊನೆಗೆ ಅಶುದ್ಧ ಗುರಿಯ ಫಲವನ್ನೇ ನೀಡುತ್ತದೆ. ನೈತಿಕವಾದ ಮಾರ್ಗವೇ ಬಹುತೇಕವಾಗಿ ಗುರಿಯೂ ಹೌದು. ಸದ್ಗುಣವೇ ಆ ಮಾರ್ಗದ ಪ್ರತಿಫಲ. ಮಾನವನ ಸುಖ ಮಾತ್ರವೇ ತಮ್ಮ ಗುರಿಯೆಂದು ತಿಳಿದು, ದಾರಿಯನ್ನು ಉಪೇಕ್ಷಿಸಿದ್ದರ ಫಲ ಹಾಗೂ ನೈತಿಕತೆಯ ನಿಯಮಗಳನ್ನು ಉಲ್ಲಂಘಿಸಿದ್ದರ ಪರಿಣಾಮ ಯುರೋಪಿನ ಚರಿತ್ರೆಯುದ್ದಕ್ಕೂ ಢಾಳಾಗಿ ಕಾಣುತ್ತವೆ.

(ವಿವಿಧ ಭಾಷಣ, ಬರಹಗಳಿಂದ.)

ಕನ್ನಡಕ್ಕೆ: ನಟರಾಜ್ ಹುಳಿಯಾರ್

ಭಾಗ : ೪

ತಾತ್ವಿಕ ಚಿಂತನೆ

ನಿಮ್ಮ ನಂಬಿಕೆಗಳು ನಿಮ್ಮ ಚಿಂತನೆಗಳಾಗುವುವು
ನಿಮ್ಮ ಚಿಂತನೆಗಳು ನಿಮ್ಮ ಶಬ್ದಗಳಾಗುವುವು
ನಿಮ್ಮ ಶಬ್ದಗಳು ನಿಮ್ಮ ಕ್ರಿಯೆಗಳಾಗುವುವು
ನಿಮ್ಮ ಕ್ರಿಯೆಗಳು ನಿಮ್ಮ ಅಭ್ಯಾಸಗಳಾಗುವುವು
ನಿಮ್ಮ ಅಭ್ಯಾಸಗಳು ನಿಮ್ಮ ಜೀವನವನ್ನು ನಿರ್ಧರಿಸುವುವು.

ಮೋಹನದಾಸ್ ಕರಮಚಂದ್ ಗಾಂಧಿ

೪೫

ನನ್ನ ಕನಸಿನ ಭಾರತ

ಭಾರತವನ್ನು ಎಲ್ಲ ಬಗೆಯ ದಾಸ್ಯ ಹಾಗೂ ಆಶ್ರಯಗಳಿಂದ ಬಿಡಿಸುವ ಸಂವಿಧಾನವನ್ನು ರೂಪಿಸಲು ನಾನು ಪೂರ್ಣ ಪ್ರಯತ್ನ ಮಾಡುತ್ತೇನೆ.

ಕಡು ಬಡವರು ಕೂಡ ಇದು ನನ್ನ ದೇಶವೆಂದು ಭಾವಿಸುವ ಭಾರತಕ್ಕಾಗಿ ನಾನು ದುಡಿಯುತ್ತೇನೆ ಹಾಗೂ ಈ ಭಾರತದ ನಿರ್ಮಾಣದಲ್ಲಿ ಕಡುಬಡವರು ಕೂಡ ಪ್ರಬಲ ದನಿಯಾಗಿರುತ್ತಾರೆ.

ಈ ಭಾರತದಲ್ಲಿ ಮೇಲುವರ್ಗದ ಜನರು ಅಥವಾ ಕೆಳವರ್ಗದ ಜನರು ಇರುವುದಿಲ್ಲ.

ಈ ಭಾರತದಲ್ಲಿ ಎಲ್ಲ ಸಮುದಾಯಗಳೂ ಪರಿಪೂರ್ಣ ಸಾಮರಸ್ಯದೊಂದಿಗೆ ಬದುಕುತ್ತವೆ.

ಈ ಭಾರತದಲ್ಲಿ ಅಸ್ಪೃಶ್ಯತೆಯ ಶಾಪಕ್ಕೆ ಅವಕಾಶವಿರುವುದಿಲ್ಲ.

ಈ ಕನಸಿನ ಭಾರತದಲ್ಲಿ ಮತ್ತೇರಿಸುವ ಪಾನೀಯಗಳಿಗಾಗಲೀ, ಮಾದಕ ದ್ರವ್ಯಗಳಿಗಾಗಲೀ ಜಾಗವಿರುವುದಿಲ್ಲ.

ಇಲ್ಲಿ ಪುರುಷರು ಅನುಭವಿಸುವಷ್ಟೇ ಹಕ್ಕುಗಳನ್ನು ಮಹಿಳೆಯರೂ ಅನುಭವಿಸುತ್ತಾರೆ.

ನಾವು ಜಗತ್ತಿನ ಉಳಿದ ಭಾಗಗಳನ್ನು ಶೋಷಿಸದೆ, ಅಥವಾ ಶೋಷಣೆಗೆ ಈಡಾಗದೆ, ಇಡೀ ಜಗತ್ತಿನೊಂದಿಗೆ ಶಾಂತಿಯಿಂದ ಬದುಕುವುದರಿಂದ ನಮ್ಮ ಸೇನೆ ಅತ್ಯಂತ ಪುಟ್ಟ ಸೇನೆಯಾಗಿರುತ್ತದೆ.

ಭಾರತದ ಕೋಟಿಗಟ್ಟಲೆ ಮೂಕ ಜನರ ಹಿತಾಸಕ್ತಿಗಳಿಗೆ ಅಡ್ಡಿಯಾಗದಂಥ ಎಲ್ಲ ವಿದೇಶಿ ಅಥವಾ ದೇಶಿ ಹಿತಾಸಕ್ತಿಗಳನ್ನು ನಾವು ವಿವೇಚನೆಯಿಂದ ಗೌರವಿಸುತ್ತೇವೆ. ನಾನು ವೈಯಕ್ತಿಕವಾಗಿ, ವಿದೇಶಿ ಹಾಗೂ ದೇಶಿ ಎಂಬ ವಿಭಜನೆಯನ್ನೇ ಒಪ್ಪುವವನಲ್ಲ.

ಇದು ನನ್ನ ಕನಸಿನ ಭಾರತ. ಇದರಲ್ಲಿ ಯಾವುದು ಮುಕ್ಕಾದರೂ ನನಗೆ ತೃಪ್ತಿಯಾಗುವುದಿಲ್ಲ.

(ಯಂಗ್ ಇಂಡಿಯಾ, ೧೦. ೯. ೧೯೩೧)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೪೬

ನನ್ನ ಕನಸಿನ ಶಿಕ್ಷಣ

...ಬರೋಡದಲ್ಲಿ ಕೊಡಲಾಗುತ್ತಿರುವ ಶಿಕ್ಷಣ ಬಹುತೇಕವಾಗಿ ಬ್ರಿಟಿಷ್ ಮಾದರಿಯನ್ನು ಗುಲಾಮರಂತೆ ಅನುಸರಿಸಿದೆ. ಉನ್ನತ ಶಿಕ್ಷಣ ನಮ್ಮನ್ನು ನಮ್ಮ ನೆಲದಲ್ಲೇ ವಿದೇಶಿಯರಂತೆ ಮಾಡಿದರೆ, ಪ್ರಾಥಮಿಕ ಶಿಕ್ಷಣ ವಿದ್ಯಾರ್ಥಿಗಳ ಮುಂದಿನ ಬದುಕಿನಲ್ಲಿ ಯಾವ ಪ್ರಯೋಜನಕ್ಕೂ ಬಾರದಂತಾಗಿದೆ. ಅದರಲ್ಲಿ ಸ್ವಂತಿಕೆಯೂ ಇಲ್ಲ, ಸಹಜತೆಯೂ ಇಲ್ಲ.

[ಮದ್ರಾಸಿನ ವಿದ್ಯಾರ್ಥಿಗಳೊಂದಿಗೆ ಮಾತಾಡುತ್ತಾ ಗಾಂಧೀಜಿ ಕೇಳಿದರು]: ನಿಮಗೆ ಕೊಡುತ್ತಿರುವ ಶಿಕ್ಷಣ ನಿಮ್ಮಲ್ಲಿರುವ ಅತ್ಯುತ್ತಮ ಗುಣವನ್ನು ಹೊರತೆಗೆಯಲು ಶಕ್ತವಾಗಿದೆಯೋ? ಅಥವಾ ಇದು ನಿಮ್ಮನ್ನು ಸರ್ಕಾರದ ಉದ್ಯೋಗಿಗಳನ್ನಾಗಿಸುವ ಅಥವಾ ವಾಣಿಜ್ಯ ಸಂಸ್ಥೆಗಳ ಗುಮಾಸ್ತರನ್ನಾಗಿಸುವ ಶಿಕ್ಷಣವೇ?

...ನಮ್ಮ ಇಂಗ್ಲಿಷ್ ಕಲಿಕೆಯನ್ನೇ ನೋಡಿ. ನಾವು ತಪ್ಪು ತಪ್ಪು ಇಂಗ್ಲಿಷಿನಲ್ಲಿ ಇತರರಿಗೆ ಪತ್ರ ಬರೆಯುತ್ತೇವೆ. ನಮ್ಮಲ್ಲಿ ಎಂ.ಎ. ಪದವಿ ಪಡೆದವರೂ ಇದಕ್ಕೆ ಹೊರತಾಗಿಲ್ಲ. ನಮ್ಮ ಒಳ್ಳೊಳ್ಳೆಯ ಆಲೋಚನೆಗಳನ್ನೆಲ್ಲ ಇಂಗ್ಲಿಷಿನಲ್ಲಿ ವ್ಯಕ್ತ ಪಡಿಸುತ್ತಿದ್ದೇವೆ. ಕಾಂಗ್ರೆಸ್ ಸಭೆಗಳ ಕಾರ್ಯಕಲಾಪಗಳು ಇಂಗ್ಲಿಷಿನಲ್ಲಿ ನಡೆಯುತ್ತಿವೆ. ನಮ್ಮ ಅತ್ಯುತ್ತಮ ಪತ್ರಿಕೆಗಳು ಇಂಗ್ಲಿಷಿನಲ್ಲಿ ಬರುತ್ತಿವೆ. ಸ್ಥಿತಿ ಹೀಗೇ ಮುಂದುವರಿದರೆ ಭವಿಷ್ಯದ ಇಂಡಿಯಾ ನಮ್ಮನ್ನು ಹೀಗಳೆಯುವುದು ಗ್ಯಾರಂಟಿ...ಇಂಡಿಯಾವನ್ನು ದಾಸ್ಯದಲ್ಲಿರಿಸಿರುವವರು ಇಂಗ್ಲಿಷ್ ಬಲ್ಲ ನಾವುಗಳೇ ಹೌದು. ದೇಶದ ಶಾಪ ಇಂಗ್ಲಿಷರಿಗೆ ತಟ್ಟುವುದಿಲ್ಲ; ಬದಲಿಗೆ ನಮಗೆ ತಟ್ಟಲಿದೆ...

ಇಂಗ್ಲಿಷಿನಲ್ಲೇ ಯೋಚಿಸಿ, ಬಹುತೇಕವಾಗಿ ಎಲ್ಲರನ್ನೂ ಇಂಗ್ಲಿಷಿನಲ್ಲೇ ತಲುಪುವ ತೊಡಕಿಲ್ಲದಿದ್ದರೆ ರಾಜಾರಾವ್ ಮೋಹನ್‌ರಾಯ್ ಇನ್ನಷ್ಟು ದೊಡ್ಡ

ಸುಧಾರಕರಾಗಿರುತ್ತಿದ್ದರು ಹಾಗೂ ಲೋಕಮಾನ್ಯ ತಿಲಕರು ಮತ್ತಷ್ಟು ಉತ್ತಮ ವಿದ್ವಾಂಸರಾಗಿರುತ್ತಿದ್ದರು. ಅವರಿಬ್ಬರ ವಿದ್ಯಾಭ್ಯಾಸ ಇಂಗ್ಲಿಷ್ ವಿದ್ಯಾಭ್ಯಾಸಕ್ಕಿಂತ ಭಿನ್ನವಾದ, ಕೊಂಚ ಸಹಜವಾದ ವಾತಾವರಣದಲ್ಲಿ ನಡೆದಿದ್ದರೆ, ಜನರ ಮೇಲೆ ಅವರು ಉಂಟು ಮಾಡಿದ ಅನನ್ಯ ಪ್ರಭಾವ ಇನ್ನಷ್ಟು ಅದ್ಭುತವಾಗಿರುತ್ತಿತ್ತು. ಇಂಗ್ಲಿಷ್ ಸಾಹಿತ್ಯದ ಶ್ರೀಮಂತ ನಿಧಿಯ ಜ್ಞಾನದಿಂದ ಅವರಿಗೆ ಲಾಭವಾಯಿತೆನ್ನುವುದು ನಿಜ. ಆದರೆ ಈ ಸಾಹಿತ್ಯ ಅವರಿಗೆ ತಂತಮ್ಮ ದೇಶಭಾಷೆಗಳ ಮೂಲಕವೇ ದೊರೆಯಬೇಕಾಗಿತ್ತು. ಯಾವ ದೇಶವೂ ಅನುಕರಣಕಾರ ಜನಾಂಗವನ್ನು ಉತ್ಪಾದಿಸುವುದರ ಮೂಲಕ ಶ್ರೇಷ್ಠ ದೇಶವಾಗದು...

...ಚೈತನ್ಯ, ಕಬೀರ್, ಗುರುನಾನಕ್, ಗುರು ಗೋವಿಂದಸಿಂಗ್, ಶಿವಾಜಿ, ರಾಣಾ ಪ್ರತಾಪ್ ಇವರೆಲ್ಲರೂ ರಾಜಾರಾವ್ ಮೋಹನ್‌ರಾಯ್, ತಿಲಕರಿಗಿಂತ ದೊಡ್ಡವರೆಂದು ನನ್ನ ನಂಬಿಕೆ. ಹೀಗೆ ಹೋಲಿಸುವುದೇ ಅತ್ಯಂತ ಅಸಂಬದ್ಧವೆಂಬುದನ್ನು ನಾನು ಬಲ್ಲೆ. ಈ ಎಲ್ಲರೂ ತಂತಮ್ಮ ರೀತಿಯಲ್ಲಿ ದೊಡ್ಡವರೇ ಹೌದು. ಆದರೆ ಪ್ರಭಾವದ ದೃಷ್ಟಿಯಿಂದ ನೋಡಿದರೆ, ಜನಸಮುದಾಯದ ಮೇಲೆ ರಾಜಾರಾಮ್ ಮೋಹನ್‌ರಾಯ್ ಮತ್ತು ತಿಲಕರ ಪ್ರಭಾವ ಮೇಲೆ ಹೇಳಿದ ಅದೃಷ್ಟಶಾಲಿ ವ್ಯಕ್ತಿಗಳಷ್ಟು ಶಾಶ್ವತವಾಗಲೀ, ವ್ಯಾಪಕ ಪರಿಣಾಮವುಳ್ಳದ್ದಾಗಲೀ ಆಗಿಲ್ಲ. ತಿಲಕ್, ರಾಯ್ ಇಬ್ಬರೂ ಅಡೆತಡೆಗಳನ್ನು ಎದುರಿಸಿದ ರೀತಿಯನ್ನು ಗಮನಿಸಿದರೆ, ಅವರಿಬ್ಬರೂ ದೊಡ್ಡವರೆನ್ನುವುದು ನಿಜ. ಆದರೆ ಅವರು ಪಡೆದ ಶಿಕ್ಷಣ ವ್ಯವಸ್ಥೆಯ ಅಡೆತಡೆಗಳಿರದಿದ್ದರೆ ಅವರು ಇನ್ನೂ ಪರಿಣಾಮಕಾರಿಯಾಗಿರುತ್ತಿದ್ದರು. ಆದರೆ ರಾಯ್ ಹಾಗೂ ತಿಲಕರು ಇಂಗ್ಲಿಷ್ ಭಾಷೆಯ ನೆರವಿಲ್ಲದಿದ್ದರೆ ಆ ರೀತಿ ಯೋಚಿಸಲು ಸಾಧ್ಯವಾಗುತ್ತಿರಲಿಲ್ಲ ಎಂಬ ಮಾತನ್ನು ನಾನು ಒಪ್ಪುವುದಿಲ್ಲ...ಕಳೆದ ಐವತ್ತು ವರ್ಷಗಳಲ್ಲಿ ಇಂಡಿಯಾ ಮೊದಲಿಗಿಂತ ಬಡವಾಗಿದೆ. ತನ್ನನ್ನು ತಾನು ರಕ್ಷಿಸಿಕೊಳ್ಳುವ ಅದರ ಸಾಮರ್ಥ್ಯ ಕಡಿಮೆಯಾಗಿದೆ. ಇಂಡಿಯಾದ ಜನ ಬಲಹೀನರಾಗಿದ್ದಾರೆ. ಆಡಳಿತ ವ್ಯವಸ್ಥೆಯ ದೋಷಗಳು ಇದಕ್ಕೆ ಕಾರಣ ಎಂಬುದು ಎಲ್ಲರಿಗೂ ಗೊತ್ತಿದೆ. ಶಿಕ್ಷಣ ವ್ಯವಸ್ಥೆಯಂತೂ ಅತ್ಯಂತ ದೋಷಯುಕ್ತವಾಗಿದೆ.

...ಒಣ ಹೆಮ್ಮೆಗಾಗಿ, ಯಾವುದೋ ಸಾಮಾಜಿಕ ಅಂತಸ್ತು ದೊರೆಯುತ್ತದೆ ಎಂಬ ಹುಸಿ ಭಾವನೆಗಾಗಿ ನಮ್ಮ ಸೋದರಿಯರ ಮೇಲೆ ಇಂಗ್ಲಿಷ್ ಕಲಿಕೆಯ ಕಷ್ಟವನ್ನು ಹೇರುವುದನ್ನು ನಾನು ಒಪ್ಪುವುದಿಲ್ಲ. ಸಾಹಿತ್ಯಾಭಿರುಚಿ ಇರುವ ನಮ್ಮ ತರುಣ, ತರುಣಿಯರು ತಮಗೆಷ್ಟು ಸಾಧ್ಯವೋ ಅಷ್ಟು ಇಂಗ್ಲಿಷ್ ಭಾಷೆಯನ್ನು ಹಾಗೂ ಜಗತ್ತಿನ ಇತರ ಭಾಷೆಗಳನ್ನು ಕಲಿಯಲಿ. ತಾವು ಕಲಿತಿದ್ದನ್ನು ರಾಜಾ

ರಾಮ್ ಮೋಹನ್‌ರಾಯ್, ಸುಭಾಷ್‌ಚಂದ್ರ ಬೋಸ್, ರವೀಂದ್ರನಾಥ ಠಾಕೂರರಂತೆ ಇಂಡಿಯಾಕ್ಕೆ ಹಾಗೂ ಒಟ್ಟು ಜಗತ್ತಿಗೆ ಹೇಳಿಕೊಡಲಿ. ಆದರೆ ಯಾವುದೇ ಭಾರತೀಯ ಮಹಿಳೆಯೂ, ಪುರುಷನೂ ತನ್ನ ಮಾತೃಭಾಷೆಯನ್ನು ಕಡೆಗಣಿಸುವುದಾಗಲೀ, ಆ ಬಗ್ಗೆ ನಾಚಿಕೊಳ್ಳುವುದಾಗಲೀ ಕೂಡದು; ತನ್ನ ಭಾಷೆಯಲ್ಲಿ ಅತ್ಯುತ್ತಮವಾಗಿ ಆಲೋಚಿಸುವುದು ಹಾಗೂ ಅದನ್ನು ಹೇಳುವುದು ಅಸಾಧ್ಯ ಎಂದು ಯಾವುದೇ ಗಂಡಸಾಗಲೀ, ಹೆಂಗಸಾಗಲೀ ಭಾವಿಸದಿರಲಿ. ನನ್ನದು ಸೆರೆಮನೆಯ ಧರ್ಮವಲ್ಲ. ದೇವರ ಕಟ್ಟ ಕಡೆಯ ಸೃಷ್ಟಿಗೂ ಅಲ್ಲಿ ಜಾಗವಿದೆ. ಆದರೆ ದುರಹಂಕಾರ, ಜನಾಂಗೀಯ ಮೇಲರಿಮೆ ಹಾಗೂ ವರ್ಣ ತಾರತಮ್ಯದ ಧರ್ಮಗಳಿಗೆ ಅಲ್ಲಿ ಅವಕಾಶವಿಲ್ಲ.

...ಜಗತ್ತಿನಾದ್ಯಂತ ಬೆಲೆ ಕಟ್ಟಲಾಗದಷ್ಟು ಮುತ್ತುಗಳಿವೆ. ಅವು ಕೇವಲ ಇಂಗ್ಲಿಷ್ ವಾತಾವರಣದಲ್ಲಿ ಮಾತ್ರ ಹುಟ್ಟಿಲ್ಲ. ಇತರ ಭಾಷೆಗಳಲ್ಲೂ ಇಂಥ ಮುತ್ತುಗಳಿವೆ. ಈ ಎಲ್ಲ ಮುತ್ತುಗಳೂ ನಮ್ಮ ಜನಸಾಮಾನ್ಯರಿಗೆ ಸಿಗುವಂತಾಗಬೇಕು. ಅದು ಸಾಧ್ಯವಾಗುವುದು ನಮ್ಮ ವಿದ್ಯಾವಂತರು ಜನರಿಗಾಗಿ ಆ ಮುತ್ತುಗಳನ್ನು ನಮ್ಮ ಭಾಷೆಗಳಿಗೆ ಅನುವಾದಿಸಿದಾಗ ಮಾತ್ರ.

ಮಕ್ಕಳ ಕಲಿಕೆ ಮತ್ತು ಶಿಕ್ಷಕ, ಶಿಕ್ಷಕಿಯರು

...ಹುಡುಗ, ಹುಡುಗಿಯರನ್ನು ಸರಿಯಾದ ಮಾರ್ಗದಲ್ಲಿ ಬೆಳೆಸಿ, ಶಿಕ್ಷಣ ನೀಡುವುದು ಎಷ್ಟು ಕಷ್ಟವೆಂಬುದು ದಿನೇ ದಿನೇ ನನಗೆ ಸ್ಪಷ್ಟವಾಗತೊಡಗಿತು. ನಾನು ಅವರ ಶಿಕ್ಷಕನೂ, ಪೋಷಕನೂ ಆಗಬೇಕೆಂದರೆ ಅವರ ಹೃದಯವನ್ನು ತಲುಪಬೇಕು. ಅವರ ಆನಂದ, ದುಃಖಗಳನ್ನು ಹಂಚಿಕೊಳ್ಳಬೇಕು. ಅವರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕಲು ನೆರವಾಗಬೇಕು. ಉಕ್ಕುವ ಅವರ ಪ್ರಾಯದ ಕನಸುಗಳನ್ನು ಸರಿದಾರಿಯಲ್ಲಿ ಕೊಂಡೊಯ್ಯಬೇಕು...

...ಮಕ್ಕಳು ತಮ್ಮ ಕಣ್ಣುಗಳಿಗಿಂತ ಕಿವಿಯಲ್ಲಿ ಕೇಳಿಸಿಕೊಳ್ಳುವುದರ ಮೂಲಕ ಹೆಚ್ಚಿನ ಶ್ರಮವಿಲ್ಲದೆ ಹೆಚ್ಚು ಅಂಶಗಳನ್ನು ಹೀರಿಕೊಳ್ಳಬಲ್ಲರು. [ನಾನು ದಕ್ಷಿಣ ಆಫ್ರಿಕಾದಲ್ಲಿ ಪಾಠ ಹೇಳಿಕೊಡುತ್ತಿದ್ದಾಗ] ಮಕ್ಕಳಿಗೆ ಪೂರ್ತಿ ಪುಸ್ತಕ ಓದಿದ್ದು ನೆನಪಿಲ್ಲ. ಆದರೆ ಹಲವು ಪುಸ್ತಕಗಳನ್ನು ಓದಿ ನಾನು ಅರಗಿಸಿಕೊಂಡಿದ್ದನ್ನೆಲ್ಲ ನನ್ನದೇ ಆದ ಭಾಷೆಯಲ್ಲಿ ಅವರಿಗೆ ಹೇಳಿಕೊಟ್ಟೆ. ಅದು ಇನ್ನೂ ಅವರ ತಲೆಯಲ್ಲಿ ಉಳಿದಿದೆ ಎಂದು ಧೈರ್ಯವಾಗಿ ಹೇಳಬಲ್ಲೆ. ತಾವು ಪುಸ್ತಕಗಳಿಂದ ಕಲಿತಿದ್ದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವರಿಗೆ ಕಷ್ಟವಾಗಿತ್ತು; ಆದರೆ ನಾನು ಬಾಯಲ್ಲಿ ಹೇಳಿದ್ದನ್ನು ಅವರು ಆರಾಮಾಗಿ ಮತ್ತೆ ಹೇಳಬಲ್ಲವರಾಗಿದ್ದರು...

ವಿದ್ಯಾರ್ಥಿಯ ನಿಜವಾದ ಪಠ್ಯಪುಸ್ತಕವೆಂದರೆ ಶಿಕ್ಷಕ, ಶಿಕ್ಷಕಿಯರೇ. ನನ್ನ ಮೇಷ್ಟ್ರುಗಳು ಪಠ್ಯ ಪುಸ್ತಕದ ಮೂಲಕ ಹೇಳಿಕೊಟ್ಟಿದ್ದರಲ್ಲಿ ನನಗೆ ನೆನಪಿರುವುದು ತೀರಾ ಕಡಿಮೆ. ಆದರೆ ಪುಸ್ತಕದ ನೆರವಿಲ್ಲದೆ ಅವರು ನನಗೆ ಹೇಳಿಕೊಟ್ಟಿದ್ದೆಲ್ಲವನ್ನೂ ಈಗಲೂ ಸ್ಪಷ್ಟವಾಗಿ ನೆನಪಿಸಿಕೊಳ್ಳಬಲ್ಲೆ.

ನವ ತಾಲೀಮು

ಕೈ ಕಸುಬು (ಕ್ರಾಫ್ಟ್), ಕಲೆ, ಆರೋಗ್ಯ, ಶಿಕ್ಷಣ ಈ ನಾಲ್ಕೂ ಸುಂದರವಾಗಿ ಬೆರೆತ ಶಿಕ್ಷಣವೇ ನಯೀ ತಾಲೀಮ್. ಈ ಬಗೆಯ ಶಿಕ್ಷಣ ಮಗು ಹುಟ್ಟಿದಾಗಿನಿಂದ ಕೊನೆಯವರೆಗೂ ಬೇಕಾದ ಸಮಗ್ರ ಶಿಕ್ಷಣವನ್ನು ನೀಡುತ್ತದೆ.

ಮಕ್ಕಳ ದೇಹ, ಮನಸ್ಸು ಮತ್ತು ಚರಕ

ಒಬ್ಬ ನುರಿತ ವೈದ್ಯನಂತೆ ನಾನು ದುರ್ಬಲವಾದ ಅಂಗವನ್ನೇ ಗಮನಿಸುತ್ತೇನೆ. ಮಗುವಿನ ಕೈ, ಬುದ್ಧಿ, ಹಾಗೂ ಒಳಮನಸ್ಸನ್ನು ಬೆಳೆಸುವ ರೀತಿಗೆ ಒತ್ತು ಕೊಡುತ್ತೇನೆ. ಮಕ್ಕಳ ಕೈಗಳು ಬಹುತೇಕ ನಿರುಪಯುಕ್ತವಾಗಿವೆ. ಒಳಮನಸ್ಸನ್ನು ಬಹುಪಾಲು ಕಡೆಗಣಿಸಲಾಗಿದೆ... ನಮ್ಮ ಶಿಕ್ಷಣ ವ್ಯವಸ್ಥೆಯ ಈ ಗಂಭೀರ ದೋಷಗಳನ್ನು ಸರಿಪಡಿಸಲು ನಿಮ್ಮನ್ನು ಕೇಳಿಕೊಳ್ಳುತ್ತೇನೆ: ಮಕ್ಕಳು ದಿನದಲ್ಲಿ ಅರ್ಧ ಗಂಟೆ ಚರಕದಿಂದ ನೂಲು ತೆಗೆದರೆ ಅವರಿಗೆ ದಣಿವಾಗುತ್ತದೆಯೆ? ಅದರಿಂದ ಅವರ ಬುದ್ಧಿ ಮಂಕಾಗುತ್ತದೆಯೆ?

...ಚರಕದಿಂದ ನೂಲು ತೆಗೆಯುವುದನ್ನು ಶಾಲೆಯಲ್ಲಿ ಕಲಿತ ಮೇಲೆ, ಮಕ್ಕಳಿಗೆ ಇಷ್ಟವಿದ್ದರೆ ಮನೆಯಲ್ಲೂ ಅದನ್ನು ಮುಂದುವರಿಸಬಹುದು. ಶಾಲೆಯಲ್ಲಿ ಕಲಿಸಲು ತಕಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ಸಿಗುತ್ತದೆ; ಅದು ಲಾಭದಾಯಕ ಕೂಡ. ಆ ಮೂಲಕ ಮಕ್ಕಳ ಶಿಕ್ಷಣ ಸ್ವಾವಲಂಬಿಯಾಗುವುದು; ಮಕ್ಕಳ ಮೈ ಮನಕ್ಕೆ ತರಬೇತಿ ಸಿಕ್ಕುವುದು. ವಿದೇಶಿ ನೂಲು, ಬಟ್ಟೆಗಳ ಪೂರ್ಣ ಬಹಿಷ್ಕಾರ ಸಾಧ್ಯವಾಗುವುದು. ಹೀಗೆ ಸಿದ್ಧರಾದ ಮಕ್ಕಳು ಸ್ವಾವಲಂಬಿಗಳೂ, ಸ್ವತಂತ್ರರೂ ಆಗುವರು.

ಇಂಥ ವೃತ್ತಿಪರ ಶಿಕ್ಷಣ ಸಾಧ್ಯವಾಗುವುದಾದರೆ ಮಕ್ಕಳು ಶಾಲೆಯ ವೆಚ್ಚವನ್ನು ಶಾಲೆಯಲ್ಲೇ ದುಡಿದುಕೊಳ್ಳಬಲ್ಲರು ಹಾಗೂ ನಂತರದ ಬದುಕಿನಲ್ಲಿ ಸ್ವಾವಲಂಬಿಗಳಾಗಬಲ್ಲರು. ಪೂರ್ಣ ಸ್ವಾವಲಂಬಿಯಾದ, ಚರಕಾ ಹಾಗೂ ನೇಯ್ಗೆಗಳನ್ನು ಒಳಗೊಂಡ, ಹತ್ತಿಯ ಹೊಲ ಪಕ್ಕದಲ್ಲೇ ಇರುವ ಶಾಲೆಯ ಚಿತ್ರ ನನ್ನ ಕಣ್ಮುಂದೆ ಬರುತ್ತಿದೆ.

ಹುಡುಗ ಹುಡುಗಿಯರು ದಿನದಲ್ಲಿ ಕೊನೆಯ ಪಕ್ಷ ಅರ್ಧ ಗಂಟೆ ಚರಕ ತಿರುಗಿಸುವುದು ಒಳ್ಳೆಯದು. ಮೂವತ್ತು ಸಾವಿರ ಹುಡುಗ ಹುಡುಗಿಯರು ಮತ್ತು ೮೦೦ ಶಿಕ್ಷಕ, ಶಿಕ್ಷಕಿಯರು ಪ್ರತಿದಿನ ದೇಶಕ್ಕಾಗಿ ಅರ್ಧ ಗಂಟೆ ಚರಕದಿಂದ ನೂಲುವುದು ಸಾಧಾರಣ ವಿದ್ಯೆಯೇನಲ್ಲ...ಜೊತೆಗೆ ಇದರಿಂದ ದೇಶಕ್ಕೆ ೧೮೭೫ ಮಣ ನೂಲಿನ ಕೊಡುಗೆ ದೊರೆಯಬಲ್ಲದು. ಇದರಿಂದ ೫೦೦೦ ಜನರಿಗೆ ಕೊನೆಯ ಪಕ್ಷ ಒಂದೊಂದು ಪಂಚೆ ದೊರೆಯಬಲ್ಲದು. ಇದರಿಂದ ಮಕ್ಕಳು ಕಲಿಯುವ ಪಾಠದ ಮೌಲ್ಯ ಎಂಥದೆಂಬುದನ್ನು ಶಿಕ್ಷಕ, ಶಿಕ್ಷಕಿಯರು ಅರ್ಥ ಮಾಡಿಕೊಳ್ಳಲಿ. ಇದರಿಂದಾಗಿ ಐದಾರು ಜನ ಮಕ್ಕಳು ತಂತಾವೇ ಸೇರಿಕೊಂಡು ನೂಲು ತೆಗೆದು, ಮದ್ರಾಸಿನ ಪ್ರವಾಹದಲ್ಲಿ ಬಟ್ಟೆ ಬರೆ ಕಳಕೊಂಡ ಜನರಿಗೆ ಕಳಿಸಬಹುದೆಂಬ ಭಾವ ಅವರಲ್ಲಿ ಹುಟ್ಟಿದರೆ, ಅದೊಂದು ಉತ್ತಮ ಪಾಠವಲ್ಲವೆ? ...ಶಿಕ್ಷಣದ ಅಂತಿಮ ಉದ್ದೇಶವೇ ಸೇವೆ. ವಿದ್ಯಾರ್ಥಿಗಳು ಓದುವಾಗಲೇ ಸೇವೆ ಸಲ್ಲಿಸುವ ಅವಕಾಶ ಸಿಕ್ಕರೆ ಅವರು ಅದೊಂದು ಅಪೂರ್ವ ಅವಕಾಶ ಹಾಗೂ ತನಗೆ ದೊರೆತ ಸದವಕಾಶ ಎಂದು ತಿಳಿಯಬೇಕೇ ಹೊರತು, ಅದು ಶಿಕ್ಷಣವನ್ನು ತೊರೆದಂತೆ ಎಂದು ತಿಳಿಯಬಾರದು.

[ಚರಕದ ಒಡನಾಟದ ಜೊತೆಗೇ] ಬಟ್ಟೆ ಗಿರಣಿಯಿಂದ ಆಗುವ ಸಂಪತ್ತಿನ ಹಂಚಿಕೆಗೂ, ಕೈಯಲ್ಲಿ ನೂಲುವ, ನೇಯುವ ಕೆಲಸದಿಂದ ನಡೆಯುವ ಸಂಪತ್ತಿನ ಹಂಚಿಕೆಗೂ ಇರುವ ವ್ಯತ್ಯಾಸವನ್ನು ಮಕ್ಕಳು ತಿಳಿಯಲಿ. ಚರಕ ಹಾಗೂ ಇಂಡಿಯಾದ ಬಟ್ಟೆ ತಯಾರಿಕೆಯ ವಿಧಾನಗಳು ಹೇಗೆ ನಾಶವಾದವೆಂಬುದು ಅವರಿಗೆ ತಿಳಿಯಲಿ. ಇಂಡಿಯಾದ ಲಕ್ಷಾಂತರ ರೈತರ ಗುಡಿಸಲುಗಳಲ್ಲಿ ಚರಕವನ್ನು ಇಟ್ಟುಕೊಳ್ಳುವ, ನೂಲುವ ಕೆಲಸದ ಪರಿಣಾಮ ಏನೆಂಬುದನ್ನು ಅವರು ಅರಿಯಲಿ ಹಾಗೂ ಅದನ್ನು ರೈತರಿಗೆ ತೋರಿಸಿಕೊಡಲಿ. ಈ ಗುಡಿ ಕೈಗಾರಿಕೆಯ ಸಂಪೂರ್ಣ ಪುನರುಜ್ಜೀವನ ಹೇಗೆ ಒಡೆದ ಹಿಂದೂ, ಮುಸಲ್ಮಾನರ ಹೃದಯಗಳನ್ನು ಬೆಸೆಯಬಲ್ಲದು ಎಂಬುದು ಕೂಡ ಮಕ್ಕಳಿಗೆ ಅರಿವಾಗಲಿ.

ಕೈಬರಹ ಮತ್ತು ಮಕ್ಕಳ ನಿಜ ಶಕ್ತಿ

...ಮಕ್ಕಳ ಈ ಶಿಕ್ಷಣದಲ್ಲಿ ಸಾಹಿತ್ಯದ ಕಲಿಕೆಯೂ ಸೇರುತ್ತದೆ. ಹಾಗೆಯೇ, ಕೈ ಬರಹ ಕೂಡ. ಕೈ ಬರಹ ಒಂದು ಕಲೆ. ಕಲಾವಿದನೊಬ್ಬ ಚಿತ್ರ ಬರೆಯುವ ಹಾಗೆ ಪ್ರತಿ ಅಕ್ಷರವನ್ನೂ ಸರಿಯಾಗಿ ಬರೆಯಬೇಕು. ಹುಡುಗ ಹುಡುಗಿಯರಿಗೆ ಮೊದಲು ಪ್ರಾಥಮಿಕ ಹಂತದ ಚಿತ್ರಕಲೆಯನ್ನು ಕಲಿಸಿದರೆ ಮಾತ್ರ ಕೈಬರಹ ಕಲಿಸಬಹುದು. ವೃತ್ತಿಪರ ಶಿಕ್ಷಣದ ಜೊತೆಗೇ ಪ್ರಾಥಮಿಕ ಹಂತದ ಚರಿತ್ರೆ, ಭೂಗೋಳ, ಲೆಕ್ಕಗಳನ್ನೂ

ಮಕ್ಕಳು ಕಲಿಯುವರು. ನಡತೆ, ಶುಭ್ರತೆ, ಆರೋಗ್ಯಕರ ಅಭ್ಯಾಸಗಳನ್ನು ತಾವೂ ಕಲಿತು ಮನೆಗೂ ಒಯ್ಯುವರು. ಆ ಮೂಲಕ ಮೌನ ಕ್ರಾಂತಿಕಾರಿಗಳಾಗುವರು.

...ನಿಜವಾದ ಶಿಕ್ಷಣ ಹುಡುಗ, ಹುಡುಗಿಯರ ಒಳಗಿರುವ ಅತ್ಯುತ್ತಮವಾದುದನ್ನು ಹೊರಗೆಳೆಯಬೇಕು. ಮಕ್ಕಳ ತಲೆಗೆ ಅನಗತ್ಯವಾದ, ಅಸಂಬದ್ಧವಾದ ಮಾಹಿತಿಗಳನ್ನು ತುರುಕುವುದರಿಂದ ಈ ಕೆಲಸ ಆಗುವುದಿಲ್ಲ. ಸುಮ್ಮನೆ ತುರುಕಿದ್ದೆಲ್ಲ ಅನಗತ್ಯ ಹೊರೆಯಾಗುತ್ತದೆ; ಮಕ್ಕಳ ಸ್ವಂತಿಕೆ ನಾಶವಾಗಿ ಮಕ್ಕಳನ್ನು ಯಂತ್ರಗಳನ್ನಾಗಿಸುತ್ತದೆ... ಮಕ್ಕಳ ಬುದ್ಧಿ ಬೆಳೆಯುವುದು ದೇಹದ ಎಲ್ಲ ಅಂಗಗಳನ್ನೂ ಬಳಸುವ ಕಲೆ ಕಲಿತಾಗ. ಕೈ ಕಾಲು ಕಣ್ಣು ಕಿವಿ ಮೂಗು ಮುಂತಾಗಿ ಎಲ್ಲವನ್ನೂ ಬಳಸುವ ತರಬೇತಿ ಮಕ್ಕಳನ್ನು ಬಹುಬೇಗ ಜಾಣರನ್ನಾಗಿ ಮಾಡಬಲ್ಲದು. ದೇಹ, ಮನಸ್ಸುಗಳ ಬೆಳವಣಿಗೆ ಒಟ್ಟಿಗೇ ನಡೆದಾಗ ಮಾತ್ರ ಆತ್ಮದ ವಿಕಾಸ ಸಾಧ್ಯ.

ಪಠ್ಯಪುಸ್ತಕಗಳು

ಈಗಿನ ಪಠ್ಯಪುಸ್ತಕಗಳು ನಮ್ಮ ಹುಡುಗ ಹುಡುಗಿಯರು ಮನೆಯಲ್ಲಿ ಕಾಣುವ ಪರಿಚಿತ ವಸ್ತುಗಳಿಗಿಂತ, ಸಂಪೂರ್ಣ ಅಪರಿಚಿತವಾದ ವಸ್ತುಗಳನ್ನೇ ಒಳಗೊಂಡಿವೆ. ಕುಟುಂಬದಲ್ಲಿ ಬದುಕುವಾಗ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಮಕ್ಕಳು ಕಲಿಯುವುದೇ ಇಲ್ಲ. ತನ್ನ ಸುತ್ತಮುತ್ತಲಿನ ಬಗ್ಗೆ ಹೆಮ್ಮೆ ಪಡುವಂಥ ಯಾವುದನ್ನೂ ಶಾಲೆಯಲ್ಲಿ ಹೇಳಿಕೊಡುವುದೇ ಇಲ್ಲ. ಉನ್ನತ ಶಿಕ್ಷಣಕ್ಕೆ ಹೋದಂತೆಲ್ಲಾ ಮಕ್ಕಳು ತಮ್ಮ ಮನೆಗೆ ದೂರವಾಗುತ್ತಾ ಹೋಗುತ್ತಾರೆ. ಶಿಕ್ಷಣದ ಕೊನೆಗೆ ತಮ್ಮ ಸುತ್ತಮುತ್ತಲ ಪರಿಸರಕ್ಕೆ ಪೂರಾ ಪರಕೀಯರಾಗಿಬಿಡುತ್ತಾರೆ. ಮನೆಯ ಬದುಕಿನ ಬಗ್ಗೆ ಓದಿ, ಅನುಭವಿಸಬಲ್ಲ ಯಾವ ಕಾವ್ಯವನ್ನೂ ಮಕ್ಕಳು ಕಲಿಯುತ್ತಿಲ್ಲ... ನನಗೇನಾದರೂ ಅಧಿಕಾರವಿದ್ದಿದ್ದರೆ ಈಗಿರುವ ಬಹುತೇಕ ಪಠ್ಯಪುಸ್ತಕಗಳನ್ನು ತೆಗೆದು ಹಾಕುತ್ತಿದ್ದೆ; ಮಕ್ಕಳು ತಮ್ಮ ಸುತ್ತಮುತ್ತಲ ಬದುಕಿಗೆ ತಕ್ಷಣ ಸ್ಪಂದಿಸುವಂತೆ ಮನೆಯ ಬದುಕಿಗೆ ಸಂಬಂಧಿಸಿದ ಪಠ್ಯಗಳನ್ನು ಬರೆಯಲು ಹೇಳುತ್ತಿದ್ದೆ.

ಬೋಧನೆ, ಸಂಶೋಧನೆ

ಪಶ್ಚಿಮದ ರೀತಿಯ ಬೋಧನೆಗೂ ನಮ್ಮ ಬೋಧನೆಗೂ ವ್ಯತ್ಯಾಸವಿದೆ. ಉದಾಹರಣೆಗೆ, ಇಂಗ್ಲಿಷನ್ನು ಪಶ್ಚಿಮದವರ ರೀತಿಯಲ್ಲಿ ನಾವು ಕಲಿಸಬಾರದು. ಮಾತೃಭಾಷೆಯನ್ನು ಕಡೆಗಣಿಸಿ ಇಂಗ್ಲಿಷನ್ನು ಕಲಿಸುವುದು ರಾಷ್ಟ್ರೀಯ ಆತ್ಮಹತ್ಯೆ. ಇನ್ನು ಅರ್ಥಶಾಸ್ತ್ರದ ಕಲಿಕೆಯನ್ನೇ ತೆಗೆದುಕೊಳ್ಳಿ. ಈಗ ಸರ್ಕಾರಿ ಸಂಸ್ಥೆಗಳಲ್ಲಿ ಅರ್ಥಶಾಸ್ತ್ರ ಕಲಿಸುವ ರೀತಿ ಕೆಟ್ಟದಾಗಿದೆ. ಪ್ರತಿ ದೇಶದ ಆರ್ಥಿಕತೆ ಭಿನ್ನವಾಗಿರುತ್ತದೆ.

ಜರ್ಮನಿಯ ಪಠ್ಯ ಪುಸ್ತಕಗಳು ಇಂಗ್ಲಿಷಿಗಿಂತ ಭಿನ್ನ. ಮುಕ್ತ ವ್ಯಾಪಾರ ಪದ್ಧತಿ ಇಂಗ್ಲೆಂಡಿಗೆ ಲಾಭದಾಯಕವಿರಬಹುದು. ಆದರೆ ಆ ಪದ್ಧತಿ ನಮ್ಮನ್ನು ನಾಶ ಮಾಡುತ್ತದೆ. ನಾವೀಗ ಇಂಡಿಯಾದ ಅರ್ಥಶಾಸ್ತ್ರವನ್ನು ರೂಪಿಸಿಕೊಳ್ಳಬೇಕು; ಹಾಗೆಯೇ ಇತಿಹಾಸ ಪಠ್ಯವನ್ನು ಕೂಡ ರೂಪಿಸಿಕೊಳ್ಳಬೇಕು...ನಿಜವಾದ ದೇಶಪ್ರೇಮಿಯೊಬ್ಬ ಮೂಲ ಆಕರಗಳನ್ನಾಧರಿಸಿ ಬರೆದ ಇಂಡಿಯಾದ ಚರಿತ್ರೆ ಇಂಗ್ಲಿಷ್ ಅಧಿಕಾರಿಯೊಬ್ಬ ಪ್ರಾಮಾಣಿಕವಾಗಿ ಬರೆದಿರಬಹುದಾದ ಚರಿತ್ರೆಗಿಂತ ಭಿನ್ನವಾಗಿರುತ್ತದೆ. ನಮ್ಮ ದೇಶದ ಘಟನೆಗಳನ್ನು ಅರಿಯುವಾಗ ಇಂಗ್ಲಿಷರ ಗ್ರಹಿಕೆಗಳನ್ನು ಒಪ್ಪಿಕೊಂಡು ನಾವು ದೊಡ್ಡ ತಪ್ಪು ಮಾಡಿದ್ದೇವೆ. ಈ ದೃಷ್ಟಿಯಿಂದ ನಮ್ಮ ಶಿಕ್ಷಕರು ಸ್ವಂತ ಸಂಶೋಧನೆ ಮಾಡಲು ಬಹು ದೊಡ್ಡ ಕ್ಷೇತ್ರವಿದೆ.

...ರಷ್ಯ ತನ್ನೆಲ್ಲ ವೈಜ್ಞಾನಿಕ ಬೆಳವಣಿಗೆಯನ್ನು ಇಂಗ್ಲಿಷ್ ಇಲ್ಲದೆಯೂ ಸಾಧಿಸಿದೆ. ಇಂಗ್ಲಿಷ್ ಇಲ್ಲದೆ ಇದನ್ನೆಲ್ಲ ಮಾಡಲಾಗುವುದಿಲ್ಲ ಎಂಬುದು ನಮ್ಮ ಮಾನಸಿಕ ಗುಲಾಮಗಿರಿ. ಅಂಥ ಸೋಲುಗಾರರ ಗುಂಪಿಗೆ ನಾನು ಸೇರುವವನಲ್ಲ.

ಮಹಿಳಾ ಶಿಕ್ಷಣ

ಗಂಡಸರ ಅನಕ್ಷರತೆಗೆ ಸೋಮಾರಿತನ, ಜಡತೆಗಳು ಕಾರಣವಾಗಿವೆ; ಆದರೆ ಈ ಅಂಶಗಳು ಮಹಿಳೆಯರ ಅನಕ್ಷರತೆಗೆ ಕಾರಣವಲ್ಲ. ತಲೆತಲಾಂತರಗಳಿಂದ ಸಂಪ್ರದಾಯವು ಮಹಿಳೆಯನ್ನು ಕೀಳರಿಮೆಯ ಸ್ಥಿತಿಯಲ್ಲಿ ಇರಿಸಿರುವ ಅನ್ಯಾಯವೇ ಅವಳ ಅನಕ್ಷರತೆಗೆ ಕಾರಣ. ಗಂಡು ಹೆಣ್ಣನ್ನು ತನ್ನ ಅರ್ಧಾಂಗಿಯೆಂದು ತಿಳಿಯದೆ, ಅವಳನ್ನು ಮನೆಯ ತೊತ್ತಾಗಿಸಿಕೊಂಡಿದ್ದಾನೆ; ಅವಳನ್ನು ತನ್ನ ಆನಂದದ ಸಾಧನವಾಗಿಸಿಕೊಂಡಿದ್ದಾನೆ. ಅದರ ಫಲವಾಗಿ ಸಮಾಜದ ಅರ್ಧಭಾಗಕ್ಕೆ ಲಕ್ವ ಹೊಡೆದಿದೆ. ಮಹಿಳೆಯನ್ನು ಮಾನವ ಜನಾಂಗದ ತಾಯಿ ಎಂದು ಕರೆದಿರುವುದೇನೋ ಸರಿ. ಆದರೆ ಅವಳಿಗೆ ಆಗಿರುವ ಪರಮ ಅನ್ಯಾಯವನ್ನು ಸರಿಪಡಿಸುವುದು ನಮ್ಮ ಮುಖ್ಯ ಹೊಣೆಯಾಗಿದೆ.

'ರಾಷ್ಟ್ರೀಯ' ಶಾಲೆಗಳು

'ಸ್ವರಾಜ್ಯ'ವನ್ನು ಗಳಿಸುವ ಆಶಯಗಳ ಹಿನ್ನೆಲೆಯಲ್ಲಿ ರೂಪುಗೊಂಡ 'ನ್ಯಾಶನಲ್ ಸ್ಕೂಲ್'ಗಳು ತಮ್ಮ ಹೆಸರಿಗೆ ಅರ್ಥ ತಂದುಕೊಡಬೇಕಾದರೆ ಮಾಡಬೇಕಾದ ಕೆಲಸ ಇದು: ಅವು ಶಿಕ್ಷಣ ಸಂಸ್ಥೆಗಳಿಗೆ ಸಾಧ್ಯವಾಗುವ ರೀತಿಯ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಮುಂದುವರಿಸುವ ಕೆಲಸ ಮಾಡಬೇಕು. ಉದಾಹರಣೆಗೆ, ಚರಕಾದ ಸಂದೇಶವನ್ನು, ಹಿಂದೂ-ಮುಸಲ್ಮಾನರನ್ನು ಒಟ್ಟಿಗೆ ತರುವ ಸಂದೇಶವನ್ನು,

ಪ್ರಚಾರ ಮಾಡುವ ಶಕ್ತ ಮಾಧ್ಯಮಗಳಾಗಬೇಕು. ಅಸ್ಪೃಶ್ಯರಿಗೆ ಶಿಕ್ಷಣ ಕೊಡುವ ಕೆಲಸವನ್ನು ಹಾಗೂ ಶಾಲೆಗಳಿಂದ ಅಸ್ಪೃಶ್ಯತೆಯ ಶಾಪವನ್ನು ಹೊಡೆದೋಡಿಸುವ ಕೆಲಸವನ್ನು ಮಾಡಬೇಕು.

('ಟುವರ್ಡ್ಸ್ ನ್ಯೂ ಎಜುಕೇಶನ್', ಪ್ರಭಾತ್ ಪ್ರಕಾಶನ್, ಹಾಗೂ ಇತರ ಬರಹಗಳಿಂದ.)

ಕನ್ನಡಕ್ಕೆ: ನಟರಾಜ್ ಹುಳಿಯಾರ್

೪೭

ಕಾನೂನು ಮತ್ತು ನ್ಯಾಯವಾದಿಗಳು

ಕೋರ್ಟು, ನ್ಯಾಯವಾದಿ, ನ್ಯಾಯಾಧೀಶ

ಸತ್ಯ ಮತ್ತು ಸೇವೆಗೆ ಮೊದಲ ಸ್ಥಾನ ನೀಡುವವನೇ ನಿಜವಾದ ಲಾಯರ್. ನಿಜವಾದ ಲಾಯರೊಬ್ಬ ತನ್ನ ವೃತ್ತಿಯಿಂದ ಬರುವ ಲಾಭಕ್ಕೆ ಎರಡನೇ ಸ್ಥಾನ ನೀಡುವನು. ವಕೀಲವೃತ್ತಿ ಸಟ್ಟಾ ವ್ಯಾಪಾರದಂತೆ ಆಗಬಾರದು. ಕಡುಬಡವನಿಗೂ ತಕ್ಕಮಟ್ಟಿನ ಶುಲ್ಕದಲ್ಲಿ ಅತ್ಯುನ್ನತ ಕಾನೂನು ಪ್ರತಿಭಾವಂತರ ಸೇವೆ ದೊರೆಯುವಂತಿರಬೇಕು. ಆದರೆ ನಾವು ಇಂಗ್ಲಿಷ್ ಲಾಯರ್‌ಗಳ ಪದ್ಧತಿಯನ್ನೇ ಅನುಕರಣೆ ಮಾಡುತ್ತಿದ್ದೇವೆ; ಅಷ್ಟೇ ಅಲ್ಲ, ಅವರನ್ನು ಅತಿಯಾಗಿ ಅನುಸರಿಸತೊಡಗಿದ್ದೇವೆ. ಇಂಗ್ಲಿಷ್ ಲಾಯರುಗಳ ಸರಿಸಮಾನರಾಗಬೇಕೆಂದರೆ ಅವರಷ್ಟೇ ಕೊಲೆಗಡುಕ ಶುಲ್ಕವನ್ನು ವಿಧಿಸಬೇಕೆಂದು ನಾವೂ ಭಾವಿಸತೊಡಗಿದ್ದೇವೆ...ಅಷ್ಟೇ ಮುಖ್ಯವಾದ ಮತ್ತೊಂದು ಅಂಶವೂ ಇದೆ: ಈಗ ಕೋರ್ಟುಗಳನ್ನು ಅತ್ಯಂತ ದುಬಾರಿ ವೆಚ್ಚದಲ್ಲಿ ನಡೆಸಲಾಗುತ್ತಿದೆ. ಹೀಗಾಗಿ ಜನರ ಆರ್ಥಿಕ ಸ್ಥಿತಿಗತಿಗೂ ತಮಗೂ ಸಂಬಂಧವಿಲ್ಲವೆಂಬಂತೆ ಕೋರ್ಟಿನ ವಲಯಗಳು ವರ್ತಿಸುತ್ತಿವೆ. ದಕ್ಷಿಣ ಆಫ್ರಿಕಾದ ಅತ್ಯುತ್ತಮ ಲಾಯರುಗಳು ಕೂಡ ಇಂಡಿಯಾದ ಲಾಯರುಗಳಷ್ಟು ದುಬಾರಿ ಶುಲ್ಕ ವಿಧಿಸುವುದಿಲ್ಲ... ಬ್ರಿಟಿಷ್ ಕೋರ್ಟುಗಳಲ್ಲಿ ನ್ಯಾಯ ದುಬಾರಿ ಭೋಗವಸ್ತುವಾಗಿದೆ. ಈ ಕೋರ್ಟುಗಳಲ್ಲಿ ಬಹಳಷ್ಟು ಸಲ 'ಉದ್ದನೆಯ ಜೇಬು ಗೆಲ್ಲುತ್ತದೆ.'

...ಇದೇ ಸಂದರ್ಭದಲ್ಲಿ ಫಿರೋಜ್ ಶಾ ಮೆಹ್ತಾ, ರಾನಡೆ, ತ್ಯಾಬ್‌ಜಿ, ತೆಲ್ಮಾಗ್, ಮನಮೋಹನ್ ಘೋಷ್, ಕೃಷ್ಣಸ್ವಾಮಿ ಅಯ್ಯರ್ ಮುಂತಾದ ಮೇಧಾವಿ ಲಾಯರುಗಳು ನಮ್ಮ ದೇಶಕ್ಕೆ ಸಲ್ಲಿಸಿರುವ ಸೇವೆಯನ್ನು ಎಂದೂ ಮರೆಯಲಾರೆ. ಹಾಗೆಯೇ ಈಗ ನಮ್ಮೊಡನೆ ಇರುವ ಲಾಯರುಗಳ ಸೇವೆಯನ್ನು ಕೂಡ

ಮರೆಯಲಾರೆ. ಯಾರಿಗೂ ಮಾತಾಡಲು ಧೈರ್ಯವಿಲ್ಲದ ಕಾಲದಲ್ಲಿ ಇವರೆಲ್ಲರೂ ಜನರ ದನಿಯಾಗಿ, ದೇಶದ ಸ್ವಾತಂತ್ರ್ಯದ ಕಾವಲುಗಾರರಾಗಿ ಕೆಲಸ ಮಾಡಿದ್ದಾರೆ...

ಬ್ರಾಹ್ಮಣನೊಬ್ಬ ಆಧ್ಯಾತ್ಮಿಕ ಜ್ಞಾನವುಳ್ಳವನಾಗಿರಬೇಕೆಂದು ಜನರು ನಿರೀಕ್ಷಿಸುವ ಹಾಗೆಯೇ ಲಾಯರೊಬ್ಬ ದೇಶಭಕ್ತನಾಗಿರಬೇಕೆಂದು ಕೂಡ ನಿರೀಕ್ಷಿಸುತ್ತಾರೆ. ಲಾಯರೊಬ್ಬ ತನ್ನ ವೃತ್ತಿಯ ಕಾರಣದಿಂದಾಗಿಯೇ ಜನರ ಹಕ್ಕುಗಳ ಪ್ರತಿಪಾದಕನಾಗಿರುತ್ತಾನೆ, ಕಾನೂನು ಮತ್ತು ರಾಜಕೀಯದಲ್ಲಿ ಪರಿಣತಿ ಸಾಧಿಸಿರುತ್ತಾನೆ, ಹಾಗೂ ಪ್ರಭುತ್ವದ ದಮನಕ್ಕೆ ಬಲಿಯಾಗುವವರನ್ನು ಪಾರು ಮಾಡುತ್ತಾನೆ ಎಂಬ ನಿರೀಕ್ಷೆ ಜನರಲ್ಲಿರುತ್ತದೆ.

...ಲಾಯರುಗಳು ಜನರಿಗಾಗಿ ಕಾನೂನುಗಳನ್ನು ವ್ಯಾಖ್ಯಾನ ಮಾಡುತ್ತಾರೆ. ಆ ಮೂಲಕವೂ ಪ್ರಭುತ್ವವನ್ನು ಬೆಂಬಲಿಸುತ್ತಾರೆ. ಆದ್ದರಿಂದಲೇ ಅವರನ್ನು ಕೋರ್ಟ್ ಆಫೀಸರುಗಳೆಂದು ಕರೆಯುವುದು. ಈಗ ರಾಷ್ಟ್ರೀಯ ಅಸಹಕಾರ ಚಳುವಳಿಯಲ್ಲಿ ಪಾಲ್ಗೊಳ್ಳಬಯಸುವ ಲಾಯರುಗಳು ತಮ್ಮ ವಕೀಲ ವೃತ್ತಿಯ ಪ್ರಾಕ್ಟೀಸನ್ನು ಕೆಲಕಾಲವಾದರೂ ಅಮಾನತ್ತಿನಲ್ಲಿಡಬೇಕು. ...ಲಾಯರುಗಳು ಸರ್ಕಾರದ ವಿರುದ್ಧ ಉಗ್ರ ಹೋರಾಟ ಮಾಡುವವರ ಮುಂಚೂಣಿಯಲ್ಲಿದ್ದಾರೆ ಎಂದು ಹೇಳುವುದುಂಟು. ಕೆಲ ಮಟ್ಟಿಗೆ ಅದು ನಿಜ. ಆದರೆ ದೇಶವು ಸರ್ಕಾರವನ್ನು ನಿಸ್ಸತ್ವಗೊಳಿಸಲು ಬಯಸಿದಾಗ, ಅಂಥ ಸರ್ಕಾರದ ಇಚ್ಛಾಶಕ್ತಿಯನ್ನು ಮಣಿಸಲು ಲಾಯರುಗಳು ತಮ್ಮ ಪ್ರಾಕ್ಟೀಸನ್ನು ಅಮಾನತ್ತಿನಲ್ಲಿಡಬೇಕು... ಲಾಯರುಗಳು ಪ್ರಾಕ್ಟೀಸನ್ನು ಕೈಬಿಡುವುದೆಂದರೆ ತಮ್ಮ ವೃತ್ತಿಯನ್ನು ಸ್ಥಗಿತಗೊಳಿಸಬೇಕೆಂದು ಅರ್ಥವಲ್ಲ, ಅಥವಾ ವಿಶ್ರಾಂತಿ ಪಡೆಯಬೇಕೆಂದೂ ಅಲ್ಲ. ಲಾಯರುಗಳು ತಮ್ಮ ಕಕ್ಷಿದಾರರು ಕೂಡ ಕೋರ್ಟುಗಳನ್ನು ಬಹಿಷ್ಕರಿಸುವಂತೆ ಅವರ ಮನವೊಲಿಸಬೇಕು. ಮಧ್ಯಸ್ಥರ ಮೂಲಕ ವ್ಯಾಜ್ಯ ತೀರ್ಮಾನ ಮಾಡುವ ಆರ್ಬಿಟ್ರೇಶನ್ (ನ್ಯಾಯ ಪಂಚಾಯಿತಿ) ಬೋರ್ಡುಗಳನ್ನು ಇನ್ನಷ್ಟು ಉತ್ತಮಪಡಿಸಿ ವ್ಯಾಜ್ಯಗಳನ್ನು ಕೋರ್ಟಿನ ಹೊರಗೆ ಬಗೆಹರಿಸಬೇಕು. ನ್ಯಾಯ ಕೊಡಲೊಲ್ಲದ ಸರ್ಕಾರವನ್ನು ನ್ಯಾಯಕ್ಕಾಗಿ ಆಗ್ರಹಿಸುತ್ತಿರುವ ಈ ದೇಶದ ಜನರಿಗೆ ಪರಸ್ಪರ ಜಗಳಗಳಲ್ಲಿ ಮುಳುಗಲು ಸಮಯವೆಲ್ಲಿದೆ? ಈ ಸತ್ಯವನ್ನು ಲಾಯರುಗಳು ತಮ್ಮ ಕಕ್ಷಿದಾರರಿಗೆ ಮನವರಿಕೆ ಮಾಡಿಕೊಡಬೇಕು. ಕಳೆದ ಮಹಾಯುದ್ಧದ ಕಾಲದಲ್ಲಿ ಇಂಗ್ಲೆಂಡಿನ ಪ್ರಖ್ಯಾತ ಲಾಯರುಗಳು ತಮ್ಮ ವೃತ್ತಿಯನ್ನು ಅಮಾನತ್ತಿನಲ್ಲಿಟ್ಟಿದ್ದರೆಂಬ ವಿಷಯ ಅನೇಕರಿಗೆ ಗೊತ್ತಿರಲಿಕ್ಕಿಲ್ಲ.

...ಸರಿ, ಲಾಯರುಗಳು ತಮ್ಮ ಪ್ರಾಕ್ಟೀಸನ್ನು ಅಮಾನತ್ತಿನಲ್ಲಿಟ್ಟರೆ ಕಾನೂನು ಸುವ್ಯವಸ್ಥೆಯ ಕತೆಯೇನಾಗುತ್ತದೆ ಎಂಬ ಪ್ರಶ್ನೆ ಏಳುತ್ತದೆ. ಆಗ ನಾವು ಈ ಲಾಯರುಗಳ ಮೂಲಕವೇ ಕಾನೂನು ಸುವ್ಯವಸ್ಥೆಯನ್ನು ಕಾಪಾಡೋಣ. ನ್ಯಾಯ ಪಂಚಾಯಿತಿ ಕೋರ್ಟುಗಳನ್ನು ಎಲ್ಲೆಡೆ ಸ್ಥಾಪಿಸೋಣ. ಆ ಮೂಲಕ ಪರಿಶುದ್ಧವಾದ, ಸರಳವಾದ, ಈ ನೆಲದ ನ್ಯಾಯವನ್ನು, ಸ್ವದೇಶಿ ನ್ಯಾಯವನ್ನು ನಮ್ಮ ದೇಶವಾಸಿಗಳಿಗೆ ನೀಡೋಣ. ಲಾಯರುಗಳು ತಮ್ಮ ಪ್ರಾಕ್ಟೀಸನ್ನು ಅಮಾನತ್ತಿನಲ್ಲಿಡುವುದು ಎಂದರೆ ಇದೇ ಅರ್ಥ. ತಾತ್ಕಾಲಿಕವಾಗಿ ವೃತ್ತಿ ಬಿಟ್ಟ ಲಾಯರುಗಳು ಆಗ ಪೂರ್ಣಾವಧಿ ಕೆಲಸಗಾರರಾಗಬೇಕಾಗುತ್ತದೆ.

ರಾಷ್ಟ್ರೀಯ ಚಳುವಳಿ ಮತ್ತು ನ್ಯಾಯವಾದಿಗಳು

ಅಸಹಕಾರ ಚಳುವಳಿ ಕುರಿತು ವಿಶ್ವಾಸವಿದ್ದರೂ ಯಾವ್ಯಾವುದೋ ಕಾರಣಗಳಿಗಾಗಿ ಈ ಚಳುವಳಿಯಲ್ಲಿ ಭಾಗಿಯಾಗದಿರುವ ಲಾಯರುಗಳು ತಂತಮ್ಮ ವಲಯಗಳಲ್ಲೇ, ಮೌನವಾಗಿಯೇ, ಸ್ವದೇಶಿ ಚಳುವಳಿಯ ಮುಂದಾಳುಗಳಾಗಿ ತಮ್ಮ ಕೆಲಸ ಮಾಡಬಹುದು. ವೃತ್ತಿನಿರತ ಲಾಯರೊಬ್ಬ ಕೋರ್ಟಿನಲ್ಲೂ ಖಾದಿ ಧರಿಸುವ ಮೂಲಕ ಖಾದಿಯನ್ನು ಜನಪ್ರಿಯಗೊಳಿಸಬಾರದೇಕೆ? ಲಾಯರ್ ಮತ್ತು ಅವನ ಕುಟುಂಬದವರು ಯಾಕೆ ಬಿಡುವಿನ ವೇಳೆಯಲ್ಲಿ ಚರಕದಿಂದ ನೂಲಬಾರದು? ತನ್ನ ವೃತ್ತಿಯನ್ನು ಬಿಡಲೊಲ್ಲದ ಲಾಯರ್ ಚಳುವಳಿಗೆ ಧನಸಹಾಯ ಮಾಡಬಹುದು. ತನ್ನ ಬಿಡುವಿನ ವೇಳೆಯನ್ನು ಸಾರ್ವಜನಿಕ ಸೇವೆಗಾಗಿ ಮೀಸಲಿಡಬಹುದು. ತನ್ನ ವೃತ್ತಿಯಲ್ಲಿ ಪ್ರಾಮಾಣಿಕತೆ ಹಾಗೂ ನ್ಯಾಯಯುತ ವ್ಯವಹಾರವನ್ನು ಅಳವಡಿಸಿಕೊಳ್ಳಬಹುದು. ಕಕ್ಷಿದಾರರನ್ನು ತನ್ನ ಧನದಾಹದ ಬಲಿಪಶುಗಳನ್ನಾಗಿ ಮಾಡುವ ರೂಢಿಗೆ ಕೊನೆ ಹೇಳಬಹುದು. ದಲ್ಲಾಳಿಗಳನ್ನು ದೂರವಿಡಬಹುದು. ಕೋರ್ಟಿನ ಹೊರಗೆ ಪಂಚಾಯಿತಿ ಮಾಡಿ ವ್ಯಾಜ್ಯ ಬಗೆಹರಿಸಬಹುದು...

...ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವುದರಿಂದ ತಮ್ಮ ವಕೀಲ ವೃತ್ತಿಯ ಸನ್ನದು ಹೋಗುತ್ತದೆಂಬ ಭಯದಿಂದ ಹೊರ ಬರುವ ಲಾಯರುಗಳು ತಂತಮ್ಮ ಜಿಲ್ಲೆಗಳಲ್ಲಿ ಹಲವು ವಿಧದ ಕೆಲಸಗಳನ್ನು ಮಾಡಬಹುದು:

೧. ಸಾರ್ವಜನಿಕ ನಿಧಿಯ ಲೆಕ್ಕ ಇಡುವುದು
೨. ಜನರಿಗೆ ಕಾನೂನಿನ ಸೂಕ್ಷ್ಮಾತಿಸೂಕ್ಷ್ಮಗಳನ್ನು ವಿವರಿಸುವುದು
೩. ಬೇಕಾಬಿಟ್ಟಿ ವಿಚಾರಣೆಗೆ ಈಡಾಗಿರುವ ನಾಗರಿಕ ಅವಿಧೇಯತೆಯ ಪ್ರಕರಣಗಳನ್ನು ಪರಿಶೀಲಿಸಿ, ಅವನ್ನು ಬೆಳಕಿಗೆ ತರುವುದು

೪. ಎಲ್ಲಿ ಹಿಂಸೆ ಜರುಗುವ ಆತಂಕವಿದೆಯೋ ಅಲ್ಲಿ ಹಾಜರಿರುವುದು
೫. ಅಧಿಕಾರವನ್ನು ಸ್ವೇಚ್ಛೆಯಿಂದ ಬಳಸಿದ ಎಲ್ಲ ಬಗೆಯ ಪ್ರಕರಣಗಳನ್ನೂ ಜನರಿಗೆ ವಿವರಿಸುವುದು
೬. ಈ ಕಾಲದಲ್ಲಿ ಜರುಗುತ್ತಿರುವ ಅನ್ಯಾಯಗಳನ್ನು ವಿಚಾರಣೆಗೆ ಒಳಪಡಿಸುವುದು ಹಾಗೂ ಸರ್ಕಾರದ ಕೆಟ್ಟ ಕೆಲಸಗಳನ್ನು ಜನರಿಗೆ ಬಿಡಿಸಿ ಹೇಳುವುದು
೭. ಖಾದಿ ತಯಾರಿಕೆಯಲ್ಲಿ ಸಹಾಯ ಮಾಡುವುದು
೮. ವಿದೇಶಿ ಬಟ್ಟೆಯ ಬಹಿಷ್ಕಾರ ಕಾರ್ಯದಲ್ಲಿ ಮಹಿಳೆಯರಿಗೆ ನೆರವಾಗುವುದು
೯. ಎಲ್ಲ ಪ್ರಾಂತಗಳಲ್ಲೂ ಬಹಳಷ್ಟು ಮುಂಚೂಣಿ ನಾಯಕರು ಬಂಧನಕ್ಕೊಳಗಾಗಿರುವುದರಿಂದ ಲಾಯರುಗಳು ಚಳುವಳಿಯಲ್ಲಿ ಜನರನ್ನು ಮುನ್ನಡೆಸಬಹುದು ಹಾಗೂ ನಿರ್ಭಯತೆಯ ವಾತಾವರಣವನ್ನು ಉಳಿಸಿಕೊಳ್ಳಲು ಜನರಿಗೆ ಒತ್ತಾಸೆಯಾಗಬಹುದು.

ಇಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ಕೊಟ್ಟಿದ್ದೇನೆ. ಸೇವೆಯಲ್ಲಿ ಪೂರ್ಣ ಆಸಕ್ತಿಯಿರುವವರು ಇನ್ನೂ ಯಾವ್ಯಾವ ಕ್ಷೇತ್ರಗಳಲ್ಲಿ ತಾವು ಕೆಲಸ ಮಾಡಬಹುದು ಎಂಬುದನ್ನು ಯೋಚಿಸಬಲ್ಲರು.

ಕಾನೂನು ವೃತ್ತಿಯ ಉದಾತ್ತೀಕರಣ

ಕಾನೂನು ವಿದ್ಯಾರ್ಥಿಗಳು: ಕಾನೂನು ವೃತ್ತಿಯನ್ನು ಉದಾತ್ತೀಕರಣ ಮಾಡುವುದು ಹೇಗೆ?

ಗಾಂಧೀಜಿ: ನೀವು ಈ ಪ್ರಶ್ನೆ ಕೇಳಿದ್ದು ಸಂತೋಷ. ಈ ವಿಷಯದ ಬಗ್ಗೆ ನಾನು ಅಧಿಕೃತವಾಗಿ ಮಾತಾಡದಿದ್ದರೆ ಬೇರಾರೂ ಮಾತಾಡಲಾರರು ಎಂದು ಹೇಳಬಲ್ಲೆ. ಯಾಕೆಂದರೆ ನನ್ನ ಇಡೀ ಕಾನೂನು ವೃತ್ತಿಯಲ್ಲಿ ನಾನು ಒಂದು ಸಲವೂ ಕಟ್ಟುನಿಟ್ಟಿನ ಸತ್ಯದ ಹಾದಿಯನ್ನಾಗಲೀ, ಪ್ರಾಮಾಣಿಕತೆಯ ಹಾದಿಯನ್ನಾಗಲೀ ಬಿಟ್ಟವನಲ್ಲ. ನೀವು ವಕೀಲ ವೃತ್ತಿಯನ್ನು ಉದಾತ್ತೀಕರಿಸಲು ಬಯಸುವುದಾದರೆ ಮಾಡಬೇಕಾದ ಮೊದಲ ಕೆಲಸ ಇದು: ನಿಮ್ಮ ವೃತ್ತಿಯನ್ನು ಹಣಕ್ಕೆ ಎಂದೂ ಅಡಿಯಾಳಾಗಿಸದೆ, ನಿಮ್ಮ ವೃತ್ತಿಯನ್ನು ದೇಶದ ಸೇವೆಯೆಂದು ನಡೆಸಿ. ತಮ್ಮ ಸ್ವಂತ ಹಿತಗಳನ್ನು ತ್ಯಾಗ ಮಾಡಿ ಜೀವನ ನಡೆಸಿದ, ಆ ಮೂಲಕ ಬಹುತೇಕ ಬಡತನವನ್ನೂ ಎದುರಿಸಬೇಕಾಗಿ ಬಂದ ಉಜ್ವಲ ನ್ಯಾಯವಾದಿ ಪ್ರತಿಭೆಗಳು ಎಲ್ಲ ದೇಶಗಳಲ್ಲೂ ಇವೆ. ಇಂಡಿಯಾದಲ್ಲಿ ಮನಮೋಹನ್ ಘೋಷ್ ಅವರ ಉದಾಹರಣೆಯನ್ನೇ ತೆಗೆದುಕೊಳ್ಳಿ. ಅವರು ನೀಲಿ ಬೆಳೆಯ ಜಮೀನ್ದಾರರ ವಿರುದ್ಧದ ಹೋರಾಟವನ್ನು ಕೈಗೆತ್ತಿಕೊಂಡರು.

ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ, ಪ್ರಾಣಭಯಕ್ಕೂ ಜಗ್ಗದೆ, ತಮ್ಮ ಶ್ರಮಕ್ಕಾಗಿ ನಯಾಪೈಸೆಯನ್ನೂ ತೆಗೆದುಕೊಳ್ಳದೆ, ಬಡ ಕಕ್ಷಿದಾರರ ಪರವಾಗಿ ಹೋರಾಡಿದರು. ಅವರು ಅತ್ಯಂತ ಮೇಧಾವಿ ಲಾಯರಾಗಿದ್ದರೂ, ಬಹುದೊಡ್ಡ ಲೋಕೋಪಕಾರಿಯೂ ಆಗಿದ್ದರು. ಇದು ನಿಮ್ಮೆದುರು ಇರುವ ಒಂದು ಮಾದರಿ.

ಅದೇ ರೀತಿಯಲ್ಲಿ, ಜಾನ್ ರಸ್ಕಿನ್ ಅವರ 'ಅನ್ ಟು ದಿಸ್ ಲಾಸ್ಟ್' ಪುಸ್ತಕದ ನ್ಯಾಯಬೋಧೆಯನ್ನು ಕೂಡ ನೀವು ಅನುಸರಿಸಬಹುದು: ಒಬ್ಬ ಬಡಗಿ ತನ್ನ ಕೆಲಸಕ್ಕೆ ಹದಿನೈದು ಶಿಲ್ಲಿಂಗ್ ಹಣ ಕೂಡ ಪಡೆಯದಿರುವ ಸಂದರ್ಭದಲ್ಲಿ ಒಬ್ಬ ಲಾಯರ್ ತನ್ನ ಕೆಲಸಕ್ಕಾಗಿ ಹದಿನೈದು ಪೌಂಡ್ ಯಾಕೆ ಶುಲ್ಕ ವಿಧಿಸಬೇಕು? ಈಗ ಎಲ್ಲೆಡೆ ಲಾಯರುಗಳು ವಿಧಿಸುತ್ತಿರುವ ಶುಲ್ಕ ಊಹೆಗೂ ನಿಲುಕದಷ್ಟಿದೆ. ಹಿಂದೆ ಸ್ವತಃ ನಾನೇ ದುಬಾರಿ ಶುಲ್ಕ ವಿಧಿಸಿದ್ದೆನೆಂದು ಈಗ ಒಪ್ಪಿಕೊಳ್ಳುತ್ತೇನೆ. ಆದರೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ: ನಾನು ಲಾಯರ್ ವೃತ್ತಿಯಲ್ಲಿ ತೊಡಗಿದ್ದಾಗ ಕೂಡ, ನನ್ನ ವೃತ್ತಿ ಎಂದೂ ನನ್ನ ಸಾರ್ವಜನಿಕ ಸೇವೆಗೆ ಅಡ್ಡಿಯಾಗಲು ಬಿಡಲಿಲ್ಲ.

ಕೋರ್ಟುಗಳಿಲ್ಲದಿದ್ದರೆ...

ಒಂದು ವೇಳೆ ಕೋರ್ಟುಗಳು ಹಾಗೂ ಲಾಯರುಗಳ ಸಮ್ಮೋಹಿನಿಗೆ ನಾವು ಒಳಗಾಗಿರದಿದ್ದರೆ, ದಲ್ಲಾಳಿಗಳು ಈ ಕೋರ್ಟುಗಳ ಜೌಗು ಭೂಮಿಗೆ ನಮ್ಮನ್ನು ದೂಡದಿದ್ದರೆ, ಅವರು ನಮ್ಮ ನಿಕೃಷ್ಟ ಭಾವನೆಗಳನ್ನು ಉದ್ರೇಕಿಸುವ ಕೆಲಸ ಮಾಡದೇ ಇದ್ದಿದ್ದರೆ, ಈಗಿರುವುದಕ್ಕಿಂತ ನೆಮ್ಮದಿಯ ಜೀವನ ನಮ್ಮದಾಗಿರುತ್ತಿತ್ತು ಎಂಬುದು ನನ್ನ ನಂಬಿಕೆ. ನಿತ್ಯ ಕೋರ್ಟುಗಳಿಗೆ ಎಡತಾಕುವ ಸೂಕ್ಷ್ಮ ಮನಸ್ಸಿನವರು ಇಡೀ ಕೋರ್ಟಿನ ವಾತಾವರಣ ಕೊಳಕು ವಾಸನೆಯಿಂದ ತುಂಬಿದೆ ಎಂಬುದನ್ನು ಸಾರಿ ಹೇಳಬೇಕು. ಗೆಳೆತನದ ಕಾರಣದಿಂದಲೋ, ಹಣದ ಆಸೆಯಿಂದಲೋ ಸುಳ್ಳು ಸಾಕ್ಷಿ ಹೇಳುವವರು ಎರಡೂ ಕಡೆ ಇದ್ದೇ ಇರುತ್ತಾರೆ. ಆದರೆ ಕೋರ್ಟುಗಳ ವಲಯದಲ್ಲಿ ಇದಕ್ಕಿಂತ ಕೆಟ್ಟ ಮುಖ ಒಂದಿದೆ: ಅದೇನೆಂದರೆ, ಈ ವಲಯ ಸರ್ಕಾರದ ಅಧಿಕಾರವನ್ನು ಬೆಂಬಲಿಸುತ್ತಿರುತ್ತದೆ. ಕೋರ್ಟುಗಳು ನ್ಯಾಯ ಒದಗಿಸುತ್ತಿರಬೇಕು. ಆ ಕಾರಣದಿಂದಲೇ ಕೋರ್ಟುಗಳನ್ನು ರಾಷ್ಟ್ರೀಯ ಸ್ವಾತಂತ್ರ್ಯದ ವೀರರಕ್ಷಕರು ಎಂದು ಕರೆಯುವುದು. ಆದರೆ ಕೋರ್ಟುಗಳು ಅನೈತಿಕವಾದ ಸರ್ಕಾರವನ್ನು ಬೆಂಬಲಿಸಿದಾಗಲೆಲ್ಲ ಒಂದು ರಾಷ್ಟ್ರದ ಅಂತಸ್ಸತ್ವವನ್ನೇ ಹೊಸಕಿ ಹಾಕುತ್ತವೆ. ಪಂಜಾಬಿನ ನ್ಯಾಯಪೀಠಗಳು ಹಾಗೂ ಕ್ಷಿಪ್ರ ನ್ಯಾಯಾಡಳಿತಗಳು ಮಾಡಿದ್ದು ಇದನ್ನೇ. ಇದೆಲ್ಲದರ ನಗ್ನ ಸ್ವರೂಪವನ್ನು ನಾವೆಲ್ಲ ನೋಡಿದ್ದೇವೆ.

ಇಂಡಿಯಾದಲ್ಲಿ ಮಾಡಿದ ಬರ್ಬರ ಹತ್ಯೆಗಳಿಗಾಗಿ ಒಬ್ಬನೇ ಒಬ್ಬ ಇಂಗ್ಲಿಷ್ ವ್ಯಕ್ತಿಗಾದರೂ ಉಗ್ರ ಶಿಕ್ಷೆಯಾಗಿದೆಯೆ?

ಇಂಗ್ಲಿಷ್ ನ್ಯಾಯಾಧೀಶರು ಹಾಗೂ ಇಂಗ್ಲಿಷ್ ಸರ್ಕಾರಿ ವಕೀಲರನ್ನು ಓಡಿಸಿ, ಅವರ ಜಾಗಕ್ಕೆ ಭಾರತೀಯರು ಬಂದ ತಕ್ಷಣ ಪರಿಸ್ಥಿತಿ ಬದಲಾಗುತ್ತದೆ ಎಂದೇನೂ ಭಾವಿಸಬೇಡಿ. ಇಂಗ್ಲಿಷ್ ಜನ ಮೂಲತಃ ಭ್ರಷ್ಟರೇನಲ್ಲ; ಹಾಗೆಯೇ, ಭಾರತೀಯರೂ ದೇವತೆಗಳೇನಲ್ಲ. ಇಬ್ಬರೂ ತಂತಮ್ಮ ಪರಿಸರಕ್ಕೆ ಶರಣಾಗುವವರೇ. ಮಿಲಿಟರಿ ಕಾನೂನಿನ (ಮಾರ್ಷಲ್ ಲಾ) ರಾಜ್ಯಭಾರದಲ್ಲಿ ಇಂಗ್ಲಿಷ್ ನ್ಯಾಯಾಧೀಶರು ಮಾಡಿದಷ್ಟೇ ಪಾಪಕೃತ್ಯವನ್ನು ಭಾರತೀಯ ನ್ಯಾಯಾಧೀಶರೂ ಮಾಡಿದ್ದಾರೆ. ಅಮೃತಸರದಲ್ಲಿ ಮುಗ್ಧ ಹೆಂಗಸರ ಮೇಲೆ ಚಿತ್ರಹಿಂಸೆ ಎಸಗಿದವರು ಭಾರತೀಯರು; ಅತ್ತ ಮನಿಯನ್‌ವಾಲಾ ಊರಿನಲ್ಲಿ ಮಹಿಳೆಯರನ್ನು ಅವಹೇಳನ ಮಾಡಿದವನು ಬಾಸ್ವರ್ತ್ ಸ್ಮಿತ್. ನಾನು ದೂಷಿಸುತ್ತಿರುವುದು ಈ ವ್ಯವಸ್ಥೆಯನ್ನೇ ಹೊರತು, ಇಂಗ್ಲಿಷರನ್ನಲ್ಲ. ಅವರ ಜೊತೆಗೆ ನನ್ನದೇನೂ ಜಗಳವಿಲ್ಲ...ಆದರೆ ರಾಕ್ಷಸ ತನ್ನ ಕೃತ್ಯಗಳನ್ನು ಜಾರಿಗೊಳಿಸಲು ಒಂದು ಬಗೆಯ ನೈತಿಕ ಸಾಧನಗಳನ್ನೂ, ನೈತಿಕ ನಡವಳಿಕೆಯ ಭಾಷೆಯನ್ನೂ ಬಳಸುತ್ತಿರುತ್ತಾನೆ; ಆ ಮೂಲಕ ತನ್ನ ಉದ್ದೇಶಗಳಿಗೆ ಒಂದು ಬಗೆಯ ಗೌರವದ ಸ್ಪರ್ಶ ಕೊಡಲೆತ್ನಿಸುತ್ತಾನೆ.

...ಈ ದೃಷ್ಟಿಯಿಂದ ನೋಡಿದಾಗ, ನ್ಯಾಯದ ಅರಮನೆಗಳೆಂದು ಕರೆಯಲ್ಪಡುವ ಸ್ಥಳಗಳ ಬಗ್ಗೆ ನಮ್ಮ ಲಾಯರುಗಳು ಹಾಗೂ ನ್ಯಾಯಾಧೀಶರು ಅಂಧಶ್ರದ್ಧೆ ಹಾಗೂ ಭಯಭಕ್ತಿಗಳನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದರೆ ನಮ್ಮ ಸ್ವಾತಂತ್ರ್ಯ ಹೋರಾಟದ ಗುರಿ ಈಡೇರುವುದಿಲ್ಲ. ಈ ಕೋರ್ಟುಗಳಿಲ್ಲದಿದ್ದರೆ ಬ್ರಿಟಿಷ್ ಸರ್ಕಾರ ಒಂದೇ ದಿನದಲ್ಲಿ ಉರುಳಿ ಬೀಳುವುದು... ಆದ್ದರಿಂದಲೇ ಈ ಕಾಲದಲ್ಲಿ ತನ್ನ ಪ್ರಾಕ್ಟೀಸನ್ನು ಅಮಾನತ್ತಿನಲ್ಲಿಡುವ ಲಾಯರುಗಳು ದೇಶದ ಸ್ವಾತಂತ್ರ್ಯ ಸಾಧನೆಗೆ ತಮ್ಮದೇ ಆದಂಥ ಸೇವೆ ಸಲ್ಲಿಸಬಲ್ಲರು.

ಅಹವಾಲು ಬರೆಯುವ ಬರಹಗಾರರಿಗೆ

ಅಹವಾಲುಗಳನ್ನು ಬರೆಯುವ ಅಥವಾ ಇಂಥ ಇನ್ನಿತರ ಕೆಲಸಗಳ ಮೂಲಕ ಸಾರ್ವಜನಿಕ ಹಿತಾಸಕ್ತಿಯ ಕೆಲಸ ಮಾಡುವ ತರುಣ ದೇಶಭಕ್ತರಿಗೆ ನನ್ನ ಅಮೂಲ್ಯ ಅನುಭವವೊಂದನ್ನು ಹೇಳುತ್ತೇನೆ. ಗೋಪಾಲಕೃಷ್ಣ ಗೋಖಲೆ ಹಾಗೂ ದಾದಾಬಾಯಿ ನವರೋಜಿಯವರ ಜೊತೆಗೆ ಕೆಲಸ ಮಾಡುವ ಸದವಕಾಶ ನನಗೆ ಸಿಕ್ಕಿತ್ತು. ಆ ಇಬ್ಬರೂ ನನಗೆ ಹೇಳಿಕೊಟ್ಟ ಪಾಠ ಇದು: 'ನೀನು ಬರೆದ ಅಹವಾಲನ್ನು [ಸಂಬಂಧಪಟ್ಟವರು] ಕೇಳಿಸಿಕೊಳ್ಳಬೇಕೆಂದರೆ, ನಿನ್ನ ಬರಹ ಸಂಕ್ಷಿಪ್ತವಾಗಿರಬೇಕು.

ವಾಸ್ತವ ಸಂಗತಿಗಳಿಗೆ ನಿಷ್ಠವಾಗಿರಬೇಕು. ವಿಷಯಕ್ಕೆ ಎಷ್ಟು ಬೇಕೋ ಅಷ್ಟು ಅಂಶಗಳನ್ನು ಮಾತ್ರ ಬರೆಯಬೇಕು. ನೀನು ಬರೆಯುತ್ತಿರುವ ವಿಷಯದಿಂದ ದೂರ ಸಾಗಿ ಏನನ್ನೂ ಬರೆಯಬಾರದು. ಅತಿಯಾದ ಗುಣವಾಚಕಗಳನ್ನು ಬಳಸಬಾರದು.'

ಈ ನಿಟ್ಟಿನ ನನ್ನ ಪ್ರಯತ್ನಗಳಲ್ಲಿ ನನಗೇನಾದರೂ ಒಂದಿಷ್ಟು ಯಶಸ್ಸು ಸಿಕ್ಕಿದ್ದರೆ ನಾನು ಈ ಮಹನೀಯರ ಚಿನ್ನದಂಥ ಬುದ್ಧಿವಾದಕ್ಕೆ ಅಂಟಿಕೊಂಡಿರುವುದು ಕೂಡ ಕಾರಣ.

('ದ ಲಾ ಅಂಡ್ ದ ಲಾಯರ್ಸ್' ಪುಸ್ತಕದಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

ಟಿಪ್ಪಣಿ

ಗಾಂಧೀಜಿ ಸುಮಾರು ಇಪ್ಪತ್ತು ವರ್ಷಗಳ ಕಾಲ ಲಾಯರ್ ಆಗಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಅವರ ನ್ಯಾಯವಾದಿ ವೃತ್ತಿ ಕೋರ್ಟಿನ ಆವರಣದಲ್ಲಿ, ಸಾರ್ವಜನಿಕ ಜೀವನದಲ್ಲಿ ಹಾಗೂ ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಟದಲ್ಲಿ ಪ್ರಖರ ನೈತಿಕ ಆಯಾಮ ಪಡೆಯಿತು. ಮುಂದೆ ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯನ್ನು ಎದುರಿಸುವಾಗಲೂ ಅವರ ನ್ಯಾಯವಾದಿ ವೃತ್ತಿಯ ನಿಷ್ಠುರತೆ, ನೈತಿಕ ನಿಲುವು ಹಾಗೂ ಕಾನೂನು ಜ್ಞಾನಗಳು ಅವರ ನೆರವಿಗೆ ಬಂದವು. 'ದ ಲಾ ಅಂಡ್ ದ ಲಾಯರ್ಸ್' ಪುಸ್ತಕ ಬ್ರಿಟಿಷ್ ಆಡಳಿತ ಕಾಲದ ಕಾನೂನು, ಕೋರ್ಟು, ನ್ಯಾಯಾಧೀಶರು, ನ್ಯಾಯವಾದಿಗಳನ್ನು ಕುರಿತು ಗಾಂಧೀಜಿ ಬರೆದ ಬರಹಗಳ ಸಂಕಲನ. ಈ ಬರಹಗಳು ಇವತ್ತು ಕಾನೂನು ವೃತ್ತಿಯಲ್ಲಿ ಹಾಗೂ ಕಾನೂನು ವಲಯದಲ್ಲಿ ತೊಡಗಿಸಿಕೊಂಡಿರುವವರಿಗೆ ದಾರಿದೀಪದಂತಿವೆ. ಜೊತೆಗೆ, ಗಾಂಧೀಜಿ ಒಬ್ಬ ಮೇಧಾವಿ ನ್ಯಾಯವಾದಿಯಾಗಿ ಅನೇಕ ಪ್ರಕರಣಗಳ ವಿಚಾರಣಾ ಕ್ರಮಗಳನ್ನೂ, ನ್ಯಾಯತೀರ್ಮಾನಗಳನ್ನೂ ವಿಶ್ಲೇಷಿಸಿರುವ ಸೂಕ್ಷ್ಮ ವಿಧಾನಗಳು ಇವತ್ತಿಗೂ ಉತ್ತಮ ಮಾದರಿಗಳಾಗಿವೆ.

೪೮

ಆಶಾವಾದ ಮತ್ತು ನಿರಾಶಾವಾದ

ಆಶಾವಾದ ಎನ್ನುವುದು ವ್ಯಕ್ತಿಯೊಬ್ಬನ ನಂಬುಗೆಯನ್ನು ಸೂಚಿಸುತ್ತದೆ. ದೇವರಲ್ಲಿ ನಂಬುಗೆ ಇರದವರು ಮಾತ್ರ ನಿರಾಶಾವಾದಿಗಳಾಗಿರಲು ಸಾಧ್ಯ. ಆಶಾವಾದಿಯಾಗಿರುವವನು ದೇವರ ಬಗ್ಗೆ ಭಯವನ್ನು ಹೊಂದಿರುವುದರ ಜೊತೆಗೆ, ತನ್ನ ಅಂತರ್ ಧ್ವನಿಯ ಆಣತಿಯಂತೆ ನಡೆಯುತ್ತಾನೆ. ದೇವರು ಒಳ್ಳೆಯದನ್ನೇ ಮಾಡುತ್ತಾನೆ ಎನ್ನುವ ಬಲವಾದ ನಂಬುಗೆಯೊಂದಿಗೆ ಬದುಕು ಸಾಗಿಸುತ್ತಾನೆ. ನಿರಾಶಾವಾದಿಯಾದವನು ಹಾಗಲ್ಲ, ಎಲ್ಲದಕ್ಕೂ ತಾನೇ ಕಾರಣ; ಎಲ್ಲವೂ ತನ್ನಿಂದಲೇ... 'ಅಹಂ ಬ್ರಹ್ಮಾಸ್ಮಿ' ಎನ್ನುವ ಹಾಗೆ ವರ್ತಿಸುತ್ತಾನೆ. ಗೆಲುವಿಗೆ ತಾನೇ ಕಾರಣ ಎನ್ನುತ್ತಾನೆ; ವೈಫಲ್ಯಕ್ಕೆ ಇತರರನ್ನು ದೂರುತ್ತಾನೆ. ದೇವರ ಅಸ್ತಿತ್ವದ ಬಗ್ಗೆ ಅವನಿಗೆ ನಂಬುಗೆಯಿಲ್ಲ. ಇಲ್ಲಿ ತನ್ನನ್ನು ಹೊರತುಪಡಿಸಿ ಯಾರೂ ಯೋಗ್ಯರಲ್ಲ ಹಾಗೂ ತನ್ನನ್ನಾಗಲಿ, ತನ್ನ ಸಾಮರ್ಥ್ಯವನ್ನಾಗಲಿ ಯಾರೂ ಸರಿಯಾಗಿ ಗುರುತಿಸುತ್ತಿಲ್ಲ ಎಂದು ದೂರುತ್ತಲೇ ಆ ಬಗೆಯ ನಿರಾಶೆಯೊಂದಿಗೆ ತನ್ನ ಬದುಕಿಗೆ ಪೂರ್ಣವಿರಾಮ ಇಡುತ್ತಾನೆ. ಹಾಗೆ ಮಾಡದೇ ಅವನು ಬದುಕಿ ಉಳಿದರೂ ಅದು ಸಾವಿಗಿಂತಲೂ ಸ್ವಲ್ಪ ಮೇಲು ಎನ್ನುವಂತಿರುತ್ತದೆ, ಅಷ್ಟೆ.

ಆಶಾವಾದಿಯಾದವನು ಜೀವನವನ್ನು ಪ್ರೀತಿಸುವುದರ ಜೊತೆಗೆ, ದಾನ ಧರ್ಮ ಮಾಡುತ್ತಾ ಸಮಾಜಮುಖಿಯಾಗಿರುತ್ತಾನೆ. ಆತ ಯಾರನ್ನೂ ದ್ವೇಷಿಸಲಾರ. ಹಾಗಾಗಿ ಅವನಿಗೆ ವೈರಿಗಳೇ ಇರುವುದಿಲ್ಲ. ಹಾಗಾಗಿಯೇ ಆತ ಕಾಡಿನಲ್ಲಿರಲಿ ಇಲ್ಲವೇ ನಾಡಿನಲ್ಲಿರಲಿ, ನಿರ್ಭಯನಾಗಿ ಬದುಕುತ್ತಾನೆ. ಅಪಾಯಕಾರಿ ಪ್ರಾಣಿಗಳಿಂದಾಗಲೀ ಅದೇ ರೀತಿಯ ಸ್ವಭಾವದ ಮನುಷ್ಯರಿಂದಾಗಲೀ ಇವನಿಗೆ ಭಯವಿಲ್ಲ. ಅವನ ಆತ್ಮ ಪರಿಶುದ್ಧವಾಗಿದ್ದು, ಅಲ್ಲಿ ಚೇಳಿನ ವಿಷವಾಗಲೀ ಹರಿತವಾದ ಕತ್ತಿಯಾಗಲೀ

ಇಲ್ಲ. ಆತ ತನ್ನ ಶರೀರದ ಬಗ್ಗೆ ಅತಿಯಾದ ಮೋಹವನ್ನೂ ಹೊಂದಿರುವುದಿಲ್ಲ. ಅದು ಒಂದು ಗಾಜಿನ ಬಟ್ಟಲಿನಂತೆ ಒಂದು ದಿನ ಒಡೆದು ಹೋಗುವುದರ ಬಗ್ಗೆ ಅವನಿಗೆ ಗೊತ್ತಿದೆ. ಆಶಾವಾದಿಯಾದವನು ಯಾರನ್ನೂ ಹಿಂಸಿಸುವುದಿಲ್ಲ, ಕೊಲ್ಲು ವುದಿಲ್ಲ. ತನ್ನ ಅಂತರಾತ್ಮದ ಪಿಸುಮಾತಿಗೆ ಕಿವಿಗೊಟ್ಟು ಅದರ ಆಣತಿಯಂತೆ ತಲೆ ಬಾಗುತ್ತಾ ಹಾಯಾಗಿ ಸಂತೋಷದಿಂದ ಬದುಕುತ್ತಾನೆ.

ನಿರಾಶಾವಾದಿಯಾದವನು ತನ್ನನ್ನು ಹಿಂಸೆಯೊಂದಿಗೆ ತಳಕು ಹಾಕಿಕೊಂಡಿರು ವುದರಿಂದ ಪ್ರತಿಯೊಬ್ಬರನ್ನೂ ತನ್ನ ವೈರಿಯಂತೆ ಪರಿಭಾವಿಸಿ ಭಯಾವೃತವಾದ ಬದುಕನ್ನು ಸಾಗಿಸುತ್ತಾನೆ. ಇಂಥವರಿಗೆ ಅಂತರಾತ್ಮದ ಒಳದನಿ ಕೇಳುವುದಿಲ್ಲ. ಸದಾ ಸುಖದ ಅನ್ವೇಷಣೆಯಲ್ಲಿಯೇ ತೊಡಗುವ ಇವರು ಒಂದು ದಿನ ಸುಸ್ತು ಹೊಡೆದು ಯಾರ ಪ್ರೀತಿಗೂ ಪಾತ್ರರಾಗದೇ ಸರಿಯಾಗಿ ನಗದೆ, ಅಳದೆ, ಜೀವನದಿಂದ ವಿಮುಖರಾಗುತ್ತಾರೆ. ಹೀಗೆ ಹೇಳುವುದರ ಅರ್ಥ ನಾನು ಸ್ವರಾಜ್ಯ ಎನ್ನುವುದು ಈ ವರ್ಷ ದಕ್ಕದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದಲ್ಲ. ಅಷ್ಟಕ್ಕೂ ಆತ್ಮಹತ್ಯೆ ಎನ್ನುವುದು ಒಂದು ಹೇಡಿತನದ ಕೃತ್ಯ. ಅದನ್ನು ಪುಕ್ಕಲು ಮನಸ್ಸಿನವರು ಅನುಸರಿಸು ತ್ತಾರೆ. ಭಾರತ ಸ್ವರಾಜ್ಯ ಗಳಿಸದಿದ್ದರೆ ನಾನೇಕೆ ಆತ್ಮಹತ್ಯೆ ಮಾಡಿಕೊಳ್ಳಬೇಕು? ಭಾರತಮಾತೆ ನಿಜವಾಗಿಯೂ ಸ್ವರಾಜ್ಯವನ್ನು ಹಂಬಲಿಸುವಂತಿದ್ದರೆ ಅದಕ್ಕಾಗಿ ಆಕೆ ಹೋರಾಡಲಿ. ಅದರ ಮೌಲ್ಯ ಆಕೆಗೆ ತಿಳಿದಿದೆ. ಆಕೆ ಸ್ವರಾಜ್ಯವನ್ನು ಬಯಸಿದ್ದೇ ಆದರೆ, ಅದಕ್ಕೆ ತೆರಬೇಕಾದ ಬೆಲೆಯನ್ನು ತೆತ್ತು ಅದನ್ನು ತನ್ನದಾಗಿಸಿಕೊಳ್ಳಬೇಕು. ಆಕೆ ಹಾಗೆ ಮಾಡದಿದ್ದಲ್ಲಿ ನಾನೇಕೆ ಆತ್ಮಹತ್ಯೆ ಮಾಡಿಕೊಳ್ಳಬೇಕು? ನಾನು ಅದಾಗಲೇ ಕೆಲವು ಗೆಳೆಯರ ಎದುರು, ಬರುವ ಜನವರಿಯ ಒಳಗಾಗಿ ಸ್ವರಾಜ್ಯವನ್ನು ಗಳಿಸದಿದ್ದರೆ ನಾನೇನು ಮಾಡಬಲ್ಲೆ ಎನ್ನುವುದನ್ನು ಹೇಳಿರುವೆ. ನನಗೆ ನನ್ನ ದೇಶದ ಜನರ ಬಗ್ಗೆ ಅಪಾರ ನಂಬುಗೆಯಿದೆ. ಡಿಸೆಂಬರ್ ತಿಂಗಳೊಳಗಾಗಿ ನಾವು ಸ್ವರಾಜ್ಯವನ್ನು ಪಡೆದೇ ತೀರುತ್ತೇವೆ. ಹಾಗಾಗಿ ಜನವರಿ ತಿಂಗಳಲ್ಲಿ ನಾನೇನು ಮಾಡುತ್ತೇನೆನ್ನುವುದು ನನಗೆ ಸ್ಪಷ್ಟವಿಲ್ಲ. ಜನರಿಂದ ದೂರ ಸರಿದು ಏಕಾಂತ ಸ್ಥಳದಲ್ಲಿ ಉಳಿದು ನನ್ನ ಸಾಮರ್ಥ್ಯಕ್ಕೆ ತಕ್ಕಂತೆ ದೇಶ ಸೇವೆ ಮಾಡುತ್ತೇನೆ. ಸ್ವರಾಜ್ಯದ ಅಡಿಯಲ್ಲಿ ಸಂವಿಧಾನದ ಬರವಣಿಗೆಯಲ್ಲಿ ತೊಡಗುತ್ತೇನೆ. ಅಲ್ಲಿಯವರೆಗೆ ಸ್ವರಾಜ್ಯ ದಕ್ಕದಿದ್ದರೆ ನಾನು ಮುಂದಿನ ವರ್ಷದವರೆಗೆ ಬದುಕುಳಿಯುವ ಬಗ್ಗೆಯೂ ಅನುಮಾನಗಳಿವೆ. ಅದೇ ಕೊರಗಿನಲ್ಲಿ ನನ್ನ ಶರೀರ ಕೃಶವಾಗಿ ಹೋಗುತ್ತದೆ; ನಾನು ಕೂಡ ಅದನ್ನೇ ಬಯಸುತ್ತೇನೆ.

ನಾನು ದೇಶದ ಅನೇಕ ಭಾಗಗಳಲ್ಲಿ ಆರ್ಥಿಕ ಕುಸಿತ, ನೈತಿಕ ಕುಸಿತ ಮತ್ತು ನರಳಾಟವನ್ನು ಕಂಡಿದ್ದೇನೆ. ನನಗೆ ಜನರ ಮೇಲೆ ಭರವಸೆಯಿದೆ; ಆ ಭರವಸೆ ಮತ್ತು ಪ್ರೇರಣೆಯೊಂದಿಗೆ ನಾನು ಬದುಕಿ ಉಳಿದಿರುವೆ. ಈಗ ಮಿಲಿಯನ್‌ಗಟ್ಟಲೆ ಜನ ಮುಂದೆ ಬರುತ್ತಿದ್ದಾರೆ; ಇದು ನನ್ನಲ್ಲಿ ಇನ್ನಷ್ಟು ಭರವಸೆಯನ್ನು ಮೂಡಿಸಿದೆ. ಈ ಜನರಲ್ಲಿ ಜಾಗೃತಿಯನ್ನು ಮೂಡಿಸಲು ಒಂದೇ ಒಂದು ವರ್ಷ ಸಾಕು. ೧೯೨೦ರ ಸೆಪ್ಟೆಂಬರ್ ತಿಂಗಳಲ್ಲಿ ಈ ದಿಸೆಯಲ್ಲಿ ಕೇವಲ ನಾನೊಬ್ಬನೇ ಮುಂದಾಗಿದ್ದೆ. ಆಗಲೂ ಈ ಬಗೆಯ ಭರವಸೆಯೇ ಅದನ್ನು ಸಾಧ್ಯವಾಗಿಸಿತ್ತು. ಡಿಸೆಂಬರ್ ತಿಂಗಳಲ್ಲಿ ಅನೇಕರು ಮುಂದೆ ಬಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ತನ್ನ ಮಾತನ್ನು ಉಳಿಸಿಕೊಳ್ಳದಿದ್ದರೆ ನನ್ನಂಥವನ ಪಾಡೇನಾಗಬಹುದು? ಸ್ವರಾಜ್ಯವನ್ನು ಗಿಟ್ಟಿಸಿಕೊಳ್ಳುವಲ್ಲಿ ನಾವು ವಿಫಲರಾದರೆ ನಾವೆಲ್ಲರೂ ಬಳಲಬೇಕಾಗುತ್ತದೆ. ಪ್ರತಿಯೊಬ್ಬರಿಗೂ ಆಹಾರದಷ್ಟೇ ಧರ್ಮದ ಅಗತ್ಯ ಕೂಡ ಮುಖ್ಯವಾಗುತ್ತದೆ. ಇದು ಪುಕ್ಕಲುತನ ಎನ್ನಿಸುವದಿಲ್ಲವೇ ಎಂದು ಗೆಳೆಯನೊಬ್ಬ ಕೇಳಿದ. ಖಂಡಿತ ಇಲ್ಲ. ಆ ಮೂಲಕ ನಾನು ಸಹಾನುಭೂತಿಯ ಅಭಿವ್ಯಕ್ತಿಯನ್ನು ಕಾಣುತ್ತೇನೆ. ಯಾವುದೇ ಒಂದು ಸೇವೆಯನ್ನು ಮೌಲ್ಯಾಧಾರಕವೆಂದು ಗುರುತಿಸದ ಹೊರತು ಅದನ್ನು ಮುಂದುವರಿಸುವ ಅಗತ್ಯವಿರುವುದಿಲ್ಲ. ಶರೀರ ಸಂಪೂರ್ಣವಾಗಿ ನಿತ್ರಾಣಗೊಂಡ ಮೇಲೆ ಗಂಗಾಜಲದ ಮೇಲೆ ಬದುಕುಳಿಯುವ ಅಗತ್ಯವಿಲ್ಲ. ಅದನ್ನು ನಿಧಾನವಾಗಿ ತ್ಯಜಿಸುವುದರಲ್ಲಿಯೇ ಅರ್ಥವಿದೆ. ಅಸ್ಥಿಪಂಜರದ ಅಸ್ತಿತ್ವಕ್ಕೆ ಮಹತ್ವವಿರುವುದಿಲ್ಲ. ಇಂದಿನಿಂದ ನಾನು ಯಾವುದೇ ಉಪದೇಶ ಮಾಡುವ ಗೋಜಿಗೆ ಹೋಗದೆ, ಸ್ವದೇಶಿ ತತ್ವವನ್ನು ಅಳವಡಿಸಿಕೊಂಡು ಸ್ವರಾಜ್ಯವನ್ನು ಗೆಲ್ಲುತ್ತೇನೆ. ನಾವೀಗ ಏಣಿಯ ಕೊನೆಯ ಮೆಟ್ಟಿಲ ಮೇಲಿದ್ದೇವೆ. ಹೊರಳಿ ನೋಡದೆ ಮುಂದಡಿ ಇಡುವುದರಲ್ಲಿಯೇ ನಮ್ಮ ಯಶಸ್ಸು ಅಡಗಿದೆ. ಸಿಂಹಘಡ ಘಟ್ಟ ಪ್ರದೇಶವನ್ನು ಹತ್ತುವಾಗ, ನನಗೆ ಮತ್ತೆ ಹತ್ತಲಾಗದಷ್ಟು ಆಯಾಸವಾಗಿತ್ತು. ಆಗ ನಾನು ಅಲ್ಲಿಯೇ ಕುಳಿತು ಸ್ವಲ್ಪ ಹೊತ್ತು ವಿಶ್ರಮಿಸಿದೆ. ನಂತರ ಮತ್ತೆ ಹತ್ತುವುದನ್ನು ಮುಂದುವರಿಸಿದೆ. ಹಾಗೆಯೇ ಸ್ವದೇಶಿ ಆಂದೋಲದಲ್ಲಿ ನಾವು ಪೂರ್ಣ ಪ್ರಮಾಣದ ಗೆಲುವನ್ನು ಸಾಧಿಸದ ಹೊರತು ನಮಗೆ ಮುನ್ನುಗ್ಗಲಾಗುವುದಿಲ್ಲ. ನನ್ನ ಉಳಿದ ಬದುಕಿನ ಮುಂದುವರಿದ ಭಾಗ ಈ ಸ್ವದೇಶಿ ಆಂದೋಲನದ ಯಶಸ್ಸನ್ನೇ ಅವಲಂಬಿಸಿದೆ. ಇದು ನನ್ನ ಮಾನಸಿಕ ಸ್ಥಿತಿ. ನಾಳೆ, ಮುಂದೇನು ಎನ್ನುವ ಬಗ್ಗೆ ದೇವರು ಮಾತ್ರ ಅರಿತಿರಬಲ್ಲ.

('ದ ಎಸೆನ್ಷಿಯಲ್ ರೈಟಿಂಗ್ಸ್ ಆಫ್ ಮಹಾತ್ಮ ಗಾಂಧಿ', ಸಂ. ರಾಘವನ್ ಅಯ್ಯರ್, ಒ.ಯು.ಪಿ.)

ಕನ್ನಡಕ್ಕೆ: **ಎಸ್. ಬಿ. ಜೋಗುರ**

೪೯

ಆಯ್ಕೆಯ ಬಡತನ ಅಥವಾ ಸರಳ ಜೀವನ

ಆತ್ಮೀಯರೆ, ನೀವು ನನ್ನಿಂದ ಇಂತಹ ವಿಷಯಗಳನ್ನು ಕೇಳುವಾಗ ಆಶ್ಚರ್ಯ ಪಡುತ್ತೀರಿ. ಆದರೆ, ಇವೆಲ್ಲವೂ ನನ್ನ ರಾಜಕೀಯ ಜೀವನದಲ್ಲಿ ಅಡಕವಾಗಿರುವ ವಿಷಯಗಳೇ ಆಗಿವೆ. ಇಲ್ಲಿ ನಾನು ನೀಡುವ ಭರವಸೆಗಳನ್ನು ನೀವು ಸ್ವೀಕರಿಸಬೇಕೆಂದು ಬಯಸುತ್ತೇನೆ. ಏಕೆಂದರೆ, ಅವೆಲ್ಲವೂ ನನ್ನ ಬದುಕಿನ ಅಧ್ಯಾತ್ಮದ ಬೇರುಗಳಾಗಿವೆ ಎಂದರೆ ಬಹುಶಃ ನಂಬಲಾರಿರಿ. ಆದರೆ, ನನ್ನ ರಾಜಕೀಯ ಜೀವನವು ಅಧ್ಯಾತ್ಮದಿಂದ, ನೈತಿಕತೆಯಿಂದ ಮತ್ತು ಧರ್ಮದಿಂದ ಬೇರ್ಪಡಿಸಲಾಗದಂತಹದ್ದು ಎಂದು ನಿಮಗೆ ತಿಳಿಸಬಯಸುತ್ತೇನೆ. ಇವೆಲ್ಲವೂ ನನ್ನ ಬದುಕಿನಲ್ಲಿ ನಡೆಸಿದ ನಿರಂತರ ಪ್ರಯೋಗದಿಂದ ನಾನು ಕಂಡುಕೊಂಡ ಸತ್ಯಗಳು ಎಂದು ಹೇಳಬಲ್ಲೆ. ವ್ಯಕ್ತಿಯೊಬ್ಬ ದೇವರನ್ನು ಅರಸುತ್ತಾ, ಸತ್ಯದ ಮಾರ್ಗದಲ್ಲಿ ನಡೆಯುವಾಗ ಅವನು ಜೀವನದ ಯಾವುದೇ ಕ್ಷೇತ್ರವನ್ನು ಸ್ಪರ್ಶಿಸದೆ ಇರಲಾರ. ನನ್ನ ಸಾಮಾಜಿಕ ಮತ್ತು ರಾಜಕೀಯ ಸೇವೆಯಲ್ಲಿ ಇದು ನನಗೆ ಅನುಭವವಾಗಿದೆ. ಈ ವಿಷಯದಲ್ಲಿ ಅಂತಿಮವಾಗಿ ಹೇಳುವುದಾದರೆ, ನೈತಿಕತೆ, ಸತ್ಯ, ದೇವರ ಕುರಿತಾದ ಭಯ ಅನಿವಾರ್ಯವಲ್ಲ ಎನ್ನುವಂತಹ ಯಾವುದಾದರೂ ಕ್ಷೇತ್ರಗಳಿದ್ದರೆ ಅವುಗಳನ್ನು ಸಂಪೂರ್ಣವಾಗಿ ತೊರೆಯಬೇಕು ಎಂದು ನಿರ್ಧರಿಸಿರುವ ನಾನು ಈ ನನ್ನ ಸೇವೆಯ ಹಾದಿಯಲ್ಲಿ ಇದೀಗ ನಡೆಯುತ್ತಿದ್ದೇನೆ.

ರಾಜಕೀಯ ಕುರಿತಾಗಿ ಮಾತ್ರ ನಾನು ಮಾತನಾಡುತ್ತಿದ್ದೇನೆ ಎಂದು ತಾವು ಭಾವಿಸಬಾರದು. ನನ್ನ ಅನುಭವದಲ್ಲಿ ಪ್ರಸ್ತುತ ರಾಜಕೀಯವೆಂದರೆ, ಅದು ರಾಜ ಮಹಾರಾಜರ ಕುರಿತ ಕಾಳಜಿಯಲ್ಲ. ಅಂತಹದ್ದು ಬಹುಕಾಲ ಉಳಿಯುವುದಿಲ್ಲ. ಅಂಥ ರಾಜಕೀಯದಿಂದಾಗಿ ಸಮಾಜದ ತಳವರ್ಗದ ಸಮುದಾಯಕ್ಕೆ ಅನೇಕ

ತೊಂದರೆಯಾಗಿದೆ. ನನ್ನ ಕಹಿ ಅನುಭವದಲ್ಲಿ ಹೇಳುವುದಾದರೆ, ನಾನು ನಿಜವಾದ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕಾದರೆ ನನಗೆ ರಾಜಕೀಯ ಅನಿವಾರ್ಯವಾಗಿದೆ. ಅದನ್ನು ನಿರಾಕರಿಸಿ ಸಮಾಜ ಸೇವೆಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂಬುದನ್ನು ಮನಗಂಡಿದ್ದೇನೆ.

ನಾನು ರಾಜಕೀಯ ಮತ್ತು ಅದಕ್ಕೆ ಹೊಂದಿಕೊಂಡಂತೆ ಸ್ವಯಂ ಬಡತನ (ವಾಲೆಂಟರಿ ಪಾವರ್ಟಿ) ಅಥವಾ ಆಯ್ಕೆಯ ಬಡತನ ಕುರಿತಾಗಿ ನಿಮ್ಮ ಜೊತೆ ಮಾತನಾಡುತ್ತಿರುವುದಕ್ಕೆ ಅನ್ಯಥಾ ಭಾವಿಸಬಾರದು. ಅದು ನನ್ನ ಉದ್ದೇಶವಲ್ಲ. ಆದರೆ, ಅದರ ಕುರಿತಾಗಿ ಒಂದು ಸಣ್ಣ ಪರಿಚಯವನ್ನು ಇಲ್ಲಿ ನೀಡುತ್ತಿದ್ದೇನೆ. ಆಯ್ಕೆಯ ಬಡತನ ಎಂಬುವುದು ಸಾಮಾಜಿಕ ಇಲ್ಲವೇ ರಾಜಕೀಯ ಕಾರ್ಯಕರ್ತರ ಜೀವನದಲ್ಲಿ ಅನಿವಾರ್ಯ ಎಂಬ ನಿರ್ಧಾರಕ್ಕೆ ನಾನು ಬಂದಿದ್ದೇನೆ. ಆದರೆ, ಇಂದಿನ ಸಾಮಾನ್ಯ ರಾಜಕಾರಣದಲ್ಲಿ ಕೊಳೆತು ನಾರುತ್ತಿರುವ ಸುಳ್ಳು ಮತ್ತು ಅನೈತಿಕತೆಯ ಮೂಲಕ ಯಾರೊಬ್ಬರೂ ಇಲ್ಲಿ ಉಳಿಯಬಾರದು. ಅಂತಹ ಜೀವನದಿಂದ ಬರುವ ದುರ್ವಾಸನೆಯು ಕೆಲವರಿಗೆ ಉಸಿರುಗಟ್ಟಿಸುವಂತೆ ತೋರುತ್ತಿದೆ. ಜೊತೆಗೆ ರಾಜಕೀಯವು ನೈತಿಕತೆಯ ಭಯ ಇರುವ ಉತ್ತಮ ವ್ಯಕ್ತಿಗಳಿಗೆ ಅಲ್ಲ ಎಂದು ಅನಿಸುತ್ತಿದೆ. ಅಕಸ್ಮಾತ್ ಇದು ನಿಜವಾಗಿದ್ದರೆ ಇದು ಮಾನವಕುಲದ ದುರಂತ ಎಂದು ನಾನು ಭಾವಿಸುತ್ತೇನೆ. ನಾನು ಏನು ಹೇಳುತ್ತಿದ್ದೇನೆ ಎಂಬುದರ ಕುರಿತು ಒಮ್ಮೆ ಆಲೋಚಿಸಿ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಮ್ಮ ದೈನಂದಿನ ಚಟುವಟಿಕೆಯಲ್ಲಿ ರಾಜಕೀಯ ಬೆರೆತು ಹೋಗಿದೆ. ಇಷ್ಟು ಮಾತ್ರವಲ್ಲದೆ, ಈ ಜಗತ್ತಿನ ಯಾವ ಮಹಾನಗರಗಳನ್ನೂ ಅದು ಸ್ಪರ್ಶಿಸದೆ ಅಥವಾ ಆಕ್ರಮಿಸಿಕೊಳ್ಳದೆ ಬಿಟ್ಟಿಲ್ಲ.

ನನ್ನ ಸುತ್ತ ರಾಜಕೀಯವು ಆವರಿಸಿಕೊಂಡಾಗ, ಒಮ್ಮೆ ನಾನು ನನ್ನನ್ನು ಪ್ರಶ್ನಿಸಿಕೊಂಡೆ; ಸುಳ್ಳು ಮತ್ತು ಅನೈತಿಕತೆಯಿಂದ ತಾಂಡವವಾಡುತ್ತಿರುವ ಈ ರಾಜಕೀಯದ ಅವಶ್ಯಕತೆ ನನಗೆ ಇದೆಯೆ? ನನ್ನ ನಿರಂತರ ಹುಡುಕಾಟ ಅಥವಾ ಶೋಧನೆಯ ನಂತರ ನನಗೆ ಅನಿಸಿದ್ದು ಏನೆಂದರೆ, ಕನಿಷ್ಠ ಈ ರಾತ್ರಿ, ನಾನು ಏಕಾಂಗಿಯಾಗಿರಬೇಕು; ಜೊತೆಗೆ ನನ್ನ ನಿರ್ಧಾರ ಸರಿಯಾಗಿದ್ದರೆ, ಬಡತನವೆಂಬುದು ಮೊದಲು ನನಗೆ ಬರಲಿ ಎಂಬುದಾಗಿತ್ತು.

ಅಂತಹ ಕಾರ್ಯ ಅಥವಾ ಕಾರ್ಯವಿಧಾನದ ಎಲ್ಲಾ ವಿವರಗಳನ್ನು ನೀವು ಸ್ವೀಕರಿಸಿ ಎಂದು ನಾನು ಸಲಹೆ ನೀಡುತ್ತಿಲ್ಲ. ಆದರೆ, ಅವುಗಳು ನನ್ನ ಪಾಲಿಗೆ ಪವಿತ್ರವಾಗಿದ್ದವು ಎಂದು ಮಾತ್ರ ಹೇಳಬಲ್ಲೆ. ಆರಂಭದಲ್ಲಿ ನನಗೆ ಅದು ಒಂದು

ರೀತಿಯಲ್ಲಿ ಕಷ್ಟಕರವಾದ ಹೋರಾಟವಾಗಿತ್ತು. ಈ ಕಾರಣಕ್ಕಾಗಿ ನನ್ನ ಪತ್ನಿಯೊಂದಿಗೆ ಆಗಾಗ್ಗೆ ಜಗಳವೂ ಸಹ ನಡೆಯುತ್ತಿತ್ತು. ಇದನ್ನು ನಾನು ಪದೇ ಪದೇ ನನ್ನ ಮಕ್ಕಳ ಜೊತೆ ನೆನಪು ಮಾಡಿಕೊಳ್ಳುತ್ತೇನೆ. ನಾನು ಇಂತಹ ದೃಢ ನಿರ್ಧಾರಕ್ಕೆ ಬರುವಾಗ ಅತೀವ ಕಷ್ಟವಾಯಿತು. ಈ ನನ್ನ ಮಧ್ಯವಯಸ್ಸಿನಲ್ಲಿ ನಾನು ಜನತೆಯ ಸೇವೆ ಮಾಡಬೇಕಾದರೆ ಸರಳವಾದ ಬದುಕು ಅನಿವಾರ್ಯ ಎಂಬ ತೀರ್ಮಾನಕ್ಕೆ ಬಂದೆ. ನನ್ನ ಈ ಪ್ರಯೋಗದಿಂದ ದಿನದಿಂದ ದಿನಕ್ಕೆ ನಾನು ಹಲವು ಬೆಳವಣಿಗೆಗಳಿಗೆ ಸಾಕ್ಷಿಯಾಗುತ್ತಾ ಬಂದಂತೆ ನಾನು ಎಲ್ಲಾ ಭೋಗವಸ್ತುಗಳು ಮತ್ತು ಶ್ರೀಮಂತಿಕೆಯನ್ನು ತೊರೆಯಬೇಕೆಂದು ನಿರ್ಧರಿಸಿದೆ.

ನಾನು ಕಂಡುಕೊಂಡ ಸತ್ಯಗಳನ್ನು ಇಲ್ಲಿ ವಿವರಿಸಿ ಹೇಳಲು ಹೋಗುವುದಿಲ್ಲ. ಒಂದು ಸುಸಂದರ್ಭದಲ್ಲಿ ತಕ್ಷಣವೇ ನಾನು ಎಲ್ಲವನ್ನೂ ತೊರೆಯಲು ನಿರ್ಧರಿಸಿದೆ. ಆರಂಭದಲ್ಲಿ ಈ ಪ್ರಯೋಗ ನಿಧಾನವಾಗಿ ಜರುಗಿತೆಂದು ನಿಮ್ಮ ಮುಂದೆ ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಈಗ ಆ ಹೋರಾಟದ ದಿನಗಳನ್ನು ನೆನಪು ಮಾಡಿಕೊಳ್ಳು ತ್ತಿದ್ದೇನೆ. ಆರಂಭದಲ್ಲಿ ಎಲ್ಲವನ್ನೂ ಬಿಟ್ಟುಕೊಡುವುದು ನೋವಿನ ಸಂಗತಿಯಾಗಿತ್ತು ಎಂಬುದನ್ನು ಈಗಲೂ ಜ್ಞಾಪಿಸಿಕೊಳ್ಳುತ್ತೇನೆ. ಆದರೆ, ದಿನ ಕಳೆದಂತೆ ಇವೆಲ್ಲವೂ ನನ್ನದು ಎಂದು ಭಾವಿಸಿದ್ದ ಎಲ್ಲವನ್ನೂ ತ್ಯಜಿಸುತ್ತಾ ಸಾಗಿದೆ. ಏನೂ ಇಲ್ಲದ ಸುಖ ಮತ್ತು ಸಂತೋಷವನ್ನು ಅನುಭವಿಸಬೇಕಾದರೆ ಇದು ನನಗೆ ಅನಿವಾರ್ಯವಾಯಿತು. ಒಂದರ ನಂತರ ಮತ್ತೊಂದು ಹೀಗೆ ಎಲ್ಲವನ್ನೂ ತ್ಯಜಿಸುತ್ತಾ ಬಂದಂತೆ ನನ್ನೊಳಗಿನ ಕೆಲವು ಸ್ವಾರ್ಥದ ಆಲೋಚನೆಗಳು ದೂರವಾಗತೊಡಗಿದವು. ಸುಖದ ವಸ್ತುಗಳನ್ನು ತೊರೆಯುವುದೂ ಸಹ ನನ್ನ ಪಾಲಿಗೆ ಹೊಸ ಪ್ರಯೋಗವಾಗಿತ್ತು. ನನ್ನ ಹೆಗಲ ಮೇಲಿದ್ದ ದೊಡ್ಡ ಭಾರವೊಂದನ್ನು ಕೆಳಗಿಳಿಸಿದ ಅನುಭವ ನನಗಾಯಿತು. ಈಗ ನಾನು ನಿರಾಳವಾಗಿ ನೆಮ್ಮದಿಯಿಂದ ನಡೆದಾಡಬಲ್ಲೆ ಮತ್ತು ಕಾರ್ಯ ನಿರ್ವಹಿಸಬಲ್ಲೆ ಎಂದು ಅನಿಸತೊಡಗಿತು. ಜೊತೆಗೆ ನನ್ನ ಅನುಯಾಯಿಗಳ ಸೇವೆಗೆ ಇಂತಹ ಆಯ್ಕೆಯ ಬಡತನ ಅಥವಾ ಸರಳವಾದ ಜೀವನ ಯೋಗ್ಯವಾದುದು ಎಂದು ಅನಿಸಿತು. ಏನನ್ನಾದರೂ ಹೊಂದುವುದೆಂದರೆ, ಅದು ನನ್ನ ಪಾಲಿಗೆ ತ್ರಾಸದಾಯಕ ಎಂಬ ಭಾವನೆ ನನ್ನೊಳಗೆ ಬಲಿಯತೊಡಗಿತು.

ನನ್ನ ಬಳಿ ಏನೂ ಇಲ್ಲದ ಸಂತೋಷವನ್ನು ನಿಮಗೆ ಹೀಗೆ ವಿವರಿಸಬಹುದು: ನನಗಾಗಿ ಏನನ್ನಾದರೂ ಸಂಗ್ರಹಿಸಿ ಇಟ್ಟುಕೊಂಡರೆ ಅದನ್ನು ವಿಶ್ವದ ನಿಯಮಕ್ಕೆ ವಿರುದ್ಧವಾಗಿ ನಾನು ರಕ್ಷಣೆ ಮಾಡುವುದರ ಜೊತೆಗೆ, ಅದು ನನ್ನದು ಎಂದು ಪ್ರತಿಪಾದಿಸಬೇಕಿತ್ತು. ಈ ಜಗತ್ತಿನಲ್ಲಿ ಬಹಳ ಮಂದಿಯ ಬಳಿ ಅವರು ಬಯಸಿದರೂ

ಸಹ ಅವರ ಬಳಿ ಏನೂ ಇಲ್ಲವೆಂಬ ಅರಿವು ಸಹ ನನಗಿತ್ತು. ಇದರ ಜೊತೆ ಜೊತೆಯಲ್ಲಿ ನನ್ನ ಆಸ್ತಿಗೆ ರಕ್ಷಣೆ ಸಹ ಬೇಕಾಗಿರುತ್ತಿತ್ತು. ಇದೇ ಸಂದರ್ಭದಲ್ಲಿ ಹಸಿವು, ಕ್ಷಾಮ ಇವುಗಳಿಂದ ತತ್ತರಿಸುತ್ತಿದ್ದ ಜನತೆಯ ಬವಣೆಗಳು ನನ್ನೊಳಗೆ ಜೀವಂತವಾಗಿದ್ದವು. ಅಂತಹ ಕ್ಷಣದಲ್ಲಿ ನಾನು ನನಗಾಗಿ ಕೂಡಿಡುವುದು ಅಪರಾಧ ಎಂಬ ಮನೋಭಾವ ನನ್ನ ಮನಸ್ಸಿನಲ್ಲಿ ಬೆಳೆಯತೊಡಗಿತು. ನಾನು ತೊರೆಯುವ ವಸ್ತುಗಳು ಇಲ್ಲದವರ ಪಾಲಿಗೆ ಅವಶ್ಯ ಎನಿಸಿದರೆ ತೆಗೆದುಕೊಂಡು ಹೋಗಲಿ ಎಂದು ನಿರ್ಧರಿಸಿದೆ. ಆದರೆ, ಅವರ ಬೇಡಿಕೆಗಳು ಯಾವಾಗಲೂ ನನ್ನ ಬೇಡಿಕೆಗಿಂತ ಹೆಚ್ಚಿನ ಮಟ್ಟದ್ದಾಗಿರಬಾರದು ಎಂಬ ನಿಯಮವನ್ನು ಸಹ ಹಾಕಿಕೊಂಡೆ.

ನಂತರದ ದಿನಗಳಲ್ಲಿ, ನನಗಾಗಿ ಕೂಡಿಡುವುದು ಅಪರಾಧ ಎಂಬ ಭಾವನೆ ಬೆಳೆದಂತೆ ನನ್ನ ದೈನಂದಿನ ಜೀವನಕ್ಕೆ ಅವಶ್ಯಕವಾದ ವಸ್ತುಗಳನ್ನು ಹೊರತುಪಡಿಸಿ ಏನನ್ನೂ ನಾನು ರಕ್ಷಣೆ ಮಾಡಲಿಲ್ಲ. ನಾವೆಲ್ಲರೂ ಇಂತಹ ವಿಷಯಗಳನ್ನು ಮಾತನಾಡುವುದು ಸುಲಭ. ಆದರೆ ಆಚರಣೆಯಲ್ಲಿ ಅದು ತುಂಬಾ ಕಷ್ಟಕರವಾದುದು. ಆದರೆ, ಪ್ರಯತ್ನದ ಮೂಲಕ ಏನನ್ನು ಇಟ್ಟುಕೊಳ್ಳಬಹುದು ಎಂದು ಕೇಳಿದರೆ, 'ನನ್ನ ಬಳಿ ಏನೂ ಇಲ್ಲ ಎಂಬ ನಿರಾಳ ಭಾವನೆಯನ್ನು ಮಾತ್ರ ಇಟ್ಟುಕೊಳ್ಳಬಹುದು' ಎಂಬುದು ನನ್ನ ಉತ್ತರ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಂತಹ ದೃಢ ನಿರ್ಧಾರಕ್ಕೆ ನಾವು ಶರಣಾಗುವುದು ಅನಿವಾರ್ಯ.

'ಮೈ ತುಂಬಾ ಇಷ್ಟೊಂದು ಹೊದಿಕೆಯನ್ನು ಹೊದ್ದು ದೇಹವನ್ನು ರಕ್ಷಣೆ ಮಾಡಿಕೊಂಡಿರುವ ನೀವು ಆಯ್ಕೆಯ ಬಡತನ ಕುರಿತಾಗಿ ಮಾತನಾಡುತ್ತಿರುವುದು ದ್ವಂದ್ವವಲ್ಲವೆ?' ಎಂದು ನೀವು ನನ್ನನ್ನು ಕೇಳಬಹುದು. ಆದರೆ, ನೀವು ನಾನು ಮಾತನಾಡುತ್ತಿರುವ ವಿಷಯದ ಗಹನತೆಯನ್ನು ಅರ್ಥಮಾಡಿಕೊಂಡಿದ್ದೀರಿ ಎಂದು ಭಾವಿಸಿದ್ದೇನೆ. ನಾನು ಮಾತನಾಡುತ್ತಿರುವ ವಿಷಯದ ಹಿಂದೆ ಒಂದು ಪ್ರೇರಣೆ ಅಡಗಿದೆ. ನಿಮ್ಮ ಶರೀರವನ್ನು ಬಿಸಿಲು, ಮಳೆ, ಚಳಿ, ಗಾಳಿಯಿಂದ ರಕ್ಷಿಸಿಕೊಳ್ಳ ಬೇಕಾದರೆ, ಅದಕ್ಕೆ ವಸ್ತ್ರಗಳಿಂದ ರಕ್ಷಣೆ ಬೇಕು, ನಿಜ. ಆದರೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ಬಟ್ಟೆ ಮಾತ್ರ ಬೇಕು. ನಿಮ್ಮ ವಸತಿಗೆ ಮನೆ ಬೇಕು. ಆದರೆ, ಹಲವು ಕೋಣೆಗಳ, ಹಲವು ಹಂತಸ್ತಿನ ಮನೆ ಅನವಶ್ಯಕ. ಇದೇ ಮಾತನ್ನು ನಾವು ಉಪಯೋಗಿಸುವ ಆಹಾರದ ಕುರಿತಾಗಿಯೂ ಹೇಳಬಹುದು.

ನೀವು ಮತ್ತು ನಾನು ಈ ಜಗತ್ತಿನ ವರ್ತಮಾನದ ನಾಗರಿಕತೆಯನ್ನು ಮತ್ತು ರಾಜ್ಯಗಳನ್ನು ಅರ್ಥಮಾಡಿಕೊಂಡಿದ್ದೇವೆ. ನಾನು ನಿಮಗೆ ಒಂದು ಕಲ್ಯಾಣ ರಾಜ್ಯದ ಸಂತೋಷ ಹೇಗಿರಬೇಕೆಂದು ವಿವರಿಸುತ್ತೇನೆ. ಈಗಿನ ಸಂಸ್ಕೃತಿ ಅಥವಾ ನಾಗರಿಕತೆಯು

ನಿಮ್ಮೆಲ್ಲರ ಬಹು ಬೇಡಿಕೆಗಳನ್ನು ಒಳಗೊಂಡಿರುವ ಪ್ರಪಂಚವಾಗಿದೆ. ನಿಮ್ಮಲ್ಲಿ ಒಂದು ಕೊಠಡಿಯಿದ್ದರೆ, ನೀವು ಎರಡು ಅಥವಾ ಮೂರು ಕೊಠಡಿಗಳಿಗೆ ಆಸೆ ಪಡುತ್ತೀರಿ. ಅದೇ ರೀತಿ ನಿಮ್ಮಲ್ಲಿರುವ ಪೀಠೋಪಕರಣಗಳಿಗಿಂತ ಹೆಚ್ಚಿನದಕ್ಕೆ ಆಸೆ ಪಡುತ್ತೀರಿ. ನಿಮ್ಮ ಬಳಿ ಆಸ್ತಿ ಅಥವಾ ಹಣ ಹೆಚ್ಚುಹೆಚ್ಚು ಶೇಖರವಾದಷ್ಟೂ ನೀವು ಸಂತೋಷಪಡುತ್ತೀರಿ. ಜೊತೆಗೆ ನಾನು ಅದರ ಪ್ರತಿನಿಧಿ ಎಂಬ ಹೆಮ್ಮೆ ನಿಮ್ಮದಾಗಿರುತ್ತದೆ. ಆದರೆ, ಇನ್ನೊಂದು ರೀತಿಯಲ್ಲಿ ನಾನು ಅರ್ಥಮಾಡಿಕೊಂಡಿರುವ ನಾಗರಿಕತೆಯನ್ನು ಅಥವಾ ಜಗತ್ತನ್ನು ನಿಮ್ಮ ಮುಂದೆ ಇಡಲು ಬಯಸುತ್ತೇನೆ: ನಿಮ್ಮ ಬೇಡಿಕೆಗಳು ಕಡಿಮೆ ಇದ್ದಷ್ಟೂ ನೀವು ಸಂತೃಪ್ತರಾಗಿ ಇರಲು ಸಾಧ್ಯ. ಇದು ಕೇವಲ ಸಂತೋಷಕ್ಕಾಗಿ ಮಾತ್ರವಲ್ಲ, ಆತ್ಮತೃಪ್ತಿಗಾಗಿ ಮತ್ತು ಸಮಾಜದ ಇತರರ ಸೇವೆಯ ದೃಷ್ಟಿಯಿಂದ ಒಳ್ಳೆಯದು. ನಿಮ್ಮ ಮಿತವಾದ ಹಾಗೂ ಸರಳವಾದ ಜೀವನದಿಂದ ದೇಹ, ಮನಸ್ಸು ಮತ್ತು ಆತ್ಮಕ್ಕೆ ಶಾಂತಿ ಹಾಗೂ ನೆಮ್ಮದಿ ದೊರೆಯುತ್ತದೆ.

ವ್ಯಕ್ತಿ ಹೆಚ್ಚು ಹೆಚ್ಚು ಸಂಪಾದಿಸುತ್ತಾ, ಶೇಖರಿಸುತ್ತಾ ಹೋದಂತೆ, ಆತ ಅಥವಾ ಆಕೆ ತನ್ನನ್ನು ಮಾತ್ರವಲ್ಲದೆ, ತನ್ನ ನೆರೆಹೊರೆಯವರನ್ನು ವಂಚಿಸುತ್ತಾ ಹೋಗುತ್ತಾನೆ; ಹೋಗುತ್ತಾಳೆ. ನನ್ನೊಳಗಿನ ಪ್ರೇರಣೆಯ ಹಿನ್ನೆಲೆಯಿಂದ ಹೇಳುವುದಾದರೆ, ನಾನು ಈ ಜೀವನದಲ್ಲಿ ಎಲ್ಲವನ್ನೂ ತ್ಯಜಿಸಿದ್ದೇನೆ. ನೀವು ನನ್ನ ಪ್ರಾಮಾಣಿಕತೆಯನ್ನು ಪ್ರಶ್ನಿಸಬಾರದು. ನನ್ನ ಉದ್ದೇಶವನ್ನು ಇಲ್ಲಿ ಗಮನಿಸಬೇಕು. ನನ್ನ ದೃಷ್ಟಿಯಲ್ಲಿ ಮನುಷ್ಯನ ಅತಿಯಾದ ಬೇಡಿಕೆ ಎಂದರೆ, ಅದು ಒಂದು ರೀತಿಯಲ್ಲಿ ಬಲೆ ಅಥವಾ ಕೊನೆಯಿರದ ಬೇಡಿಕೆಗಳ ಕುಣಿಕೆ ಎಂದು ನನ್ನ ಭಾವನೆ. ನೀವು ಧರಿಸುವ ವಸ್ತ್ರಗಳಲ್ಲಿ ಒಂದನ್ನು ಕಡಿಮೆ ಮಾಡಿದರೆ, ಅದು ತನ್ನ ದೇಹದ ಮೇಲೆ ವಸ್ತ್ರವೇ ಇಲ್ಲದಿರುವ ಇನ್ನೊಬ್ಬ ವ್ಯಕ್ತಿಯ ದೇಹವನ್ನು ಮುಚ್ಚಬಲ್ಲದು. ಇದನ್ನು ಹೇಗೆ ತೀರ್ಮಾನಿಸುವುದು? ನಾನು ಅನ್ನ, ವಸತಿ, ಮತ್ತು ಮೈ ಮೇಲೆ ವಸ್ತ್ರವಿಲ್ಲದ ಲಕ್ಷಾಂತರ ಅಮಾಯಕ ಜೀವಗಳಿಗೆ ಜೀವಂತ ಸಾಕ್ಷಿಯಾಗಿದ್ದೇನೆ. ಈಗಲೂ ಸಹ ಸಾಕ್ಷಿಯಾಗುತ್ತಿದ್ದೇನೆ. ಇಂತಹ ನರಳುವವರ ಜಗತ್ತಿನಲ್ಲಿ ಉಳ್ಳವರ ಜಗತ್ತನ್ನು ನೀವು ಹೇಗೆ ಸಮರ್ಥಿಸಿಕೊಳ್ಳಲು ಸಾಧ್ಯ?

ನಿಜ, ನಾನು ಹೇಳುವ ಆಯ್ಕೆಯ ಬಡತನವನ್ನು ಸ್ವೀಕರಿಸುವುದು ಮತ್ತು ಅನುಸರಿಸುವುದು ನಿಜಕ್ಕೂ ತ್ರಾಸದಾಯಕವಾದುದು. ಅದು ನಮ್ಮ ಜೀವನದಲ್ಲಿ ಅನೇಕ ವೈರುಧ್ಯಗಳನ್ನು ಒಳಗೊಂಡಿದೆ. ನೀವು ಆಸ್ತಿಯನ್ನು ಸಂಪಾದಿಸುವುದಾದರೆ ಅಥವಾ ಅದರ ಒಡೆತನ ಬಯಸುವುದಾದರೆ, ಅದರ ಮೂಲ ಉದ್ದೇಶ ನಿಮ್ಮ ಯೋಗಕ್ಷೇಮಕ್ಕೆ ಮಾತ್ರ ಸೀಮಿತವಾಗಿರಬಾರದು. ಕಷ್ಟದಲ್ಲಿರುವ ಅಥವಾ ಅವಶ್ಯಕತೆ

ಇರುವ ಇನ್ನೊಂದು ಜೀವಕ್ಕೂ ನೆರವಾಗುವಂತೆ ಇರಬೇಕು. ಒಬ್ಬ ವ್ಯಕ್ತಿ ನಿಮ್ಮ ಬಳಿ ಒಂದು ಜೊತೆ ವಸ್ತ್ರ ಬೇಡಿದರೆ ನೀವು ಕೊಡದೆ ಇರಲು ಸಾಧ್ಯವಿಲ್ಲ; ಅಂಥ ವ್ಯಕ್ತಿಗೆ ನೀವು ನಿಮ್ಮ ಮನೆಯ ಬಾಗಿಲುಗಳನ್ನು ಮುಚ್ಚಲು ಸಾಧ್ಯವಾಗುವುದಿಲ್ಲ ಅಥವಾ 'ಆತನಿಗೆ ಸಹಾಯ ಮಾಡು' ಎಂದು ಯಾರೋ ಇನ್ನೊಬ್ಬನಿಗೆ ಹೇಳಲು ಬರುವುದಿಲ್ಲ. ಇಟ್ಟುಕೊಳ್ಳುವ ತೃಪ್ತಿಗಿಂತ, ನೀಡುವ ನೆಮ್ಮದಿ ಈ ಜಗತ್ತಿನಲ್ಲಿ ದೊಡ್ಡದು.

ಆಯ್ಕೆಯ ಬಡತನ ಕುರಿತ ನಿಜವಾದ ಅರ್ಥವನ್ನು ವಿವರಿಸುವುದಾದರೆ, ನಿಮಗೆ ಒಂದು ಮಾದರಿಯನ್ನು ಹೇಳುತ್ತೇನೆ. ಡಾ. ರಾಯ್‌ಡೆನ್ ಎಂಬುವವರು ತಾವು ಜಗತ್ತಿನ ಆಯ್ಕೆಯ ಬಡತನದ ಪರಮ ಪ್ರತಿಪಾದಕ ಎಂದು ಹೇಳಿಕೊಂಡಿದ್ದಾರೆ. ಅತ್ಯಂತ ಮುಜುಗರದಿಂದ ನಾನು ಇಂತಹ ಹೇಳಿಕೆಗಳನ್ನು ನಿರಾಕರಿಸುತ್ತೇನೆ. ನಾನು ನಂಬಿರುವ ಸತ್ಯ ಮತ್ತು ನಾನು ಆಯ್ಕೆ ಮಾಡಿಕೊಂಡಿರುವ ಮತ್ತು ನನ್ನ ಆಲೋಚನೆಯ ಸರಳವಾದ ಜೀವನ ಅಥವಾ ಆಯ್ಕೆಯ ಬಡತನ ಕುರಿತಂತೆ ವಿವರಿಸುವುದಾದರೆ, ಈ ಕುರಿತು ನನಗೆ ಸಂಪೂರ್ಣ ತೃಪ್ತಿಯಿದೆ. ಯಾವುದೇ ವ್ಯಕ್ತಿಗೆ ಇಂತಹ ಜೀವನದಲ್ಲಿ ನಿಶ್ಚಿತವಾದ ಆಸಕ್ತಿ ಮತ್ತು ತೀರ್ಮಾನಗಳಿರಬೇಕು. 'ನಾನು ಯಾವುದೇ ಕಾರಣಕ್ಕೆ ಈ ಭೂಮಿಯ ಮೇಲೆ ಅನವಶ್ಯಕವಾಗಿ ಯಾವುದೇ ವಸ್ತುಗಳನ್ನು ಶೇಖರಿಸುವುದಿಲ್ಲ ಮತ್ತು ಅವುಗಳ ಮೇಲಿನ ಒಡೆತನ ಸಾಧಿಸುವುದಿಲ್ಲ' ಎಂಬ ದೃಢ ನಿರ್ಧಾರ ಬೇಕಾಗುತ್ತದೆ. ನನ್ನ ದೃಷ್ಟಿಯಲ್ಲಿ, ಈ ಶರೀರದ ಮೇಲೆ ಕೂಡ ನಾವು ಅಧಿಕಾರ ಹೊಂದಿರಬಾರದು.

ನೀವು ನನ್ನನ್ನು ನಂಬುವುದಾದರೆ, ಅಥವಾ ನೀವು ಪ್ರಾರ್ಥನಾ ಮಂದಿರಕ್ಕೆ (ಚರ್ಚ್‌ಗೆ)ಹೋಗಿ ದೇವರನ್ನು ಪ್ರಾರ್ಥಿಸುವ ವ್ಯಕ್ತಿಗಳಾಗಿದ್ದರೆ, ದೇವರನ್ನು ನಂಬುವವ ರಾಗಿದ್ದರೆ, ದೇಹ ಮತ್ತು ಆತ್ಮ ಎರಡೂ ಒಂದೇ ಅಲ್ಲ ಎಂಬುದನ್ನು ನಂಬುತ್ತೀರಿ. ಶರೀರವೆಂಬುದು ಆತ್ಮದಲ್ಲಿ ತಾತ್ಕಾಲಿಕವಾಗಿ ಮನೆ ಮಾಡಿಕೊಂಡಿರುವಂತಹದ್ದು. ಅದನ್ನು ತಾತ್ಕಾಲಿಕವಾಗಿ ಆ ಸೃಷ್ಟಿಕರ್ತ ನಿಮಗೆ ನೀಡಿದ್ದಾನೆ. ಈ ನಂಬಿಕೆಯ ಪ್ರಕಾರ ದೇಹ ಅಥವಾ ಶರೀರ ನಮ್ಮದಲ್ಲ. ಆ ಸೃಷ್ಟಿಕರ್ತನು ಇದನ್ನು ಯಾವಾಗ ಬೇಕಾದರೂ ಹಿಂಪಡೆಯಬಲ್ಲ. ಆದ್ದರಿಂದ ಈ ಕುರಿತು ನನ್ನ ನಿಲುವು ಮತ್ತು ಆಸೆಗಳು ಏನೆಂದರೆ, ಈ ಶರೀರವನ್ನು ನಾವು ಅವನಿಗೆ ಒಪ್ಪಿಸಬೇಕು. ಈ ದೇಹವನ್ನು ವಿಲೇವಾರಿ ಮಾಡಬೇಕೇ ಹೊರತು, ಅದು ಛಿದ್ರಗೊಳ್ಳದಂತೆ ನೋಡಿಕೊಳ್ಳಬೇಕು. ಆದರೆ, ಈ ಪ್ರಕ್ರಿಯೆಯಲ್ಲಿ ಸ್ವಹಿತಾಸಕ್ತಿ ಅಥವಾ ಆತ್ಮತೃಪ್ತಿಯ ಭಾವ ಇರಕೂಡದು; ಬದಲಾಗಿ ಸಂಪೂರ್ಣ ಸೇವಾ ಮನೋಭಾವ ಇರಬೇಕು. ಶರೀರಕ್ಕೆ ಸಂಬಂಧ ಪಟ್ಟಂತೆ ಹೇಳುವುದಾದರೆ, ಒಂದು ದೇಹಕ್ಕೆ ಎಷ್ಟು ಪ್ರಮಾಣದಲ್ಲಿ ವಸ್ತ್ರ ಬೇಕು?

ಜೊತೆಗೆ, ಬೇರೆ ಯಾವ ವಸ್ತುಗಳ ಅವಶ್ಯಕತೆ ಇದೆ? ಈ ಕುರಿತು ನನ್ನೊಳಗೆ ಹಲವಾರು ವರ್ಷಗಳ ಕಾಲ ನಿರಂತರ ಜಿಜ್ಞಾಸೆ ಏರ್ಪಟ್ಟಿದೆ. ಇಲ್ಲಿ ನಾನು ನಿಮಗೆ ನನ್ನ ವಿರುದ್ಧವೇ ಸಾಕ್ಷಿ ನೀಡಬಯಸುತ್ತೇನೆ. ನಾನು ನಿಜವಾದ ಮತ್ತು ಪರಿಪೂರ್ಣವಾದ ಆಯ್ಕೆಯ ಬಡತನ ಅಥವಾ ಮಿತವಾದ ಸರಳವಾದ ಜೀವನದ ಹಂತವನ್ನು ತಲುಪಲು ಸಾಧ್ಯವಾಗಿಲ್ಲ. ಈ ವಿಷಯದಲ್ಲಿ, ಅಂದರೆ ಈ ನಿಟ್ಟಿನಲ್ಲಿ, ಇನ್ನೂ ಹೋರಾಟ ನಡೆಸುತ್ತಿರುವ ಒಬ್ಬ ಸಾಮಾನ್ಯ ಮನುಷ್ಯನಾಗಿದ್ದೇನೆ. ಒಮ್ಮೆ ಈ ವಿಷಯದ ಕುರಿತಾಗಿ ಯಾರೋ ಒಬ್ಬ ವ್ಯಕ್ತಿಯಿಂದ ನನಗೆ ಸವಾಲು ಎದುರಾಗಿತ್ತು. ಆಗ ನಾನು ಎಲ್ಲರಿಗಿಂತ ಮತ್ತು ನನ್ನ ನೆರೆಹೊರೆಯವರಿಗಿಂತ ಹೆಚ್ಚು ಶ್ರೀಮಂತ ಎಂದು ಪ್ರತಿಪಾದಿಸಿಕೊಂಡಿದ್ದೆ. ನನ್ನ ಪ್ರಕಾರ ಶ್ರೀಮಂತ ಎಂದರೆ ಏನೂ ಹೊಂದಿಲ್ಲದ ನಿರಾಳ ಮನೋಭಾವವನ್ನು ಹೊಂದಿರುವ ವ್ಯಕ್ತಿ ಎಂದರ್ಥ.

ಸರಳ ಹಾಗೂ ಮಿತವಾದ ಜೀವನದ ನಿಯಮಗಳನ್ನು ಪಾಲಿಸಿದವರಿಗೆ ಮಾತ್ರ ಈ ವಿಷಯದಲ್ಲಿ ಸಂಪೂರ್ಣವಾದ ತೃಪ್ತಿ ಸಿಗುವುದು ಸಾಧ್ಯ. ಆದರೆ, ಇದರಲ್ಲಿ ಪರಿಪೂರ್ಣತೆಯ ಸಾಧ್ಯತೆ ಕಷ್ಟ ಎಂಬುದು ಕೂಡ ಅಷ್ಟೇ ಸತ್ಯ. ಮನುಷ್ಯ ತನ್ನ ಸಹಜ ಭಾವನೆಗಳನ್ನು ಹತ್ತಿಕ್ಕಿದಾಗ ಮಾತ್ರ ಪೂರ್ಣತೆ ಸಾಧ್ಯವಾಗುವಂತಹದ್ದು. ಇಂತಹ ಆದರ್ಶ ಸ್ಥಿತಿಯನ್ನು ತಲುಪಬೇಕಾದರೆ, ನಿಮ್ಮಲ್ಲಿರುವ ಎಲ್ಲವನ್ನೂ ತ್ಯಾಗ ಮಾಡಬೇಕಾಗುತ್ತದೆ. ನಾವು ಏನನ್ನೂ ಹೊಂದಿರಬಾರದು. ನಮ್ಮ ಬಳಿ ಭೌತಿಕವಾಗಿ ಏನೂ ಇಲ್ಲದಿದ್ದರೂ ಈ ಜಗತ್ತಿನ ಎಲ್ಲ ಸೌಕರ್ಯಗಳನ್ನೂ ನಾವು ಹೊಂದಿರುತ್ತೇವೆ. ಆಹಾರ ನಮಗೆ ಅವಶ್ಯಕ. ಅದು ಸಹಜವಾಗಿ ನಮಗೆ ದೊರೆಯುತ್ತದೆ. ನಿಮ್ಮಲ್ಲಿ ಬಹುತೇಕ ಮಂದಿ ಪ್ರಾರ್ಥನೆ ಸಲ್ಲಿಸುವಾಗ ಒಳ್ಳೆಯ ಆಹಾರಕ್ಕಾಗಿ, ಒಳ್ಳೆಯ ಜೀವನಕ್ಕಾಗಿ ಪ್ರಾರ್ಥಿಸುವುದನ್ನು ನಾನು ಕೇಳಿದ್ದೇನೆ. ಜನರ ಪ್ರಾರ್ಥನೆಗೆ ಉತ್ತರವೆಂಬಂತೆ ಅವರಿಗೆ ಒಳ್ಳೆಯ ಆಹಾರ ದೊರಕುವುದುಂಟು. ನಾನು ಇದನ್ನು ನಂಬುತ್ತೇನೆ. ಆದರೆ ನಿಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ನೀವು ಇದಕ್ಕಿಂತ ಮತ್ತೊಂದು ಹೆಜ್ಜೆ ಮುಂದೆ ಬರಬೇಕು. ನೀವು ನನ್ನ ರೀತಿಯಲ್ಲಿ ಸ್ವಯಂಪ್ರೇರಿತರಾಗಿ ಈ ಜಗತ್ತಿನಲ್ಲಿ ಎಲ್ಲವನ್ನೂ ತ್ಯಾಗ ಮಾಡಬೇಕು. ನೀವು ಮಾಡುವ ತ್ಯಾಗದಲ್ಲಿ ನಿಮ್ಮ ಶರೀರವೂ ಒಳಗೊಂಡಿರಬೇಕು. ಈ ಹಂತವನ್ನು ತ್ಯಾಗಕ್ಕೆ ಸಿದ್ಧವಾದ ಹಂತ ಎಂದು ನಾನು ಕರೆಯುತ್ತೇನೆ. ವಾಸ್ತವವಾಗಿ ಇದಕ್ಕೆ ನಿಮ್ಮನ್ನು ನೀವು ಕಠಿಣ ಪರೀಕ್ಷೆಗೆ ಒಡ್ಡಿಕೊಳ್ಳುವುದರ ಮೂಲಕ, ಎಲ್ಲಾ ಭಾವನೆಗಳನ್ನು ಮತ್ತು ಆಸೆಗಳನ್ನು ಹತ್ತಿಕ್ಕಬೇಕಾಗುತ್ತದೆ. ಒಂದು ರೀತಿಯಲ್ಲಿ ಇದು ಕಠಿಣವಾದ ಪ್ರಯತ್ನ. ಇದರಲ್ಲಿ

ಯಶಸ್ವಿಯಾದವರಿಗೆ ಯಾವುದೇ ಐಹಿಕವಾದ ಆಸೆಗಳು ಮತ್ತು ಬೇಡಿಕೆಗಳ ಅಗತ್ಯ ಇರುವುದಿಲ್ಲ.

ಇಂತಹ ಸೇವೆ ಅಥವಾ ಮಿತವಾದ ಸರಳ ಜೀವನದ ಪರಿಕಲ್ಪನೆಯು ನಾನು ದಕ್ಷಿಣ ಆಫ್ರಿಕಾದಲ್ಲಿ ವಕೀಲನಾಗಿ ಕಾರ್ಯ ನಿರ್ವಹಿಸುತ್ತಿರುವಾಗ ನನ್ನೊಳಗೆ ಮೊಳಕೆಯೊಡೆಯಿತು. ನಾನು ಸಂಪಾದಿಸುತ್ತಿದ್ದ ಹಣ ನನ್ನ ಹಲವು ಬೇಡಿಕೆಗಳನ್ನು ಪೂರೈಸುವುದರ ಜೊತೆಗೆ ಹಲವು ವಸ್ತುಗಳ ಮೇಲಿನ ಒಡೆತನವನ್ನು ಸಹ ನೀಡುತ್ತಿತ್ತು. ಆದರೆ, ಆ ದಿನಗಳಲ್ಲಿ ಇಂತಹ ಸೇವೆ ಮಾಡುವ ಅವಕಾಶ ನನಗೆ ದೊರಕಿರಲಿಲ್ಲ. ಈಗ ಇದು ಒಳಿತು ಅಥವಾ ಕೆಟ್ಟದ್ದು ಎಂದು ನಾನು ಏನನ್ನೂ ಹೇಳಲಾರೆ. ಅದು ಆ ದೇವರಿಗೆ ಮಾತ್ರ ಗೊತ್ತಿದೆ. ನನಗೀಗ ಯಾವುದರ ಅಗತ್ಯವೂ ಇಲ್ಲ. ನಾನು ಎಲ್ಲವನ್ನೂ ತ್ಯಜಿಸಿದ ಮೇಲೆ ನನ್ನ ಬಳಿ ಇರುವುದನ್ನು ನನ್ನ ನೆರೆಹೊರೆಯವರ ಜೊತೆ ಹಂಚಿಕೊಂಡು ಬದುಕುವುದನ್ನು ಆರಂಭಿಸಿದೆ. ನಾನು ನನ್ನ ಬಳಿ ಇರುವುದನ್ನು ಈ ಜಗತ್ತಿನ ಎಲ್ಲರೊಂದಿಗೆ ಹಂಚಿಕೊಳ್ಳಲಾರೆ; ಕೇವಲ ನನ್ನ ನೆರೆಹೊರೆಯವರ ಜೊತೆ ಮಾತ್ರ ಹಂಚಿಕೊಳ್ಳಲು ನನಗೆ ಸಾಧ್ಯವಾಗಿದೆ. ಇದು ಸಹಜವಾಗಿ ಮನುಷ್ಯನೊಬ್ಬನ ಮಿತಿ ಕೂಡ ಹೌದು. ಈ ಆದರ್ಶದ ಹಂತವನ್ನು ತಲುಪಿದ ನಂತರ ನನಗೆ ಯಾವುದರ ಅಗತ್ಯವೂ ಈಗ ಇಲ್ಲವಾಗಿದೆ. ಆದ್ದರಿಂದ, ಜಗತ್ತಿನ ಎಲ್ಲಾ ಸಂಪನ್ಮೂಲಗಳ ಕುರಿತಂತೆ ನೀವು ನಿರ್ಧಾರ ತೆಗೆದುಕೊಳ್ಳಬಹುದೆಂಬ ಆಶಯದಿಂದ ಮಹತ್ತರ ವಿಷಯಗಳೆಂಬಂತೆ ಇವನ್ನು ನಿಮ್ಮ ಮುಂದೆ ಇಟ್ಟಿದ್ದೇನೆ.

ಸರಳ ಹಾಗೂ ಮಿತವ್ಯಯದ ಜೀವನಕ್ಕೆ ನಿಮ್ಮ ದೇಹ, ಮನಸ್ಸು ಮತ್ತು ನೀವು ಶರಣಾಗತರಾದರೆ ಈ ಜಗತ್ತಿನ ಸಕಲ ಸಂಪನ್ಮೂಲಗಳು ನಿಮ್ಮ ಪಾದದಡಿ ಇರುತ್ತವೆ. ಆದರೆ, ಅದು ನಿಮ್ಮ ಉಪಯೋಗಕ್ಕಾಗಿ ಅಲ್ಲ, ಜಗತ್ತಿನ ಸೇವೆಗಾಗಿ ಎಂಬುದನ್ನು ನೀವು ಮರೆಯಬಾರದು. ಇತ್ತೀಚೆಗೆ ನನ್ನ ಮಿತ್ರರಾದ ಆ್ಯಂಡ್ರೂಸ್, ಬ್ರಿಟನ್ನಿನ ಪ್ರಧಾನಿಯವರು ವರದಿಗಾರರೊಬ್ಬರಿಗೆ ಬರೆದಿದ್ದ ಪತ್ರವೊಂದರ ಮಾಹಿತಿಯನ್ನು ನನ್ನ ಗಮನಕ್ಕೆ ತಂದರು. ಬ್ರಿಟನ್ನಿನ ರೈಲುಗಳ ಮೇಲೆ 'ಇಂಗ್ಲೆಂಡಿನಲ್ಲಿ ತಯಾರಾಗುವ ವಸ್ತುಗಳನ್ನು ಕೊಳ್ಳಿರಿ, ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಕೊಳ್ಳಿರಿ, ಉದ್ಯೋಗಗಳಿಗೆ ಬ್ರಿಟಿಷ್ ಕಾರ್ಮಿಕರನ್ನು ಮಾತ್ರ ನೇಮಕ ಮಾಡಿಕೊಳ್ಳಿರಿ' ಎಂದು ನೀಡಲಾಗಿದ್ದ ಜಾಹೀರಾತನ್ನು ಪ್ರಧಾನಿಯವರು ಸಮರ್ಥಿಸಿಕೊಂಡಿದ್ದರು. ಉದ್ಯೋಗ ಸೃಷ್ಟಿಗೆ ಕೈಗೊಳ್ಳುವ ಯೋಜನೆಗಳಲ್ಲಿ ಇದೂ ಸಹ ಒಂದು ಎಂಬುದನ್ನು ನಾನು ಬಲ್ಲೆ. ಆದರೆ, ಇದು ತಾತ್ಕಾಲಿಕ ಪರಿಹಾರವೇ ಹೊರತು ಶಾಶ್ವತವಾದುದಲ್ಲ. ಇದಕ್ಕೆ ನನ್ನ

ಸಲಹೆ ಏನೆಂದರೆ, ಇಂತಹ ಯಾತನಾಮಯ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಆಯ್ಕೆಯ ಬಡತನ ಅಥವಾ ಸರಳವಾದ ಜೀವನ ಸೂಕ್ತವಾದ ಉಪಾಯ ಅಥವಾ ಪರಿಹಾರ. ಕಷ್ಟಗಳಿಂದ ಹೊರಬರುವ ಇಂತಹ ಕ್ರಮದಿಂದಾಗಿ ಜೀವನದಲ್ಲಿ ನೀವು ಸಮಸ್ಯೆಗಳ ಮೇಲೆ ಸವಾರಿ ಮಾಡುವ ಶಕ್ತಿಯನ್ನು ಪಡೆಯುತ್ತೀರೇ ಹೊರತು ಬೇರೆ ಏನನ್ನೂ ಕಳೆದುಕೊಳ್ಳುವುದಿಲ್ಲ. ಇದು ಸೀಮಿತ ದೃಷ್ಟಿಕೋನದ ಆಲೋಚನೆ ಎಂದು ನಿಮಗೆ ಅನ್ನಿಸಿದರೂ ಕೂಡ ನಮ್ಮ ಪೂರ್ವಿಕರ ಜೀವನ ಮೌಲ್ಯಗಳನ್ನು ಮರು ನವೀಕರಿಸುವ ಕ್ರಮಗಳಲ್ಲಿ ಇದೂ ಒಂದಾಗಿದೆ.

ನಾವು ಸಮಸ್ಯೆಗಳ ನೀರಿನ ಆಳಕ್ಕೆ ಮತ್ತೆ ಇಳಿಯಬಾರದು. ಸರಳ ಬದುಕನ್ನು ಒಪ್ಪಿಕೊಂಡವರಿಗೆ ಅಥವಾ ಅದನ್ನು ಶ್ಲಾಘಿಸುವವರಿಗೆ ಆ ಕುರಿತಂತೆ ಕೆಲವು ಹೊಳಹುಗಳನ್ನು ನಾನು ನೀಡಬಲ್ಲೆ. ಜಗತ್ತು ಎಂದಿಗೂ ತಪ್ಪು ಹಾದಿಯಲ್ಲಿ ಚಲಿಸುವುದಿಲ್ಲ ಎಂಬುದು ನನ್ನ ಬಲವಾದ ನಂಬಿಕೆಯಾಗಿದೆ. ನನ್ನ ದೃಷ್ಟಿಯಲ್ಲಿ ಸರಳವಾದ ಬದುಕಿಗಾಗಿ ನಾವು ಶಪಥ ಮಾಡಿದಾಗ ಮಾತ್ರ ಇಲ್ಲಿ ಹೊಸ ಜಗತ್ತು ಸೃಷ್ಟಿಯಾಗಲು ಸಾಧ್ಯ. ನೀವು ಈ ಕುರಿತು ವಾಸ್ತವವಾಗಿ ಯೋಚಿಸುವುದರ ಮೂಲಕ ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ಉಳ್ಳವರು ತಮ್ಮ ವೇತನವನ್ನು ಬಿಟ್ಟುಕೊಡದಿದ್ದರೆ ನೀವು ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗು ವುದಿಲ್ಲ. ಕಾನೂನಿನ ಮುಖಾಂತರ ಅವರನ್ನು ಒತ್ತಾಯಿಸಬಹುದು ನಿಜ. ಆಗ ಅವರ ಬಾಯಿಂದ, 'ನಾವೇನು ಮಾಡಲು ಸಾಧ್ಯ? ನಮ್ಮ ಕೈಯಲ್ಲಿ ನಿಯಮಗಳನ್ನು ತಡೆಯಲು ಸಾಧ್ಯವಿಲ್ಲ' ಎಂಬ ಅಸಹಾಯಕ ನುಡಿಗಳು ಹೊರ ಬರಬಹುದು. ಆದರೆ ಊಹಿಸಿಕೊಳ್ಳಿ. ಇಂತಹ ದ್ವಂದ್ವ ಯುದ್ಧದಲ್ಲಿ ನಮ್ಮ ಶರೀರದೊಳಗೆ ಅಥವಾ ಮನಸ್ಸಿನೊಳಗೆ ಉದ್ಭವವಾಗುವ ಅಗೋಚರ ಸೇವಕರು ಆಯ್ಕೆಯ ಬಡತನವನ್ನು ಒಪ್ಪಿಕೊಳ್ಳುವರು. ಅವರು ಸರಳವಾದ ಜೀವನವನ್ನು ಒಪ್ಪಿಕೊಳ್ಳದವರಿಗೆ ದಾರಿ ದೀಪವಾಗಿ ಮಾರ್ಗದರ್ಶನ ಮಾಡುವರು. ಆದ್ದರಿಂದ ಆಯ್ಕೆಯ ಬಡತನ ಕುರಿತು ಶ್ರಮ ಪಡುವ ಹಾಗೂ ಮಾತನಾಡುವ ನನ್ನ ಅನುಯಾಯಿಗಳ ಜೊತೆ ನಾನು ಹೋಗಬೇಕಾದ ಅವಶ್ಯಕತೆ ಇಲ್ಲ. ಉಳ್ಳವರು ತಮ್ಮಲ್ಲಿರುವುದನ್ನು ತ್ಯಜಿಸುವುದರ ಮೂಲಕ ಸರಳ ಬದುಕನ್ನು ಹೇಗೆ ಆಯ್ಕೆ ಮಾಡಿಕೊಳ್ಳಬೇಕೆಂದು ನಾನು ಅವರಿಗೆ ಹಾರೈಸುವ ಅಗತ್ಯವೂ ಇಲ್ಲ. ಈ ಭೂಮಿಗೆ ಮಾಂತ್ರಿಕ ಶಕ್ತಿಯೊಂದು ಇರುವ ಪರಿಣಾಮ ಅದು ತಂತಾನೆ ಪರಿವರ್ತನೆಯಾಗುತ್ತಾ ಸಾಗುತ್ತದೆ. ಇದು ಒಂದು ರೀತಿಯಲ್ಲಿ ಯಾತನಾಮಯವಾದ ಪ್ರಕ್ರಿಯೆ. ಸ್ವಯಂ ಬಡತನ ಅಥವಾ ಆಯ್ಕೆಯ ಸರಳ ಜೀವನ ಕುರಿತು ಮಾತನಾಡುವ ಮೊದಲು ಒಬ್ಬ ಮನುಷ್ಯನಿಗೆ ಬದುಕಲು

ಅಗತ್ಯವಿರುವ ಮೂಲಭೂತ ಬೇಡಿಕೆಗಳ ಕುರಿತಂತೆ ಸ್ಪಷ್ಟ ತಿಳುವಳಿಕೆ ಇರುವುದು ಅಗತ್ಯವಾಗಿದೆ.

ನನ್ನಂತಹ ಒಬ್ಬ ಸಾಮಾನ್ಯ ವ್ಯಕ್ತಿ ಉಳ್ಳವರ ನಡುವೆ ಸರಳವಾಗಿ ಬದುಕಿದ ಮಾತ್ರಕ್ಕೆ ಏನಾಗಬಲ್ಲದು? ಅವರ ಎದೆಯೊಳಗೆ ಆಶಾಕಿರಣ ಮೂಡಬಹುದೆ? ಅಥವಾ ನನ್ನ ಸಲಹೆಯನ್ನು ಅವರು ಸ್ವೀಕರಿಸುವರೆ? ನಾನು ಅಂತಹವರಿಗೆ ಯಾವುದೇ ತಕ್ಷಣದ ಪರಿಹಾರವನ್ನು ಸೂಚಿಸದಿದ್ದರೂ, ಅಂತಹವರ ನಡುವೆ ನನ್ನಂತಹ ಸಾಮಾನ್ಯ ವ್ಯಕ್ತಿಯ ಸರಳ ಬದುಕು ಅವರ ಗಮನ ಸೆಳೆಯಬಹುದು. 'ಈತನ ಬಳಿ ಏನೂ ಇಲ್ಲದಿದ್ದರೂ ಸಂತೋಷದ ಹಾಗೂ ತೃಪ್ತಿದಾಯಕ ಬದುಕನ್ನು ಬದುಕುತ್ತಿದ್ದಾನಲ್ಲ!' ಎಂದು ಹೇಳಬಹುದು. ಈ ಸಂದರ್ಭದಲ್ಲಿ ನಾನು ಅವರೊಡನೆ ವಾದಕ್ಕೆ ಇಳಿಯುವುದಿಲ್ಲ. ಅವರು ತಮ್ಮೊಳಗೆ ತಾವೇ ವಾದಕ್ಕೆ ಇಳಿಯತೊಡಗುತ್ತಾರೆ. ಇಂತಹ ನನ್ನ ಜೀವನದ ಶ್ರೀಮಂತ ಅನುಭವಗಳನ್ನು ನಾನು ಈ ಜಗತ್ತಿನ ಎಷ್ಟು ಮಂದಿಯೊಂದಿಗೆ ಹಂಚಿಕೊಳ್ಳಲು ಸಾಧ್ಯ? ಆದರೆ, ಈ ದಿನ ಸ್ವಯಂಪ್ರೇರಿತ ಬಡತನ ಅಥವಾ ಸರಳ ಜೀವನ ಕುರಿತಾಗಿ ನನ್ನ ಭಾವನೆಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ಲಕ್ಷಾಂತರ ಜನರ ನಡುವೆ ಇಲ್ಲಿ ನೆರೆದಿರುವ ಸೀಮಿತ ಸಮಾನ ಮನಸ್ಕರೊಂದಿಗೆ ನನ್ನ ಅನುಭವಗಳನ್ನು ಹಂಚಿಕೊಂಡಿದ್ದೇನೆ. ಇದು ವಿವರಣೆಗೆ ನಿಲುಕದ ವಿಷಯ. ಸರಳವಾದ ಜೀವನದಲ್ಲಿ ವ್ಯಕ್ತಿಯೊಬ್ಬ ಸಂತೋಷ ಮತ್ತು ಸಾಮರ್ಥ್ಯ ಎರಡನ್ನೂ ತನ್ನದಾಗಿಸಿಕೊಳ್ಳಲು ಸಾಧ್ಯ. ಇದನ್ನು ನೀವು ಪರೀಕ್ಷೆ ಮತ್ತು ಪ್ರಯೋಗಗಳಿಂದ ಮಾತ್ರ ಅನುಭವಿಸಲು ಸಾಧ್ಯವಾಗುತ್ತದೆ.

ನಿಮ್ಮ ದೈನಂದಿನ ಬದುಕಿನ ಒತ್ತಡದ ನಡುವೆಯೂ ನನ್ನ ಈ ಅನುಭವದ ಮಾತುಗಳನ್ನು ಮನವಿಟ್ಟು ಕೇಳಿದ ನಿಮ್ಮೆಲ್ಲರಿಗೂ ನನ್ನ ಅನಂತ ಧನ್ಯವಾದಗಳು. ಈಗ ನಮ್ಮ ಪ್ರಾರ್ಥನಾ ಸಭೆಗೆ ಇನ್ನೂ ಹತ್ತು ನಿಮಿಷಗಳ ಕಾಲಾವಕಾಶವಿದೆ. ನಿಮ್ಮಲ್ಲಿ ನನ್ನ ಮಾತುಗಳ ಕುರಿತಾಗಿ ಯಾವುದೇ ಸಂಶಯ ಅಥವಾ ಪ್ರಶ್ನೆಗಳಿದ್ದರೆ ಕೇಳಬಹುದು. ಈ ಕುರಿತಂತೆ ನೀವು ಮುಜುಗರ ಪಡುವ ಅಗತ್ಯವಿಲ್ಲ. ನಿಮ್ಮ ಪ್ರಶ್ನೆಗಳಿಗೆ ನಾನು ಉತ್ತರಿಸಲು ಸಿದ್ಧನಿದ್ದೇನೆ.

(೧೯೩೧. ಗಾಂಧೀಜಿ ಲಂಡನ್ ನಗರದಲ್ಲಿ ನಡೆದ ದುಂಡು ಮೇಜಿನ ಸಭೆಗೆ ಹೋದ ಸಂದರ್ಭದಲ್ಲಿ ಸ್ಥಳೀಯ ನಾಗರಿಕರೊಂದಿಗೆ ನಡೆಸಿದ ಸಂವಾದದ ಸಂಕ್ಷಿಪ್ತ ಲೇಖನ ರೂಪ.)

ಕನ್ನಡಕ್ಕೆ: **ಜಗದೀಶ ಕೊಪ್ಪ**

೫೦

ರಾಜಕೀಯ ಅಧಿಕಾರ ಮತ್ತು ಸಾಮಾಜಿಕ ಸುಧಾರಣೆ

ಆ ದಿನದ ಚರ್ಚೆಯಲ್ಲಿ ಪತ್ರಿಕಾ ಪ್ರತಿನಿಧಿಯೊಬ್ಬ ನಾನು ಅನೇಕ ದಿನಗಳಿಂದ ನಿರೀಕ್ಷಿಸುತ್ತಿದ್ದ ಪ್ರಶ್ನೆಯೊಂದನ್ನು ಕೇಳಿಯೇ ಬಿಟ್ಟ: 'ಮಹತ್ತರವಾದ ಸುಧಾರಣೆಯೊಂದು ರಾಜಕೀಯ ಅಧಿಕಾರವಿಲ್ಲದೆ ಸಾಧ್ಯವಿಲ್ಲವೆಂದು ತಮಗೆ ಎಂದಾದರೂ ಅನಿಸಿದೆಯೇ?'

ಈ ಬಗೆಯ ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ಪ್ರಚಲಿತ ಆರ್ಥಿಕ ರಚನೆಯ ಬಗ್ಗೆಯೂ ನಮಗೆ ಅರಿವಿರಬೇಕಾಗುತ್ತದೆ. ರಾಜಕೀಯ ಪುನರ್‌ನಿರ್ಮಾಣ ಮಾಡದಿದ್ದರೆ ಯಾವುದೇ ಪುನರ್‌ನಿರ್ಮಾಣ ಸಾಧ್ಯವಿಲ್ಲ. ಆದರೂ ಪಾಲಿಶ್ ಮಾಡಲಾದ ಅಕ್ಕಿ ಮತ್ತು ಮಾಡಲಾರದ ಅಕ್ಕಿಯ ಬಗ್ಗೆ ಮತ್ತು ಸಮತೂಕದ ಆಹಾರದಂತಹ ವಿಷಯಗಳ ಬಗ್ಗೆ ಮಾತನಾಡಲು ನನಗೆ ಅಳುಕುಂಟಾಗುತ್ತದೆ. ಈ ಬಗೆಯ ಪ್ರಶ್ನೆ ಮತ್ತು ಚರ್ಚೆಯನ್ನು ಅನೇಕ ಬಾರಿ ಕಾರ್ಯವೈಫಲ್ಯತೆಯ ಬಗೆಗಿನ ರಿಯಾಯಿತಿಗಾಗಿ ಬಳಸಿಕೊಳ್ಳಲಾಗುತ್ತದೆ. ನನಗೆ ಗೊತ್ತಿದೆ– ರಾಜಕೀಯ ಅಧಿಕಾರವಿಲ್ಲದೆ ಕೆಲವು ಕಾರ್ಯಚಟುವಟಿಕೆಗಳು ಸಾಧ್ಯವಿಲ್ಲ. ಹಾಗೆಯೇ ಕೆಲವು ಕಾರ್ಯಗಳಿಗೆ ರಾಜಕೀಯ ಅಧಿಕಾರದ ಹಂಗಿಲ್ಲ. ಶ್ರೇಷ್ಠ ದಾರ್ಶನಿಕ ಥೋರೋ ಥರದ ಚಿಂತಕರು 'ಉತ್ತಮ ಸರಕಾರವೆಂದರೆ ಜನರ ಬದುಕಿನಲ್ಲಿ ಕಡಿಮೆ ಹಸ್ತಕ್ಷೇಪ ಮಾಡುವ ಸರಕಾರ' ಎಂದಿದ್ದಾರೆ. ಇದರ ಅರ್ಥ, ಜನತೆಯ ಕೈಗೆ ಅಧಿಕಾರ ಎನ್ನುವಂತಾದಾಗ ಅವರ ಬದುಕಿನಲ್ಲಿ ಹಸ್ತಕ್ಷೇಪದ ಅವಶ್ಯಕತೆ ಕಡಿಮೆ. ಜನರ ಬದುಕಿನಲ್ಲಿ ಪದೇ ಪದೇ ಪ್ರಭುತ್ವದ ಪ್ರವೇಶ ಒಳ್ಳೆಯದಲ್ಲ. ಜನಜೀವನದಲ್ಲಿ ಕಡಿಮೆ ರಾಜಕೀಯ ಹಸ್ತಕ್ಷೇಪವೇ ಉತ್ತಮ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ರೂಪಿಸಬಲ್ಲದು. ಈ ಬಗೆಯ ಸ್ಥಿತಿ ಎಲ್ಲಿ ಸಾಧ್ಯವಾಗುವುದಿಲ್ಲವೋ ಅಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಕೇವಲ ನಾಮಕಾವಾಸ್ತೆ ಎನ್ನುವಂತಾಗುತ್ತದೆ.

ವಿಚಾರ ಸ್ವಾತಂತ್ರ್ಯದ ಮೇಲೆ ಯಾವುದೇ ರೀತಿಯ ನಿರ್ಬಂಧಗಳಿಲ್ಲ, ಇರಬಾರದು. ಅನೇಕ ಸುಧಾರಣಾವಾದಿಗಳು ಹೊಸ ಹೊಸ ಆಲೋಚನಾ ಕ್ರಮಗಳಿಗೆ ವಿಶೇಷ ಒತ್ತು ನೀಡುವುದಿದೆ. ಕೆಲವೇ ಕೆಲವು ಅಭಿಪ್ರಾಯಗಳ ಮೂಲಕ ಸುಧಾರಣೆಯನ್ನು ರೂಪಿಸುವುದಾದರೂ ಹೇಗೆ? ಆಧುನಿಕ ವಿಜ್ಞಾನಿಗಳು ಮನುಷ್ಯನ ಚಿಂತನಾ ಸಾಮರ್ಥ್ಯಕ್ಕೆ ಹೆಚ್ಚಿನ ಒತ್ತು ನೀಡಿರುವುದಿದೆ. ಮನುಷ್ಯ ತಾನು ಆಲೋಚಿಸಿದಂತೆ ಆಗುತ್ತಾನೆ ಎನ್ನಲಾಗುತ್ತದೆ. ಒಬ್ಬ ವ್ಯಕ್ತಿ ಸದಾ ಕೊಲೆಗಡುಕತನದ ಬಗ್ಗೆ ಆಲೋಚಿಸು ತ್ತಿದ್ದರೆ ಆತ ಕೊಲೆಗಡುಕನಾಗುತ್ತಾನೆ. ದುಷ್ಟತನದ ಆಲೋಚನೆ ಅದನ್ನೇ ಹುಟ್ಟು ಹಾಕುತ್ತದೆ. ಯಾರು ಸತತವಾಗಿ ಸತ್ಯ ಮತ್ತು ಅಹಿಂಸೆಯ ಬಗ್ಗೆ ಯೋಚಿಸುತ್ತಾನೋ ಯಾರ ಆಲೋಚನೆ ದೈವ ಕೇಂದ್ರಿತವಾಗಿದೆಯೋ ಆತ ದೇವತಾಮನುಷ್ಯನಾಗುತ್ತಾನೆ. ಈ ಬಗೆಯ ಪ್ರಕ್ರಿಯೆಯಲ್ಲಿ ರಾಜಕೀಯ ಅಧಿಕಾರದ ಅವಶ್ಯಕತೆಯಿಲ್ಲ. ನನಗೆ ಪ್ರಶ್ನೆ ಕೇಳಿದವರು ಇದನ್ನು ಗಮನಿಸಬೇಕು–ನಮ್ಮ ದೈನಂದಿನ ಬದುಕಿನ ಅನೇಕ ಚಟುವಟಿಕೆಗಳು ತೀರಾ ಖಾಸಗಿಯಾಗಿರುತ್ತವೆ; ಅವುಗಳ ನಿರ್ವಹಣೆಯಲ್ಲಿ ಯಾವುದೇ ರಾಜಕೀಯ ಅಧಿಕಾರದ ಅವಶ್ಯಕತೆಯಿರುವುದಿಲ್ಲ. ಮನುಷ್ಯ ಎಲ್ಲ ಬಗೆಯ ಕ್ರಿಯೆ ಗಳಿಗೂ ಪರಾವಲಂಬಿಯಾಗಿರುವುದಿಲ್ಲ. ಆತ ತನ್ನ ಸ್ವಾವಲಂಬನೆಗಾಗಿ ಮತ್ತು ತನ್ನಲ್ಲಿಯ ಸಾಮರ್ಥ್ಯಕ್ಕಾಗಿ ತನ್ನನ್ನೇ ತಾನು ಅಭಿನಂದಿಸಿಕೊಳ್ಳಬೇಕು. ಮನುಷ್ಯ ಮನಸೋ ಇಚ್ಛೆ ಸ್ವಾವಲಂಬನೆಯನ್ನು ಬಯಸಿದ ಬೆನ್ನಲ್ಲಿಯೇ ಅದು ಸಾಧ್ಯವಾಗುತ್ತದೆ. ಹಾಗಾಗಿ ಎಲ್ಲ ಚಟುವಟಿಕೆಗಳಿಗೆ ರಾಜಕೀಯ ಅಧಿಕಾರದ ಹಂಗಿಲ್ಲ.

ಆದರೆ ಪ್ರಶ್ನೆ ಕೇಳಿದಾತನಿಗೆ ಸಮಾಧಾನವಾಗಲಿಲ್ಲ. ಆತ ದೊಡ್ಡ ದೊಡ್ಡ ಸಾಮಾಜಿಕ ಸುಧಾರಣೆಗಳ ಬಗ್ಗೆ ಮಾತಿಗೆ ತೊಡಗಿದ. ಯಾರು ಸಣ್ಣ ಸುಧಾರಣೆಗಳ ಬಗ್ಗೆ ತಯಾರಾಗಿಲ್ಲವೋ ಅವರೆಂದೂ ದೊಡ್ಡ ಸುಧಾರಣೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ತಾನು ಬದುಕಿರುವ ಸಮುದಾಯದಲ್ಲಿ ತಿಳುವಳಿಕೆ ಮೂಡಿಸುವ ಜೊತೆಗೆ ಸುಧಾರಣೆಗೆ ನಾಂದಿ ಹಾಡುವಾತನಿಗೆ ಜಗತ್ತಿನ ದೊಡ್ಡ ದೊಡ್ಡ ಸುಧಾರಣಾ ಚಳುವಳಿಗಳ ಮೂಲ ಈ ಬಗೆಯ ಸಣ್ಣ ಚಳುವಳಿಗಳಲ್ಲಿಯೇ ಅಡಕವಾಗಿದೆ ಎಂದು ಮನದಟ್ಟಾಗಿರುವ ಉದಾಹರಣೆಗಳಿವೆ. ಯಾರು ಈ ಮಾರ್ಗದಲ್ಲಿ ಆಲೋಚಿಸಿ ಆ ದಾರಿಗುಂಟ ನಡೆಯುವರೋ ಅವರು ಸಹಜ ನೆಮ್ಮದಿಯ ಜೀವನವನ್ನು ನಡೆಸಬಲ್ಲರು. ಎಲ್ಲ ವಿಷಯಗಳಲ್ಲಿಯೂ ರಾಜಕೀಯ ಕುರಿತು ಆಲೋಚಿಸುವುದು ಮತ್ತು ಪ್ರಭುತ್ವದಿಂದ ಮಾತ್ರ ಸುಧಾರಣೆ ಸಾಧ್ಯ ಎಂದು ಆಲೋಚಿಸುವುದು ಸುಮ್ಮನೇ ಗುದ್ದಾಡಿ ಧೂಳು ಎಬ್ಬಿಸಿದಂತಾಗುತ್ತದೆ. ರಾಜಕೀಯ ಅಧಿಕಾರ ಎನ್ನುವುದು ಅನಿವಾರ್ಯ ಎನ್ನುವ ಮನಸ್ಥಿತಿಯೇ ಸರಿಯಲ್ಲ.

ನನಗೆ ಹಸಿರು ತರಕಾರಿ, ಪಾಲಿಶ್ ಮಾಡದ ಅಕ್ಕಿಯ ಬಗ್ಗೆ ವಿಶೇಷ ಅಸಕ್ತಿ. ನಮ್ಮ ಶೌಚಾಲಯಗಳನ್ನು ಶುಚಿಯಾಗಿಡುವ ಬಗ್ಗೆ ಮತ್ತು ಭೂಮಿತಾಯಿಯನ್ನು ನಮ್ಮ ಜನ ಮಲಿನಗೊಳಿಸುವ ಕ್ರಿಯೆಯ ಬಗ್ಗೆ ಜನರಲ್ಲಿ ವಿಶೇಷ ಅರಿವು ಮೂಡಿಸುವುದರಲ್ಲಿ ನನಗೆ ಆಸಕ್ತಿ. ಈ ಬಗೆಯ ಕ್ರಿಯೆಗಳಿಗೆ ರಾಜಕೀಯ ಅಧಿಕಾರದ ಅಗತ್ಯವಿಲ್ಲ. ಸರಕಾರದ ಆರ್ಥಿಕ ಧೋರಣೆಯೊಂದರ ಪರಿಶೀಲನೆ ಮತ್ತು ಕಾರ್ಯಾಚರಣೆಯಲ್ಲಿ ರಾಜಕೀಯ ಅಧಿಕಾರದ ಪಾತ್ರ ಅಡಕವಾಗಿದೆ. ನಾನು ಜನಸಾಮಾನ್ಯರಿಗೆ ರಾಜಕೀಯದ ಸತ್ತೆಯಿಂದ ಹೊರತಾಗಿರುವ ಕೆಲಸಗಳನ್ನು ಮಾಡಲು ಕರೆ ಕೊಡುತ್ತಿರುವೆ. ಈ ಬಗೆಯ ಕಾರ್ಯಗಳನ್ನು ಅನೇಕರು ಮಾಡಬಹುದಾಗಿದೆ. ದೊಡ್ಡ ಪ್ರಮಾಣದ ಸಮುದಾಯದ ಸಹಭಾಗಿತ್ವ ಇದರಲ್ಲಿ ಸಾಧ್ಯವಿದೆ. ರಾಜಕೀಯ ಅಧಿಕಾರದ ಸಖ್ಯ ಕೆಲವೇ ಕೆಲವರಿಗೆ ಮಾತ್ರ ಸಾಧ್ಯ. ಅದರಲ್ಲಿ ಸಮರ್ಥರಾಗಿರುವವರು ಆ ಕಾರ್ಯಗಳನ್ನು ನಿರ್ವಹಿಸಲಿ. ಅದಕ್ಕೆ ನನ್ನ ತಕರಾರಿಲ್ಲ. ಕೋಟ್ಯಾನುಗಟ್ಟಲೆ ಜನರು ಈ ರಾಜಕೀಯದ ಹಂಗಿಲ್ಲದೇ ದೇವರು ದಯಪಾಲಿಸಿದ ಶಕ್ತಿಸಾಮರ್ಥ್ಯವನ್ನು ಬಳಸಿಕೊಂಡು ಶ್ರಮಿಸುವ ಬಗ್ಗೆ ಯಾಕೆ ಯೋಚಿಸುವುದಿಲ್ಲ. ತಮ್ಮ ಪರಿಸರವನ್ನು ತಾವೇ ಯಾಕೆ ಶುಚಿಯಾಗಿಟ್ಟುಕೊಳ್ಳುವುದಿಲ್ಲ? ರೋಗರುಜಿನಗಳಿಗೆ ಒಳಗಾಗಿ ನರಳುವುದನ್ನು ಯಾಕೆ ತಪ್ಪಿಸುವುದಿಲ್ಲ? ರಾಜಕೀಯ ಅಧಿಕಾರದ ಸಖ್ಯವಿಲ್ಲದೆಯೂ ಇವುಗಳನ್ನು ಬಗೆಹರಿಸಿಕೊಳ್ಳಬಹುದು. ಆ ಬಗೆಯ ಸಾಮರ್ಥ್ಯ ಅನೇಕರಲ್ಲಿದೆ.

ನನಗೆ ಕೇಳಲಾದ ಪ್ರಶ್ನೆಯ ಬಗ್ಗೆ ನನಗೆ ಕೊಂಚ ಅಳುಕು ಇದೆ. ಯಾಕೆಂದರೆ ನಾವು ಆ ಬಗೆಯ ಆಲೋಚನೆಗಳ ಮಧ್ಯೆಯೇ ನಮ್ಮಿಂದ ಏನೂ ಸಾಧ್ಯವಿಲ್ಲ ಎನ್ನುವ ಸ್ಥಿತಿಗೆ ತಲುಪುತ್ತೇವೆ. ಇಂಥ ಆಲೋಚನಾ ಕ್ರಮದಿಂದ ನಮ್ಮ ಸಾಮರ್ಥ್ಯದ ಅರಿವೂ ನಮಗಾಗುವುದಿಲ್ಲ. ನಾನು ಮಾತ್ರ ನನ್ನ ಸ್ವಾತಂತ್ರ್ಯ ಹೋರಾಟದ ಮಾರ್ಗದಲ್ಲಿ ಈ ಬಗೆಯ ಯಾವುದೇ ನೆಪಗಳನ್ನು ಮುಂದೆ ಮಾಡಿ ಆಲಸಿಯಾಗಿ ಉಳಿಯಲಾರೆ. ನನ್ನ ಅನೇಕ ವರ್ಷದ ಅನುಭವ ನನಗೆ ನನ್ನಲ್ಲಿಯ ಶಕ್ತಿ ಸಾಮರ್ಥ್ಯವನ್ನು ಮನದಟ್ಟು ಮಾಡಿಕೊಟ್ಟಿದೆ. ಆ ಮೂಲಕ ನಾನು ಅಹಿಂಸೆಯ ಮಾರ್ಗದಲ್ಲಿ ದೇಶದ ಸ್ವಾತಂತ್ರ್ಯ ಸಾಧನೆಯ ಮಾರ್ಗದಲ್ಲಿದ್ದೇನೆ. ನನ್ನನ್ನು ಯಾರೂ ತಡೆಯಲಾಗದು. ಹಾಗೆಯೇ ನನಗೆ ಎಲ್ಲರ ಸಾಮರ್ಥ್ಯದಲ್ಲಿಯೂ ನಂಬುಗೆಯಿದೆ. ಆ ಕಾರಣಕ್ಕಾಗಿಯೇ ನಾನು ಸ್ತ್ರೀ, ಪುರುಷ, ಯುವಕರು, ವಯೋವೃದ್ಧರು ಎಲ್ಲರಿಗೂ ಈ ಹೋರಾಟದಲ್ಲಿ ಪಾಲ್ಗೊಳ್ಳಲು ಕರೆ ನೀಡುತ್ತೇನೆ. ಒಂದು ಮಹತ್ತರವಾದ ಕಾರಣಕ್ಕಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಪಾಲಿನ ಶ್ರಮವನ್ನು ತೊಡಗಿಸಲು ಸಾಧ್ಯವಿದೆ.

('ದ ಎಸೆನ್ಷಿಯಲ್ ರೈಟಿಂಗ್ಸ್ ಆಫ್ ಮಹಾತ್ಮ ಗಾಂಧಿ' ಪುಸ್ತಕದಿಂದ.)

ಕನ್ನಡಕ್ಕೆ: **ಎಸ್. ಬಿ. ಜೋಗುರ**

೫೧

ಪಾರ್ಲಿಮೆಂಟ್

ಪಾರ್ಲಿಮೆಂಟ್ ಬರಡು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಲಕ್ಷಣಗಳು ಭಾರತದಲ್ಲಿ ಬದಲಾಗುತ್ತವೆ ಎನ್ನುವ ನಂಬಿಕೆ ನನಗಿಲ್ಲ. ಆದರೆ ನಮ್ಮ ಪಾರ್ಲಿಮೆಂಟ್ ಕೇವಲ ಬಂಜೆಯಾಗಿ ಉಳಿಯುತ್ತದೆ, ದುಷ್ಟ ಮಗುವನ್ನು ಹೆರುವುದಿಲ್ಲ ಎನ್ನುವುದಷ್ಟೇ ನನ್ನ ಆಶೆ. ರಾಮರಾಜ್ಯ ನಿರ್ಮಾಣವೇ ಅತ್ಯಂತ ಸೂಕ್ತವಾದದ್ದು. ಆದರೆ ರಾಮನನ್ನು ಎಲ್ಲಿ ಹುಡುಕುವುದು? ಪಾರ್ಲಿಮೆಂಟ್ ಬಾಡಿಗೆ ಓಟುದಾರರ ಧ್ವನಿಯಾಗದೆ ನಿಜಕ್ಕೂ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸುವ ಸಂಸ್ಥೆಯಾಗಬೇಕು. ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ನಾನು ಅನೇಕ ಸಲಹೆಗಳನ್ನು ಕೊಡಬಯಸುತ್ತೇನೆ.

ಈ ಸಲಹೆಗಳನ್ನು ಒಪ್ಪಿಕೊಂಡರೆ ಪಾರ್ಲಿಮೆಂಟ್ ಎಲ್ಲ ಪಂಗಡಗಳು ಮತ್ತು ವರ್ಗಗಳಿಗೆ ಸೇರಿದ ಜನರ ಧ್ವನಿಯಾಗುವುದು ಸಾಧ್ಯ. ಹಾಗೆ ನೋಡಿದರೆ, ಎಲ್ಲ ಪದ್ಧತಿಗಳಲ್ಲಿಯೂ ನ್ಯೂನತೆಗಳು ಇದ್ದೇ ಇರುತ್ತವೆ. ನಾವು ಭಾರತಕ್ಕೆ ಹೆಚ್ಚು ಉಪಯುಕ್ತವಾಗಬಲ್ಲ ವ್ಯವಸ್ಥೆಯ ಬಗ್ಗೆ ಆಲೋಚಿಸುತ್ತಿದ್ದೇವೆ. ಜನರು ಒಳ್ಳೆಯವರಿದ್ದರೆ ಎಂತಹ ಕೆಟ್ಟದ್ದನ್ನೂ ಒಳ್ಳೆಯದನ್ನಾಗಿ ಮಾರ್ಪಡಿಸಬಹುದು.

ಮನೆಯಲ್ಲಿ ಜಾಣ ಹೆಂಗಸರು ಕಸದಿಂದ ಕಾಳುಗಳನ್ನು ಹೆಕ್ಕುತ್ತಾರೆ; ಹಾಗೆಯೇ ತಿಳಿಗೇಡಿ ಹೆಂಗಸು ಉತ್ತಮವಾದ ದವಸಧಾನ್ಯವನ್ನು ಕೊಳೆಸಿ ಹಾಳು ಮಾಡುತ್ತಾಳೆ. ಅದೇ ರೀತಿಯಲ್ಲಿ ಕೆಟ್ಟ ಜನ ಎಂತಹ ಶ್ರೇಷ್ಠ ವ್ಯವಸ್ಥೆಯನ್ನಾದರೂ ವಿಕೃತಗೊಳಿಸ ಬಲ್ಲರು. ಉತ್ತಮರಾದ ಜನ ಮುಖ್ಯ. ಅಂತಹವರ ತಪಾಸಣೆಯಲ್ಲಿದ್ದೇನೆ. ಅಷ್ಟಕ್ಕೂ ಒಬ್ಬಂಟಿಗನಾಗಿ ನಾನು ಏನನ್ನು ತಾನೇ ಮಾಡಲಾದೀತು? ಪ್ರಾಮಾಣಿಕ ಪ್ರಯತ್ನ ನಡೆಸಬಹುದು, ಅಷ್ಟೇ. ಫಲ ಭಗವಂತನಿಗೆ ಬಿಟ್ಟದ್ದು. ಒಬ್ಬನ ಪ್ರಯತ್ನದಿಂದ ಏನನ್ನೂ ಸಾಧಿಸಲು ಆಗುವುದಿಲ್ಲ. ನಾವು ಬಯಸಿದ ಫಲ ಸಿಗಲು ಸಾರ್ವತ್ರಿಕವಾದ ಮತ್ತು ಸಾಮೂಹಿಕವಾದ ಪ್ರಯತ್ನ ಅಗತ್ಯ.

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: ಬಿ.ಎ. ಶ್ರೀಧರ

೫೨

ಮಾತೃಭಾಷೆ

ಮಾತೃಭಾಷೆಗಿಂತ ಇಂಗ್ಲಿಷ್ ಭಾಷೆಯ ಮೇಲೆ ಇರುವ ನಮ್ಮ ವ್ಯಾಮೋಹದಿಂದಾಗಿ ಶಿಕ್ಷಿತ ಮತ್ತು ರಾಜಕೀಯ ಚಿಂತನೆಯುಳ್ಳ ವರ್ಗಗಳು ಹಾಗೂ ಸಾಮಾನ್ಯ ಜನತೆಯ ನಡುವೆ ದೊಡ್ಡ ಅಂತರವುಂಟಾಗಿದೆ. ಹೀಗಾಗಿ ಭಾರತೀಯ ಭಾಷೆಗಳು ನಲುಗಿ ಹೋಗಿವೆ. ಮಾತೃಭಾಷೆಯಲ್ಲಿ ಅತಿಸೂಕ್ಷ್ಮವಾದ ವಿಚಾರವನ್ನು ವ್ಯಕ್ತಪಡಿಸಲು ನಾವು ಒದ್ದಾಡುತ್ತೇವೆ. ವೈಜ್ಞಾನಿಕ ಪದಗಳಿಗೆ ಸರಿ ಹೊಂದುವ ಪದಗಳು ಮಾತೃಭಾಷೆಯಲ್ಲಿ ದೊರಕುವುದಿಲ್ಲ. ಇದರ ಪರಿಣಾಮ ಅನರ್ಥಕಾರಿಯಾಗಿದೆ. ಇದರಿಂದಾಗಿ ಸಾಮಾನ್ಯ ಜನತೆ ಆಧುನಿಕ ಚಿಂತನೆಯಿಂದ ದೂರವೇ ಉಳಿದುಬಿಡುತ್ತಾರೆ. ಭಾರತದ ಮಹಾನ್ ಭಾಷೆಗಳನ್ನು ಅಲಕ್ಷ್ಯವಾಗಿ ಕಂಡದ್ದರಿಂದ ದೇಶಕ್ಕೆ ಆದ ಕೆಡಕುಗಳನ್ನು ಪರಿಶೀಲಿಸಬೇಕಾದ ಕಾಲ ಈಗ ಹತ್ತಿರವಾಗಿದೆ. ನಾವು ಈ ಸಂಕಟವನ್ನು ಬಗೆಹರಿಸುವ ತನಕ ಜನತೆಯ ಬುದ್ಧಿಯು ಬಂಧನದಲ್ಲೇ ಉಳಿಯುತ್ತದೆ. ಸ್ವರಾಜ್ಯದ ನಿರ್ಮಾಣದಲ್ಲಿ ಜನತೆ ಬಲಿಷ್ಠವಾದ ಪಾತ್ರ ವಹಿಸುವುದು ಸಾಧ್ಯವಿಲ್ಲ. ಅಹಿಂಸಾತ್ಮಕ ವಾದದ ಮೇಲೆ ನಿಂತಿರುವ ಸ್ವರಾಜ್ಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸ್ವಾತಂತ್ರ್ಯ ಚಳುವಳಿಯಲ್ಲಿ ತನ್ನ ನೇರ ಕೊಡುಗೆಯನ್ನು ಕೊಡುತ್ತಾನೆ. ಪ್ರತಿಯೊಂದು ಘಟ್ಟವನ್ನೂ ಅದರ ಪರಿಣಾಮಗಳೊಂದಿಗೆ ಅರ್ಥ ಮಾಡಿಕೊಳ್ಳದ ಹೊರತು ಜನತೆ ಅದನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಲು ಸಾಧ್ಯವಿಲ್ಲ. ಪ್ರತಿಯೊಂದು ಘಟ್ಟವನ್ನೂ ಅವರ ಮಾತೃಭಾಷೆಯಲ್ಲಿ ವಿವರಿಸದ ಹೊರತು ಇದು ಸಾಧ್ಯವಾಗುವುದಿಲ್ಲ.

ಭಾರತದಾದ್ಯಂತ ವ್ಯವಹರಿಸಲು ಒಂದೇ ಭಾಷೆಯ ಅವಶ್ಯಕತೆಯಿದೆ. ಭಾರತದಲ್ಲಿರುವ ಭಾಷೆಗಳಲ್ಲಿ ಹೆಚ್ಚು ಜನರಿಗೆ ಪರಿಚಯವಿರುವ, ಹೆಚ್ಚು ಜನರು ಅರ್ಥ ಮಾಡಿಕೊಳ್ಳುವ ಮತ್ತು ಇತರರು ಸುಲಭವಾಗಿ ಕಲಿತುಕೊಳ್ಳಬಹುದಾದ ಭಾಷೆಯೊಂದನ್ನು ನಾವು ಆಯ್ಕೆ ಮಾಡಬೇಕು. ಈ ಭಾಷೆ ಹಿಂದೂಸ್ಥಾನಿ ಎಂಬುದರಲ್ಲಿ

ವಿವಾದವಿಲ್ಲ. ಈ ಭಾಷೆಯನ್ನು ಹಿಂದೂಗಳು ಮತ್ತು ಉತ್ತರದ ಮುಸ್ಲಿಮರು ಇಬ್ಬರೂ ಆಡುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆ. ಪರ್ಷಿಯನ್ ಲಿಪಿಯಲ್ಲಿ ಬರೆದಾಗ ಅದನ್ನು ಉರ್ದು ಎನ್ನುತ್ತಾರೆ. ಕಾನ್ಪುರದಲ್ಲಿ ೧೯೨೫ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸಿದ ಗೊತ್ತುವಳಿಯಲ್ಲಿ ಭಾರತದಾದ್ಯಂತ ಪರಿಚಯವಿರುವ ಈ ಭಾಷೆಯನ್ನು ಹಿಂದೂಸ್ಥಾನಿ ಎಂದು ಕರೆಯಲಾಗಿದೆ. ಅಲ್ಲಿಂದ ಕೊನೆಯ ಪಕ್ಷ ತತ್ವದಲ್ಲಾದರೂ ಹಿಂದೂಸ್ಥಾನಿ ನಮ್ಮ ರಾಷ್ಟ್ರಭಾಷೆಯಾಗಿದೆ. ಕಾಂಗ್ರೆಸ್ಸಿಗರೂ ಕೂಡ ಅದನ್ನು ಆಚರಣೆಗೆ ತಂದಿಲ್ಲವಾದುದರಿಂದ, ಇದು 'ತತ್ವ'ದಲ್ಲಿ ಮಾತ್ರ ಎಂದು ಹೇಳಬೇಕಾಗಿದೆ.

ಈಗ ನಾನು ಹೇಳುತ್ತಿರುವ ಸಂಗತಿ ೧೯೨೦ಕ್ಕಿಂತ ಮುಂಚೆ ಇದ್ದಷ್ಟೇ ಸತ್ಯವಾದುದು. ೧೯೨೦ರಿಂದ ಜನತೆಗೆ ರಾಜಕೀಯ ಶಿಕ್ಷಣ ನೀಡುವ ದೃಷ್ಟಿಯಿಂದ ಭಾರತೀಯ ಭಾಷೆಗಳ ಮಹತ್ವವನ್ನು ಗುರುತಿಸುವ ಪ್ರಯತ್ನ ಪ್ರಾರಂಭವಾಗಿದೆ. ಹಾಗೆಯೇ ರಾಜಕೀಯ ಚಿಂತನೆಯಿಂದ ಕೂಡಿದ, ಭಾರತ ವ್ಯವಹರಿಸಬಹುದಾದ ಏಕಭಾಷೆಯ ಹುಡುಕಾಟ ಕೂಡ ಸಾಗಿದೆ. ಇದರಿಂದ ಬೇರೆ ಬೇರೆ ಪ್ರಾಂತ್ಯಗಳಿಂದ ಬರುವ ಕಾಂಗ್ರೆಸ್ಸಿಗರು ವಾರ್ಷಿಕ ಸಭೆಯ ಮತ್ತು ಎ.ಐ.ಸಿ.ಸಿ.ಯ ಸಭೆಗಳ ಆಗುಹೋಗುಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ, ಬಹುತೇಕ ಕಾಂಗ್ರೆಸ್ಸಿಗರು ಮೇಲಿನ ಗೊತ್ತುವಳಿಯನ್ನು ಆಚರಣೆಗೆ ತರುವಲ್ಲಿ ವಿಫಲರಾಗಿದ್ದಾರೆ ಎಂಬುದು ಖೇದದ ಸಂಗತಿ. ಆದ್ದರಿಂದಲೇ ಇಂಗ್ಲಿಷಿನಲ್ಲಿ ಮಾತನಾಡುತ್ತಾ ಬೇರೆಯವರನ್ನು ಆ ಭಾಷೆಯಲ್ಲಿ ಮಾತನಾಡಲು ಒತ್ತಾಯಿಸುವ ಕಾಂಗ್ರೆಸ್ಸಿಗರ ನಾಚಿಕೆಗೆಟ್ಟ ವರ್ತನೆಯನ್ನು ನಾವು ನೋಡಬೇಕಾಗಿ ಬಂದಿದೆ. ಇಂಗ್ಲಿಷ್ ನಮ್ಮ ಮೇಲೆ ಹರಡಿರುವ ಛಾಯೆಯಿಂದ ನಾವಿನ್ನೂ ಹೊರಬಂದಿಲ್ಲ. ಅದರಡಿಯಲ್ಲಿ ನಾವು ಇರುವವರೆಗೆ ಭಾರತ ತನ್ನ ಗುರಿ ಮುಟ್ಟುವ ಸಾಧ್ಯತೆಗಳು ಕಡಿಮೆ. ಇಂಗ್ಲಿಷ್ ಭಾಷೆಯನ್ನು ಕಲಿಯಲು ತೆಗೆದುಕೊಂಡಷ್ಟು ಸಮಯವನ್ನು ಹಿಂದೂಸ್ಥಾನಿ ಕಲಿಯಲು ಹಾಗೂ ಬಳಸಲು ತೆಗೆದುಕೊಳ್ಳದಿದ್ದರೆ ಜನತೆಯ ಬಗ್ಗೆ ನಮ್ಮ ಪ್ರೀತಿ ಆಳವಾದುದಲ್ಲ ಎಂದೇ ಹೇಳಬೇಕಾಗುತ್ತದೆ.

ಮೇಲೆ ಹೇಳಿದ ಸಂಗತಿಗಳು ಮಾತೃಭಾಷೆಯ ಬಗ್ಗೆ ಇರಬೇಕಾದ ಪ್ರೇಮದ ಬಗ್ಗೆಯೂ ಹೇಳುತ್ತವೆ. ಆದ್ದರಿಂದ ನಾನು ಈ ಬಗ್ಗೆ ಹೆಚ್ಚೇನೂ ಹೇಳಲು ಇಷ್ಟಪಡುವುದಿಲ್ಲ.

('ಟುವರ್ಡ್ಸ್ ನ್ಯೂ ಎಜುಕೇಶನ್' ಪುಸ್ತಕದಿಂದ.)

ಕನ್ನಡಕ್ಕೆ: ಬಿ.ಎ. ಶ್ರೀಧರ

೫೩

ಇಂಗ್ಲಿಷ್: ಭಾಷೆ, ಮಾಧ್ಯಮ, ಧೋರಣೆ

ಮಿಲಿಯಗಟ್ಟಲೆ ಜನರಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸಿಕೊಡುವುದು ಅವರನ್ನು ಗುಲಾಮರನ್ನಾಗಿಸಿದಂತೆ. ಮೆಕಾಲೆಯ ಶಿಕ್ಷಣ ನೀತಿ ನಮ್ಮನ್ನು ಗುಲಾಮರನ್ನಾಗಿ ಮಾಡಿದೆ. ಮೆಕಾಲೆಗೆ ನಮ್ಮನ್ನು ಗುಲಾಮರನ್ನಾಗಿಸುವ ಉದ್ದೇಶವಿತ್ತೆಂದು ನಾನು ಹೇಳಲಾರೆ. ಆದರೆ ಅಂತಿಮವಾಗಿ ಆದದ್ದು ಅದೇ..ನಾನು ಬ್ಯಾರಿಸ್ಟರ್ ಆದಮೇಲೆ ಕೋರ್ಟ್‌ನಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡಬೇಕಾಗಿ ಬಂದಾಗ ನನಗೆ ಬೇಸರವೆನಿಸಲಾರದು. ನನ್ನ ಮಾತೃಭಾಷೆಯಲ್ಲಿ ಮಾತನಾಡಲಾಗದ ಸ್ಥಿತಿ ಮತ್ತು ನನ್ನದೇ ಮಾತೃಭಾಷೆಯಲ್ಲಿ ಇನ್ನಾರೋ ಅನುವಾದ ಮಾಡಿ ಹೇಳುವ ಸ್ಥಿತಿ ಬಂದಾಗ ನನಗೆ ತುಂಬಾ ನೋವಾಗುತ್ತದೆ. ಅದು ನನಗೆ ಗುಲಾಮಗಿರಿಯ ಸಂಕೇತವಾಗಿ ತೋರುತ್ತದೆ. ಆಗ ನಾನು ಇಂಗ್ಲಿಷ್ ಭಾಷೆಯನ್ನು ದೂರಬೇಕೋ ಇಲ್ಲವೇ ನನ್ನನ್ನೇ ನಾನು ದೂಷಿಸಿಕೊಳ್ಳಬೇಕೋ ನನಗೆ ತಿಳಿಯದು. ಅಂದರೆ ಪರೋಕ್ಷವಾಗಿ ನಾವು ಇಂಗ್ಲಿಷ್ ಕಲಿತವರು ದೇಶವನ್ನು ಗುಲಾಮಗಿರಿಗೆ ನೂಕಿದ್ದೇವೆ. ಅದಕ್ಕೆ ನಾವೇ ಹೊಣೆ, ಇಂಗ್ಲಿಷ್ ಭಾಷೆಯಲ್ಲ.

...ವಿದೇಶಿ ಮಾಧ್ಯಮದ ಮೂಲಕ ಗ್ರಹಿಸುವದು, ಕಲಿಯುವುದು ತುಂಬಾ ಕಷ್ಟದಾಯಕ. ನಮ್ಮ ಮಕ್ಕಳು ಅದನ್ನು ಅನುಭವಿಸುತ್ತವೆ. ಅದೇ ವೇಳೆಗೆ ಆ ಮಕ್ಕಳು ಅದಕ್ಕೆ ದಂಡವನ್ನು ಕೂಡಾ ತೆರಬೇಕಾಗುತ್ತದೆ. ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಪಡೆಯುವ ಮೂಲಕ ಅವರು ಇತರ ಯಾವುದೇ ಬಗೆಯ ಸಂದಿಗ್ಧಗಳನ್ನು ಎದುರಿಸುವ ಶಕ್ತಿಯನ್ನು ಪಡೆಯಲಾರರು. ಹಾಗಾಗಿಯೇ ನಮ್ಮ ಪದವೀಧರ ಯುವಕರು ಅಶಕ್ತರಾಗಿ, ದುರ್ಬಲರಾಗಿ ಮತ್ತು ಶಕ್ತಿಹೀನ ಅನುಕರಣಮತಿಗಳಾಗಿ ತೋರುತ್ತಾರೆ. ಸ್ವಂತಿಕೆ, ಸಂಶೋಧನೆ, ಸಾಹಸ ಗುಣ, ನಿರಂತರ ಯತ್ನ, ಧೈರ್ಯ,

ಮುಂತಾದ ಗುಣಗಳು ಗೌಣವಾಗುತ್ತಿವೆ. ಪರಿಣಾಮವಾಗಿ ಹೊಸ ಬಗೆಯ ಹೊಣೆಗಾರಿಕೆಗಳನ್ನು ನಿರ್ವಹಿಸುವಲ್ಲಿ ನಾವು ವಿಫಲರಾಗುತ್ತಿದ್ದೇವೆ. ಈ ಬಗೆಯ ದುರ್ಬಲರು ಸಮಯಕ್ಕೆ ಮುಂಚೆಯೇ ಸಾವಿಗೆ ಶರಣಾಗುತ್ತಾರೆ. ಇಂಗ್ಲಿಷ್ ಶಿಕ್ಷಣ ಕಲಿತ ನಾವು ಅದರಿಂದಾಗುವ ಅಸ್ವಾಭಾವಿಕ ಪರಿಣಾಮವನ್ನು ಗ್ರಹಿಸುವಲ್ಲಿ ಅಸಮರ್ಥರಾಗಿದ್ದೇವೆ. ನಮಗೆ ಆ ಬಗ್ಗೆ ಮನವರಿಕೆಯಾಗಬೇಕು. ಸಮಷ್ಟಿಗೆ ನಮ್ಮ ಕೊಡುಗೆ ಎಷ್ಟು ಅತ್ಯಲ್ಪ ಎನ್ನುವ ಬಗ್ಗೆ ಅರಿವಾಗಬೇಕು.

ಸಂವಹನ ಎನ್ನುವುದು ಕಲಿಕೆಯ ಹಂತದಲ್ಲಿ ವಿದೇಶಿ ಭಾಷೆಯಿಂದ ಸಾಗ ಬೇಕಾದರೆ, ತಾಯಿಯಿಂದ ಎದೆಗಿಳಿದ ಮಾತೃಭಾಷೆಯ ಸ್ವಾದವೇ ಹಾಳಾಗುತ್ತದೆ. ಕಲಿಕಾರ್ಥಿಯ ಪ್ರೇರಣೆ ಏಷ್ಟೇ ಮೌಲಿಕವಾಗಿದ್ದರೂ ಅವನಿಗೆ ಶಾಲೆ ಮತ್ತು ಮನೆಯ ನಡುವಿನ ಕೊಂಡಿಯನ್ನು ಕಳಚಿಕೊಳ್ಳುವ ಅನಿವಾರ್ಯತೆ ಎದುರಾಗುತ್ತದೆ. ಆ ಮೂಲಕ ನಾವು ಮಾತೃದ್ರೋಹಿಗಳಾಗಿ ಉಳಿದಂತಾಗುತ್ತದೆ. ಇದರಿಂದಾಗಿ ಸುಶಿಕ್ಷಿತ ಮತ್ತು ಅಶಿಕ್ಷಿತರ ನಡುವಿನ ಕಂದಕ ಹೆಚ್ಚಾಗುತ್ತದೆ. ಇಂಗ್ಲಿಷ್ ಭಾಷೆ ಕಲಿತವರು ಕಲಿಯದವರ ಪಾಲಿಗೆ ಸಾಹೇಬರು. ಕಲಿಯದವರು ಅವರಿಗೆ ಹೆದರಿಯೇ ನಡೆಯುತ್ತಾರೆ. ಅವರು ನಮ್ಮನ್ನು ನಂಬುವುದಿಲ್ಲ. ಇದು ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಪಡೆದವರಿಗೆ ಮನದಟ್ಟಾಗದೇ ಇಲ್ಲ. ಈ ಜನಸಮೂಹದ ಮಧ್ಯೆ ವ್ಯವಹರಿಸುವುದೇ ಒಂದು ದೊಡ್ಡ ಸವಾಲಾಗುತ್ತದೆ. ರಾಷ್ಟ್ರೀಯ ಕಾರಣದ ಹಿನ್ನೆಲೆಯಲ್ಲಿ ಕೆಲಸ ಮಾಡುವಾಗ ಅವರಿಗೆ ಮತ್ತೆ ಅದೇ ಇಂಗ್ಲಿಷ್ ಭಾಷೆಯದೇ ತೊಡಕಾಗುತ್ತದೆ. ಪರಿಣಾಮವಾಗಿ ದೊಡ್ಡ ಪ್ರಮಾಣದ ಜನಸಮೂಹ ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ಇಂಗ್ಲಿಷ್ ಭಾಷೆ ತನ್ನದೇ ಆದ ಯೋಗ್ಯ ಸ್ಥಾನವನ್ನು ಪಡೆದುಕೊಳ್ಳಲಿ. ಆದರೆ ಸ್ಥಳೀಯ ಭಾಷೆಗಳನ್ನು ಮೂಲೆಗೆ ತಳ್ಳುವ ಮೂಲಕವಲ್ಲ. ಪ್ರಾದೇಶಿಕ ಭಾಷೆಗೆ ಪ್ರಾಧಾನ್ಯತೆ ದೊರೆಯದ ಹೊರತು ನಾವು ಮಾನಸಿಕ ಗುಲಾಮಗಿರಿಯಿಂದ ಮುಕ್ತರಾಗುವುದಿಲ್ಲ. ನಮ್ಮ ಸ್ಥಳೀಯ ಭಾಷೆಗಳಿಗೆ ಆದ್ಯತೆ ದೊರೆತು ಇಂಗ್ಲಿಷ್ ಕಲಿಯಬೇಕಾಗಿ ಬಂದರೆ ತೊಂದರೆಯಿಲ್ಲ. ಇನ್ನಷ್ಟು ಸುಲಭವಾಗಿ ಅದನ್ನು ಕಲಿಯಬಹುದು. ನಾವು ಯಾವಾಗ ನಮ್ಮ ಮಾತೃಭಾಷೆಯ ಮೂಲಕ ಶಿಕ್ಷಣವನ್ನು ಪಡೆಯುತ್ತೇವೆಯೋ ಆಗ ಸಹಜವಾಗಿ ಮನೆಯ ವಾತಾವರಣವೂ ಬದಲಾಗುತ್ತದೆ. ಸದ್ಯದ ಸ್ಥಿತಿ ಹೇಗಿದೆಯೆಂದರೆ ನಾವು ಪಡೆದ ಇಂಗ್ಲಿಷ್ ಮಾಧ್ಯಮದ ಶಿಕ್ಷಣದ ಹಿನ್ನೆಲೆಯಲ್ಲಿ ನಮ್ಮ ಕೆಲಸ ಕಾರ್ಯಗಳೊಂದಿಗೆ ನಮ್ಮ ಪತ್ನಿಯ ಸಹಕಾರವನ್ನಾಗಲೀ, ಪಾಲಕರ ಸಹಕಾರವನ್ನಾಗಲೀ ಪಡೆಯುವ ಸ್ಥಿತಿಯಿಲ್ಲ. ಯಾಕೆಂದರೆ ನಾವು ಏನು

ಕಲಿತಿದ್ದೇವೆ ಎನ್ನುವುದು ಅವರಿಗೆ ತಿಳಿದಿಲ್ಲ. ಅದೇ ಒಂದೊಮ್ಮೆ ನಮ್ಮ ಶಿಕ್ಷಣ ಮಾತೃಭಾಷೆಯಲ್ಲಾಗಿದ್ದರೆ ನಮ್ಮ ಸುತ್ತಮುತ್ತಲಿನ ಪರಿಸರ ಕೂಡಾ ನಮ್ಮೊಂದಿಗೆ ಸುಲಭವಾಗಿ ವ್ಯವಹರಿಸಲು ಸಾಧ್ಯವಾಗುತ್ತಿತ್ತು. ದೈನಂದಿನ ಬದುಕಿನಲ್ಲಿ ನಮ್ಮೊಂದಿಗೆ ಸಂಪರ್ಕಕ್ಕೆ ಬರುವ ಒಬ್ಬ ಅಗಸ, ಕ್ಷೌರಿಕ, ಭಂಗಿ ಮುಂತಾದವರು ಕೂಡಾ ನಮ್ಮೊಂದಿಗೆ ಸುಲಭವಾಗಿ ವ್ಯವಹರಿಸಲು ಸಾಧ್ಯವಾಗುತ್ತಿತ್ತು. ಇಂಗ್ಲೆಂಡ್ ದೇಶದಲ್ಲಾದರೆ ಒಬ್ಬ ವ್ಯಕ್ತಿ ಕ್ಷೌರಿಕನ ಅಂಗಡಿಯಲ್ಲಿ ಕ್ಷೌರ ಮಾಡಿಸಿಕೊಳ್ಳುವ ವೇಳೆಯಲ್ಲಿ ಆ ದೇಶದ ರಾಜಕೀಯ ವಿದ್ಯಮಾನಗಳನ್ನು ಕುರಿತು ಚರ್ಚಿಸುತ್ತಾನೆ. ನಾವು ಹಾಗೆ ನಮ್ಮ ಕುಟುಂಬದ ಸದಸ್ಯರ ಜೊತೆಗೆ ಚರ್ಚಿಸುವುದು ಕೂಡಾ ಸಾಧ್ಯವಾಗುವುದಿಲ್ಲ. ಅವರೊಂದಿಗೆ ಚರ್ಚಿಸಿದರೆ ಅವರಿಗೆ ತಿಳಿಯಲಾರದಷ್ಟು ಅವರು ಮುಗ್ಧರಲ್ಲ. ನಮ್ಮ ದೇಶದ ಕ್ಷೌರಿಕ ಕೂಡಾ ಇಂಗ್ಲೆಂಡ್ ದೇಶದ ಕ್ಷೌರಿಕನ ಹಾಗೆ ಗ್ರಹಿಕೆಯ ಸಾಮರ್ಥ್ಯ ಹೊಂದಿದ್ದಾನೆ. ನಾವು ಅವರೊಂದಿಗೆ ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದ ಕತೆಗಳನ್ನು ಕುರಿತು ಮಾತನಾಡುತ್ತೇವೆ. ರಾಷ್ಟ್ರೀಯ ತಿಳುವಳಿಕೆಯನ್ನು ಕೂಡಾ ನಾವು ಆ ಮೂಲಕವೇ ಒದಗಿಸುತ್ತೇವೆ. ನಾವು ಶಾಲೆಯಲ್ಲಿ ಕಲಿತಿರುವುದನ್ನು ಮನೆಗೆ ಹೊತ್ತೊಯ್ಯುವಲ್ಲಿ ನಾವು ಸಮರ್ಥರಾಗಿರುವುದಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ಕಲಿತಿರುವುದನ್ನು ಕುಟುಂಬದ ಸದಸ್ಯರ ಸಮ್ಮುಖದಲ್ಲಿ ಸರಿಯಾಗಿ, ಸಮರ್ಪಕವಾಗಿ ಅನಾವರಣಗೊಳಿಸಲಾಗುವದಿಲ್ಲ.

ಸದ್ಯದ ಸಂದರ್ಭದಲ್ಲಿ ನಮ್ಮ ಕಾನೂನಿಗೆ ಸಂಬಂಧಿಸಿದ ವ್ಯವಹಾರಗಳು ಇಂಗ್ಲಿಷ್ ಭಾಷೆಯಲ್ಲಿಯೇ ನಡೆಯುತ್ತಿವೆ. ಅದೇ ರೀತಿಯಲ್ಲಿ ಇನ್ನೂ ಕೆಲವು ಸಂಸ್ಥೆಗಳು ಕೂಡಾ ಇಂಗ್ಲಿಷ್ ಭಾಷೆಯ ಮೂಲಕ ನಿರ್ವಹಿಸಲ್ಪಡುತ್ತವೆ. ಪರಿಣಾಮ ವಾಗಿ ನಮ್ಮ ಸ್ಥಿತಿ ನಮ್ಮಲ್ಲಿರುವ ಅಮೂಲ್ಯ ಸಂಪತ್ತನ್ನು ಅದೆಲ್ಲೋ ಆಳದಲ್ಲಿ ಹುದುಗಿಟ್ಟು ವ್ಯಥೆಪಡುವಂತಾಗಿದೆ. ನಮ್ಮತನದ ಅಗಾಧತೆಯ ಅರಿವು ಮೂಡ ದಂತಾಗಿದೆ. ಇಂಗ್ಲಿಷ್ ಭಾಷೆಯ ಕಲಿಕೆ ಬೆಟ್ಟಕ್ಕೆ ಕಲ್ಲು ಹೊತ್ತಂತಾಗುತ್ತಿದೆ. ಇಂಗ್ಲಿಷ್ ಭಾಷೆಯ ಕಲಿಕೆಯು ನಮ್ಮಲ್ಲಿಯ ಸಾಮರ್ಥ್ಯವನ್ನು ಹೊಸಕಿಹಾಕುತ್ತಿದೆ. ಅವರ ದೂರದೃಷ್ಟಿ ನಮ್ಮನ್ನು ದುರ್ಬಳಕೆ ಮಾಡುತ್ತಿದೆ. ನಾವು ದೇಶ ನಮ್ಮಿಂದ ನಿರೀಕ್ಷಿಸು ವುದನ್ನು ನೀಡುವಲ್ಲಿ ಅಸಮರ್ಥರಾಗುತ್ತಿದ್ದೇವೆ. ಇದು ಯಾವುದೇ ರೀತಿಯ ಅತಿಶಯೋಕ್ತಿಯಲ್ಲ. ನನ್ನೊಳಗಿದ್ದು ನನ್ನನ್ನು ಸತತವಾಗಿ ಬಾಧಿಸುವ ಮಾತು. ನಾವು ಮಾತೃಭಾಷೆಗೆ ಸರಿಯಾದ ಸ್ಥಾನಮಾನ ನೀಡದಿದ್ದರೆ ದೊಡ್ಡ ಬೆಲೆಯನ್ನೇ ತೆರಬೇಕಾಗುತ್ತದೆ. ಆ ಕಾರಣದಿಂದಾಗಿ ದೇಶವೂ ತೊಂದರೆಗೆ ಸಿಲುಕಬೇಕಾಗುತ್ತದೆ. ಸುಶಿಕ್ಷಿತ ಜನಸಮೂಹ ಈ ಸಂಕಷ್ಟದಿಂದ ದೇಶವನ್ನು ಪಾರು ಮಾಡಬೇಕು.

* * *

ನಾವು ಈ ಸಮಾಜಕ್ಕೆ ಕೊಡುವ ಕೊಡುಗೆಯೆಂದರೆ ಇಂಗ್ಲಿಷ್ ಭಾಷೆಯ ಮೋಹದಿಂದ ಈ ಸಮಾಜವನ್ನು ಬಿಡುಗಡೆಗೊಳಿಸುವುದು. ಇಂಗ್ಲಿಷ್ ಭಾಷೆಯ ಬಗೆಗಿರುವ ಅಂಥ ನಂಬುಗೆಗಳನ್ನು ಒಡೆದುಹಾಕುವುದು. ಇಂಗ್ಲಿಷ್ ಭಾಷೆ ಎನ್ನುವುದು ಕಲಿಕೆಯಲ್ಲಿ ಒಂದು ಮಾಧ್ಯಮ ಭಾಷೆ. ದುರಂತವೆಂದರೆ ಅದೇ ದೇಶದ ಪ್ರಧಾನ ಭಾಷೆಯ ಸ್ಥಾನವನ್ನು ಪಡೆದುಕೊಳ್ಳುವತ್ತ ಹೆಜ್ಜೆ ಹಾಕುತ್ತಿದೆ. ನಮ್ಮ ಸ್ಥಳೀಯ ಸಾಂಸ್ಕೃತಿಕ ಮತ್ತು ವೈಚಾರಿಕ ಪರಿಕಲ್ಪನೆಗಳನ್ನು ನಾವು ಇಂಗ್ಲಿಷ್ ಭಾಷೆಯಲ್ಲಿ ಅಭಿವ್ಯಕ್ತಿಸುತ್ತಿದ್ದೇವೆ. ಈ ಬಗೆಯ ಮನೋಭಾವ ನಮ್ಮನ್ನು ಕ್ರಮೇಣವಾಗಿ ಗುಲಾಮರನ್ನಾಗಿಸುತ್ತದೆ. ಆ ಮೂಲಕ ಅದು ನಮ್ಮನ್ನು ರಾಷ್ಟ್ರೀಯ ಸೇವೆಯಿಂದ ವಿಮುಖಗೊಳಿಸುತ್ತದೆ. ಇಂಗ್ಲಿಷ್ ಭಾಷೆಯ ಕಲಿಕೆಯಿಂದ ನಮ್ಮವರಿಂದಲೇ ನಾವು ದೂರ ಸರಿಯುವಂತಾಗಿದೆ. ಅಲ್ಲಿ ಕಲಿತ ಹೊಸ ಹೊಸ ವಿಚಾರಗಳನ್ನು ನಮ್ಮ ಜನಸಮೂಹಗಳಿಗೆ ತಲುಪಿಸಲು ಸಾಧ್ಯವಾಗದಂತಾಗಿದೆ. ನಾವು ಕಳೆದ ೬೦ ವರ್ಷಗಳಿಂದ ನಮ್ಮದಲ್ಲದ ಈ ಭಾಷೆಯನ್ನು ಅಲ್ಲಿರುವ ಕೆಲವು ಕಠಿಣ ಶಬ್ದಗಳನ್ನು ಕಲಿಯುವಲ್ಲಿ ಶ್ರಮವನ್ನು ವ್ಯರ್ಥವಾಗಿಸಿದ್ದೇವೆ. ಆ ಮೂಲಕ ಗಟ್ಟಿಯಿಲ್ಲದ ಅಡಿಪಾಯದ ಮೇಲೆ ಕಟ್ಟಡ ಕಟ್ಟುವ ಯತ್ನ ಮಾಡಿದಂತಿದೆ.

* * *

ನನಗನಿಸುವಂತೆ ಇಂಗ್ಲಿಷ್ ಭಾಷೆಯಲ್ಲಿ ಕೊಡಮಾಡುವ ಶಿಕ್ಷಣ ಈ ದೇಶದ ಜನರನ್ನು ವಿಸ್ಮಯಗೊಳಿಸಿದೆ. ಈ ಶಿಕ್ಷಣ ನಮ್ಮ ವಿದ್ಯಾರ್ಥಿಗಳ ಮನಸಿನ ಮೇಲೆ ಒಂದು ಬಗೆಯ ಒತ್ತಡವನ್ನು ಹೇರಿದೆ. ಪರಿಣಾಮವಾಗಿ ತಮ್ಮದಲ್ಲದ ಭಾಷೆಯಲ್ಲಿ ಅವರು ನಿತ್ರಾಣರಾಗಿ ಕಲಿಯುವಂತಾಗಿದೆ. ಇದು ಅವರಲ್ಲಿ ಕೇವಲ ಅನುಕರಣೆಗೆ ಎಡೆ ಮಾಡಿಕೊಡುತ್ತದೆ. ಸ್ಥಳೀಯ ಭಾಷೆಗಳ ಮೇಲೆ ಇದು ದೊಡ್ಡ ಆಘಾತವನ್ನುಂಟು ಮಾಡಿದೆ. ರಾಮಮೋಹನರಾಯ್‌ರಂಥ ಸುಧಾರಣಾವಾದಿ ಮತ್ತು ತಿಲಕ್‌ರಂಥ ಚಿಂತಕರು ಇಂಗ್ಲಿಷ್ ಭಾಷೆಯಲ್ಲಿ ಸಾಕಷ್ಟು ಜ್ಞಾನವನ್ನು ಸಂಪಾದಿಸಿದ್ದರೂ ಅದರ ಪ್ರಯೋಜನ ಜನರಿಗೆ ಸಾಕಷ್ಟು ಪ್ರಮಾಣದಲ್ಲಾಗಲಿಲ್ಲ. ಅದೇನಿದ್ದರೂ ಪ್ರಾದೇಶಿಕ ಭಾಷೆಯಲ್ಲಾಗಬೇಕು. ಇಲ್ಲದಿದ್ದರೆ ನಾವು ಬರೀ ಅನುಕರಣೆ ಮಾಡುವವರನ್ನು ಸೃಷ್ಟಿಸಿದಂತಾಗುತ್ತದೆ. ಯಾವುದೇ ಒಂದು ದೇಶ ಅನುಕರಣಾ ಸ್ಪರ್ಧೆಯ ಮೂಲಕ ಯಶಸ್ಸನ್ನು ಸಾಧಿಸುವುದಿಲ್ಲ. ಇಂಗ್ಲಿಷ್ ಭಾಷೆಯ ಶಿಕ್ಷಣದಿಂದಾಗಿ ಮಾತ್ರ ಖಚಿತತೆ, ವ್ಯಕ್ತಿ ಸ್ವಾತಂತ್ರ್ಯದಂತಹ ವಿಚಾರಗಳು ಸಾಧ್ಯ ಎನ್ನುವ ನಂಬುಗೆಯೇ ಸರಿಯಲ್ಲ. ಕಳೆದ ೫೦ ವರ್ಷಗಳಿಂದ ಈ ದೇಶದ ನಾನು ನನ್ನ ಮನೆಯ ಕಿಟಕಿಗಳನ್ನು ಮುಚ್ಚುವುದಿಲ್ಲ, ಗೋಡೆಗಳನ್ನು ಎಬ್ಬಿಸುವುದಿಲ್ಲ. ನನಗೆ ಮುಕ್ತ ಗಾಳಿ ಬೇಕು. ಹಾಗೆಂದು ನಾನೇ ನನ್ನ ಮನೆಯಲ್ಲಿ ಅಪರಿಚಿತನಂತೆ, ಗುಲಾಮನಂತೆ ಬದುಕುವುದನ್ನು

ಇಷ್ಟಪಡುವುದಿಲ್ಲ. ನಾನು ನನ್ನ ಸಹೋದರಿಯರ ಮೇಲೆ ಈ ಆಂಗ್ಲಭಾಷೆಯ ಭಾರವನ್ನು ಹೊರಿಸಲಾರೆ. ಆ ಮೂಲಕ ಅವರಲ್ಲಿ ಒಣಪ್ರತಿಷ್ಠೆಯನ್ನು ಬೆಳೆಸಲಾರೆ. ನಾನು ನಮ್ಮ ಯುವಕ, ಯುವತಿಯರಿಗೆ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳು ಆಂಗ್ಲಭಾಷೆಯಲ್ಲಿ ಎಷ್ಟರ ಮಟ್ಟಿಗೆ ಕಲಿತಿದ್ದಾರೆಯೋ ಅಷ್ಟು ಕಲಿಯುವಂತೆ ಕರೆ ನೀಡುತ್ತೇನೆ. ಹಾಗೆ ಕಲಿತ ಜ್ಞಾನವನ್ನು ಬೋಸ್, ರಾಯ್ ಮತ್ತು ಟ್ಯಾಗೋರರ ಹಾಗೆ ಬಳಸಲು ಹೇಳುತ್ತೇನೆ. ನಮ್ಮ ನಮ್ಮ ಮಾತೃಭಾಷೆಯಲ್ಲಿಯೇ ಅತ್ಯುತ್ತಮವಾದ ವಿಚಾರಗಳನ್ನು ಅಭಿವ್ಯಕ್ತಪಡಿಸಬಹುದು ಎನ್ನುವ ನಂಬುಗೆ ನನ್ನದು. ನನ್ನದು ಧಾರ್ಮಿಕ ಬಂದಿಖಾನೆಯಲ್ಲ. ದೇವರಿಂದ ಸೃಷ್ಟಿಯಾದ ಕಟ್ಟ ಕಡೆಯ ಮನುಷ್ಯನಿಗೂ ಅಲ್ಲಿ ಜಾಗವಿದೆ. ಆದರೆ ಒಣಪ್ರತಿಷ್ಠೆ, ಜನಾಂಗ, ವರ್ಣ ಮುಂತಾದವುಗಳಿಗೆ ಅಲ್ಲಿ ಜಾಗವಿಲ್ಲ.

('ಇಂಡಿಯಾ ಆಫ್ ಮೈ ಡ್ರೀಮ್ಸ್' ಹಾಗೂ ಇತರ ಬರಹಗಳಿಂದ.)

ಕನ್ನಡಕ್ಕೆ: ಎಸ್. ಬಿ. ಜೋಗುರ

೫೪

ರಾಷ್ಟ್ರೀಯತೆ

ನಾವು ಕೆಡುಕನ್ನು ದ್ವೇಷಿಸೋಣ. ಆದರೆ, ಕೆಡುಕು ಮಾಡುವವರನ್ನಲ್ಲ. ಮೂಲತಃ ಕೆಡುಕನ್ನು ಮೂಲೋತ್ಪಾಟನೆ ಮಾಡೋಣ. ಅದು ಅಗತ್ಯ. ಆದರೆ ನಾವು ಕೆಡುಕನ್ನು ಮಾಡುವವರನ್ನು ಪ್ರೀತಿಯಿಂದ ಸುಧಾರಿಸೋಣ. ತಪ್ಪು ಮಾಡಿದ ಮಗನನ್ನು ತಂದೆ ಸಹನೆಯಿಂದ ತಿದ್ದುವಂತೆ ನಾವು ಕೆಡುಕಿನಲ್ಲಿ ನಿರತರಾದವರನ್ನು ಬದಲಿಸೋಣ.

ಪರಸ್ಪರ ದ್ವೇಷ, ಅಸೂಯೆ ರಾಷ್ಟ್ರೀಯತೆಯ ಪರಮ ಶತ್ರುಗಳು. ಅವು ನಿಜವಾದ ರಾಷ್ಟ್ರೀಯತೆಯನ್ನು ಕೊಲ್ಲುತ್ತವೆ. ರಾಷ್ಟ್ರೀಯತೆಯೆಂದರೇನು ಎನ್ನುವುದನ್ನು ಅದರ ನಿಜವಾದ ಅರ್ಥದಲ್ಲಿ ನಾವು ಗ್ರಹಿಸಲು ಪ್ರಯತ್ನಿಸೋಣ. ನಮಗೆ ಬೇಕಿರುವುದು ನಮ್ಮ ದೇಶದ ಸ್ವಾತಂತ್ರ್ಯ. ಬೇರೆ ದೇಶ ತೊಂದರೆಗೊಳಗಾಗುವುದಾಗಲಿ, ಬೇರೆ ದೇಶವನ್ನು ಶೋಷಿಸುವುದಾಗಲಿ ನಮ್ಮ ಗುರಿಯಲ್ಲ. ಬ್ರಿಟಿಷ್ ಜನತೆಯನ್ನು ಸಂಪೂರ್ಣವಾಗಿ ನಾಶ ಮಾಡಿ ನಾವು ಸ್ವಾತಂತ್ರ್ಯ ಗಳಿಸಿಕೊಳ್ಳುವುದಾದರೆ, ಅಂತಹ ಸ್ವಾತಂತ್ರ್ಯ ನನಗೆ ಬೇಕಿಲ್ಲ. ಬೇರೆ ದೇಶಗಳಿಗೆ ಮಾದರಿಯಾಗುವಂತಹ ಸ್ವತಂತ್ರ ದೇಶ ನಮ್ಮದಾಗಬೇಕು. ವ್ಯಕ್ತಿ ಸಂಸಾರಕ್ಕಾಗಿ, ಸಂಸಾರ ಹಳ್ಳಿಗಾಗಿ, ಹಳ್ಳಿಯು ಜಿಲ್ಲೆಗಾಗಿ, ಜಿಲ್ಲೆಯು ರಾಜ್ಯಕ್ಕಾಗಿ, ರಾಜ್ಯವು ದೇಶಕ್ಕಾಗಿ ತ್ಯಾಗ ಮಾಡಬೇಕು. ಇವು ದೇಶಭಕ್ತಿಯ ಮೂಲತತ್ವಗಳು. ಹಾಗೆಯೇ ದೇಶದ ಸರ್ವ ಸಂಪನ್ಮೂಲಗಳು ಮಾನವ ಕಲ್ಯಾಣಕ್ಕಾಗಿ ಮುಡಿಪಾಗಬೇಕು. ಅದೇ ನಿಜವಾದ ರಾಷ್ಟ್ರೀಯತೆ. ನಾನು ಗುಜರಾತಿನವನಾದರೂ ಗುಜರಾತಿನ ಸಂಪನ್ಮೂಲಗಳು ಬಂಗಾಳದ ಅಥವಾ ಇಡೀ ದೇಶದ ಒಳಿತಿಗಾಗಿ ಉಪಯೋಗವಾಗಬೇಕು ಎನ್ನುವ ಭಾವನೆ ಬೆಳೆಯುವಂತೆ ಮಾಡಬೇಕು. ಹಾಗೆಯೇ, ನನ್ನ ದೇಶ ಸ್ವತಂತ್ರವಾಗಬೇಕು ಮತ್ತು ಅಗತ್ಯ ಬಿದ್ದರೆ

ಇಡೀ ಮಾನವ ಜನಾಂಗದ ಒಳಿತಿಗಾಗಿ ಸಾಯಲೂ ನಾವು ಸಿದ್ಧರಿರಬೇಕು. ಜನಾಂಗ ದ್ವೇಷಕ್ಕೆ ಇಲ್ಲಿ ಸ್ಥಳವಿಲ್ಲ. ಅದೇ ನನ್ನ ದೃಷ್ಟಿಯಲ್ಲಿ ನಿಜವಾದ ರಾಷ್ಟ್ರೀಯತೆ.

(೨೭ ಆಗಸ್ಟ್ ೧೯೨೫. ಕಲ್ಕತ್ತೆಯಲ್ಲಿ ಮಾಡಿದ ಭಾಷಣ.)

ಕನ್ನಡಕ್ಕೆ: **ಬಿ.ಎ.ಶ್ರೀಧರ**

ಭಾಗ : ೫

ವ್ಯಕ್ತಿ ಚಿತ್ರ

'ನಾವು ಗೌರವಿಸುವ ಎಲ್ಲರ ಫೋಟೋಗಳನ್ನೂ ಗೋಡೆಯ ಮೇಲೆ ತೂಗು ಹಾಕಲು ಹೊರಟರೆ ಮನೆಯಲ್ಲಿ ಅಷ್ಟೆಲ್ಲ ಜಾಗವೇ ಇರಲಾರದು. ಇನ್ನು ಅವರು ಮೆಟ್ಟುವ ಹಾವುಗೆಗಳನ್ನು ನೀವು ಇಟ್ಟುಕೊಳ್ಳಲು ಹೊರಟರೆ ಅದಕ್ಕೆ ಪ್ರತ್ಯೇಕ ಜಮೀನನ್ನೇ ಕೊಳ್ಳಬೇಕಾದೀತು...' ('ಮನೆಯಲ್ಲಿ ನಿಮ್ಮ ಹಾವುಗೆಗಳನ್ನಿಟ್ಟುಕೊಳ್ಳುವೆ' ಎಂದ ಮಹಿಳೆಗೆ.)

'ಮೂಲತಃ ಮಣ್ಣಿನಿಂದಲೇ ರೂಪುಗೊಂಡ ಮನುಷ್ಯನ ಮಣ್ಣಿನ ಮೂರ್ತಿಯನ್ನೋ, ಲೋಹದ ಮೂರ್ತಿಯನ್ನೋ ಮಾಡಲು ೨೫೦೦೦ ರೂಪಾಯಿ ಖರ್ಚು ಮಾಡುವುದು ನಿಜಕ್ಕೂ ವ್ಯರ್ಥ.'

ಮೋಹನದಾಸ್ ಕರಮಚಂದ್ ಗಾಂಧಿ

೫೫

ಕಸ್ತೂರಬಾ

ನಾನು ಒಂದು ಬಗೆಯ ದರ್ಪದ ಮನುಷ್ಯನಾಗಿದ್ದೆ. ಹೆಂಡತಿಯ ಮೇಲೆ ಸಿಟ್ಟಿನಿಂದ ಕೂಗಾಡುತ್ತಿದ್ದೆ. ನನ್ನೊಂದಿಗೆ ತಗ್ಗಿಬಗ್ಗಿ ನಡೆದುಕೊಳ್ಳುವುದು ನನ್ನ ಹೆಂಡತಿಯ ಕರ್ತವ್ಯ ಎಂದು ನಾನು ಭಾವಿಸಿದ್ದೆ. ಕಸ್ತೂರಬಾ ಪಾಲಿಗೆ ನಾನು ರೇಜಿಗೆಯ ನರಕವನ್ನೇ ಸೃಷ್ಟಿಮಾಡಿದ್ದೆನೆಂದು ತೋರುತ್ತದೆ. ಮನಸ್ಸಿಗೆ ಬಂದಾಗಲೆಲ್ಲ ನಾವು ತಂಗಿರುತ್ತಿದ್ದ ಮನೆಯನ್ನು ಬಿಡಿಸಿ ಇನ್ನೊಂದು ಬಾಡಿಗೆ ಮನೆಯಲ್ಲಿ ಬಿಡಾರ ಹೂಡಿಸುತ್ತಿದ್ದೆ. ನನ್ನ ಹೆಂಡತಿಯಾದವಳು ಇಂತಿಂಥ ಬಟ್ಟೆಬರೆಯನ್ನೇ ಹಾಕಿಕೊಳ್ಳಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸುತ್ತಿದ್ದೆ...

ಕಸ್ತೂರಬಾ ಸಂಪ್ರದಾಯ, ಮಡಿ ಇತ್ಯಾದಿಗಳನ್ನು ಪಾಲಿಸುತ್ತಿದ್ದ ಮನೆಯಿಂದ ಬಂದವಳು. ಅಸ್ಪೃಶ್ಯತೆಯ ಆಚರಣೆ ತಪ್ಪು ಎಂದೇನೂ ಆಕೆ ಭಾವಿಸಿರಲಿಲ್ಲ. ನಮ್ಮ ಮನೆಗೆ ಮುಸ್ಲಿಮರು, ಅಸ್ಪೃಶ್ಯರು ಭೇಟಿ ಕೊಡುವುದು ಸಾಮಾನ್ಯವಾಗಿತ್ತು. ಆಕೆಯ ತೀವ್ರ ಪ್ರತಿರೋಧದ ನಡುವೆಯೂ ನಾನು ಮುಸ್ಲಿಮರಿಗೆ, ಅಸ್ಪೃಶ್ಯರಿಗೆ ಆಕೆಯ ಕೈಯಿಂದಲೇ ಊಟೋಪಚಾರ ನಡೆಯುವ ಹಾಗೆ ನೋಡಿಕೊಂಡೆ...

ನಾನು ಕೊಡುತ್ತಿದ್ದ ಸೂಚನೆಗಳನ್ನು ಆಕೆ ಎಂದೂ ತಿರಸ್ಕರಿಸಲಿಲ್ಲ. ಅಷ್ಟಾಗಿ ವಿದ್ಯಾವಂತಳಾಗಿರದಿದ್ದರೂ ಅನುಕೂಲಗಳಿಗಾಗಿ ಎದುರು ನೋಡದೆ, ಇದ್ದುದರಲ್ಲೇ ಸರಳವಾಗಿ ಬದುಕು ನಡೆಸುವುದು ಆಕೆಗೆ ಗೊತ್ತಿತ್ತು. ಆಕೆ ಗೊಣಗದೆ, ಎದುರಾಡದೆ ನನ್ನ ಆಟಾಟೋಪವನ್ನೆಲ್ಲ ಸಹಿಸಿಕೊಳ್ಳುತ್ತಿದ್ದಳು.

ಆಕೆಯ ತಾಳ್ಮೆ, ಸೌಮ್ಯ ಸ್ವಭಾವ ನನ್ನ ಮೇಲೆ ಪರಿಣಾಮ ಬೀರತೊಡಗಿದವು. ಕಪಟವಿಲ್ಲದ ಆಕೆಯ ನಡೆನುಡಿ ನನ್ನ ಮನಸ್ಸನ್ನು ಗೆದ್ದವು. ನಿಧಾನಕ್ಕೆ ಗಂಡನಾದವನು ಹೆಂಡತಿಯ ಜೊತೆ ದಬ್ಬಾಳಿಕೆಯಿಂದ ನಡೆದುಕೊಳ್ಳುವುದು ತರವಲ್ಲವೆಂದು ನನಗೆ

ಅನ್ನಿಸಲು ಶುರುವಾಯ್ತು. ನನ್ನ ಮಾತನ್ನು ನಡೆಸಿಕೊಡುವಂತೆ ಒತ್ತಾಯಿಸುವುದಕ್ಕಿಂತ, ಆಕೆಗೇ ಆ ಕುರಿತು ಮನವರಿಕೆಯಾಗುವಂತೆ ಮಾಡುವುದು ಒಳ್ಳೆಯದೆಂದು ತೋರಿತು. ಅಹಿಂಸೆಯ ದಾರಿಯಲ್ಲಿ ನಡೆಯಲು ಒತ್ತಾಸೆಯಾಗಿದ್ದರಿಂದ ಕಸ್ತೂರಬಾ ಕ್ರಮೇಣ ನನಗೆ ಗುರುವಾದಳು. ನನಗೆ ಆಕೆಗಿಂತ ನಂಬಿಕಸ್ತ, ನಿಷ್ಠಾವಂತ ಸಂಗಾತಿ ದೊರೆಯುವುದು ಸಾಧ್ಯವಿರಲಿಲ್ಲ ಎಂದು ಆಣೆ ಮಾಡಿ ಬೇಕಾದರೆ ಹೇಳಬಲ್ಲೆ.

(೧೯೩೪ರ ಅಕ್ಟೋಬರ್ ೨೩ರಂದು ಪಖ್ತೂನ್ ಪ್ರಾಂತದ ಹುನ್ನೂವಿನಲ್ಲಿ ಲಿಂಗ ಸಮಾನತೆಯ ಪ್ರಶ್ನೆಗಳಿಗೆ ಉತ್ತರಿಸುತ್ತ ಆಡಿದ ಮಾತುಗಳು.)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೩೬

ಆ್ಯಡನ್ ಎಂಬ ಸೊಮಾಲಿಯಾದ ತರುಣ

ಆ್ಯಡನ್, ಸೊಮಾಲಿಯಾದವ. ಹತ್ತು ವರ್ಷಗಳ ಕಠಿಣ ಸಜೆಯನ್ನು ಅವನಿಗೆ ವಿಧಿಸಲಾಗಿತ್ತು. ಯುದ್ಧಕಾಲದಲ್ಲಿ ಬ್ರಿಟನ್ ಸೇನೆ ಸೇರಿದ್ದವ ಆಮೇಲೆ ಸೇನೆಯನ್ನು ತೊರೆದು ಓಡಿಹೋಗಿದ್ದ. ಅದೇ ಅವನು ಮಾಡಿದ್ದ ಅಪರಾಧ. ಈ ತಪ್ಪಿಗೆ ಏಡೆನ್ ಜೈಲು ಪ್ರಾಧಿಕಾರವು ಅವನನ್ನು ಸೆರೆಮನೆಗೆ ತಳ್ಳಿತ್ತು.

ನಾವು ಜೈಲು ಸೇರಿದಾಗ ಆ್ಯಡನ್ ಆಗಲೇ ತನ್ನ ಪಾಲಿನ ಶಿಕ್ಷೆಯಲ್ಲಿ ನಾಲ್ಕು ವರ್ಷ ಪೂರೈಸಿದ್ದ. ಅವನು ಶಾಲೆಯ ಮುಖ ಕಂಡವನಲ್ಲ. ಕಷ್ಟಪಟ್ಟು ಕುರಾನ್ ಓದುತ್ತಿದ್ದ. ಬರೆಯಲು ಬರುತ್ತಿರಲಿಲ್ಲ. ಉರ್ದು ಭಾಷೆಯನ್ನು ಚೆನ್ನಾಗಿ ಮಾತಾಡುತ್ತಿದ್ದ. ಸೂಪರಿಂಟೆಂಡೆಂಟರ ಅನುಮತಿ ಪಡೆದು ನಾನು ಅವನಿಗೆ ಬರವಣಿಗೆ ಕಲಿಸಲು ಶುರುಮಾಡಿದೆ. ಅವನಿಗೆ ಅಕ್ಷರ ಕಲಿಯುವುದು ಕಷ್ಟವಾಗತೊಡಗಿತು. ಕೊನೆಗೆ ಆ ಪ್ರಯತ್ನವನ್ನೇ ಕೈಬಿಟ್ಟ.

ಆ್ಯಡನ್‌ಗೆ ಒಳ್ಳೆಯ ಹಾಸ್ಯಪ್ರಜ್ಞೆ ಇತ್ತು. ಸೂಜಿಮೊನೆಯಷ್ಟು ಚೂಪು ಅವನ ಹಾಸ್ಯ. ಧಾರ್ಮಿಕ ವಿಚಾರಗಳಲ್ಲಿ ಆಸ್ಥೆ ವಹಿಸುತ್ತಿದ್ದ. ಇಸ್ಲಾಂನಲ್ಲಿ ಅವನಿಗೆ ಅಪಾರ ನಂಬಿಕೆ. ಮಧ್ಯರಾತ್ರಿಯ ಪ್ರಾರ್ಥನೆ, ರಂಜಾನ್ ಉಪವಾಸಗಳನ್ನು ಎಂದೂ ತಪ್ಪಿಸಿದವನಲ್ಲ. ಜಪಮಾಲೆ ಹಿಡಿದು, ಬಿಡುವಾದಾಗಲೆಲ್ಲ ಹದೀಸು ಪಠಿಸುತ್ತಿದ್ದ. 'ನಿಮ್ಮಲ್ಲಿ ಉಪವಾಸದ ರಿವಾಜುಗಳು ಹೇಗೆ?' ಎಂದು ನನ್ನಲ್ಲಿ ವಿಚಾರಿಸುತ್ತಿದ್ದ. 'ಅಹಿಂಸೆಯ ಬಗ್ಗೆ ನಿಮ್ಮ ಧರ್ಮದ ನಿಲುವೇನು?' ಎಂದೂ ಆಗಾಗ ಕೇಳಿ ತಿಳಿದುಕೊಳ್ಳುತ್ತಿದ್ದ.

ಅವನು ಸಿಕ್ಕಾಪಟ್ಟೆ ಧೈರ್ಯಸ್ಥ. ಹಾಗೆಯೇ ವಿನಯವಂತ. ಆದರೆ ಯಾರಿಗೂ ಮಣಿಯುತ್ತಿರಲಿಲ್ಲ. ಸೇನೆಯಲ್ಲಿ ಇದ್ದು ಬಂದವನಾದ್ದರಿಂದ ಶಿಸ್ತು, ಸಂಯಮ

ಪಾಲಿಸುತ್ತಿದ್ದ. ಒಮ್ಮೊಮ್ಮೆ ಸಿಟ್ಟಿಗೆದ್ದುಬಿಡುತ್ತಿದ್ದ. ಜೊತೆಗಾರರೊಂದಿಗೆ ಜಗಳ ಕೂಡ ಮಾಡುತ್ತಿದ್ದ. ಆಗೆಲ್ಲ ನಾವೇ ಅವನನ್ನು ಸುಮ್ಮನಿರಿಸಬೇಕಾಗುತ್ತಿತ್ತು. ಜಗಳಕ್ಕೆ ಬೀಳದೆ ಸುಮ್ಮನಾಗುತ್ತಿದ್ದರೂ ತನ್ನ ತಪ್ಪಿಲ್ಲದಿದ್ದರೆ ಬುದ್ಧಿವಾದ ಹೇಳಿದವರ ಜೊತೆಗೂ ಜೋರಾಗಿಯೇ ವಾದ ಹೂಡುತ್ತಿದ್ದ.

ಜೈಲಿನಲ್ಲಿ ನಾನು ಬಹಳ ಕಾಲ ಇದ್ದದ್ದು ಅವನ ಜೊತೆಯಲ್ಲೇ. ನನ್ನನ್ನು ಕಂಡರೆ ಅವನಿಗೇನೋ ಅಕ್ಕರೆ. ನನ್ನ ಊಟ ನಿದ್ದೆಗಳ ಬಗ್ಗೆ ಕಾಳಜಿ ವಹಿಸುತ್ತಿದ್ದ. ಕಾಯಿಲೆ ಬಿದ್ದಾಗ ನನ್ನನ್ನು ನೋಡಿಕೊಳ್ಳುತ್ತಿದ್ದ.

ತನ್ನನ್ನು ಜೈಲಿನಿಂದ ಬಿಡುಗಡೆ ಮಾಡಿ, ಏಡೆನ್‌ನಲ್ಲಿ ಓಡಾಡಿಕೊಂಡಿರಲಿಕ್ಕಾದರೂ ಜೈಲು ಪ್ರಾಧಿಕಾರ ಅವಕಾಶ ಮಾಡಿಕೊಡಬೇಕು ಎಂದು ಅವನು ಮನವಿ ಕೊಟ್ಟ, ನಾನೂ ಅವನ ಬೇಡಿಕೆಯಂತೆ ಸಾಕಷ್ಟು ಅಹವಾಲುಗಳನ್ನು ಬರೆದು ಹಾಕಿದೆ. ಸೂಪರಿಂಟೆಂಡೆಂಟರೂ ಬಹಳ ಪ್ರಯತ್ನಿಸಿದರು. ಆ್ಯಡನ್ ಮನವಿಗೆ ಜೈಲು ಪ್ರಾಧಿಕಾರ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲವಾದರೂ ಅವನಿಗೆ ವಿಧಿಸಿದ್ದ ಸಜೆಯ ಅವಧಿಯನ್ನು ಕಡಿತಗೊಳಿಸಲಾಗುವುದೆಂಬ ಭರವಸೆಯನ್ನು ಕೊಟ್ಟಿತು. ಅವನನ್ನು ಬೇರೊಂದು ಜೈಲಿಗೆ ವರ್ಗಾಯಿಸುವಾಗ ನಾವು ಪರಸ್ಪರ ಭಾವುಕ ವಿದಾಯ ಹೇಳಿಕೊಂಡೆವು.

ಈ ಹೊತ್ತಿಗೆ ಅವನು ಜೈಲಿನಿಂದ ಬಿಡುಗಡೆಯಾಗಿರಬಹುದು. ಇನ್ನೊಂದು ವಿಷಯವನ್ನು ಇಲ್ಲಿ ಹೇಳಲೇಬೇಕು: ಜೈಲಿನೊಳಗೆ ನಾನು ಬಟ್ಟೆ ನೂಲುವ ಏರ್ಪಾಡು ಮಾಡತೊಡಗಿದ್ದಾಗ ಹತ್ತಿ ಹಿಂಜುವ ಸಾಧನ ತಯಾರಿಸಿಕೊಡಲು ಆ್ಯಡನ್ ನನಗೆ ತುಂಬ ಸಹಾಯ ಮಾಡಿದ. ಅವನು ಯುದ್ಧದಲ್ಲಿ ತನ್ನ ಒಂದು ಕೈಯನ್ನು ಕಳೆದುಕೊಂಡಿದ್ದ.

(ಯಂಗ್ ಇಂಡಿಯಾ, ೧೦.೦೭.೧೯೨೪. 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೨೪, ಪು. ೩೬೬-೩೬೭)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೫೭

ಬೀ ಅಮ್ಮ

ಬೀ ಅಮ್ಮ ನಿಧನರಾಗಿದ್ದರೆಂಬ ಸಂಗತಿಯನ್ನು ನಂಬುವುದೇ ಕಷ್ಟ. ಬೀ ಅಮ್ಮನವರ ಗಾಂಭೀರ್ಯದ ಆಕೃತಿ ಅಥವಾ ಬಹಿರಂಗ ಸಭೆಗಳಲ್ಲಿ ಅವರ ಧ್ವನಿ ಯಾರಿಗೆ ತಾನೆ ಗೊತ್ತಿಲ್ಲ? ಅವರು ವಯಸ್ಸಾಗಿದ್ದರೂ ತರುಣರಷ್ಟೇ ಶಕ್ತಿಯನ್ನೂ, ಉತ್ಸಾಹವನ್ನೂ ಪಡೆದಿದ್ದರು. ಅವರು ಖಿಲಾಫತ್ ಮತ್ತು ಸ್ವರಾಜ್ಯ ಸಾಧನೆಗಾಗಿ ಒಂದೇ ಸಮನೆ ಪ್ರಯಾಣ ಮಾಡುತ್ತಿದ್ದರು. ಇಸ್ಲಾಮಿನ ದೃಢ ಅನುಯಾಯಿಗಳಾಗಿದ್ದ ಅವರು, ಇಸ್ಲಾಮಿನ ಏಳಿಗೆ ಭಾರತದ ಸ್ವಾತಂತ್ರ್ಯವನ್ನು ಅವಲಂಬಿಸಿದೆ ಎಂದು ನಂಬಿದ್ದರು. ಹಿಂದೂ-ಮುಸ್ಲಿಂ ಏಕತೆ ಹಾಗೂ ಖದ್ದರ್ ಇಲ್ಲದೆ ಭಾರತದ ಸ್ವಾತಂತ್ರ್ಯವು ಅಸಾಧ್ಯ ಎಂಬುದೂ ಸಹ ಅವರಿಗೆ ಮನವರಿಕೆಯಾಗಿತ್ತು. ಆದ್ದರಿಂದ ಅವರು ಹಿಂದೂ, ಮುಸ್ಲಿಂ ಏಕತೆಯನ್ನು ಕುರಿತು ಅವಿರತವಾಗಿ ಬೋಧಿಸುತ್ತಿದ್ದರು. ಅವರು ತಮ್ಮ ಎಲ್ಲ ವಿದೇಶಿ ಹಾಗೂ ಗಿರಣಿ ತಯಾರಿಕಾ ವಸ್ತ್ರಗಳನ್ನೂ ತ್ಯಜಿಸಿ ಖಾದಿ ವಸ್ತ್ರಗಳನ್ನೇ ಧರಿಸುತ್ತಿದ್ದರು. ತಮ್ಮ ಸಾವಿನ ನಂತರ ತಮ್ಮ ಮೇಲೆ ಖಾದಿ ವಸ್ತ್ರವಲ್ಲದೆ ಮತ್ತಾವ ವಸ್ತ್ರವನ್ನೂ ಹೊದಿಸಬಾರದೆಂದು ತಮಗೆ ಹೇಳಿದ್ದರೆಂದು ಮೌಲಾನಾ ಮಹಮದ್ ಅಲಿಯವರು ನನಗೆ ತಿಳಿಸಿದ್ದಾರೆ. ಆಕೆಯು ನನ್ನೊಂದಿಗೆ ಸ್ವರಾಜ್ಯ ಮತ್ತು ಏಕತೆಯ ಬಗ್ಗೆ ವಿಚಾರಿಸುತ್ತಿದ್ದರು. ಈ ರೀತಿ ವಿಚಾರಿಸಿದ ನಂತರ ನಡೆಯುತ್ತಿದ್ದ ಪ್ರಾರ್ಥನೆಯಲ್ಲಿ ಹಿಂದೂಗಳೂ ಮುಸಲ್ಮಾನರೂ ಪರಸ್ಪರ ಏಕತೆಯ ಅವಶ್ಯಕತೆಯನ್ನು ಅರಿತುಕೊಂಡು ಒಂದಾಗಿ ಬಾಳುವ ವಿವೇಕವನ್ನು ದೇವರು ಹಿಂದೂಗಳಿಗೂ ಮುಸಲ್ಮಾನರಿಗೂ ದಯಪಾಲಿಸಲೆಂದು ಪ್ರಾರ್ಥಿಸುತ್ತಿದ್ದರು. ಸ್ವರಾಜ್ಯದ ಸ್ಥಾಪನೆಯಾಗುವುದನ್ನು ನೋಡುವ ಭಾಗ್ಯವನ್ನು ದೇವರು ತಮಗೆ ಕರುಣಿಸಬೇಕೆಂದೂ ಕೋರುತ್ತಿದ್ದರು. ಈ ಧೀರೋದಾತ್ತ ಮಹಿಳೆಯ ಸ್ಮರಣೆಯನ್ನು ಶಾಶ್ವತಗೊಳಿಸಲು ಇರುವ ಅತ್ಯುತ್ತಮ ವಿಧಾನವೆಂದರೆ ಅವರು ತೋರಿಸುತ್ತಿದ್ದ ಉತ್ಸಾಹ, ಹುಮ್ಮಸ್ಸನ್ನು ನಾವು ಅನುಸರಿಸಿಕೊಂಡು ಬರುವುದು. ಒಗ್ಗಟ್ಟು ಮತ್ತು ಸ್ವರಾಜ್ಯವಿಲ್ಲದ ಹಿಂದುತ್ವ

ಇಸ್ಲಾಮಿನಷ್ಟೇ ಅಪಾಯದಲ್ಲಿರುತ್ತದೆ. ಇದೊಂದು ಮೂಲರೂಪದ ವಾಸ್ತವಾಂಶ. ಬೀ ಅಮ್ಮನವರು ಗ್ರಹಿಸಿದ ಇಂಥ ಸಾಮಾನ್ಯ ತಿಳಿವಳಿಕೆಯು ಹಿಂದೂಗಳಿಗೂ ಮುಸ್ಲಿಮರಿಗೂ ಇರಬಾರದೇಕೆ? ದೇವರು ಆಕೆಯ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಅಲಿ ಸೋದರರಿಗೆ ಆಕೆಯು ಬಿಟ್ಟು ಹೋಗಿರುವ ಧ್ಯೇಯೋದ್ದೇಶಗಳನ್ನು ಮುಂದುವರಿಸುವ ಶಕ್ತಿಯನ್ನು ದಯಪಾಲಿಸಲಿ.

ಬೀ ಅಮ್ಮನವರ ನಿಧನದ ರಾತ್ರಿ ನಾನು ಕಣ್ಣಾರೆ ಕಂಡ ಹಾಗೂ ನನ್ನ ಮೇಲೆ ಅಪಾರ ಪ್ರಭಾವ ಬೀರಿದ ಗಂಭೀರ ದೃಶ್ಯವನ್ನು ಇಲ್ಲಿ ಪ್ರಸ್ತಾಪಿಸದೆ ಬಿಡುವಂತಿಲ್ಲ. ಆಕೆಯ ಉಸಿರು ನಿಧಾನವಾಗಿ ಕ್ಷೀಣಿಸುತ್ತಿರುವುದಾಗಿ ಕೇಳಿ ಸರೋಜಿನಿ ನಾಯ್ಡು ಮತ್ತು ನಾನು ಆಕೆಯ ಶಯ್ಯೆಯ ಬಳಿಗೆ ಧಾವಿಸಿದೆವು. ಆಕೆಯ ಸುತ್ತಲೂ ಕುಟುಂಬದ ಅನೇಕ ಸದಸ್ಯರು ನೆರೆದಿದ್ದರು. ಕುಟುಂಬದ ಮಿತ್ರರೂ ವೈದ್ಯರೂ ಆದ ಡಾ.ಅನ್ಸಾರಿ ಅವರು ಸಹ ಅಲ್ಲಿ ಹಾಜರಿದ್ದರು. ಯಾರೂ ಬಿಕ್ಕಿ ಬಿಕ್ಕಿ ಅಳುತ್ತಿರುವುದನ್ನು ಕೇಳಲಿಲ್ಲ, ನೋಡಲಿಲ್ಲ. ಆದಾಗ್ಯೂ ಮೌಲಾನ ಮಹಮದ್ ಅಲಿ ಅವರ ಕೆನ್ನೆಗಳ ಮೇಲೆ ಕಣ್ಣೀರು ಹರಿಯುತ್ತಿತ್ತು. ಬೀ ಅಮ್ಮನವರ ಅಣ್ಣ ಕಷ್ಟಪಟ್ಟು ದುಃಖವನ್ನು ತಡೆದಿದ್ದರು. ಆದಾಗ್ಯೂ ಅವರ ಮುಖ ಗಂಭೀರವಾಗಿತ್ತು. ಅವರೆಲ್ಲರೂ ಅಲ್ಲಾನ ನಾಮಸ್ಮರಣೆ ಮಾಡುತ್ತಿದ್ದರು. ಒಬ್ಬ ಮಿತ್ರನು ಅಂತಿಮ ಪ್ರಾರ್ಥನೆ ಮಾಡುತ್ತಿದ್ದನು. 'ಕಾಮ್ರೇಡ್' ಪತ್ರಿಕೆಯ ಮುದ್ರಣಾಲಯವು ಬೀ ಅಮ್ಮನವರು ಮಲಗಿದ್ದ ಕೋಣೆಗೆ ಅತಿ ಸಮೀಪದಲ್ಲಿತ್ತು. ಆದರೆ ಒಂದು ಕ್ಷಣವೂ ಅದು ಕೆಲಸವನ್ನು ನಿಲ್ಲಿಸಿರಲಿಲ್ಲ. ಮೌಲಾನಾ ಅವರು ಸಹ ತಮ್ಮ ಸಂಪಾದಕೀಯ ಕೆಲಸವನ್ನು ನಿಲ್ಲಿಸಲಿಲ್ಲ. ಯಾವುದೇ ಅಗತ್ಯವಾದ ಸಾರ್ವಜನಿಕ ಚಟುವಟಿಕೆಯನ್ನೂ ನಿಲ್ಲಿಸಲಿಲ್ಲ. ಮೌಲಾನ ಶೌಕತ್ ಅಲಿ ಅವರು ತಮ್ಮ ರಾಂಜಾಸ್ ಕಾಲೇಜ್ ಭೇಟಿಯನ್ನು ಮುಂದಕ್ಕೆ ಹಾಕುವುದನ್ನು ಕನಸಿನಲ್ಲಿ ಸಹ ಊಹಿಸಿರಲಾರರು. ಒಳ್ಳೆಯ ಸೈನಿಕನಂತೆ ಅವರು ಮುಜಾಫರ್ ನಗರದ ಹಿಂದೂಗಳೊಂದಿಗೆ ತಾವಿಟ್ಟುಕೊಂಡಿದ್ದ ಸಂದರ್ಶನ ಕಾರ್ಯಕ್ರಮವನ್ನು ನಿರ್ವಹಿಸಿದರು. ಆದರೆ ಅವರು ಬೀ ಅಮ್ಮನವರ ಮರಣದ ನಂತರ ಈ ಕಾರ್ಯಕ್ರಮವನ್ನು ನಡೆಸಿಕೊಡುವುದಕ್ಕಾಗಿ ತೆರಳಬೇಕಾಯಿತು. ಅದು ಹೇಗೆ ನಡೆಯಬೇಕೋ ಅದೇ ರೀತಿ ನಡೆಯಿತು. ಜನನ, ಮರಣ ಈ ಎರಡೂ ಬೇರೆ ಬೇರೆ ಸ್ಥಿತಿಗಳಲ್ಲ; ಅವು ಒಂದೇ ಸ್ಥಿತಿಯ ಬೇರೆ ಬೇರೆ ರೂಪಗಳು ಮಾತ್ರ. ಒಂದರ ಬಗ್ಗೆ ಸಂತೋಷಪಡುವ ನಾವು ಇನ್ನೊಂದನ್ನು ಹೀಗಳೆಯಲು ಕಾರಣವಿಲ್ಲ.

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: **ಎಸ್. ಸೇತೂರಾವ್**

೫೮

ಮಹಮದ್ ಅಲಿ

ನಾವು ಮದ್ರಾಸಿನ ಕಡೆ ಪ್ರಯಾಣಿಸುತ್ತಿದ್ದಾಗ ಮಹಮದ್ ಅಲಿಯವರ ಬಂಧನವಾಯಿತು.

ಈ ಘಟನೆಯನ್ನು ರೈಲಿನಿಂದಲೇ ಬರೆಯುತ್ತಿದ್ದೇನೆ. ವಾಲ್ಟರ್ ಸ್ಟೇಷನ್ನಿನಲ್ಲಿ ರೈಲು ಸುಮಾರು ಹದಿನೈದು ನಿಮಿಷಕ್ಕಿಂತ ಹೆಚ್ಚು ಹೊತ್ತು ನಿಂತಿತು. ರೈಲಿನಿಂದಿಳಿದು ನಾವು ಭಾಷಣ ಮಾಡಲು ಒಂದೆರೆಡು ಹೆಜ್ಜೆ ಮುಂದಿಟ್ಟಿರಬಹುದು. ಅಷ್ಟರಲ್ಲಿ ಅಲಿಯವರು ಗಟ್ಟಿಯಾಗಿ ಎತ್ತರದ ದನಿಯಲ್ಲಿ ಬಂಧನದ ನೋಟೀಸ್ ಓದ ತೊಡಗಿದರು. ನಾನು ಕೆಲ ಹೆಜ್ಜೆ ಮುಂದಿದ್ದೆ.

ಅಲಿಯವರ ಬಂಧನಕ್ಕಾಗಿ ಇಬ್ಬರು ಬಿಳಿಯರು ಹಾಗೂ ಆರು ಮಂದಿ ಭಾರತೀಯ ಸಿಪಾಯಿಗಳನ್ನು ನಿಯೋಜಿಸಲಾಗಿತ್ತು. ನೋಟೀಸ್ ಓದಿ ಮುಗಿಸು ವುದರೊಳಗೆ ಬ್ರಿಟಿಷ್ ಅಧಿಕಾರಿ ಅಲಿಯವರ ರಟ್ಟೆ ಹಿಡಿದು ದರದರನೆ ಎಳೆದುಕೊಂಡು ಹೊರಟುಹೋದ. ಅಲಿಯವರು ನಗುಮುಖದಿಂದ ಕೈ ಬೀಸುತ್ತ ವಿದಾಯ ಹೇಳುತ್ತಿದ್ದರು. ತಕ್ಷಣ ಈಗ ನಾನೊಬ್ಬನೇ ಒಂಟಿಯಾಗಿ ಈ ಜವಾಬ್ದಾರಿಯನ್ನು ಹೊರಬೇಕಾಗಿದೆ ಎಂಬ ಸತ್ಯದ ಅರಿವಾಯಿತು. ಇಂತಹ ಧೀರ ವ್ಯಕ್ತಿತ್ವದ ವ್ಯಕ್ತಿಯೊಂದಿಗೆ ಕೆಲಸ ಮಾಡುವುದೇ ಹೆಮ್ಮೆಯ ವಿಷಯವಾಗಿತ್ತು. ಸಭೆಯನ್ನು ಉದ್ದೇಶಿಸಿ ಮಾತಾಡಿದ ನಂತರ ಅವರನ್ನು ಭೇಟಿಯಾಗಲು ಕಾರಾಗೃಹಕ್ಕೆ ಹೋದೆ. ಆದರೆ ಅಲ್ಲಿ ಪತ್ನಿ ಹಾಗೂ ಆಪ್ತ ಕಾರ್ಯದರ್ಶಿಯನ್ನು ಬಿಟ್ಟು ಬೇರೆ ಯಾರಿಗೂ ಅಲಿಯವರನ್ನು ಭೇಟಿ ಆಗಲು ಅನುಮತಿ ಇರಲಿಲ್ಲ. ಅಲಿಯವರ ಪತ್ನಿ ಅಮ್ಜದಿ ಬೇಗಂರ ಅಸಾಧಾರಣ ಸಾಹಸವನ್ನು ನೋಡಿ ನಾನು ವಿಸ್ಮಿತನಾದೆ. ಪತಿಯ ಭೇಟಿಯ ನಂತರ ಬೇಗಂ ಧೈರ್ಯದಿಂದ ಮರಳಿ ವಾಲ್ಟರ್ ನಿಲ್ದಾಣಕ್ಕೆ ಬಂದರು.

ಆಗ ನಾನು ಅಮ್ಜದಿ ಬೇಗಂ ಅವರನ್ನು ಕೇಳಿದೆ, 'ನಿಮಗೆ ಭಯವಾಗುತ್ತಿದೆಯೇ?'

ತಕ್ಷಣ ಅವರು, 'ನನ್ನ ಪತಿ ಕೇವಲ ತಮ್ಮ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ, ಅಷ್ಟೆ! ಅದಕ್ಕಿಂತ ಹೆಚ್ಚಿಗೆ ಏನೂ ಮಾಡಿಲ್ಲ' ಎಂದು ಹೇಳಿ, ನಂತರ ಧೈರ್ಯದಿಂದ ನನ್ನ ಜೊತೆ ತಮ್ಮ ಪ್ರಯಾಣ ಮುಂದುವರಿಸಿದರು.

ಅಮ್ಜದಿ ಬೇಗಂ ಅವರ ಅತ್ತೆ, ಅಂದರೆ ಮಹಮದ್ ಅಲಿಯವರ ತಾಯಿ, ಬೀ ಅಮ್ಮ ಪರದಾದಲ್ಲಿದ್ದುಕೊಂಡೇ ಎಲ್ಲಾ ಸಭೆಗಳಲ್ಲೂ ಭಾಗವಹಿಸಿ, ಅವಶ್ಯವೆನ್ನಿಸಿದ ಕಡೆ ಭಾಷಣಗಳನ್ನು ಮಾಡಿದ್ದರು. ಖಾದಿ ವಸ್ತ್ರ, ಚರಕ ಹಾಗೂ ದೇಣಿಗೆಗಾಗಿ ಎಲ್ಲರಲ್ಲೂ ಅವರು ಮನವಿ ಮಾಡಿಕೊಳ್ಳುತ್ತಿದ್ದರು. ಬೆಲೆ ಬಾಳುವ ವಿದೇಶದ ವಸ್ತುಗಳನ್ನು ಧರಿಸುತ್ತಿದ್ದ ಅವರು ದೇಶಕ್ಕಾಗಿ ಸಾಧಾರಣ ಖಾದಿ ಬಟ್ಟೆ ಧರಿಸತೊಡಗಿದರು. ಮುಸ್ಲಿಂ ಮಹಿಳೆಯರು ಧರಿಸುವ ಬಿಳಿ ಬಟ್ಟೆಗಳಲ್ಲಿ ಶುಭ್ರತೆ, ಪವಿತ್ರತೆ ಇರುತ್ತದೆ ಎನ್ನುವ ಅನುಭವ ನನಗೆ ಮದ್ರಾಸಿನಲ್ಲಾಯಿತು.

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: ಶಾಕೀರಾ ಖಾನುಂ

೩೯

ಹೆನ್ರಿ ಡೇವಿಡ್ ಥೋರೋ

ಅನೇಕ ವರ್ಷಗಳ ಹಿಂದೆ ಅಮೇರಿಕಾದಲ್ಲಿ ಹೆನ್ರಿ ಡೇವಿಡ್ ಥೋರೋ ಎಂಬ ಮಹನೀಯರು ವಾಸವಾಗಿದ್ದರು. ಆ ಮಹನೀಯರ ಲೇಖನಗಳನ್ನು ಲಕ್ಷಾಂತರ ಜನರು ಓದುತ್ತಿದ್ದಾರೆ. ಅಲ್ಲದೆ ಅವನ್ನು ಮನನ ಮಾಡುತ್ತಿದ್ದಾರೆ. ಕೆಲವರು ಅವರ ಕಲ್ಪನೆಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಮುಖ್ಯವಾಗಿ ಥೋರೋ ಅವರ ಲೇಖನಗಳತ್ತ ವಿಶೇಷ ಗಮನ ಹರಿಸಲಾಗಿದೆ. ಇದಕ್ಕೆ ಕಾರಣವೆಂದರೆ ಥೋರೋ ಅವರು ತಾವು ಏನನ್ನು ಉಪದೇಶಿಸಿದರೋ ಅವನ್ನು ಅವರೇ ಕಾರ್ಯರೂಪಕ್ಕೂ ತರುತ್ತಿದ್ದರು. ಕರ್ತವ್ಯ ಭಾವನೆಯಿಂದ ಅವರು ತಮ್ಮ ದೇಶವಾದ ಅಮೇರಿಕಾದ ವಿರುದ್ಧವೇ ಸಾಕಷ್ಟು ಲೇಖನಗಳನ್ನು ಬರೆದರು. ಅಮೇರಿಕನ್ನರು ಅನೇಕ ವ್ಯಕ್ತಿಗಳನ್ನು ಗುಲಾಮರನ್ನಾಗಿಟ್ಟುಕೊಂಡಿರುವುದು ಒಂದು ದೊಡ್ಡ ಪಾಪವೆಂದೇ ಅವರು ಭಾವಿಸಿದರು. ಕೇವಲ ಹೇಳಿಕೆ ನೀಡಿ ತೃಪ್ತರಾಗಲಿಲ್ಲ. ಈ ದುಷ್ಟ ವ್ಯಾಪಾರವನ್ನು ತಡೆಗಟ್ಟುವ ಬಗ್ಗೆ ಅವರು ಸರ್ವಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಂಡರು. ಹೀಗೆ ಅವರು ಕೈಗೊಂಡ ಕ್ರಮಗಳಲ್ಲಿ ಗುಲಾಮರ ವ್ಯಾಪಾರ ನಡೆಯುತ್ತಿರುವಂತಹ ಸಂಸ್ಥಾನದಲ್ಲಿ ಯಾವುದೇ ತೆರಿಗೆಗಳನ್ನು ಪಾವತಿ ಮಾಡದಿರುವುದೂ ಒಂದು. ಅವರು ಸಲ್ಲಿಸಬೇಕಾಗಿದ್ದ ತೆರಿಗೆಗಳನ್ನು ಪಾವತಿ ಮಾಡದೆ ಹೋದಾಗ ಅವರನ್ನು ಕಾರಾಗೃಹಕ್ಕೆ ತಳ್ಳಲಾಯಿತು.

* * *

ಡೇವಿಡ್ ಥೋರೋ ಪ್ರಖ್ಯಾತ ಲೇಖಕರೂ, ದಾರ್ಶನಿಕರೂ, ಕವಿಗಳೂ ಮಿಗಿಲಾಗಿ ಕಾರ್ಯಶೀಲ ವ್ಯಕ್ತಿಗಳಾಗಿದ್ದರು. ತಾವು ಯಾವುದನ್ನು ಆಚರಣೆಗೆ ತರುತ್ತಿರಲಿಲ್ಲವೋ ಅದನ್ನು ಅವರು ಉಪದೇಶಿಸುತ್ತಿರಲಿಲ್ಲ. ಅವರು ಅಮೇರಿಕಾದಲ್ಲಿ ಜನ್ಮತಾಳಿದ

ಖ್ಯಾತ ನೀತಿ ನಿಷ್ಠೆಯ ಪುರುಷರಲ್ಲಿ ಒಬ್ಬರಾಗಿದ್ದರು. ಗುಲಾಮಗಿರಿ ರದ್ದತಿ ಸಂಬಂಧವಾದ ಚಳವಳಿಯ ಸಮಯದಲ್ಲಿ ಅವರು ತಮ್ಮ ಲೋಕಪ್ರಸಿದ್ಧ ಪ್ರಬಂಧ 'ಆನ್ ದಿ ಡ್ಯೂಟಿ ಆಫ್ ಸಿವಿಲ್ ಡಿಸ್‌ಒಬಿಡಿಯನ್ಸ್' ಅನ್ನು ಬರೆದರು. ಅವರು ತತ್ವಗಳಿಗಾಗಿ ಹಾಗೂ ನರಳುತ್ತಿರುವ ಮಾನವಕೋಟಿಗಾಗಿ ಜೈಲಿಗೆ ಹೋದರು. ಆದ್ದರಿಂದ ಅವರ ಪ್ರಬಂಧವು ಕಷ್ಟಗಳ ಅನುಭವದಿಂದ ಪವಿತ್ರಗೊಂಡಿದೆ. ಅಲ್ಲದೆ ಅದು ಸಾರ್ವಕಾಲಿಕವಾದದ್ದು. ಅದರ ತೀಕ್ಷ್ಣತಮ ತರ್ಕವು ಎದುರುತ್ತರ ಕೊಡಲು ಅಸಾಧ್ಯವಾದ ರೀತಿಯಲ್ಲಿದೆ.

(ಇಂಡಿಯನ್ ಒಪೀನಿಯನ್, ೭.೯.೧೯೦೭, ೨೬.೧೦.೧೯೦೭)

ಕನ್ನಡಕ್ಕೆ: ಎಸ್. ಸೇತೂರಾವ್

೬೦

ಸಿ.ಎಫ್. ಆಂಡ್ರ್ಯೂಸ್

ಸಿ.ಎಫ್.ಆಂಡ್ರ್ಯೂಸ್ ಅವರ ಮರಣದಿಂದಾಗಿ ಇಂಗ್ಲೆಂಡ್ ಅಥವಾ ಭಾರತ ಮಾತ್ರವೇ ಅಲ್ಲ, ಇಡೀ ಮಾನವಕೋಟಿಯೇ ಓರ್ವ ಪ್ರಾಮಾಣಿಕ ಪುತ್ರನನ್ನು, ಸೇವಕನನ್ನು ಕಳೆದುಕೊಂಡಂತಾಗಿದೆ. ಆದಾಗ್ಯೂ ಅವರ ಮರಣವು ಯಾತನೆಯಿಂದ ಅವರನ್ನು ಮುಕ್ತಗೊಳಿಸಿದೆ ಹಾಗೂ ಈ ಭುವಿಯಲ್ಲಿ ಅವರ ಧ್ಯೇಯೋದ್ದೇಶಗಳು ಸಾಧನೆಯಾಗಿವೆ. ಅವರೊಂದಿಗೆ ವೈಯಕ್ತಿಕ ಸಂಪರ್ಕ ಪಡೆದ ಅಥವಾ ಅವರ ಬರಹಗಳಿಂದ ಅವರ ಸಂಪರ್ಕ ಪಡೆದು ಜನ್ಮ ಸಾರ್ಥಕಪಡಿಸಿಕೊಂಡ ಸಹಸ್ರಾರು ಜನರ ಮೂಲಕ ಅವರು ಜೀವಂತರಾಗಿರುತ್ತಾರೆ. ಚಾರ್ಲಿ ಆಂಡ್ರ್ಯೂಸ್ ಅವರು ಅತಿ ಶ್ರೇಷ್ಠ ಹಾಗೂ ಸರ್ವೋತ್ತಮ ಆಂಗ್ಲೇಯರಲ್ಲಿ ಒಬ್ಬರಾಗಿದ್ದಾರೆಂದೇ ನನ್ನ ಅಭಿಪ್ರಾಯವಾಗಿದೆ. ಅವರು ಇಂಗ್ಲೆಂಡಿನ ಒಬ್ಬ ಸುಪುತ್ರನಾಗಿದ್ದ ಕಾರಣ ಭಾರತದ ಸುಪುತ್ರರೂ ಆದರು. ಅವರು ಮಾನವಕೋಟಿಗೋಸ್ಕರ, ತಮ್ಮ ಪ್ರಭು ಏಸುಕ್ರಿಸ್ತನಿಗೋಸ್ಕರ ಇಷ್ಟೆಲ್ಲವನ್ನೂ ಮಾಡಿದರು. ಸಿ.ಎಫ್.ಆಂಡ್ರ್ಯೂಸ್‌ಗಿಂತ ಉತ್ತಮನಾದ ಪುರುಷ ಅಥವಾ ಉತ್ತಮರಾದ ಕ್ರಿಶ್ಚಿಯನ್ ಧರ್ಮೀಯರು ನನಗೆ ತಿಳಿದಿಲ್ಲ. ಭಾರತವು ಅವರನ್ನು ದೀನಬಂಧು ಎಂದೇ ಕರೆಯಿತು. ಆ ಮನ್ನಣೆಗೆ ಅತ್ಯಂತ ಅರ್ಹರಾದ ವ್ಯಕ್ತಿಯೇ ಆಗಿದ್ದ ಅವರು ದೀನ ದಲಿತರ ನಿಜವಾದ ಮಿತ್ರರೇ ಆಗಿದ್ದರು.

* * *

ಬಹುಶಃ ನನಗಿಂತ ಹೆಚ್ಚಾಗಿ ಚಾರ್ಲಿ ಆಂಡ್ರ್ಯೂಸ್ ಅವರನ್ನು ತಿಳಿದವರಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಅವರನ್ನು ಭೇಟಿ ಮಾಡಿದಾಗ, ನಾವು ಕೇವಲ ಸೋದರರರಂತೆ ಭೇಟಿ ಮಾಡಿದೆವು. ಕೊನೆಯವರೆಗೂ ಆ ಸೋದರ ಭಾವನೆಯೇ ಉಳಿಯಿತು.

ನಮ್ಮಿಬ್ಬರ ನಡುವೆ ಅಂತರವೇ ಇರಲಿಲ್ಲ. ಅದು ಒಬ್ಬ ಆಂಗ್ಲೇಯ ಹಾಗೂ ಒಬ್ಬ ಭಾರತೀಯನ ನಡುವಣ ಮೈತ್ರಿಯಾಗಿರಲಿಲ್ಲ. ಇಬ್ಬರು ಅನ್ವೇಷಕರು ಹಾಗೂ ಸೇವಕರ ನಡುವಣ ಅಭೇದ್ಯ ಬಂಧನವಾಗಿತ್ತು. ನಾನು ಆಂಡ್ರ್ಯೂಸ್ ಅವರ ಬಗ್ಗೆ ನನ್ನ ನೆನಪುಗಳನ್ನು ನೀಡುತ್ತಿಲ್ಲ. ಅವು ಪವಿತ್ರವಾದವು. ಇಂಗ್ಲೆಂಡ್ ಮತ್ತು ಭಾರತದ ಈ ಸೇವಕನ ಸಾವಿನ ನೆನಪು ಇನ್ನೂ ಹಸಿರಾಗಿರುವಾಗಲೇ ಅವರು ನಮ್ಮಿಬ್ಬರಿಗಾಗಿ ಬಿಟ್ಟುಕೊಟ್ಟಿರುವ ಸತ್‌ಸಂಪ್ರದಾಯಗಳ ಆಸ್ತಿಯ ಬಗ್ಗೆ ಆಂಗ್ಲೇಯರೂ ಭಾರತೀಯರೂ ವಿಚಾರ ಮಾಡಬೇಕೆಂದು ಬಯಸುತ್ತೇನೆ. ಇಂಗ್ಲೆಂಡಿನ ಬಗ್ಗೆ ಅವರಿಗಿದ್ದ ಅತೀವ ಪ್ರೇಮವು ಅತಿ ಎತ್ತರದ ಆಂಗ್ಲೇಯನ ಪ್ರೇಮಕ್ಕಿಂತ ಕಡಿಮೆ ಇರಲಿಲ್ಲ. ಇದೇ ರೀತಿ ಭಾರತದ ಬಗ್ಗೆ ಅವರಿಗಿದ್ದ ಅತೀವ ಪ್ರೇಮವು ಅತಿ ಎತ್ತರದ ಭಾರತೀಯನ ಪ್ರೇಮಕ್ಕಿಂತ ಕಡಿಮೆ ಏನೂ ಇರಲಿಲ್ಲ. ಅವರು ಹಾಸಿಗೆಯ ಮೇಲೆ ಕುಳಿತಿದ್ದರು. ಮುಂದೆ ಈ ಹಾಸಿಗೆಯಿಂದ ಏಳಲೇ ಇಲ್ಲ. ಕೂತಿದ್ದ ಜಾಗದಿಂದಲೇ ಹೇಳಿದರು, 'ಮೋಹನ್, ಸ್ವರಾಜ್ಯ ಬರುತ್ತಾ ಇದೆ'. ಆಂಗ್ಲೇಯರೂ ಭಾರತೀಯರೂ ಮನಸ್ಸು ಮಾಡಿದರೆ ಸಾಕು, ಅದು (ಸ್ವರಾಜ್ಯವು) ಬರುವಂತೆ ಮಾಡಬಹುದು. ವರ್ಚಸ್ಸು ಬೀರುವಂತಹ ಆಳರಸರೂ, ಅನೇಕ ಆಂಗ್ಲೇಯರೂ ಆಂಡ್ರ್ಯೂಸ್‌ರ ಪರಿಚಿತರು. ರಾಜಕೀಯ ತಿಳಿದ ಪ್ರತಿಯೊಬ್ಬ ಭಾರತೀಯನಿಗೂ ಅವರು ಪರಿಚಿತರೇ ಆಗಿದ್ದರು. ಈ ಹೊತ್ತಿನಲ್ಲಿ ಆಂಗ್ಲೇಯರ ದುಷ್ಕೃತ್ಯಗಳನ್ನು ಆಲೋಚಿಸಲು ನಾನು ಬಯಸುವುದಿಲ್ಲ. ಆ ದುಷ್ಕೃತ್ಯಗಳನ್ನು ಮರೆತುಬಿಡಲಾಗುತ್ತದೆ. ಆದರೆ ಆಂಡ್ರ್ಯೂಸ್‌ರ ಭಾರಿ ಸಾಧನೆಗಳನ್ನು ಇಂಗ್ಲೆಂಡ್ ಮತ್ತು ಭಾರತ ಉಳಿದಿರುವವರೆಗೂ ಮರೆಯಲಾಗುವುದಿಲ್ಲ. ನಾವು ನಿಜವಾಗಿಯೂ ಆಂಡ್ರ್ಯೂಸರ ನೆನಪನ್ನು ಪ್ರೀತಿಸುವುದಾದರೆ, ನಮ್ಮಲ್ಲಿ ಆಂಗ್ಲೇಯರ ಬಗ್ಗೆ ದ್ವೇಷದ ಭಾವನೆಯೇ ಇರುವುದಿಲ್ಲ. ಆಂಗ್ಲೇಯರಲ್ಲಿ ಇವರು ಅತಿ ಶ್ರೇಷ್ಠರಾಗಿದ್ದರು. ಅತಿ ಉದಾತ್ತ ಭಾವನೆಯವರಾಗಿದ್ದರು. ಅತಿ ಶ್ರೇಷ್ಠ ಆಂಗ್ಲೇಯರೂ ಅತಿ ಶ್ರೇಷ್ಠ ಭಾರತೀಯರೂ ಒಂದು ಕಡೆ ಸೇರಿ ಉಭಯತ್ರರಿಗೂ ಒಪ್ಪಿಗೆಯಾಗುವಂತಹ ಸೂತ್ರವೊಂದನ್ನು ರೂಪಿಸುವವರೆಗೂ ಪ್ರತ್ಯೇಕಗೊಳ್ಳದೆ ಇರುವುದು ಸಾಧ್ಯವಿದೆ. ಆಂಡ್ರ್ಯೂಸ್‌ರವರು ಬಿಟ್ಟು ಹೋದ ಸಂಪ್ರದಾಯಗಳ ಬಳುವಳಿ ಅಂತಹ ಪ್ರಯತ್ನವನ್ನು ನಡೆಸಲು ಸೂಕ್ತವಾಗಿದೆ.

(ವಿವಿಧ ಬರಹಗಳಿಂದ, ೧೯೪೦)

ಕನ್ನಡಕ್ಕೆ: ಎಸ್. ಸೇತೂರಾವ್

೬೧

ಬುಕರ್ ಟಿ. ವಾಷಿಂಗ್‌ಟನ್

'ಇವತ್ತು ಇಂಗ್ಲೆಂಡ್ ಇಂತಹ ಸ್ಥಾನಮಾನವನ್ನು ಪಡೆದಿರುವುದಕ್ಕೆ ಆ ದೇಶದ ಯೋಧರು ಕಾರಣರಲ್ಲ. ಆ ದೇಶದ ಒಂದು ಮಹಾನ್ ರಾಷ್ಟ್ರೀಯ ನಡೆ ಕಾರಣ. ಅದೇ ಗುಲಾಮರ ವಿಮೋಚನೆ' ಎಂದು ಶ್ರೀಮತಿ ಬೆಸೆಂಟ್‌ರವರು ಎಲ್ಲೋ ಹೇಳಿದ್ದಾರೆ. ಬುಕರ್ ಟಿ. ವಾಷಿಂಗ್‌ಟನ್ ಅವರ ಜೀವನಚರಿತ್ರೆಯಲ್ಲಿ ಇದು ಅತ್ಯಂತ ಸುಸ್ಪಷ್ಟ ಸತ್ಯಾಂಶವಾಗಿದೆ. ರೋಲಾ ಅವರು 'ಈಸ್ಟ್ ಅಂಡ್ ವೆಸ್ಟ್' ನಿಯತಕಾಲಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಬುಕರ್ ಟಿ.ವಾಷಿಂಗ್‌ಟನ್‌ರನ್ನು ಕುರಿತು ಅತ್ಯಂತ ಸ್ವಾರಸ್ಯಕರವಾದ ಲೇಖನವೊಂದನ್ನು ಬರೆದಿದ್ದಾರೆ. ಈ ಲೇಖನದತ್ತ ನಮ್ಮ ಓದುಗರ ಗಮನವನ್ನು ಸೆಳೆಯುವುದು ಒಳಿತು.

ಗುಲಾಮನಾಗಿದ್ದಾಗ್ಯೂ ಬುಕರ್ ಎಂದೇ ಪರಿಚಿತವಾಗಿದ್ದ ಅವರು ೧೮೫೮ರಲ್ಲಿ ಜನ್ಮ ತಾಳಿದರು. ಆದರೆ ಅವರು ಹುಟ್ಟಿದ ತಾರೀಕು ಅವರಿಗೇ ತಿಳಿಯದು. 'ಅವರ ಸ್ಥಿತಿ ಅಷ್ಟಕ್ಕಷ್ಟೆ. ಆದರೆ ಮಿಸಸ್ ಬೀಚರ್ ಸ್ಟೋಬ್ ಅವರ ಕಾದಂಬರಿಯಲ್ಲಿ ವರ್ಣಿತವಾಗಿರುವಂತಹ ಕ್ರೂರಿಗಳ ಉಪಟಳ, ಉಪದ್ರವಗಳಿಗೆ ಅವರು ಒಳಗಾಗಿರಲಿಲ್ಲ. ತಮ್ಮ ತಮ್ಮ ಗುಲಾಮರ ಬಗ್ಗೆ ಸಹಾನುಭೂತಿ ಪರವಾಗಿ ನಡೆದುಕೊಂಡಂತಹ ಯಜಮಾನರು ಸಹ ತಮ್ಮ ಗುಲಾಮರನ್ನು ಅತ್ಯಂತ ಕೀಳಾಗಿ ಕಾಣುತ್ತಿದ್ದರು. ಈ ಗುಲಾಮರನ್ನು ಒಂದು ಬಗೆಯ ಉಪಯುಕ್ತ ಪ್ರಾಣಿಗಳೆಂದೇ ಅವರು ಬಗೆದಿದ್ದರು. ಹೊಟ್ಟೆ ತುಂಬಾ ಅನ್ನ ಹಾಕಿದರೆ ಸಾಕು, ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ; ಅವರಿಗೆ ಸೌಕರ್ಯಗಳು, ಸೌಲಭ್ಯಗಳ ಅಗತ್ಯವೇನಿಲ್ಲ ಎಂದೇ ಭಾವಿಸಿದ್ದರು' ಎಂದು ರೋಲಾ ಅವರು ಹೇಳಿದ್ದಾರೆ. ಗುಲಾಮರಿಗೆ ವಿಮುಕ್ತಿ ಘೋಷಿಸಿದಾಗ ಬುಕರ್ ಅವರ ಕುಟುಂಬವು ತೋಟವನ್ನು ಬಿಟ್ಟು ಪಟ್ಟಣಕ್ಕೆ ತೆರಳಿತು. ತಾವು

ನಿರಕ್ಷರಿಯಾಗಿದ್ದಾಗ್ಯೂ ಓದುಬರಹ ಕಲಿಯಬೇಕೆಂಬ ಹಂಬಲ ಅವರಲ್ಲಿ ಉತ್ಕಟ ವಾಗಿತ್ತು. ಅವರು ಇಂಗ್ಲಿಷ್ ಭಾಷೆಯ ಓನಾಮ ಕಲಿಯಲು ಪ್ರಯತ್ನಿಸಿದರು. ರಾತ್ರಿ ಶಾಲೆಯೊಂದನ್ನು ಸೇರಿದರು. ಅವರ ಈ ಪ್ರಯತ್ನಕ್ಕೆ ಪ್ರೋತ್ಸಾಹ ನೀಡಿದ, ಅವರ ಅನೇಕ ಶ್ವೇತವರ್ಣೀಯ ಆಶ್ರಯದಾತರಲ್ಲಿ ಮುಖ್ಯರಾದವರೆಂದರೆ (ಅಮೆರಿಕಾದ) ಆಂತರಿಕ ಯುದ್ಧದಲ್ಲಿ ಸೇವೆ ಸಲ್ಲಿಸಿದ್ದ ಜನರಲ್ ಆರ್ಮ್‌ಸ್ಟ್ರಾಂಗ್. 'ಆರ್ಮ್‌ಸ್ಟ್ರಾಂಗ್ ವರ್ಣೀಯ ಜನಾಂಗಗಳ ಉದ್ಧಾರಕ್ಕಾಗಿ ತಮ್ಮ ಆಯುಷ್ಯವನ್ನೇ ಮುಡುಪಾಗಿಟ್ಟ ಒಬ್ಬ ದೇವದೂತನಂತಿದ್ದರು. ಅವರಿಗೆ ಅವರ (ವರ್ಣೀಯರ) ಅಗತ್ಯಗಳೇನು ಎಂಬುದು ಚೆನ್ನಾಗಿ ತಿಳಿದಿತ್ತು. ಅವರು ೧೮೬೮ರಲ್ಲಿ ವರ್ಜೀನಿಯಾ ದಲ್ಲಿ 'ಹ್ಯಾಂಪ್ಟನ್ ನಾರ್ಮಲ್ ಅಂಡ್ ಅಗ್ರಿಕಲ್ಚರಲ್ ಇನ್‌ಸ್ಟಿಟ್ಯೂಟ್' ಎಂಬ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಇಲ್ಲಿ ನೀಗ್ರೋ ಮತ್ತು ರೆಡ್ ಇಂಡಿಯನ್ ಜನಾಂಗಗಳಿಗೆ ಸೇರಿದ ಯುವಕ–ಯುವತಿಯರಿಗೆ ತಮ್ಮ ತಮ್ಮ ಜನರಿಗೆ ವಿದ್ಯೆ ಕಲಿಸಲು ತಕ್ಕಂತೆ ಉಪಾಧ್ಯಾಯ ವೃತ್ತಿಯಲ್ಲಿ ತರಬೇತಿ ನೀಡಲಾಗುತ್ತಿತ್ತು' ಎಂದು ರೋಲಾ ಹೇಳುತ್ತಾರೆ.

ಬುಕರ್ ವಾಷಿಂಗ್ಟನ್ ಈ ಸಂಸ್ಥೆಯಲ್ಲಿ ವಿದ್ಯೆ ಕಲಿಯಲು ಹಂಬಲಿಸಿದರು. ಈ ಕಾರಣದಿಂದಲೇ ಅವರು ಒಬ್ಬ ಸೇನಾಧಿಕಾರಿಯ ಮನೆಯಲ್ಲಿ ಸೇವೆ ಸಲ್ಲಿಸಲು ಒಪ್ಪಿದರು. ಸಾಕಷ್ಟು ಹಣವನ್ನು ಉಳಿಸಿದ ನಂತರ ಅವರು ಹ್ಯಾಂಪ್ಟನ್‌ಗೆ ಹೊರಟರು. ಆದರೆ ಹ್ಯಾಂಪ್ಟನ್ ಸುಮಾರು ಐನೂರು ಮೈಲಿಗಳಷ್ಟು ದೂರದಲ್ಲಿತ್ತು. 'ರಸ್ತೆಯುದ್ದಕ್ಕೂ ತೊಂದರೆಗಳೇ ಕಾದಿದ್ದವು. ಅವರೊಬ್ಬ ಕರಿಯನಾದ ಕಾರಣ ಶ್ವೇತವರ್ಣೀಯರು ತಂಗುವ ಹೋಟೆಲ್‌ನಲ್ಲಿ ಅವರು ತಂಗುವಂತಿರಲಿಲ್ಲ. ಅವರು ಹೋಟೆಲ್ ಕಟ್ಟಡದ ಹೊರಭಾಗದಲ್ಲಿ ಮಲಗಬೇಕಾಗುತ್ತಿತ್ತು. ತಮ್ಮ ಊಟ ತಿಂಡಿಗಾಗಿ ಅವರು ಹಗಲು ಹೊತ್ತೆಲ್ಲಾ ದುಡಿಯಬೇಕಾಗುತ್ತಿತ್ತು. ಆದರೆ ಈ ಕೆಲಸ ಮಾಡಲು ಅವರು ಎಂದೂ ಹಿಂದೆಗೆದವರಲ್ಲ. ಅಂತೂ ಇಂತೂ ಹ್ಯಾಂಪ್ಟನ್ ತಲುಪಿದರು. ಅವರು ಆ ಶಿಕ್ಷಣ ಸಂಸ್ಥೆಯನ್ನು ತಲುಪಿದಾಗ ಅತಿ ಕೊಳಕಾಗಿ ಕಾಣುತ್ತಿದ್ದ ಅವರನ್ನು ಕಂಡು ಅಸಹ್ಯಪಟ್ಟು ಸಂಸ್ಥೆಯ ದ್ವಾರವನ್ನು ಮುಚ್ಚುವುದರಲ್ಲಿದ್ದರು. ಆ ಸಂಸ್ಥೆಯ ಮೇಟ್ರನ್‌ಗೆ ಇವನು ಒಬ್ಬ ಉಪಯುಕ್ತ ಸೇವಕನಾಗಬಲ್ಲ ಎಂದು ಅನ್ನಿಸದಿದ್ದರೆ, ಅಸಹ್ಯವಾಗಿ ಕಾಣುತ್ತಿದ್ದ ಇವರನ್ನು ಕಂಡೊಡನೆಯೇ ಅವರು ಸಂಸ್ಥೆಯ ಕದವನ್ನು ಮುಚ್ಚಿಬಿಡುತ್ತಿದ್ದರೋ ಏನೋ. ಈ ರೀತಿಯಾಗಿ ಅವರು ಅಲ್ಲಿ ತಂಗಲು ಅನುಮತಿ ದೊರೆಯಿತು. ಬಾಗಿಲು ಕಾಯುವುದು, ಕೋಣೆಗಳನ್ನು ಸ್ವಚ್ಛವಾಗಿಡುವುದು, ಹೇಳಿದ ಚಿಲ್ಲರೆ ಕೆಲಸಗಳನ್ನು ಮಾಡಿ ಮುಗಿಸುವುದು–ಈ ರೀತಿಯಾಗಿ ತಮ್ಮ ಶಿಕ್ಷಣ ಹಾಗೂ

ಊಟ ತಿಂಡಿಗಳಿಗಾಗಿ ತಗಲುವ ಖರ್ಚು ವೆಚ್ಚಗಳನ್ನು ಪೂರೈಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಇಷ್ಟೆಲ್ಲ ಕೆಲಸವನ್ನು ಮಾಡುತ್ತಿದ್ದಾಗ್ಯೂ ಅವರು ಮಾತ್ರ ತಮ್ಮ ತರಗತಿಗಳಿಗೆ ಹೋಗುವುದನ್ನು ಎಂದೂ ತಪ್ಪಿಸಿಕೊಳ್ಳಲಿಲ್ಲ.' ಇಂತಹ ಪಾದರಸದಂತೆ ಇದ್ದ ಆಸಾಮಿ ಜನರಲ್ ಆರ್ಮ್‌ಸ್ಟ್ರಾಂಗ್ ಅವರ ಸಹಾನುಭೂತಿಪರ ಗಮನ ಸೆಳೆದರು. ಆರ್ಮ್‌ಸ್ಟ್ರಾಂಗ್ ಅವರು ಬುಕರ್ ಬಗ್ಗೆ ವಿಶೇಷ ಆಸಕ್ತಿ ವಹಿಸಿದರು. ತತ್ಪರಿಣಾಮವಾಗಿ ಬುಕರ್ ಆ ಸಂಸ್ಥೆಯಿಂದ ಹೊರ ಬಂದ ಅತ್ಯಂತ ಪ್ರಭಾವಶಾಲಿ ವಿದ್ಯಾರ್ಥಿಗಳಲ್ಲಿ ಒಬ್ಬರಾದರು.

ಚೆನ್ನಾಗಿ ವಿದ್ಯೆಬುದ್ಧಿ ಕಲಿತ ಬುಕರ್ ಜೀವನದ ವಿಶಾಲ ಭಾವನೆಯನ್ನು ತಳೆಯಲು, ಬಡತನದ ವಿರುದ್ಧ ಎಲ್ಲ ವಿಧವಾದ ಕಷ್ಟಕಾರ್ಪಣ್ಯಗಳ ವಿರುದ್ಧ ಹೋರಾಡಲು ಸಾಧ್ಯವಾಯಿತು. ಜ್ಞಾನ ಸರೋವರದಲ್ಲಿ ಮಿಂದ ತಾನು ತಮ್ಮ ದೇಶಬಾಂಧವರಲ್ಲಿಯೂ ಇದೇ ಜ್ಞಾನ ಪ್ರಸಾರ ಮಾಡುವುದಕ್ಕಾಗಿ ತಮ್ಮ ಇಡೀ ಜೀವಮಾನವನ್ನು ಮುಡುಪಾಗಿಡಬೇಕೆಂದು ಆಲೋಚಿಸಿದರು. ಇಂತಹ ಉದಾತ್ತ ಧ್ಯೇಯವನ್ನು ಹೊಂದಿದ ಅವರು ಇನ್‌ಸ್ಟಿಟ್ಯೂಟಿನಲ್ಲಿ ಬೋಧಿಸುವ ಅಧ್ಯಾಪಕ ಹುದ್ದೆಯನ್ನು ಅಲಂಕರಿಸುವಂತೆ ಕರೆ ಬರುವವರೆಗೂ ಮೊದಲು ಮಾಲ್ಡೆನಲ್ಲಿ, ಅನಂತರ ವಾಷಿಂಗ್‌ಟನ್‌ನಲ್ಲಿ ಚಿಕ್ಕದೊಂದು ಶಾಲೆಯನ್ನು ತೆರೆದರು. ಸ್ವತಃ ನೀಗ್ರೋ ಕುಲಕ್ಕೆ ಸೇರಿದವನಾದ್ದರಿಂದ ಅವರು ಅಮೆರಿಕನ್ ಇಂಡಿಯನ್ನರೊಂದಿಗೆ ಸ್ವಲ್ಪ ತೊಂದರೆ ಎದುರಿಸಬೇಕಾಯಿತು. ತಮ್ಮ ಮೃದು ಸ್ವಭಾವ ಹಾಗೂ ಲೋಕವ್ಯವಹಾರ ಕೌಶಲ್ಯಗಳಿಂದ ಅವರು ಎಲ್ಲ ತೊಂದರೆಗಳನ್ನು ನಿವಾರಿಸಿಕೊಂಡರು. ಸಾಮಾನ್ಯ ರೀತಿಯಲ್ಲಿ ಯಾವುದೇ ಪ್ರತಿಷ್ಠೆಯಿಲ್ಲದ ಪ್ರಾರಂಭವು ಟಸ್ಕ್‌ಗೀಯಲ್ಲಿ ಈಗ ಆದರ್ಶ ಕಾಲೇಜ್ ಎಂಬುದಾಗಿ ಪರಿಗಣಿತವಾಗಿರುವ ಸಂಸ್ಥೆಯ ಅಡಿಪಾಯವನ್ನು ಹಾಕಿತು. 'ಅನುಕೂಲಪ್ರದವಾದ ಕಸಬುಗಳಲ್ಲಿ ಕುಶಲ ಕಲೆಗಳಲ್ಲಿ ಹೇಗೆ ಕೆಲಸ ಮಾಡಬೇಕು. ಯಾವ ರೀತಿಯಲ್ಲಿ ಒಳ್ಳೆಯ ಬೇಸಾಯಗಾರನಾಗಬಹುದು, ತಮ್ಮ ಜೀವನದಲ್ಲಿ ಯಾವ ರೀತಿಯಲ್ಲಿ ಮಿತವ್ಯಯ ಸಾಧಿಸಬಹುದು, ಫಸಲು ಬರುವುದಕ್ಕೆ ಮುಂಚಿತವಾಗಿಯೇ ಅದನ್ನು ಅಡಮಾನವಿಡುವಂತೆ ಲೇವಾದೇವಿ ವ್ಯವಹಾರ ನಡೆಸುವವರು ಆಮಿಷ ಒಡ್ಡುವುದನ್ನು ಹೇಗೆ ತಡೆಗಟ್ಟಬಹುದು... ಇವನ್ನು ಕಲಿಯುವುದು ಸದ್ಯಕ್ಕೆ ನೀಗ್ರೋಗಳಿಗೆ ಅಗತ್ಯವಾಗಿ ಪರಿಣಮಿಸಿದೆ.'

ಬುಕರ್, ಈ ದೃಢ ಸಂಕಲ್ಪ ಕೈಗೊಂಡು, ಟಸ್ಕ್‌ಗೀಗೆ ಹೊರಟರು. ೧೮೮೧ರಲ್ಲಿ ಜೋಪಡಿಯೊಂದರಲ್ಲಿ ಉಪಾಧ್ಯಾಯ ವೃತ್ತಿಯನ್ನು ಆರಂಭಿಸಿದರು. ಅನೇಕ ಮಾರ್ಗದರ್ಶಿಗಳಂತೆ ಅವರು ಸಹ ಶಾಲೆಯೊಂದನ್ನು ಸ್ಥಾಪಿಸಿದರಷ್ಟೇ ಅಲ್ಲ,

ಅದಕ್ಕೆ ವಿದ್ಯಾರ್ಥಿಗಳನ್ನು ಆಕರ್ಷಿಸಬೇಕಾಯಿತು. ಅಕ್ಷರ ಜ್ಞಾನದೊಂದಿಗೆ ಕೈಗಾರಿಕಾ ಶಿಕ್ಷಣವನ್ನು ಜೊತೆಗೂಡಿಸುವ ಅವರ ಕಲ್ಪನೆಯನ್ನು ಇತರರು ಅಷ್ಟಾಗಿ ಉತ್ಸಾಹದಿಂದ ಕೈಗೆತ್ತಿಕೊಳ್ಳಲಿಲ್ಲ. ಈ ಕಾರಣದಿಂದಾಗಿ ಅವರು ಸ್ಥಳದಿಂದ ಸ್ಥಳಕ್ಕೆ ಪ್ರಯಾಣ ಮಾಡಿ ತಮ್ಮ ಶಿಕ್ಷಣ ಪದ್ಧತಿಯ ಅನುಕೂಲಗಳನ್ನು ಕುರಿತು ಜನರಿಗೆ ಉಪನ್ಯಾಸ ನೀಡಿದರು. ಶಿಕ್ಷಣ ಸುಧಾರಣೆಯ ತಮ್ಮ ಪ್ರಯತ್ನದಲ್ಲಿ ಅವರಿಗೆ ಮಿಸ್ ಒಲಿವಿಯಾ ಡೇವಿಡ್‌ಸನ್ ಎಂಬಾಕೆ ನೆರವಾದಳು. ಉತ್ತಮ ಸಹಾಯಕಿಯಾದಳು. ಮುಂದೆ ಆಕೆಯೇ ಅವರ ಜೀವನ ಸಂಗಾತಿಯೂ ಆದಳು. ಇದರ ಫಲವಾಗಿ ಅವರಿಗೆ ಅಪಾರ ಬೆಂಬಲ ದೊರೆಯಿತು. ಅವರ ಬಳಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು ಅವರ ಆ ಸಾಮಾನ್ಯ ಶಾಲಾ ಕಟ್ಟಡದ ಸ್ಥಳಸಾಮರ್ಥ್ಯವನ್ನು ಮೀರಿತ್ತು.

ಈ ವೇಳೆಗೆ ಬುಕರ್ ಅವರ ಹೆಸರಿನೊಂದಿಗೆ ವಾಷಿಂಗ್‌ಟನ್ ಹೆಸರೂ ಸೇರಿತು. ಅವರು ಬುಕರ್ ಟಿ.ವಾಷಿಂಗ್‌ಟನ್ ಎಂದೇ ಪರಿಚಿತರಾದರು. ಅವರು ವಿದ್ಯಾರ್ಥಿಗಳ ಸಂಖ್ಯೆಯು ಮೀರಿದ್ದಕ್ಕೆ ತಕ್ಕಂತೆ ಸಿದ್ಧಗೊಳ್ಳತೊಡಗಿದರು. ಸಾಲ ಮಾಡಿ ೧೦೦ ಎಕರೆಗಳಷ್ಟು ವಿಸ್ತೀರ್ಣದ ನೆಲಸುನಾಡನ್ನು ಖರೀದಿ ಮಾಡಿದರು. ಕೈಗಾರಿಕಾ ಶಿಕ್ಷಣ ಅಥವಾ ಕೈಗಾರಿಕಾ ತರಬೇತಿಯ ಬಗ್ಗೆ ತಮಗಿದ್ದ ಕಲ್ಪನೆಯನ್ನು ಕಾರ್ಯ ರೂಪಕ್ಕೆ ತರಲು ಇದು ಅವರಿಗೊಂದು ಅವಕಾಶವನ್ನು ಒದಗಿಸಿಕೊಟ್ಟಿತು. ಇವರ ಶಿಷ್ಯವರ್ಗವು ಕಾರ್ಯಪ್ರವೃತ್ತವಾಯಿತು. ಒಂದು ಸೂಕ್ತವಾದ ಕಟ್ಟಡ ರೂಪುಗೊಂಡಿತು. ಅವರೆಲ್ಲರೂ ಭೂಮಿ ಅಗೆದರು, ಸುಟ್ಟ ಇಟ್ಟಿಗೆಗಳನ್ನು ಸಹ ಅವರೇ ತಯಾರಿಸಿದರು. ೨೦೦೦ ಎಕರೆಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ಟಸ್ಕ್‌ಗೀ ಕಾಲೇಜಿನಲ್ಲಿ ಈಗ ನಲವತ್ತು ಕಟ್ಟಡಗಳಿವೆ. ಮಿ.ಆಂಡ್ರ್ಯೂಕಾರ್ನ್‌ಗೆ ಅವರ ಕೊಡುಗೆಯಾದ ಒಂದು ಭವ್ಯವಾದ ಗ್ರಂಥಾಲಯವೂ ಇಲ್ಲಿದೆ. ಅಲ್ಲದೆ ಇಲ್ಲಿ ಹದಿನೈದು ಕುಟೀರಗಳೂ ಇವೆ. ಈ ಕಾಲೇಜ್ ಪ್ರದೇಶದ ಮೌಲ್ಯವೇ ೧,೦೦,೦೦೦ ಪೌಂಡುಗಳಷ್ಟಾಗುತ್ತದೆ. ೧,೬೦,೦೦೦ ಪೌಂಡುಗಳಷ್ಟು ವಾರ್ಷಿಕ ವೆಚ್ಚವಿದೆ. ಇಲ್ಲಿ ಸುಮಾರು ೧,೧೦೦ ಜನರು ವಾಸಿಸುತ್ತಾರೆ. ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ೧೦ ಪೌಂಡುಗಳಷ್ಟು ವೆಚ್ಚ ತಗಲುತ್ತದೆ. ಊಟ ತಿಂಡಿಗಳಿಗಾಗಿ ಕೊಡಬೇಕಾದ ಹಣವನ್ನು ಭಾಗಶಃ ಹಣದ ರೂಪದಲ್ಲಿ, ಭಾಗಶಃ ಶ್ರಮದ ರೂಪದಲ್ಲಿ ಪಾವತಿ ಮಾಡಬೇಕಾಗುತ್ತದೆ. ನಾಲ್ಕು ವರ್ಷಗಳ ಕೋರ್ಸ್ ಮುಗಿಸಲು ೪೦ ಪೌಂಡುಗಳಷ್ಟು ಹಣ ಸಾಕಾಗುತ್ತದೆ. ಖಾಯಂ ವ್ಯಾಸಂಗ ವೇತನ ೨೦೦ ಪೌಂಡುಗಳಷ್ಟಿದೆ. ಅನೇಕ ದಾನಿಗಳು ನೀಡಿರುವ ಕೊಡುಗೆಗಳು ಮತ್ತು ಎಲ್ಲ ಬಗೆಯ ಜನರು ಸ್ವಯಂ ಪ್ರೇರಿತರಾಗಿ ನೀಡುವ ಚಂದಾ ಹಣದಿಂದ ಪ್ರತಿವರ್ಷವೂ ಕಾಲೇಜಿನ ನಿಧಿಗೆ ಹಣ ಕೂಡುತ್ತದೆ. ೧೮೯೮ರಲ್ಲಿ

ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಸರ್ಕಾರವು ಅಲಬಾಮಾವಣದಲ್ಲಿ ಈ ಕಾಲೇಜಿಗೆಂದು ೨೫೦೦ ಎಕರೆಗಳಷ್ಟು ವಿಸ್ತೀರ್ಣದ ಸ್ಥಳವೊಂದನ್ನು ನೀಡಿದೆ. ವಿದ್ಯಾರ್ಥಿಗಳು ಇಪ್ಪತ್ತು ವಿವಿಧ ಸಂಸ್ಥಾನಗಳು ಮತ್ತು ಭೂಪ್ರದೇಶಗಳಿಂದ ಬಂದವರು. ಈ ಕಾಲೇಜಿನಲ್ಲಿ ಎಂಬತ್ತಾರು ಶಿಕ್ಷಕರಿದ್ದಾರೆ. ಇಪ್ಪತ್ತಾರು ವಿವಿಧ ಕಸುಬುಗಳನ್ನು ಕಲಿಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯೂ ತರಗತಿಯಲ್ಲಿ ತನ್ನ ವ್ಯಾಸಂಗದ ಜೊತೆಯಲ್ಲಿ ಒಂದು ಕಸುಬನ್ನು ಕಲಿಯಲೇಬೇಕಾಗುತ್ತದೆ. ಪುರುಷರು ಮುದ್ರಣ, ಬಡಗಿ ಕೆಲಸ, ಇಟ್ಟಿಗೆ ತಯಾರಿಕೆ (ಅವರು ಪ್ರತಿ ತಿಂಗಳು ಉತ್ಕೃಷ್ಟ ಗುಣಮಟ್ಟದ ಒಂದು ಲಕ್ಷ ಇಟ್ಟಿಗೆಗಳನ್ನು ತಯಾರಿಸುವಷ್ಟು ಸಮರ್ಥರಿದ್ದಾರೆ) ಮತ್ತು ಬೇಸಾಯಕ್ಕೆ ಸಂಬಂಧಪಟ್ಟ ನಾನಾ ಕಾರ್ಯಚಟುವಟಿಕೆಗಳನ್ನು ಕಲಿಯುವರು. ಮಹಿಳೆಯರು ಹೊಲಿಗೆ, ಉಡುಪು ತಯಾರಿಕೆ, ಅಡಿಗೆ ಕೆಲಸ, ಇಸ್ತ್ರಿ ಕೆಲಸ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ತೋಟಗಾರಿಕೆ ಇವನ್ನು ಕಲಿಯುತ್ತಾರೆ. ತೋಟಗಾರಿಕೆಯು ಟಸ್ಕ್‌ಗೀಯ ಒಂದು ವಿಶೇಷಾಂಶವಾಗಿದೆ. ಇಲ್ಲಿನ ತೋಟದಲ್ಲಿ ಐದು ಸಹಸ್ರ ಷೇರ್ ಹಣ್ಣಿನ ಗಿಡಗಳನ್ನು ಬೆಳೆಸಲಾಗಿದೆ. ಅವರು ಒಂದು ಮಾರುಕಟ್ಟೆ ತೋಟದ ಯೋಜನೆಯನ್ನೂ ರೂಪಿಸಿ ಅದನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಒಂದು ಶೀತಲ ಹೊಲಮನೆಯನ್ನು ಸಹ ಕಟ್ಟಿಕೊಂಡಿದ್ದಾರೆ. ಈ ಹೊಲಮನೆಗೆ ಅಗತ್ಯವಾದ ಮರಗೆಲಸವನ್ನು ತಾವೇ ಮಾಡಿಕೊಂಡಿದ್ದಾರೆ. ತರಕಾರಿಗಳನ್ನು ಬೆಳೆಯಲು ತಮಗೆ ತಗುಲಿದ ಖರ್ಚುವೆಚ್ಚ ಹಾಗೂ ಅವುಗಳ ಮಾರಾಟದಿಂದ ಬಂದ ವರಮಾನಗಳ ಬಗ್ಗೆ ಅವರು ಲೆಕ್ಕವಿಟ್ಟುಕೊಂಡಿದ್ದಾರೆ. ಈಚೆಗೆ ನರ್ಸ್ ತರಬೇತಿ ವಿಭಾಗವೊಂದು ಸಹ ಸ್ಥಾಪನೆಗೊಂಡಿದೆ. ಕಾಲೇಜಿನಲ್ಲಿ ಈಗ ಒಂದು ಶಿಶುವಿಹಾರ ಸಹ ಇದೆ. ಒಂದು ಉಳಿತಾಯ ಬ್ಯಾಂಕನ್ನು ಸಹ ಸ್ಥಾಪಿಸಲಾಗಿದೆ. ಸರ್ಕಾರವು ಮಾನ್ಯತೆ ನೀಡಿರುವ ಒಂದು ಶಾಲಾ ಅಂಚೆಕಚೇರಿಯೂ ಇದೆ. ಪ್ರತಿ ತಿಂಗಳು ಸಮಾಚಾರ ಪತ್ರಿಕೆಯೊಂದು ಇಲ್ಲಿಂದ ಪ್ರಕಟವಾಗುತ್ತದೆ.

ಅನೇಕಾನೇಕ ಪ್ರತಿಕೂಲಗಳು ಅಡ್ಡ ಬಂದಾಗ್ಯೂ ಬುಕರ್ ಟಿ.ವಾಷಿಂಗ್‌ಟನ್ ಅವರು ಏಕಾಂಗಿಯಾಗಿ ಇಂತಹ ಅಗಾಧವಾದ ಕಾರ್ಯವನ್ನು ಸಾಧಿಸಿದ್ದಾರೆ. ಇಂತಹ ಸಾಧನೆಗೆ ಹೋಲಿಕೆಯಿಲ್ಲ. ಪ್ರಾಚೀನ ರಾಷ್ಟ್ರಗಳು ತಾವು ಸಾಧಿಸಿದ್ದೇವೆ ಎಂದು ಹೇಳಿಕೊಳ್ಳಲು ಉದಾಹರಣೆಗಳಿರಬಹುದು. ಆದರೆ ಇಂತಹ ಸಾಧನೆ ಆ ರಾಷ್ಟ್ರಗಳಲ್ಲಿ ಆಗದೇ ಹೋಗಿದೆ. ಪ್ರಸ್ತುತ ಬುಕರ್ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂದರೆ ಕಪ್ಪುವರ್ಣೀಯರೂ ಶ್ವೇತವರ್ಣೀಯರೂ ಇಬ್ಬರೂ ಅವರ ಕೆಲಸವನ್ನು ಮೆಚ್ಚುತ್ತಾರೆ. ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರು ಬುಕರ್ ಅವರನ್ನು

ತಮ್ಮ ಅಧಿಕೃತ ನಿವಾಸ 'ವೈಟ್‌ಹೌಸ್'ಗೆ ಆಹ್ವಾನಿಸಿದ್ದಾರೆಂದು ನಾವು ಕೆಲಕಾಲದ ಹಿಂದೆ ವೃತ್ತಪತ್ರಿಕೆಗಳಲ್ಲಿ ಓದಿದ್ದೆವು. ಇದೊಂದು ಅಭೂತಪೂರ್ವ ಸಂಗತಿಯೇ ಸರಿ. ಏಕೆಂದರೆ ಆ ರಾಷ್ಟ್ರದಲ್ಲಿ ಇತ್ತೀಚಿನವರೆಗೂ ಯಾವ ಶ್ವೇತವರ್ಣೀಯನಾಗಲಿ ಈ ಸಂಪರ್ಕದಿಂದ ತಾನು ಮಲಿನನಾಗುತ್ತೇನೆಂದು ಆಲೋಚಿಸದೆ ನೀಗ್ರೋವಿನ ಕೈ ಕುಲಕುತ್ತಿರಲಿಲ್ಲ. ಹಾರ್ವರ್ಡ್ ವಿಶ್ವವಿದ್ಯಾನಿಲಯವು ಅವರಿಗೆ 'ಮಾಸ್ಟರ್ ಆಫ್ ಆರ್ಟ್ಸ್' ಗೌರವ ಪದವಿಯನ್ನಿತ್ತು ಪುರಸ್ಕರಿಸಿದೆ. ಯುರೋಪಿನಾದ್ಯಂತ ಪ್ರವಾಸ ಮಾಡಿದಾಗ ಅವರು ಸಭೆಗಳಲ್ಲಿ ಅಸಂಖ್ಯಾತ ಅಭಿಮಾನಿಗಳನ್ನು ಆಕರ್ಷಿಸಿದ್ದರು.

ಅಂತಹ ಜೀವವೊಂದು ನಮ್ಮೆಲ್ಲರಿಗೂ ಪಾಠ ಕಲಿಸುತ್ತದೆ. ಈ ಜೀವಕ್ಕೆ ಪುರಸ್ಕಾರಗಳ ಸುರಿಮಳೆಯಾಗಿದ್ದಲ್ಲಿ ಆ ಗೌರವಕ್ಕೆ ಅದು ಅರ್ಹವಾಗಿದೆ. ಇವು ಕಷ್ಟದ ದುಡಿಮೆ, ಅಪಾರ ತೊಂದರೆಗಳು ಮತ್ತು ನರಳಾಟಗಳನ್ನು ಮೌನದಿಂದ ಸಹಿಸಿಕೊಂಡು ಸಂಪಾದಿಸಿದ ಪುರಸ್ಕಾರಗಳು ಮತ್ತು ಸನ್ಮಾನಗಳು ಎಂದೇ ಹೇಳಬಹುದು. ವಾಷಿಂಗ್‌ಟನ್ ಅವರು ಬೇರಾವುದೊಂದು ವೃತ್ತಿಯನ್ನು ಆರಿಸಿಕೊಂಡಿದ್ದರೆ, ಅಲ್ಲಿ ಅವರು ಪ್ರವರ್ಧಮಾನಕ್ಕೆ ಬರುತ್ತಿದ್ದರು ಎಂದು ಕೆಲವರು ಭಾವಿಸಿರಬಹುದು. ಆದರೆ ಅವರು ತಮ್ಮ ಜನರ ಉದ್ಧಾರವೇ ಮುಖ್ಯವೆಂದು ಪರಿಗಣಿಸಿದರು. ತಮ್ಮ ಜನರನ್ನು ತಮ್ಮ ಮುಂದಿರುವ ಹಿರಿಯ ಕಾರ್ಯದ ಸಾಧನೆಗಾಗಿ ಸಿದ್ಧಗೊಳಿಸುವ ದೀಕ್ಷೆ ಕೈಗೊಂಡರು. ಅವರೇ ಸ್ವತಃ ತಮ್ಮ ದೇಶಬಾಂಧವರನ್ನು ಉದ್ಧಾರ ಮಾಡಲು, ಅವರನ್ನು ಮೇಲೆತ್ತಲು ಯತ್ನಿಸಿದರು. ಅವರ ಸಾರ್ಥಕ ಜೀವನವನ್ನು ಅಧ್ಯಯನ ಮಾಡಿರುವ ನಮ್ಮೆಲ್ಲರಿಗೂ ಅವರ ಬದುಕು ಅನುಕರಣೀಯ.

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: **ಎಸ್. ಸೇತೂರಾವ್**

೭೨

ವಿನೋಬಾ ಭಾವೆ

ಚರಕಾದಿಂದ ನೂಲುವ ವಿಷಯದಲ್ಲಿ ಇಡೀ ಇಂಡಿಯಾದಲ್ಲಿ ಯಾರೂ ಅವರಿಗೆ ಸರಿಸಾಟಿಯಿಲ್ಲ. ತನ್ನ ಹೃದಯದಲ್ಲಿ ಅಸ್ಪೃಶ್ಯತೆಯ ಲವಲೇಶವೂ ಇಲ್ಲದಂತೆ ಅವರು ಆ ಭಾವವನ್ನು ತೊಡೆದು ಹಾಕಿದ್ದಾರೆ. ನನ್ನಷ್ಟೇ ತೀವ್ರವಾಗಿ ಅವರಿಗೂ ಕೋಮು ಐಕ್ಯತೆಯಲ್ಲಿ ನಂಬಿಕೆಯಿದೆ. ಇಸ್ಲಾಮಿನ ಶ್ರೇಷ್ಠ ಅಂಶಗಳನ್ನು ಅರಿಯಲು ಒಂದು ವರ್ಷ ಅವರು ಕುರಾನ್ ಗ್ರಂಥವನ್ನು ಮೂಲಭಾಷೆಯಲ್ಲಿ ಓದಿದರು. ಅದಕ್ಕಾಗಿ ಅವರು ಅರೇಬಿಕ್ ಭಾಷೆಯನ್ನು ಕಲಿತರು.

...ಅವರು ಕೇಳಿದ ತಕ್ಷಣ ಯಾವುದೇ ತ್ಯಾಗಕ್ಕೆ ಸಿದ್ಧರಾಗಬಲ್ಲ ಶಿಷ್ಯರು ಹಾಗೂ ಕಾರ್ಯಕರ್ತರ ಪಡೆಯೇ ಅವರ ಜೊತೆ ಇದೆ. ತನ್ನ ಜೀವನವನ್ನು ಕುಷ್ಠರೋಗಿಗಳ ಸೇವೆಗಾಗಿಯೇ ಮೀಸಲಿಟ್ಟ ಒಬ್ಬ ತರುಣನನ್ನು ರೂಪಿಸುವಲ್ಲಿ ಕೂಡ ಅವರ ಪಾತ್ರ ದೊಡ್ಡದು. ವೈದ್ಯಕೀಯವೆಂದರೆ ಏನೆಂಬುದೇ ಗೊತ್ತಿರದಿದ್ದ ಆ ತರುಣ [ಮನೋಹರ ದಿವಾನ್] ಕುಷ್ಠರೋಗಿಗಳಿಗೆ ಚಿಕಿತ್ಸೆ ಕೊಡುವ ವಿಧಾನವನ್ನು ಏಕಾಗ್ರಚಿತ್ತದಿಂದ ಕಲಿತು, ಈಗ ಕುಷ್ಠರೋಗಿಗಳ ಚಿಕಿತ್ಸೆ ಮಾಡಲು ಹಾಗೂ ಅವರ ಯೋಗಕ್ಷೇಮ ನೋಡಿಕೊಳ್ಳಲು ಅನೇಕ ದವಾಖಾನೆಗಳನ್ನು ನಡೆಸುತ್ತಿದ್ದಾನೆ.

...ಇದು ಪ್ರಾಯಶಃ ನಾನು ನಡೆಸಲಿರುವ ಕೊನೆಯ ನಾಗರಿಕ ಅಸಹಕಾರ ಸತ್ಯಾಗ್ರಹ. ಈ ಸತ್ಯಾಗ್ರಹ ಎಷ್ಟು ಸಾಧ್ಯವೋ ಅಷ್ಟು ಯಾವ ದೋಷವೂ ಇಲ್ಲದಂತೆ ನಡೆಯಬೇಕೆಂದು ನನ್ನ ಸಹಜ ಆಸೆ. (ಈ ಸತ್ಯಾಗ್ರಹವನ್ನು ವಿನೋಬಾ ಭಾವೆ ಮುನ್ನಡೆಸಬೇಕೆಂದು ಗಾಂಧೀಜಿ ನಿರ್ಧರಿಸಿದಾಗ ಬರೆದ ಟಿಪ್ಪಣಿ.)

* * *

ಪ್ರಿಯ ವಿನೋಬಾ,

ನಿನ್ನ ಪ್ರೀತಿ ಮತ್ತು ವ್ಯಕ್ತಿತ್ವ ಹಾಗೂ ನಿನ್ನನ್ನು ನೀನು ಪರೀಕ್ಷೆ ಮಾಡಿಕೊಳ್ಳುವ ಬಗೆ ನನ್ನನ್ನು ಅಪಾರವಾಗಿ ಸೆಳೆದಿದೆ. ನಿನ್ನ ಆಳವನ್ನು ಅಳೆಯುವ ಅರ್ಹತೆ ನನಗಿಲ್ಲ. ನನ್ನ ಪ್ರಕಾರ, ಒಬ್ಬ ತಂದೆ ನಿಜಕ್ಕೂ ತಂದೆಯಾಗುವುದು ಮಗ ತನ್ನ ಸದ್ಗುಣದಲ್ಲಿ ತಂದೆಯನ್ನು ಮೀರಿಸಿದಾಗ ಮಾತ್ರ. ನೀನು ಈಗ ನಿರ್ವಹಿಸಲು ಬಂದಿರುವ ಈ ಪಾತ್ರವನ್ನು ನಾನು ಪ್ರೀತಿಯ ಉಡುಗೊರೆಯಾಗಿ ಒಪ್ಪಿಕೊಳ್ಳುತ್ತೇನೆ. ಹಾಗೆಯೇ, ಆ ಪ್ರೀತಿಗೆ ತಕ್ಕವನಾಗಿ ನಡೆದುಕೊಳ್ಳಬಯಸುತ್ತೇನೆ. ಒಂದು ವೇಳೆ, ನಾನೇನಾದರೂ ಮತ್ತೊಬ್ಬ ಹಿರಣ್ಯಕಶಿಪುವಾದರೆ, ದೇವರನ್ನು ಪ್ರೀತಿಸಿ, ತಂದೆಯ ಮಾತನ್ನು ಗೌರವದಿಂದಲೇ ವಿರೋಧಿಸಿದ ಪ್ರಹ್ಲಾದನಂತೆ ನೀನೂ ನನ್ನನ್ನು ವಿರೋಧಿಸು.

(೧೯೧೮ರಲ್ಲಿ ತರುಣ ವಿನೋಬಾ 'ನಾನು ನಿಮ್ಮ ಮಗನಂತೆ ನಿಮ್ಮ ಸೇವೆ ಮಾಡುವೆ' ಎಂದು ಹೇಳಿದಾಗ, ಗಾಂಧೀಜಿ ಬರೆದ ಪತ್ರ.

ಮೊದಲ ಭಾಗದಲ್ಲಿರುವ ಟಿಪ್ಪಣಿ: ಹರಿಜನ್, ೨೦ ಅಕ್ಟೋಬರ್ ೧೯೪೦. ಎರಡನೆಯ ಭಾಗದಲ್ಲಿರುವ ಪತ್ರ: ಕಂಪ್ಲೀಟ್ ವರ್ಕ್ಸ್, ಸಂ. ೧೬, ಪು. ೨೫೧. ಆಕರ: 'ಮೋಹನ್‌ದಾಸ್: ಎ ಟ್ರೂ ಸ್ಟೋರಿ'.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

ಭಾಗ : ೬

ಸಮಾಜ, ಸಮುದಾಯ, ಸಂಸ್ಕೃತಿ

'ಅಸ್ಪೃಶ್ಯತೆ ಆತ್ಮನಾಶ ಮಾಡುವ ಪಾಪ. ಜಾತಿ ಪದ್ಧತಿ ಸಾಮಾಜಿಕ ಕೇಡು.'

'ನನ್ನ ಸುತ್ತಮುತ್ತ ಬರಿ ಬೂಟಾಟಿಕೆ, ಮೋಸ, ನೀತಿಭ್ರಷ್ಟತೆಗಳನ್ನೇ ಕಾಣುತ್ತೇನೆ. ಆದರೆ ಇದೆಲ್ಲದರ ಅಡಿಯಲ್ಲಿ ಎಲ್ಲೋ ನಾನು ಕಾಣದೆ ಹೋದ ದಿವ್ಯತೆಯ ಗುರುತುಗಳನ್ನೂ ನೋಡುತ್ತೇನೆ. ಇದು ನನ್ನ ಇಂಡಿಯಾ.'

'ಏಳು ಕೋಟಿ ಮುಸ್ಲಿಮರನ್ನು ಘಾಸಿಗೊಳಿಸಿದ [ಖಿಲಾಫತ್ ಚಳುವಳಿಗೆ ಕಾರಣವಾದ ಘಟನೆ] ಹಿಂದೂಗಳನ್ನೂ ಘಾಸಿಗೊಳಿಸಬೇಕು.'

ಮೋಹನದಾಸ್ ಕರಮಚಂದ್ ಗಾಂಧಿ

೬೩

ಮಾದರಿ ಸಮಾಜ

[ಸ್ವತಂತ್ರ ಭಾರತದ ಚಿತ್ರಣವನ್ನು ಕೊಡುವ ಹಾಡೊಂದನ್ನು ಗಾಂಧಿಯವರು ಕೇಳಿದ್ದು ಪ್ರಾರ್ಥನಾ ಸಭೆಯೊಂದರಲ್ಲಿ. ನವದೆಹಲಿಯ ಪೌರಕಾರ್ಮಿಕರ ಕಾಲೊನಿಯಲ್ಲಿ ಆ ಸಭೆ ಏರ್ಪಾಡಾಗಿತ್ತು. ಅಲ್ಲಿ ಕೇಳಿಬಂದ ಹಾಡು ಗಾಂಧಿಯವರನ್ನು ಎಷ್ಟು ಆಕರ್ಷಿಸಿತೆಂದರೆ ಕೂಡಲೇ ಅವರು ಆ ಹಾಡನ್ನು ಇಂಗ್ಲಿಷ್‌ಗೆ ಅನುವಾದಿಸಿ ಲಾರ್ಡ್ ಪ್ಯಾಟಿಕ್ ಲಾರೆನ್ಸ್ ಅವರಿಗೆ ಕಳುಹಿಸಿಕೊಟ್ಟರು. ಹಾಡಿನ ಸಾಲುಗಳು ಹೀಗಿವೆ:]

ಅದು ದುಃಖವಿಲ್ಲದ ನಾಡು
ಅದು ಯಾತನೆಯಿಲ್ಲದ ನಾಡು
ಆ ದೇಶವಾಸಿಗಳು ನಾವು
ಹುಸಿ ಹಸಿ ಭ್ರಮೆಗಳು ಇಲ್ಲದ ನಾಡು
ಬೇಗುದಿ, ಸಂಕಟ ಕಾಡದ ನಾಡು

ಪ್ರೇಮ ಗಂಗೆಯು ಹರಿಯುವ ನಾಡು
ಸಕಲ ಜೀವಿಗಳು ಹಿಗ್ಗಿ ನಲಿಯುವ ನಾಡು

ಎಲ್ಲ ಮನಗಳೂ ಒಂದೇ ದಿಕ್ಕಿಗೆ ಹರಿಯುವ ನಾಡು
ಕಾಲದ ಪರಿವೆಯ ಮರೆಸುವ ನಾಡು

ಎಲ್ಲರ ಬಯಕೆಯು ತಣಿಯುವ ನಾಡು
ಎಲ್ಲ ಹಂಚಿಕೆಯ ಸಮಸಮ ನ್ಯಾಯದ ನಾಡು

ಎಲ್ಲರೂ ಒಂದೇ ಎರಕದಿ ಇರುವ ನಾಡು
ಯಾವುದೇ ಕೊರತೆ ಯಾವುದೇ ಕಳವಳ ಕಾಣದ ನಾಡು
ಯಾವುದೇ ಸ್ವಾರ್ಥದ ಯಾವುದೇ ಕುರುಹೂ ಕಾಣದ ನಾಡು
ಮೇಲೂ-ಕೀಳೂ, ಧಣಿಯೂ-ಆಳೂ ಇಲ್ಲದ ನಾಡು

ಎಲ್ಲೆಡೆ ಬೆಳಕು ಹರಡಿಹ ನಾಡು
ಆದರೂ ಎಲ್ಲೂ ಉರಿ ಬೇಗೆಯು ಕಾಣದ ನಾಡು

ಅಂಥಾ ದೇಶವು ನಿಮ್ಮೊಳಗಿಹುದು–
ಅದೇ ಸ್ವರಾಜ್ಯ, ಅದೇ ಸ್ವದೇಶಿ
ಆ ಮನೆ ನಿಮ್ಮೊಳಗಿಹುದು–

ಜಯ ಜಯ ಜಯ ಜಯಹೇ
ಆ ನಾಡಿಗೆ ಹಂಬಲಿಸುವವನು ಆ ನಾಡನು ಪಡೆಯುವನು.

ಜಾತಿರಹಿತ, ವರ್ಗರಹಿತ ಸಮಾಜ. ಶ್ರೇಣೀಕರಣವಿಲ್ಲದ ಸಮಾಜ. ಸೇವೆಗೊಂದು ಘನತೆ, ಮೌಲ್ಯ ದೊರಕಿಸಿಕೊಡುವ ಸಮಾಜ. ಉಳ್ಳವರು ಇಲ್ಲದವರನ್ನು ಆತುಕೊಳ್ಳುವ, ಸ್ವಹಿತಾಸಕ್ತಿ ಮುಖ್ಯವಾಗದ ಜನರ ಸಮಾಜ. ಈ ಸಮಾಜದ ಚಿತ್ರಣವೇ ಸೊಗಸಾಗಿದೆ. ಅರಿವಿನ ಪೂರ್ಣ ಅಭಿವ್ಯಕ್ತಿಯಾಗಿದೆ.

ಸೇವೆಗೊಂದು ಘನತೆ, ಮೌಲ್ಯ ದೊರಕಿದ ಸಮಾಜದಲ್ಲಿ ಯಾವ ಕಸುಬು ಕೂಡ ಕೀಳು ಎನ್ನಿಸಿಕೊಳ್ಳುವುದಿಲ್ಲ. ದುಡಿಮೆ, ಸ್ವಾವಲಂಬನೆಗೆ ಆಗ ಹೊಸದೊಂದು ಅರ್ಥ ಬರುವುದು. ಕೂಡಿಡುವ ಬಯಕೆ ಇಲ್ಲವಾದಲ್ಲಿ ನಿಸ್ವಾರ್ಥ ಸೇವೆಗೊಂದು ಮಾನ್ಯತೆ ದಕ್ಕುವುದು. ಸ್ವಉದ್ಯೋಗ, ಗೃಹೋದ್ಯೋಗ, ಸಣ್ಣ ಕೈಗಾರಿಕೆ, ಸಹಕಾರಿ ವ್ಯವಸ್ಥೆ ಇವೆಲ್ಲವುಗಳಿಂದ ಸಮಾಜ ಪುಷ್ಟಿಗೊಳ್ಳಬಹುದು. ಹೀಗಾದಾಗ ಆರ್ಥಿಕ ಅಸಮಾನತೆ ನಶಿಸುವುದು.

ವಿವೇಕ ಹೆಚ್ಚಿದಂತೆಲ್ಲ ನಾಡಿನಲ್ಲಿ ಜಾತಿವಾದ, ಕೋಮುವಾದಗಳು ತೊಲಗಿಬಿಡುವುವು. ಸಮಾಜವು ಸಾಮರಸ್ಯದ ಆಧಾರದಲ್ಲಿ ಬೆಳೆಯುವುದು. ಆಗ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೊಸ ನೆಲೆಗಟ್ಟು ದೊರಕುವುದು. ಆಗ ರಾಷ್ಟ್ರೀಯತೆ ಸಂಕುಚಿತವೂ ಆಕ್ರಮಣಕಾರಿಯೂ ಆಗಲೊಲ್ಲದು. ವ್ಯಷ್ಟಿ ಸಮಷ್ಟಿಗಳು ಆಗ ಭಿನ್ನವೆನ್ನಿಸವು.

ಭಿಕಾರಿಗಳೂ ಭಿಕ್ಷುಕರೂ ಇಲ್ಲದ ಸಮಾಜ; ಅರೆಹೊಟ್ಟೆಯಲ್ಲಿ ಬದುಕುವ ನೌಕರನಿಗೆ ಕೋಟ್ಯಾಧಿಪತಿ ಮಾಲಿಕನಿರದ ಸಮಾಜ; ಹೆಣ್ಣು ಗಂಡುಗಳ ಸಮಾನತೆ ಸಾಧಿಸಿದ ಸಮಾಜ; ಪರನಾರಿ ಸೋದರತೆ, ನೈತಿಕ ಶ್ರೇಷ್ಠತೆಯನ್ನು ಪಾಲಿಸುವ ಸಮಾಜ; ಅಸ್ಪೃಶ್ಯತೆ ನಿರ್ಮೂಲನೆಗೊಂಡು ಧಾರ್ಮಿಕ ಸಹಬಾಳ್ವೆ ಸ್ಥಾಪಿತವಾದ ಸಮಾಜ; ಅಂದಂದಿನ ಗಳಿಕೆಗಷ್ಟೆ ದುಡಿಮೆ, ಕೂಡಿಡಬಯಸದ ಪರಿಶ್ರಮ, ಪ್ರಕೃತಿ ಪ್ರೀತಿ ಇವೆಲ್ಲವುಗಳನ್ನು ರೂಢಿಸಿಕೊಂಡ ಸಮಾಜ... ಇದು ಮಾದರಿ ಸಮಾಜ.

ಈ ಸಮಾಜವನ್ನು ಎಲ್ಲರೂ ಎದುರುಗೊಳ್ಳುವಂತಾಗಲಿ. ಈ ಟಿಪ್ಪಣಿ ಓದುವವರು ಸದ್ಯಕ್ಕೆ ಬಿಸಿಲಿಗೆ ಮೈಯೊಡ್ಡಿ ಸುಖಿಸುತ್ತಿರುವ ನನ್ನ ವಿಲಾಸದ ಬದುಕನ್ನು ಮನ್ನಿಸಲಿ!

('ವಿಲೇಜ್ ಸ್ವರಾಜ್' ಪುಸ್ತಕದಿಂದ.)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೭೪

ಸಪ್ತ ಸಾಮಾಜಿಕ ಪಾಪಗಳು

ನೀತಿನಿಷ್ಠೆಗಳಿಲ್ಲದ ರಾಜಕಾರಣ
ಶ್ರಮವಿಲ್ಲದೆ ಗಳಿಸಿದ ಸಂಪತ್ತು
ಅಂತಸ್ಸಾಕ್ಷಿಗೆ ಓಗೊಡದ ಆನಂದ
ವ್ಯಕ್ತಿ ಚಾರಿತ್ರ್ಯವಿಲ್ಲದ ಜ್ಞಾನ
ನೈತಿಕತೆಯಿಲ್ಲದ ವಾಣಿಜ್ಯ, ವ್ಯಾಪಾರ
ಮಾನವೀಯತೆಯಿಲ್ಲದ ವಿಜ್ಞಾನ
ತ್ಯಾಗವಿಲ್ಲದ ಪೂಜೆ

೬೫

ಅಸ್ಪೃಶ್ಯತೆ

ಅಂತ್ಯಜರನ್ನು ಹೊರಗಿಡುವ ವ್ಯವಸ್ಥೆಯೇ ಇರುವುದಾದರೆ ನಾನು ಸ್ವರಾಜ್ಯವನ್ನೇ ತಿರಸ್ಕರಿಸುತ್ತೇನೆ...

ನನ್ನ ಇವತ್ತಿನ ಪ್ರಾರ್ಥನೆ ಹೀಗಿತ್ತು: ನಾನು ಮತ್ತೆ ಹುಟ್ಟುವುದಾದರೆ ಅಸ್ಪೃಶ್ಯನಾಗಿ ಹುಟ್ಟಿ ಅಸ್ಪೃಶ್ಯರ ಯಾತನೆ, ದುಃಖಗಳನ್ನು, ಅವರಿಗೆ ಆಗುತ್ತಿರುವ ಅವಮಾನವನ್ನು ಅನುಭವಿಸಿ ಅರಿಯುವೆ ಹಾಗೂ ಆ ದುಃಖದಾಯಕ ಸ್ಥಿತಿಯಿಂದ ಪಾರಾಗುವ, ಹಾಗೂ ನಾನೇ ಬಿಡುಗಡೆಗೊಳ್ಳುವ ಪ್ರಯತ್ನ ಮಾಡುವೆ. ಅಸ್ಪೃಶ್ಯರು ತಮ್ಮ ವಿಮೋಚನೆಗಾಗಿ ಹಿಂದೂಗಳನ್ನು ಕೇಳಿಕೊಳ್ಳಬಾರದು; ಬದಲಿಗೆ ಹಿಂದೂಗಳು ತಮ್ಮ ವಿಮೋಚನೆಗಾಗಿಯೇ ಈ ಕೆಲಸವನ್ನು ಕೈಗೆತ್ತಿಕೊಳ್ಳಬೇಕು...

ನಮ್ಮ ಅಸ್ಪೃಶ್ಯ ಸೋದರರಿಗೆ ನಾವು ಎಸಗಿರುವ ಘೋರ ಅಪರಾಧದ ಪಾಪ ನಮ್ಮ ತಲೆಯ ಮೇಲಿರುವಾಗ, ಯಾವ ಹಕ್ಕಿನಿಂದ ನಾವು ಬ್ರಿಟಿಷ್ ಸರ್ಕಾರವನ್ನು ಸೈತಾನನ ಸರ್ಕಾರ ಎಂದು ಕರೆಯುತ್ತಿದ್ದೇವೆ? ನಾವು ಅಸ್ಪೃಶ್ಯರನ್ನು ಹೊಟ್ಟೆ ಹೊಸೆಯುತ್ತಾ ತೆವಳುವಂತೆ ಮಾಡಿದ್ದೇವೆ. ಅವರ ಮುಖವನ್ನು ನೆಲಕ್ಕೆ ಉಜ್ಜುವಂತೆ ಮಾಡಿದ್ದೇವೆ. ಕಣ್ಣು ಕೆಂಪಾಗಿಸಿಕೊಂಡು ಅವರನ್ನು ರೈಲ್ವೆ ಕಂಪಾರ್ಟ್‌ಮೆಂಟಿನಿಂದ ಹೊರ ನೂಕಿದ್ದೇವೆ. ಬ್ರಿಟಿಷ್ ಸರ್ಕಾರ ಇದಕ್ಕಿಂತ ಕ್ರೂರವಾದದ್ದೇನನ್ನು ಮಾಡಿದೆ?

...ನನ್ನ ನಿತ್ಯದ ಪ್ರಾರ್ಥನೆಯೇನೆಂದರೆ– ಅದು ನಿಮ್ಮ ಪ್ರಾರ್ಥನೆಯೂ ಆಗಿರಲೇಬೇಕು–ಅಸ್ಪೃಶ್ಯತೆ ನಾಶವಾಗದಿದ್ದರೆ ಹಿಂದೂ ಧರ್ಮವೂ ನಾಶವಾಗುವುದು ಒಳ್ಳೆಯದು.

(ವಿವಿಧ ಭಾಷಣ, ಬರಹಗಳಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೬೬

'ಹರಿಜನ' ಪದದ ಮೂಲ

[ಟಿಪ್ಪಣಿ: ಗಾಂಧೀಜಿ ಸಂಪಾದಿಸುತ್ತಿದ್ದ 'ನವಜೀವನ್' ಪತ್ರಿಕೆಯ ಓದುಗರೊಬ್ಬರು ೧೯೩೧ರಲ್ಲಿ ಗಾಂಧೀಜಿಗೆ ಬರೆದ ಪತ್ರ ಹೀಗಿತ್ತು: ...'ಅಂತ್ಯಜ' 'ಅಸ್ಪೃಶ್ಯ' ಮುಂತಾದ ಪದಗಳಿಂದ ನಮಗೆ ನೋವಾಗುತ್ತದೆ. ಹದಿನೈದನೇ ಶತಮಾನದ ಗುಜರಾತಿ ಕವಿ ನರಸಿಂಹ ಮೆಹ್ತಾ ತಮ್ಮ ಕವಿತೆಯೊಂದರಲ್ಲಿ ನೊಂದ ಸಮುದಾಯಗಳ ಜನರನ್ನು 'ಹರಿಜನ' ಎಂದಿದ್ದಾರೆ. ನೀವೂ ಆ ಹೆಸರನ್ನು ಬಳಸಬಹುದು'. ೧೯೩೨ರಿಂದಾಚೆಗೆ ಗಾಂಧೀಜಿ 'ಹರಿಜನ' ಪದವನ್ನು ಬಳಸಿದರು; ೧೯೩೩ರಲ್ಲಿ ಬಂಧನಕ್ಕೊಳಗಾದಾಗ, ಜೈಲಿನಿಂದಲೇ 'ಹರಿಜನ್' ಪತ್ರಿಕೆ ಆರಂಭಿಸಲು ಅನುಮತಿ ಪಡೆದರು. ದೇಶಾದ್ಯಂತ 'ಹರಿಜನ ಪ್ರವಾಸ' ಕೈಗೊಂಡು ಹಿಂದೂ ಮನಸ್ಸನ್ನು ಪರಿವರ್ತಿಸಿ, ಅಸ್ಪೃಶ್ಯತೆಯನ್ನು ತೊಡೆಯಲೆತ್ನಿಸಿದರು.]

'ಅಸ್ಪೃಶ್ಯರ' ಮೇಲೆ ಹಿಂದೂಗಳು ರಾಶಿಗಟ್ಟಲೆ ಅಪರಾಧಗಳನ್ನು ಎಸಗಿದ್ದಾರೆ. ಸಾಮಾಜಿಕವಾಗಿ ಅವರನ್ನು ಕುಷ್ಠರೋಗಿಗಳಂತೆ ಕಾಣುತ್ತಿದ್ದಾರೆ. ಆರ್ಥಿಕ ದೃಷ್ಟಿಯಿಂದ ನೋಡಿದರೆ ಅವರ ಸ್ಥಿತಿ ಗುಲಾಮರಿಗಿಂತ ಕಡೆಯಾಗಿದೆ. ನಾವು ಅರ್ಥಹೀನವಾಗಿ 'ದೇವಾಲಯ'ಗಳೆಂದು ಕರೆಯುವ ಸ್ಥಳಗಳಿಗೆ ಅವರು ಬರದಂತೆ ನಿಷೇಧ ಹೇರಲಾಗಿದೆ. ಎಲ್ಲರೂ ಬಳಸುವ ರಸ್ತೆ, ಆಸ್ಪತ್ರೆ, ಬಾವಿ, ನಲ್ಲಿ, ಪಾರ್ಕು ಮುಂತಾದ ಯಾವುದೇ ಸಾರ್ವಜನಿಕ ಸ್ಥಳಗಳಿಗೂ ಅವರು ಬರದಂತೆ ಮಾಡಲಾಗಿದೆ. ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು, ಸವರ್ಣೀಯರ ಕಣ್ಣಿಗೆ ಬೀಳುವುದು ಕೂಡ ಸಾಮಾಜಿಕ ಅಪರಾಧವೆಂದು ಹೇಳಲಾಗಿದೆ.

ಹಳ್ಳಿ, ನಗರಗಳಲ್ಲಿ ಯಾವ ಸೇವೆ, ಸವಲತ್ತೂ ಸಿಗದ ಅತ್ಯಂತ ನಿಕೃಷ್ಟ ಸ್ಥಳಗಳಲ್ಲಿ ಅವರು ಬದುಕುವಂತೆ ಮಾಡಲಾಗಿದೆ. ಸವರ್ಣೀಯ ಹಿಂದೂ ಡಾಕ್ಟರುಗಳಾಗಲೀ, ಲಾಯರುಗಳಾಗಲೀ ಅವರಿಗೆ ಸೇವೆ ಒದಗಿಸುವುದಿಲ್ಲ. ಬ್ರಾಹ್ಮಣರು ಅವರ ಧಾರ್ಮಿಕ ವಿಧಿಗಳನ್ನು ನಡೆಸಿಕೊಡುವುದಿಲ್ಲ. ಅವರು ಹಾಗೂ ಹೀಗೂ ಇನ್ನೂ ಬದುಕಿದ್ದಾರೆ

ಹಾಗೂ ಅವರು ಇನ್ನೂ ಹಿಂದೂ ಧರ್ಮದ ತೆಕ್ಕೆಯಲ್ಲಿ ಉಳಿದಿದ್ದಾರೆ ಎನ್ನುವುದೇ ಆಶ್ಚರ್ಯ. ತಮ್ಮನ್ನು ದಮನ ಮಾಡುತ್ತಿರುವವರ ವಿರುದ್ಧ ದಂಗೆಯೇಳಲೂ ಆಗದಂತೆ ಅವರನ್ನು ಕೆಳಗೆ ತುಳಿಯಲಾಗಿದೆ. (೫ ನವೆಂಬರ್ ೧೯೩೨)

ನಾನು 'ಹರಿಜನ' ಪದವನ್ನು ಹರಿಜನರ ಪ್ರತ್ಯೇಕತೆಯನ್ನು ಇನ್ನಷ್ಟು ಹೆಚ್ಚಿಸಲು ಬಳಸುತ್ತಿಲ್ಲ. 'ಅಸ್ಪೃಶ್ಯ' ಎಂಬ ಪದದಲ್ಲಿ ತಿರಸ್ಕಾರ ತುಂಬಿದೆ. ಈ ಪ್ರತ್ಯೇಕತೆ ತೊಲಗಿ, ನಾವೆಲ್ಲರೂ 'ಹರಿಜನರು'(ದೇವರ ಮಕ್ಕಳು) ಎಂದು ಕರೆಸಿಕೊಳ್ಳಲು ಯೋಗ್ಯರಾಗಬೇಕೆಂದು ಪ್ರಾರ್ಥಿಸೋಣ. ನಮ್ಮ ಸ್ನೇಹಿತರೊಬ್ಬರು ಹೇಳಿದಂತೆ 'ಸವರ್ಣೀಯ ಹಿಂದೂಗಳು ನಿಜಕ್ಕೂ ಹಿಂದೂ ಧರ್ಮದ ಅರಿ-ಜನ (ಶತ್ರು)' ಆಗಿದ್ದಾರೆ. (೨೮ ಏಪ್ರಿಲ್ ೧೯೩೩)

ನನ್ನನೇನಾದರೂ ವೈಸ್‌ರಾಯ್ ಜಾಗದಲ್ಲಿ ಒಂದು ದಿನ ಸರ್ವಾಧಿಕಾರಿಯಾಗಲು ಬಿಟ್ಟರೆ, ಎಲ್ಲ ದಿನಪತ್ರಿಕೆಗಳನ್ನೂ ನಿಲ್ಲಿಸುತ್ತೇನೆ...(ಚಣ ನಕ್ಕು, ಕಣ್ಣು ಮಿಟುಕಿಸುತ್ತಾ) ಆಫ್ ಕೋರ್ಸ್, 'ಹರಿಜನ್' ಪತ್ರಿಕೆ ಬಿಟ್ಟು. ಅಂದ ಹಾಗೆ, ನನ್ನ ಈ ವಾರಪತ್ರಿಕೆಯ ಹೆಸರನ್ನು ಬದಲಿಸುವುದಾದರೆ ಅದನ್ನು 'ಹರಿಜನ್' ಎನ್ನುವ ಬದಲಿಗೆ ನನ್ನ ಇಂದಿನ ನೋಟಕ್ಕನುಗುಣವಾಗಿ, ಇಂದಿನ ಅಗತ್ಯಕ್ಕನುಗುಣವಾಗಿ 'ಭಂಗಿ' ಎಂದು ಕರೆಯುತ್ತೇನೆ. (೧೯ ಜೂನ್ ೧೯೪೪, ಪ್ರಾರ್ಥನಾ ಸಭೆಯಲ್ಲಿ)

(ವಿವಿಧ ಭಾಷಣ, ಹೇಳಿಕೆ, ಬರಹಗಳಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೬೭

ಸ್ವರಾಜ್ಯ ಮತ್ತು ಅಸ್ಪೃಶ್ಯತೆ

ಚಾರ್ಲಿ ಆಂಡ್ರ್ಯೂಸ್ ಗಾಂಧೀಜಿಗೆ ಬರೆದ ಪತ್ರದಲ್ಲಿ:

ಪ್ರೀತಿಯ ಮೋಹನ್,

'ಅಸ್ಪೃಶ್ಯತೆಯನ್ನು ಉಳಿಸಿಕೊಂಡ ಭಾರತೀಯರು ಸ್ವರಾಜ್ಯಕ್ಕೆ ಅರ್ಹರಲ್ಲ' ಎಂದು ನೀವು ಪದೇ ಪದೇ ಹೇಳುತ್ತಿರುತ್ತೀರಿ. ಆದ್ದರಿಂದ ನೀವು ಇನ್ನು ಮುಂದೆ ಅತ್ತಿತ್ತ ಹೊರಳದೆ, ಸಂಪೂರ್ಣವಾಗಿ ಅಸ್ಪೃಶ್ಯತಾ ನಿವಾರಣೆಯ ಕೆಲಸವೊಂದರಲ್ಲೇ ತೊಡಗಿಕೊಂಡುಬಿಡಿ. ಇಬ್ಬರು ಒಡೆಯರಿಗೆ ಸೇವೆ ಸಲ್ಲಿಸುವುದನ್ನು ನಿಲ್ಲಿಸಿಬಿಡಿ.

ಗಾಂಧೀಜಿ ಚಾರ್ಲಿ ಆಂಡ್ರ್ಯೂಸ್‌ಗೆ ಬರೆದ ಪತ್ರ:

ಅಸ್ಪೃಶ್ಯತೆ ಕುರಿತ ನಿನ್ನ ಮಹತ್ವದ ಸಲಹೆಯ ಬಗ್ಗೆ: ಅದರಲ್ಲೊಂದು ಪ್ರಾಥಮಿಕ ದೋಷವಿದೆ. ನನ್ನ ಜೀವನದಲ್ಲಿ ಎಲ್ಲವೂ ಇಡಿಯಾಗಿ ಬೆಸೆದುಕೊಂಡಿರುತ್ತವೆ. ಅದರಲ್ಲಿ ಬೇರೆ ಬೇರೆ ಬೋಗಿಗಳ ವ್ಯವಸ್ಥೆಯಿಲ್ಲ. ಸತ್ಯಾಗ್ರಹ, ನಾಗರಿಕ ಪ್ರತಿಭಟನೆ, ಅಸ್ಪೃಶ್ಯತಾ ನಿವಾರಣೆ, ಹಿಂದೂ-ಮುಸ್ಲಿಂ ಐಕ್ಯತೆ... ಮುಂತಾದ ಎಲ್ಲವೂ ಒಂದು ಸಮಗ್ರದಲ್ಲಿ ಸೇರಿಹೋಗಿರುವ, ಬೇರ್ಪಡಿಸಲಾಗದ ಭಾಗಗಳು.

ನನ್ನ ಜೀವನದಲ್ಲಿ ಒಂದು ಕಾಲಕ್ಕೆ ಒಂದರ ಮೇಲೆ ಒತ್ತು ಇರುತ್ತದೆ; ಮತ್ತೊಂದು ಕಾಲದಲ್ಲಿ ಇನ್ನೊಂದರ ಮೇಲೆ ಒತ್ತು ಇರುತ್ತದೆ. ಪಿಯಾನೋ ವಾದಕನೊಬ್ಬ ಹೇಗೆ ಒಮ್ಮೆ ಒಂದು ಸ್ವರದ ಮೇಲೆ ಒತ್ತು ಕೊಡುತ್ತಾನೋ, ಮತ್ತೊಮ್ಮೆ ಮತ್ತೊಂದು ಸ್ವರದ ಮೇಲೆ ಒತ್ತು ಕೊಡುತ್ತಾನೋ, ಹಾಗೇ ಇದೂನೂ. ಆದರೆ ಇವೆಲ್ಲವುಗಳಿಗೂ ಒಂದಕ್ಕೊಂದು ಸಂಬಂಧವಿದೆ.

ಆದ್ದರಿಂದ, ನಾಗರಿಕ ಪ್ರತಿಭಟನೆಯ ಜೊತೆಗಾಗಲೀ, ಸ್ವರಾಜ್ ಜೊತೆಗಾಗಲೀ ನನಗೆ ಸಂಬಂಧವಿಲ್ಲ ಎಂದು ಹೇಳಲು ನನಗೆ ಎಂದೆಂದಿಗೂ ಸಾಧ್ಯವಿಲ್ಲ. ಹಾಗೆಯೇ ಸ್ವರಾಜ್ಯವಿಲ್ಲದೆ ಅಸ್ಪೃಶ್ಯತೆಯ ಸಂಪೂರ್ಣ ನಿರ್ಮೂಲನವಾಗಲೀ, ಅಂತಿಮ ನಿರ್ಮೂಲನವಾಗಲೀ ಖಂಡಿತಾ ಸಾಧ್ಯವಿಲ್ಲ.'

ಪ್ರೀತಿಯಿಂದ

ಮೋಹನ್

೧೫ ಜೂನ್ ೧೯೩೩

('ಮೋಹನ್‌ದಾಸ್: ಎ ಟ್ರೂ ಸ್ಟೋರಿ', ಪು. ೩೮೨)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೬೮

ಮಹಿಳೆ: ಟಿಪ್ಪಣಿಗಳು

ಪುರುಷನ ಕಟ್ಟಳೆಗಳು ಮತ್ತು ಮಹಿಳೆ

ಪುರುಷ ನಿರ್ಮಿಸಿದ ಕಟ್ಟಳೆಗಳು ಹಾಗೂ ಕಾನೂನುಗಳ ಅಡಿಯಲ್ಲಿ, ಆ ಕಾನೂನುಗಳನ್ನು ರೂಪಿಸುವಲ್ಲಿ ಯಾವ ಪಾತ್ರವೂ ಇಲ್ಲದ ಮಹಿಳೆ ದಮನಕ್ಕೆ ಒಳಗಾಗಿದ್ದಾಳೆ. ಆದರೆ ಅಹಿಂಸೆಯನ್ನು ಆಧರಿಸಿದ ಜೀವನ ಕ್ರಮದಲ್ಲಿ ಮಹಿಳೆ ತನ್ನ ಬದುಕಿನ ದಿಕ್ಕನ್ನು ತಾನೇ ನಿರ್ಧರಿಸಿಕೊಳ್ಳಲು ಪುರುಷನಷ್ಟೇ ಹಕ್ಕು ಪಡೆದಿರುತ್ತಾಳೆ. ಅಹಿಂಸಾ ಮಾರ್ಗದ ಸಮಾಜದಲ್ಲಿ ಪ್ರತಿಯೊಂದು ಕರ್ತವ್ಯ ಪಾಲನೆಯ ನಂತರವೇ ಒಂದು ಹಕ್ಕು ಹುಟ್ಟುತ್ತದೆ. ಅಂಥ ಸಮಾಜದಲ್ಲಿ ಸಾಮಾಜಿಕ ನಡವಳಿಕೆಯ ನಿಯಮಗಳು ಪರಸ್ಪರ ಸಹಕಾರ, ಮಾತುಕತೆಯ ಮೂಲಕ ಹುಟ್ಟುತ್ತವೆ. ಅವನ್ನು ಹೊರಗಿನಿಂದ ಹೇರಲಾಗದು. ಮಹಿಳೆಯನ್ನು ಕುರಿತ ತಮ್ಮ ನಡವಳಿಕೆಯ ವಿಚಾರದಲ್ಲಿ ಪುರುಷರು ಈ ಅಂಶವನ್ನು ಪೂರ್ಣವಾಗಿ ಅರಿತಿಲ್ಲ. ಪುರುಷರು ಮಹಿಳೆಯರನ್ನು ತಮ್ಮ ಗೆಳತಿಯರಂತೆಯೋ ಸಹೋದ್ಯೋಗಿಗಳಂತೆಯೋ ಕಾಣದೆ, ತಮ್ಮನ್ನು ತಾವು ಮಹಿಳೆಯರ ಒಡೆಯರೆಂದು, ದೊರೆಗಳೆಂದು ತಿಳಿದಿದ್ದಾರೆ.

ತಾವೂ ಸ್ವತಂತ್ರರಾಗಬಲ್ಲೆವು ಅಥವಾ ತಾವು ಒಂದಲ್ಲ ಒಂದು ದಿನ ಸ್ವತಂತ್ರರಾಗುತ್ತೇವೆ ಎಂಬುದೇ ಗೊತ್ತಿರದ ಪ್ರಾಚೀನ ಕಾಲದ ಗುಲಾಮರ ಸ್ಥಿತಿಯಂತೆಯೇ ಹೆಚ್ಚು ಕಡಿಮೆ ಮಹಿಳೆಯರ ಸ್ಥಿತಿಯೂ ಇದೆ. ಮಹಿಳೆಯರು ತಮ್ಮನ್ನು ತಾವು ಪುರುಷರ ಗುಲಾಮರೆಂದು ತಿಳಿಯಬೇಕೆಂದು ಬೋಧಿಸಲಾಗಿದೆ. ಮಹಿಳೆಯರು ತಮ್ಮ ಸ್ಥಾನಮಾನವನ್ನು ಪೂರ್ಣವಾಗಿ ಗಳಿಸಿಕೊಳ್ಳುವಂತೆ ಮಾಡುವುದು ಹಾಗೂ ಪುರುಷರಿಗೆ ಸಮಾನವಾಗಿ ತಮ್ಮ ಪಾತ್ರಗಳನ್ನು ನಿರ್ವಹಣೆ ಮಾಡುವಂತೆ ನೋಡಿಕೊಳ್ಳುವುದು ಕಾಂಗ್ರೆಸ್ಸಿಗರ ಕರ್ತವ್ಯ.

ಕಾಂಗ್ರೆಸ್ಸಿಗರು ಮನಸ್ಸು ಮಾಡಿದರೆ ಈ ಕ್ರಾಂತಿ ಸುಲಭ. ಈ ಕೆಲಸವನ್ನು ಕಾಂಗ್ರೆಸ್ಸಿಗರು ತಮ್ಮ ಮನೆಯಿಂದಲೇ ಶುರು ಮಾಡಲಿ. ಪತ್ನಿ ಎಂದರೆ ಗೊಂಬೆಯೆಂದೋ, ತಮ್ಮನ್ನು ತಣಿಸುವ ವಸ್ತುವೆಂದೋ ತಿಳಿಯದೆ, ಆಕೆ ತಮ್ಮ ಸಾರ್ವಜನಿಕ ಸೇವೆಯ ಸಂಗಾತಿಯೆಂದು ಕಾಂಗ್ರೆಸ್ಸಿಗರು ಭಾವಿಸಲಿ.

ಹಳ್ಳಿಯ ಮಹಿಳೆಯರು

ನಮ್ಮ ಹಳ್ಳಿಗಳಲ್ಲಿರುವ ಹೆಂಗಸರು ಗಂಡಸರಿಗೆ ಸಮಾನರೆಂಬುದನ್ನು ತೋರಿಸಿದ್ದಾರೆ ಹಾಗೂ ಕೆಲವು ದೃಷ್ಟಿಯಿಂದ ಗಂಡಸರ ಮೇಲೆ ಮೇಲುಗೈ ಸಾಧಿಸಿದ್ದಾರೆ ಎಂಬುದನ್ನೂ ನಾನು ಬಲ್ಲೆ. ಆದರೆ ವಸ್ತುನಿಷ್ಠವಾಗಿ ನೋಡಿದವರಿಗೆ, ತಲೆತಲಾಂತರದಿಂದ ಬಂದ ಕಾನೂನು ಹಾಗೂ ರೂಢಿಗತ ಪದ್ಧತಿಗಳೆರಡೂ ಮಹಿಳೆಯ ಸ್ಥಾನವನ್ನು ಕನಿಷ್ಠವಾಗಿಸಿವೆ ಎಂಬುದು ತಿಳಿಯುತ್ತದೆ. ಈ ಕುರಿತು ತೀವ್ರ ಬದಲಾವಣೆಯ ಅಗತ್ಯವಿದೆ ಎಂಬುದನ್ನೂ ಈ ಸನ್ನಿವೇಶ ಒತ್ತಾಯಿಸುತ್ತದೆ. ಅಷ್ಟೇ ಮುಖ್ಯವಾಗಿ, ಈವರೆಗೆ ಮಹಿಳೆಯರನ್ನು ಆಳಿರುವ ಪುರುಷಲೋಕವನ್ನು ಮುನ್ನಡೆಸುವಂಥ ಭಾರತೀಯ ಮಹಿಳೆಯರು ರೂಪುಗೊಳ್ಳಲೆಂಬುದು ನನ್ನ ಕನಸು.

ಮಹಿಳೆ, ಧರ್ಮ, ಶಾಸ್ತ್ರ

ಶಾಸನಗಳನ್ನು ಬಹುತೇಕವಾಗಿ ಗಂಡಸರೇ ಮಾಡುತ್ತಾರೆ. ತಂತಾವೇ ಕೈಗೆತ್ತಿಕೊಂಡ ಈ ಕೆಲಸದಲ್ಲಿ ಗಂಡಸರು ನ್ಯಾಯವಾಗಿ ನಡೆದುಕೊಂಡಿಲ್ಲ ಹಾಗೂ ಸದಾ ಭೇದಭಾವ ಮಾಡುತ್ತಲೇ ಬಂದಿದ್ದಾರೆ. ಮಹಿಳೆಯರ ಮರುಹುಟ್ಟನ್ನು ಕುರಿತ ನಮ್ಮ ಪ್ರಯತ್ನಗಳಲ್ಲಿ ಅತಿ ಹೆಚ್ಚಿನ ಕೆಲಸ ಆಗಬೇಕಾಗಿರುವುದು– ಮಹಿಳೆಯರ ಅತ್ಯಗತ್ಯ ಗುಣಗಳು ಇಂಥಿಂಥವು ಎಂದು ಶಾಸ್ತ್ರಗಳಲ್ಲಿ ಹೇಳಿರುವ ಕೆಟ್ಟ ಕಲೆಗಳನ್ನು ತೆಗೆಯುವ ನಿಟ್ಟಿನಲ್ಲಿ...

ಧರ್ಮ ಹಾಗೂ ರೂಢಿಗತ ನಿಯಮಗಳ ಮೂಲಕ ಹೇರಲಾದ ವೈಧವ್ಯ ಸಹಿಸಲಾರದ ನೊಗದಂತಿರುತ್ತದೆ. ಅದು ಗುಪ್ತ ದುರ್ಗುಣಗಳಿಂದ ಮನೆಯನ್ನು ಕಲುಷಿತಗೊಳಿಸುತ್ತದೆ ಹಾಗೂ ಧರ್ಮದ ಮಟ್ಟವನ್ನು ಕೆಳಗಿಳಿಸುತ್ತದೆ. ನಾವು ಪರಿಶುದ್ಧರಾಗಬಯಸುವುದಾದರೆ, ಹಿಂದೂ ಧರ್ಮವನ್ನು ಉಳಿಸಬಯಸುವುದಾದರೆ, ಹೇರಿಕೆಯ ವೈಧವ್ಯದ ವಿಷದಿಂದ ಮೊದಲು ಮುಕ್ತರಾಗಬೇಕು. ಬಾಲವಿಧವೆಯರನ್ನು ಮನೆಯಲ್ಲಿರಿಸಿಕೊಂಡಿರುವ ತಂದೆ ತಾಯಿಗಳು ಧೈರ್ಯ ಮಾಡಿ ಆ ಹೆಣ್ಣು ಮಕ್ಕಳನ್ನು ಸರಿಯಾದ ರೀತಿಯಲ್ಲಿ ಮದುವೆ ಮಾಡಿಕೊಡಬೇಕು. ಅದು

ಮರುಮದುವೆಯಲ್ಲ. ಅದು ಅವರ ಮದುವೆ. ಯಾಕೆಂದರೆ, ಆ ಹೆಣ್ಣು ಮಕ್ಕಳು ನಿಜಕ್ಕೂ ಮದುವೆಯಾಗಿರಲೇ ಇಲ್ಲ. (೧೯೨೬)

ಮಹಿಳೆಯ ಹಕ್ಕು

ಹೆಣ್ಣು ಗಂಡಿನಷ್ಟೇ ಬೌದ್ಧಿಕ ಸಾಮರ್ಥ್ಯವುಳ್ಳ ಸಂಗಾತಿ. ಗಂಡಿನ ಪ್ರತಿ ಚಟುವಟಿಕೆಯಲ್ಲೂ ಭಾಗವಹಿಸುವ ಹಕ್ಕು ಅವಳಿಗಿದೆ. ಅವನಷ್ಟೇ ಸ್ವಾತಂತ್ರ್ಯದ ಹಕ್ಕು ಅವಳಿಗಿದೆ. ಗಂಡಿಗೆ ತನ್ನ ವಲಯದಲ್ಲಿ ಎಷ್ಟು ಸಂಪೂರ್ಣ ಅಧಿಕಾರವಿದೆಯೋ ಅಷ್ಟೇ ಸಾರ್ವಭೌಮ ಅಧಿಕಾರ ಅವಳಿಗೂ ತನ್ನ ವಲಯದಲ್ಲಿ ಇದೆ...ಕೆಟ್ಟ ಸಾಂಪ್ರದಾಯಿಕ ರೂಢಿಗಳ ಬಲದಿಂದಾಗಿ ಯಾವ ಕೆಲಸಕ್ಕೂ ಬಾರದ ದಡ್ಡ ಗಂಡಸರು ಕೂಡ ಹೆಂಗಸರಿಗಿಂತ ತಾವು ಮೇಲೆಂದು ಆಡುತ್ತಿದ್ದಾರೆ. ಮಹಿಳೆಯರ ಈ ಸ್ಥಿತಿಯಿಂದಾಗಿ ನಮ್ಮ ಅನೇಕ ಚಳುವಳಿಗಳು ನಿಂತು ಹೋಗುತ್ತಾ ಬಂದಿವೆ. ನಮ್ಮ ಬಹುತೇಕ ಪ್ರಯತ್ನಗಳು ಸರಿಯಾದ ಫಲ ಕೊಡದೇ ಹೋಗಿವೆ...

ಮಹಿಳೆಯರ ಹಕ್ಕಿನ ವಿಚಾರದಲ್ಲಂತೂ ನಾನು ರಾಜಿಯಾಗುವವನೇ ಅಲ್ಲ. ನಾನು ಹೆಣ್ಣು ಮಕ್ಕಳನ್ನೂ, ಗಂಡು ಮಕ್ಕಳನ್ನೂ ಪೂರ್ಣ ಸಮಾನವಾಗಿ ನೋಡುವವನು. (೧೯೨೮)

ಗಂಡು, ಹೆಣ್ಣುಗಳ ನಡುವಣ ಸಂಬಂಧವನ್ನು ಆರೋಗ್ಯಕರವಾದ ಪರಿಶುದ್ಧ ಬೆಳಕಿನಲ್ಲಿ ನೋಡುವುದನ್ನು ಆರಂಭಿಸಿದರೆ, ನಮ್ಮನ್ನು ನಾವು ಮುಂದಿನ ಪೀಳಿಗೆಗಳ ನೈತಿಕ ಕ್ಷೇಮಾಭಿವೃದ್ಧಿಯ ಟ್ರಸ್ಟಿಗಳೆಂದು ಪರಿಗಣಿಸಿದರೆ, ಇಂದು ಕಾಣಬರುತ್ತಿರುವ ಬಹಳಷ್ಟು ದುಃಖ, ಯಾತನೆಗಳನ್ನು ಕೊನೆಗಾಣಿಸಬಹುದು...ಮಹಿಳೆಯ ಪರಿಶುದ್ಧತೆಯ ಬಗ್ಗೆ ಅದೇಕೆ ಅಷ್ಟೊಂದು ವಿಕಾರವಾದ ಆತಂಕವಿದೆ? ಗಂಡಸರ ಪರಿಶುದ್ಧತೆಯ ಬಗ್ಗೆ ಮಾತಾಡುವ ಹಕ್ಕು ಮಹಿಳೆಗೆ ಇದೆಯೇ? ಗಂಡಸರ ಶೀಲಪಾವಿತ್ರ್ಯದ ಬಗ್ಗೆ ಮಹಿಳೆಯರು ಆತಂಕ ವ್ಯಕ್ತಪಡಿಸಿದ್ದನ್ನು ಕೇಳಿಯೇ ಇಲ್ಲ. ಹೀಗಿರುವಾಗ, ಗಂಡಸರು ಮಹಿಳೆಯರ ಪರಿಶುದ್ಧತೆಯನ್ನು ನಿಯಂತ್ರಿಸುವ ಹಕ್ಕು ತಮ್ಮದೆಂದು ತಾವೇ ಯಾಕೆ ಸೊಕ್ಕಿನಿಂದ ಭಾವಿಸಿಕೊಳ್ಳಬೇಕು? (೧೯೨೬)

ವರದಕ್ಷಿಣೆಯ ಕ್ರೌರ್ಯ

ವರದಕ್ಷಿಣೆ ಪದ್ಧತಿ ತೊಲಗಲೇಬೇಕು. ಮದುವೆಯೆನ್ನುವುದು ಪೋಷಕರು ಹಣದ ವಿಚಾರಕ್ಕಾಗಿ ಮಾಡಿಕೊಂಡಿರುವ ಏರ್ಪಾಡು ಎಂಬ ಸ್ಥಿತಿ ಬದಲಾಗಲೇಬೇಕು. ವರದಕ್ಷಿಣೆ ಪದ್ಧತಿಗೂ, ಜಾತಿ ಪದ್ಧತಿಗೂ ಆಳವಾದ ಸಂಬಂಧವಿದೆ. ಒಂದು ಜಾತಿಯ ಕೆಲವು ನೂರು ತರುಣ, ತರುಣಿಯರ ನಡುವೆ ಮಾತ್ರ ಮದುವೆಯಾಗಬೇಕು ಎಂಬ ರೂಢಿಯಿಂದ ಆಯ್ಕೆಯೇ ಸೀಮಿತವಾಗಿಬಿಟ್ಟಿದೆ; ಹೀಗಾಗಿ, ವರದಕ್ಷಿಣೆಯ

ಪದ್ಧತಿಯ ವಿರುದ್ಧ ನೀವು ಎಷ್ಟು ಮಾತಾಡಿದರೂ ಅದು ಮುಂದುವರಿಯುತ್ತಲೇ ಇರುತ್ತದೆ. ವರದಕ್ಷಿಣೆಯ ಕೇಡನ್ನು ನಿರ್ಮೂಲನ ಮಾಡಬೇಕೆಂದರೆ ಹುಡುಗ, ಹುಡುಗಿಯರು ಹಾಗೂ ಅವರ ತಂದೆ ತಾಯಿಯರು ಜಾತಿಯ ಕಟ್ಟುಗಳನ್ನು ಹರಿದೊಗೆಯಬೇಕು. ಇದು ಸಾಧ್ಯವಾಗಬೇಕೆಂದರೆ, ದೇಶದ ತರುಣ ತರುಣಿಯರ ಮನಸ್ಸನ್ನು ಕ್ರಾಂತಿಕಾರಕವಾಗಿಸಬಲ್ಲ ಸಚ್ಚಾರಿತ್ರದ ಶಿಕ್ಷಣ ಆರಂಭವಾಗಬೇಕು. (೧೯೩೬)

...ಮದುವೆಯಾಗಲು ವರದಕ್ಷಿಣೆಯನ್ನು ಒಂದು ಶರತ್ತಾಗಿಸುವ ಯಾವುದೇ ತರುಣ ತನ್ನ ಶಿಕ್ಷಣಕ್ಕೂ, ದೇಶಕ್ಕೂ ಕೆಟ್ಟ ಹೆಸರು ತರುತ್ತಾನೆ. ಸ್ತ್ರೀಕುಲವನ್ನು ಅವಮಾನಗೊಳಿಸುತ್ತಾನೆ. ದೇಶದಲ್ಲಿ ಹಲವು ಯುವ ಚಳುವಳಿಗಳಿವೆ. ಈ ಚಳುವಳಿಗಳು ವರದಕ್ಷಿಣೆಯ ವಿರುದ್ಧ ಚಳುವಳಿ ಹೂಡಬೇಕು. ಮಹಿಳೆಯನ್ನು ಕೀಳಾಗಿಸುವ ವರದಕ್ಷಿಣೆ ಪದ್ಧತಿಯನ್ನು ಖಂಡಿಸಿ ಗಟ್ಟಿಯಾದ ಸಾರ್ವಜನಿಕ ಅಭಿಪ್ರಾಯ ಸೃಷ್ಟಿಯಾಗಬೇಕು; ಅನೈತಿಕ ಮಾರ್ಗದಿಂದ ಪಡೆದ ಚಿನ್ನದಿಂದ ತಮ್ಮ ಕೈ ಹೊಲಸು ಮಾಡಿಕೊಂಡ ತರುಣರನ್ನು ಸಮಾಜದಿಂದ ಬಹಿಷ್ಕರಿಸಬೇಕು. ತಂದೆ ತಾಯಿಗಳು ಇಂಗ್ಲಿಷ್ ಡಿಗ್ರಿಗಳ ಮೋಹಕ್ಕೆ ಬೀಳದೆ, ಪ್ರಾಮಾಣಿಕರಾದ ಧೀರ ತರುಣರನ್ನು ಹುಡುಕಿಕೊಳ್ಳಲು ತಮ್ಮ ಪುಟ್ಟ ಜಾತಿ, ಪ್ರಾಂತಗಳ ಆಚೆಗೆ ಬರಬೇಕು.

ಮಹಿಳೆಯ ಮೂಗು, ಕಿವಿಗಳ ಒಡವೆಗಳು

ಮಹಿಳೆಯನ್ನು ಈಗಾಗಲೇ ಗುಲಾಮಳನ್ನಾಗಿಸಲಾಗಿದೆ. ಮಹಿಳೆಯರ ಮೂಗು, ಕಿವಿಗಳನ್ನು ಚುಚ್ಚುವ ಪದ್ಧತಿಯಲ್ಲಿ ಗುಲಾಮಗಿರಿಯ ಸಂಕೇತವಲ್ಲದೆ ಬೇರೇನೂ ಇದ್ದಂತೆ ತೋರುವುದಿಲ್ಲ. ಒಬ್ಬ ಮಹಿಳೆಯ ಕಿವಿಯಲ್ಲಿ ರಿಂಗುಗಳನ್ನು ಹಾಕುವ ಮೂಲಕ ಅವಳನ್ನು ಎತ್ತಿನಂತೆ ಎಳೆದುಕೊಂಡು ಹೋಗಬಹುದು. ಮಹಿಳೆಯರು ಮೂಗು, ಕಿವಿಗಳಲ್ಲಿ ಧರಿಸಿರುವ ಆಭರಣಗಳ ಸಮೇತ ಆ ಅಂಗಗಳನ್ನು ಕತ್ತರಿಸಿದ ಗಂಡಸರ ಉದಾಹರಣೆಗಳಿವೆ. ಮಹಿಳೆಯರ ಮೂಗು, ಕಿವಿಗಳಲ್ಲಿ ಆಭರಣ ಗಳಿರಬೇಕು ಎಂದು ವಾದಿಸುವವರನ್ನು ನಾನು ಕೇಳಿಕೊಳ್ಳುತ್ತೇನೆ: ಬನ್ನಿ, ಭಾರತೀಯ ಮಹಿಳೆಯರ ಮೂಗು, ಕಿವಿಗಳಲ್ಲಿರುವ ಭಯ ಹುಟ್ಟಿಸುವ ಆಭರಣಗಳನ್ನೂ, ಅವುಗಳಲ್ಲಿ ತುಂಬಿಕೊಂಡ ಕೊಳೆಯನ್ನೂ ನೋಡಿ. ಆಮೇಲೆ ನಾನು ಏನು ಮಾಡಬಹುದೆಂದು ಹೇಳಿ. (೧೯೩೬)

ಮಹಿಳೆ ಮತ್ತು ಸ್ವರಕ್ಷಣೆ

ಒಬ್ಬ ಮಹಿಳೆಯ ಮೇಲೆ ಹಲ್ಲೆಯಾದರೆ, ಆಕೆ ಹಿಂಸೆ, ಅಹಿಂಸೆಗಳನ್ನು ಕುರಿತು ಯೋಚಿಸಬೇಕಾಗಿಲ್ಲ. ತನ್ನ ರಕ್ಷಣೆಯೇ ಅವಳ ಮೊದಲ ಕರ್ತವ್ಯ. ತನ್ನ

ಮರ್ಯಾದೆಯನ್ನು ರಕ್ಷಿಸಿಕೊಳ್ಳಲು ಆಕೆ ತನಗೆ ತಕ್ಷಣ ತೋಚಿದ ಯಾವುದೇ ವಿಧಾನವನ್ನಾಗಲೀ, ಸಾಧನವನ್ನಾಗಲೀ ಬಳಸಲು ಸ್ವತಂತ್ರಳು. ದೇವರು ಅವಳಿಗೆ ಹಲ್ಲು ಉಗುರುಗಳನ್ನು ಕೊಟ್ಟಿದ್ದಾನೆ. ತನ್ನೆಲ್ಲ ಶಕ್ತಿಯನ್ನೂ ಒಗ್ಗೂಡಿಸಿ ಅವನ್ನು ಬಳಸಬೇಕು. ಅಗತ್ಯ ಬಿದ್ದರೆ, ಈ ಪ್ರಯತ್ನದಲ್ಲಿ ಜೀವ ತೆರಲೂ ಸಿದ್ಧಳಿರಬೇಕು. ಸಾವಿನ ಭಯ ಗೆದ್ದ ಗಂಡಾಗಲೀ ಹೆಣ್ಣಾಗಲೀ ತಮ್ಮನ್ನು ಮಾತ್ರವಲ್ಲ, ಇತರರನ್ನೂ ರಕ್ಷಿಸಬಲ್ಲರು. ಈ ನಿಟ್ಟಿನಲ್ಲಿ ತಮ್ಮ ಪ್ರಾಣ ಕೊಡಲೂ ಸಿದ್ಧರಿರಬಲ್ಲರು. (೧೯೪೨)

(೧೯೨೫-೧೯೪೭ರ ನಡುವೆ ಆಗಾಗ್ಗೆ ಬರೆದ ಬರಹಗಳಿಂದ. ಆಕರ: 'ಇಂಡಿಯಾ ಆಫ್ ಮೈ ಡ್ರೀಮ್ಸ್', ಎಂ.ಕೆ ಗಾಂಧಿ, ನವಜೀವನ್ ಪಬ್ಲಿಷಿಂಗ್ ಹೌಸ್.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೬೯

ರಾಷ್ಟ್ರ ಮತ್ತು ವಿವಿಧ ಧರ್ಮಗಳು

ಇಂಡಿಯಾವನ್ನು ಒಂದು ರಾಷ್ಟ್ರ ಎಂದು ಕರೆಯಲು ಇರುವ ತೊಡಕಾದರೂ ಏನು? ಅದು ಮುಘಲರ ಕಾಲದಲ್ಲಿ ಒಂದು ರಾಷ್ಟ್ರವಾಗಿರಲಿಲ್ಲವೆ? ಇಂಡಿಯಾ ಎನ್ನುವುದು ಎರಡು ರಾಷ್ಟ್ರಗಳನ್ನು ಹೊಂದಿದೆಯೆ? ಹಾಗೆನ್ನುವುದಾದರೆ ಬರೀ ಎರಡೇ ಏಕೆ? ಕ್ರಿಶ್ಚಿಯನ್ನರದು ಮೂರನೇ ರಾಷ್ಟ್ರ, ಪಾರ್ಸಿಗಳದು ನಾಲ್ಕನೇ ರಾಷ್ಟ್ರ... ಹೀಗೇ ಹೇಳುತ್ತಾ ಹೋಗಬಹುದಲ್ಲ? ಚೀನಾದ ಮುಸ್ಲಿಮರು ಇತರ ಚೀನೀಯರಿಗಿಂತ ಭಿನ್ನವಾದ ರಾಷ್ಟ್ರವಾಗಿದ್ದಾರೆಯೆ? ಇಂಗ್ಲೆಂಡಿನ ಮುಸ್ಲಿಮರು ಇತರ ಇಂಗ್ಲಿಷರಿಗಿಂತ ಭಿನ್ನವಾದ ರಾಷ್ಟ್ರವಾಗಿದ್ದಾರೆಯೆ?

ಪಂಜಾಬಿನ ಮುಸ್ಲಿಮರು ಪಂಜಾಬಿನ ಹಿಂದೂಗಳಿಗಿಂತ, ಸಿಖ್ಖರಿಗಿಂತ ಹೇಗೆ ಭಿನ್ನರಾದಾರು? ಅವರೆಲ್ಲರೂ ಒಂದೇ ನೆಲದ ನೀರು ಕುಡಿಯುತ್ತಾ, ಒಂದೇ ಗಾಳಿಯಲ್ಲಿ ಉಸಿರಾಡುತ್ತಾ, ಒಂದೇ ನೆಲದ ಸತ್ವ ಹೀರಿ ಬದುಕಿ ಬಾಳುತ್ತಾ ಪಂಜಾಬಿಗಳೇ ಆಗಿಲ್ಲವೆ? ಅವರು ತಂತಮ್ಮ ಧಾರ್ಮಿಕ ಆಚರಣೆಗಳನ್ನು ಅನುಸರಿಸುವುದಕ್ಕೆ ಯಾವ ಅಡ್ಡಿಯಿದೆ? ಇಡೀ ಜಗತ್ತಿನಲ್ಲಿರುವ ಮುಸ್ಲಿಮರು ಪ್ರತ್ಯೇಕ ರಾಷ್ಟ್ರವಾಗಿದ್ದಾರೆಯೆ? ಹಾಗಿರುವಾಗ ಇಂಡಿಯಾದ ಮುಸ್ಲಿಮರು ಇತರರಿಗಿಂತ ಭಿನ್ನವಾಗಿ ತಾವೇ ಏಕೆ ಒಂದು ರಾಷ್ಟ್ರವಾಗಬೇಕು?

ಇಂಡಿಯಾವನ್ನು ಮುಸ್ಲಿಂ ಹಾಗೂ ಮುಸ್ಲಿಮೇತರ ರಾಷ್ಟ್ರವೆಂದು ವಿಭಜಿಸಬೇಕೆ? ಹಾಗಾದರೆ ಇಂಡಿಯಾದ ಹಳ್ಳಿಗಳಲ್ಲಿ ಬಹುಸಂಖ್ಯಾತ ಹಿಂದೂಗಳೇ ಇರುವ ಹಳ್ಳಿಗಳಲ್ಲಿ ಬೆರಳೆಣಿಕೆಯಷ್ಟಿರುವ ಮುಸ್ಲಿಮರ ಕತೆಯೇನು? ಅದೇ ರೀತಿ ಗಡಿನಾಡುಗಳಲ್ಲಿ, ಸಿಂಧ್ ಪ್ರಾಂತ್ಯದಲ್ಲಿ, ಇರುವ ಬೆರಳೆಣಿಕೆಯಷ್ಟು ಹಿಂದೂಗಳ ಕತೆಯೇನಾಗಬೇಕು?

ಪ್ರತ್ಯೇಕ ರಾಷ್ಟ್ರ ಕುರಿತು ಪತ್ರ ಬರೆದಿರುವ ಈ ಮಹನೀಯರು ತಿಕ್ಕಾಟದ ಮಾರ್ಗವನ್ನು ಪ್ರತಿಪಾದಿಸುತ್ತಿದ್ದಾರೆ. 'ಬದುಕು ಹಾಗೂ ಬದುಕಲು ಬಿಡು'; ಪರಸ್ಪರ ಸಹನೆ; ಹೊಂದಾಣಿಕೆ... ಇವು ಬದುಕಿನ ನಿಯಮಗಳಾಗಿವೆ. ನಾನು ಕುರಾನ್, ಬೈಬಲ್, ಝೆಂಡ್-ಅವೆಸ್ತಾ, ಗೀತೆಗಳಿಂದ ಕಲಿತಿರುವುದು ಈ ಪಾಠವನ್ನೇ.

(ಓದುಗರೊಬ್ಬರ ಪತ್ರಕ್ಕೆ ಬರೆದ ಪ್ರತಿಕ್ರಿಯೆ. ಹರಿಜನ್, ೨೮ ಅಕ್ಟೋಬರ್, ೧೯೩೯. 'ಮೋಹನ್‌ದಾಸ್: ಎ ಟ್ರೂ ಸ್ಟೋರಿ', ಪು. ೪೫೩)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೭೦

ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು

'ನನ್ನ ಹಿರಿಮಗ ಹರಿಲಾಲ್ ಆಗಾಗ ಇಲ್ಲಿಗೆ ಬರುತ್ತಾನೆ. ಎಷ್ಟೋ ಬಾರಿ ತಾನು ಕೆಟ್ಟ ಸಂಗ ಮತ್ತು ಕೆಟ್ಟ ಚಟಗಳನ್ನು ಬಿಡುತ್ತೇನೆ ಎಂದು ಮಾತು ಕೊಟ್ಟಿದ್ದಾನೆ; ಆದರೆ ಒಮ್ಮೆ ಕೂಡ ಆತ ತನ್ನ ಮಾತು ಉಳಿಸಿಕೊಂಡಿಲ್ಲ, ಆದರೂ ಆತ ನಾಳೆ ಬಂದು ತನ್ನನ್ನು ತಾನು ಸುಧಾರಿಸಿಕೊಳ್ಳುವೆ ಎಂದು ಮಾತು ಕೊಟ್ಟರೆ ನಾನೇಕೆ ಸಿಟ್ಟಾಗಬೇಕು? ಆತ ತನ್ನ ಮಾತು ಉಳಿಸಿಕೊಳ್ಳುವುದನ್ನು ನಾನು ಪ್ರೋತ್ಸಾಹಿಸಬೇಕು. ಆಗ ಮಾತ್ರ ಆತ ಸುಧಾರಣೆಗೊಳ್ಳುತ್ತಾನೆ ಅನ್ನುವ ನಂಬಿಕೆ ಇರುತ್ತದೆ. ಅದೇ ರೀತಿ ಭಾರತದ ಮುಸ್ಲಿಮರು ಈ ದೇಶಕ್ಕೆ ನಿಷ್ಠೆ ತೋರಿಸುತ್ತೇವೆ ಎಂದಾಗ ನಾವು ಅವರನ್ನು ನಂಬಬೇಕು.' (ತಾನು ಯಾಕೆ ಮುಸ್ಲಿಮರನ್ನು ನಂಬುತ್ತೇನೆ ಎಂಬುದನ್ನು ತಮ್ಮ ಮಗನ ಉದಾಹರಣೆ ಸಮೇತ ಗಾಂಧೀಜಿ ವಿವರಿಸಿದ ಪ್ರಸಂಗ.)

ಹಿಂದೂಗಳು ಮತ್ತು ಮುಸ್ಲಿಮರು ಸದ್ಯಕ್ಕೆ ಎರಡು ಬೇರೆ ಬೇರೆ ಪ್ರಾಂತ್ಯಗಳಿಗೆ ಸೇರಿದ್ದರೂ, ಅವರು ಯಾವತ್ತು ಸಹೋದರರ ಹಾಗೆ ಬಾಳುತ್ತಾರೋ, ಅವತ್ತೇ ನಮಗೆ ಸಂತೋಷದ ದಿನ...

...ನಾವು ಅಲ್ಪಸಂಖ್ಯಾತರನ್ನು ಪ್ರೀತಿಸಿದರೆ ಅವರೂ ನಮಗೆ ಪ್ರೀತಿಯನ್ನು ವಾಪಸ್ಸು ನೀಡುತ್ತಾರೆ. ನಾವು ಕೋಟಿಗಟ್ಟಲೆ ಅಲ್ಪಸಂಖ್ಯಾತರನ್ನು ಗುಲಾಮರನ್ನಾಗಿ ಮಾಡಿಕೊಳ್ಳಲು ಆಗುವುದೆ? ನಾವು ಏನನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಅಂದರೆ, ಯಾರು ಬೇರೆಯವರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವುದಕ್ಕೆ ಹೋಗುತ್ತಾನೋ ಸ್ವತಃ ಆತನೇ ಒಬ್ಬ ಗುಲಾಮ ಆಗುತ್ತಾನೆ...

...ಈಗ ಭಾರತ ಒಡೆದಿದ್ದರೂ ಕಾಂಗ್ರೆಸ್ ಒಂದು ದೇಶೀಯ ಸಂಘಟನೆ ಆಗಬೇಕು. ಕಾಂಗ್ರೆಸ್ ಬರೀ ಹಿಂದೂಗಳ ಸಂಘಟನೆ ಆಗಬಾರದು. ಭಾರತದ

ಮುಸ್ಲಿಮರು ತಾವು ಯಾವತ್ತೂ ಈ ದೇಶದವರಲ್ಲ ಎಂದು ಎಂದಿಗೂ ಹೇಳಿಲ್ಲ. ಭಾರತದ ಒಕ್ಕೂಟವನ್ನು ಸ್ಥಾಪಿಸುವುದಕ್ಕೆ ಎಲ್ಲ ಧರ್ಮಗಳ ಜನರೂ ಒಗ್ಗೂಡಿದರು. ಹಾಗೆಯೇ ಪಾಕಿಸ್ತಾನದ ಧ್ವಜದ ವಿಷಯಕ್ಕೆ ಬಂದಾಗ, ಆ ಧ್ವಜ ಯಾವುದೇ ಬಣ್ಣ ಮತ್ತು ಶೈಲಿ ಹೊಂದಿರಲಿ, ಅದು ಪಾಕಿಸ್ತಾನದ ಎಲ್ಲ ಜನರನ್ನು ಪ್ರತಿನಿಧಿಸಿದರೆ, ನಾನು ಅದಕ್ಕೆ ಗೌರವ ಸಲ್ಲಿಸುವೆ. ಹಾಗೆಯೇ ಎಲ್ಲ ಭಾರತೀಯರೂ ಅದಕ್ಕೆ ಗೌರವ ಸಲ್ಲಿಸಬೇಕು. ಭಾರತ ಮತ್ತು ಪಾಕಿಸ್ತಾನ ಯಾವತ್ತೂ ಕೂಡ ಶತ್ರುಗಳಾಗಬಾರದು...

ಇನ್ನು, ಹಿಂದೂ-ಮುಸ್ಲಿಂ ಒಗ್ಗಟ್ಟಿನ ಬಗ್ಗೆ: ಈಗ ಮುಸ್ಲಿಂ ಲೀಗಿನ ಸದಸ್ಯರು ಕೂಡ ನಾವೆಲ್ಲ ಸಹೋದರರು ಎಂದು ಹೇಳುತ್ತಿದ್ದಾರೆ. ಈ ಎರಡೂ ಸಮುದಾಯಗಳು ಖಾದಿಯನ್ನು ಕೈಬಿಡದಿರಲಿ, ಗ್ರಾಮ ಕೈಗಾರಿಕೆಗಳಿಗೆ ನಷ್ಟ ಮಾಡದೇ ಇರಲಿ ಎಂದು ನಾವೆಲ್ಲ ಆಶಿಸೋಣ. ಹಾಗೆಯೇ ಹಿಂದೂಸ್ತಾನಿ ಭಾಷೆಯನ್ನು ನಾವೆಲ್ಲ ಹೇಗೆ ಬಿಡುವುದು? ಹಿಂದೂಗಳು ಅಸ್ಪೃಶ್ಯತೆ ಮತ್ತು ಜಾತಿ ಭೇದಭಾವ ಬಿಟ್ಟು ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳಬೇಕಾಗಿದೆ; ಮತ್ತು ಹಿಂದೂಗಳ ಬಗೆಗಿನ ದ್ವೇಷವನ್ನು ಬಿಟ್ಟು ಮುಸ್ಲಿಮರು ಕೂಡ ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳಬೇಕಾಗಿದೆ...

...ಭಾರತ ಮತ್ತು ಪಾಕಿಸ್ತಾನ ಪ್ರಾಂತ್ಯಗಳು ಸೌಹಾರ್ದತೆಯಿಂದ ಮತ್ತು ಸ್ನೇಹಿತರಾಗಿ ಬಾಳಬೇಕಾದರೆ, ಕೋಮುವಾದದ ಅಬ್ಬರ ಹಾಗೂ ಉದ್ದೇಶ ಎರಡನ್ನೂ ಮಟ್ಟ ಹಾಕಬೇಕು. ಹಾಗೆಯೇ ಈಗಾಗಲೇ ಕೋಮುವಾದಿ ತಳಹದಿಯ ಮೇಲೆ ದೇಶಗಳನ್ನು ಆಯ್ಕೆ ಮಾಡಿಕೊಂಡವರು ತಮ್ಮ ತೀರ್ಮಾನಗಳನ್ನು ಮರುವಿಮರ್ಶೆ ಮಾಡಿಕೊಳ್ಳಬೇಕು.

...ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ಆಜನ್ಮ ಶತ್ರುಗಳಾಗಿ ಯುದ್ಧ ಮಾಡಿಕೊಂಡರೆ ಆ ಯುದ್ಧ ಎರಡೂ ದೇಶಗಳನ್ನು ಕೆಡಿಸುತ್ತದೆ ಮತ್ತು ನಾವು ಕಷ್ಟಪಟ್ಟು ಗೆದ್ದ ಸ್ವಾತಂತ್ರ್ಯವೂ ಕಳೆದು ಹೋಗುತ್ತದೆ...

ನಾನು ಹಿಂದೂಗಳಿಗೆ ಹೇಗೆ ಸ್ನೇಹಿತನೋ, ಹಾಗೆಯೇ ಮುಸ್ಲಿಮರ ಮತ್ತು ಎಲ್ಲ ಧರ್ಮಗಳ ಜನರ ಸ್ನೇಹಿತ ಕೂಡ. ಈ ದೇಶದ ಪ್ರತಿಯೊಬ್ಬ ಮುಸ್ಲಿಮನೂ ತನ್ನ ಸಹೋದರ- ಸಹೋದರಿಯರೊಡನೆ ಶಾಂತಿ ಮತ್ತು ಭದ್ರತೆಯಿಂದ ಮನೆಯಲ್ಲಿ ವಾಸಿಸುವ ತನಕ ನಾನು ವಿಶ್ರಮಿಸುವುದಿಲ್ಲ. ಮತ್ತೆ ಹಿಂದೂಗಳು, ಸಿಖ್ಖರು ಸಹಜ ವಾಗಿಯೇ ಬಾಳುವ ಹಾಗೆ ಆಗಬೇಕು; ಎಲ್ಲ ಸಮುದಾಯಗಳೂ ಸಹೋದರರ ಹಾಗೆ ಜೀವಿಸಬೇಕು...

ನಾನು ಹನ್ನೆರಡು ವರ್ಷದ ಬಾಲಕನಾಗಿದ್ದಾಗ ಒಂದು ಕನಸು ಕಂಡಿದ್ದೆ. ಅದರಲ್ಲಿ ನಾನು ಈ ದೇಶವನ್ನು ಒಂದು ಶಾಂತಿ ತುಂಬಿದ ತೋಟವಾಗಿ, ಮತ್ತು

ಆ ತೋಟದಲ್ಲಿ ಮುಸ್ಲಿಮರು, ಹಿಂದೂಗಳು ಹಾಗೂ ಎಲ್ಲರೂ ಒಟ್ಟಾಗಿ ಸಹೋದರರಾಗಿ, ಸ್ನೇಹಿತರಾಗಿ ಬಾಳುವ ಹಾಗೆ ಕಲ್ಪಿಸಿಕೊಂಡಿದ್ದೆ. ಈಗ ನೀವೆಲ್ಲರೂ ನನ್ನ ಕನಸನ್ನು ನನಸು ಮಾಡುವುದಕ್ಕೆ ಪ್ರಯತ್ನಿಸಬೇಕು...

ನಮ್ಮ ಆಡಳಿತಗಾರರ ಮತ್ತು ನಮ್ಮ ಒಳ್ಳೆಯತನ, ಹಾಗೂ ಹಿಂದೂಗಳ ಮತ್ತು ಸಿಖ್ಖರ ಒಳ್ಳೆಯತನ ಯಾವುದರಲ್ಲಿ ಅಡಗಿದೆ ಅಂದರೆ, ಮುಸ್ಲಿಮರನ್ನು 'ದೇಶ ಬಿಟ್ಟು ಹೋಗಬೇಡಿ' ಎಂದು ಕೇಳಿಕೊಳ್ಳುವುದರಲ್ಲಿದೆ. ಮುಸ್ಲಿಮರಿಗೆ ಯಾವ ರೀತಿ ಧೈರ್ಯ ತುಂಬಬೇಕು ಎಂದರೆ ಅವರನ್ನು ಯಾರೂ ಮುಟ್ಟಲಿಕ್ಕೆ ಆಗುವುದಿಲ್ಲ ಎಂದು ಅವರಿಗೆ ದೃಢವಾಗಬೇಕು. ನಾವು ಮುಸ್ಲಿಮರನ್ನು ಭಾರತದಲ್ಲಿ ಪ್ರೀತಿಯಿಂದ ನಡೆಸಿಕೊಂಡಿದ್ದೇ ಆದರೆ, ಗಡಿನಾಡಿನ ಅಫ್ರೀದಿಗಳು ಮತ್ತು ಪಂಜಾಬಿನಲ್ಲಿ ಇರತಕ್ಕಂಥ ಮುಸ್ಲಿಮರು ನಮ್ಮ ಜನರಿಗೆ ಓಡಿಹೋಗದಂತೆ ಹೇಳುವರು. ನಮ್ಮ ಒಳ್ಳೆಯ ನಡತೆಯಿಂದ ಅದು ಜಾರಿಯಾಗುತ್ತದೆ. ನಾನು ಹೇಳುತ್ತಿದ್ದೇನೆ ಅಂತಲೋ, ಭಯ ದಿಂದಲೋ ಈ ಕೆಲಸ ಮಾಡದೆ, ಅದನ್ನು ನಿಮ್ಮ ಹೃದಯದ ಆಳದಿಂದ ಮಾಡಿರಿ. ಹಾಗಾದಾಗ ಯಾವ ಮುಸ್ಲಿಮನೂ ನಮಗೆ ಯಾವುದೇ ಕೇಡು ಮಾಡುವುದಿಲ್ಲ. ಅಕಸ್ಮಾತ್ ಮಾಡಿದರೂ, ಮೇಲೆ ದೇವರಿದ್ದಾನೆ. ದೇವರು ಸರ್ವಶಕ್ತ. ಕೊನೆಯಲ್ಲಿ ಎಲ್ಲ ಮಾನವರೂ ದೇವರಿಗೆ ಉತ್ತರಿಸಲೇಬೇಕು. ದೇವರು ನಮ್ಮನ್ನು ಸಂರಕ್ಷಿಸುತ್ತಾನೆ. ಇದರ ಬಗ್ಗೆ ನನ್ನ ಹೃದಯದಲ್ಲಿ ಯಾವುದೇ ಅನುಮಾನವಿಲ್ಲ.

ಕೆಲಜನರು ಮುಸ್ಲಿಮರನ್ನು ನಾಲಾಯಕ್ಕು ಎಂದು ಪರಿಗಣಿಸಿದರೆ, ಅದು ಮಹಾಪಾಪವಾಗುತ್ತದೆ. ಯಾರನ್ನೂ ಹೊರಗಟ್ಟಬಾರದು ಎಂಬುದು ನಮ್ಮ ಅರಿವಿಗೆ ಬಂದು, ಅದು ನಮ್ಮ ಆದ್ಯ ಕರ್ತವ್ಯ ಆಗಬೇಕು. ಮೂಲಭೂತವಾದಿಗಳೆಲ್ಲ 'ಮುಸ್ಲಿಮರೆಲ್ಲರೂ ಹೊರಗೆ ಹೋಗಬೇಕು, ಇಲ್ಲ ಸಾಯಬೇಕು' ಎಂದು ಹೇಳು ತ್ತಿದ್ದಾರೆ. ನಾನು ಮುಸ್ಲಿಮರ ಕಗ್ಗೊಲೆಗೆ ಸಾಕ್ಷಿ ಆಗುವೆನೋ ಎಂದು ಕೂಡ ಕೇಳುತ್ತಿದ್ದಾರೆ. ಆದರೆ ನಾನು ಏನು ಮಾಡುವೆ ಎಂದು ಆಗಲೇ ಹೇಳಿರುವೆ. ನಾನು ನನ್ನ ಗುರಿ ಸಾಧಿಸುವೆ, ಇಲ್ಲಾ ಸಾಯುವೆ. ಭಾರತದಲ್ಲಿ ಇನ್ನೂ ೩೫೦ ಮಿಲಿಯನ್ ಮುಸ್ಲಿಮರು ಇದ್ದಾರೆ ಎನ್ನುವುದು ಬಹಳ ಸಂತಸದ ವಿಚಾರ. ಎಷ್ಟು ಜನ ಹೊರಗೆ ಹೋಗಿದ್ದಾರೋ, ಮತ್ತು ಎಷ್ಟು ಜನ ವಾಪಸ್ಸು ಬರುವರೋ ಎಂಬುದು ಇನ್ನೂ ಗೊತ್ತಿಲ್ಲ. ಆದರೆ ಬರುವವರೆಲ್ಲರನ್ನೂ ನಾವು ಒಳಗೆ ಬಿಟ್ಟು ಕೊಳ್ಳಬೇಕು. ಮುಸ್ಲಿಮರ ಬಗ್ಗೆ ನಾವು ಸಿಟ್ಟುಗೊಳ್ಳಬಾರದು. ಆ ದ್ವೇಷದ ದಿನಗಳು ಹೋಗಿ, ಅವರೆಲ್ಲರನ್ನೂ ಸಹೋದರರ ಹಾಗೆ ಕಾಣುವಂತಾಗಬೇಕು...

ನಮ್ಮ ನಡುವೆ ಯಾರಾದರೂ ಮೋಸಗಾರರಿದ್ದರೆ ಅವರನ್ನು ತಡೆಯುವ ಸಾಮರ್ಥ್ಯ ಸರ್ಕಾರಕ್ಕಿದೆ. ಆದರೆ ಅಮಾಯಕ ಮುಸ್ಲಿಂ ಮಕ್ಕಳು, ಮಹಿಳೆಯರು

ಮತ್ತು ಮುದುಕರನ್ನು ನೋಯಿಸಿದ್ದಕ್ಕಾಗಿ ನಮಗೇ ನಾಚಿಕೆಯಾಗಬೇಕು. ಈ ಥರದ ಕೃತ್ಯಗಳು ನಿಲ್ಲಲಿ ಎಂದು ಆಶಿಸೋಣ. 'ಕಿರ್ಪಾಣ್'(ಸಿಖ್ಖರ ಪವಿತ್ರ ಸಣ್ಣ ಕತ್ತಿ) ಪವಿತ್ರವಾದದ್ದು. ಮತ್ತು ಅದನ್ನು ಅಸಹಾಯಕರ ಹಾಗೂ ದುರ್ಬಲರ ರಕ್ಷಣೆಗೋಸ್ಕರ ಬಳಸಬೇಕು. ಸಿಖ್ಖರ ಹತ್ತನೆಯ ಮತ್ತು ಕೊನೆಯ ಗುರು ಗೋವಿಂದ್ ಸಿಂಗ್ ಕತ್ತಿ ಇಟ್ಟುಕೊಂಡಿದ್ದರು. ಆದರೆ ದುರ್ಬಲರನ್ನು ಮಟ್ಟ ಹಾಕುವುದಕ್ಕೆ ಯಾವತ್ತೂ ಅದನ್ನು ಬಳಸಲಿಲ್ಲ. ತಮಗೆ ತಾವೇ ಎಷ್ಟೋ ನಿರ್ಬಂಧಗಳನ್ನು ಅವರು ಹಾಕಿಕೊಂಡಿದ್ದರು. ಗುರು ಗೋವಿಂದ್‌ಸಿಂಗರಿಗೆ ಎಷ್ಟೋ ಮುಸ್ಲಿಂ ಶಿಷ್ಯರಿದ್ದರು. ಹಾಗೆಯೇ ಗುರು ನಾನಕರನ್ನೂ ಒಳಗೊಂಡಂತೆ ಇನ್ನಿತರ ಗುರುಗಳಿಗೂ ಮುಸ್ಲಿಂ ಶಿಷ್ಯಂದಿರಿದ್ದರು. ನಿಮ್ಮ ಧೈರ್ಯ, ತಾಕತ್ತು ಯಾವಾಗ ಪರೀಕ್ಷೆಗೆ ಒಳಪಡುತ್ತದೆ ಅಂದರೆ, ಮುಸ್ಲಿಮರನ್ನೂ ಒಳಗೊಂಡಂತೆ ಎಲ್ಲ ಸಮುದಾಯದವರೂ ನಿಮ್ಮ ನಿಷ್ಠಾವಂತ ಸ್ನೇಹಿತರಾದಾಗ ಮಾತ್ರ.

ನಾವು ಧೈರ್ಯವಂತರಾಗಬೇಕು, ಒಳ್ಳೆಯವರಾಗಬೇಕು. ಮುಸ್ಲಿಮರು ಭಾರತದಲ್ಲಿ ಇರಬಾರದು ಎಂದು ಹೇಡಿ ಮಾತ್ರ ಹೇಳುವನು. ಭಾರತದಲ್ಲಿ ಮುಸ್ಲಿಮರು ಭಯದಿಂದ, ಅತ್ತ ಪಾಕಿಸ್ತಾನದಲ್ಲಿ ಹಿಂದೂಗಳು, ಸಿಖ್ಖರು ಭಯದಿಂದ ಬಾಳುವ ಸ್ಥಿತಿಗೆ ನಮ್ಮನ್ನು ನಾವು ಯಾಕೆ ತಂದುಕೊಂಡಿದ್ದೇವೆ? ನಾವೆಲ್ಲ ಭಾರತದಲ್ಲಿ ಮತ್ತು ಪಾಕಿಸ್ತಾನದಲ್ಲಿ ಎಲ್ಲರೂ ಶಾಂತಿಯಿಂದ ಬಾಳಬಹುದು ಎಂದು ಸುಮ್ಮನೆ ಬಡಾಯಿ ಕೊಚ್ಚುತ್ತಿದ್ದೇವೆ ಅಷ್ಟೇ. ನಾನು ಸರ್ಕಾರಿ ಅಧಿಕಾರಿಗಳಿಗೆ ಏನು ಹೇಳುತ್ತೇನೆಂದರೆ, ನೀವು ಆಶ್ವಾಸನೆಗಳನ್ನು ನೆರವೇರಿಸಬೇಕು. ಸೈನ್ಯ, ಪೋಲೀಸ್ ಮತ್ತು ಎಲ್ಲ ವಲಯಗಳ ಅಧಿಕಾರಿಗಳು ಒಳ್ಳೆಯವರಾಗಬೇಕು. ನಾವು ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳಬೇಕು. ಆಗಲೇ ಅಭಿವೃದ್ಧಿ ಆಗುವುದು. ಇಲ್ಲವೆಂದರೆ, ನಮ್ಮ ಕೈಗೆ ದಕ್ಕಿರುವ ಅಧಿಕಾರದ ಕೀಲಿಕೈ ನಮ್ಮ ಕೈಯಿಂದ ಜಾರಿ ಹೋಗಬಹುದು.

ಒಂದು ಅಲ್ಪಸಂಖ್ಯಾತ ಸಮುದಾಯ ಎಷ್ಟೇ ಸಣ್ಣದಿರಲಿ, ಅದು ತನ್ನ ನೆಚ್ಚಿನ ವಸ್ತುಗಳನ್ನು ಮತ್ತು ತನ್ನ ಗೌರವವನ್ನು ಇಟ್ಟುಕೊಳ್ಳುವುದಕ್ಕೆ ಭಯ ಪಡಬಾರದು. ಒಬ್ಬ ಮನುಷ್ಯನಿಗೆ ತನ್ನ ಸೃಷ್ಟಿಕರ್ತನ ಅರಿವಿದ್ದರೆ, ಹಾಗೂ ಆ ಸೃಷ್ಟಿಕರ್ತನ ಪ್ರತಿರೂಪ ತಾನು ಎನ್ನುವುದು ಗೊತ್ತಾದರೆ, ಈ ಭೂಮಿಯ ಮೇಲೆ ಇರುವ ಯಾವ ಶಕ್ತಿಯೂ ಆ ವ್ಯಕ್ತಿಯ ಸ್ವಮರ್ಯಾದೆಯನ್ನು ಕಿತ್ತುಕೊಳ್ಳಲು ಆಗುವುದಿಲ್ಲ. ದಕ್ಷಿಣ ಆಫ್ರಿಕಾದ ಟ್ರಾನ್ಸ್‌ವಾಲ್‌ನ ಒಂದು ಬಲಿಷ್ಠ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಒಬ್ಬ ಆತ್ಮೀಯ ಇಂಗ್ಲಿಷ್ ಸ್ನೇಹಿತ ಹೇಳಿದ್ದ– 'ನನಗೆ ಅಲ್ಪಸಂಖ್ಯಾತರ ಜೊತೆ ಇರುವುದಕ್ಕೆ ಇಷ್ಟ, ಯಾಕೆಂದರೆ ಒಂದು ಅಲ್ಪಸಂಖ್ಯಾತ ಸಮುದಾಯ ಸಾಮಾನ್ಯವಾಗಿ ತಪ್ಪು ಮಾಡುವುದಿಲ್ಲ. ತಪ್ಪು ಮಾಡಿದರೂ ತಿದ್ದಿಕೊಳ್ಳಬಹುದು. ಆದರೆ, ಬಹು

ಸಂಖ್ಯಾತರಿಗೆ ಅಧಿಕಾರದ ಅಮಲು ಏರಿದರೆ ಅವರನ್ನು ತಿದ್ದುವುದು ಭಾಳ ಕಷ್ಟ.' ಅಲ್ಪಸಂಖ್ಯಾತ ಸ್ಥಾನದ ಬೆಲೆಯನ್ನು ಭಾರತದ ಮುಸ್ಲಿಮರು ಅರಿತುಕೊಂಡರೆ ಇಸ್ಲಾಮ್ ಧರ್ಮದ ಅದ್ಭುತಗಳನ್ನು ಮುಸ್ಲಿಮರು ತಮ್ಮದೇ ರೀತಿಯಲ್ಲಿ ತೋರಿಸ ಬಹುದು. ಅವರು ಏನನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಅಂದರೆ, ಇಸ್ಲಾಮಿನ ಅದ್ಭುತ ದಿನಗಳು ಪ್ರವಾದಿ ಮಹಮ್ಮದರ ಸಮುದಾಯ ಮೆಕ್ಕಾದಲ್ಲಿ ಒಂದು ಅಲ್ಪಸಂಖ್ಯಾತ ಸಮುದಾಯ ಆಗಿದ್ದ ಕಾಲದವು ಎಂಬುದನ್ನು...

ಈಗ [ಕ್ರಿಸ್‌ಮಸ್ ಸಂದರ್ಭದಲ್ಲಿ] ನಾವು ದ್ವೇಷದಲ್ಲಿ ತೊಡಗಿ ಮನಸ್ಸನ್ನು ಕೆಡಿಸಿಕೊಳ್ಳಬಾರದು... ಭಾರತದಲ್ಲಿನ ಮತ್ತು ಹೊರದೇಶಗಳಲ್ಲಿನ ಕ್ರಿಶ್ಚಿಯನ್ನರಿಗೆ ಶುಭ ಹಾರೈಸುತ್ತಾ ನಾನು ಹೇಳುವ ಮಾತೇನೆಂದರೆ, ಅವರೆಲ್ಲ ಸ್ವ-ನಿಯಂತ್ರಣ ಸಾಧಿಸಬೇಕು, ಯೇಸುಕ್ರಿಸ್ತನ ಹಾದಿಯನ್ನು ಅನುಕರಿಸಬೇಕು. ಚರ್ಚ್ ನಮ್ಮಿಂದ ಹೊರಗಿಲ್ಲ, ಅದು ನಮ್ಮ ಒಳಗೇ ಇದೆ. ನಮ್ಮ ದೇಹವೇ ಚರ್ಚ್. ಅಲ್ಲೇ ದೇವರು ಇದ್ದಾನೆ. ಕ್ರಿಶ್ಚಿಯನ್ನರು ಚಿಂತಿಸಬೇಕಿಲ್ಲ. ಕ್ರಿಸ್ತನ ತ್ಯಾಗದ ದಾರಿಯಲ್ಲಿ ಅವರೆಲ್ಲ ಸಾಗಿದರೆ, ಅವರ ಧರ್ಮವನ್ನು ಕಿತ್ತುಕೊಳ್ಳುವುದಕ್ಕೆ ಯಾರಿಂದಲೂ ಆಗುವುದಿಲ್ಲ...

ಮುಸ್ಲಿಮರನ್ನು ಕುರಿತು: 'ನೀವು [ಹಿಂದೂಗಳು ದಾಳಿ ಮಾಡುತ್ತಿದ್ದಾರೆ ಎಂದು] ಹೇಳುತ್ತಿರುವುದಕ್ಕೆ ಸಾಕ್ಷಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಮೇಲಾಗಿ ಮುಸ್ಲಿಮರು ಕೂಡ ತಮ್ಮ ಹತ್ತಿರ ಆಯುಧಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುತ್ತಿದ್ದಾರೆ ಎಂಬ ದೂರು ಇದೆ. ಹಾಗಾಗಿ ಮೊದಲು ನೀವು ಮುಸ್ಲಿಂ ಸಹೋದರರಿಗೂ ಕೂಡ ಆಯುಧಗಳನ್ನು ಬಿಡುವಂತೆ ಹೇಳಬೇಕು; ಮತ್ತು ಆಯುಧಗಳನ್ನೆಲ್ಲ ತಂದು ನನ್ನ ಬಳಿ ಇಡಬೇಕು ಎಂದು ಎಲ್ಲರಿಗೂ ಹೇಳಬೇಕು. ಹಾಗೆಯೇ ಸರಕಾರವೇನಾದರೂ ಮುಸ್ಲಿಮರಿಗೆ ರಕ್ಷಣೆ ಕೊಡಲಿಕ್ಕೆ ಆಗದಿದ್ದರೆ ಮುಸ್ಲಿಮರು ಸಾಯುವುದಕ್ಕೆ ಮುಂಚೆ ನಾನೇ ಸಾಯುವೆ.'

ಸಿಖ್ಖರನ್ನು ಕುರಿತು: 'ಸಿಖ್ಖರು ಅನಗತ್ಯ ದ್ವೇಷ, ಸಿಟ್ಟನ್ನು ಮಟ್ಟ ಹಾಕುವುದರಲ್ಲಿ ಯಶಸ್ವಿಯಾಗಿದ್ದಾರೆ. ಇದೇ ಗುರು ಗೋವಿಂದ್‌ಸಿಂಗ್ ಮಹಾರಾಜರ ನಿಜವಾದ ಬೋಧನೆ. 'ಒಬ್ಬ ಸಿಖ್ ಒಂದೂವರೆ ಲಕ್ಷ ಜನರಿಗೆ ಸಮ' ಎಂದು ಅವರು ಹೇಳುತ್ತಾರೆ. ಸಿಖ್ಖರಿಗೆ ಜಯವಾಗಲಿ.'

(ಗಾಂಧೀಜಿ ತಮ್ಮ ಬದುಕಿನ ಕೊನೆಯ ೨೦೦ ದಿನಗಳಲ್ಲಿ ಆಡಿದ ಮಾತುಗಳ ಸಂಗ್ರಹ. ವಿ. ರಾಮಮೂರ್ತಿ ಸಂಪಾದಿಸಿದ 'ಮಹಾತ್ಮ ಗಾಂಧಿ: ದಿ ಲಾಸ್ಟ್ ೨೦೦ ಡೇಸ್' ಪುಸ್ತಕದಿಂದ. ಪ್ರಕಾಶಕರು: ಟಿ.ಎಚ್.ಜಿ. ಪಬ್ಲಿಷಿಂಗ್ ಪ್ರೈವೇಟ್ ಲಿ. ಚೆನ್ನೈ.)

ಕನ್ನಡಕ್ಕೆ: ಎಚ್. ಎಸ್. ಶೋಯಿಂಕಾ

೭೧

ಅಲ್ಪಸಂಖ್ಯಾತರ ಅಭಿಪ್ರಾಯ

ಪಾರ್ಸಿಗಳು, ಕ್ರಿಶ್ಚಿಯನ್ನರು ಅಥವಾ ಯಹೂದಿಗಳ ವಿರುದ್ಧ ಇರುವ ನಮ್ಮ ಬಿಗುಮಾನವನ್ನು ಬಿಡದಿದ್ದರೆ ನಮ್ಮ ಉದ್ದಿಶ್ಯದಲ್ಲಿ ನಾವು ಸಫಲರಾಗುವುದಿಲ್ಲ. ಅಲ್ಪಸಂಖ್ಯಾತರಿಗೆ ರಕ್ಷಣೆ ಒದಗಿಸುವುದು ಎಂದರೆ ಅವರು ನಮ್ಮ ಅಭಿಪ್ರಾಯಗಳನ್ನು ಒಪ್ಪಬೇಕು ಎಂದರ್ಥವಲ್ಲ. ಹಾಗೆ ಒತ್ತಾಯ ಮಾಡಿ ಕೊಡುವ ರಕ್ಷಣೆಯು ರಕ್ಷಣೆಯೇ ಅಲ್ಲ. ನಿಜವಾದ ರಕ್ಷಣೆಯೆಂದರೆ ಅಲ್ಪಸಂಖ್ಯಾತರು ಮತ್ತು ಯಾವುದೇ ವಿರೋಧ ಪಕ್ಷಗಳು ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿಯೂ ಸ್ವತಂತ್ರವಾಗಿರುವುದು. ದೇಶದಲ್ಲಿ ನಿಜವಾದ ಅಭಿಪ್ರಾಯ ಸ್ವಾತಂತ್ರ್ಯವಿರಬೇಕಾದರೆ ನಾವು ಅತಿ ಜಾಗೃತಿಯಿಂದ ಅಲ್ಪಸಂಖ್ಯಾತರ ಹಕ್ಕುಬಾಧ್ಯತೆಗಳನ್ನು ರಕ್ಷಿಸಬೇಕು. ಸಣ್ಣ ಮಗು ಕೂಡ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ಹೊಂದಿರಬೇಕು. ಬಹುಸಂಖ್ಯಾತ ಜನ ಅಲ್ಪಸಂಖ್ಯಾತರ ಮೇಲೆ ತಮ್ಮ ಅಭಿಪ್ರಾಯಗಳನ್ನು ಹೇರುವುದು, ಅವರ ಸ್ವಾತಂತ್ರ್ಯವನ್ನು ಅಪಹರಿಸುವುದು ಅಥವಾ ಮೊಟಕು ಮಾಡುವುದು ಅನಾಗರಿಕ ಕೃತ್ಯ.

ಸ್ವತಂತ್ರ ಭಾರತದಲ್ಲಿ ನಮಗೆ ಬೇಕಾಗಿರುವುದು ಎಲ್ಲ ಅಭಿಪ್ರಾಯಗಳೂ ಲಭ್ಯವಿರುವ ಮುಕ್ತ ವಾತಾವರಣ. ಅಲ್ಪಸಂಖ್ಯಾತರಿಂದ ಬಂದ ಅಭಿಪ್ರಾಯಗಳೆಂದ ಮಾತ್ರಕ್ಕೆ, ಅವು ತಮ್ಮ ಮನ್ನಣೆ ಕಳೆದುಕೊಳ್ಳಬೇಕಾಗಿಲ್ಲ. ಬಹುಸಂಖ್ಯಾತರಿಂದ ಬರುವ ಎಷ್ಟೋ ಆಲೋಚನೆಗಳಿಗಿಂತ ಅಲ್ಪಸಂಖ್ಯಾತರ ಆಲೋಚನೆಗಳು ಅರ್ಥಗರ್ಭಿತವಾಗಿರಲು ಸಾಧ್ಯ. ಅಂತಹ ಸಂದರ್ಭಗಳಲ್ಲಿ ನಾವು ಅಲ್ಪಸಂಖ್ಯಾತರ ಮಾತುಗಳಿಗೆ ಮನ್ನಣೆ ಕೊಡುವುದು ಅಗತ್ಯ. ಬಹುಸಂಖ್ಯಾತರ ಅಭಿಪ್ರಾಯಗಳಿಗೆ ಬಹುಮತದ ಬೆಂಬಲವಿರಬಹುದು. ಆದರೆ ಅವು ಎಷ್ಟೋ ಬಾರಿ ಬಂದೂಕಿನ

ನಳಿಕೆಯಿಂದ ಬರುವ ಗುಂಡಿನ ಹಾಗೆ ಬರೀ ಶಕ್ತಿಯನ್ನು ಮಾತ್ರ ಹೊಂದಿರುತ್ತವೆ; ಅರ್ಥವನ್ನಲ್ಲ. ನಾವು ಸ್ವಾತಂತ್ರ್ಯ, ಅಹಿಂಸೆ, ಸತ್ಯಗಳಲ್ಲಿ ಪ್ರೀತಿಯುಳ್ಳ ಜನರಾಗಿದ್ದರೆ ಪಾರ್ಸಿ ಅಥವಾ ಕ್ರಿಶ್ಚಿಯನ್ ಸಹೋದರರ ಬಗ್ಗೆ ಸಹನೆಯಿಂದಿರುವುದು ಅವಶ್ಯಕ. ಪಾರ್ಸಿ ಅಥವಾ ಕ್ರಿಶ್ಚಿಯನ್ನರ ಬಗ್ಗೆ ಅಸಹನೆಯಿಂದಿರುವ ನಮ್ಮ ಪ್ರವೃತ್ತಿಯು ಹಿಂದೂ–ಮುಸ್ಲಿಂ ಐಕ್ಯತೆಯ ಮೇಲೆ ಕೂಡ ಕೆಟ್ಟ ಪರಿಣಾಮವನ್ನು ಬೀರಬಹುದು.

ಎಲ್ಲಿ ಅಲ್ಪಸಂಖ್ಯಾತರು ನೆಮ್ಮದಿಯಿಂದ ಬಾಳುತ್ತಾರೋ ಆ ದೇಶ ಮಾತ್ರ ನೆಮ್ಮದಿಯಿಂದ ಇರುವುದು.

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: ಬಿ.ಎ. ಶ್ರೀಧರ

೭೨

ಗೋಹತ್ಯೆ, ಮುಸ್ಲಿಮರು, ಹಿಂದೂಗಳು

ಮನುಷ್ಯರ ಸಾತ್ವಿಕತೆಯಲ್ಲಿ ನನಗೆ ಅಪಾರ ನಂಬಿಕೆಯುಂಟು. ಹಿಂದೂ– ಮುಸ್ಲಿಮರ ನಡುವಿನ ಘರ್ಷಣೆಗಳಿಗೆ ಕಾರಣವಾಗಿರುವುದು ಗೋಹತ್ಯೆಯಂಥ ವಿಷಯಗಳು. ಇವುಗಳ ಪರಿಹಾರೋಪಾಯ ಹಿಂದೂಗಳ ಕೈಯಲ್ಲೇ ಇದೆ. ಹಸುವಿನ ಸಂರಕ್ಷಣೆ ಹಿಂದೂ ಧರ್ಮದ ಅತಿಮುಖ್ಯ ಸಂಗತಿ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಹಿಂದೂಗಳು ಗೋಹತ್ಯೆಯ ನೆಪದಲ್ಲಿ ಮುಸ್ಲಿಮರ ಮೇಲೆ ದ್ವೇಷ ಸಾಧಿಸುವುದು ಏಕೆಂದು ಮಾತ್ರ ನನಗೆ ಅರ್ಥವಾಗುವುದಿಲ್ಲ. ಗೋಮಾಂಸ ತಿನ್ನುವ ಇಂಗ್ಲಿಷರ ಬಗ್ಗೆ ಎಂದೂ ಚಕಾರವೆತ್ತದವರು ಮುಸಲ್ಮಾನರ ಮೇಲೆ ಮಾತ್ರ ಎಗರಿ ಬೀಳುತ್ತಾರೆ...

ಗೋವಿನ ಹೆಸರಿನಲ್ಲಿ ನಡೆಯುವ ದೊಂಬಿಗಳಿಗೆಲ್ಲ ಅರ್ಥವೇ ಇಲ್ಲ. ಇಂಥವು ಗಳಿಂದ ಗೋಹತ್ಯೆಯನ್ನು ತಡೆಗಟ್ಟಲಾಗಿಲ್ಲ. ನನಗೆ ಕೊಂಚ ಸಮಾಧಾನ ತಂದ ಸಂಗತಿಯೆಂದರೆ ೧೯೨೧ರಲ್ಲಿ ಗೋಹತ್ಯೆ ಗಣನೀಯವಾಗಿ ಕಡಿಮೆಯಾಗಿದ್ದು. ಆ ಹಿಂದಿನ ಇಪ್ಪತ್ತು ವರ್ಷಗಳಲ್ಲಿ ಹಿಂದೂಗಳು ಕಷ್ಟಪಟ್ಟು ಗೋವಿನ ಸಂರಕ್ಷಣೆ ಮಾಡಿದ್ದಕ್ಕಿಂತ ಇದು ಹೆಚ್ಚು ಪರಿಣಾಮಕಾರಿಯಾಗಿತ್ತು. ಮುಸ್ಲಿಮರು ಉದಾರವಾಗಿ ಮತ್ತು ಸ್ವಯಂ ಪ್ರೇರಿತರಾಗಿ ಗೋಹತ್ಯೆಯಿಂದ ಹಿಂದೆ ಸರಿದದ್ದರ ಪರಿಣಾಮವಿದು.*

ಗೋರಕ್ಷಣೆಯ ಕೆಲಸ ಮೊದಲು ಶುರುವಾಗಬೇಕಾದ್ದು ಹಿಂದೂಗಳಿಂದಲೇ. ಈ ದೇಶದಲ್ಲಿ ಜಾನುವಾರುಗಳನ್ನು ಕೆಟ್ಟದಾಗಿ ನಡೆಸಿಕೊಂಡಷ್ಟು ಇನ್ನೆಲ್ಲೂ ನಡೆಸಿ ಕೊಳ್ಳುವುದಿಲ್ಲ. ಸರಿಯಾಗಿ ಮೇವನ್ನೂ ಹಾಕದೆ ಜಾನುವಾರುಗಳನ್ನು ನಮ್ಮ ಜನ ಅರೆಹೊಟ್ಟೆಯಲ್ಲಿ ಕೆಡವಿರುತ್ತಾರೆ. ಗೋರಕ್ಷಣೆಗೆ ಮುಂದಾಗುವವರು ಅವಕ್ಕೆ ಮೇವು ಒದಗಿಸುವ ತಕ್ಕ ವ್ಯವಸ್ಥೆ ಮಾಡಬೇಕು; ಹುಲ್ಲುಗಾವಲುಗಳನ್ನು ಕಾಪಾಡಿಕೊಳ್ಳಬೇಕು...

ಹಿಂದೂಗಳು ಗೋವುಗಳನ್ನು ಮಾರುತ್ತಾರೆ ಎನ್ನುವ ಕಾರಣಕ್ಕೇ ಅವು ಕಸಾಯಿಖಾನೆಗಳ ಪಾಲಾಗುತ್ತವೆ. ಹೀಗಾಗಿ ಗೋರಕ್ಷಣೆಯ ವಿಷಯದಲ್ಲಿ ಮುಸಲ್ಮಾನರ ಮನವೊಲಿಸುವುದು ಒಳ್ಳೆಯ ವಿಧಾನವೆನಿಸುತ್ತದೆ.

('ದ ಆಕ್ಸ್‌ಫರ್ಡ್ ಇಂಡಿಯಾ ಗಾಂಧಿ' ಪುಸ್ತಕದಿಂದ.)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

---

* ೧೯೨೧ರಲ್ಲಿ ಖಿಲಾಫತ್ ಚಳುವಳಿಯನ್ನು ಬೆಂಬಲಿಸುವಂತೆ ಗಾಂಧಿ ಕರೆ ನೀಡಿದ್ದರು. ಖಿಲಾಫತ್ ಚಳುವಳಿಗಾರರನ್ನು ಈ ನಡೆ ಸಮಾಧಾನಗೊಳಿಸಿತಲ್ಲದೆ, ಮುಸ್ಲಿಮರು ಗೋಹತ್ಯೆ ಮಾಡಬಾರದೆಂದು ಚಳುವಳಿಗಾರರು ಮುಸ್ಲಿಮ್ ಸಮುದಾಯದ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದರು.

೭೩

ನಮ್ಮ ಗ್ರಾಮಗಳು

ಭಾರತ ತನ್ನ ನಗರಗಳಲ್ಲಿಲ್ಲ, ಅದು ತನ್ನ ೭ ಲಕ್ಷ ಹಳ್ಳಿಗಳಲ್ಲಿದೆ ಎಂದು ನಾನು ನಂಬಿದ್ದೇನೆ; ಈ ಮಾತನ್ನು ಲೆಕ್ಕವಿಲ್ಲದಷ್ಟು ಸಲ ಹೇಳಿದ್ದೇನೆ...ಸಾಮಾನ್ಯವಾಗಿ ನಗರವಾಸಿಯು ಹಳ್ಳಿಗನನ್ನು ಶೋಷಿಸುತ್ತಾ ಬಂದಿದ್ದಾನೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ನಗರವಾಸಿ ಹಳ್ಳಿಗನ ಶ್ರಮ, ಕೊಡುಗೆಗಳ ಆಧಾರದ ಮೇಲೆ ಬದುಕುತ್ತಾ ಬಂದಿದ್ದಾನೆ. ಅನೇಕ ಬ್ರಿಟಿಷ್ ಅಧಿಕಾರಿಗಳು ಭಾರತದ ಜನತೆಯ ಸ್ಥಿತಿಗತಿಗಳ ಬಗ್ಗೆ ಬರೆದಿದ್ದಾರೆ. ಆದರೆ ಇಂಡಿಯಾದ ಹಳ್ಳಿಗರು ತಮ್ಮ ಆತ್ಮ ಮತ್ತು ದೇಹವನ್ನು ಸಮಗ್ರವಾಗಿ ಕಾಪಾಡಿಕೊಳ್ಳಲು ಅವರ ಬಳಿ ಸಾಕಷ್ಟು ಶಕ್ತಿಯಿರುವುದನ್ನು ಕುರಿತು ಯಾರೂ ಬರೆದಂತಿಲ್ಲ.

ದೇಶದ ಶೇಕಡ ಎಪ್ಪತ್ತೈದಕ್ಕಿಂತ ಹೆಚ್ಚು ಜನ ಕೃಷಿಕರು. ಅವರ ಶ್ರಮದ ಎಲ್ಲ ಪ್ರತಿಫಲವನ್ನೂ ನಾವು ಕಬಳಿಸಿಬಿಟ್ಟರೆ ಅಥವಾ ಇತರರು ಆ ಫಲವನ್ನು ತೆಗೆದುಕೊಂಡು ಹೋಗಲು ಬಿಟ್ಟರೆ, ನಮ್ಮಲ್ಲಿ ಸ್ವರಾಜ್ಯದ ಹುಮ್ಮಸ್ಸು, ಸತ್ವ ಯಾವುದೂ ಉಳಿಯುವುದಿಲ್ಲ. ನಗರಗಳು ತಮ್ಮನ್ನು ತಾವು ನೋಡಿಕೊಳ್ಳುತ್ತವೆ. ಆದರೆ ನಾವು ನೋಡಿಕೊಳ್ಳ ಬೇಕಾಗಿರುವುದು ಹಳ್ಳಿಗಳನ್ನು. ಹಳ್ಳಿಗರ ಮೂಢನಂಬಿಕೆ, ಪೂರ್ವಗ್ರಹ, ಸಂಕುಚಿತ ಮನೋಭಾವಗಳನ್ನು ನಾವು ಹೋಗಲಾಡಿಸಬೇಕು. ಅದು ಸಾಧ್ಯವಾಗುವುದು ನಾವು ಅವರೊಡನೆ ಪ್ರೀತಿಯಿಂದ ಬೆರೆತಾಗ; ಅವರ ಜೊತೆ ಬದುಕಿದಾಗ; ಅವರ ಕಷ್ಟ ಸುಖಗಳನ್ನು ಹಂಚಿಕೊಂಡು, ಅವರಿಗೆ ಶಿಕ್ಷಣ ಹಾಗೂ ಉತ್ತಮ ವಿಚಾರಗಳನ್ನು ತಲುಪಿಸಿದಾಗ.

ನಾವೀಗ ಗ್ರಾಮಸಮುದಾಯಗಳನ್ನು ಮರುಜೀವಗೊಳಿಸುವ ಅಗತ್ಯವಿದೆ. ಹಿಂದೆ ಭಾರತದ ಹಳ್ಳಿ, ಪಟ್ಟಣಗಳಿಗೆ ಬೇಕಾದ ಎಲ್ಲವನ್ನೂ ಹಳ್ಳಿಗಳು ಉತ್ಪಾದಿಸುತ್ತಿದ್ದವು.

ನಗರಗಳಿಗೆ ಸರಬರಾಜು ಮಾಡುತ್ತಿದ್ದವು. ನಮ್ಮ ನಗರಗಳು ವಿದೇಶಿ ಮಾರುಕಟ್ಟೆಗಳಾದಾಗ, ಹಾಗೂ ವಿದೇಶಗಳ ಅಗ್ಗದ, ಕಳಪೆ ಮಾಲುಗಳನ್ನು ಹಳ್ಳಿಗಳಲ್ಲಿ ತಂದು ಸುರಿಯತೊಡಗಿದಾಗ, ಹಳ್ಳಿಗಳು ಸೊರಗಿದವು. ಭಾರತ ಬಡವಾಗತೊಡಗಿತು.

ನಮ್ಮ ಹಳ್ಳಿಗಳನ್ನು ಮುತ್ತಿರುವ ಮೂರು ಸಂಕಷ್ಟಗಳನ್ನು ನಾವು ಎದುರಿಸಬೇಕಾಗಿದೆ: ಒಂದು, ನೈರ್ಮಲ್ಯದ ಕೊರತೆ. ಎರಡು, ಅರೆ ಹೊಟ್ಟೆ. ಮೂರು, ಜಡತೆ ಹಾಗೂ ಸೋಮಾರಿತನ. ಹಳ್ಳಿಗರಿಗೆ ತಮ್ಮ ಕ್ಷೇಮಾಭಿವೃದ್ಧಿಯಲ್ಲೇ ಆಸಕ್ತಿಯಿಲ್ಲ. ಆಧುನಿಕ ನೈರ್ಮಲ್ಯ ವಿಧಾನಗಳನ್ನು ಅವರು ಒಪ್ಪುತ್ತಿಲ್ಲ. ತಮ್ಮ ಹೊಲ ಗದ್ದೆಗಳಲ್ಲಿ ನೆಲ ಕೆರೆಯುವುದು ಹಾಗೂ ಈಗಾಗಲೇ ತಾವು ಮಾಡುತ್ತಿರುವ ಕೂಲಿ ಇವೆರಡನ್ನು ಬಿಟ್ಟು ಇನ್ನೇನನ್ನೂ ಮಾಡಲು ಅವರು ಸಿದ್ಧರಿಲ್ಲ. ಈ ವಾಸ್ತವ ನಮ್ಮನ್ನು ಕಂಗೆಡಿಸಬಾರದು. ನಮ್ಮಲ್ಲಿ ಸಹನೆ ಮತ್ತು ವ್ಯವಧಾನವಿದ್ದರೆ ನಾವು ಕಷ್ಟಗಳ ಬೆಟ್ಟಗಳನ್ನೇ ದಾಟಬಹುದು. ವಾಸಿಯಾಗದ ಕಾಯಿಲೆಯೆಂದು ಗೊತ್ತಿದ್ದೂ ರೋಗಿಗಳನ್ನು ಬಿಟ್ಟು ಹೋಗದ ನರ್ಸುಗಳ ಮಾದರಿಯನ್ನು ನಾವೂ ಕಲಿಯಬೇಕಾಗುತ್ತದೆ.

ನೀವು ಭಾರತದ ರೈತರ ಜೊತೆ ಮಾತಾಡಲು ಶುರು ಮಾಡಿ. ಅವರು ಮಾತಾಡಲು ಶುರು ಮಾಡಿದರೆ ಅವರ ಬಾಯಿಂದ ಜ್ಞಾನ ಹರಿಯತೊಡಗುತ್ತದೆ. ಒರಟರಂತೆ ಕಾಣುವ ಅವರಲ್ಲಿ ಧಾರ್ಮಿಕತೆಯ ಆಳವಾದ ಜಲಾಶಯವಿದೆ. ...ಹಳ್ಳಿಗನ ಒರಟುತನದ ಅಡಿಯಲ್ಲಿ ಪುರಾತನ ಕಾಲದ ಸಂಸ್ಕೃತಿಯೊಂದು ಹುದುಗಿದೆ. ಅವನ ಮೇಲುನೋಟದ ಒರಟುತನವನ್ನು ಸುಧಾರಿಸಿ, ಅವನ ಸಾಂಕ್ರಾಮಿಕ ಬಡತನ, ಅನಕ್ಷರತೆಗಳನ್ನು ತೊಲಗಿಸಿ. ಸುಸಂಸ್ಕೃತವಾದ, ಮುಕ್ತ ಪ್ರಜೆಯ ಅತ್ಯುತ್ತಮ ಮಾದರಿಯನ್ನು ಅವನಲ್ಲಿ ಕಾಣುವಿರಿ.

ನನ್ನೆದುರಿಗಿರುವ ಸಮಸ್ಯೆಯೆಂದರೆ, ಹಳ್ಳಿಗಳಲ್ಲಿ ಬದುಕುತ್ತಿರುವ ಜನರಿಗೆ ಬಿಡುವು ಒದಗಿಸುವುದು ಹೇಗೆ ಎಂಬುದಲ್ಲ. ಬದಲಿಗೆ, ವರ್ಷದಲ್ಲಿ ಸುಮಾರು ಆರು ತಿಂಗಳಷ್ಟು ದುಡಿಮೆಯಿರುವ ಹಳ್ಳಿಗರಿಗೆ ಮತ್ತೆ ಸಿಗುವ ಕೆಲವು ತಿಂಗಳಷ್ಟು ಬಿಡುವನ್ನು, ಆ ಸೋಮಾರಿ ಗಂಟೆಗಳನ್ನು ಹೇಗೆ ಸದುಪಯೋಗ ಮಾಡಿಕೊಳ್ಳುವುದು ಎಂಬ ಪ್ರಶ್ನೆ ನನ್ನ ಮುಂದಿದೆ. ಅದಕ್ಕೇ ನಾನು ಹಳ್ಳಿಯ ಮಹಿಳೆಯರಿಗೆ ಚರಕವನ್ನು ಕೊಟ್ಟಿದ್ದು...ನಮ್ಮ ಹಳ್ಳಿಗಳ ಪ್ರತಿ ಮನೆಯಲ್ಲೂ ವಿದ್ಯುಚ್ಛಕ್ತಿ ದೊರೆಯುವುದಾದರೆ ಹಳ್ಳಿಗರು ತಮ್ಮ ಚರಕದ ಸಾಧನಗಳನ್ನು ವಿದ್ಯುತ್ತಿನಿಂದಲೇ ನಡೆಸಲಿ, ನನ್ನದೇನೂ ತಕರಾರಿಲ್ಲ.

ಇನ್ನು ಗ್ರಾಮಸ್ವರಾಜ್ಯ ಕುರಿತ ನನ್ನ ಗ್ರಹಿಕೆಯ ಪ್ರಕಾರ, ಪ್ರತಿ ಹಳ್ಳಿಯೂ ತನ್ನ ನೆರೆಯ ಹಳ್ಳಿಯಿಂದ ಸ್ವತಂತ್ರವಾಗಿರುತ್ತದೆ; ಕೆಲವು ಅಗತ್ಯಗಳಿಗಾಗಿ ಈ ಹಳ್ಳಿಗಳು

ಪರಸ್ಪರ ಅವಲಂಬಿತವಾಗುತ್ತವೆ. ಹಳ್ಳಿಗರು ಎಂಥ ಕೌಶಲವನ್ನು ಬೆಳೆಸಿಕೊಳ್ಳಬೇಕೆಂದರೆ ಅವರು ಮಾಡಿದ ವಸ್ತುಗಳಿಗಾಗಿ ಮಾರುಕಟ್ಟೆಗಳು ಕಾಯುವಂತಿರಬೇಕು. ನಮ್ಮ ಹಳ್ಳಿಗಳು ಪ್ರಗತಿ ಹೊಂದಿದಂತೆಲ್ಲ ಅಲ್ಲಿ ಉನ್ನತ ಕೌಶಲ ಹಾಗೂ ಕಲಾ ಪ್ರತಿಭೆಗಳಿಗೆ ಕೊರತೆಯೇ ಇರುವುದಿಲ್ಲ. ಹಳ್ಳಿಗಳ ಮನೆಗಳೆದುರು ಆಯಾ ಮನೆಗೆ ಬೇಕಾದಷ್ಟು ತರಕಾರಿ ಬೆಳೆದುಕೊಳ್ಳಲು, ದನಕರುಗಳನ್ನು ಕಟ್ಟಿಕೊಳ್ಳಲು ಸಾಕಷ್ಟು ಜಾಗವಿರಬೇಕು. ಅಲ್ಲಿ ಸಹಕಾರಿ ಡೈರಿ, ಕೈಗಾರಿಕಾ ತರಬೇತಿಯನ್ನು ಪ್ರಧಾನವಾಗಿ ಹೇಳಿಕೊಡುವ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ದೊರೆಯುವಂತಾಗಬೇಕು.

ಸ್ವಾತಂತ್ರ್ಯ ತಳಮಟ್ಟದಿಂದ ಆರಂಭವಾಗಬೇಕು. ಆದ್ದರಿಂದ ಪ್ರತಿ ಹಳ್ಳಿಯೂ ಪೂರ್ಣ ಅಧಿಕಾರವಿರುವ ಗಣರಾಜ್ಯವಾಗಬೇಕು... ಪಂಚಾಯತ್ ರಾಜ್ ಜಾರಿಗೆ ಬಂದಾಗ ಸಾರ್ವಜನಿಕ ಅಭಿಪ್ರಾಯ ನಿರ್ಣಾಯಕವಾಗುತ್ತದೆ. ಸಾಮಾನ್ಯ ಜನರು ತಮ್ಮ ಶಕ್ತಿಯನ್ನು ಅರಿತುಕೊಳ್ಳದಿರುವ ತನಕ ಮಾತ್ರ ಈಗಿನ ಜಮೀನ್ದಾರರು, ರಾಜರು, ಬಂಡವಾಳಿಗರು ಜನರನ್ನು ಅಧೀನದಲ್ಲಿಟ್ಟುಕೊಂಡಿರುತ್ತಾರೆ. ಜಮೀನ್ದಾರಿ ಕೇಡು ಅಥವಾ ಬಂಡವಾಳವಾದದ ಕೇಡಿನ ವಿರುದ್ಧ ಜನ ಅಸಹಕಾರ ಶುರು ಮಾಡಿದರೆ, ಅವೆರಡೂ ಸುಸ್ತಾಗಿ ಸಾಯುತ್ತವೆ.

(ವಿವಿಧ ಬರಹಗಳಿಂದ. ಆಕರ: 'ಇಂಡಿಯಾ ಆಫ್ ಮೈ ಡ್ರೀಮ್ಸ್'.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೭೪

ಧರ್ಮ

ವೇದಗಳಿಗೆ ಅಥವಾ ಇತರ ಯಾವುದೇ ಧರ್ಮಗ್ರಂಥಗಳಿಗೆ ಸಂಬಂಧಿಸಿದಂತೆ, ನಾನು ದೈವೀಮೂಲ ಎಂಬ ಪದವನ್ನು ಉದ್ದೇಶಪೂರ್ವಕವಾಗಿಯೇ ಬಳಸದೆ ಇರುವುದನ್ನು ಓದುಗನು ಗಮನಿಸುತ್ತಾನೆ. ಏಕೆಂದರೆ ವೇದಗಳು ಮಾತ್ರವೇ ದೈವಿಕವಾದವು ಎಂಬುದನ್ನು ನಾನು ನಂಬುವುದಿಲ್ಲ. ಬೈಬಲ್ಲು, ಕುರಾನು ಮತ್ತು ಜೆಂಡ್‌ಅವೆಸ್ತಾ ಸಹ ವೇದಗಳಷ್ಟೇ ದೈವಿಕವಾಗಿ ಪ್ರೇರಿತವಾದವು ಎಂಬುದು ನನ್ನ ನಂಬಿಕೆ. ಹಿಂದೂಧರ್ಮ ಗ್ರಂಥಗಳಲ್ಲಿ ನನಗೆ ನಂಬಿಕೆ ಇರುವ ಮಾತ್ರಕ್ಕೆ ಅವುಗಳಲ್ಲಿನ ಪ್ರತಿಶಬ್ದ ಮತ್ತು ಪ್ರತಿಶ್ಲೋಕ ದೇವರಿಂದ ಪ್ರೇರಿತವಾದುದು ಎಂದು ನಾನು ಅಂಗೀಕರಿಸ ಬೇಕಾದ ಅಗತ್ಯವಿಲ್ಲ. ಈ ಅದ್ಭುತಗ್ರಂಥಗಳ ನೇರ ಪರಿಚಯ ನನಗಿದೆಯೆಂದು ನಾನು ಹೇಳಿಕೊಳ್ಳುವುದೂ ಇಲ್ಲ. ಆದರೆ ಈ ಧರ್ಮಗ್ರಂಥಗಳ ಮುಖ್ಯೋಪದೇಶದ ತತ್ವಗಳ ಜ್ಞಾನ ಮತ್ತು ಅರಿವು ನನಗಿದೆಯೆಂದು ದೃಢವಾಗಿ ಹೇಳುತ್ತೇನೆ. ಅವುಗಳ ಯಾವುದೇ ವ್ಯಾಖ್ಯಾನ, ಅದೆಷ್ಟೇ ಪಾಂಡಿತ್ಯಪೂರ್ಣವಾಗಿರಲಿ, ಅದು ತರ್ಕಕ್ಕೆ ಅಥವಾ ನೈತಿಕ ದೃಷ್ಟಿಗೆ ವಿರುದ್ಧವಾಗಿದ್ದಲ್ಲಿ ಅದಕ್ಕೆ ಕಟ್ಟುಬೀಳಲು ನಾನು ನಿರಾಕರಿಸುತ್ತೇನೆ. ಇಂದಿನ ಶಂಕರಾಚಾರ್ಯರುಗಳು ಮತ್ತು ಶಾಸ್ತ್ರಿಗಳು ಹಿಂದೂ ಧರ್ಮಗ್ರಂಥಗಳ ಸರಿಯಾದ ವಿವರಣೆಯನ್ನು ನೀಡುತ್ತಾರೆ ಎಂಬ ವಾದವನ್ನು, ಅಂಥದ್ದನ್ನೇನಾದರೂ ಅವರು ಮುಂದಿಟ್ಟಲ್ಲಿ, ನಾನು ಅತ್ಯಂತ ಆಗ್ರಹಪೂರ್ವಕವಾಗಿ ನಿರಾಕರಿಸುತ್ತೇನೆ. ತದ್ವಿರುದ್ಧವಾಗಿ ಈ ಗ್ರಂಥಗಳ ವಿಷಯದಲ್ಲಿ ನಮ್ಮ ಸದ್ಯದ ಜ್ಞಾನ ಅತ್ಯಂತ ಗೊಂದಲದ ಸ್ಥಿತಿಯಲ್ಲಿದೆ ಎಂದು ಅಭಿಪ್ರಾಯಪಡುತ್ತೇನೆ. ಅಹಿಂಸೆ, ಸತ್ಯ ಮತ್ತು ಬ್ರಹ್ಮಚರ್ಯಗಳಲ್ಲಿ ಪರಿಪೂರ್ಣತೆಯನ್ನು ಸಾಧಿಸದ ಮತ್ತು ಸಂಪತ್ತಿನ ಎಲ್ಲಾ ಆರ್ಜನೆ ಹಾಗೂ ಸ್ವಾಮ್ಯಗಳನ್ನು ತ್ಯಜಿಸದ ಯಾರೂ ಶಾಸ್ತ್ರಗಳನ್ನು ಅರಿತವರಲ್ಲ ಎಂಬ ಹಿಂದೂ

ಸೂತ್ರವನ್ನು ನಾನು ಸಂಪೂರ್ಣವಾಗಿ ನಂಬುತ್ತೇನೆ. ಗುರುಪದ್ಧತಿಯಲ್ಲಿ ನನಗೆ ನಂಬಿಕೆ ಇದೆ. ಆದರೆ ಈ ಯುಗದಲ್ಲಿ ಲಕ್ಷಾಂತರ ಜನ ಒಬ್ಬ ಗುರುವಿಲ್ಲದೆ ಹೋಗ ಬೇಕಾಗಿದೆ. ಏಕೆಂದರೆ ಪೂರ್ಣ ಪರಿಶುದ್ಧತೆ ಮತ್ತು ಪರಿಪೂರ್ಣ ಪಾಂಡಿತ್ಯಗಳ ಸಂಯೋಗವನ್ನು ಕಾಣುವುದು ಒಂದು ಅಪರೂಪದ ಸಂಗತಿ. ಆದರೆ ತಮ್ಮ ಧರ್ಮದ ಸತ್ಯಸ್ವರೂಪವನ್ನು ಎಂದಾದರೂ ಅರಿತುಕೊಳ್ಳುವ ಬಗ್ಗೆ ಯಾರೂ ನಿರಾಶರಾಗಬೇಕಾಗಿಲ್ಲ. ಏಕೆಂದರೆ ಪ್ರತಿಯೊಂದು ಮಹಾನ್ ಧರ್ಮದಂತೆಯೇ, ಹಿಂದೂಧರ್ಮದ ಮೂಲತತ್ವಗಳು ವ್ಯತ್ಯಾಸ ಆಗದಂತಹವು ಮತ್ತು ಸುಲಭವಾಗಿ ಅರ್ಥವಾಗುವಂತಹವು. ಪ್ರತಿಯೊಬ್ಬ ಹಿಂದುವೂ ದೇವರು ಮತ್ತು ತನ್ನ ಐಕ್ಯತೆಯಲ್ಲಿ, ಪುನರ್ಜನ್ಮ ಮತ್ತು ಮೋಕ್ಷದಲ್ಲಿ ನಂಬಿಕೆ ಇಡುತ್ತಾನೆ.

ನನ್ನ ಹೆಂಡತಿಯನ್ನು ಕುರಿತು ನನ್ನ ಮನೋಭಾವವನ್ನು ಹೇಗೆ ವರ್ಣಿಸಲಾರೆನೋ ಹಾಗೆಯೇ ಹಿಂದೂಧರ್ಮವನ್ನು ಕುರಿತು ನನ್ನ ಮನೋಭಾವವನ್ನು ಸಹ ನಾನು ವರ್ಣಿಸಲಾರೆ. ಆಕೆ ನನ್ನ ಮನಸ್ಸನ್ನು ಪ್ರಪಂಚದಲ್ಲಿನ ಇನ್ನಾವುದೇ ಹೆಂಗಸು ಹಿಡಿದಿಡಲಾಗದಷ್ಟು ಹಿಡಿದಿಡುತ್ತಾಳೆ. ಆಕೆಯಲ್ಲಿ ದೋಷಗಳು ಇಲ್ಲವೆಂದೇನೂ ಅಲ್ಲ. ನಾನೇ ನೋಡುವುದಕ್ಕಿಂತಲೂ, ನನಗೆ ಕಾಣುವುದಕ್ಕಿಂತಲೂ, ಇನ್ನೂ ಹೆಚ್ಚಿನ ದೋಷಗಳು ಆಕೆಯಲ್ಲಿವೆ ಎಂದು ನಾನು ಹೇಳಬಲ್ಲೆ. ಆದರೆ ಬಿಗಿಯಾಗಿ ಬಂಧಿಸಿಡುವ ಭಾವ ಅದರಲ್ಲಿದೆ. ಅದರ ಎಲ್ಲಾ ಲೋಪದೋಷಗಳಿದ್ದಾಗ್ಯೂ ಹಿಂದೂಧರ್ಮದ ಬಗ್ಗೆ ನನ್ನ ಅಭಿಪ್ರಾಯ ಅದೇ ರೀತಿಯಾಗಿದೆ. ಗೀತೆ ಮತ್ತು ತುಳಸಿದಾಸರ ರಾಮಾಯಣದ ಮಾಧುರ್ಯ ನನ್ನನ್ನು ಉತ್ತೇಜಿಸುವಷ್ಟು ಬೇರಾವುದೂ ಉತ್ತೇಜಿಸದು. ನನಗೆ ಗೊತ್ತಿದೆ ಎಂದು ಹೇಳಿಕೊಳ್ಳಬಹುದಾದ ಹಿಂದೂಧರ್ಮದ ಗ್ರಂಥಗಳೆಂದರೆ ಇವೆರಡೇ. ನಾನು ನನ್ನ ಕೊನೆಯುಸಿರು ಎಳೆಯುತ್ತಿದ್ದೇನೆ ಎಂದು ಅಂದುಕೊಂಡಾಗ ನನಗೆ ನೆಮ್ಮದಿ ನೀಡಿದ್ದು ಗೀತೆ. ಎಲ್ಲಾ ದೊಡ್ಡ ಹಿಂದೂ ದೇವಾಲಯಗಳಲ್ಲಿ ಇಂದು ನಡೆಯುತ್ತಿರುವ ದುರಾಚಾರ ನನಗೆ ಗೊತ್ತಿದೆ. ಆದರೆ ಹೇಳಬಾರದ ಕೊರತೆಗಳಿಂದ ಕೂಡಿದ್ದರೂ ಅವು ನನಗೆ ಪ್ರಿಯವಾಗಿವೆ. ಅವುಗಳಲ್ಲಿ ನಾನು ಆಸಕ್ತಿ ತೋರುತ್ತೇನೆ. ಆ ಆಸಕ್ತಿಯನ್ನು ಬೇರಾವುದರಲ್ಲಿಯೂ ತೋರುವುದಿಲ್ಲ. ನಾನು ಪೂರ್ತಿಯಾಗಿ ಒಬ್ಬ ಸುಧಾರಕ. ಆದರೆ ನನ್ನ ಉತ್ಸಾಹ ಹಿಂದೂಧರ್ಮದ ಮುಖ್ಯಾಂಶಗಳಲ್ಲಿನ ಯಾವುದನ್ನೇ ನಿರಾಕರಿಸುವ ಸ್ಥಿತಿಗೆ ಎಂದಿಗೂ ನನ್ನನ್ನು ಒಯ್ಯುವುದಿಲ್ಲ. ಮೂರ್ತಿಪೂಜೆಯಲ್ಲಿ ನನಗೆ ಅಪನಂಬಿಕೆ ಇಲ್ಲ ಎಂದೂ ನಾನು ಹೇಳಿದ್ದೇನೆ. ಒಂದು ವಿಗ್ರಹ ನನ್ನಲ್ಲಿ ಯಾವುದೇ ಪೂಜ್ಯಭಾವವನ್ನು ಎಬ್ಬಿಸುವುದಿಲ್ಲ. ಆದರೆ ಮೂರ್ತಿಪೂಜೆ ಮಾನವಸ್ವಭಾವದ ಒಂದು ಅಂಶ ಎಂದು ನಾನು

ಭಾವಿಸುತ್ತೇನೆ. ನಾವು ಸಾಂಕೇತಿಕತೆಗಾಗಿ ಹಾತೊರೆಯುತ್ತೇವೆ. ಒಬ್ಬ ವ್ಯಕ್ತಿ ಬೇರೆ ಯಾವುದೇ ಜಾಗಕ್ಕಿಂತಲೂ ಚರ್ಚೊಂದರಲ್ಲಿ ಏಕೆ ಹೆಚ್ಚು ಮನಸ್ಸಮಾಧಾನ ಪಡೆಯಬೇಕು? ವಿಗ್ರಹಗಳು ಪೂಜೆಗೆ ಒಂದು ಸಾಧನ. ಯಾವ ಹಿಂದುವೂ ವಿಗ್ರಹವೊಂದನ್ನು ದೇವರೆಂದು ಭಾವಿಸುವುದಿಲ್ಲ. ಮೂರ್ತಿಪೂಜೆಯನ್ನು ನಾನು ಒಂದು ಪಾಪವೆಂದು ಪರಿಗಣಿಸುವುದಿಲ್ಲ.

ಹಿಂದೂಧರ್ಮವು ಒಂದು ಅನ್ಯನಿಷೇಧಕ ಧರ್ಮವಲ್ಲವೆಂಬುದು ಈ ಮೇಲಿನದರಿಂದ ಸ್ಪಷ್ಟವಾಗಿದೆ. ಅದರಲ್ಲಿ ಪ್ರಪಂಚದ ಎಲ್ಲಾ ಪ್ರವಾದಿಗಳ ಪೂಜೆಗೆ ಅವಕಾಶವಿದೆ. ಪ್ರಚಾರಕ ಎಂಬ ಪದದ ಸಾಮಾನ್ಯಾರ್ಥದಲ್ಲಿ ಅದೊಂದು ಮತಪ್ರಚಾರಕ ಧರ್ಮವಲ್ಲ. ಅದು ಅನೇಕ ಬುಡಕಟ್ಟುಗಳನ್ನು ತನ್ನ ಬಳಗದಲ್ಲಿ ವಿಲೀನಗೊಳಿಸಿಕೊಂಡಿರುವುದರಲ್ಲಿ ಸಂಶಯವಿಲ್ಲ. ಆದರೆ ಈ ವಿಲೀನ ಕ್ರಮವಾದ, ಅಗೋಚರವಾದ, ವಿಕಾಸದ ರೀತಿಯದು. ಪ್ರತಿಯೊಬ್ಬನೂ ತನ್ನ ಸ್ವಂತ ಮತಧರ್ಮಕ್ಕೆ ಅನುಸಾರವಾಗಿ ದೇವರನ್ನು ಪೂಜಿಸುವಂತೆ ಹಿಂದೂಧರ್ಮ ಹೇಳುತ್ತದೆ. ಆದ್ದರಿಂದ ಅದು ಎಲ್ಲಾ ಧರ್ಮಗಳ ಜೊತೆ ಸ್ನೇಹದಿಂದ ಬಾಳುತ್ತದೆ.

ಹಿಂದೂಧರ್ಮದ ನನ್ನ ಕಲ್ಪನೆ ಇದಾಗಿರುವುದರಿಂದ, ಅಸ್ಪೃಶ್ಯತೆಯೊಂದಿಗೆ ರಾಜಿಮಾಡಿಕೊಳ್ಳಲು ನನಗೆ ಎಂದಿಗೂ ಸಾಧ್ಯವಾಗಿಲ್ಲ. ನಾನದನ್ನು ಯಾವಾಗಲೂ ಒಂದು ವಿಕೃತ ಬೆಳವಣಿಗೆಯೆಂದೇ ಭಾವಿಸಿದ್ದೇನೆ. ತಲೆತಲಾಂತರಗಳಿಂದ ಅದು ನಮಗೆ ಒದಗಿಬಂದಿರುವುದು ನಿಜ. ಅಂತೆಯೇ ಅನೇಕ ದುಷ್ಟಪದ್ಧತಿಗಳೂ ಇಂದಿನವರೆಗೂ ಉಳಿದುಕೊಂಡು ಬಂದಿವೆ. ಹುಡುಗಿಯರನ್ನು ವಸ್ತುತಃ ವೇಶ್ಯಾವೃತ್ತಿಗೆ ಮುಡಿಪು ಬಿಡುವುದು ಹಿಂದೂಧರ್ಮದ ಒಂದು ಅಂಶವಾಗಿತ್ತು ಎನ್ನುವುದನ್ನು ಚಿಂತಿಸುವುದು ಸಹ ನಾಚಿಕೆಗೇಡಿನ ಸಂಗತಿ ಎಂದು ನನಗನಿಸುತ್ತದೆ. ಆದರೂ ಇಂಡಿಯಾದ ಅನೇಕ ಭಾಗಗಳಲ್ಲಿ ಅದು ಹಿಂದೂಗಳಿಂದ ಆಚರಿಸಲ್ಪಡುತ್ತಿದೆ. ಕಾಳಿಗೆ ಮೇಕೆಗಳನ್ನು ಬಲಿಕೊಡುವುದು ಸ್ಪಷ್ಟ ಅಧರ್ಮ ಎಂದು ನಾನು ಭಾವಿಸುತ್ತೇನೆ ಮತ್ತು ಅದನ್ನು ಹಿಂದೂಧರ್ಮದ ಒಂದು ಅಂಶವೆಂದು ಪರಿಗಣಿಸುವುದಿಲ್ಲ. ಹಿಂದೂಧರ್ಮ ಎಂಬ ಹೆಸರೇ ವಿದೇಶಿಯರು ಹಿಂದೂಸ್ಥಾನದ ಜನರ ಧರ್ಮಕ್ಕೆ ಕೊಟ್ಟ ಹೆಸರು. ಒಂದಾನೊಂದು ಕಾಲದಲ್ಲಿ ಧರ್ಮದ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಕೊಡುತ್ತಿದ್ದುದರಲ್ಲಿ ಸಂದೇಹವಿಲ್ಲ. ಆದರೆ ಅದು ಧರ್ಮವಲ್ಲ. ಹಿಂದೂ ಧರ್ಮವಂತೂ ಅಲ್ಲವೇ ಅಲ್ಲ. ಆದ್ದರಿಂದಲೇ ಗೋರಕ್ಷಣೆ ನಮ್ಮ ಪೂರ್ವಜರಿಗೆ ಒಂದು ಧಾರ್ಮಿಕ ವಿಧಿಯಾದಾಗ ಗೋಮಾಂಸ ತಿನ್ನುವುದನ್ನು ಮುಂದುವರಿಸಿದವರು ಬಹಿಷ್ಕೃತರಾದರು ಎಂದು ನನಗೆ ಕಾಣುತ್ತದೆ. ಆ ಸಾಮಾಜಿಕ ಸಂಘರ್ಷ

ಘೋರವಾಗಿದ್ದಿರಬೇಕು. ಸಾಮಾಜಿಕ ಬಹಿಷ್ಕಾರವು ನಿಯಮೋಲ್ಲಂಘನೆ ಮಾಡಿದವರಿಗಷ್ಟೇ ಅನ್ವಯವಾಗದೆ, ಅವರ ಬಹಿಷ್ಕಾರಗಳು ಅವರ ಮಕ್ಕಳಿಗೂ ಬಡಿದವು. ಈ ಪದ್ಧತಿ ಒಂದು ಸಂಪ್ರದಾಯವಾಗಿ ಬಲಗೊಂಡಿತು ಮತ್ತು ಈ ಆಚರಣೆಗೆ ಸ್ವಲ್ಪವೂ ಅರ್ಹವಲ್ಲದ ಹಾಗೂ ಅದಕ್ಕೂ ಕಡಿಮೆ ಸಮರ್ಥನೀಯವಾದ ಶಾಶ್ವತತೆಯನ್ನು ನೀಡುವಂತಹ ಶ್ಲೋಕಗಳು ಕೂಡ ನಮ್ಮ ಧರ್ಮಗ್ರಂಥಗಳೊಳಕ್ಕೆ ನುಸುಳಿದವು. ನನ್ನ ವಾದ ಸರಿಯೋ ಅಲ್ಲವೋ, ಅಸ್ಪೃಶ್ಯತೆಯಂತೂ ತರ್ಕಕ್ಕೆ, ಕ್ಷಮೆ, ದಯೆ ಅಥವಾ ಪ್ರೀತಿಯ ಮಾನವನ ಸಹಜ ಸ್ವಭಾವಕ್ಕೆ ವಿರುದ್ಧವಾದುದು.

ಗೋವಿನ ಪೂಜೆಯನ್ನು ಸ್ಥಾಪಿಸುವ ಧರ್ಮವೊಂದು ಧರ್ಮದ ಹೆಸರಿನಲ್ಲಿ ಅನೇಕ ಮೂಢನಂಬಿಕೆಗಳನ್ನು ಪ್ರಚಾರದಲ್ಲಿಟ್ಟಿದೆ ಎಂಬ ಸಂಗತಿ ನನಗೂ ಗೊತ್ತು. ಹಿಂದೂಧರ್ಮದ ವೇಷ ತೊಟ್ಟು ಪ್ರಚಲಿತವಾಗಿರುವ ಮೂಢನಂಬಿಕೆಗಳೆಲ್ಲವನ್ನೂ ನಾನು ಬಹಳ ದುಃಖದಿಂದ ಅರಿತಿದ್ದೇನೆ, ಮತ್ತು ಈ ವಿಷಯಗಳ ಬಗ್ಗೆ ನೇರವಾಗಿ ಮಾತನಾಡಲು ಹಿಂಜರಿಯವುದಿಲ್ಲ. ಅಸ್ಪೃಶ್ಯತೆಯನ್ನು ಈ ಮೂಢನಂಬಿಕೆಗಳಲ್ಲಿ ಅತ್ಯಂತ ದೊಡ್ಡದು ಎಂದು ವರ್ಣಿಸಲು ನಾನು ಹಿಂದೆಗೆದಿಲ್ಲ. ಆದರೆ, ಇವೆಲ್ಲ ಇದ್ದರೂ, ನಾನು ಹಿಂದೂವಾಗಿಯೇ ಉಳಿದಿದ್ದೇನೆ. ಏಕೆಂದರೆ ಈ ಮೂಢನಂಬಿಕೆಗಳು ಹಿಂದೂಧರ್ಮದ ಅಂಗವಾಗಿವೆ ಎಂಬುದನ್ನು ನಾನು ನಂಬುವುದಿಲ್ಲ. ನಾನು ನಿಮಗೆ ವಿವರಿಸಿರುವ ಸತ್ಯಕ್ಕೆ ಹೊಂದಿಕೆಯಾಗದ ಯಾವುದನ್ನೇ ಆಗಲಿ ಅದು ಹಿಂದೂಧರ್ಮಕ್ಕೆ ಸೇರಿದ್ದಲ್ಲ ಎಂದು ಕೂಡಲೇ ನಿರಾಕರಿಸಬೇಕು ಎಂದು ಹಿಂದೂಧರ್ಮವು ವಿಧಿಸಿರುವ ವ್ಯಾಖ್ಯಾನ ಸೂತ್ರಗಳೇ ನನಗೆ ಬೋಧಿಸುತ್ತವೆ.

(ವಿವಿಧ ಭಾಷಣ, ಬರಹಗಳಿಂದ.)

ಕನ್ನಡಕ್ಕೆ: ಎನ್. ಬಾಲಸುಬ್ರಹ್ಮಣ್ಯ

೭೫

ಧರ್ಮದ ಮುಖಗಳು

ನಾನು ಬರೀ ಭಾರತೀಯರನ್ನು ಮಾತ್ರವಲ್ಲ, ಇಡೀ ಜಗತ್ತಿನ ಜನರೆಲ್ಲರನ್ನೂ ಪ್ರೀತಿಸುತ್ತೇನೆ. ಭಿನ್ನ ಧರ್ಮಗಳಿಗೆ ಸೇರಿದ ಜನರ ಜೊತೆ ಬೆರೆಯುವುದರಿಂದ ಮತ್ತು ಅವರೊಂದಿಗೆ ಸಹಬಾಳ್ವೆ ನಡೆಸುವುದರಿಂದ ನಾವು ಬದುಕಿನಲ್ಲಿ ಉತ್ತಮ ವ್ಯಕ್ತಿಗಳಾಗುತ್ತೇವೆ. ಸಹಜೀವನ ನಡೆಸುವುದಾದರೆ ಜಗತ್ತಿನಲ್ಲಿ ಬದುಕುವುದು ಈಗಿರುವುದಕ್ಕಿಂತ ಹೆಚ್ಚು ಸಹ್ಯವಾಗುತ್ತದೆ. ಹೆಚ್ಚಿನ ಅರಿವು ಮತ್ತು ಸಹನೆಯನ್ನು ಬೆಳೆಸಿಕೊಳ್ಳಿ ಎನ್ನುವುದು ನನ್ನ ವಿನಂತಿ. ನಿಮ್ಮ ಧರ್ಮವನ್ನು ನೋಡುವ ದೃಷ್ಟಿಯಿಂದಲೇ ಬೇರೊಂದು ಧರ್ಮವನ್ನು ನೋಡಬೇಕೆಂದು ನಾನು ಜನರನ್ನು ಕೇಳಿಕೊಳ್ಳುತ್ತೇನೆ. ನನ್ನ ಕನಸಿನ ಭಾರತ ಹಿಂದೂ ಅಥವಾ ಕ್ರಿಶ್ಚಿಯನ್ ಅಥವಾ ಮುಸ್ಲಿಂ ಹೀಗೆ ಯಾವುದೇ ಒಂದು ಧರ್ಮಕ್ಕೆ ಸೇರಿದ್ದಾಗಿರಬಾರದು. ಅದು ಎಲ್ಲ ಧರ್ಮಗಳಿಗೂ ಸೇರಿದ ಜನ ಜೊತೆಜೊತೆಯಲ್ಲಿ ಜೀವಿಸುವ ತಾಣವಾಗಬೇಕು.

* * *

ಸಂಶೋಧಕರೊಬ್ಬರ ಪ್ರಶ್ನೆ: ಈಚೀಚೆಗೆ ನೀವು ಅಹಿಂಸೆಯ ಬಗ್ಗೆ ಮಾತಾಡುವಾಗಲೆಲ್ಲಾ ಧರ್ಮಗ್ರಂಥವಾದ ಕುರಾನ್‌ನಿಂದ ಉದಾಹರಣೆಗಳನ್ನು ಕೊಡುತ್ತೀರಿ. ಹಾಗೆ ಮಾಡಿ ಮುಸ್ಲಿಂ ಜನಾಂಗದ ಮೇಲೆ ಪ್ರಭಾವ ಬೀರಲು ಪ್ರಯತ್ನ ಮಾಡುತ್ತಿದ್ದೀರಿ. ಮುಸಲ್ಮಾನ್ ಅಲ್ಲದವನು ಅದರ ಧರ್ಮಗ್ರಂಥದಿಂದ ಉದ್ಧರಿಸುವುದು ನಮ್ಮ ಧರ್ಮಕ್ಕೆ ಅಪಚಾರ ಮಾಡಿದಂತೆ. ಮುಸ್ಲಿಂ ಆಗದವನಿಗೆ ಕುರಾನ್ ಮೂಲಗ್ರಂಥವಾಗುವುದು ಸಾಧ್ಯವಿಲ್ಲ. ಆದುದರಿಂದ ನೀವು ಇನ್ನು ಮುಂದೆ ಕುರಾನ್‌ನಿಂದ ಏನನ್ನೂ ಉದ್ಧರಿಸಬಾರದು.

ಗಾಂಧೀಜಿಯವರ ಉತ್ತರ: ಆಯಾ ಧರ್ಮಗಳಿಗೆ ಸೇರಿದವರು ಮಾತ್ರ ತಮ್ಮ ತಮ್ಮ ಧರ್ಮಗ್ರಂಥಗಳ ಬಗ್ಗೆ ಮಾತನಾಡಬೇಕು, ವ್ಯಾಖ್ಯಾನಿಸಬೇಕು ಎನ್ನುವ ಸಂಶೋಧಕರ ವಾದ ಅಸಂಗತವಾದದ್ದು. ಧರ್ಮಗ್ರಂಥಗಳನ್ನು ತಿಳಿದುಕೊಳ್ಳಲು ಮತ್ತು ಅವುಗಳ ಬಗ್ಗೆ ಚರ್ಚಿಸಲು ಇಂತಹುದೇ ಅರ್ಹತೆಗಳಿರಬೇಕು ಎಂದು ಕಟ್ಟುಪಾಡುಗಳನ್ನು ವಿಧಿಸುವುದು ತಪ್ಪು. ನಾನು ಮುಸ್ಲಿಂ ಅಲ್ಲ ಅನ್ನುವ ಒಂದೇ ಕಾರಣದಿಂದ ಕುರಾನ್ ನನಗೆ ನಿಷಿದ್ಧವಾಗಬಾರದು. ಧರ್ಮಗ್ರಂಥಗಳ ಪಠಣ ಆಯಾ ಧರ್ಮಗಳಿಗೆ ಸೇರಿದವರಿಗೆ ಮಾತ್ರ ಎಂದು ಗೊತ್ತುಪಡಿಸಿದಾಗ ಅದು ಮಾನವಕುಲದ ಅನಿಷ್ಟ ದಿನವಾಗುತ್ತದೆ. ಇಂತಹ ಮೌಢ್ಯ ಮತ್ತು ಅಸಹನೆಯನ್ನು ಬೆಳೆಸಿಕೊಳ್ಳಬೇಡಿ ಎಂದು ನಾನು ಸಂಶೋಧಕರು, ಮತ್ತವರ ಸ್ನೇಹಿತರುಗಳಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಸತ್ಯ ಯಾರದೇ ಒಬ್ಬರ ಸ್ವತ್ತಲ್ಲ. ಅದಕ್ಕೆ ಏಕಸ್ವಾಮ್ಯತೆಯಿಲ್ಲ, ಸತ್ಯವನ್ನು ನಮಗೆ ತಿಳಿದ ಮಾರ್ಗದಲ್ಲಿ ಅನ್ವೇಷಿಸುವ ಮತ್ತು ಅರ್ಥ ಮಾಡಿಕೊಳ್ಳುವ ಸ್ವಾತಂತ್ರ್ಯವಿರಬೇಕು. ಸತ್ಯ ಗೊತ್ತಿರುವುದು ದೇವರಿಗೆ ಮಾತ್ರ. ಹಾಗಿರುವಾಗ ಸಂಶೋಧಕ ಸಹಾಯಕರು ತಾಳ್ಮೆ ಮತ್ತು ವಿನಯವನ್ನು ಬೆಳೆಸಿಕೊಳ್ಳುವುದು ಒಳ್ಳೆಯದು. ಮೂಲಭೂತವಾದಿ ಅಭಿಮಾನ ಮತ್ತು ಅಸಹನೆ, ಸಂಶೋಧನೆಗಾಗಲಿ ಅಥವಾ ಧರ್ಮದ ಬೆಳವಣಿಗೆಗಾಗಲಿ ಸಹಾಯ ಮಾಡುವುದಿಲ್ಲ.

('ಹರಿಜನ್', ೨೯.೯. ೪೦)

* * *

ಧರ್ಮದ ಹೆಸರಿನಲ್ಲಿ ಕೆಲವರು ಅಧರ್ಮಕ್ಕೆ ಗೌರವ ಕೊಡಲು ಪ್ರಯತ್ನಿಸುತ್ತಿದ್ದಾರೆ. ಪಾಪವನ್ನು ದೊಡ್ಡ ಗುಣವೆಂಬಂತೆ ಬೆಂಬಲಿಸುತ್ತಿದ್ದಾರೆ. ಈ ಸವರ್ಣೀಯ ಹಿಂದೂಗಳು ವಿವರಿಸುವಂತೆ ಮತ್ತು ಅನುಕರಿಸುವಂತೆಯೇ ಧರ್ಮವು ಇರುವುದಾದರೆ, ಅದು ಕೆಟ್ಟದ್ದು ಎಂದು ತಮ್ಮ ತಾಳ್ಮೆ ಕಳೆದುಕೊಂಡ ಸಮಯದಲ್ಲಿ ಈ ಯುವಕರಿಗೆ ಅನ್ನಿಸಿದೆ. ತಾಳ್ಮೆ ಕಳೆದುಕೊಂಡು ಕೋಪಗೊಂಡು ಅವರು ಆ ಪ್ರಶ್ನೆಯನ್ನು ಮತ್ತಷ್ಟು ಕೆದಕದೆ ಸುಮ್ಮನಾಗಿದ್ದಾರೆ. ಧರ್ಮವನ್ನು ಸಂಪೂರ್ಣವಾಗಿ ತ್ಯಜಿಸದೆ ಉಳಿದಿದ್ದಾರೆ. ನನ್ನಲ್ಲಿ ನಿಜವಾದ ಧರ್ಮವೆಂಬುದು ಇದ್ದರೆ, ಈ ನನ್ನ ಸಹೋದರರ ಬಗ್ಗೆ ತಾಳ್ಮೆಯಿಂದ, ನಯವಾಗಿ ವರ್ತಿಸಬೇಕಾಗುತ್ತದೆ. ಪತ್ರಗಳ ಮೂಲಕ ಅವರಿಗೆ ವಿವರಣೆಯನ್ನು ನೀಡಿದ್ದೇನೆ. ಈ ದಿನ ಪಲ್ಲುರುತಿಯಲ್ಲಿ (ಕೊಚ್ಚಿನ್, ಕೇರಳ) ಕೂಡ ಅವರಿಗೆ ಸಮಾಧಾನವಾಗುವ ಕಾರಣಗಳನ್ನು ಕೊಟ್ಟಿದ್ದೇನೆ.

ನನ್ನ ಈ ಸ್ನೇಹಿತರಲ್ಲಿ ನಾನು ಹೇಳುವುದೇನೆಂದರೆ, ಈಗಿನ ನನ್ನ ಪ್ರಯತ್ನ ಹಿಂದೂ ಧರ್ಮವನ್ನು ಬಲಪಡಿಸುವುದಕ್ಕೆ ಸಂಬಂಧಿಸಿದುದಲ್ಲ. ಹಿಂದೂ ಧರ್ಮ

ಬಲಗೊಳ್ಳಲಿ ಅಥವಾ ಶಕ್ತಿಹೀನವಾಗಲಿ ಅಥವಾ ನಾಶವಾಗಲಿ, ಅದರ ಬಗ್ಗೆ ನನಗೆ ಆಸಕ್ತಿಯಿಲ್ಲ. ನಾನು ತೆಗೆದುಕೊಂಡಿರುವ ನಿಲುವು ಸರಿಯಾಗಿದೆ ಎಂಬ ಬಗ್ಗೆ ನನಗೆ ನಂಬಿಕೆಯಿದೆ. ನನ್ನ ಆ ನಿಲುವಿನಿಂದಾಗಿ ಹಿಂದೂ ಧರ್ಮ ಶಕ್ತಿಹೀನ ವಾಗುತ್ತದೆ ಎಂದಾದರೆ ನಾನೇನೂ ಮಾಡಲು ಸಾಧ್ಯವಿಲ್ಲ. ಹಿಂದೂ ಧರ್ಮದ ಬಗ್ಗೆ ನಾನು ಏನು ಮಾಡಲು ಬಯಸುತ್ತೇನೆ ಎಂಬುದನ್ನು ನಿಮಗೆ ಹೇಳುತ್ತೇನೆ. ಅಸ್ಪೃಶ್ಯತೆಯ ಪಾಪದಿಂದ ಅದನ್ನು ಶುದ್ಧಗೊಳಿಸಲು ಬಯಸುತ್ತೇನೆ. ಅಸ್ಪೃಶ್ಯತೆಯ ಭೂತವನ್ನು ಉಚ್ಚಾಟಿಸಲು ಇಚ್ಛಿಸುತ್ತೇನೆ. ಅಸ್ಪೃಶ್ಯತೆ ಹಿಂದೂ ಧರ್ಮವನ್ನು ಗುರುತಿಸಲು ಆಗದಷ್ಟು ಕುರೂಪಗೊಳಿಸಿದೆ. ಈ ರಾಕ್ಷಸನನ್ನು ಬೇರು ಮತ್ತು ಕೊಂಬೆಗಳ ಸಮೇತ ಕಿತ್ತು ಎಸೆದರೆ, ಭಾರತದ ಪ್ರಗತಿಗೆ ಧರ್ಮ ಅಡ್ಡಗಾಲಾಗಿದೆ ಎಂದು ಹೇಳುವ ಈ ನನ್ನ ಮಿತ್ರರೇ ತಕ್ಷಣ ತಮ್ಮ ಮನಸ್ಸನ್ನು ಬದಲಾಯಿಸುತ್ತಾರೆ.

ಹಿಂದೂ ಧರ್ಮ ಅಸ್ಪೃಶ್ಯತೆಗೆ ಒಪ್ಪಿಗೆ ನೀಡಿದೆ ಎಂಬ ಅಭಿಪ್ರಾಯಕ್ಕೆ ಒಂದು ವೇಳೆ ನಾನು ಬಂದರೆ, ಅದನ್ನು ನಾನು ದೂಷಿಸುತ್ತೇನೆ. ಆಗ ಹಿಂದೂಧರ್ಮದಲ್ಲಿರುವ ನನ್ನ ನಂಬಿಕೆ ಕುಸಿಯಬಹುದು. ಆದರೆ, ದೇವರಲ್ಲಿರುವ ನನ್ನ ನಂಬಿಕೆ ಬಲಗೊಳ್ಳುತ್ತದೆ.

* * *

ನನ್ನ ಪ್ರಕಾರ ಧರ್ಮವೆಂದರೇನೆಂದು ಹೇಳುವೆ: ನನ್ನ ಧರ್ಮ ಹಿಂದೂ ಧರ್ಮವನ್ನು ಮೀರಿದ್ದು. ಅದು ಮಾನವ ಸ್ವಭಾವವನ್ನು ಬದಲಿಸುವಂಥದ್ದು. ನನ್ನ ಕಲ್ಪನೆಯ ಧರ್ಮ ನಮ್ಮೊಳಗಿನ ಸತ್ಯದೊಂದಿಗೆ ದೃಢವಾಗಿ ಬೆಸೆದುಕೊಳ್ಳುವಂಥದ್ದು ಹಾಗೂ ಅದು ನಮ್ಮನ್ನು ಸದಾ ಪರಿಶುದ್ಧಗೊಳಿಸುವಂಥದ್ದು. ಹಿಂದೂ ಧರ್ಮವನ್ನು ಎತ್ತಿ ಹಿಡಿಯುವುದೆಂದರೆ ಯಾವಯಾವುದೋ ಮಾತುಗಳನ್ನು ಉಲ್ಲೇಖಿಸುವುದಲ್ಲ. ಬದಲಿಗೆ, ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವುದು. ಸತ್ಯ ಮತ್ತು ಪ್ರೀತಿಗೆ ವಿರುದ್ಧವಾದ ಯಾವುದನ್ನೂ ಧರ್ಮ ಎನ್ನಲಾಗದು ಎಂದು ಹಿಂದೂ ಶಾಸ್ತ್ರಗಳೇ ಹೇಳಿವೆ.

ಹಿಂಸಾತ್ಮಕ ರೌಡಿತನದಿಂದ ಸಿಖ್ಖಿಸಂ ಆಗಲೀ, ಹಿಂದೂಯಿಸಂ ಆಗಲೀ ಉಳಿಯಲಾರವು.

(ವಿವಿಧ ಬರಹಗಳಿಂದ.)

ಕನ್ನಡಕ್ಕೆ: ಬಿ.ಎ. ಶ್ರೀಧರ

೭೬

ಯಹೂದಿಗಳು

ಯಹೂದಿಗಳ ಬಿಕ್ಕಟ್ಟಿನ ಬಗ್ಗೆ ನನ್ನ ನಿಲುವೇನೆಂಬುದನ್ನು ತಿಳಿಸಬೇಕೆಂದು ಕೋರಿ ಅನೇಕರು ಬರೆದ ಪತ್ರಗಳು ನನ್ನ ಕೈಸೇರಿವೆ. ಜರ್ಮನಿಯಲ್ಲಿ ಯಹೂದಿಗಳ ಮೇಲೆ ನಡೆದಿರುವ ಹಿಂಸಾಚಾರದ ಬಗ್ಗೆಯೂ ಪ್ರತಿಕ್ರಿಯಿಸಬೇಕೆಂದು ಅವುಗಳಲ್ಲಿ ಕೋರಲಾಗಿದೆ.

ಯಹೂದಿಗಳ ಬಗ್ಗೆ ನನಗೆ ಅಪಾರ ಸಹಾನುಭೂತಿಯಿದೆ. ನಾನು ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗಿನಿಂದ ಅವರ ನಿಕಟ ಪರಿಚಯವೂ ನನಗುಂಟು. ಅವರಲ್ಲಿ ಕೆಲವರು ನನ್ನ ಚಿರಕಾಲದ ಗೆಳೆಯರಾಗಿಬಿಟ್ಟಿದ್ದಾರೆ. ಈ ಗೆಳೆಯರ ಮೂಲಕವೇ ಶತಮಾನಗಳಿಂದ ಯಹೂದಿಗಳ ಮೇಲೆ ನಡೆಯುತ್ತ ಬಂದಿರುವ ದೌರ್ಜನ್ಯದ ಕುರಿತು ನನಗೆ ತಿಳಿದುಬಂದದ್ದು. ಯಹೂದಿಗಳು ಕ್ರಿಶ್ಚಿಯನ್ ಜಗತ್ತಿನ ಶೋಷಿತರು. ಭಾರತದಲ್ಲಿ ಹಿಂದೂಗಳು ಅಸ್ಪೃಶ್ಯರೊಂದಿಗೆ ನಡೆದುಕೊಂಡ ಹಾಗೆಯೇ ಬಹಳ ಮಟ್ಟಿಗೆ ಕ್ರಿಶ್ಚಿಯನ್ನರೂ ಯಹೂದಿಗಳೊಂದಿಗೆ ನಡೆದುಕೊಂಡಿದ್ದಾರೆ.

ಯಹೂದಿಗಳ ಕುರಿತು ನನಗೆ ಸಹಾನುಭೂತಿಯಿದೆ ಎಂದೆ. ಈ ಸಹಾನುಭೂತಿ ನ್ಯಾಯಾನ್ಯಾಯಗಳ ಬಗೆಗಿನ ನನ್ನ ಪರಿವೆಯನ್ನು ಮಸುಕುಗೊಳಿಸಬೇಕಿಲ್ಲ. ತಾಯಿ ನಾಡಿಗಾಗಿ ಯಹೂದಿಗಳು ಹಾಕುತ್ತಿರುವ ಕೂಗು ಸಮರ್ಥನೀಯವಾದುದು ಎಂದೇನೂ ನನಗನ್ನಿಸುತ್ತಿಲ್ಲ. ಯಹೂದಿಗಳು ಈ ವಿಷಯದಲ್ಲಿ ಅಡ್ಡದಾರಿ ಹಿಡಿದಿದ್ದಾರೆ ಎಂದೇ ಭಾಸವಾಗುತ್ತಿದೆ.

ಪ್ಯಾಲೆಸ್ತೀನ್ ಮೇಲಿನ ತಮ್ಮ ಹಕ್ಕೊತ್ತಾಯಕ್ಕೆ ಯಹೂದಿಗಳು ಆಶ್ರಯಿಸಿರುವುದು ಬೈಬಲ್ ಕಥನವನ್ನು. ತಮ್ಮ ಪಾಲಿಗೆ ಪ್ರತ್ಯೇಕ ತಾಯ್ನೆಲವೊಂದು ಇರಬೇಕೆಂದು ಅವರು ಪಟ್ಟು ಹಿಡಿದಿರುವುದರ, ಇನ್ನಿಲ್ಲದೆ ಹಾತೊರೆಯುತ್ತಿರುವುದರ ಮೂಲ

ಇದೇ! ತಾವು ನೆಲೆಸಿರುವ, ತಾವು ಬದುಕು ಕಟ್ಟಿಕೊಂಡಿರುವ ನಾಡನ್ನು ಸ್ವಂತ ನಾಡನ್ನಾಗಿ ಪರಿವರ್ತಿಸಿಕೊಳ್ಳುವ ದಿಸೆಯಲ್ಲಿ ಯಹೂದ್ಯರಿಗೆ ಎದುರಾಗಿರುವ ಅಡ್ಡಿಗಳೇನು?

ಯಹೂದಿಗಳು ಪ್ರತಿಪಾದಿಸುತ್ತಿರುವ ಹಾಗೆ ಬೈಬಲ್ ಗ್ರಂಥದಲ್ಲಿ ಪ್ಯಾಲೆಸ್ತೀನ್‌ನ ಭೌಗೋಳಿಕ ಎಲ್ಲೆಯೇನೂ ಸೂಚಿತವಾಗಿಲ್ಲ. ಆ ನಾಡಿನ ಕಲ್ಪಿತ ಭೂಪಟವಿರುವುದು ಯಹೂದ್ಯರ ಮನಸ್ಸುಗಳಲ್ಲಿ. ಅದರ ಗಡಿಗೆರೆಗಳನ್ನು ಬ್ರಿಟಿಷರ ಬಂದೂಕಿನ ಇಷಾರೆಯಲ್ಲಿ ತೀರ್ಮಾನಿಸಿಕೊಂಡು ಪ್ಯಾಲೆಸ್ತೀನ್ ಪ್ರದೇಶದ ಮೇಲೆ ಹಕ್ಕು ಸಾಧಿಸಲು ತೊಡಗಿರುವ ಯಹೂದಿಗಳ ನಡೆ ಸಮಂಜಸವೆನಿಸುವುದಿಲ್ಲ. ಯಹೂದಿಗಳೇ ಸಾರಿಕೊಳ್ಳುತ್ತಿರುವ ಅವರ ಈ ಧಾರ್ಮಿಕ ನಡೆಯು ಬಂದೂಕು, ಬಾಂಬುಗಳ ನೆರವಿನಿಂದ ರೂಪುಗೊಳ್ಳಬೇಕಾದ್ದಿಲ್ಲ.

ಯಹೂದಿಗಳು ಅರಬ್ಬರೊಂದಿಗೆ ಸೌಹಾರ್ದಯುತವಾಗಿ ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವುದು ಒಳಿತು. ಈ ನಿಟ್ಟಿನಲ್ಲಿ ಅರಬ್ಬರ ಹೃದಯ ಪರಿವರ್ತನೆಗೆ ಯಹೂದಿಗಳು ಯತ್ನಿಸಬಹುದು. ಎಷ್ಟಾದರೂ ಯಹೂದಿಗಳ ಹೃದಯದಲ್ಲಿ ನೆಲೆಸಿರುವ ದೇವರು ಅರಬ್ಬರ ಹೃದಯದಲ್ಲೂ ನೆಲೆಸಿದ್ದಾನಷ್ಟೆ!

(ಹರಿಜನ್, ೨೬.೧೧.೧೯೩೮, 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೬೮, ಪು. ೧೩೭-೧೪೦)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೭೭

ಚೆಟ್ಟಿನಾಡಿನ ವೈಶ್ಯರೊಂದಿಗೆ

[ತಮಿಳುನಾಡಿನ ಕಾನಾಡುಕಾತನ್ -ಕಾರೈಕುಡಿ ಸಮೀಪದ ಊರು. ಚೆಟ್ಟಿನಾಡು ಖಾದ್ಯಗಳಿಗೆ, ಸಾಂಪ್ರದಾಯಿಕ ಶೈಲಿಯ ಮನೆಗಳಿಗೆ ಹೆಸರಾಗಿದೆ- ಎಂಬ ಊರಿನಲ್ಲಿ ಗಾಂಧಿಯವರಿಗೆ ಅದ್ಧೂರಿ ಸ್ವಾಗತ ಸಿಕ್ಕಿತು. ಚೆಟ್ಟಿಯಾರ್ ಸಮುದಾಯದವರೇ ದೊಡ್ಡ ಸಂಖ್ಯೆಯಲ್ಲಿದ್ದ ಊರದು. ಅಲ್ಲಿನ ಚೆಟ್ಟಿಯಾರರು ಮಲಯ, ಬರ್ಮಾ ದೇಶಗಳವರೆಗೆ ತಮ್ಮ ವ್ಯಾಪಾರ ವಹಿವಾಟುಗಳನ್ನು ವಿಸ್ತರಿಸಿಕೊಂಡಿದ್ದರು. ವೈಭವೋಪೇತ ವಾದರೂ ಸ್ವಲ್ಪವೂ ಒಪ್ಪವಿಲ್ಲದಿದ್ದ ಈ ಚೆಟ್ಟಿಯಾರರ ಮನೆಗಳನ್ನು ಕಂಡು ಗಾಂಧಿ ಅವರನ್ನು ತರಾಟೆಗೆ ತೆಗೆದುಕೊಂಡಿದ್ದು ಹೀಗೆ:]

'ನಿಮ್ಮ ಮನೆಗಳ ವಾತಾವರಣ ನೋಡಿದರೆ ಇರುಸುಮುರುಸಾಗುತ್ತದೆ. ಒಂದೆಡೆ ನೆಮ್ಮದಿಯಾಗಿ ಕುಳಿತುಕೊಳ್ಳಲೂ ಸಾಧ್ಯವಿಲ್ಲದಷ್ಟು ಸಾಮಾನು ಸರಂಜಾಮುಗಳು, ಪೀಠೋಪಕರಣಗಳು ನಿಮ್ಮ ಮನೆಗಳನ್ನು ಆವರಿಸಿಕೊಂಡುಬಿಟ್ಟಿವೆ. ಎಲ್ಲೆಂದರಲ್ಲಿ ವಸ್ತುಗಳು ಬೇಕಾಬಿಟ್ಟಿಯಾಗಿ ಬಿದ್ದಿರುವುದು ಕಾಣುತ್ತದೆ. ಗೋಡೆಗಳಿಗೆ ತೂಗು ಹಾಕಿರುವ ದೊಡ್ಡಗಾತ್ರದ ನಿಮ್ಮ ಭಾವಚಿತ್ರಗಳಂತೂ ವಾಕರಿಕೆ ತರಿಸುವಂತಿವೆ. ಸರಾಗವಾಗಿ ಗಾಳಿಯಾಡಲು ಅವಕಾಶವಿಲ್ಲದ ಇಂಥ ಜಾಗಗಳಲ್ಲಿ ಧೂಳು, ಧೂಳಿನ ಮೂಲಕ ಕ್ರಿಮಿಗಳು ಸೇರಿಕೊಂಡು ಅನಾರೋಗ್ಯಕ್ಕೆ ಕಾರಣವಾಗುತ್ತವೆ...

ಈ ಮನೆಗಳನ್ನು ಕಲಾತ್ಮಕವಾಗಿ ವಿನ್ಯಾಸಗೊಳಿಸುವುದೂ, ಚೆನ್ನಾಗಿ ವ್ಯವಸ್ಥಿತ ಗೊಳಿಸುವುದೂ ಸಾಧ್ಯವಿದೆ. ನೀವು ಈ ಹಾಳು ವೈಭವಕ್ಕೆ ಸುರಿದಿರುವ ಹಣದಲ್ಲಿ ಬರೀ ಹತ್ತನೆಯ ಒಂದು ಭಾಗವನ್ನಷ್ಟೇ ನನಗೆ ಕೊಟ್ಟುನೋಡಿ... ಅತ್ಯುತ್ತಮ ಗೃಹ ವಿನ್ಯಾಸಕಾರರೂ ಮೆಚ್ಚುವಂತೆ ಇವುಗಳಿಗಿಂತ ಅನುಕೂಲಕರವಾದ ಸುಸಜ್ಜಿತ ಮನೆಗಳನ್ನು ನಾನು ನಿರ್ಮಾಣ ಮಾಡಿ ತೋರಿಸಬಲ್ಲೆ.'

('ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೪೦, ಪು. ೧೪೧-೧೪೫)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೭೮

ಹರಿಜನ ನಿಧಿಗೆ ಕೌಮುದಿಯ ದೇಣಿಗೆ

ಹರಿಜನ ನಿಧಿಗೆ ದೇಣಿಗೆ ಸಂಗ್ರಹಿಸುತ್ತಿದ್ದಾಗ ನಡೆದ ಒಂದು ಹೃದಯಸ್ಪರ್ಶಿ ಘಟನೆಯನ್ನು ಇಲ್ಲಿ ಉಲ್ಲೇಖಿಸಬೇಕು.

ವಡಕರದಲ್ಲಿ ನಾನು ಆಗಷ್ಟೇ ಭಾಷಣ ಮಾಡಿ ಮುಗಿಸಿದ್ದೆ. ಹರಿಜನ ನಿಧಿಗೆ ಒಡವೆ ವಸ್ತುಗಳನ್ನು ದಾನವಾಗಿ ನೀಡುವಂತೆ ಅಲ್ಲಿ ನೆರೆದಿದ್ದ ಮಹಿಳೆಯರಲ್ಲಿ ಬೇಡಿಕೊಂಡಿದ್ದೆ. ಕೊಡುಗೆಯಾಗಿ ದೊರೆತ ಕೆಲವು ವಸ್ತುಗಳನ್ನು ಹರಾಜಿನಲ್ಲಿ ಮಾರುವ ಪ್ರಕ್ರಿಯೆಯೂ ನಡೆದಿತ್ತು.

ಆಗ ಇದ್ದಕ್ಕಿದ್ದಂತೆ ಒಬ್ಬ ಹುಡುಗಿ ವೇದಿಕೆಯ ಮೇಲೆ ಬಂದಳು. ಸುಮಾರು ಹದಿನೈದು ಹದಿನಾರು ವರ್ಷದ ಆಕೆ ತನ್ನನ್ನು ಕೌಮುದಿ ಎಂದು ಪರಿಚಯಿಸಿ ಕೊಂಡಳು. ತನ್ನ ಚಿನ್ನದ ಕೈಬಳೆಯೊಂದನ್ನು ಆಕೆ ನಿಧಿಗೆ ದೇಣಿಗೆಯಾಗಿ ಕೊಟ್ಟು, ಅದಕ್ಕೆ ಪ್ರತಿಯಾಗಿ ನನ್ನ ಹಸ್ತಾಕ್ಷರವನ್ನು ಬೇಡಿದಳು. ನಾನು ಹಸ್ತಾಕ್ಷರವನ್ನು ಕೊಡುವಷ್ಟರಲ್ಲಿ ಆಕೆ ತನ್ನ ಇನ್ನೊಂದು ಬಳೆ ತೆಗೆದು ನನ್ನ ಮುಂದಿಟ್ಟಳು. 'ಒಂದು ಬಳೆ ಸಾಕಮ್ಮ. ಹಸ್ತಾಕ್ಷರ ಹಾಕಿ ಕೊಡುತ್ತೇನೆ ಇರು' ಎಂದು ನಾನು ಆಕೆಯತ್ತ ತಿರುಗಿ ಇನ್ನೂ ಹೇಳುತ್ತಿರುವಂತೆಯೇ ತನ್ನ ಕೊರಳಲ್ಲಿದ್ದ ಬಂಗಾರದ ಸರವನ್ನು ಆಕೆ ಬಿಚ್ಚಿತೆಗೆಯತೊಡಗಿದಳು!

'ಈ ಒಡವೆಗಳನ್ನು ನಿಧಿಗೆ ಅರ್ಪಿಸಲು ನಿನ್ನ ತಂದೆತಾಯಿಗಳ ಅನುಮತಿ ಪಡೆದಿರುವೆಯಾ?' ಎಂದು ನಾನು ಆಕೆಯನ್ನು ಕೇಳಿದೆ. ಆಕೆ ಅದಕ್ಕೆ ಉತ್ತರಿಸುವ ತೊಂದರೆ ತೆಗೆದುಕೊಳ್ಳದೆ, ತನ್ನ ಕಿವಿಯೋಲೆಗಳನ್ನು ಕಳಚಲು ಶುರುಮಾಡಿದಳು!

ಆಗ ಜನರ ಮಧ್ಯದಿಂದ ಮೆಚ್ಚುಗೆಯ ಉದ್ಗಾರಗಳು ಕೇಳಿಬರತೊಡಗಿದವು. ನಾನು ಮತ್ತೊಮ್ಮೆ ಆಕೆಯನ್ನು, 'ಈ ಒಡವೆಗಳನ್ನು ನಿಧಿಗೆ ಅರ್ಪಿಸಲು ನಿನ್ನ

ತಂದೆತಾಯಿಗಳ ಅನುಮತಿ ಪಡೆದಿರುವೆಯಾ?' ಎಂದು ಕೇಳಿದೆ. ಆಕೆ ಉತ್ತರಿಸಲಿಲ್ಲ; ತೀರಾ ಮುಗ್ಧವಾಗಿ ತನ್ನ ಕಿವಿಯೋಲೆಗಳನ್ನು ಬಿಚ್ಚಿ ನನ್ನೆದುರಿಗಿಟ್ಟಳು.

ಸಂಕೋಚದ ಮುದ್ದೆಯಂತಿದ್ದ ಆ ಹುಡುಗಿಯಿಂದ ನಾನು ಉತ್ತರ ಪಡೆಯುವ ಮಾತು ದೂರವೇ ಉಳಿಯಿತು. ನನ್ನ ಪ್ರಶ್ನೆಗೆ ಅಲ್ಲಿದ್ದವರಲ್ಲೇ ಯಾರೋ ಒಬ್ಬರು ಉತ್ತರ ಕೊಟ್ಟರು. ಆ ಹುಡುಗಿಯ ತಂದೆ ಅಲ್ಲಿ ನಡೆಯುತ್ತಿದ್ದ ಹರಾಜು ಪ್ರಕ್ರಿಯೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. ದೇಣಿಗೆ ಸಂಗ್ರಹಿಸಿ ಕೊಡುವಲ್ಲಿ ಆತ ಅತೀವ ಕಾಳಜಿ ವಹಿಸಿದ್ದ. ತನ್ನ ಮಗಳು ಒಡವೆಗಳನ್ನು ದಾನ ಮಾಡಿದ್ದಕ್ಕೆ ಆತನಿಗೆ ಆಕ್ಷೇಪಣೆ ಇರಲು ಸಾಧ್ಯವಿಲ್ಲ ಎಂದು ನನ್ನ ಪ್ರಶ್ನೆಗೆ ಉತ್ತರಿಸಿದವರು ವಿವರಿಸಿದರು. ನಾನು ಆ ಕುಟುಂಬದ ಔದಾರ್ಯವನ್ನು ಕಂಡು ಮೂಕನಾದೆ.

'ನಿಧಿಗೆ ದೇಣಿಗೆ ಕೊಟ್ಟ ಒಡವೆಗಳಿಗೆ ಬದಲಾಗಿ ಬೇರೆ ಒಡವೆ ಮಾಡಿಸಿ ಕೊಡುವಂತೆ ನಿಮ್ಮ ತಂದೆಯನ್ನು ನೀನು ಕೇಳುವಂತಿಲ್ಲ' ಎಂದು ನಾನು ಕೌಮುದಿಗೆ ಹೇಳಿದೆ. ಕೂಡಲೇ ಆ ಹುಡುಗಿ ಒಪ್ಪಿಕೊಂಡಳು. ಹಸ್ತಾಕ್ಷರ ನೀಡುತ್ತ, 'ನಿನ್ನ ತ್ಯಾಗ, ಔದಾರ್ಯಗಳ ಬೆಲೆ ನೀನು ಕೊಟ್ಟ ಒಡವೆಗಳಿಗಿಂತ ಎಷ್ಟೋ ಪಾಲು ಮಿಗಿಲಾದದ್ದು' ಎಂದು ಬರೆದು ಸಹಿ ಹಾಕಿ ಕೊಟ್ಟೆ.

ಕೌಮುದಿಯ ಹೆಸರು ಹರಿಜನರ ಸೇವೆಗೆ ಕೊಡುಗೆ ನೀಡಿದವರ ಯಾದಿಯಲ್ಲಿ ಸ್ಥಿರವಾಗಲಿ ಎಂದು ಹಾರೈಸುತ್ತೇನೆ.

(ಹರಿಜನ್, ೧೯.೦೧.೧೯೩೪, 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೫೭, ಪು. ೧೮-೧೯)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೭೯

ಗಾಂಧೀಜಿ ಪ್ರತಿಪಾದಿಸಿದ ಹತ್ತು ಪ್ರತಿಜ್ಞೆಗಳು

ಸತ್ಯ
ಅಹಿಂಸೆ ಅಥವಾ ಪ್ರೀತಿ
ಬ್ರಹ್ಮಚರ್ಯ ಅಥವಾ ಜಿತೇಂದ್ರಿಯತ್ವ
ಒಡೆತನವನ್ನು ಬಿಡುವುದು
ಮೈ ಬಗ್ಗಿಸಿ ಮಾಡಿದ ದುಡಿಮೆ
ನಾಲಿಗೆ ಚಪಲದ ನಿಯಂತ್ರಣ
ನಿರ್ಭಯತೆ
ಸರ್ವ ಧರ್ಮ ಸಮಾನತೆ
ಸ್ವದೇಶಿ
ಅಸ್ಪೃಶ್ಯತಾ ನಿವಾರಣೆ

ಭಾಗ : ೭

ಮಾತುಕತೆ

ಬಿ. ಆರ್. ಅಂಬೇಡ್ಕರ್: ದಲಿತ ವರ್ಗಗಳ (ಡಿಪ್ರೆಸ್ಡ್ ಕ್ಲಾಸಸ್) ಕಲ್ಯಾಣಕ್ಕಾಗಿ ನಿಮ್ಮನ್ನು ನೀವು ಸಂಪೂರ್ಣವಾಗಿ ಮುಡಿಪಾಗಿಟ್ಟುಕೊಂಡಾಗ ನೀವು ನಮ್ಮ ಹೀರೋ ಆಗುತ್ತೀರಿ...

ಎಂ.ಕೆ. ಗಾಂಧಿ: ವೆರಿ ಸ್ವೀಟ್ ಆಫ್ ಯು ಟು ಸೇ ಸೋ.

೮೦

ಸ್ವರಾಜ್ಯ ದಕ್ಕುವುದೆ?

ಪತ್ರಕರ್ತ : ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ನೀವು ಪೂರ್ಣ ಸ್ವರಾಜ್ಯಕ್ಕಾಗಿ ಒತ್ತಾಯಿಸುತ್ತೀರೇನು?

ಗಾಂಧಿ : ಸ್ವರಾಜ್ಯಕ್ಕಾಗಿ ಒತ್ತಾಯಿಸದಿದ್ದರೆ ನಾವು ನಮ್ಮ ಅಸ್ತಿತ್ವವನ್ನೇ ಅಲ್ಲಗಳೆದುಕೊಂಡಂತೆ.

ಪತ್ರಕರ್ತ : [ಇರ್ವಿನ್] ಒಪ್ಪಂದದಲ್ಲಿ ಯಾವುದು ಬದಲಾವಣೆಗೆ ಕಾರಣವಾಯ್ತು?

ಗಾಂಧಿ : [ಮುಗುಳ್ನಕ್ಕು] ಇರ್ವಿನ್ ಅವರ ಒಳ್ಳೆಯತನ...[ವಿಶಾಲ ನಗೆ ಬೀರುತ್ತಾ] ಅದಕ್ಕೆ ಸರಿಸಮನಾದ ನನ್ನ ಒಳ್ಳೆಯತನ ಕೂಡ.

ಪತ್ರಕರ್ತ : ನಿಮ್ಮ ಜೀವಿತಾವಧಿಯಲ್ಲಿ ಪೂರ್ಣ ಸ್ವರಾಜ್ಯ ಸಿಕ್ಕುವುದೆಂದು ನಿರೀಕ್ಷಿಸುವಿರಾ?

ಗಾಂಧಿ : ಸ್ವರಾಜ್ಯ ಸಾಧಿಸಿಯೇ ಸಾಧಿಸುತ್ತೇನೆಂಬ ನಿರ್ಧಾರದ ಭಾವದಲ್ಲೇ ಸ್ವರಾಜ್ಯವನ್ನು ಎದುರು ನೋಡುತ್ತೇನೆ. ನಾನಿನ್ನೂ ಅರವತ್ತೆರಡರ ಹರೆಯದ ಯುವಕನೆಂದೇ ನನ್ನ ಭಾವನೆ. [ಅಲ್ಲಿದ್ದ ಮತ್ತೊಬ್ಬ ಪತ್ರಕರ್ತ ವಿಲಿಯಂ ಶೈರರ್ ಕಡೆಗೆ ತಿರುಗಿ] ಡಿಯರ್ ಶೈರರ್, ನನ್ನ ಜೀವಿತಾವಧಿಯಲ್ಲೇ ನಾವು ಸ್ವಾತಂತ್ರ್ಯ ಪಡೆಯುತ್ತೇವೆ.

ಪತ್ರಕರ್ತ : ಇಂಗ್ಲಿಷ್ ಜನರು ಬೇರೆ ಬೇರೆ ಜನಾಂಗಗಳನ್ನು ಆಳಲು ಇನ್ನಿತರರಿಗಿಂತ ಲಾಯಕ್ಕಾದವರೆಂದು ನೀವು ಭಾವಿಸುತ್ತೀರೇನು?

ಗಾಂಧಿ : ನಾನು ಅಂಥ ಯಾವ ಆಯ್ಕೆಯನ್ನೂ ಮಾಡುವುದಿಲ್ಲ. ನಾನು ನನ್ನನ್ನು ಬಿಟ್ಟರೆ ಬೇರೆ ಯಾರಿಂದಲೂ ಆಳಿಸಿಕೊಳ್ಳಲು ಬಯಸುವುದಿಲ್ಲ.

ಪತ್ರಕರ್ತ : ಭವಿಷ್ಯದ ಭಾರತ ಸರ್ಕಾರದಲ್ಲಿ ನೀವು ಪ್ರಧಾನಮಂತ್ರಿಯಾಗಲು ಒಪ್ಪುತ್ತೀರಾ?

ಗಾಂಧಿ : ಇಲ್ಲ. ಆ ಹುದ್ದೆಯನ್ನು ನನಗಿಂತ ತರುಣ ಮನಸ್ಸು ಹಾಗೂ ಗಟ್ಟಿ ಹೃದಯಗಳಿಗೆ ಮೀಸಲಾಗಿರಿಸಲಾಗುತ್ತದೆ.

(೧೯೩೧. ಆಕರ: 'ಮೋಹನ್‌ದಾಸ್ : ಎ ಟ್ರೂ ಸ್ಟೋರಿ', ೩೪೯- ೩೫೦)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೮೧

ಪೂನಾ ಕೋರ್ಟ್‌ನಲ್ಲಿ ವಿಚಾರಣೆ

ಆಗಸ್ಟ್ ೪, ೧೯೩೩

ಮ್ಯಾಜಿಸ್ಟ್ರೇಟ್	:	ವಯಸ್ಸು?
ಗಾಂಧಿ	:	ಅರವತ್ನಾಲ್ಕು.
ಮ್ಯಾಜಿಸ್ಟ್ರೇಟ್	:	ನಿಮ್ಮ ವೃತ್ತಿ?
ಗಾಂಧಿ	:	(ಹಿಂಜರಿದು) ನಾನು ನೂಲುತ್ತೇನೆ... ವೃತ್ತಿಯಿಂದ ನಾನೊಬ್ಬ ನೇಕಾರ ಹಾಗೂ ಬೇಸಾಯಗಾರ.
ಮ್ಯಾಜಿಸ್ಟ್ರೇಟ್	:	ಎಲ್ಲಿ ವಾಸ ಮಾಡುತ್ತೀರಿ?
ಗಾಂಧಿ	:	ಸದ್ಯಕ್ಕೆ ಯರವಾಡ ಜೈಲಿನಲ್ಲೇ ನನ್ನ ವಾಸ. (ಗಾಂಧಿಯವರ ಉತ್ತರದಿಂದ ಕೋರ್ಟ್‌ನಲ್ಲಿ ನಗೆ ಎದ್ದಿತು.)
ಮ್ಯಾಜಿಸ್ಟ್ರೇಟ್	:	(ಕೋರ್ಟನ್ನು ಸುಮ್ಮನಾಗಿಸಿ) ಸದ್ಯಕ್ಕೆ ಸರಿ... ಉಳಿದಂತೆ ನಿಮ್ಮ ನೆಲೆ?
ಗಾಂಧಿ	:	ಅಹ್ಮದಾಬಾದ್ ಜಿಲ್ಲೆಯ ಸಬರಮತಿ ಆಶ್ರಮ.

('ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೫೫, ಪು. ೩೪೧–೩೪೨)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೮೨

ಯಂತ್ರಗಳ ಕುರಿತು

ಪ್ರಶ್ನೆ: ನೀವು ಯಂತ್ರ ವಿರೋಧಿಯೇ?

ಉತ್ತರ: ಹೌದು, ನಾನು ಯಂತ್ರ ವಿರೋಧಿಯೇ. ತಾತ್ವಿಕವಾಗಿ ಹೇಳುವುದಾದರೆ ನಾನು ಆತ್ಮೋದ್ಧಾರಕ್ಕೆ ಸಹಕಾರಿಯಾಗದ ಶರೀರವೆಂಬ ಯಂತ್ರದ ವಿರೋಧಿ ಕೂಡ.

ಯಂತ್ರವು ಕಾರ್ಯ ನಿರ್ವಹಿಸುವ ವಿಧಾನಕ್ಕೆ ಶರೀರ ಒಂದು ಒಳ್ಳೆಯ ಉದಾಹರಣೆ. ಆದರೆ ಅದು ಆದರ್ಶದ ಮಾತಾಯಿತು. ವಾಸ್ತವವಾಗಿ ಶರೀರವನ್ನು ಬಿಟ್ಟು ಜೀವಿಸುವುದು ಹೇಗೆ ಸಾಧ್ಯವಿಲ್ಲವೋ, ಹಾಗೆ ಆಧುನಿಕ ಜಗತ್ತಿನಲ್ಲಿ ಯಂತ್ರಗಳ ನೆರವಿಲ್ಲದೆ ಬದುಕಲಾಗದು ಎನ್ನುವಂತಾಗಿಬಿಟ್ಟಿದೆ.

ಆಧುನಿಕ ಜಗತ್ತಿನಲ್ಲಿ ಯಂತ್ರಗಳಿಗೆ ಅವುಗಳದೇ ಆದ ಸ್ಥಾನವಿದೆ. ಆ ಸ್ಥಾನವನ್ನು ಬದಲಾಯಿಸುವುದು ಕಷ್ಟ. ಆದರೆ ಈ ಜಗತ್ತಿನಲ್ಲಿ ಶ್ರಮಜೀವಿಗಳ ಸ್ಥಾನವನ್ನು ಕಸಿಯುವುದಕ್ಕೆ ಯಂತ್ರಗಳಿಗೆ ಆಸ್ಪದವಿರಬಾರದು. ಶ್ರಮಿಕರ ಸ್ಥಾನವನ್ನು ಯಂತ್ರಗಳು ಕಸಿಯುತ್ತಾ ಹೋದಂತೆ ದುಡಿಯುವ ಕೈಗಳಿಗೆ ಅವಕಾಶಗಳು ಇಲ್ಲವಾಗುತ್ತವೆ. ದುಡಿದು ಉಣ್ಣುವವರು ಹಸಿವಿನಿಂದ ನರಳುವಂತಾಗುತ್ತದೆ. ಅವರ ಕೌಶಲ್ಯ ತಗ್ಗುತ್ತದೆ. ಇದು ಅಪಾಯಕಾರಿ ಸ್ಥಿತಿ. ಹಾಗಾಗಿ ಎಲ್ಲರ ಹಿತವನ್ನು ಕಾಪಾಡಬಲ್ಲ ಯಂತ್ರ ವ್ಯವಸ್ಥೆಯು ಕಾನೂನುಬದ್ಧವೆನಿಸುತ್ತದೆ. ಇಲ್ಲವಾದರೆ ಅಂಥ ವ್ಯವಸ್ಥೆಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕಾಗುತ್ತದೆ.

ಭಾರತವನ್ನು ಆರ್ಥಿಕ ದಿವಾಳಿತನದಿಂದ ಪಾರುಮಾಡಬಲ್ಲ, ದುಡಿಯುವ ಕೈಗಳಿಗೆ ಕೆಲಸ ಹಂಚಬಲ್ಲ ಯಂತ್ರ ವ್ಯವಸ್ಥೆಯನ್ನು ನಾನು ಸ್ವಾಗತಿಸುತ್ತೇನೆ. ಚರಕದಿಂದ ನೂಲುವುದು ಅಂತಹ ಒಂದು ವಿಧಾನ. ಸಮಾಜದ ದಾರಿದ್ರ್ಯವನ್ನು ತೊಲಗಿಸಲು ಮತ್ತು ನಿರುದ್ಯೋಗವನ್ನು ಕಡಿಮೆ ಮಾಡಲು ಚರಕವೇ ಅತ್ಯುತ್ತಮ

ಸಾಧನ. ಚರಕವು ಯಂತ್ರದ ಮೂರ್ತ ರೂಪ ಮತ್ತು ಯಂತ್ರದ ಸಾರ್ಥಕ ರೂಪ ಕೂಡ!

ಹಾಗಾದರೆ ಚರಕವನ್ನುಳಿದು ಇತರೆಲ್ಲ ಯಂತ್ರಗಳನ್ನೂ ನೀವು ವಿರೋಧಿಸುವಿರೇನು?

ಖಂಡಿತವಾಗಿಯೂ ಇಲ್ಲ. ಆದರೆ ದುಡಿಯುವವರಿಗೆ ಕೆಲಸದ ಹಂಚಿಕೆ ಮಾಡದ ಯಂತ್ರ ವ್ಯವಸ್ಥೆಗೆ ನನ್ನ ವಿರೋಧವಿದೆ. ಇಂತಹ ವ್ಯವಸ್ಥೆಯ ಪ್ರಾಬಲ್ಯವನ್ನು ನಾನು ಒಪ್ಪಲಾರೆ. ಶ್ರಮವನ್ನು ಕಡಿಮೆ ಮಾಡಬಲ್ಲ ಸರಳ ಯಂತ್ರ ಸಾಧನಗಳನ್ನು ನಾನು ಸ್ವಾಗತಿಸುತ್ತೇನೆ. ನನ್ನ ವಿರೋಧವಿರುವುದು ಯಂತ್ರಗಳ ಮೇಲೆ ಮನುಷ್ಯರಿಗಿರುವ ವ್ಯಾಮೋಹದ ಬಗ್ಗೆ. ದೈಹಿಕ ಶ್ರಮದಿಂದ ಪಾರುಮಾಡುವ ವ್ಯವಸ್ಥೆ ಎಂದು ಯಾವುದನ್ನು ಪ್ರತಿಪಾದಿಸಲಾಗಿದೆಯೋ ಅಂತಹ ವ್ಯವಸ್ಥೆಯ ಬಗ್ಗೆ. ಯಾವ ವ್ಯವಸ್ಥೆ ದುಡಿಯುವವರನ್ನು ಕ್ರಮೇಣ ನಿರುದ್ಯೋಗಿಗಳನ್ನಾಗಿ ಮಾಡುವುದೋ, ಸಮಯವನ್ನು ಉಳಿಸುವ ನೆಪದಲ್ಲಿ ಶ್ರಮಜೀವಿಗಳ ಬಲಿ ತೆಗೆದುಕೊಳ್ಳುವುದೋ ಅಂತಹ ವ್ಯವಸ್ಥೆಯ ಬಗ್ಗೆ.

ಶ್ರಮದ ಪ್ರತಿಫಲವನ್ನು ಸಮನಾಗಿ ಹಂಚದಿರುವ, ಸಂಪತ್ತಿನ ಏಕಸ್ವಾಮ್ಯಕ್ಕೆ ಇಂಬು ಕೊಡುವ ವ್ಯವಸ್ಥೆ ಸಮಾಜಕ್ಕೆ ಕಂಟಕ ಎಂದು ನಂಬುವವನು ನಾನು. ಆದರೆ ಸಂಪತ್ತಿನ ಸ್ವಾಮ್ಯಕ್ಕೆ ಒತ್ತಾಸೆಯಾಗುವ ಮತ್ತು ಶ್ರಮದ ಮೌಲ್ಯವನ್ನು ತಗ್ಗಿಸುವ ಕೆಲಸವನ್ನು ಆಧುನಿಕ ಯುಗದಲ್ಲಿ ಯಂತ್ರಗಳು ಮಾಡುತ್ತಿವೆ. ಈ ಯಂತ್ರಗಳ ಉಬ್ಬರದ ಹಿಂದಿರುವುದು ಶ್ರಮವನ್ನು ಕಡಿಮೆ ಮಾಡಬೇಕು ಎಂಬ ಕಾಳಜಿ ಅಲ್ಲ, ಹೆಚ್ಚು ಹಣ ಗಳಿಸುವ ಹಪಹಪಿ. ನನ್ನ ಹೋರಾಟವಿರುವುದು ಇಂಥ ಪ್ರವೃತ್ತಿಯ ವಿರುದ್ಧ ಮಾತ್ರವೇ.

ಅಂದಮೇಲೆ ನೀವು ಬರೀ ಯಂತ್ರಗಳ ವಿರುದ್ಧ ಮಾತ್ರವಲ್ಲ, ಅವುಗಳಿಂದ ಉಂಟಾಗುವ ಸಾಮಾಜಿಕ ಕೆಡುಕುಗಳ ವಿರುದ್ಧವೂ ಹೋರಾಡುತ್ತಿದ್ದೀರಿ ಎಂದಾಯ್ತು.

ನಿಸ್ಸಂದೇಹವಾಗಿ. ದುಡಿಮೆಗೆ ಪೂರಕವಾಗಿ ಯಂತ್ರಗಳು ಒದಗಿ ಬರುವಂತಾಗ ಬೇಕೇ ಹೊರತು ದುಡಿಮೆಯನ್ನು ಕಸಿಯುವಂತಿರಬಾರದು. ವಿಜ್ಞಾನದ ಸಂಶೋಧನೆ ಗಳು, ಸಾಧನಗಳು ಮನುಷ್ಯರಲ್ಲಿ ಲಾಲಸೆಯನ್ನು ಹುಟ್ಟಿಸುವಂತಿರಬಾರದು. ಸಂಕ್ಷಿಪ್ತ ವಾಗಿ ಹೇಳುವುದಾದರೆ, ಮನುಷ್ಯ ಸಮಾಜದಲ್ಲಿ ಯಂತ್ರಗಳ ಬಳಕೆ ಒಂದು ಮಿತಿ ಯಲ್ಲಿರಬೇಕು.

ತಾರ್ಕಿಕವಾಗಿ ನೋಡಿದರೆ ನೀವು ಬೃಹತ್ ಯಂತ್ರ ವ್ಯವಸ್ಥೆಯನ್ನಷ್ಟೆ ವಿರೋಧಿಸುತ್ತಿದ್ದೀರಿ ಅನ್ನಿಸುತ್ತದೆ.

ಬೃಹತ್ ಮತ್ತು ಸಂಕೀರ್ಣ ಯಂತ್ರವ್ಯವಸ್ಥೆಯನ್ನು ನಾನು ವಿರೋಧಿಸುತ್ತಿರುವೆ. ಅದೇ ಹೊತ್ತಿಗೆ ದುಡಿಯುವ ಮನುಷ್ಯರ ಬಗ್ಗೆ ಕಾಳಜಿ ಮಾಡುತ್ತಿರುವೆ. ಈ

ಕಾಳಜಿ ಮತ್ತು ಪ್ರೀತಿಯ ಅಂಶಗಳಿಂದ ಪ್ರೇರೇಪಿತವಾದರೆ ವಿಜ್ಞಾನ ಹೇಗೆ ವರದಾನ ಆಗಬಲ್ಲದು ಎಂಬುದಕ್ಕೆ ಹೊಲಿಗೆ ಯಂತ್ರದ ಉದಾಹರಣೆಯನ್ನು ನೋಡಬಹುದು. ಹೊಲಿಗೆಯ ಯಂತ್ರವನ್ನು ತಯಾರಿಸಿದ್ದು ಸಿಂಗರ್ ಎಂಬ ಮನುಷ್ಯ. ತನ್ನ ಹೆಂಡತಿ ದಿನವೂ ಕಷ್ಟಪಟ್ಟು ಬಟ್ಟೆ ಹೊಲಿಯುವುದನ್ನು ತಪ್ಪಿಸಲು ಆತ ಒಂದು ಯಂತ್ರವನ್ನು ತಯಾರಿಸಿದ. ಅವನು ತಯಾರಿಸಿದ ಯಂತ್ರವನ್ನು ಇಂದು ಅವನ ಹೆಸರಿನಿಂದಲೇ ಕರೆಯಲಾಗುತ್ತಿದೆ. ಇದು ಸಿಂಗರ್‌ಗೆ ಎಲ್ಲರೂ ತೋರಿಸಬೇಕಾದ ಗೌರವ. ಯಾಕೆಂದರೆ ಅವನು ತನ್ನ ಹೆಂಡತಿಯ ಶ್ರಮವನ್ನಷ್ಟೇ ಅಲ್ಲ, ಜಗತ್ತಿನ ಎಲ್ಲ ದರ್ಜಿಗಳ ಶ್ರಮವನ್ನು ಕಡಿಮೆ ಮಾಡಿದ.

ಆದರೆ ಇಂತಹ ಹೊಲಿಗೆ ಯಂತ್ರಗಳನ್ನು ತಯಾರಿಸಲು ದೊಡ್ಡ ಕಾರ್ಖಾನೆಗಳು ಬೇಕೇ ಬೇಕಲ್ಲ! ಹಾಗಾಗಿ ಬೃಹತ್ ಯಂತ್ರ ವ್ಯವಸ್ಥೆಯೊಂದು ಚಲಾವಣೆಯಲ್ಲಿರುವುದು ಅನಿವಾರ್ಯವೇ ಎಂದಾಯ್ತು.

ಒಪ್ಪಿದೆ. ಆದರೆ ಅಂತಹ ವ್ಯವಸ್ಥೆ ಬಂಡವಾಳದಾರರ ಹಿಡಿತದಲ್ಲಿರದೆ ಪ್ರಭುತ್ವದ ನಿಯಂತ್ರಣದಲ್ಲಿರಬೇಕು ಎನ್ನುವವ ನಾನು. ಅಷ್ಟರಮಟ್ಟಿಗೆ ನಾನು ಸಮಾಜವಾದಿ.

ಪ್ರಭುತ್ವದ ನಿಯಂತ್ರಣದಲ್ಲಿರುವ ಯಂತ್ರ ವ್ಯವಸ್ಥೆ ಯಾವತ್ತೂ ಲಾಭಬಡಕತನವನ್ನು ರೂಢಿಸಿಕೊಳ್ಳಬಾರದು. ಅದರ ಮುಖ್ಯ ಉದ್ದೇಶ ಮಾರುಕಟ್ಟೆಯಲ್ಲಿ ಲಾಭ ಮಾಡಿಕೊಳ್ಳುವುದಲ್ಲ, ಬದಲಿಗೆ ವ್ಯಾಪಾರ ವಹಿವಾಟುಗಳಿಗೆ ಮಾನವೀಯ ಮೌಲ್ಯ ಗಳನ್ನು ಜೋಡಿಸುವುದಾಗಿರಬೇಕು. ಇದರಿಂದೆಲ್ಲ ಶ್ರಮಿಕರ ಸ್ಥಿತಿ ಉತ್ತಮಗೊಳ್ಳಬೇಕು. ಅವರ ಶ್ರಮ ಬರಿಯ ಚಾಕರಿಯಂತಾಗದೆ ದುಡಿಮೆಗೆ ಒಂದು ಘನತೆಯ ಸ್ಥಾನ ದಕ್ಕಬೇಕು. ಹೀಗೆ ಆಗಿದ್ದೇ ಆದರೆ ಮಾನವ ಸಂಪನ್ಮೂಲದ ಪೂರ್ಣ ಉಪಯೋಗ ವನ್ನು ಪ್ರಭುತ್ವ ಪಡೆದಂತಾಗುವುದು.

ಲಾಲಸೆ ಹೆಚ್ಚಿಸದ ಯಂತ್ರ ವ್ಯವಸ್ಥೆ, ಮನುಷ್ಯ ಕಾಳಜಿಗೆ ತುಡಿಯುವ ಯಂತ್ರ ವ್ಯವಸ್ಥೆ, ಶ್ರಮಮೌಲ್ಯವನ್ನು ಗೌರವಿಸುವ ಯಂತ್ರ ವ್ಯವಸ್ಥೆ ಇವು ಈ ಕಾಲದ ನಿರೀಕ್ಷೆಗಳು. ಇದನ್ನು ಬೇಕಾದರೆ ಆದರ್ಶವಾದ ಎನ್ನಿ... ಆದರೆ ಸಿಂಗರ್‌ನ ಪ್ರೀತಿ ಹೇಗೆ ಎಲ್ಲ ಶ್ರಮಜೀವಿಗಳಿಗೆ ಉಪಕಾರ ಮಾಡಿತೋ, ಹಾಗೆ ಮನುಷ್ಯ ಪ್ರೀತಿಯೇ ಎಲ್ಲ ಉತ್ತಮವಾದ ಕೆಲಸವನ್ನೂ ಈ ಸಮಾಜದಲ್ಲಿ ಮಾಡಿಸಬಹುದು ಎಂಬ ಭರವಸೆಯನ್ನು ಇಟ್ಟುಕೊಳ್ಳೋಣ.

ನೀವು ಈ ಯಂತ್ರಗಳ ಯುಗವನ್ನು ಅಷ್ಟಾಗಿ ಇಷ್ಟಪಟ್ಟಂತೆ ಕಾಣುವುದಿಲ್ಲ...

ಅದು ತೀರಾ ಸರಳೀಕರಣವಾಯಿತು. ಮನುಷ್ಯರು ಗೌಣವಾಗಿ ಯಂತ್ರಗಳು ಮುನ್ನೆಲೆಗೆ ಬಂದ ಜಗತ್ತನ್ನು ನಾನು ವಿರೋಧಿಸುತ್ತೇನೆ, ನಿಜ. ಆದರೆ ಎಲ್ಲ ರೀತಿ ಯಿಂದಲೂ ನಾನು ಯಂತ್ರಗಳನ್ನು ವಿರೋಧಿಸುತ್ತೇನೆ ಎನ್ನುವುದು ಮಾತ್ರ ಸುಳ್ಳು.

ಭಾರತವು ಕೈಗಾರಿಕೆಗೆ ತೆರೆದುಕೊಳ್ಳಬೇಕು ಎನ್ನುವುದರ ಕುರಿತು ನಿಮ್ಮ ನಿಲುವೇನು?

ಭಾರತವು ಅಗತ್ಯವಾಗಿ ಕೈಗಾರಿಕೆಗೆ ತೆರೆದುಕೊಳ್ಳಬೇಕು. ಆದರೆ ನಾವು ಪಶ್ಚಿಮದ ಮಾದರಿಯನ್ನು ಅಳವಡಿಸಿಕೊಳ್ಳಬೇಕಿಲ್ಲ. ಗ್ರಾಮ ಸಮುದಾಯಗಳಿಗೆ ಅನುಕೂಲ ವಾಗುವಂತೆ ನಾವು ನಮ್ಮ ಕೈಗಾರಿಕೆಯ ನೀತಿಯನ್ನು ರೂಪಿಸಿಕೊಳ್ಳಬೇಕು. ಇಲ್ಲಿಯವರೆಗೆ ಭಾರತದ ನಗರ ಮತ್ತು ಪಟ್ಟಣಗಳ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಮಾತ್ರವೇ ನಮ್ಮ ಗ್ರಾಮಗಳು ಬಳಕೆಯಾಗಿವೆ. ವಿದೇಶಿ ಬಂಡವಾಳಿಗರಿಗೆ ನಮ್ಮ ನಗರಗಳು ಮಾರುಕಟ್ಟೆಗಳಷ್ಟೆ? ವಿದೇಶಿ ಆರ್ಥಿಕತೆಯು ನಮ್ಮ ನಗರಗಳನ್ನು ಬಳಸಿಕೊಂಡಂತೆಯೇ ನಗರಗಳೆಲ್ಲ ಹಳ್ಳಿಗಳನ್ನು ಬಳಸಿಕೊಂಡಿವೆ.

ಹಾಗಾದರೆ ಭಾರತದ ಆರ್ಥಿಕ ವ್ಯವಸ್ಥೆ ಹೇಗಿರಬೇಕೆಂದು ನಿಮ್ಮ ಅನಿಸಿಕೆ?

ಈಗ ನನಗೆ ಒಂದು ಉದ್ಯಮವನ್ನು ನಗರಪ್ರದೇಶದಲ್ಲಿ ಸ್ಥಾಪಿಸುವ ಶಕ್ತಿ ಇದೆ ಎಂದಿಟ್ಟುಕೊಳ್ಳೋಣ. ಆದರೆ ನಾನು ಹಾಗೆ ಮಾಡಲಾರೆ. ಅದು ವೈಯಕ್ತಿಕವಾಗಿ ನನಗೆ ಇಷ್ಟವಿಲ್ಲ ಎಂಬುದು ಮೊದಲನೇ ಕಾರಣ. ಎರಡನೆಯದಾಗಿ, ನನಗೆ ನನ್ನ ವೈಯಕ್ತಿಕ ಹಿತಾಸಕ್ತಿಯನ್ನೂ ಮೀರಿ ದೇಶದ ಹಿತಾಸಕ್ತಿಯನ್ನು ಪರಿಗಣಿಸಬೇಕಿದೆ. ಹಾಗಾಗಿ ನಾನು ಗ್ರಾಮ ಸಮುದಾಯಗಳಿಗೆ ಕಸುವು ತುಂಬುವ ಉದ್ಯಮವನ್ನು ಆಯ್ದುಕೊಳ್ಳುವೆ.

ಭಾರತದ ಆರ್ಥಿಕ ವ್ಯವಸ್ಥೆ ನಗರ ಕೇಂದ್ರಿತವಾಗಿರಬಾರದು ಎಂಬುದು ನನ್ನ ಅನಿಸಿಕೆ. ಹಳ್ಳಿಗಳ ಕಡೆ ಅದು ಚಲಿಸಬೇಕು. ಯಂತ್ರ ವ್ಯವಸ್ಥೆ ಮತ್ತು ಉದ್ಯಮ ವ್ಯವಸ್ಥೆ ಏನು ಮಾಡುತ್ತದೆಯೆಂದರೆ, ಮನುಷ್ಯರ ಉಪಭೋಗಕ್ಕೆ ಅಗತ್ಯವಿರುವ ಉತ್ಪನ್ನಗಳ ತಯಾರಿಕೆಯನ್ನು ಮಾತ್ರ ಆದ್ಯತೆಯಾಗಿಟ್ಟುಕೊಳ್ಳುತ್ತದೆ. ಈ ವ್ಯವಸ್ಥೆಯಲ್ಲಿ ಉತ್ಪನ್ನ ವಿತರಣೆಗಳು ಉತ್ಪಾದಕರ ಮರ್ಜಿಗೆ ತಕ್ಕಂತೆ ನಿಗದಿಯಾಗುತ್ತವೆ. ಇದಕ್ಕೆ ಪ್ರತಿಯಾಗಿ ಬಳಕೆದಾರರ ಅಗತ್ಯಕ್ಕೆ ತಕ್ಕಂತೆ ಉತ್ಪಾದನೆಯ ಮತ್ತು ವಿತರಣೆಯ ವ್ಯವಸ್ಥೆ ನೆಲೆಗೊಳ್ಳಬೇಕು. ಅಂದರೆ ಈ ವ್ಯವಸ್ಥೆಯ ವಿಕೇಂದ್ರೀಕರಣ ಆಗಬೇಕು. ಸ್ಥಳೀಯ ಅಗತ್ಯಗಳಿಗೆ ಹೊಂದುವಂತೆ ಉತ್ಪಾದನಾ ವ್ಯವಸ್ಥೆ ರೂಪುಗೊಂಡಂತೆ ಮಾರುಕಟ್ಟೆಯ ಮೇಲೆ ವ್ಯಾಪಾರಿ ಹಿತಾಸಕ್ತಿಗಳ ಹಿಡಿತ ಕಡಿಮೆಯಾಗುತ್ತದೆ. ಮಾರುಕಟ್ಟೆಯ ಒತ್ತಡಗಳು ದರವನ್ನು ನಿರ್ಧರಿಸುವುದು ತಪ್ಪುತ್ತದೆ.

ನಾನು ಹೇಳುತ್ತಿರುವುದು ನಿಮಗೆ ಅರ್ಥವಾಗುತ್ತಿದೆ ಎಂದುಕೊಳ್ಳುತ್ತೇನೆ. ನಾನು ಪ್ರತಿಪಾದಿಸುತ್ತಿರುವುದು ಉದ್ಯಮ ವ್ಯವಸ್ಥೆಯನ್ನೇ. ಆದರೆ ಅದು ಕೇಂದ್ರೀಕರಣಗೊಂಡ ವ್ಯವಸ್ಥೆ ಆಗಿರಕೂಡದು. ಅದು ಹೆಚ್ಚು ಹೆಚ್ಚು ಸ್ಥಳೀಯ ಸ್ವರೂಪವನ್ನು ಪಡೆದಿರಬೇಕು.

ಹಾಗೆಯೇ ಅದರಲ್ಲಿ ಸಮುದಾಯದ ಪಾಲು ಹೆಚ್ಚು ಇರತಕ್ಕದ್ದು. ಲಾಭಾಂಶ ಎಲ್ಲರಿಗೆ ದಕ್ಕುವಂತೆ ಕೂಡ ಅದು ಇರತಕ್ಕದ್ದು.

ಈ ಸ್ಥಳೀಯ ಉದ್ಯಮದ ಸಣ್ಣ ರೂಪವೇ ಗೃಹ ಕೈಗಾರಿಕೆ. ಇಲ್ಲಿ ಮನೆಯೇ ಒಂದು ಉತ್ಪನ್ನ ಘಟಕ. ವ್ಯಕ್ತಿ ಪರಿಶ್ರಮವನ್ನು ನೀವು ಒಟ್ಟುಮಾಡುತ್ತಾ ಸಾಮೂಹಿಕಗೊಳಿಸುತ್ತಾ ಹೋದಂತೆ ಬೃಹತ್ ಉದ್ಯಮ ಪಡೆದುಕೊಳ್ಳುವಷ್ಟೇ ಲಾಭವನ್ನು ಅದೂ ಕೂಡ ಪಡೆದುಕೊಳ್ಳುವುದನ್ನು ನೋಡಬಹುದು. ನಿಮ್ಮ ಬೃಹತ್ ಉದ್ಯಮದ ಪರಿಕಲ್ಪನೆಯಲ್ಲಿ ಸಮೂಹದ ಭಾಗವಹಿಸುವಿಕೆ ಕಡಿಮೆ; ಯಂತ್ರಗಳ ಬಳಕೆ ಹೆಚ್ಚು. ನನ್ನ ಪರಿಕಲ್ಪನೆಯ ಬೃಹತ್ ಉದ್ಯಮದಲ್ಲಿ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿರುತ್ತದೆ. ಅಲ್ಲದೆ ನಾನು ಯಂತ್ರವನ್ನು ಉತ್ಪಾದಕನ ಬಳಿಗೆ ಒಯ್ಯುವಂಥವನು.

ಯಂತ್ರಸ್ವಾಮ್ಯ ವ್ಯವಸ್ಥೆಯ ಬಗ್ಗೆ ನನಗೆ ನಿಜಕ್ಕೂ ದಿಗಿಲು, ಅನುಮಾನ ಎಲ್ಲ ಇವೆ. ಯಂತ್ರಗಳು ತ್ವರಿತ ಗತಿಯಲ್ಲಿ ಉತ್ಪಾದನೆ ಮಾಡುವುದರಿಂದ ಆರ್ಥಿಕತೆಯಲ್ಲಿ ಅವು ವೇಗದ ಪರಿಣಾಮ ಉಂಟುಮಾಡಬಲ್ಲವು. ಆ ವೇಗವನ್ನು ಅಳೆಯುವುದಾಗಲೀ ಪರಿಣಾಮಗಳನ್ನು ಅಂದಾಜಿಸುವುದಾಗಲೀ ನನಗೆ ಕಷ್ಟ. ಒಂದು ವ್ಯವಸ್ಥೆಯಲ್ಲಿ ಕೇವಲ ವ್ಯವಸ್ಥೆಯ ಅನುಕೂಲತೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವುದು ನನ್ನಿಂದಾಗದು. ವ್ಯವಸ್ಥೆಯ ಅನಾನುಕೂಲತೆಯ ಪ್ರಮಾಣವನ್ನೂ ಪರಿಗಣಿಸಬೇಕಾಗುತ್ತದೆ.

ನಮ್ಮ ಜನಸಮುದಾಯಗಳು ಆರೋಗ್ಯದಿಂದ, ಸಂತೋಷದಿಂದ ಇರಬೇಕೆಂದು ನನ್ನಾಸೆ. ಹಾಗೆಯೇ ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆ ಆಗುತ್ತಿರಬೇಕೆಂಬುದು ನನ್ನ ತುಡಿತ. ಇದಕ್ಕೆ ಯಂತ್ರ ವ್ಯವಸ್ಥೆಯ ನೆರವು ಬೇಕೆಂದೇನೂ ತೋರುತ್ತಿಲ್ಲ. ಕ್ರಮೇಣ ನಮಗೆ ಅದರ ಅಗತ್ಯ ಕಂಡುಬಂದರೆ ನಾವು ಯಂತ್ರ ವ್ಯವಸ್ಥೆಯನ್ನು ಸಾಧ್ಯವಾದಷ್ಟು ವಿವೇಚನೆಯಿಂದ ಅಳವಡಿಸಿಕೊಳ್ಳುವ ಮನಸ್ಸು ಮಾಡಬೇಕು. ಅಹಿಂಸೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಾ ಹೋದಂತೆ ಯಂತ್ರಗಳನ್ನು ಪಳಗಿಸಿಕೊಳ್ಳುವ ರೀತಿಯನ್ನೂ ನಾವು ಕಂಡುಕೊಳ್ಳಬಹುದು ಎನಿಸುತ್ತದೆ.

ಉದ್ಯಮ ನಮ್ಮ ಪಾಲಿಗೆ ಅಗತ್ಯವೆನಿಸಿದರೆ, ನಾವು ನಮ್ಮ ಪಾಲಿನ ಶ್ರಮ ಅದರಲ್ಲಿ ಹೂಡಿಕೆಯಾಗುವಂತೆ, ವಿನಿಯೋಗವಾಗುವಂತೆ ನೋಡಿಕೊಳ್ಳಬೇಕು. ಸ್ವಾಯತ್ತತೆ ಮತ್ತು ಸ್ವಾವಲಂಬನೆ ನಮ್ಮ ಮೂಲಮಂತ್ರವಾಗಬೇಕು. ಆಗ ನಮಗೆ ಮುನ್ನಡೆಸುವವರ ಅಗತ್ಯ ಅಷ್ಟು ಬೀಳಲಾರದು.

('ದ ಆಕ್ಸ್‌ಫರ್ಡ್ ಇಂಡಿಯಾ ಗಾಂಧಿ' ಪುಸ್ತಕದಿಂದ.)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೮೩

ಧೀರೋದಾತ್ತ ಸಾವು

ಗಾಂಧಿ : ಅಂಥ ಇಕ್ಕಟ್ಟಿನ ಸನ್ನಿವೇಶದಲ್ಲಿ ನಾನೇನು ಮಾಡಲಿ?! ಜೈಲಿನಿಂದ ಬಿಡುಗಡೆಯಾಗಬಹುದೆಂಬ ಭರವಸೆಯೇ ನನಗಿರಲಿಲ್ಲ. ನಾನು ಜೈಲಿನಲ್ಲೇ ಸತ್ತುಹೋಗಲಿದ್ದೇನೆಂದು ಭಾವಿಸಿದ್ದೆ. ಬಹುತೇಕ ಹಾಗೆ ನಿಶ್ಚಯಿಸಿ, ನನ್ನ ಹತ್ತಿರವಿದ್ದ ಸಣ್ಣಪುಟ್ಟ ಬಳಕೆಯ ವಸ್ತುಗಳನ್ನೆಲ್ಲ ದಾದಿಯರಿಗೆ, ಆಸ್ಪತ್ರೆಯ ನೌಕರರಿಗೆ ಬಳುವಳಿಯಾಗಿ ಕೊಟ್ಟುಬಿಟ್ಟಿದ್ದೆ. ಉಪವಾಸ ಮಾಡಿ ಸತ್ತರೆ ಜನ ನನ್ನ ಬಗ್ಗೆ ಏನೆಂದುಕೊಳ್ಳುತ್ತಾರೋ ಗೊತ್ತಿಲ್ಲ...

ಆನಂದ ಹಿಂಗೊರಣಿ: ಬಾಪು, ನೀವು ಉಪವಾಸದಿಂದ ಸತ್ತರೆ ಜನ ಅದನ್ನು ಧೀರೋದಾತ್ತ ಸಾವು ಎಂದು ವ್ಯಾಖ್ಯಾನ ಮಾಡಬಹುದು.

ಗಾಂಧಿ : ಛೆ, ಛೆ! ಅದನ್ನೆಲ್ಲ ಧೀರೋದಾತ್ತ ಸಾವು ಅನ್ನಲಿಕ್ಕಾಗುತ್ತದೆಯೆ? ನೀನೂ ಹಾಗೆಯೇ ತಿಳಿದಿರುವೆಯೇನು? ಉಪವಾಸ ಬಿದ್ದು ಸಾಯುವುದರಲ್ಲಿ ಯಾವ ಧೀರತನ ಇದೆ? ಆದರೆ ನಿನಗೆ ಗೊತ್ತಿರಲಿ... ನನ್ನ ಜಾತಕದಲ್ಲಿ ನಾನು ಧೀರೋದಾತ್ತ ಸಾವು ಪಡೆಯುತ್ತೇನೆ ಅಂತ ಇದೆಯಂತೆ!

ಆನಂದ ಹಿಂಗೊರಣಿ: ಬಾಪು, ಉಪವಾಸವಿದ್ದು ಸಾಯುವುದಕ್ಕೂ ಸಿಕ್ಕಾಪಟ್ಟೆ ಧೈರ್ಯ ಬೇಕು. ನೀವು ಉಪವಾಸವಿದ್ದು ತೀರಿಕೊಂಡರೆ ಜನರು ಅದನ್ನು ಅಲ್ಪವೆಂದು ತಿಳಿದಾರೆಂದು ನನಗಂತೂ ಅನ್ನಿಸೋದಿಲ್ಲ...

('ದ ಆಕ್ಸ್‌ಫರ್ಡ್ ಇಂಡಿಯಾ ಗಾಂಧಿ' ಪುಸ್ತಕದಿಂದ.)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೮೪

ಸೈನಿಕರೊಂದಿಗೆ ಸಂವಾದ

ಉರುಲಿ-ಕಂಚನ್

ಮಾರ್ಚ್ ೨೨, ೧೯೪೬ರ ಬಳಿಕ

ಸೈನಿಕರು : (ತಮ್ಮನ್ನು ಪರಿಚಯಿಸಿಕೊಳ್ಳುತ್ತ) ನಾವೆಲ್ಲ ಸೇನೆಯವರು... ಆದರೆ ಭಾರತದ ಸ್ವಾತಂತ್ರ್ಯ ಹೋರಾಟದ ಪರವಾಗಿ ನಾವಿದ್ದೇವೆ.

ಗಾಂಧಿ : ಸಂತೋಷ. ಇಷ್ಟು ವರ್ಷ ನೀವೆಲ್ಲ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ಸಾಧನದಂತೆ ಬಳಕೆಯಾಗಿದ್ದೀರಿ... ಗೊತ್ತಲ್ಲವೆ? ಜಲಿಯನ್‌ವಾಲಾ ಬಾಗ್ ಪ್ರಸಂಗ ನೆನಪಿಸುವ ಅಗತ್ಯವಿಲ್ಲ ಅಂದುಕೊಳ್ತೇನೆ.

ಸೈನಿಕರು : ನೀವು ಹೇಳುತ್ತಿರೋದು ಸರಿ. ಆದರೆ ಅದೆಲ್ಲ ಮುಗಿದ ಕತೆ. ಬಾಪು, ಭಾರತವು ಸ್ವತಂತ್ರಗೊಂಡ ಮೇಲೆ ನಮ್ಮ ಪರಿಸ್ಥಿತಿಯೇನು?

ಗಾಂಧಿ : ಯಾಕೆ ಹೀಗೆ ಕೇಳುತ್ತಿದ್ದೀರಿ? ಸ್ವಾತಂತ್ರ್ಯದಲ್ಲಿ ನೀವು ಕೂಡ ಪಾಲುದಾರರು... ಎಲ್ಲರ ಹಾಗೆಯೇ ನೀವೂ ಸ್ವತಂತ್ರ ಭಾರತದಲ್ಲಿ ವಾಸ ಮಾಡಬಹುದು. ಸ್ವಾತಂತ್ರ್ಯ ಪಡೆದ ಮೇಲೆ ಕೂಡ ದೇಶಕ್ಕೆ ನಿಮ್ಮ ಸೇವೆಯ ಅಗತ್ಯ ಬೀಳಬಹುದು. ನೀವು ಮಿಲಿಟರಿ ತರಬೇತಿ ಪಡೆದವರು. ಆ ತರಬೇತಿಯ ಉಪಯೋಗವನ್ನು ದೇಶ ಪಡೆದೀತು. ಒಂದು ವಿಷಯ ಹೇಳಲೇಬೇಕು... ಭಾರತ ಸ್ವತಂತ್ರವಾದಲ್ಲಿ ಈಗಿನ ಹಾಗೆ ನಿಮ್ಮನ್ನು ಅನಗತ್ಯವಾಗಿ ಓಲೈಸುವವರು ಖಂಡಿತ ಇರುವುದಿಲ್ಲ. ಬಡವರ ಖರ್ಚಿನಲ್ಲಿ ನಿಮಗೆ ಸೌಕರ್ಯಗಳನ್ನೊದಗಿಸುವ, ಆಮಿಷವೊಡ್ಡುವ ವಿದೇಶಿ ಆಳ್ವಿಕೆ ಇರುವುದಿಲ್ಲ. ಭಾರತ ಬಸವಳಿದಿದೆ. ಈ ಬಡದೇಶದ ಕಷ್ಟದಲ್ಲಿ ಭಾಗಿಯಾಗುವ ಮನಸ್ಸು ನಿಮಗಿಲ್ಲದಿದ್ದರೆ ನೀವು ಸೇವೆ ಸಲ್ಲಿಸುವುದು ವ್ಯರ್ಥ. ಈಗಿನ ಸವಲತ್ತು, ಸೌಕರ್ಯಗಳ ಹೊರತಾಗಿ ನೀವು ಬದುಕುವುದು ಸಾಧ್ಯವಿಲ್ಲ ಎಂಬುದಾದರೆ ಭಾರತದ ಸ್ವಾತಂತ್ರ್ಯ

ನಿಮ್ಮ ಪಾಲಿಗೆ ಅಷ್ಟೊಂದು ಸಂತೋಷದಾಯಕವಾಗಿರುವುದಿಲ್ಲ ಎಂದು ಹೇಳಬಲ್ಲೆ... ಹೀಗಾದಲ್ಲಿ ಕಳೆದ ಕಾಲವನ್ನು, ಹಳೆಯ ಧಣಿಗಳನ್ನು ನೆನಪಿಸಿಕೊಂಡು ನಿಟ್ಟುಸಿರಿಡುವುದು ನಿಮಗೆ ತಪ್ಪದೇನೋ.

ಸೈನಿಕರು : ಒಂದು ಕಾಲಕ್ಕೆ ಸೇನೆಯಲ್ಲಿ ಸುದ್ದಿಪತ್ರಿಕೆ ಓದುವುದಕ್ಕೆ ಸಹ ನಿರ್ಬಂಧವಿತ್ತು. ಅದೇ ಈಗ ನೋಡಿ... ನಮ್ಮ ನಾಯಕರೊಬ್ಬರನ್ನು ಕಾಣಲು ಹೋಗುತ್ತೇವೆ ಎಂದು ನಾವೆಲ್ಲ ಹೇಳಿಯೇ ಬಂದಿದ್ದೇವೆ. ಬೇಡ ಅನ್ನುವಷ್ಟು ಧೈರ್ಯ ಅಧಿಕಾರಿಗಳಿಗಿಲ್ಲ.

ಗಾಂಧಿ : ನನಗೆ ಗೊತ್ತಿದೆ... ಸೇನೆ ಈಗ ಮಾಗಿದೆ. ಎಲ್ಲ ರ್‍ಯಾಂಕಿನ ಅಧಿಕಾರಿಗಳಲ್ಲಿ, ಸೈನಿಕರಲ್ಲಿ ಈಗ ತಕ್ಕಮಟ್ಟಿಗೆ ಜಾಗೃತಿ ಮೂಡಿದೆ. ಆದರೆ ಈ ಮಾಗುವಿಕೆಗೂ ನೇತಾಜಿ ಬೋಸ್ ಹೂಡಿದ ಹೋರಾಟಕ್ಕೂ ಸಂಬಂಧ ಏದೆ ಅಂತ ನನಗೆ ಅನ್ನಿಸೊಲ್ಲ. ಬೋಸ್ ಕಾರ್ಯವಿಧಾನದ ಬಗ್ಗೆ ನನ್ನ ಸಹಮತವಿಲ್ಲ. ಆದಾಗ್ಯೂ ಭಾರತೀಯ ಸೇನೆಗೆ ಒಂದು ಹೊಸ ದೃಷ್ಟಿ, ಹೊಸ ಆಯಾಮ ಒದಗಿಸುವಲ್ಲಿ ಬೋಸ್ ಪಾತ್ರವಿದೆ ಎಂದು ತಿಳಿದಿದ್ದೇನೆ.

ಸೈನಿಕರು : ಬಾಪು, ಈಗ ದೇಶ ಇಬ್ಭಾಗವಾಗುವ ಸುದ್ದಿಯೇ ಎಲ್ಲ ಕಡೆ ಕೇಳಿ ಬರುತ್ತಿದೆ. ಕೆಲವರು ಮೂರು ಭಾಗ ಅನ್ನುತ್ತಾರೆ. ಇನ್ನೂ ಕೆಲವರು ಮೂರಕ್ಕೂ ಹೆಚ್ಚು ಭಾಗವಾಗಿ ದೇಶ ವಿಭಜನೆಯಾಗಬಹುದು ಅನ್ನುತ್ತಿದ್ದಾರೆ. ಇದೆಲ್ಲ ಏನೆಂದು ನಮಗೆ ಅರ್ಥವೇ ಆಗುತ್ತಿಲ್ಲ. ನಾವು ಹೋರಾಡಿದ್ದು, ರಕ್ತ ಸುರಿಸಿದ್ದು ಭಾರತವೆಂಬ ಅಖಂಡ ದೇಶಕ್ಕೆ!

ಗಾಂಧಿ : ಈ ವಿಪರ್ಯಾಸಕ್ಕೇನು ಹೇಳಲಿ? ಜಗತ್ತಿನಲ್ಲಿ ಎಲ್ಲ ತರಹದ ಜನರೂ ಇರುತ್ತಾರೆ ಎಂದು ಅರ್ಥಮಾಡಿಕೊಳ್ಳೋಣವೆ?

ಸೈನಿಕರು : ಹಾಗಾದರೆ ನಾವು ಅಖಂಡ ಭಾರತದ ಪರವಾಗಿ ಘೋಷಣೆ ಕೂಗಬಹುದೆ?

ಗಾಂಧಿ : ಅಗತ್ಯವಾಗಿ.

(ಹರಿಜನ್, ೦೭.೦೪.೧೯೪೬, 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ',ಸಂಪುಟ ೮೩, ಪು. ೩೦೩-೩೦೪)

ಕನ್ನಡಕ್ಕೆ: ಶ್ರೀನಿವಾಸರಾಜು **ದೊಡ್ಡೇರಿ**

೮೫

ಅಸ್ಪೃಶ್ಯತೆ: ಗಾಂಧಿ–ಅಂಬೇಡ್ಕರ್ ಸಂವಾದ

ಗಾಂಧಿ : ಸರಿ, ಡಾಕ್ಟರ್, ಈ ವಿಷಯದ ಕುರಿತು ಏನು ಹೇಳುತ್ತೀರಿ?

ಅಂಬೇಡ್ಕರ್ : ನಿಮ್ಮ ಅಭಿಪ್ರಾಯವನ್ನು ಆಲಿಸಲು ನನ್ನನ್ನು ಕರೆದಿದ್ದೀರಿ. ನೀವು ಹೇಳುವುದನ್ನು ಕೇಳುವೆ. ಅಥವಾ ನೀವು ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ಉತ್ತರಿಸುವೆ.

ಗಾಂಧಿ : ಕಾಂಗ್ರೆಸ್ ಹಾಗೂ ನನ್ನ ಕುರಿತು ನಿಮಗೆ ಅಸಮಾಧಾನವಿದೆ ಎಂದು ಕೇಳಿದ್ದೇನೆ. ಅಸ್ಪೃಶ್ಯತೆಯ ಕುರಿತು ನಾನು ಶಾಲಾ ಬಾಲಕನಾಗಿದ್ದಾಗಿನಿಂದಲೂ ಚಿಂತಿಸುತ್ತಿರುವೆ. ಆಗ ನೀವು ಹುಟ್ಟಿಯೂ ಇರಲಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು, ಕಾಂಗ್ರೆಸ್‌ನ ವೇದಿಕೆಯಲ್ಲಿ ಇದನ್ನೊಂದು ಕಾರ್ಯಕ್ರಮವಾಗಿ ಪ್ರಸ್ತುತಪಡಿಸಲು ನಾನು ಎಷ್ಟೊಂದು ಶ್ರಮ ವಹಿಸಿದ್ದೇನೆಂದು ನಿಮಗೆ ತಿಳಿದಿರಬಹುದು. ಇದೊಂದು ಧಾರ್ಮಿಕ ಹಾಗೂ ಸಾಮಾಜಿಕ ಸಮಸ್ಯೆಯಾಗಿದ್ದು ರಾಜಕೀಯ ಸಮಸ್ಯೆಗಳೊಂದಿಗೆ ಸೇರಿಸಬಾರದೆಂದು ಕಾಂಗ್ರೆಸ್ ನಾಯಕರು ಈ ಪ್ರಸ್ತಾವನೆಯನ್ನು ವಿರೋಧಿಸಿದರು. ಅಷ್ಟೇ ಅಲ್ಲ, ಕಾಂಗ್ರೆಸ್ ದಮನಿತರ ಉದ್ಧಾರಕ್ಕಾಗಿ ಕಡಿಮೆಯೆಂದರೂ ಇಪ್ಪತ್ತು ಲಕ್ಷಗಳಷ್ಟು ದುಡ್ಡನ್ನು ಖರ್ಚು ಮಾಡಿದೆ. ನಿಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವಂಥದ್ದು ಏನಾದರೂ ಇದ್ದರೆ ಹೇಳಲು ನೀವು ಸ್ವತಂತ್ರರು.

ಅಂಬೇಡ್ಕರ್ : ನಾನು ಹುಟ್ಟುವುದಕ್ಕಿಂತ ಮುಂಚಿನಿಂದಲೇ ಅಸ್ಪೃಶ್ಯರ ಕುರಿತು ನೀವು ಚಿಂತಿಸತೊಡಗಿದ್ದೀರಿ ಎಂದು ನೀವು ಹೇಳುವುದು ನಿಜವೇ

ಮಹಾತ್ಮಾಜಿ. ಮಾತ್ರವಲ್ಲ, ನಿಮ್ಮಿಂದಾಗಿಯೇ ಕಾಂಗ್ರೆಸ್ ಈ ಸಮಸ್ಯೆಯನ್ನು ಗುರುತಿಸಿದೆ ಎನ್ನುವುದು ಕೂಡ ನಿಜ. ಆದರೆ, ಈ ಸಮಸ್ಯೆಗೆ ಔಪಚಾರಿಕ ಮಾನ್ಯತೆ ನೀಡಿರುವುದನ್ನು ಬಿಟ್ಟರೆ ಕಾಂಗ್ರೆಸ್ ಬೇರೇನನ್ನೂ ಮಾಡಿಲ್ಲವೆಂದು ನೇರವಾಗಿಯೇ ಹೇಳಬಯಸುತ್ತೇನೆ. ಅಸ್ಪೃಶ್ಯರ ಏಳಿಗೆಗಾಗಿ ಕಾಂಗ್ರೆಸ್ ಇಪ್ಪತ್ತು ಲಕ್ಷಗಳಷ್ಟು ಖರ್ಚು ಮಾಡಿದೆ ಎಂದು ನೀವು ಹೇಳುತ್ತೀರಿ. ಆದರೆ ಅದು ವ್ಯರ್ಥ ಅನ್ನುತ್ತೇನೆ. ಅಂಥ ಅಗಾಧ ಬೆಂಬಲ ನನಗಿದ್ದಿದ್ದರೆ ನನ್ನ ಜನಗಳ ಆರ್ಥಿಕ ಸ್ಥಿತಿಗತಿಯನ್ನು ಮನೋಭಾವವನ್ನು ಆಶ್ಚರ್ಯಕರ ರೀತಿಯಲ್ಲಿ ಬದಲಿಸಿಬಿಡುತ್ತಿದ್ದೆ. ಅಂಥ ಸನ್ನಿವೇಶದಲ್ಲಿ ಅನಿವಾರ್ಯ ವಾಗಿ ಬಹಳ ಹಿಂದೆಯೇ ನೀವು ನನ್ನನ್ನು ಭೇಟಿಯಾಗಿರುತ್ತಿದ್ದಿರಿ. ಆದರೆ, ಕಾಂಗ್ರೆಸ್ ತನ್ನ ಕೆಲಸದಲ್ಲಿ ಪ್ರಾಮಾಣಿಕವಾಗಿಲ್ಲವೆಂದು ನಿಮಗೆ ತಿಳಿಸಬೇಕು. ಹಾಗೊಮ್ಮೆ ಪ್ರಾಮಾಣಿಕವಾಗಿದ್ದರೆ, ಅಸ್ಪೃಶ್ಯತೆಯ ಅನಿವಾರ್ಯ 'ಪರಿಸ್ಥಿತಿ'ಯನ್ನು ತೊಡೆದು ಹಾಕಿರುತ್ತಿತ್ತು. ಉದಾಹರಣೆಗೆ, ಕಾಂಗ್ರೆಸ್‌ನ ಸದಸ್ಯರಾಗಲು ಖಾದಿ ತೊಡುವ ಷರತ್ತಿನಂತೆ, ಯಾವ ವ್ಯಕ್ತಿ ಅಸ್ಪೃಶ್ಯ ಸಮುದಾಯದ ಪುರುಷ ಅಥವಾ ಮಹಿಳೆಯನ್ನು ತನ್ನ ಮನೆಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲವೋ, ಅಸ್ಪೃಶ್ಯ ವಿದ್ಯಾರ್ಥಿಯೋರ್ವನಿಗೆ ಸಹಾಯ ಒದಗಿಸುವುದಿಲ್ಲವೋ ಅಥವಾ ಕನಿಷ್ಠ ವಾರಕ್ಕೊಮ್ಮೆ ಅಸ್ಪೃಶ್ಯ ವಿದ್ಯಾರ್ಥಿಯೊಂದಿಗೆ ತನ್ನ ಮನೆಯಲ್ಲಿ ಊಟ ಹಂಚಿಕೊಳ್ಳುವುದಿಲ್ಲವೋ, ಅಂಥವರಿಗೆ ಕಾಂಗ್ರೆಸ್ ಸದಸ್ಯತ್ವ ನೀಡಬಾರದಿತ್ತು. ಅಂಥದ್ದೊಂದು ಷರತ್ತನ್ನು ನೀವು ವಿಧಿಸಿದ್ದರೆ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೊಬ್ಬರು ಅಸ್ಪೃಶ್ಯರ ದೇವಸ್ಥಾನ ಪ್ರವೇಶವನ್ನು ವಿರೋಧಿಸುವಂಥ ಹಾಸ್ಯಾಸ್ಪದ ಸನ್ನಿವೇಶ ನಿಮಗೆ ಎದುರಾಗು ತ್ತಿರಲಿಲ್ಲ!

ಕಾಂಗ್ರೆಸ್‌ಗೆ ಅಂಥ ಸಾಮರ್ಥ್ಯ ಬೇಕಿದ್ದುದರಿಂದ ಅಥವಾ ಕೊರತೆಯಿದ್ದುದರಿಂದ ಆ ಷರತ್ತನ್ನು ವಿಧಿಸಲು ಅಸಾಧ್ಯ ಎಂದು ಬೇಕಾದರೆ ನೀವು ಹೇಳಬಹುದು. ಹಾಗಿದ್ದರೆ, ಕಾಂಗ್ರೆಸ್ ತತ್ತ್ವಗಳಿಗಿಂತ ಹೆಚ್ಚಾಗಿ ಸಾಮರ್ಥ್ಯಕ್ಕೆ ಬೆಂಬಲ ನೀಡುತ್ತದೆ ಎನ್ನುವವನು ನಾನು. ಇದು ನಾನು ಕಾಂಗ್ರೆಸ್ ಮೇಲೆ ಮಾಡುತ್ತಿರುವ ಆರೋಪ. ಬ್ರಿಟಿಶರು ಮನಃಪರಿವರ್ತನೆ ತೋರುತ್ತಿಲ್ಲವೆಂದು ನೀವು ಹೇಳುತ್ತಿದ್ದೀರಿ. ನಮ್ಮ ಸಮಸ್ಯೆಯ ಕುರಿತು ಹಿಂದೂಗಳು ಸಹ

ತಮ್ಮ ಹೃದಯ ಪರಿವರ್ತನೆ ಮಾಡಿಕೊಂಡಿಲ್ಲ. ಹೀಗಾಗಿ, ಅವರು ಎಲ್ಲಿಯವರೆಗೆ ಹಠಮಾರಿಗಳಾಗಿ ಉಳಿಯುತ್ತಾರೋ ಅಲ್ಲಿಯವರೆಗೆ ನಾವು ಕಾಂಗ್ರೆಸ್ಸನ್ನಾಗಲಿ, ಹಿಂದುಗಳನ್ನಾಗಲಿ ನಂಬುವುದಿಲ್ಲ. ನಾವು ಸ್ವ-ಸಹಕಾರ, ಸ್ವಾಭಿಮಾನವನ್ನು ನಂಬುತ್ತೇವೆ. ಮಹಾನಾಯಕರಲ್ಲಿ, ಮಹಾತ್ಮರಲ್ಲಿ ನಂಬಿಕೆಯಿಡಲು ನಾವು ಸಿದ್ಧರಾಗಿಲ್ಲ. ಈ ಕುರಿತು ನಾನು ಖಡಾಖಂಡಿತವಾಗಿದ್ದೇನೆ. ಮಹಾತ್ಮರು ಗಾಳಿಯಂತೆ ಎಂದು ಇತಿಹಾಸ ಹೇಳುತ್ತದೆ. ಅವರು ಕೇವಲ ವಸ್ತುವಿನ ಮೇಲಿನ ಧೂಳನ್ನು ತೊಡೆಯಬಲ್ಲರೇ ಹೊರತು ವಸ್ತುವಿನ ಆಕಾರವನ್ನು ಬದಲಿಸುವುದಿಲ್ಲ. ಕಾಂಗ್ರೆಸ್ಸಿನವರೇಕೆ ನಮ್ಮ ಆಂದೋಲನವನ್ನು ವಿರೋಧಿಸಿ, ನನ್ನನ್ನು ದ್ರೋಹಿ ಎಂದು ಬಣ್ಣಿಸಬೇಕು? ಗಾಂಧೀಜಿ, ನನಗೆ ತಾಯಿನಾಡು ಎಂಬುದಿಲ್ಲ.

ಗಾಂಧಿ : ನಿಮಗೆ ತಾಯಿನಾಡು ಇದ್ದೇ ಇದೆ. ದುಂಡುಮೇಜಿನ ಅಧಿವೇಶನದಲ್ಲಿ ನೀವು ಮಾಡಿರುವ ಕೆಲಸದ ಪ್ರಮಾಣದ ಕುರಿತು ನನಗೆ ಬಂದ ವರದಿಗಳ ಪ್ರಕಾರ ನೀವು ಅಪ್ರತಿಮ ದೇಶಭಕ್ತರು.

ಅಂಬೇಡ್ಕರ್ : ನನಗೆ ತಾಯಿನಾಡು ಇದೆ ಎಂದು ನೀವೇನೋ ಹೇಳುತ್ತಿದ್ದೀರಿ. ಆದರೆ, ನಾನು ಅದಿಲ್ಲದೆ ಬದುಕುತ್ತಿದ್ದೇನೆ ಎಂದು ಪುನರುಚ್ಚರಿಸುತ್ತಿದ್ದೇನೆ. ಕುಡಿಯಲು ನೀರು ದೊರಕದ, ನಾಯಿಬೆಕ್ಕುಗಳಿಗಿಂತ ಕಡೆಯಾಗಿ ನಮ್ಮನ್ನು ನೋಡುವ ಈ ನೆಲವನ್ನು, ಈ ಧರ್ಮವನ್ನು ನಮ್ಮದೆಂದು ಒಪ್ಪಿಕೊಳ್ಳಲು ಹೇಗೆ ಸಾಧ್ಯ? ಸ್ವಾಭಿಮಾನವಿರುವ ಯಾವುದೇ ಅಸ್ಪೃಶ್ಯನೂ ಈ ನೆಲದ ಕುರಿತು ಹೆಮ್ಮೆಪಡಲಾರ. ಈ ನೆಲವು ನಮ್ಮ ಮೇಲೆಸಗಿರುವ ಅನ್ಯಾಯ ಮತ್ತು ಯಾತನೆಗಳನ್ನು ಗಮನಿಸಿದರೆ, ತಿಳಿದೋ, ತಿಳಿಯದೆಯೋ ನಾವು ಈ ನೆಲಕ್ಕೆ ನಿಷ್ಠೆ ತೋರದಿದ್ದರೆ ಅದರ ಸಂಪೂರ್ಣ ಹೊಣೆಗಾರಿಕೆಯನ್ನು ಈ ನೆಲವೇ ಹೊರಬೇಕಾಗುತ್ತದೆ. ನನ್ನನ್ನು ದ್ರೋಹಿ ಎಂದು ಕರೆದದ್ದಕ್ಕೆ ನನಗೇನೂ ದುಃಖವಾಗುತ್ತಿಲ್ಲ. ಆದರೆ, ನಮ್ಮೆಲ್ಲ ಕ್ರಿಯೆಗಳಿಗೆ ದ್ರೋಹಿ ಎಂದು ಬಣ್ಣಿಸಿದ ನೆಲವೇ ಕಾರಣಕರ್ತವಾಗುವುದು. ನೀವು ಹೇಳಿದಂತೆ, ದೇಶಪ್ರೇಮ ಸೂಚಿಸುವ ಫಲಪ್ರದವಾದ ಅಥವಾ ಪ್ರಯೋಜನಕಾರಿಯಾದ ಕೆಲಸವನ್ನು ನಾನು ಮಾಡಿದ್ದರೆ, ಅದಕ್ಕೆ ಕಾರಣ ನನ್ನ ಪರಿಶುದ್ಧವಾದ ಅಂತಃಕರಣವೇ ಹೊರತು ನನ್ನ ದೇಶಪ್ರೇಮವಲ್ಲ. ಈ ದೇಶದಲ್ಲಿ ಶತಮಾನಗಳಿಂದ ತುಳಿತಕ್ಕೆ ಒಳಗಾದ ನನ್ನ ಜನಗಳಿಗೆ

ಮಾನವ ಹಕ್ಕುಗಳನ್ನು ಒದಗಿಸಿಕೊಡಲು ನಾನು ಯಾವ ನಿಲುವನ್ನು ತೆಗೆದುಕೊಂಡರೂ ಅದೊಂದು ಪಾಪವಾಗಲಾರದು. ಮಾತ್ರವಲ್ಲ, ಈ ದೇಶಕ್ಕೆ ಯಾವುದೇ ರೀತಿಯ ಹಾನಿಯೂ ಆಗಿಲ್ಲದಿದ್ದರೆ ಅದಕ್ಕೆ ನನ್ನ ಪರಿಶುದ್ಧವಾದ ಒಳದನಿಯೇ ಕಾರಣವಾಗಿದೆ. ನನ್ನ ಅಂತರಂಗದ ಕರೆಗೆ ಬದ್ಧನಾಗಿ ಈ ದೇಶಕ್ಕೆ ಯಾವುದೇ ಧಕ್ಕೆಯನ್ನೂ ಮಾಡದೆ ನನ್ನ ಸಮುದಾಯಗಳಿಗೆ ಮಾನವ ಹಕ್ಕುಗಳನ್ನು ದೊರಕಿಸಿಕೊಡುವುದಕ್ಕೆ ನಾನು ಬದ್ಧನಾಗಿದ್ದೇನೆ.

ಮುಸ್ಲಿಮರು ಹಾಗೂ ಸಿಖ್ಖರು ಅಸ್ಪೃಶ್ಯರಿಗಿಂತ ಸಾಮಾಜಿಕ-ಆರ್ಥಿಕ-ರಾಜಕೀಯವಾಗಿ ಸಶಕ್ತರಾಗಿದ್ದಾರೆಂದು ಎಲ್ಲರೂ ಬಲ್ಲರು. ಮೊದಲ ದುಂಡುಮೇಜಿನ ಅಧಿವೇಶನವು ಮುಸ್ಲಿಮರ ಬೇಡಿಕೆಗಳನ್ನು ಮಾನ್ಯ ಮಾಡಿದೆ. ರಾಜಕೀಯ ರಕ್ಷಣೆ ಒದಗಿಸಲು ಶಿಫಾರಸ್ಸು ಮಾಡಿದೆ. ಕಾಂಗ್ರೆಸ್ ಕೂಡ ಅವರ ಬೇಡಿಕೆಗಳನ್ನು ಒಪ್ಪಿದೆ. ಮತ್ತು ಮೊದಲ ದುಂಡುಮೇಜಿನ ಅಧಿವೇಶನ ದಮನಿತ ವರ್ಗಗಳ ರಾಜಕೀಯ ಹಕ್ಕುಗಳಿಗೆ ಮಾನ್ಯತೆ ನೀಡಿ ಅವರಿಗೆ ತಕ್ಕಷ್ಟು ಪ್ರಾತಿನಿಧ್ಯ ನೀಡುವ ಶಿಫಾರಸ್ಸುಗಳನ್ನು ಮಾಡಿದೆ. ನಮ್ಮ ಪ್ರಕಾರ ಅದು ದಮನಿತ ವರ್ಗಗಳಿಗೆ ಫಲಪ್ರದವಾಗಿದೆ. ನಿಮ್ಮ ಅಭಿಪ್ರಾಯವೇನು?

ಗಾಂಧಿ : ಅಸ್ಪೃಶ್ಯರನ್ನು ಹಿಂದೂಗಳಿಂದ ರಾಜಕೀಯವಾಗಿ ಬೇರೆ ಮಾಡುವುದನ್ನು ನಾನು ವಿರೋಧಿಸುತ್ತೇನೆ. ಅದು ಆತ್ಮಹತ್ಯಾತ್ಮಕ.

ಅಂಬೇಡ್ಕರ್ : ನಿಮ್ಮ ಮುಕ್ತವಾದ ಅಭಿಪ್ರಾಯಕ್ಕೆ ಧನ್ಯವಾದಗಳು. ಅಸ್ಪೃಶ್ಯತೆಯ ಸಮಸ್ಯೆಗೆ ಸಂಬಂಧಿಸಿದಂತೆ ನಮ್ಮ ನಿಲುವುಗಳು ಏನು ಎಂಬುದರ ಅರಿವು ಇದೀಗ ಆಯಿತು. ನಾನಿನ್ನು ಬರುತ್ತೇನೆ.

(ಮಣಿಭವನ, ಮಲಬಾರ್ ಹಿಲ್ಸ್, ಬಾಂಬೆ, ಆಗಸ್ಟ ೧೪, ೧೯೩೧)

ಕನ್ನಡಕ್ಕೆ: ಕೇಶವ ಮಳಗಿ

೮೬

ಕೊಡಗಿನ ಗೌರಮ್ಮನ ಜೊತೆಗೆ

[ಗಾಂಧೀಜಿ ಕೊಡಗಿಗೆ ಬಂದಾಗ ತಮ್ಮ ಮನೆಗೂ ಬರಬೇಕೆಂದು ಉದಯೋನ್ಮುಖ ಕನ್ನಡ ಕತೆಗಾರ್ತಿ ಗೌರಮ್ಮನ ಆಸೆ. ಆದರೆ ಆ ಊರಿನ ಸ್ವಾಗತ ಮಂಡಲಿಯವರು ಅದಕ್ಕೆ ಗಮನ ಕೊಡಲಿಲ್ಲ. ಗೌರಮ್ಮನಿಗೆ ತುಂಬ ನೋವಾಯಿತು. ಅನ್ನ ನೀರನ್ನೇ ಮುಟ್ಟಲಿಲ್ಲ. ಬೆಳಗಿನಿಂದ ಉಪವಾಸ. ಈ ಸುದ್ದಿ ಹೇಗೋ ಗಾಂಧೀಜಿಗೆ ತಿಳಿಯಿತು. ಗೌರಮ್ಮ ಅವರಿದ್ದಲ್ಲಿಗೆ ಬಂದಳು. ಬಂದವಳೇ ಅಳತೊಡಗಿದಳು. ಗಂಟಲು ಬಿಗಿದು ಬಂತು. ಮಾತಾಡಲಾಗಲಿಲ್ಲ.]

ಬಾಪೂ : ಉಪವಾಸ ಏಕಮ್ಮ, ತಾಯಿ?

ಗೌರಮ್ಮ : ನೀವು ನಮ್ಮ ಮನೆಗೆ ಬರಲಿಲ್ಲ ಎಂದು. ನಿಮಗಾಗಿ ಕೆಲವು ಒಡವೆ ತೆಗೆದಿಟ್ಟದ್ದೇನೆ. (ದುಃಖದಿಂದ ಆಕೆಯ ಕೊರಳು ಉಬ್ಬಿ ಬಂದಿತ್ತು.)

ಬಾಪೂ : ಬಹಳ ಒಳ್ಳೆಯದು. ಆದರೆ ಮೊದಲು ನಿನ್ನ ಉಪವಾಸ ನಿಲ್ಲಿಸಬೇಕು.

ಗೌರಮ್ಮ : ನೀವು ಬರುತ್ತೇನೆ ಎಂದು ಮಾತು ಕೊಟ್ಟರೆ.

ಬಾಪೂ : ಮಾತು ಕೊಡು ಎಂದು ಕೇಳಬೇಡ ತಂಗೀ. ತೆಗೆದುಕೋ. ಈ ಕಿತ್ತಳೆ ಹಣ್ಣು ತಿನ್ನು ಮೊದಲು. ಹಾಗೆಲ್ಲ ಚೌಕಾಸಿ ಮಾಡುತ್ತಾರೆಯೇ? ನನ್ನ ಮೇಲೆ ನಂಬಿಕೆ ಇರಲಿ. ನಿನ್ನ ಪ್ರೇಮದ ಅದಮ್ಯ ಶಕ್ತಿಯಲ್ಲಿ ನಿನಗೆ ನಂಬಿಕೆ ಇರಲಿ.

ಅಲ್ಲಿಗೂ ಗೌರಮ್ಮ ಹಣ್ಣು ಮುಟ್ಟಲಿಲ್ಲ. ಮಾತು ಆಗಲೇ ಕೊಟ್ಟು ಆಯಿತು ಎಂಬುದು ಆಕೆಗೆ ಅರ್ಥ ಆಗಲಿಲ್ಲ. ಮೀರಾ ಬೆನ್ ಹಣ್ಣು ಸುಲಿದಳು. ಗೌರಮ್ಮನಿಗೆ ಇನ್ನೂ ಅನುಮಾನ.

'ನೀವು ಬರುತ್ತೀರಾ ಹಾಗಾದರೆ?' ಎಂದಳು.

'ಬರುತ್ತಾರೆ ತಗೋ ತಾಯಿ' ಮೀರಾ ಬೆನ್ ಹೇಳಿದಳು.

ನಗುನಗುತ್ತಾ ಗೌರಮ್ಮ ಹಣ್ಣು ತಿಂದಳು. ಅಲ್ಲಿಗೆ ಗಾಂಧೀಜಿ ಬಿಟ್ಟಾರೆಯೇ? ಕೊಟ್ಟ ಆಭರಣವನ್ನು ಮತ್ತೆ ಕೊಡಬಾರದು ಎಂದು ನಿಯಮ ಹಾಕಿದರು. ಅದಕ್ಕೆ ಗೌರಮ್ಮ ಒಪ್ಪಿದಳು. ಗೌರಮ್ಮನಿಗೆ ಆಗ ೨೧ ವರ್ಷ. ಮದುವೆ ಆಗಿತ್ತು. ಆಕೆಯ ಗಂಡ ಗೋಪಾಲಕೃಷ್ಣಯ್ಯನೂ ಜೊತೆಯಲ್ಲಿದ್ದರು.

ಗಂಡನನ್ನು ಗಾಂಧೀಜಿ ಕೇಳಿದರು: 'ಒಡವೆ ಕೊಡಬೇಕೆಂದು ಈಕೆಗೆ ಯಾರು ಹೇಳಿದರು?'

'ಯಾರೂ ಇಲ್ಲ. ಆಕೆಯದೇ ಇಚ್ಛೆ. ನಾನು ಒಪ್ಪಿಗೆ ಕೊಟ್ಟೆ.'

ಆಗ ಆತನಿಗೆ ೪೦ ರೂಪಾಯಿ ಸಂಬಳ ಬರುತ್ತಿತ್ತು.

ಗಾಂಧೀಜಿ ಈ ದಂಪತಿಗಳಿಗೆ ಸಾಕಷ್ಟು ಎಚ್ಚರಿಕೆ ಕೊಟ್ಟರು. ಉತ್ಸಾಹದ ಭರದಲ್ಲಿ ಒಡವೆಗಳನ್ನು ಕೊಡುವುದರ ತಪ್ಪನ್ನು ಅವರು ಮನಗಾಣಿಸಿಕೊಟ್ಟರು. 'ನೀವು ಸರಳ ಜೀವನ ನಡೆಸಿದರೆ ಅದು ಬಹಳ ಒಳ್ಳೆಯದೇ' ಎಂದರು.

ಗೌರಮ್ಮನೂ ಆಕೆಯ ಗಂಡನೂ ಒಪ್ಪಿಕೊಂಡರು. ಆಮೇಲೆ ಗಾಂಧೀಜಿ ಅವರ ಮನೆಗೆ ಹೋದಾಗ ಆಕೆ ಕೆಲವು ಒಡವೆಗಳನ್ನು ಕೊಟ್ಟಳು.

(ಆಕರ: 'ಗಾಂಧಿ ಮತ್ತು ಕರ್ನಾಟಕ', ಸಂ. ಸಿದ್ದವನಹಳ್ಳಿ ಕೃಷ್ಣಶರ್ಮ. ಪ್ರ: ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ೨೦೦೮)

೮೭

ಖಾದಿ, ಶಾಲೆ, ಮೇಷ್ಟರು

ಪ್ರಶ್ನೆ : ನೂಲುವುದರಿಂದ ಯಾರಾದರೂ ಹೊಟ್ಟೆ ಹೊರೆಯಬಲ್ಲರೆ?

ಗಾಂಧೀಜಿ : ಇದು ಬಹಳ ಹಳೆಯ ಪ್ರಶ್ನೆ. ಆದರೆ ಈ ಪ್ರಶ್ನೆಯನ್ನು ಎಷ್ಟು ಸಲ ಕೇಳಿದರೆ ಅಷ್ಟು ಸಲವೂ ಉತ್ತರ ಕೊಡಬೇಕು. ನೂಲುವುದು ಪೂರ್ಣಾವಧಿ ಉದ್ಯೋಗವಲ್ಲ. ಒಂದೆರಡು ಸಂದರ್ಭ ಬಿಟ್ಟರೆ ಇದು ಜೀವನೋಪಾಯ ಅಲ್ಲವೆಂದು ಹಳ್ಳಿಗರಿಗೂ ತಿಳಿದಿದೆ. ಆದರೆ ಬೇರೆಯವರು ಮಾತ್ರ ಯಜ್ಞಾರ್ಥವಾಗಿ ನೂಲಬೇಕು.

ಪ್ರಶ್ನೆ : ನಾವು ಈ ಕೆಲಸದಲ್ಲಿ ಹೇಗೆ ನೆರವಾಗಬಹುದು?

ಗಾಂಧೀಜಿ : ತಕಲಿ ನೂಲುವುದನ್ನು ಎಲ್ಲ ಹುಡುಗರಿಗೆ ಕಡ್ಡಾಯ ಮಾಡಬೇಕು. ದಿನದ ಕೆಲಸವನ್ನು ವಿನಯದಿಂದ ನಡೆಸಲು ಶಾಲೆ ಪ್ರಾರಂಭ ಆಗುವಾಗ ಕೆಲವು ಕಡೆ ಪ್ರಾರ್ಥನೆ ಮಾಡುವುದಿಲ್ಲವೇ? ಹಾಗೆಯೇ ಅರ್ಧ ಗಂಟೆ ನೂಲುವಿಕೆಯಿಂದಲೂ ಶಾಲೆ ಪ್ರಾರಂಭಿಸಬಹುದು.

ಪ್ರಶ್ನೆ : ಕಾಲೇಜು ವಿದ್ಯಾರ್ಥಿಗಳೂ ಇದನ್ನು ಮಾಡಬೇಕೆ?

ಗಾಂಧೀಜಿ : ಖಂಡಿತ. ಎಲ್ಲರೂ, ಪ್ರತಿಯೊಬ್ಬರೂ ಮಾಡಬೇಕು. ನಾನು ವೈಸರಾಯ್ ಆಗಿದ್ದರೆ ಪ್ರತಿಯೊಬ್ಬ ಸರಕಾರಿ ನೌಕರನೂ ಮೇಜಿನ ಮುಂದೆ ಕೂಡುವ ಮೊದಲು ತಕಲಿಯಿಂದ ನೂಲಲೇಬೇಕು ಎಂದು ಕಡ್ಡಾಯ ಮಾಡುತ್ತಿದ್ದೆ.

ಜನ : ನೀವೇ ವೈಸರಾಯ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು!

ಗಾಂಧೀಜಿ : ಆಗ ನೀವು ನನ್ನನ್ನು ಹರಸುತ್ತಿರಲಿಲ್ಲ, ಶಪಿಸುತ್ತಿದ್ದಿರಿ. ಏಕೆಂದರೆ ನಾನು ಇನ್ನೂ ಕೆಲವು ವಿಚಿತ್ರಗಳನ್ನು ಹೇರುತ್ತಿದ್ದೆ!

ಪ್ರಶ್ನೆ : ಉಪಾಧ್ಯಾಯರು ಹೇಗೆ ಇರಬೇಕೆಂದು ನಿಮ್ಮ ಅಭಿಪ್ರಾಯ?

ಗಾಂಧೀಜಿ : ಒಳ್ಳೆಯವರಾಗಿರಲಿ, ಬಲಿಷ್ಠರೂ, ಪರಿಶುದ್ಧರೂ, ನಿರ್ಭೀತರೂ ಆಗಿರಲಿ. ಹುಡುಗರೊಡನೆ ಹೆಚ್ಚು ಹೆಚ್ಚು ತಾದಾತ್ಮ್ಯ ಇರಲಿ.

(೧೩-೦೮-೧೯೨೧. ಆಕರ: 'ಗಾಂಧಿ ಮತ್ತು ಕರ್ನಾಟಕ', ಸಂ. ಸಿದ್ದವನಹಳ್ಳಿ ಕೃಷ್ಣಶರ್ಮ. ಪ್ರ: ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ೨೦೦೮)

೮೮

ಸಮಾಜವಾದ, ಕಮ್ಯುನಿಸಂ ಇತ್ಯಾದಿ

ಪಂಚಗನಿ
ಜುಲೈ ೧೭, ೧೯೪೬

ಲೂಯಿ ಫಿಶರ್: ರಾಜಕೀಯ ಉದ್ದೇಶಗಳಿಗೆ ಸಂಸತ್ತನ್ನು ವೇದಿಕೆಯಾಗಿ ಬಳಸಿಕೊಳ್ಳಬಹುದು ಎಂಬುದು ನನ್ನ ಅನಿಸಿಕೆ. ಸಂಸತ್ತು ಒಂದು ಸ್ವಾಯತ್ತ ಘಟಕವೆಂದೂ ಸಹ ನಾನು ನಂಬುತ್ತೇನೆ. ಈ ಕುರಿತು ನಿಮ್ಮ ಅಭಿಪ್ರಾಯ?

ಗಾಂಧಿ : ಸ್ವಾಯತ್ತ ಘಟಕ ಎಂದು ಘೋಷಿಸಿಕೊಂಡ ಮಾತ್ರಕ್ಕೆ ಸಂಸತ್ತು ಸ್ವಾಯತ್ತವಾಗಿಬಿಡುವುದಿಲ್ಲ. ಬ್ರಿಟಿಷ್ ಸಂಸತ್ತನ್ನು ಸಂಪೂರ್ಣ ಸ್ವಾಯತ್ತ ಎಂದು ಕರೆಯುವುದರಲ್ಲಿ ಅರ್ಥವಿಲ್ಲ.

ಫಿಶರ್ : ಸರಿ, ನಿಮ್ಮ ಪ್ರಕಾರ ಸಮಾಜವಾದ ಅಂದರೆ ಏನು?

ಗಾಂಧಿ : ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನೂ ಒಳಗೊಳ್ಳುವ, ಮತ್ತು ಎಲ್ಲ ತಬ್ಬಲಿ, ಅಸಹಾಯಕರ ಹಿತಾಸಕ್ತಿಗೆ ದುಡಿಯುವ ರಾಜಕಾರಣ. ಕೆಲವರು ಪ್ರತಿಪಾದಿಸುವ ಸಮಾಜವಾದ ಈ ದಿಸೆಯಲ್ಲಿ ಚಿಂತಿಸಿದಂತೆ ಕಾಣುವುದಿಲ್ಲ. ಉದಾಹರಣೆಗೆ, ತನ್ನ ದೇಶದ ಪ್ರತಿಯೊಬ್ಬ ಪ್ರಜೆಯೂ ಕಾರಿನಲ್ಲಿ ಓಡಾಡುವಂತಾಗುವುದೇ ಸಮಾಜವಾದ ಎಂದು ಅಮೆರಿಕ ಬಗೆದಂತಿದೆ. ಅದು ಅವರ ಸಮಾಜವಾದದ ಕಲ್ಪನೆ. ನಾನು ನನ್ನ ವ್ಯಕ್ತಿತ್ವವನ್ನು ಸಂಪೂರ್ಣ ಅಭಿವ್ಯಕ್ತಿಸುವ ಸ್ವಾತಂತ್ರ್ಯವಿರುವ ಒಂದು ವ್ಯವಸ್ಥೆಯನ್ನು ಸ್ವಾಗತಿಸುತ್ತೇನೆ. ಆಕಾಶಕ್ಕೆ ಏಣಿ ಹಾಕುವಷ್ಟು ಅವಕಾಶ ಮಾಡಿಕೊಡುವ ವ್ಯವಸ್ಥೆ ಅದು... ಆಕಾಶಕ್ಕೆ ಏಣಿ ಹಾಕುವಂಥ ಅತಿರೇಕದ ಕಾರ್ಯಗಳನ್ನು ನಾನು ಮಾಡಲಾರೆ ಎನ್ನುವುದು ಬೇರೆ ಮಾತು. ಆದರೆ ಅನೇಕರು

ಈಗೀಗ ಕಲ್ಪಿಸುತ್ತಿರುವ ಸಮಾಜವಾದದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಎಂಬುದಕ್ಕೆ ಅರ್ಥವೇ ಇರುವಂತೆ ಕಾಣುತ್ತಿಲ್ಲ.

ಫಿಶರ್ : ನಿಮ್ಮ ಅರ್ಥದ ಸಮಾಜವಾದದಲ್ಲಿ ಮಕ್ಕಳ ಮೇಲೆ ಪ್ರಭುತ್ವಕ್ಕೆ ಯಾವ ಹಕ್ಕೂ ಇಲ್ಲವೇನು... ಅಂದರೆ ಅವರಿಗೆ ಶಿಕ್ಷಣ ಕೊಡುವ ನಿಟ್ಟಿನಲ್ಲಿ?

ಗಾಂಧಿ : ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಅಮೆರಿಕವೂ ಸೇರಿದಂತೆ ಎಲ್ಲ ಪ್ರಭುತ್ವಗಳೂ ಹೊತ್ತುಕೊಂಡಿವೆ.

ಫಿಶರ್ : ಅಂದಮೇಲೆ ಅಮೆರಿಕವು ರಷ್ಯಾಕ್ಕಿಂತ ಯಾವ ರೀತಿಯಿಂದಲೂ ಭಿನ್ನವಾಗಿಲ್ಲ ಎಂದಾಯ್ತು.

ಗಾಂಧಿ : ಆದರೆ ಸಮಾಜವಾದ ಆರಾಮಕುರ್ಚಿಯ ಚಿಂತನೆ ಎನ್ನುವಂತಾಗಿಬಿಟ್ಟು, ಅದು ಸರ್ವಾಧಿಕಾರಿ ಧೋರಣೆ ರೂಪಿಸಿಕೊಳ್ಳುತ್ತಿದೆ. ಹಾಗೆ ನೋಡು ವುದಾದರೆ ನನ್ನನ್ನು ನಾನು ಕಮ್ಯುನಿಸ್ಟ್ ಅಂತಲೂ ಕರೆದುಕೊಳ್ಳುತ್ತೇನೆ.

ಫಿಶರ್ : ದಯವಿಟ್ಟು ಹಾಗೆ ಕರೆದುಕೊಳ್ಳಬೇಡಿ! ಕೇಳಿಸಿಕೊಳ್ಳಲು ಭಯವಾಗುತ್ತೆ. ನಮಗೆಲ್ಲ ನೀವು ಪ್ರತಿಪಾದಿಸುವ ಸಮಾಜವಾದ ಬೇಕು... ಜಯಪ್ರಕಾಶ್ ಮತ್ತು ಅವರ ಸಂಗಡಿಗರು ಪ್ರತಿಪಾದಿಸುವ ಸಮಾಜವಾದ ಬೇಕು... ಮುಕ್ತ ವಾತಾವರಣ ಇರುವ ಸಮಾಜ ಬೇಕು. ಕಮ್ಯುನಿಸ್ಟರಿಗೆ ಅದು ಬೇಕಿಲ್ಲ. ಅವರು ಎಲ್ಲರ ಮೇಲೆ, ಎಲ್ಲದರ ಮೇಲೆ ಹಿಡಿತ ಸಾಧಿಸಲು ಬಯಸುವವರು.

ಗಾಂಧಿ : ಮಾರ್ಕ್ಸ್ ಬಗ್ಗೆ ಕೂಡ ನಿಮ್ಮ ನಿಲುವು ಇದೇ ಏನು?

ಫಿಶರ್ : ಮಾರ್ಕ್ಸ್‌ನನ್ನು ಕಮ್ಯುನಿಸ್ಟರು ತಮಗೆ ಬೇಕಾದ ಹಾಗೆ ತಿರುಚಿಕೊಂಡಿದ್ದಾರೆ.

ಗಾಂಧಿ : ಲೆನಿನ್ ಬಗ್ಗೆ ಏನು ಹೇಳುತ್ತೀರಾ?

ಫಿಶರ್ : ಮಾರ್ಕ್ಸ್‌ನನ್ನು ತಿರುಚುವ ಕೆಲಸ ಮೊದಲಾಗಿದ್ದೇ ಲೆನಿನ್‌ನಿಂದ... ಈಗ ಸ್ಟಾಲಿನ್‌ವರೆಗೆ ಬಂದು ನಿಂತಿದೆ.

ಗಾಂಧಿ : ಅಂದರೆ ನೀವು ಹೇಳೋದು ಸ್ಟಾಲಿನ್ ಮಾದರಿಯ ಕಮ್ಯುನಿಸಂ ನಿಮಗೆ ಒಪ್ಪಿಗೆಯಿಲ್ಲ ಎಂದೇ?

ಫಿಶರ್ : ಹೌದು... ಆದರೆ ಭಾರತದ ಕಮ್ಯುನಿಸ್ಟರು ಸ್ಟಾಲಿನ್ ಮಾದರಿಯ ಕಮ್ಯುನಿಸಮ್ಮನ್ನು ತರಬೇಕೆಂದಿದ್ದಾರೆ ಮತ್ತು ಅದಕ್ಕೆ ನಿಮ್ಮ ಹೆಸರನ್ನು ಬಳಸಿಕೊಳ್ಳುತ್ತಿದ್ದಾರೆ!

ಗಾಂಧಿ : ಹಾಗಿದ್ದರೆ ಅವರು ಇದರಲ್ಲಿ ಯಶಸ್ವಿಯಾಗೋದು ಸಾಧ್ಯವಿಲ್ಲ...

(ಆಕರ: ದ ಆಕ್ಸ್‌ಫರ್ಡ್ ಇಂಡಿಯಾ ಗಾಂಧಿ, ಒ.ಯು.ಪಿ., ೨೦೦೮)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೮೯

ನಾನು ವೈಸರಾಯ್ ಆದರೆ...

ಲೂಯಿ ಫಿಶರ್: ನಿಮ್ಮ ತರುಣ ಅನುಯಾಯಿಗಳಲ್ಲಿ ಜಾಗತಿಕ ಪರವಾದ ಹಿತಾಸಕ್ತಿ ಕಡಿಮೆಯಾಗಿ, ದೇಶೀಯ ಪರವಾದ ಭಾವನೆಗಳ ಕೈಮೇಲಾದಂತೆ ಕಾಣುತ್ತದೆ.

ಗಾಂಧಿ: ಹಾಗೇನಿಲ್ಲ. ದಯನೀಯ ಸ್ಥಿತಿಯಲ್ಲಿರುವ ಅನೇಕ ವಸಾಹತು ದೇಶಗಳ ಪರವಾಗಿ ನಾವೂ ಕೂಡ ಜಾಗತಿಕ ಮಟ್ಟದಲ್ಲಿ ದನಿಯೆತ್ತಿದ್ದೇವೆ. ಹಾಗೆ ನೋಡುವುದಾದರೆ ಶೋಷಿತ ವಸಾಹತು ದೇಶಗಳ ಪೈಕಿ ನಾವೇ ಮುಂಚೂಣಿಯಲ್ಲಿರುವವರು.

ಫಿಶರ್: ಆದರೆ ಬಿಳಿಯರ ಬಗ್ಗೆ ದ್ವೇಷವೂ ಇಲ್ಲಿ ಹೆಚ್ಚಾಗುತ್ತಿರುವಂತಿದೆಯಲ್ಲ! ಬಾಂಬೆಯ ತಾಜ್ ಹೋಟೆಲ್‌ನಲ್ಲಿ 'ದಕ್ಷಿಣ ಆಫ್ರಿಕನ್ನರಿಗೆ ಪ್ರವೇಶವಿಲ್ಲ' ಎಂಬ ಪ್ರಕಟಣೆಯನ್ನೇ ಹಾಕಿಬಿಟ್ಟಿದ್ದಾರೆ. ನಿಮ್ಮ ಅಹಿಂಸಾ ಚಳುವಳಿ ಹೆಚ್ಚು ಉದಾರವಾಗಿರಬೇಕಲ್ಲವೆ?

ಗಾಂಧಿ: ಅಹಿಂಸಾ ಚಳುವಳಿಗೂ ಇದಕ್ಕೂ ಏನು ಸಂಬಂಧ? ನೋಡಿ, ಈಗ ಇಂಡಿಯಾವನ್ನು ಆಳುತ್ತಿರುವವರು ಬ್ರಿಟಿಷರು. ಹಾಗಿದ್ದೂ ತಾಜ್ ಹೋಟೆಲ್‌ನವರು ಅಂಥ ಪ್ರಕಟಣೆಯನ್ನು ಹಾಕುವ ದಿಟ್ಟತನ ತೋರುತ್ತಾರೆಂದರೆ ಅದು ಆ ಹೋಟೆಲ್‌ನ ಗರಿಮೆ ಎಂದೇ ನನಗನ್ನಿಸುತ್ತದೆ.

ಫಿಶರ್ : ಇದು ಎಲ್ಲ ರಾಷ್ಟ್ರೀಯತಾವಾದಿಗಳೂ ಮಾಡುವ ವಾದದಂತೆಯೇ ಆಯ್ತು... ನೀವೇನಾದರೂ ಭಿನ್ನವಾಗಿ ಹೇಳುವುದಿದ್ದರೆ ಹೇಳಿ.

ಗಾಂಧಿ : ಹಾಗಿದ್ದರೆ ಇದೊಂದು ಬಾರಿ ನನ್ನನ್ನೂ ರಾಷ್ಟ್ರೀಯತಾವಾದಿಗಳ ಪಟ್ಟಿಗೆ ಸೇರಿಸಿಕೊಂಡುಬಿಡಿ. ತಮ್ಮ ನೆಲದ ನಾಗರಿಕರನ್ನು ಸಮಾನವಾಗಿ

ನಡೆಸಿಕೊಳ್ಳಲಾಗದಿದ್ದ ಮೇಲೆ ಇಲ್ಲಿಗೆ ಬಂದು ಸಮಾನತೆಯ ಪ್ರಶ್ನೆಗಳನ್ನೆತ್ತಲು ಬಿಳಿಯ ಜನರಿಗೆ ಯಾವ ಹಕ್ಕಿದೆ?

ಫಿಶರ್ : ನೀವೆನ್ನುವುದು ನಿಜ. ಆದರೆ ಇದು ಹಕ್ಕಿನ ಪ್ರಶ್ನೆಯಲ್ಲ. ಅವರನ್ನು ನೀವು ಅತಿಥಿಗಳಂತೆ ನಡೆಸಿಕೊಳ್ಳಬಹುದಲ್ಲ?

ಗಾಂಧಿ : ನಾನೇನಾದರೂ ಭಾರತದ ವೈಸರಾಯ್ ಆಗಿ ನೇಮಕವಾದರೆ ಆ ಕುರಿತು ಯೋಚಿಸಬಹುದು...

ಫಿಶರ್ : ವೈಸರಾಯ್ ಅಂದಿರಾ? ಅಥವಾ ಭಾರತ ಗಣರಾಜ್ಯದ ಅಧ್ಯಕ್ಷನಾಗ ಬೇಕೆಂದು ನಿಮ್ಮ ಮನಸ್ಸಿನಲ್ಲಿದೆಯೊ?!

ಗಾಂಧಿ : ಇಲ್ಲ... ನನಗೆ ಅಂಥ ಉದ್ದೇಶವಿಲ್ಲ. ಸಂವಿಧಾನಬದ್ಧ ವೈಸರಾಯನ್ನಾಗಿ ಒಂದೊಮ್ಮೆ ನನ್ನನ್ನು ಆರಿಸಿದರೆ ಆ ಹುದ್ದೆಯನ್ನು ನಾನು ಒಪ್ಪಿಕೊಳ್ಳ ಬಹುದೇನೋ, ಅಷ್ಟೆ... ಅದೂ ತಾತ್ಕಾಲಿಕವಾಗಿ! ಹಾಗೇನಾದರೂ ವೈಸರಾಯ್ ಆಗಿ ನೇಮಕವಾದರೆ ಮೊದಲು ನಾನು ವೈಸರಾಯ್ ಬಂಗಲೆಯನ್ನು ಹರಿಜನರಿಗೆ ಬಿಡಿಸಿಕೊಡುತ್ತೇನೆ. ಆಮೇಲೆ ದಕ್ಷಿಣ ಆಫ್ರಿಕಾದ ಬ್ರಿಟಿಷರನ್ನು ಭಾರತಕ್ಕೆ ಆಹ್ವಾನಿಸಿ ನನ್ನ ಆಶ್ರಮದಲ್ಲಿ ಉಳಿಸುತ್ತೇನೆ. ಮತ್ತು ಅವರಿಗೆ ಹೇಳುತ್ತೇನೆ– 'ನೋಡಿ, ನಮ್ಮ ಜನರನ್ನು ನೀವು ನಾಶ ಮಾಡಿದ್ದೀರಿ. ಆದರೆ ನಾವು ನಿಮ್ಮ ಜೊತೆ ಹಾಗೆ ನಡೆದುಕೊಳ್ಳುವುದಿಲ್ಲ; ದಕ್ಷಿಣ ಆಫ್ರಿಕಾದಲ್ಲಿ ನಮ್ಮ ಮೇಲೆ ನೀವು ದಬ್ಬಾಳಿಕೆ ಮಾಡಿದಂತೆ ನಾವು ನಿಮ್ಮ ಮೇಲೆ ದಬ್ಬಾಳಿಕೆ ಮಾಡುವುದಿಲ್ಲ' ಎಂದು. ಆಗಲಾದರೂ ತಮ್ಮ ಕೃತ್ಯಗಳ ಬಗ್ಗೆ ಅವರಿಗೆ ನಾಚಿಕೆ ಆಗುತ್ತದೆಯೋ ನೋಡಬೇಕು...

(೧೯೪೬, 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೮೫, ಪು.೭–೧೧)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೯೦

ಮನೋಬಲ

ಮಾಟ್: ನಿಮಗೆ ಭರವಸೆ ಹಾಗೂ ನೆಮ್ಮದಿಯನ್ನು ಕೊಡುವ ಸಂಗತಿ ಯಾವುದು?

ಗಾಂಧಿ : ದೈವಶ್ರದ್ಧೆ ಹಾಗೂ ಅದರಿಂದ ನಾನು ಗಳಿಸಿಕೊಂಡಿರುವ ಆತ್ಮಶ್ರದ್ಧೆ ಇರಬಹುದು.

ಮಾಟ್: ಅಂದರೆ ಎದೆಗುಂದಿದಾಗ ನೀವು ಈ ಶ್ರದ್ಧೆಯ ಅಂಶವನ್ನು ಅವಲಂಬಿಸಿದ್ದೀರೇನು?

ಗಾಂಧಿ : ಹೌದು. ಹಾಗಾಗಿಯೇ ನನ್ನನ್ನು ನಾನು 'ದೊಡ್ಡ ಆಶಾವಾದಿ' ಎಂದು ಕರೆದುಕೊಳ್ಳುತ್ತೇನೆ.

ಮಾಟ್: ಈ ವಿಷಯದಲ್ಲಿ ನಾನೂ ಕೂಡ ನಿಮ್ಮ ಹಾಗೆಯೇ... ನಮ್ಮ ಕಷ್ಟಗಳೇ ನಮ್ಮ ವಿಮೋಚನೆಗೆ ದಾರಿತೋರಬಲ್ಲವು ಎಂದು ನಂಬಿದವ ನಾನು. ಕಷ್ಟದ ಸನ್ನಿವೇಶಗಳು ದೈವದ ಜೀವಂತಿಕೆಯ ಹುಡುಕಾಟಕ್ಕೆ ನಮ್ಮನ್ನು ಪ್ರೇರೇಪಿಸಬಲ್ಲವು...

ಗಾಂಧಿ : ಹ್ಞಾಂ! ನಾನು ಎದುರಿಸಿದ ಸನ್ನಿವೇಶಗಳೆಲ್ಲ ನನ್ನ ಶ್ರದ್ಧೆಯನ್ನು ಗಟ್ಟಿಗೊಳಿಸಿವೆ. ಕಠಿಣ ಸನ್ನಿವೇಶಗಳಿಂದ ಪಾರಾಗಲು ನನ್ನ ಶ್ರದ್ಧೆ ನನಗೆ ನೆರವಾಗಿದೆ. ಇನ್ನೂ ಅದು ಕುಂದಿಲ್ಲ. ಒಂದು ಘಟನೆಯನ್ನು ಇಲ್ಲಿ ಹೇಳುವೆ... ಇದು ಕೆಲವು ತಿಂಗಳ ಹಿಂದೆ ನಾನು ಬಾಂಬೆಯಲ್ಲಿದ್ದಾಗ ನಡೆದದ್ದು. ಒಂದು ರಾತ್ರಿ ನಿದ್ದೆಯಿಂದ ನನಗೆ ತಟಕ್ಕನೆ ಎಚ್ಚರವಾಯಿತು ಮತ್ತು ಹೆಣ್ಣಿನ ಸಾಂಗತ್ಯ ಬೇಕೆಂದು ಆ ಕ್ಷಣ ನನಗೆ ತೀವ್ರವಾಗಿ ಅನ್ನಿಸತೊಡಗಿತು. ನಲವತ್ತು ವರ್ಷಗಳ ಕಾಲ ಬ್ರಹ್ಮಚರ್ಯವನ್ನು ಸ್ವಇಚ್ಛೆಯಿಂದ ಪಾಲಿಸಿದವನ ಬದುಕಿನಲ್ಲಿ ಅಂತಹದೊಂದು ದುರ್ಭರ ಸನ್ನಿವೇಶ ಎದುರಾದರೆ ಎಷ್ಟು

ಸಂಕಟವಾಗಬಹುದು ನೀವೇ ಯೋಚಿಸಿರಿ. ನಿಜಕ್ಕೂ ಅದೊಂದು ಅಸಹನೀಯ ಕ್ಷಣ. ವಾಂಛೆಯನ್ನು ಕೊನೆಗೂ ನಾನು ಮಣಿಸಿದೆ. ಅದು ಬೇರೆಯೇ. ಆದರೆ ಕೆಲ ಗಳಿಗೆ ನಾನು ನನ್ನೊಳಗಿನ ಈ ಕತ್ತಲೆಯನ್ನು ಎದುರುಗೊಂಡೆ. ಬಹುಶಃ ದೈವಕೃಪೆಯೇ ಇರಬೇಕು... ವ್ಯಾಮೋಹದ ವಿರುದ್ಧ ಸೆಣಸಿ ಗೆಲ್ಲುವ ಮನೋಬಲ ಒಂದು ರೀತಿ ನನಗೆ ಹಾಗೆ ಸಿದ್ಧಿಸಿಬಿಟ್ಟಿದೆ.

(೧೯೩೬ರ ಡಿಸೆಂಬರ್ ೧೩-೧೪ರಂದು ನಡೆದ ಭೇಟಿಯ ಸಂದರ್ಭದಲ್ಲಿ ಜಾನ್ ಮಾಟ್ ಮತ್ತು ಗಾಂಧೀಜಿ ನಡುವೆ ನಡೆದ ಮಾತುಕತೆ; ೨೬.೧೨.೧೯೩೬, 'ಹರಿಜನ್'.)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೯೧

ಕೊಲ್ಲಲು ಬಂದವನು

ಪೊಲಾಕ್: ಆ ಮನುಷ್ಯನಿಗೆ ಏನು ಬೇಕಾಗಿತ್ತು? ಅಂಥದೇನಾದರೂ ಇತ್ತಾ?

ಗಾಂಧಿ : ಹೂಂ. ಅವನು ನನ್ನನ್ನು ಸಾಯಿಸಬೇಕು ಅಂತಿದ್ದ.

ಪೊಲಾಕ್: ನಿಮ್ಮನ್ನ? ನಿಮ್ಮನ್ನ ಸಾಯಿಸೋಕಾ? ಭಯಂಕರ! ಅವನೇನು ಹುಚ್ಚನೇ?

ಗಾಂಧಿ : ಇಲ್ಲ. ನಾನು ನನ್ನ ಜನರಿಗೆ ದ್ರೋಹ ಮಾಡುತ್ತಿದ್ದೇನೆ, ಸರ್ಕಾರದ ಜೊತೆ ಸೇರಿಕೊಂಡು ಅವರ ವಿರುದ್ಧ ಒಳಸಂಚು ಮಾಡುತ್ತಿದ್ದೇನೆ; ಆದರೂ ಅವರ ಸ್ನೇಹಿತನಂತೆ, ನಾಯಕನಂತೆ ನಾಟಕ ಆಡುತ್ತಿದ್ದೇನೆ ಅಂತ ಅವನಂದುಕೊಂಡಿದ್ದ.

ಪೊಲಾಕ್: ಅದು ಕೇಡಿತನ, ಭಯಾನಕ. ಅವನು ಒಳ್ಳೆಯವನಲ್ಲ. ಅವನನ್ನ ತಕ್ಷಣ ಬಂಧಿಸಬೇಕು, ಅವನನ್ನು ಯಾಕೆ ಸುಮ್ಮನೆ ಬಿಟ್ಟಿರಿ? ಅವನು ಹುಚ್ಚನೇ ಇರಬೇಕು.

ಗಾಂಧಿ : ಇಲ್ಲ. ಹುಚ್ಚ ಅಲ್ಲ. ಅವನು ತಪ್ಪು ತಿಳಿದುಕೊಂಡಿದ್ದ. ನೀವೇ ನೋಡಿದಿರಲ್ಲ, ನಾನು ಅವನ ಜೊತೆ ಮಾತಾಡಿದ ಮೇಲೆ, ನನ್ನ ಮೇಲೆ ಬಳಸಲು ತಂದಿದ್ದ ಚಾಕುವನ್ನು ಅವನು ನನ್ನ ಕೈಗೆ ಕೊಟ್ಟ.

ಪೊಲಾಕ್: ಕತ್ತಲಾಗಿದ್ದಿದ್ದರೆ ಅವನು ನಿಮ್ಮನ್ನು ಇರಿದುಬಿಟ್ಟಿರುತ್ತಿದ್ದ...

ಗಾಂಧಿ : ಆ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಳ್ಳಬೇಡಿ. ಅವನು ನನ್ನನ್ನು ಕೊಲ್ಲಬೇಕು ಅಂತ ಇದ್ದ; ಆದರೆ ಕೊಲ್ಲುವ ಧೈರ್ಯವಿರಲಿಲ್ಲ. ನಾನು ಅವನು ತಿಳಿದುಕೊಂಡಷ್ಟು ಕೆಟ್ಟವನಾಗಿದ್ದರೆ ಸಾವು ನನಗೆ ತಕ್ಕ ಶಿಕ್ಷೆಯೇ ಸರಿ. ಇನ್ನು ಆ ಬಗ್ಗೆ ತಲೆ ಕೆಡಿಸಿಕೊಳ್ಳೋದು ಬೇಡ. ಅದೆಲ್ಲ ಮುಗಿದ ಕಥೆ. ಅವನು ಮತ್ತೊಮ್ಮೆ ನನ್ನನ್ನು ನೋಯಿಸಲು ಬರುವುದಿಲ್ಲ. ನಾನು ಅವನನ್ನು ಬಂಧಿಸಲು ಹೇಳಿದ್ದರೆ, ಅವನು ನನ್ನ ಶತ್ರುವಾಗಿಬಿಡುತ್ತಿದ್ದ. ಈಗ ಅವನು ನನ್ನ ಸ್ನೇಹಿತನಾಗುತ್ತಾನೆ.

(೧೯೦೮ರಲ್ಲಿ ದಕ್ಷಿಣ ಆಫ್ರಿಕಾದ ಜೋಹಾನೆಸ್‌ಬರ್ಗ್‌ನಲ್ಲಿ ನಡೆದ ಹಲ್ಲೆಯ ಯತ್ನದ ಸಂದರ್ಭ. ಆಕರ: ಆಕ್ಸ್‌ಫರ್ಡ್ ಇಂಡಿಯಾ ಗಾಂಧಿ, ಒ.ಯು.ಪಿ., ೨೦೦೮, ಪು. ೧೧೬)

ಕನ್ನಡಕ್ಕೆ: **ಎಚ್.ಎಸ್. ಶೋಯಿಂಕಾ**

ಭಾಗ : ೮

ಭಾಷಣ, ಪತ್ರ, ಪ್ರತಿಕ್ರಿಯೆ

ನನಗೇನಾದರೂ ಗೌತಮ ಬುದ್ಧ ಎದುರಾದರೆ, ಯಾವುದೇ ಸಂಕೋಚವಿಲ್ಲದೆ ಒಂದು ಪ್ರಶ್ನೆ ಕೇಳುತ್ತೇನೆ: ನೀವು ಧ್ಯಾನಕ್ಕೆ ಮಹತ್ವ ಕೊಡುವುದರ ಬದಲು ಕಾಯಕದ ಪರಮಸತ್ಯವನ್ನೇಕೆ ಬೋಧಿಸಲಿಲ್ಲ?

ಮೋಹನದಾಸ್ ಕರಮಚಂದ್ ಗಾಂಧಿ

೬೨

ಒಂದು ಅಪೂರ್ಣ ಭಾಷಣ

ಭಾರತದ ಯಾವುದೇ ದೊಡ್ಡ ನಗರದಲ್ಲಿ ಅರಮನೆಗಳನ್ನು ಕಟ್ಟುವುದನ್ನು ನೋಡಿದಾಗ ನನಗೆ ಬೇಸರವಾಗುತ್ತದೆ. ಈ ಅರಮನೆಗಳನ್ನು, ಅವಕ್ಕೆ ಆಗಿರುವ ದುಂದುವೆಚ್ಚವನ್ನು ಗಮನಿಸಿದಾಗ, ಇದು ನಮ್ಮ ರೈತರಿಂದ ಬಂದ ಹಣ ಅನಿಸುತ್ತದೆ. ನಮ್ಮ ರೈತರು ಕಷ್ಟಪಟ್ಟು ಸಂಪಾದಿಸಿದ್ದನ್ನು ನಾವು ಹೀಗೆ ಸುಲಿಗೆ ಮಾಡುತ್ತಾ ಹೋದರೆ, ಅಥವಾ ಬೇರೆಯವರಿಗೆ ಸುಲಿಗೆ ಮಾಡಲು ಬಿಟ್ಟರೆ, ಸ್ವರಾಜ್ಯ ಬೇಕೆಂಬ ಭಾವನೆ ನಮ್ಮಲ್ಲಿ ಬಹಳ ಗಟ್ಟಿಯಾಗಿ ಇರಲು ಸಾಧ್ಯವಿಲ್ಲ. ರೈತರ ಮೂಲಕ ಮಾತ್ರ ನಮಗೆ ಬಿಡುಗಡೆ ಬರಲು ಸಾಧ್ಯ. ವಕೀಲರುಗಳಾಗಲೀ, ಡಾಕ್ಟರುಗಳಾಗಲೀ, ಶ್ರೀಮಂತ ಜಮೀನ್ದಾರ ರಾಗಲೀ ಅದನ್ನು ನಮಗೆ ದೊರಕಿಸಿ ಕೊಡಲು ಸಾಧ್ಯವಿಲ್ಲ.

ಈ ದೇಶ ತನ್ನ ಆಧ್ಯಾತ್ಮಿಕ ಬದುಕಿಗಾಗಿ ಪ್ರಖ್ಯಾತವಾಗಿದೆ. ಈ ವಿಷಯದಲ್ಲಿ ಇಡೀ ಜಗತ್ತಿನಲ್ಲಿ ಇದಕ್ಕೆ ಪ್ರತಿಸ್ಪರ್ಧಿಗಳಿಲ್ಲ. ಆದರೆ ಬರೀ ಮಾತಾಡಿ, ಮಾತಾಡಿ ಈ ದೇಶದ ಸತ್ವ ಸೋತಿದೆ. ಭಾಷಣಗಳನ್ನು ಕೇಳಿ ಕೇಳಿ ಕೇಳುಗರ ಕರ್ಣಪಟಲ ಹರಿದು ಹೋಗಿದೆ. ಇನ್ನು ಮುಂದೆ ನಮ್ಮ ಕಿವಿ ಕೇಳಿದರೆ, ಕಣ್ಣು ನೋಡಿದರೆ ಮಾತ್ರ ಸಾಲದು. ನಮ್ಮ ಕೈಗಳು ಕೆಲಸ ಮಾಡಬೇಕು. ಕಾಲುಗಳು ಚಲಿಸಬೇಕು.

ಬರೀ ಮಾತಿನಿಂದ ಸ್ವರಾಜ್ಯ ಪ್ರಾಪ್ತವಾಗುವುದಿಲ್ಲ. ನಮ್ಮ ನಡತೆ ಮಾತ್ರ ನಮಗೆ ಘನತೆ, ಗೌರವ ತಂದುಕೊಡಲು ಸಾಧ್ಯ. ಅದಕ್ಕೆ ಬೇಕಾದ ಸಿದ್ಧತೆಯನ್ನು ನಾವು ಮಾಡಿಕೊಂಡಿಲ್ಲ. ಉದಾಹರಣೆಗೆ, ವಿಶ್ವನಾಥ ದೇವಸ್ಥಾನದ ಎದುರಿನ ಬೀದಿಗಳನ್ನೊಮ್ಮೆ ನೆನಪಿಸಿಕೊಂಡರೆ ಸಾಕು. ದೇವಸ್ಥಾನದ ಬೀದಿಗಳು ಹಾಗೂ ಅವುಗಳ ಸುತ್ತಮುತ್ತಲಿನ ಪ್ರದೇಶ ಅಷ್ಟೊಂದು ಕೊಳಕಾಗಿ ಯಾಕಿರಬೇಕು? ಈ

ಪುರೋಹಿತರಿಗೆ ಮೈಮೇಲೆ, ಕತ್ತಿನ ಸುತ್ತ, ಕಣ್ಣಿಗೆ ಕಾಣುವಂತೆ ಹಬ್ಬಿರುವ ಕೊಳೆಯನ್ನಾದರೂ ತಿಕ್ಕಿ ತೊಳೆದುಕೊಳ್ಳಲು ಬರುವುದಿಲ್ಲವೇ? ದೇವಸ್ಥಾನದ ಸುತ್ತ ಇರುವ ಮನೆಗಳನ್ನು ಹೇಗೆ ಹೇಗೋ ಕಟ್ಟಲಾಗಿದೆ. ಬೀದಿಗಳ ಅಗಲ ಕಿರಿದು, ಅಂಕುಡೊಂಕು. ದೇವಸ್ಥಾನಗಳಲ್ಲಿ ಕೂಡ ಸ್ವಚ್ಛತೆ ಮತ್ತು ವೈಶಾಲ್ಯ ಇಲ್ಲದಿದ್ದರೆ, ಬರಲಿರುವ ಸ್ವರಾಜ್ಯ ಯಾವ ಬಗೆಯದ್ದಿರಬಹುದೆಂದು ಯಾರಾದರೂ ಊಹಿಸಿಕೊಳ್ಳಬಹುದು. ಬ್ರಿಟಿಷರು ಇಲ್ಲಿಂದ ಹೋದ ತಕ್ಷಣ ನಮ್ಮ ದೇವಸ್ಥಾನಗಳಿಗೆ ಸ್ವಚ್ಛತೆ, ಪಾವಿತ್ರ್ಯ ಮತ್ತು ಶಾಂತಿ ಬಂದುಬಿಡುವುದಿಲ್ಲ.

ಆದರೆ ಈ ಬಗೆಯ ಕೊಳಕು ವಾತಾವರಣ ಕಾಶಿಗೆ ಸೀಮಿತವಾಗಿಲ್ಲ. ಮುಂಬೈನಂಥ ನಗರಗಳ ಬೀದಿಗಳಲ್ಲಿ ನಡೆಯುವುದೇ ಹೆದರಿಕೆ ಹುಟ್ಟಿಸುತ್ತದೆ. ಯಾಕೆಂದರೆ ಎಲ್ಲಿ, ಯಾವ ಮಹಡಿಯ ಮೇಲಿಂದ ಕಸ, ಮುಸುರೆ, ನೀರು ನಮ್ಮ ತಲೆಯ ಮೇಲೆ ಬೀಳುತ್ತದೋ ಹೇಳಲು ಸಾಧ್ಯವಿಲ್ಲ. ಮಹಡಿ ಮೇಲೆ ವಾಸಿಸುವ ಜನ ಇನ್ನೊಬ್ಬರ ಮೈಮೇಲೆ ಬೀಳುವಂತೆ ಎಂಜಲು ಉಗುಳಲೂ ಹೇಸುವುದಿಲ್ಲ. ರೈಲು ಪ್ರಯಾಣದಲ್ಲೂ ಇದೇ ಪರಿಸ್ಥಿತಿ. ಬೇರೆಯವರು ಮಲಗುವ ಸ್ಥಳವನ್ನೂ ನಮ್ಮವರು ಗಲೀಜು ಮಾಡುತ್ತಾರೆ. ಇವರು ಇಂಗ್ಲಿಷ್ ಮಾತಾಡಬಹುದು. ಒಳ್ಳೊಳ್ಳೆಯ ದಿರಿಸು ಧರಿಸಬಹುದು. ಆದರೆ ಇವರ ವರ್ತನೆ, ಯೋಚನಾಕ್ರಮ ಮಾತ್ರ ಅನಾಗರಿಕವಾದದ್ದು.

ನಮ್ಮದಲ್ಲದ, ಪರಕೀಯವಾದ ಇಂಗ್ಲಿಷ್ ಭಾಷೆಯಲ್ಲಿ ನಾವು ಮಾತಾಡಬೇಕಾಗಿ ಬಂದಿರುವುದು ಅತ್ಯಂತ ಅಪಮಾನದ ಮತ್ತು ನಾಚಿಕೆಗೇಡಿನ ವಿಷಯ. ನಮ್ಮದೇ ಭಾಷೆಗಳ ಮೂಲಕ ಕಳೆದ ಐವತ್ತು ವರ್ಷಗಳಲ್ಲಿ ವಿದ್ಯಾಭ್ಯಾಸ ಪಡೆದಿದ್ದರೆ ಸ್ಥಿತಿ ಹೇಗಿರುತ್ತಿತ್ತೆಂದು ಊಹಿಸಿಕೊಳ್ಳಿ. ನಮ್ಮದೇ ಭಾಷೆಗಳಲ್ಲಿ ವಿದ್ಯಾಭ್ಯಾಸ ಪಡೆದಿದ್ದರೆ ನಮ್ಮ ಜನ ತಮ್ಮ ದೇಶದಲ್ಲೇ ಪರಕೀಯರಂತೆ ಇರುತ್ತಿರಲಿಲ್ಲ. ಬದಲು ಈ ದೇಶದ ಎಲ್ಲರ ಜೊತೆ ಬೆರೆಯುತ್ತಿದ್ದರು. ತಮ್ಮ ಜ್ಞಾನವನ್ನು ಈ ದೇಶದ ಬಡವರೂ ಸೇರಿದಂತೆ ಎಲ್ಲರ ಜೊತೆ ಹಂಚಿಕೊಳ್ಳುತ್ತಿದ್ದರು. ಹಾಗಾಗಿದ್ದರೆ ಈ ದೇಶಕ್ಕೆ ಎಂದೋ ಸ್ವಾತಂತ್ರ್ಯ ಬಂದಿರುತ್ತಿತ್ತು. ನಮ್ಮ ವಿದ್ಯಾವಂತರು ಕಳೆದ ಐವತ್ತು ವರ್ಷಗಳಲ್ಲಿ ಪಡೆದ ಜ್ಞಾನ ಈ ದೇಶದ ಪರಂಪರೆಯ ಭಾಗವಾಗುತ್ತಿತ್ತು.

ಭಾರತ ಅರಾಜಕವಾದಿಗಳ ಒಂದು ಜನಾಂಗವನ್ನೇ ನಿರ್ಮಿಸಿದೆ. ಈ ಅರಾಜಕತೆ ಭಯದ ಪರಿಣಾಮವಾಗಿ ಹುಟ್ಟಿಕೊಂಡಿದೆ. ದೇವರಲ್ಲಿ ನಂಬಿಕೆಯಿದ್ದರೆ ಯಾರಿಗೂ ಹೆದರಬೇಕಾಗಿಲ್ಲ. ಗೂಢಚಾರರಿಗೆ, ವೈಸರಾಯ್ ಅವರಿಗೆ, ಜಾರ್ಜ್ ಮಹಾರಾಜರಿಗೆ

ಕೂಡ ನಾವು ಹೆದರಬೇಕಾಗಿಲ್ಲ. ನಾನು ಇದ್ದದ್ದನ್ನು ಇದ್ದಂತೆ ಹೇಳುತ್ತಿದ್ದೇನೆ. ತಮ್ಮ ನಡವಳಿಕೆಯನ್ನೂ ಬ್ರಿಟಿಷರೂ ಭಾರತೀಯರೂ ಕೂಡಿಯೇ ತಿದ್ದಿಕೊಳ್ಳಬೇಕು...

(ಹಿಂದೂ ಯೂನಿವರ್ಸಿಟಿ ಸೆಂಟ್ರಲ್ ಕಾಲೇಜಿನಲ್ಲಿ ಮಾಡಿದ ಭಾಷಣದಿಂದ ಆಯ್ದ ಭಾಗಗಳು. 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೧೫, ಪು. ೧೪೮-೫೫)

ಕನ್ನಡಕ್ಕೆ: **ರಾಮಚಂದ್ರದೇವ**

ಟಿಪ್ಪಣಿ

ಆ್ಯನಿಬೆಸೆಂಟ್ ಬನಾರಸ್ಸಿನಲ್ಲಿ ೧೮೯೨ರಲ್ಲಿ ಒಂದು ಶಾಲೆ ಪ್ರಾರಂಭಿಸಿದರು. ಇದೇ ಶಾಲೆ ಮದನಮೋಹನ ಮಾಳವೀಯರ ಮಾರ್ಗದರ್ಶನದಲ್ಲಿ 'ಹಿಂದೂ ಯೂನಿವರ್ಸಿಟಿ ಸೆಂಟ್ರಲ್ ಕಾಲೇಜು' ಎಂಬ ಹೆಸರಿನಲ್ಲಿ ದೊಡ್ಡ ಸಂಸ್ಥೆಯಾಗಿ ಬೆಳೆಯಿತು. ಇದರ ಪ್ರಾರಂಭೋತ್ಸವ ನಡೆದದ್ದು ೧೯೧೬ ಫೆಬ್ರುವರಿ ೪ರಂದು. ಫೆಬ್ರುವರಿ ೫ನೇ ತಾರೀಕಿನಿಂದ ೮ನೇ ತಾರೀಕಿನವರೆಗೆ ಮೂರು ದಿನಗಳ ಕಾಲ ಮದನಮೋಹನ ಮಾಳವೀಯರ ಆಹ್ವಾನದ ಮೇರೆಗೆ ಗಾಂಧೀಜಿ, ಜಗದೀಶಚಂದ್ರ ಬೋಸ್, ಸಿ.ವಿ.ರಾಮನ್, ಪ್ರಫುಲ್ಲಚಂದ್ರ ರಾಯ್, ಸ್ಯಾಮ್ ಹಿಗ್ಗಿನ್ ಬಾಥಮ್, ಪೆಟ್ರಿಕ್ ಗಿಡಿಸ್, ಆ್ಯನಿಬೆಸೆಂಟ್ ಮೊದಲಾದ ಖ್ಯಾತನಾಮರು ಸರಣಿ ಭಾಷಣ ಮಾಡಿದರು. ಮುಂದೆ ಈ ಭಾಷಣಗಳು 'ಯೂನಿವರ್ಸಿಟಿ ಎಕ್ಸ್ಟೆನ್ಷನ್ ಲೆಕ್ಚರ್ಸ್' ಎಂಬ ಹೆಸರಿನಲ್ಲಿ ಪ್ರಕಟವಾದವು.

ಹಿಂದೂ ಯೂನಿವರ್ಸಿಟಿ ಸೆಂಟ್ರಲ್ ಕಾಲೇಜಿನ ಪ್ರಾರಂಭೋತ್ಸವದಲ್ಲಿ ಮಾಡಿದ ಭಾಷಣವು ಗಾಂಧೀಜಿ ಇಂಡಿಯಾದಲ್ಲಿ ಮಾಡಿದ ಮೊದಲ ಸಾರ್ವಜನಿಕ ಭಾಷಣವಾಗಿತ್ತು. ೧೯೧೬ಕ್ಕೆ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಬಂದು ಸುಮಾರು ಒಂದು ವರ್ಷವಾಗಿತ್ತು. ಭಾರತಕ್ಕೆ ಬಂದ ನಂತರ ಗೋಪಾಲಕೃಷ್ಣ ಗೋಖಲೆಯವರು ಭಾರತದ ಎಲ್ಲಾ ಭಾಗಗಳಿಗೆ ಪ್ರಯಾಣ ಮಾಡಿ ದೇಶದ ಜನಜೀವನದ ಪರಿಚಯ ಮಾಡಿಕೊಳ್ಳುವಂತೆ ಗಾಂಧೀಜಿಗೆ ತಿಳಿಸಿದ್ದರು. ಅದರಂತೆ, ಮೂರನೇ ದರ್ಜೆಯ ರೈಲು ಬೋಗಿಯಲ್ಲಿ ಭಾರತದ ಬೇರೆ ಬೇರೆ ಕಡೆಗೆ ಪ್ರಯಾಣಿಸಿ ಜನಜೀವನದ ನಿಕಟ ಪರಿಚಯವನ್ನು ಗಾಂಧೀಜಿ ಮಾಡಿಕೊಂಡಿದ್ದರು.

ಆಗಿನ್ನೂ ಗಾಂಧೀಜಿ ಮಹಾತ್ಮ ಆಗಿರಲಿಲ್ಲ. ಭಾರತದ ಬಹಳ ಜನರಿಗೆ ಅವರ ಹೆಸರೂ ಗೊತ್ತಿರಲಿಲ್ಲ. ಈ ಅಪೂರ್ಣ ಭಾಷಣದ ಕೊನೆಯಲ್ಲಿ ಗಾಂಧೀಜಿ ತಮ್ಮ ಮಾತುಗಳನ್ನು ವೈಸ್‌ರಾಯ್ ಕಡೆಗೆ ತಿರುಗಿಸಿದರು. ಬನಾರಸ್ಸಿನ ರಸ್ತೆಗಳಲ್ಲಿ ವೈಸ್‌ರಾಯ್ ಅವರ ಮೆರವಣಿಗೆ ಹಾದುಹೋಗಿತ್ತು. ಆಗ ರಸ್ತೆಯ ಬೇರೆ ಬೇರೆ ಕಡೆ ಗೂಢಚಾರರನ್ನು ನಿಲ್ಲಿಸಲಾಗಿತ್ತು. ಜನರ ಬಗ್ಗೆ ಬ್ರಿಟಿಷ್ ದೊರೆಗೆ ಇದ್ದ ಅಪನಂಬಿಕೆಯನ್ನು ಗಾಂಧೀಜಿ ಟೀಕಿಸಿದರು: 'ಯಾಕೆ ಈ ಅಪನಂಬಿಕೆ? ವೈಸ್‌ರಾಯ್ ಅವರು ಹೀಗೆ ಇದ್ದೂ ಸತ್ತಂತಹ ಜೀವನ ಬದುಕುವ ಬದಲು ಸಾಯುವುದೇ ಒಳ್ಳೆಯದಲ್ಲವೆ? ಆದರೆ ಬ್ರಿಟಿಷ್ ದೊರೆಯ ಪ್ರತಿನಿಧಿಗೆ ಮಾತ್ರ ಹಾಗನ್ನಿಸುವುದಿಲ್ಲ. ಬದುಕಿದ್ದೂ ಸತ್ತಂತಿರುವುದೇ ಅವರಿಗೆ ಖುಷಿ ಅನಿಸುತ್ತದೆ. ನಮ್ಮ ಬಗ್ಗೆ ಅವರು ಇಂಥ ಅಪನಂಬಿಕೆಯನ್ನು ಯಾಕೆ ಪ್ರದರ್ಶಿಸಬೇಕು?'

ಅಷ್ಟರಲ್ಲಿ ಭಾಷಣದ ಬಗ್ಗೆ ಪ್ರತಿಭಟನೆ ಶುರುವಾಯಿತು. ಅನೇಕರು ಎದ್ದು ಹೋಗತೊಡಗಿದರು. ಅಧ್ಯಕ್ಷ ಸ್ಥಾನದಲ್ಲಿದ್ದ ಆ್ಯನಿಬೆಸೆಂಟ್ ಭಾಷಣ ನಿಲ್ಲಿಸಿ ಕುಳಿತುಕೊಳ್ಳುವಂತೆ ಗಾಂಧೀಜಿಗೆ ಹೇಳಿದರು. ಗಾಂಧೀಜಿ ತಮ್ಮ ಭಾಷಣವನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು.

೯೩

'ದೇಶದ್ರೋಹ': ಕೋರ್ಟಿನಲ್ಲಿ ಹೇಳಿಕೆ

ನ್ಯಾಯಾಧೀಶ (ರಾಬರ್ಟ್ ಎಸ್. ಬ್ರೂಮ್‌ಫೀಲ್ಡ್): ಮಿಸ್ಟರ್ ಗಾಂಧಿ, ನಿಮಗೆ ವಿಧಿಸಿರುವ ಶಿಕ್ಷೆಯ ಬಗ್ಗೆ ಏನಾದರೂ ಹೇಳುವುದಿದೆಯೆ?

ಎಂ.ಕೆ. ಗಾಂಧಿ: ಹೌದು, ನಾನೊಂದು ಹೇಳಿಕೆ ಕೊಡಬೇಕಿದೆ.

ನ್ಯಾಯಾಧೀಶ: ಅದನ್ನು ಬರವಣಿಗೆಯಲ್ಲಿ ಕೊಡಲು ಸಾಧ್ಯವೆ? ಹಾಗೆ ಮಾಡಿದರೆ ಅದನ್ನು ದಾಖಲಿಸಲು ಸಹಾಯಕವಾಗುತ್ತದೆ.

ಗಾಂಧಿ: ನನ್ನ ಹೇಳಿಕೆಯನ್ನು ಓದಿದ ತಕ್ಷಣ ತಮಗೆ ಕೊಡುತ್ತೇನೆ.

ನನ್ನ ಲಿಖಿತ ಹೇಳಿಕೆಯನ್ನು ಓದುವ ಮೊದಲು, ನನ್ನ ವಿನಮ್ರ ವ್ಯಕ್ತಿತ್ವ ಕುರಿತು ಜ್ಞಾನಿಗಳಾದ ಅಡ್ವೊಕೇಟ್ ಜನರಲ್ ಅವರು ಆಡಿದ ಮಾತುಗಳನ್ನು ಪೂರ್ಣವಾಗಿ ಅನುಮೋದಿಸುತ್ತೇನೆ. ಅವರು ನನ್ನ ಬಗ್ಗೆ ಮಾಡಿರುವ ಎಲ್ಲ ಹೇಳಿಕೆಗಳೂ ಸರಿಯಾಗಿವೆ. ಕಾರಣ, ಹಾಲಿ ಸರ್ಕಾರಿ ವ್ಯವಸ್ಥೆಯ ವಿರುದ್ಧ ನನ್ನ ರಾಜಕೀಯ ಅವಿಶ್ವಾಸ ಹಾಗೂ ಅತೃಪ್ತಿಯ ಭಾವವನ್ನು ಜನರಿಗೆ ಸದಾ ಹೇಳುತ್ತಲೇ ಇರುವುದು ನನ್ನ ಆಳದ ರೋಷದ ಭಾಗವಾಗಿದೆಯೆಂಬ ವಾಸ್ತವಾಂಶವನ್ನು ಕೋರ್ಟಿನಿಂದ ಮುಚ್ಚಿಡುವ ಬಯಕೆಯೇನೂ ನನಗಿಲ್ಲ. ಈ ಅಸಮಾಧಾನವನ್ನು ಎಲ್ಲೆಡೆ ಬೋಧಿಸುವ ನನ್ನ 'ಈ ಕೆಲಸ 'ಯಂಗ್ ಇಂಡಿಯಾ' ಪತ್ರಿಕೆಯಿಂದ ಶುರುವಾದದ್ದಲ್ಲ; ಅದಕ್ಕಿಂತ ಮೊದಲೇ ಶುರುವಾಗಿತ್ತು' ಎಂದು ಜ್ಞಾನಿಗಳಾದ ಅಡ್ವೊಕೇಟ್ ಜನರಲ್ ಹೇಳಿರುವುದು ಕೂಡ ಸರಿಯಾಗಿದೆ. ಮುಂದೆ ನಾನು ಓದಲಿರುವ ಹೇಳಿಕೆಯಲ್ಲಿ ನನ್ನ ಈ ರೋಷ ಅಡ್ವೊಕೇಟ್ ಜನರಲ್ ಅವರು ಹೇಳಿರುವ ಕಾಲಕ್ಕಿಂತ ಎಷ್ಟೋ ಮೊದಲೇ ಶುರುವಾಗಿತ್ತು ಎಂದು ಒಪ್ಪಿಕೊಳ್ಳುವ ದುಃಖಕರ ಕರ್ತವ್ಯವೂ ನನ್ನ ಪಾಲಿಗಿದೆ. ಅದು ನನ್ನ ದುಃಖಕರ ಕರ್ತವ್ಯವಾದರೂ ನನ್ನ ಹೆಗಲ ಮೇಲಿರುವ

ಜವಾಬ್ದಾರಿಯನ್ನು ಅರಿತು ನಾನು ಈ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ಈಗಾಗಲೇ ಬಾಂಬೆ ಘಟನಾವಳಿಗಳು, ಮದ್ರಾಸ್ ಘಟನಾವಳಿಗಳು ಹಾಗೂ ಚೌರಿಚೌರಾದ ಘಟನಾವಳಿಗಳಿಗೆ ಸಂಬಂಧಿಸಿದಂತೆ ಲೆಫ್ಟಿನೆಂಟ್ ಜನರಲ್ ಅವರು ನನ್ನ ಹೆಗಲ ಮೇಲೆ ಹೊರಿಸಿರುವ ಎಲ್ಲ ತಪ್ಪುಗಳನ್ನೂ ನಾನು ಒಪ್ಪಿಕೊಳ್ಳುತ್ತೇನೆ.

ನಮ್ಮ ಜನ ಕೆಲವು ಸಲ ಹುಚ್ಚರಂತೆ ವರ್ತಿಸಿದ್ದಾರೆಂದು ನಾನು ಬಲ್ಲೆ. ಈ ಕುರಿತು ನನ್ನ ಹೃದಯಾಂತರಾಳದಿಂದ ಕ್ಷಮೆ ಯಾಚಿಸುತ್ತೇನೆ; ಆ ಕಾರಣಕ್ಕಾಗಿ ನನಗೆ ಹಗುರವಾದ ಶಿಕ್ಷೆ ನೀಡದೆ ಅತ್ಯಂತ ಉಗ್ರ ಶಿಕ್ಷೆಯನ್ನೇ ನೀಡಬೇಕೆಂದು ಮನವಿ ಮಾಡುತ್ತೇನೆ. ನಾನು ಯಾವ ದಯೆಯನ್ನೂ ಯಾಚಿಸುತ್ತಿಲ್ಲ. ನನ್ನ ಅಪರಾಧಗಳ ತೀವ್ರತೆಯನ್ನು ಕಡಿಮೆಯೆಂದು ಪರಿಗಣಿಸಬೇಕೆಂದು ಕೂಡ ನಾನು ಕೇಳಿಕೊಳ್ಳುತ್ತಿಲ್ಲ. ಯಾವುದು ಕಾನೂನಿನ ಕಣ್ಣಿಗೆ ಉದ್ದೇಶಪೂರ್ವಕವಾದ ಅಪರಾಧ ಎಂದು ಕಾಣುತ್ತದೆಯೋ, ಹಾಗೂ ಯಾವುದು ನನ್ನ ದೃಷ್ಟಿಯಲ್ಲಿ ನಾಗರಿಕನೊಬ್ಬನ ಅತಿ ಮಹತ್ವದ ಕರ್ತವ್ಯವಾಗಿದೆಯೋ ಅಂಥ ಕೆಲಸ ಮಾಡಿದ್ದಕ್ಕಾಗಿ ಅತ್ಯಂತ ಉಗ್ರ ಶಿಕ್ಷೆಯನ್ನು ನನಗೆ ನೀಡಬೇಕೆಂದು ಕೋರಲು ಹಾಗೂ ಅದನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದೇನೆಂದು ಹೇಳಲು ನಾನಿಲ್ಲಿ ನಿಂತಿದ್ದೇನೆ.

ನಾನು ನನ್ನ ಹೇಳಿಕೆಯಲ್ಲಿ ಮಂಡಿಸಲಿರುವಂತೆ, ನ್ಯಾಯಾಧೀಶರಾದ ನೀವು ಯಾವ ವ್ಯವಸ್ಥೆಯ ನೆರವಿಗೆ ನಿಂತಿದ್ದೀರೋ ಆ ವ್ಯವಸ್ಥೆಯ ಕಾನೂನುಗಳು ಜನರ ಒಳಿತಿಗಾಗಿಯೇ ಇವೆಯೆಂದು ನೀವು ನಂಬಿದ್ದರೆ, ನಿಮ್ಮೆದುರು ಇರುವ ಆಯ್ಕೆಗಳು ಎರಡೇ: ನಿಮ್ಮ ಹುದ್ದೆಗೆ ರಾಜಿನಾಮೆ ನೀಡುವುದು, ಅಥವಾ ನನಗೆ ಅತ್ಯಂತ ಉಗ್ರ ಶಿಕ್ಷೆ ವಿಧಿಸುವುದು. ನಿಮ್ಮಿಂದ ಅಂಥ ಮನಃಪರಿವರ್ತನೆಯನ್ನು ನಾನು ನಿರೀಕ್ಷಿಸುವುದಿಲ್ಲ. ಆದರೆ ನನ್ನ ಹೇಳಿಕೆ ಮುಗಿಯುವುದರೊಳಗೆ ನನ್ನ ಮನಸ್ಸಿನಲ್ಲಿ ಕುದಿಯುತ್ತಿರುವ ರೋಷದ ಬಗ್ಗೆ, ತಲೆ ಸರಿಯಿರುವ ಮನುಷ್ಯನೊಬ್ಬ ಇಂಥ ಹುಚ್ಚಾಟದಂಥ ಅಪಾಯವನ್ನು ಯಾಕೆ ತಾನೇ ಆಹ್ವಾನಿಸಿಕೊಂಡ ಎಂಬುದರ ಬಗ್ಗೆ, ನಿಮಗೆ ಒಂದು ಹೊಳಹು ಕಾಣಬಲ್ಲದು.

[ಈ ಮಾತುಗಳ ನಂತರ, ಎಂ.ಕೆ. ಗಾಂಧಿ, ವಯಸ್ಸು ೫೨, ವೃತ್ತಿಯಿಂದ ರೈತ ಮತ್ತು ನೇಕಾರ, ವಾಸ: ಸತ್ಯಾಗ್ರಹ ಆಶ್ರಮ, ಸಬರಮತಿ, ಅಹ್ಮದಾಬಾದ್, ತಮ್ಮ ಲಿಖಿತ ಹೇಳಿಕೆಯನ್ನು ಓದಲಾರಂಭಿಸಿದರು.]

ಸೂಕ್ತ ಸಮಯ ಬಂದಾಗ, ಸರ್ಕಾರದ ವಿರುದ್ಧ ನನ್ನ ರಾಜಕೀಯ ಅವಿಶ್ವಾಸ, ಅಸಹನೆ ಕುರಿತಂತೆ ನಾನು ತಪ್ಪಿತಸ್ಥ ಎಂಬುದನ್ನು ಒಪ್ಪಿಕೊಳ್ಳುತ್ತೇನೆಂದು ಹೇಳಬಯಸುತ್ತೇನೆ. ನಾನು 'ಯಂಗ್ ಇಂಡಿಯಾ' ಪತ್ರಿಕೆಯ ಸಂಪಾದಕ ಎಂಬುದು

ಹಾಗೂ ನನ್ನ ಎದುರು ಓದಲಾದ [ಈ ಪತ್ರಿಕೆಯ] ಬರಹಗಳು ನಾನೇ ಬರೆದವು ಎಂಬುದು ನಿಜ.

ಈ ನ್ಯಾಯಾಲಯ ಕೈಗೆತ್ತಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ: ಸರ್ಕಾರಕ್ಕೆ ಅತ್ಯಂತ ನಿಷ್ಠನೂ, ಸಹಕಾರ ಮನೋಭಾವದವನೂ ಆದ ನಾನು, ರಾಜಿಯಿಲ್ಲದ ರಾಜಕೀಯ ಅವಿಶ್ವಾಸದ ವ್ಯಕ್ತಿಯಾಗಿ, ಅಸಹಕಾರದ ವ್ಯಕ್ತಿಯಾಗಿ ಯಾಕೆ ಬದಲಾದೆ ಎಂಬುದನ್ನು ಭಾರತದ ಸಾರ್ವಜನಿಕರಿಗೂ, ಇಂಗ್ಲೆಂಡಿನ ಸಾರ್ವಜನಿಕರಿಗೂ ಹೇಳಬೇಕಾದ್ದು ಪ್ರಾಯಶಃ ನನ್ನ ಕರ್ತವ್ಯ. ಇಂಡಿಯಾದಲ್ಲಿ ಕಾನೂನಿನ ಪ್ರಕಾರ ಸ್ಥಾಪಿಸಲ್ಪಟ್ಟ ಸರ್ಕಾರದ ವಿರುದ್ಧ ರಾಜಕೀಯ ಅವಿಶ್ವಾಸ, ಅಸಹನೆಗಳನ್ನು ನಾನು ಬಿತ್ತುತ್ತಿದ್ದೇನೆ ಎಂಬ ಆಪಾದನೆಯ ಸಂಬಂಧದಲ್ಲೂ ನಾನು ತಪ್ಪಿತಸ್ಥ ಎಂಬುದನ್ನು ಈ ನ್ಯಾಯಾಲಯಕ್ಕೂ ಹೇಳಬೇಕಾದದ್ದು ನನ್ನ ಕರ್ತವ್ಯ.

ನನ್ನ ಸಾರ್ವಜನಿಕ ಜೀವನ ೧೮೯೩ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಬಿರುಗಾಳಿಯ ವಾತಾವರಣದಲ್ಲಿ ಆರಂಭವಾಯಿತು. ಆ ದೇಶದಲ್ಲಿ ಬ್ರಿಟಿಷ್ ಆಡಳಿತದ ಜೊತೆಗಿನ ನನ್ನ ಪ್ರಥಮ ಸಂಪರ್ಕ ಹರ್ಷದಾಯಕವಾಗೇನೂ ಇರಲಿಲ್ಲ. ಆ ದೇಶದಲ್ಲಿ ಒಬ್ಬ ಮನುಷ್ಯನಾಗಿ ಹಾಗೂ ಭಾರತೀಯನಾಗಿ ನನಗೆ ಯಾವ ಹಕ್ಕುಗಳೂ ಇಲ್ಲವೆಂಬುದು ನನಗೆ ಅರಿವಾಯಿತು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ನಾನು ಭಾರತೀಯ ಆಗಿದ್ದರಿಂದ ಒಬ್ಬ ಮನುಷ್ಯನಿಗೆ ದಕ್ಕುವ ಹಕ್ಕುಗಳು ದಕ್ಷಿಣ ಆಫ್ರಿಕಾದಲ್ಲಿ ನನಗಿರಲಿಲ್ಲ. ಆದರೆ ಮೊದಮೊದಲು ನನಗೆ ಅದರಿಂದ ದಿಗ್ಭ್ರಮೆಯಾಗಲಿಲ್ಲ. ಭಾರತೀಯರನ್ನು ಹೀಗೆ ನಡೆಸಿಕೊಳ್ಳುವುದು ಒಳ್ಳೆಯ ಮನಸ್ಸಿನ, ಹಾಗೂ ಮೂಲತಃ ಒಳ್ಳೆಯದೇ ಆದ, ವ್ಯವಸ್ಥೆಯ ಒಂದು ಹುಣ್ಣಾಗಿರಬಹುದಷ್ಟೆ ಎಂದುಕೊಂಡೆ. ಹೀಗಾಗಿ ಅಲ್ಲಿನ ಸರ್ಕಾರಕ್ಕೆ ಸ್ವಇಚ್ಛೆಯಿಂದ ಹೃತ್ಪೂರ್ವಕ ಸಹಕಾರ ಕೊಟ್ಟೆ; ಎಲ್ಲೆಲ್ಲಿ ಮತ್ತು ಯಾವಾಗ ಸರ್ಕಾರ ತಪ್ಪಿ ನಡೆಯುತ್ತಿತ್ತೋ ಆಗ ಮುಕ್ತವಾಗಿ ಸರ್ಕಾರವನ್ನು ಟೀಕಿಸುತ್ತಿದ್ದೇನೇ ಹೊರತು, ಸರ್ಕಾರವನ್ನು ಕೆಡಹುವ ಬಯಕೆ ಎಂದೂ ನನಗಿರಲಿಲ್ಲ.

ಈ ಕಾರಣದಿಂದಾಗಿಯೇ, ೧೮೯೯ರಲ್ಲಿ ದಕ್ಷಿಣ ಆಫ್ರಿಕಾದ ಬ್ರಿಟಿಷ್ ಸಾಮ್ರಾಜ್ಯದ ಅಸ್ತಿತ್ವಕ್ಕೆ ಬೋಯೆರ್ ಪಂಗಡದಿಂದ ಸವಾಲು ಎದುರಾದಾಗ ನಾನು ನನ್ನ ಸೇವೆಯನ್ನು ಸಲ್ಲಿಸಲು ಮುಂದಾದೆ. ಆಂಬುಲೆನ್ಸ್ ಸ್ವಯಂಸೇವಕರ ತಂಡವನ್ನು ಒಗ್ಗೂಡಿಸಿ ಸೇವೆ ಮಾಡಿದೆ. ಅದೇ ರೀತಿ, ೧೯೦೬ರ ಝುಲು ಬುಡಕಟ್ಟಿನ ದಂಗೆಯ ಸಂದರ್ಭದಲ್ಲಿ ನಾನು ಗಾಯಾಳುಗಳನ್ನು ಹೊತ್ತು ಸಾಗಿಸುವ ಶುಶ್ರೂಷಕರ ತಂಡವೊಂದನ್ನು ಒಗ್ಗೂಡಿಸಿದೆ; ದಂಗೆ ಕೊನೆಯಾಗುವ ತನಕವೂ ಈ ಸೇವೆ ಮಾಡಿದೆ. ಈ ಎರಡೂ

ಸಂದರ್ಭಗಳಲ್ಲಿ ನಾನು ಪದಕಗಳ ಬಹುಮಾನ ಪಡೆದೆ. ದಕ್ಷಿಣ ಆಫ್ರಿಕಾದಲ್ಲಿನ ನನ್ನ ಸೇವೆಗಾಗಿ ನಾನು ಲಾರ್ಡ್ ಹಾರ್ಡಿಂಗ್ ಅವರಿಂದ 'ಕೈಸರ್ ಎ ಹಿಂದ್' ಚಿನ್ನದ ಪದಕವನ್ನೂ ಪಡೆದೆ. ೧೯೧೪ರಲ್ಲಿ ಜರ್ಮನಿ ಮತ್ತು ಇಂಗ್ಲೆಂಡ್‌ಗಳ ನಡುವೆ ಯುದ್ಧ ಶುರುವಾದಾಗ, ಲಂಡನ್ನಿನಲ್ಲಿದ್ದ ಭಾರತೀಯರ, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳ, ಆಂಬುಲೆನ್ಸ್ ಸ್ವಯಂಸೇವಕರ ತಂಡವನ್ನು ಒಗ್ಗೂಡಿಸಿದೆ. ಈ ತಂಡ ಮಾಡಿದ ಕೆಲಸ ಅತ್ಯಂತ ಅಮೂಲ್ಯವಾದ ಕೆಲಸವೆಂದು ಬ್ರಿಟಿಷ್ ಸರ್ಕಾರವೂ ಗುರುತಿಸಿತು. ಕೊನೆಯದಾಗಿ, ೧೯೧೮ರಲ್ಲಿ ಇಂಡಿಯಾದಲ್ಲಿ ನಡೆದ ಯುದ್ಧ ಸಭೆಯಲ್ಲಿ ಲಾರ್ಡ್ ಚೆಮ್ಸ್‌ಫೋರ್ಡ್ ಅವರು ನಮ್ಮ ಸಿಪಾಯಿಗಳ ತಂಡ ರೂಪಿಸಲು ಮನವಿ ಮಾಡಿಕೊಂಡರು; ಆಗ ನಾನು ನನ್ನ ಅನಾರೋಗ್ಯವನ್ನೂ ಲೆಕ್ಕಿಸದೆ ಖೇಡಾದಲ್ಲಿ ಇಂಥದೊಂದು ತಂಡವನ್ನು ರೂಪಿಸಲು ಕೆಲಸ ಮಾಡಿದೆ. ಯುದ್ಧ ನಿಂತ ನಂತರ, ಇನ್ನು ಮುಂದೆ ಈ ತಂಡಕ್ಕೆ ಜನರನ್ನು ಕಳಿಸುವ ಅಗತ್ಯವಿಲ್ಲ ಎಂಬ ಆದೇಶ ಬರುವವರೆಗೂ ಈ ಕರ್ತವ್ಯ ನಿರ್ವಹಿಸಿದೆ. ಈ ಬಗೆಯ ಸೇವೆಗಳನ್ನು ಮಾಡಿದ ಕಾರಣದಿಂದಲಾದರೂ ಬ್ರಿಟಿಷ್ ಸರ್ಕಾರವು ನನ್ನ ದೇಶಬಾಂಧವರಿಗೆ ಸಂಪೂರ್ಣ ಸಮಾನತೆಯನ್ನು ಕೊಡಲು ಮುಂದಾಗಬಹುದು ಎಂಬ ನಂಬಿಕೆಯಿಂದ ನಾನು ಈ ಕರ್ತವ್ಯಗಳನ್ನು ನಿರ್ವಹಿಸಿದೆ.

ಆದರೆ ಜನರ ಎಲ್ಲ ಬಗೆಯ ಅಸಲಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ರೌಲಟ್ ಕಾಯ್ದೆಯ ಮೂಲಕ ಮೊದಲ ಆಘಾತ ನಮ್ಮ ಮೇಲೆ ಬಂದೆರಗಿತು. ಈ ಕಾಯ್ದೆಯ ವಿರುದ್ಧ ತೀವ್ರ ಆಂದೋಲನವನ್ನು ಮುನ್ನಡೆಸಬೇಕೆಂಬ ಪ್ರೇರಣೆ ನಮ್ಮಲ್ಲಿ ಹುಟ್ಟಿತು. ಈ ಕಾಯ್ದೆಯ ಬೆನ್ನಿಗೇ ಪಂಜಾಬಿನ ಭೀಕರ ಘಟನೆಗಳು ಶುರುವಾದವು. ಜಲಿಯನ್‌ವಾಲಾಬಾಗ್‌ನ ಬರ್ಬರ ಹತ್ಯೆಗಳಿಂದ ಶುರುವಾದ ಈ ಭೀಕರ ಘಟನೆಗಳು ಸಾರ್ವಜನಿಕರ ಅವಹೇಳನ, ಜನರನ್ನು ಸಾರ್ವಜನಿಕವಾಗಿ ಥಳಿಸುವುದು ಮುಂತಾದ ಹಲಬಗೆಯ ಭೀಕರ ದಮನಗಳವರೆಗೂ ಮುಂದುವರಿದವು. ಅದೇ ವೇಳೆಗೆ, ಟರ್ಕಿ ಹಾಗೂ ಇಸ್ಲಾಮ್‌ನ ಪವಿತ್ರ ಕ್ಷೇತ್ರಗಳ ರಕ್ಷಣೆ ಕುರಿತಂತೆ ಪ್ರಧಾನ ಮಂತ್ರಿಗಳು ನೀಡಿದ್ದ ವಚನಬದ್ಧ ಭರವಸೆ ಪೂರೈಸುವ ಸಾಧ್ಯತೆ ಇಲ್ಲ ಎಂಬುದೂ ತಿಳಿಯಿತು. ಆದರೂ ೧೯೧೯ರ ಅಮೃತಸರ ಕಾಂಗ್ರೆಸ್ ಅಧಿವೇಶನದಲ್ಲಿ ಗೆಳೆಯರ ಭವಿಷ್ಯವಾಣಿ ಹಾಗೂ ಗಂಭೀರ ಎಚ್ಚರಿಕೆಗಳನ್ನು ಕಡೆಗಣಿಸಿ ನಾನು 'ಮಾಂಟಾಗು-ಚೆಮ್ಸ್‌ಫೋರ್ಡ್' [ರಾಜಕೀಯ] ಸುಧಾರಣೆಗಳ ಪರವಾಗಿ ನಿಂತು, ಈ ನಿಟ್ಟಿನಲ್ಲಿ ಭಾರತೀಯರು ಸರ್ಕಾರಕ್ಕೆ ಸಹಕಾರ ಕೊಡುವಂತೆ ಮಾಡಿದೆ. ಈ ಎಲ್ಲ ಸಹಕಾರ ಕೊಡಲು ಮುಖ್ಯ ಕಾರಣವೆಂದರೆ, ಬ್ರಿಟಿಷ್ ಪ್ರಧಾನಮಂತ್ರಿಗಳು ಇಂಡಿಯಾದ ಮುಸ್ಲಿಮರಿಗೆ

ಕೊಟ್ಟ ಮಾತನ್ನು ನಡೆಸಿಕೊಡುತ್ತಾರೆ; ಪಂಜಾಬಿನ ಘಟನೆಗಳಿಂದ ಉಂಟಾದ ಗಾಯಗಳು ಮಾಯುತ್ತವೆ; ಸುಧಾರಣೆಗಳು– ಅವು ಎಷ್ಟೇ ಅರೆಬರೆಯಾಗಿದ್ದರೂ, ತೃಪ್ತಿದಾಯಕವಾಗಿಲ್ಲದಿದ್ದರೂ ಪರವಾಗಿಲ್ಲ– ಇಂಡಿಯಾದ ಬದುಕಿನಲ್ಲಿ ಹೊಸ ಯುಗವೊಂದಕ್ಕೆ ನಾಂದಿ ಹಾಡುತ್ತವೆ ಎಂಬ ಆಸೆ, ಭರವಸೆ.

ಆದರೆ ಈ ಎಲ್ಲ ಆಸೆ, ಭರವಸೆಗಳೂ ಮುರಿದು ಬಿದ್ದವು. ಖಿಲಾಫತ್ ಆಶ್ವಾಸನೆ ಈಡೇರಲಿಲ್ಲ. ಪಂಜಾಬ್ ಅಪರಾಧಗಳಲ್ಲಿ ಭಾಗಿಯಾದವರ ವಿಚಾರಣೆ ತಿಪ್ಪೆ ಸಾರಿಸಿದಂತಿತ್ತು. ಬಹುತೇಕ ಅಪರಾಧಿಗಳಿಗೆ ಶಿಕ್ಷೆಯಾಗಲೇ ಇಲ್ಲ; ಕೆಲವರು ಸರ್ಕಾರಿ ಸೇವೆಯಲ್ಲೇ ಮುಂದುವರಿದರು. ಇನ್ನು ಕೆಲವರು ಇಂಡಿಯಾದ ಆದಾಯದಿಂದಲೇ ತಮ್ಮ ಪಿಂಚಣಿಯನ್ನೂ ಪಡೆದರು. ಕೆಲವರಿಗೆ ಬಿರುದು, ಬಹುಮಾನಗಳೂ ಸಿಕ್ಕವು. ಪ್ರಧಾನಮಂತ್ರಿಗಳು ಹೇಳಿದ ಸುಧಾರಣೆಗಳು ಹೃದಯ ಪರಿವರ್ತನೆ ಮಾಡಲಿಲ್ಲ. ಅಷ್ಟೇ ಅಲ್ಲ, ಈ ಸುಧಾರಣೆಗಳು ಭಾರತದ ಸಂಪತ್ತನ್ನು ಮತ್ತಷ್ಟು ಹೀರುವ ಹಾಗೂ ಭಾರತದ ದಾಸ್ಯವನ್ನು ಇನ್ನಷ್ಟು ಮುಂದೂಡುವ ಸಾಧನೆಗಳೆಂಬುದು ನನಗೆ ಗೊತ್ತಾಗತೊಡಗಿತು.

ಆ ಘಟ್ಟದಲ್ಲಿ ನನಗೆ ಸ್ಪಷ್ಟವಾಗಿ ಹೀಗೆನ್ನಿಸಿತು: ಬ್ರಿಟಿಷ್ ಸಂಬಂಧ ಭಾರತವನ್ನು ಹಿಂದೆಂದಿಗಿಂತಲೂ ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಅಸಹಾಯಕವಾಗಿಸಿದೆ. ನಿಶ್ಶಸ್ತ್ರ ಭಾರತ ಯಾವುದೇ ದಾಳಿಕೋರರ ವಿರುದ್ಧ ಶಸ್ತ್ರಾಸ್ತ್ರಗಳನ್ನು ಬಳಸಿ ಹೋರಾಡಬಯಸಿದರೂ ಅದರ ಬಳಿ ಪ್ರತಿಭಟನೆಯ ಶಕ್ತಿಯೇ ಉಳಿದಿಲ್ಲ. ಇಂಡಿಯಾಕ್ಕೆ ಸ್ವಾತಂತ್ರ್ಯ ಸಿಗಬೇಕಾದರೆ ಇನ್ನೂ ತಲೆಮಾರುಗಳು ಬೇಕಾಗುತ್ತದೆ ಎಂಬುದನ್ನು ನಮ್ಮ ಬಹು ದೊಡ್ಡ ವಿದ್ವಾಂಸರು ಕೂಡ ಮನಗಂಡಿದ್ದಾರೆ. ಇಂಡಿಯಾ ಎಷ್ಟು ಬಡವಾಗಿದೆಯೆಂದರೆ ಬರಗಾಲಗಳನ್ನು ಎದುರಿಸಲು ಅದಕ್ಕೆ ಶಕ್ತಿಯೇ ಉಳಿದಿಲ್ಲ. ಬ್ರಿಟಿಷರು ಬರುವುದಕ್ಕೆ ಮುನ್ನ ಲಕ್ಷಾಂತರ ಗುಡಿಸಲುಗಳಲ್ಲಿ ಜನ ನೂಲು ತೆಗೆಯುತ್ತಿದ್ದರು, ನೇಯುತ್ತಿದ್ದರು; ಇಂಡಿಯಾದಲ್ಲಿ ಕೃಷಿಯಿಂದ ಬರುತ್ತಿದ್ದ ಅಲ್ಪ ವರಮಾನದ ಜೊತೆಗೆ ಈ ದುಡಿಮೆ ಅಗತ್ಯವಾಗಿತ್ತು. ಇಂಡಿಯಾದ ಅಸ್ತಿತ್ವಕ್ಕೆ ಅತ್ಯಂತ ಅಗತ್ಯವಾಗಿ ಬೇಕಾಗಿದ್ದ ಈ ಗುಡಿ ಕೈಗಾರಿಕೆಯನ್ನು ನಿರ್ದಯವಾದ, ಅಮಾನವೀಯವಾದ ಯೋಜನೆಗಳಿಂದ ನಾಶ ಮಾಡಲಾಗಿದೆ. ಇದನ್ನು ಕಣ್ಣಾರೆ ಕಂಡ ಇಂಗ್ಲಿಷ್ ಲೇಖಕರೇ ಈ ಬಗ್ಗೆ ಬರೆದಿದ್ದಾರೆ.

ಅರೆಹೊಟ್ಟೆಯ ಭಾರತೀಯ ಸಮುದಾಯ ನಿಧಾನಕ್ಕೆ ಹೇಗೆ ನಿರ್ಜೀವವಾಗುತ್ತಾ ಬಸವಳಿದಿದೆಯೆಂಬ ಸಂಗತಿ ನಗರವಾಸಿಗಳಿಗೆ ಗೊತ್ತೇ ಇಲ್ಲ. ವಿದೇಶಿ ಸುಲಿಗೆಕೋರನಿಗಾಗಿ ತಾವು ಮಾಡುತ್ತಿರುವ ಕೆಲಸಕ್ಕಾಗಿ ಪಡೆಯುತ್ತಿರುವ ದಳ್ಳಾಳಿ

ಹಣದಿಂದ ತಾವು ತಮ್ಮ ಶೋಚನೀಯ ಸವಲತ್ತನ್ನು ಪಡೆಯುತ್ತಿರುವುದು ಕೂಡ ನಗರವಾಸಿಗಳಿಗೆ ತಿಳಿದಂತಿಲ್ಲ; ಈ ದಲ್ಲಾಳಿ ಹಣವೂ, ವಿದೇಶಿ ಸುಲಿಗೆಕೋರನ ಲಾಭವೂ ಜನಸಮುದಾಯವನ್ನು ಹೀರಿ ಪಡೆದದ್ದು ಎಂಬುದು ಕೂಡ ನಗರವಾಸಿಗಳಿಗೆ ತಿಳಿದಿಲ್ಲ. ಜನಸಮುದಾಯವನ್ನು ಈ ಬಗೆಯಲ್ಲಿ ಶೋಷಿಸುವ ಸಲುವಾಗಿಯೇ ಬ್ರಿಟಿಷ್ ಇಂಡಿಯಾದಲ್ಲಿ ಕಾನೂನುಬದ್ಧವಾಗಿ ಸ್ಥಾಪಿಸಲಾದ ಸರ್ಕಾರವನ್ನು ನಡೆಸಿಕೊಂಡು ಹೋಗಲಾಗುತ್ತಿದೆ ಎಂಬುದನ್ನು ಕೂಡ ನಗರವಾಸಿಗಳು ಅರಿತಿಲ್ಲ. ಯಾವ ಅಂಕಿಅಂಶಗಳ ನಾಜೂಕು ಮಂಡನೆಗಳೂ, ಶಬ್ದಾಡಂಬರಗಳೂ ನಮ್ಮ ಲಕ್ಷಾಂತರ ಹಳ್ಳಿಗಳಲ್ಲಿರುವ ಅಸ್ಥಿಪಂಜರಗಳು ನಮ್ಮ ಕಣ್ಣೆದುರು ಒಡ್ಡುತ್ತಿರುವ ಸಾಕ್ಷ್ಯವನ್ನು ಅಲ್ಲಗಳೆಯಲಾರವು.

ಮಾನವಕುಲಕ್ಕೆ ಎಸಗಿದ ಇಂಥ ಅಪರಾಧ ಪ್ರಾಯಶಃ ಮಾನವ ಇತಿಹಾಸದಲ್ಲಿ ಹಿಂದೆಂದೂ ಕಾಣದಂಥದು. ಮೇಲೆ ದೇವರು ಎನ್ನುವವನಿದ್ದರೆ, ಈ ಘೋರ ಅಪರಾಧಕ್ಕಾಗಿ ಇಂಗ್ಲೆಂಡ್ ದೇಶವೂ, ಇಂಡಿಯಾದ ನಗರವಾಸಿಗಳೂ ಆ ದೇವರಿಗಾದರೂ ಉತ್ತರ ಕೊಡಲೇಬೇಕಾಗುತ್ತದೆ. ವಿದೇಶಿ ಶೋಷಕನ ಸೇವೆಗೆ ಅನುಕೂಲವಾಗುವಂತೆ ಈ ದೇಶದ ಕಾನೂನನ್ನೇ ಬಳಸಲಾಗಿದೆ. ಪಂಜಾಬ್ ಮಾರ್ಷಲ್ ಲಾಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ಪೂರ್ವಗ್ರಹಗಳಿಲ್ಲದೆ ನಾನು ಮಾಡಿದ ವಿಚಾರಣೆಯ ಪ್ರಕಾರ, ಕೊನೆಯ ಪಕ್ಷ ಶೇಕಡ ತೊಂಬತ್ತೈದರಷ್ಟು ಶಿಕ್ಷೆಗಳು ಸಂಪೂರ್ಣವಾಗಿ ಅನ್ಯಾಯದ ಶಿಕ್ಷೆಗಳು. ರಾಜಕೀಯ ಪ್ರಕರಣಗಳನ್ನು ಕುರಿತ ನನ್ನ ಅನುಭವ, ಈ ದೇಶದಲ್ಲಿ ಶಿಕ್ಷೆಗೊಳಗಾಗುವ ಹತ್ತರಲ್ಲಿ ಒಂಬತ್ತು ಜನ ಸಂಪೂರ್ಣ ಮುಗ್ಧರು ಎಂಬ ತೀರ್ಮಾನಕ್ಕೆ ಬರುವಂತೆ ಮಾಡಿದೆ. ಈ ಜನರ 'ಅಪರಾಧ'ದ ಹಿನ್ನೆಲೆಯಲ್ಲಿ ದೇಶಪ್ರೇಮ ಮಾತ್ರ ತುಂಬಿದೆ. ಇಂಡಿಯಾದ ಕೋರ್ಟುಗಳಲ್ಲಿ ನಡೆದಿರುವ ಯುರೋಪಿಯನ್ ಅಪರಾಧಿಗಳ ವಿಚಾರಣೆಗೆ ಹೋಲಿಸಿದರೆ, ೧೦೦ರಲ್ಲಿ ೯೯ರಷ್ಟು ಪ್ರಕರಣಗಳಲ್ಲಿ ಭಾರತೀಯರಿಗೆ ನ್ಯಾಯವನ್ನು ನಿರಾಕರಿಸಲಾಗಿದೆ. ಇದು ಉತ್ಪ್ರೇಕ್ಷೆಯಲ್ಲ. ಈ ಪ್ರಕರಣಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧಿಸಿದ ಬಹುತೇಕ ಭಾರತೀಯರಿಗೆ ಇದೇ ಅನುಭವವಾಗಿದೆ. ಹೀಗೆ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಶೋಷಕರಿಗೆ ಅನುಕೂಲವಾಗುವಂತೆ ಕಾನೂನು ಪರಿಪಾಲನೆಯ ವೇಶ್ಯಾವಾಟಿಕೆ ನಡೆದಿದೆ ಎಂಬುದು ನನ್ನ ಅಭಿಪ್ರಾಯ.

ದುರದೃಷ್ಟಕರ ವಿಷಯವೆಂದರೆ, ನಾನು ವಿವರಿಸಲೆತ್ನಿಸುತ್ತಿರುವ ಈ ಅಪರಾಧದಲ್ಲಿ ತಾವು ಭಾಗಿಯಾಗಿದ್ದೇವೆ ಎಂಬುದು ಕೂಡ ದೇಶದ ಆಡಳಿತ ನಡೆಸುತ್ತಿರುವ

ಇಂಗ್ಲಿಷರಿಗಾಗಲೀ, ಅವರ ಭಾರತೀಯ ಸಹೋದ್ಯೋಗಿಗಳಿಗಾಗಲೀ ಗೊತ್ತಿದ್ದಂತಿಲ್ಲ. ಹಲವು ಇಂಗ್ಲಿಷ್ ಅಧಿಕಾರಿಗಳು ಹಾಗೂ ಭಾರತೀಯ ಅಧಿಕಾರಿಗಳು ಜಗತ್ತಿನ ಶ್ರೇಷ್ಠ ಆಡಳಿತವ್ಯವಸ್ಥೆಯನ್ನು ತಾವು ಮುನ್ನಡೆಸುತ್ತಿದ್ದೇವೆ, ಹಾಗೂ ಇದರ ಫಲವಾಗಿ ಭಾರತವು ಮಂದಗತಿಯಲ್ಲಾದರೂ ಸರಿಯಾದ ದಿಕ್ಕಿನ ಪ್ರಗತಿ ಸಾಧಿಸುತ್ತಿದೆ ಎಂದು ಪ್ರಾಮಾಣಿಕವಾಗಿ ನಂಬಿದ್ದಾರೆಂಬುದು ನನಗೆ ಮನವರಿಕೆಯಾಗಿದೆ. ಒಂದೆಡೆ ಬಹುಸೂಕ್ಷ್ಮವಾದ, ಪರಿಣಾಮಕಾರಿಯಾದ, ಭಯೋತ್ಪಾದಕ ವ್ಯವಸ್ಥೆ ಹಾಗೂ ವ್ಯವಸ್ಥಿತ ಬಲಪ್ರಯೋಗ ನಡೆಯುತ್ತಿದೆ; ಮತ್ತೊಂದೆಡೆ, ಪ್ರತೀಕಾರ ಕೈಗೊಳ್ಳುವ ಅಥವಾ ಸ್ವರಕ್ಷಣೆಯ ಎಲ್ಲ ಅಧಿಕಾರವನ್ನೂ ಜನರಿಂದ ಕಸಿದುಕೊಳ್ಳಲಾಗಿದೆ. ಜನರನ್ನು ನಿರ್ವೀರ್ಯರನ್ನಾಗಿ ಮಾಡಿ ಅವರನ್ನು ಸೋಗಿನ ವ್ಯಕ್ತಿಗಳನ್ನಾಗಿ ಮಾಡಲಾಗಿದೆ. ಈ ಭೀಕರ ಅಭ್ಯಾಸ ಆಡಳಿತಗಾರರಲ್ಲಿ ಅಜ್ಞಾನವನ್ನೂ, ಆತ್ಮವಂಚನೆಯನ್ನೂ ಹೆಚ್ಚಿಸಿದೆ. ಇದೀಗ ನನ್ನ ಮೇಲೆ ಸಲೀಸಾಗಿ ಹಾಕಿರುವ, ನಾಗರಿಕರ ಸ್ವಾತಂತ್ರ್ಯವನ್ನು ಹತ್ತಿಕ್ಕುವ, ೧೨೪ ಎ ಪರಿಚ್ಛೇದ ಭಾರತೀಯ ದಂಡ ಸಂಹಿತೆಯ ರಾಜಕೀಯ ಸೆಕ್ಷನ್‌ಗಳ ರಾಜನಂತಿದೆ. ರಾಜಭಕ್ತಿಯನ್ನು ಕಾನೂನಿನಡಿಯಲ್ಲಿ ಉತ್ಪಾದಿಸಲಾಗಲೀ, ನಿಯಂತ್ರಿಸಲಾಗಲೀ ಆಗದು. ಯಾರಿಗೇ ಆದರೂ ಒಬ್ಬ ವ್ಯಕ್ತಿಯ ಬಗ್ಗೆಯಾಗಲೀ, ವ್ಯವಸ್ಥೆಯ ಬಗ್ಗೆಯಾಗಲೀ ಒಲವಿಲ್ಲ ಎಂದಿಟ್ಟುಕೊಳ್ಳಿ; ಅಂಥ ಮನುಷ್ಯ ಹಿಂಸಾಮಾರ್ಗ ಕುರಿತು ಯೋಚಿಸದಿದ್ದರೆ, ಹಿಂಸೆಗೆ ಕುಮ್ಮಕ್ಕು ಕೊಡದಿದ್ದರೆ ಅಥವಾ ಪ್ರಚೋದಿಸದಿದ್ದರೆ ಆತ ತನ್ನ ರಾಜಕೀಯ ಅತೃಪ್ತಿಯನ್ನು ಪೂರ್ಣವಾಗಿ ಹೊರ ಹಾಕಲು ಸ್ವತಂತ್ರನಾಗಿರಬೇಕು. ಆದರೆ ಶ್ರೀ ಬ್ಯಾಂಕರ್ ಹಾಗೂ ನನ್ನ ಮೇಲೆ ಹಾಕಿರುವ ಸೆಕ್ಷನ್ ಪ್ರಕಾರ, ಕೇವಲ ಅಸಮಾಧಾನಕ್ಕೆ ಒತ್ತಾಸೆ ಕೊಟ್ಟರೂ ಅಪರಾಧವಾಗುತ್ತದೆ. ಈ ಸೆಕ್ಷನ್ನಿನಡಿ ದಾಖಲಾಗಿರುವ ಹಲವು ಪ್ರಕರಣಗಳನ್ನು ನಾನು ಅಧ್ಯಯನ ಮಾಡಿದ್ದೇನೆ. ಭಾರತೀಯರು ಅತ್ಯಂತ ಪ್ರೀತಿಸುವ ದೇಶಭಕ್ತರಿಗೆ ಈ ಸೆಕ್ಷನ್ನಿನಡಿಯಲ್ಲಿ ಶಿಕ್ಷೆ ವಿಧಿಸಲಾಗಿದೆ. ಆದ್ದರಿಂದ ಈ ಸೆಕ್ಷನ್ನಿನಡಿ ನನ್ನನ್ನೂ ಅಪರಾಧಿಯನ್ನಾಗಿಸಿರುವುದು ನನ್ನ ಭಾಗ್ಯವೆಂದೇ ಪರಿಗಣಿಸುತ್ತೇನೆ.

ನನ್ನ ರಾಜಕೀಯ ಅವಿಶ್ವಾಸದ ಕಾರಣಗಳನ್ನು ಅತ್ಯಂತ ಸಂಕ್ಷಿಪ್ತವಾಗಿ ನಿಮ್ಮೆದುರು ಮಂಡಿಸಲು ಪ್ರಯತ್ನಿಸಿದ್ದೇನೆ. ಆಡಳಿತ ನಡೆಸುತ್ತಿರುವ ಯಾವೊಬ್ಬ ಅಧಿಕಾರಿಯ ಬಗೆಗೂ ನನಗೆ ದ್ವೇಷವಿಲ್ಲ; ರಾಜಪ್ರತಿನಿಧಿಯ ಬಗೆಗೂ ನನಗೆ ದ್ವೇಷವಿಲ್ಲ. ಆದರೆ ಇಂಡಿಯಾಕ್ಕೆ ಹಿಂದಿನ ಬೇರಾವುದೇ ಆಡಳಿತ ವ್ಯವಸ್ಥೆಗಿಂತ ಹೆಚ್ಚಿನ ಕೆಡುಕನ್ನುಂಟು ಮಾಡಿರುವ ಸರ್ಕಾರದ ವಿರುದ್ಧ ಅತೃಪ್ತಿ ಹೊಂದಿರುವುದು ಒಂದು ಸದ್ಗುಣವೆಂದೇ ನಾನು ಭಾವಿಸಿದ್ದೇನೆ. ಬ್ರಿಟಿಷ್ ಆಡಳಿತದಲ್ಲಿ ಭಾರತವು ಹಿಂದೆಂದಿಗಿಂತಲೂ

ಪೌರುಷಹೀನವಾಗಿದೆ. ಈ ಎಲ್ಲದರ ಅರಿವನ್ನುಳ್ಳ ನಾನು ಈ ಆಡಳಿತ ವ್ಯವಸ್ಥೆಯ ಬಗ್ಗೆ ಪ್ರೀತಿ ಇರಿಸಿಕೊಳ್ಳುವುದು ಪಾಪವೆಂದೇ ನಂಬುತ್ತೇನೆ. ಈ ಸರ್ಕಾರದ ಬಗೆಗೆ ರಾಜದ್ವೇಷ ವ್ಯಕ್ತಪಡಿಸಲಾಗಿವೆ ಎಂಬುದಕ್ಕೆ ಸಾಕ್ಷಿಯಾಗಿ ಕೋರ್ಟಿನಲ್ಲಿ ಮಂಡಿಸಿರುವ ಈ ಬರಹಗಳನ್ನು ಬರೆಯಲು ನಾನು ಶಕ್ತನಾಗಿದ್ದೆ ಎಂಬುದು ನನ್ನ ಅಮೂಲ್ಯ ಸುಯೋಗವಾಗಿದೆ.

ನಿಜ ಹೇಳಬೇಕೆಂದರೆ, ಇಂಡಿಯಾ ಮತ್ತು ಇಂಗ್ಲೆಂಡ್ ಈ ಎರಡೂ ದೇಶಗಳು ತಾವು ಬದುಕುತ್ತಿರುವ ಅಸಹಜ ಸ್ಥಿತಿಯಿಂದ ಹೊರಬರುವ ದಾರಿಯೊಂದನ್ನು ಅಸಹಕಾರ ತತ್ವದ ಮೂಲಕ ತೋರಿಸುವ ಮೂಲಕ ನಾನು ಈ ಎರಡೂ ದೇಶಗಳ ಸೇವೆಯನ್ನೇ ಮಾಡಿದ್ದೇನೆ. ಒಳಿತಿಗೆ ಸಹಕಾರ ಕೊಡುವುದು ನನ್ನ ಕರ್ತವ್ಯವಾಗಿರುವಂತೆಯೇ, ಕೆಡುಕಿಗೆ ಅಸಹಕಾರ ನೀಡುವುದು ಕೂಡ ನನ್ನ ಕರ್ತವ್ಯವೇ ಹೌದು. ಇದು ನನ್ನ ವಿನಮ್ರ ನಂಬಿಕೆ. ಹಿಂದೆ ಕೆಲವೊಮ್ಮೆ ಅಸಹಕಾರ ಚಳುವಳಿಯು ಕೆಟ್ಟವರ ವಿರುದ್ಧ ಉದ್ದೇಶಪೂರ್ವಕವಾಗಿ ಹಿಂಸೆ ಎಸಗಿದ ಸಂದರ್ಭಗಳಿವೆ. ಆದರೆ, ಕೇಡು ಹಿಂಸೆಯ ಮೂಲಕ ಮಾತ್ರ ಬದುಕಿ ಉಳಿಯುತ್ತದೆ; ಹೀಗಾಗಿ ಹಿಂಸೆಯ ಹಾದಿ ಹಿಡಿದ ಅಸಹಕಾರ ಚಳುವಳಿಯು ಕೇಡನ್ನು ಇನ್ನಷ್ಟು ಹೆಚ್ಚಿಸುತ್ತದೆ; ಕೇಡನ್ನು ಬೆಂಬಲಿಸದಿರುವುದು ಅಥವಾ ಅಸಹಕಾರ ಸೂಚಿಸುವುದು ಎಂದರೆ, ಹಿಂಸೆಯಿಂದ ಸಂಪೂರ್ಣ ಮುಕ್ತವಾಗಬೇಕು. ಈ ಅಂಶಗಳನ್ನು ನನ್ನ ದೇಶಬಾಂಧವರಿಗೆ ಮನವರಿಕೆ ಮಾಡಿಕೊಡಲು ನಾನು ಸದಾ ಪ್ರಯತ್ನ ಮಾಡುತ್ತಾ ಬಂದಿದ್ದೇನೆ.

ಅಹಿಂಸೆ ಎಂಬ ಪದಕ್ಕೆ 'ದುಷ್ಟ ಶಕ್ತಿಗಳಿಗೆ ಅಸಹಕಾರ ತೋರಿದ ಕಾರಣಕ್ಕಾಗಿ ವಿಧಿಸಲಾದ ಶಿಕ್ಷೆಗೆ ಸ್ವಇಚ್ಛೆಯಿಂದ ಒಡ್ಡಿಕೊಳ್ಳುವುದು' ಎಂಬ ಅರ್ಥವೂ ಇದೆ. ಆದ್ದರಿಂದ, ಯಾವುದು ಕಾನೂನಿನ ಕಣ್ಣಿಗೆ ಉದ್ದೇಶಪೂರ್ವಕವಾದ ಅಪರಾಧ ಎಂದು ಕಾಣುತ್ತದೆಯೋ, ಹಾಗೂ ಯಾವುದು ನನ್ನ ದೃಷ್ಟಿಯಲ್ಲಿ ನಾಗರಿಕನೊಬ್ಬನ ಅತ್ಯಂತ ಮಹತ್ವದ ಕರ್ತವ್ಯವಾಗಿದೆಯೋ, ಅಂಥ ಕೆಲಸ ಮಾಡಿದ್ದಕ್ಕಾಗಿ ನನಗೆ ಅತ್ಯುಗ್ರ ಶಿಕ್ಷೆ ನೀಡಬೇಕೆಂದು ಕೋರಲು ಹಾಗೂ ಅದನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆಂದು ಹೇಳಲು ನಾನಿಲ್ಲಿ ನಿಂತಿದ್ದೇನೆ.

ನ್ಯಾಯಾಧೀಶರೇ, ಈಗ ನಿಮ್ಮೆದುರಿಗೆ ಇರುವ ಆಯ್ಕೆಗಳು ಎರಡೇ: ಒಂದು, ನೀವು ಪ್ರತಿನಿಧಿಸುತ್ತಿರುವ ಕಾನೂನು ಒಂದು ದುಷ್ಟ ಕಾನೂನು, ಹಾಗೂ ನಾನು [ಗಾಂಧಿ] ನಿಜಕ್ಕೂ ಮುಗ್ಧ ಎಂದು ನಿಮಗೆ ಅನ್ನಿಸಿದರೆ, ಈ ದುಷ್ಟ ವ್ಯವಸ್ಥೆಯ ಜೊತೆಗಿನ ಸಂಬಂಧ ಕಡಿದುಕೊಂಡು ನಿಮ್ಮ ಸ್ಥಾನಕ್ಕೆ ರಾಜಿನಾಮೆ ನೀಡುವುದು.

ಎರಡು, ನೀವು ಪ್ರತಿನಿಧಿಸುತ್ತಿರುವ ಕಾನೂನು ಜನರ ಒಳಿತಿಗಾಗಿಯೇ ಇದೆ, ಹಾಗೂ ನನ್ನ ಚಟುವಟಿಕೆಗಳು ಜನಕಲ್ಯಾಣಕ್ಕೆ ಅಪಾಯಕಾರಿಯಾಗಿವೆ ಎಂದು ನಿಮಗೆ ಅನ್ನಿಸಿದರೆ ನನಗೆ ಅತ್ಯಂತ ಉಗ್ರ ಶಿಕ್ಷೆ ವಿಧಿಸುವುದು.

(೧೮ ಮಾರ್ಚ್ ೧೯೨೨, 'ದ ಲಾ ಅಂಡ್ ದ ಲಾಯರ್ಸ್' ಪುಸ್ತಕದಿಂದ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

ಟಿಪ್ಪಣಿ

೧೯೨೨ರಲ್ಲಿ ಬ್ರಿಟಿಷ್ ಸರ್ಕಾರದ ಪೊಲೀಸರು ಗಾಂಧೀಜಿಯ ವಿರುದ್ಧ ರಾಜದ್ರೋಹ (ಸೆಡಿಶನ್) ಪ್ರಕರಣ ದಾಖಲಿಸಿದರು; ಅದಕ್ಕೆ ಸಾಕ್ಷಿಯಾಗಿ 'ಯಂಗ್ ಇಂಡಿಯಾ'ದ ಸಂಪಾದಕರಾದ ಗಾಂಧೀಜಿ ಈ ಪತ್ರಿಕೆಯಲ್ಲಿ ಬರೆದ ನಾಲ್ಕು ಲೇಖನಗಳನ್ನು ಕೋರ್ಟಿನಲ್ಲಿ ಹಾಜರುಪಡಿಸಿದರು. ಆ ನಾಲ್ಕು ಲೇಖನಗಳು: Disaffection a Virtue (15.1.1921) Tampering with Loyalty (29.9.1921) The Puzzle and its Solution (15.12. 1921) Shaking the Manes (23.2.1922)

ವಿಚಾರಣೆಯ ನಂತರ ನ್ಯಾಯಾಧೀಶರು ಗಾಂಧೀಜಿಗೆ ೬ ವರ್ಷಗಳ ಜೈಲು ಶಿಕ್ಷೆ ವಿಧಿಸಿದರು.

ಈ ಶಿಕ್ಷೆಗೆ ಗಾಂಧೀಜಿಯ ಪ್ರತಿಕ್ರಿಯೆ: 'ಈ ಶಿಕ್ಷೆ ಒಬ್ಬ ನ್ಯಾಯಾಧೀಶ ವಿಧಿಸಬಹುದಾದ ಅತ್ಯಂತ ಹಗುರವಾದ ಶಿಕ್ಷೆ. ಇದಕ್ಕಿಂತ ಹೆಚ್ಚಿನ ಸೌಜನ್ಯವನ್ನು ನಾನು ನಿರೀಕ್ಷಿಸಿರಲಿಲ್ಲ.'

ಸಾಕ್ರೆಟಿಸ್ ವಿಚಾರಣೆಯಿಂದ ಹಿಡಿದು ಜಗತ್ತಿನ ಮಹತ್ವದ ವಿಚಾರಣೆಗಳನ್ನು ದಾಖಲಿಸಿರುವ 'ಲಾ ಅಂಡ್ ಲಿಟರೇಚರ್' ಸಂಕಲನದಲ್ಲಿ ಈ ಗಾಂಧೀ ಹೇಳಿಕೆಯೂ ಸ್ಥಾನ ಪಡೆದಿದೆ.

೯೪

'ಕ್ವಿಟ್ ಇಂಡಿಯಾ': ನಿರ್ಣಯ ಮತ್ತು ಘೋಷಣೆ

೭ ಆಗಸ್ಟ್ ೧೯೪೨

ಈ [ಕ್ವಿಟ್ ಇಂಡಿಯಾ]* ನಿರ್ಣಯವನ್ನು ಅಂಗೀಕರಿಸುವ ಮುನ್ನ ಒಂದೆರಡು ಅಂಶಗಳನ್ನು ನಿಮ್ಮೆದುರು ಇಡಬಯಸುತ್ತೇನೆ...

'...ನೀವು ೧೯೨೦ರಲ್ಲಿ ಇದ್ದಂತೆಯೇ ಇದ್ದೀರೋ ಇಲ್ಲಾ ಬದಲಾಗಿದ್ದೀರೋ?' ಎಂದು ನನ್ನನ್ನು ಕೇಳುವವರಿದ್ದಾರೆ. ನಾನು ೧೯೨೦ರಲ್ಲಿ ಇದ್ದಂತೆಯೇ ಇವತ್ತಿಗೂ ಇದ್ದೇನೆ ಎಂದು ಮಾತ್ರ ಹೇಳಬಲ್ಲೆ. ಒಂದೇ ವ್ಯತ್ಯಾಸವೆಂದರೆ, ಕೆಲವು ವಿಷಯಗಳಲ್ಲಿ ನಾನು ೧೯೨೦ರಲ್ಲಿ ಇದ್ದುದಕ್ಕಿಂತ ಹೆಚ್ಚು ಗಟ್ಟಿಯಾಗಿದ್ದೇನೆ. ಅದನ್ನು ಹೀಗೂ ಹೇಳಬಹುದು: ಒಬ್ಬ ಮನುಷ್ಯ ಚಳಿಗಾಲದಲ್ಲಿ ಹೆಚ್ಚು ಬಟ್ಟೆ ತೊಟ್ಟು ಓಡಾಡುತ್ತಿರುತ್ತಾನೆ; ಆದರೆ ಬೇಸಿಗೆಯಲ್ಲಿ ಅಷ್ಟೊಂದು ಬಟ್ಟೆ ತೊಟ್ಟಿರುವುದಿಲ್ಲ. ಆದರೆ ಈ ಹೊರಗಿನ ಬದಲಾವಣೆ ಆ ಮನುಷ್ಯನಲ್ಲಿ ಯಾವುದೇ ಬದಲಾವಣೆ ಉಂಟು ಮಾಡಿರುವುದಿಲ್ಲ. 'ನೀವು ಇವತ್ತೊಂದು ಹೇಳುತ್ತೀರಿ, ನಾಳೆ ಮತ್ತೊಂದು ಹೇಳುತ್ತೀರಿ' ಎನ್ನುವವರಿದ್ದಾರೆ. ಆದರೆ ನನ್ನಲ್ಲಿ ಯಾವ ಬದಲಾವಣೆಯೂ ಆಗಿಲ್ಲ ಎಂಬುದನ್ನು ನಿಮಗೆ ಹೇಳಲೇಬೇಕು. ಹಿಂದೆ ಹೇಗೆ ಅಹಿಂಸಾ ತತ್ವಕ್ಕೆ ಅಂಟಿಕೊಂಡಿದ್ದೆನೋ, ಈಗಲೂ ಹಾಗೇ ಅಂಟಿಕೊಂಡಿದ್ದೇನೆ. ಅಹಿಂಸಾ ತತ್ವದ ಬಗ್ಗೆ ನಿಮಗೆ ಸುಸ್ತಾಗಿದ್ದರೆ ನೀವು ನನ್ನೊಡನೆ ಬರುವ ಅಗತ್ಯವಿಲ್ಲ; ಆಗ ನೀವು ಈ ನಿರ್ಣಯವನ್ನು ಅಂಗೀಕರಿಸುವ ಅಗತ್ಯವೂ ಇರುವುದಿಲ್ಲ ಹಾಗೂ ಅದನ್ನು ಜಾರಿ ಮಾಡಬೇಕಾದ ಜವಾಬ್ದಾರಿಯೂ ನಿಮಗಿರುವುದಿಲ್ಲ.

---

* 'ಕ್ವಿಟ್ ಇಂಡಿಯಾ' ಘೋಷಣೆಯನ್ನು ರೂಪಿಸಿದವರು ತರುಣ ಸಮಾಜವಾದಿ ಯೂಸುಫ್ ಮೆಹರಾಲಿ. 'ಡೂ ಆರ್ ಡೈ' ಘೋಷಣೆ ಇಂಗ್ಲಿಷ್ ಕವಿ ಆಲ್ಫ್ರೆಡ್ ಟೆನ್ನಿಸನ್‌ನ 'ದ ಛಾರ್ಜ್ ಆಫ್ ದ ಲೈಟ್ ಬ್ರಿಗೇಡ್' ಪದ್ಯದ ಈ ಕೆಳಕಂಡ ಸಾಲುಗಳನ್ನು ಮಾರ್ಪಡಿಸಿ ರೂಪಿಸಿಕೊಂಡ ಘೋಷಣೆ:

...theirs not to reason why,
theirs but to do and die.

ನಾನು ನಿಮಗೆ ಮನವರಿಕೆ ಮಾಡಿಕೊಡಬಯಸುವ ಮತ್ತೊಂದು ಅಂಶ ನಿಮ್ಮ ಜವಾಬ್ದಾರಿ ಕುರಿತಾದುದು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರೆಂದರೆ ಇಡೀ ಭಾರತವನ್ನು ಪ್ರತಿನಿಧಿಸುವ ಪಾರ್ಲಿಮೆಂಟ್ ಸದಸ್ಯರಿದ್ದಂತೆ. ತನ್ನ ಆರಂಭದ ಕಾಲದಿಂದಲೂ ಕಾಂಗ್ರೆಸ್ ಒಂದು ಗುಂಪಿಗೆ, ಒಂದು ವರ್ಣಕ್ಕೆ, ಒಂದು ಜಾತಿಗೆ ಅಥವಾ ಒಂದು ಪ್ರಾಂತಕ್ಕೆ ಸೇರಿದ್ದಲ್ಲ. ತಾನು ಹುಟ್ಟಿದಾಗಿನಿಂದಲೂ ಈ ದೇಶವನ್ನು ಪ್ರತಿನಿಧಿಸುತ್ತಿದ್ದೇನೆ ಎಂದು ಕಾಂಗ್ರೆಸ್ ಹೇಳುತ್ತಾ ಬಂದಿದೆ, ಮತ್ತು ಅದರ ಪರವಾಗಿ ನಾನು ಕೂಡ 'ಕಾಂಗ್ರೆಸ್ ಕೇವಲ ನೋಂದಾಯಿತ ಸದಸ್ಯರನ್ನು ಮಾತ್ರ ಪ್ರತಿನಿಧಿಸುತ್ತಿಲ್ಲ; ಅದು ಇಡೀ ದೇಶವನ್ನೇ ಪ್ರತಿನಿಧಿಸುತ್ತಿದೆ' ಎಂದು ಹೇಳುತ್ತಾ ಬಂದಿದ್ದೇನೆ.

...ಕೊನೆಯ ಪಕ್ಷ ದೇಶದ ಏಳು ಪ್ರಾಂತಗಳಲ್ಲಿ ಸರ್ಕಾರ ನಡೆಸುವ ಅವಕಾಶ ನಮಗೆ ಸಿಕ್ಕಿದೆ. ನಾವು ಅಲ್ಲಿ ಒಳ್ಳೆಯ ಕೆಲಸ ಮಾಡಿದ್ದೇವೆ; ಬ್ರಿಟಿಷ್ ಸರ್ಕಾರ ಕೂಡ ನಮ್ಮ ಕೆಲಸವನ್ನು ಮೆಚ್ಚಿದೆ. ಆದರೆ ನಮ್ಮ ಕೆಲಸ ಸ್ವಾತಂತ್ರ್ಯ ಬಂದ ತಕ್ಷಣ ಮುಗಿಯುವುದಿಲ್ಲ. ನಮ್ಮ ಕಾರ್ಯವಿಧಾನದಲ್ಲಿ ಸರ್ವಾಧಿಕಾರಿಗಳಿಗೆ ಸ್ಥಾನವಿಲ್ಲ. ನಮ್ಮ ಗುರಿ ಸ್ವಾತಂತ್ರ್ಯ ಪಡೆಯುವುದು; ಅನಂತರ ಅಧಿಕಾರದ ಚುಕ್ಕಾಣಿಯನ್ನು ಯಾರು ಬೇಕಾದರೂ ಹಿಡಿಯಬಹುದು. ಪಾರ್ಸಿಗಳ ಕೈಗೆ ಯಾಕೆ ಅಧಿಕಾರ ಕೊಡಬೇಕು ಎಂದು ನೀವು ಕೇಳಬಾರದು. ಕಾಂಗ್ರೆಸ್ಸಿನಲ್ಲಿ ಈವರೆಗೆ ಎಂದೂ ಹೆಸರು ಕೂಡ ಕೇಳಿಬರದ ವ್ಯಕ್ತಿಗಳ ಕೈಗೆ ಕೂಡ ಅಧಿಕಾರ ಕೊಡಬಹುದು. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಹಿಂದೂಗಳು ಬಹುಸಂಖ್ಯೆಯಲ್ಲಿದ್ದರು ಅಥವಾ ಮುಸ್ಲಿಮರು, ಪಾರ್ಸಿಗಳು ಕಡಿಮೆ ಸಂಖ್ಯೆಯಲ್ಲಿದ್ದರು ಎಂದು ನೀವು ತಿಳಿಯಬಾರದು. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಮನಸ್ಥಿತಿ ಸಂಪೂರ್ಣ ಬದಲಾಗಬೇಕು. ನಿಮ್ಮ ಮನಸ್ಸಿನಲ್ಲಿ ಒಂದು ಸಣ್ಣ ಕೋಮು ಕಳಂಕವಿದ್ದರೂ ನೀವು ಹೋರಾಟದಿಂದ ದೂರವಿರಬೇಕು.

...ಅಹಿಂಸೆ ಎಲ್ಲರ ನೆರವಿಗೂ ಬರುವ ಸಾಟಿಯಿಲ್ಲದ ಅಸ್ತ್ರ... ನಾನು 'ಕ್ವಿಟ್ ಇಂಡಿಯಾ' ಘೋಷಣೆಯ ದನಿ ಎತ್ತಿದಾಗ, ಮಂಕು ಬಡಿದು ಕೂತಿದ್ದ ಇಂಡಿಯಾದ ಜನ ನಾನು ಅವರೆದುರು ಹೊಸತೇನನ್ನೋ ಇಟ್ಟಿದ್ದೇನೆ ಎಂದುಕೊಂಡರು. ನಿಮಗೆ ನಿಜವಾದ ಸ್ವಾತಂತ್ರ್ಯ ಸಿಗಬೇಕೆಂದರೆ ನೀವು ಒಗ್ಗೂಡಬೇಕು; ಹಾಗೆ ಒಗ್ಗೂಡಿದಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವ ಸೃಷ್ಟಿಯಾಗುತ್ತದೆ. ಅದು ಎಂಥ ಪ್ರಜಾಪ್ರಭುತ್ವ ವಾಗಿರುತ್ತದೆ ಎಂದರೆ, ಜಗತ್ತಿನಲ್ಲೆಲ್ಲೂ ಅಂಥದ್ದನ್ನು ಜನ ಕಂಡಿರಲಾರರು; ಅಥವಾ ಅಂಥದೊಂದು ನಿಜವಾದ ಪ್ರಜಾಪ್ರಭುತ್ವವನ್ನು ರೂಪಿಸುವ ಪ್ರಯತ್ನ ಕೂಡ ಎಲ್ಲೂ ನಡೆದಿಲ್ಲ ಎನ್ನುವಂಥ ಪ್ರಜಾಪ್ರಭುತ್ವ ಇದು. ಫ್ರೆಂಚ್ ಕ್ರಾಂತಿಯ ಬಗ್ಗೆ ನಾನು ಸಾಕಷ್ಟು ಓದಿದ್ದೇನೆ. ಜೈಲಿನಲ್ಲಿದ್ದಾಗ ಕಾರ್ಲೈಲ್ ಅವರ ಪುಸ್ತಕಗಳನ್ನು ಓದಿದ್ದೇನೆ.

ಫ್ರೆಂಚ್ ಜನರನ್ನು ಕಂಡರೆ ನನಗೆ ಅಪಾರ ಮೆಚ್ಚುಗೆ. ಪಂಡಿತ್ ಜವಾಹರಲಾಲ್ ರಷ್ಯಾ ಕ್ರಾಂತಿ ಕುರಿತಂತೆ ಎಲ್ಲವನ್ನೂ ನನಗೆ ತಿಳಿಸಿದ್ದಾರೆ. ಆದರೆ ನನ್ನ ತಿಳಿವಳಿಕೆಯ ಪ್ರಕಾರ, ಇವೆಲ್ಲವೂ ಅವರವರ ಜನರಿಗಾಗಿ ನಡೆದ ಹೋರಾಟಗಳು; ಇವು ಯಾವುವೂ ನಾನು ಯೋಚಿಸಿರುವಂಥ ನಿಜವಾದ ಪ್ರಜಾಪ್ರಭುತ್ವಕ್ಕಾಗಿ ನಡೆದ ಹೋರಾಟಗಳಲ್ಲ. ನನ್ನ ಕಲ್ಪನೆಯ ಪ್ರಜಾಪ್ರಭುತ್ವವೆಂದರೆ ಪ್ರತಿ ಮನುಷ್ಯನೂ ತನ್ನ ಒಡೆಯನಾಗಿರುವುದು. ನಾನು ಸಾಕಷ್ಟು ಚರಿತ್ರೆ ಓದಿದ್ದೇನೆ. ಆದರೆ ಅಹಿಂಸಾ ಮಾರ್ಗದ ಮೂಲಕ ಪ್ರಜಾಪ್ರಭುತ್ವದ ಸ್ಥಾಪನೆಗೆ ಇಷ್ಟು ದೊಡ್ಡ ಪ್ರಮಾಣದ ಪ್ರಯೋಗವನ್ನು ನಾನೆಲ್ಲೂ ಕಂಡಿಲ್ಲ. ಈ ಅಂಶ ನಿಮಗೆ ಅರ್ಥವಾದ ತಕ್ಷಣ ಹಿಂದೂ, ಮುಸಲ್ಮಾನ್ ಎಂಬ ಭೇದಗಳನ್ನು ನೀವು ಮರೆಯಬಲ್ಲಿರಿ. ನಿಮ್ಮೆದುರು ಮಂಡಿಸಿರುವ ನಿರ್ಣಯವು ನಾವು ಬಾವಿಯೊಳಗಿನ ಕಪ್ಪೆಗಳಂತೆ ಇರಲು ಬಯಸುವುದಿಲ್ಲ ಎಂದು ಹೇಳುತ್ತಿದೆ. ಇಂಡಿಯಾವೇ ಮುನ್ನಡೆಸಬಹುದಾದ ವಿಶ್ವ ಒಕ್ಕೂಟವೊಂದನ್ನು ರೂಪಿಸುವ ಗುರಿ ನಮ್ಮ ಮುಂದಿದೆ. ಅದು ಅಹಿಂಸೆಯಿಂದ ಮಾತ್ರ ಆಗಬಲ್ಲದು. ನಿಶ್ಶಸ್ತ್ರೀಕರಣ ಸಾಧ್ಯವಾಗುವುದು ನೀವು ಸಾಟಿಯಲ್ಲದ ಸಾಧನವಾದ ಅಹಿಂಸೆಯನ್ನು ಬಳಸಿದಾಗ ಮಾತ್ರ.

ನಾನೊಬ್ಬ ದಾರ್ಶನಿಕ ಎಂದು ಕರೆಯುವವರಿರಬಹುದು. ಆದರೆ ನಾನು ಹೇಳುತ್ತೇನೆ– ನಾನೊಬ್ಬ ನಿಜವಾದ ಬನಿಯಾ (ವ್ಯಾಪಾರಿ); ನನ್ನ ಕೆಲಸವೇನಿದ್ದರೂ ಸ್ವರಾಜ್ಯವನ್ನು ಗಳಿಸುವುದು. ಒಬ್ಬ ಕಾರ್ಯಶೀಲ ಬನಿಯಾ ಆಗಿ ನಾನು ಹೇಳುತ್ತೇನೆ– ಅಹಿಂಸಾತ್ಮಕ ನಡವಳಿಕೆಯ ಪೂರ್ಣ ಬೆಲೆ ತೆರಲು ನೀವು ಸಿದ್ಧರಿರುವುದಾದರೆ ಮಾತ್ರ ಈ ನಿರ್ಣಯವನ್ನು ಅಂಗೀಕರಿಸಿ, ಇಲ್ಲದಿದ್ದರೆ ಅಂಗೀಕರಿಸಬೇಡಿ... ನೀವು ಅಹಿಂಸೆಯನ್ನು ಒಂದು ಕಾರ್ಯನೀತಿ (ಪಾಲಿಸಿ)ಯಾಗಿ ಅಳವಡಿಸಿಕೊಳ್ಳಬೇಕು ಎಂದು ನಾನು ಬಯಸುತ್ತೇನೆ. ನನ್ನ ಮಟ್ಟಿಗೆ ಅಹಿಂಸೆ ಒಂದು ಧರ್ಮ. ಆದರೆ ನಿಮ್ಮ ವಿಷಯದಲ್ಲಿ ಹೇಳುವುದಾದರೆ, ನೀವು ಅದನ್ನು ಒಂದು ಕಾರ್ಯ ಯೋಜನೆಯಾಗಿ ಒಪ್ಪಿಕೊಳ್ಳಿ. ಶಿಸ್ತಿನ ಸಿಪಾಯಿಗಳಂತೆ ನೀವು ಅಹಿಂಸಾ ತತ್ವವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು, ಹಾಗೂ ಹೋರಾಟಕ್ಕೆ ಸೇರಿದ ಮೇಲೆ ಅದಕ್ಕೆ ಅಂಟಿಕೊಳ್ಳಬೇಕು.

* * *

೮ ಆಗಸ್ಟ್ ೧೯೪೨

ಇದೇ ಈಗ ನೀವು ಅಂಗೀಕರಿಸಿದ [ಕ್ವಿಟ್ ಇಂಡಿಯಾ] ನಿರ್ಣಯಕ್ಕಾಗಿ ಅಭಿನಂದನೆಗಳು. ನಿರ್ಣಯದ ಪರವಾಗಿ ಬಹಳಷ್ಟು ಸದಸ್ಯರ ಬೆಂಬಲವಿದ್ದಾಗಲೂ,

ತಮ್ಮ ತಿದ್ದುಪಡಿಗಳನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸಿದ ಮೂವರು ಕಾಮ್ರೇಡ್‌ಗಳ ಧೈರ್ಯವನ್ನೂ ನಾನು ಅಭಿನಂದಿಸುತ್ತೇನೆ. ಅದೇ ರೀತಿ ನಿರ್ಣಯದ ವಿರುದ್ಧವಾಗಿ ಮತ ಹಾಕಿದ ಹದಿಮೂರು ಮಂದಿ ಗೆಳೆಯರನ್ನೂ ನಾನು ಅಭಿನಂದಿಸುತ್ತೇನೆ. ಈ ಕುರಿತಂತೆ ಅವರು ಯಾವುದೇ ನಾಚಿಕೆ ಪಡಬೇಕಾದ ಅಗತ್ಯವಿಲ್ಲ. ನಾವು ಬೆರಳೆಣಿಕೆಯಷ್ಟಿದ್ದಾಗಲೂ, ನಾವು ನಗೆಪಾಟಲಿಗೀಡಾದಾಗಲೂ, ಧೈರ್ಯ ಕಳೆದುಕೊಳ್ಳಬಾರದು ಎಂಬುದನ್ನು ಕಳೆದ ಇಪ್ಪತ್ತು ವರ್ಷಗಳಲ್ಲಿ ಕಲಿತಿದ್ದೇವೆ... ನಾನು ಕಳೆದ ಐವತ್ತು ವರ್ಷಗಳಿಂದಲೂ ಅನುಸರಿಸಲೆತ್ನಿಸುತ್ತಿರುವ ಈ ತತ್ವವನ್ನೇ ಈ ಗೆಳೆಯರು ಕೂಡ ಮೈಗೂಡಿಸಿಕೊಂಡಿರುವುದನ್ನು ನೋಡಿ ಸಂತೋಷವಾಯಿತು.

...ಪ್ರತಿಯೊಬ್ಬ ಮುಸಲ್ಮಾನನೂ ಇಡೀ ಭಾರತವೇ ನನ್ನ ಮಾತೃಭೂಮಿ ಎಂದು ಸಾರಿ ಹೇಳುತ್ತಿದ್ದ ಕಾಲವೊಂದಿತ್ತು. ಅಲಿ ಸೋದರರು ನನ್ನೊಡನಿರುವಾಗ ಅವರ ಎಲ್ಲ ಮಾತುಕತೆಗಳಲ್ಲೂ ಇಂಡಿಯಾ ಹಿಂದೂಗಳಿಗೆ ಎಷ್ಟು ಸೇರಿದೆಯೋ, ಮುಸಲ್ಮಾನರಿಗೂ ಅಷ್ಟೇ ಸೇರಿದ್ದು ಎಂಬ ಗ್ರಹಿಕೆ ಸಹಜವಾಗಿಯೇ ಇರುತ್ತಿತ್ತು... ಹಿಂದೂ-ಮುಸ್ಲಿಂ ಪ್ರಶ್ನೆ ಇತ್ಯರ್ಥವಾಗಬೇಕಾದರೆ ಅದು ನಿಮ್ಮ ಜೀವಿತಕಾಲದಲ್ಲೇ ಆಗಬೇಕು ಎಂದು ಸಾವಿರಾರು ಮುಸಲ್ಮಾನರು ನನಗೆ ಹೇಳಿದ್ದಾರೆ. ಈ ಮಾತಿನಿಂದ ನನಗೆ ಹೆಮ್ಮೆಯಾಗಬಹುದು; ಆದರೆ ನನ್ನ ವಿವೇಚನೆಗೆ ಒಗ್ಗದ [ಭಾರತ ವಿಭಜನೆಯ] ಪ್ರಸ್ತಾವವನ್ನು ನಾನು ಹೇಗೆ ಒಪ್ಪಿಕೊಳ್ಳಲಿ? ಹಿಂದೂ-ಮುಸ್ಲಿಂ ಐಕ್ಯತೆ ನಮಗೆ ಹೊಸದೇನಲ್ಲ. ಕೋಟಿಗಟ್ಟಲೆ ಹಿಂದೂಗಳು, ಮುಸಲ್ಮಾನರು ಇದಕ್ಕಾಗಿ ಕಾತರಿಸಿದ್ದಾರೆ. ನಾನಂತೂ ಬಾಲ್ಯದಿಂದಲೂ ಇದನ್ನು ಸಾಧಿಸಲು ಪ್ರಯತ್ನಿಸಿದ್ದೇನೆ...[ಹಿಂದೂ-ಮುಸ್ಲಿಂ ಐಕ್ಯತೆ] ನನ್ನ ಜೀವಮಾನದ ತುಡಿತವಾಗಿದ್ದರಿಂದಲೇ ಖಿಲಾಫತ್ ಚಳುವಳಿಯಲ್ಲಿ ನಾನು ಮುಸಲ್ಮಾನರಿಗೆ ಸಂಪೂರ್ಣ ಸಹಕಾರ ಕೊಟ್ಟೆ. ದೇಶದುದ್ದಕ್ಕೂ ಮುಸ್ಲಿಮರು ನನ್ನನ್ನು ತಮ್ಮ ನಿಜವಾದ ಮಿತ್ರನೆಂದು ಒಪ್ಪಿಕೊಂಡರು.

ಹಾಗಾದರೆ ಈಗ ಯಾಕೆ ನಾನು ಕೆಟ್ಟವನಾದೆ ಹಾಗೂ ದ್ವೇಷಕ್ಕೆ ಈಡಾದ ವ್ಯಕ್ತಿಯಾದೆ? ಒಬ್ಬ ಪ್ರಾಮಾಣಿಕ ಮನುಷ್ಯನಾಗಿ, ನಿಜವಾದ ನೆರೆಮನೆಯವನಾಗಿ, ನಂಬಿಕಸ್ತ ಗೆಳೆಯನಾಗಿ, ಮುಸಲ್ಮಾನರ ಸಂಕಷ್ಟದ ಕಾಲದಲ್ಲಿ [ಖಿಲಾಫತ್ ಚಳುವಳಿಯ ಕಾಲದಲ್ಲಿ] ಅವರ ಜೊತೆ ನಿಲ್ಲುವುದು ನನಗೆ ಮುಖ್ಯವಾಗಿತ್ತು....ಆ ಕಾಲದಲ್ಲಿ ಸೌಜನ್ಯ, ಘನತೆ ಹಾಗೂ ಉದಾತ್ತ ಭಾವಗಳು ನಮ್ಮಲ್ಲಿ ಸದಾ ಸ್ಫೂರ್ತಿ ಉಕ್ಕಿಸುತ್ತಿದ್ದವು. ಸೋದರ ಸಮುದಾಯಗಳ ಜನರ ಜೊತೆ ಹೊಂದಿಕೊಂಡು ಹೋಗಲು ಎಲ್ಲರೂ ಹಾತೊರೆಯುತ್ತಿದ್ದರು. ಒಬ್ಬರ ಧಾರ್ಮಿಕ ಭಾವನೆಗಳನ್ನು ಮತ್ತೊಬ್ಬರು ಗೌರವಿಸುತ್ತಿದ್ದರು. ಹೀಗೆ ಪರಸ್ಪರ ಗೌರವಿಸುವುದು ತಮಗೆ ದೊರೆತ ಸದವಕಾಶವೆಂದು ತಿಳಿದಿದ್ದರು. ಯಾರ ಹೃದಯದಲ್ಲೂ ಒಂದಿನಿತೂ

ಅನುಮಾನ ಸುಳಿಯುತ್ತಿರಲಿಲ್ಲ. ಆ ಘನತೆ ಹಾಗೂ ಉದಾತ್ತ ಭಾವಗಳು ಈಗ ಎಲ್ಲಿ ಕಣ್ಮರೆಯಾದವು? ಆ ಉಜ್ವಲ ದಿನಗಳನ್ನು ನೆನಸಿಕೊಳ್ಳಿ ಎಂದು ಖೈದ್-ಎ- ಅಝಮ್ ಜಿನ್ನಾ ಸೇರಿದಂತೆ ನಾನು ಎಲ್ಲ ಮುಸಲ್ಮಾನರನ್ನೂ ಕೇಳುತ್ತೇನೆ; ಈಗಿನ ಬಿಕ್ಕಟ್ಟು ಹೇಗೆ ಹುಟ್ಟಿತು ಎಂಬುದನ್ನು ಹುಡುಕಿ ನೋಡಿ ಎಂದು ಕೇಳಿಕೊಳ್ಳುತ್ತೇನೆ...

...ನಿಜವಾದ ಪ್ರಜಾಪ್ರಭುತ್ವ ಅಹಿಂಸೆಯಿಂದ ಮಾತ್ರ ಹುಟ್ಟುತ್ತದೆ ಎಂದು ಕಾಂಗ್ರೆಸ್ ನಂಬುತ್ತದೆ. ವಿಶ್ವ ಒಕ್ಕೂಟ ಅಹಿಂಸೆಯ ತಳಹದಿಯ ಮೇಲೆ ಮಾತ್ರ ಹುಟ್ಟಬಲ್ಲದು. ವಿಶ್ವದ ವ್ಯವಹಾರಗಳಿಂದ ಹಿಂಸೆಯನ್ನು ಪೂರ್ಣವಾಗಿ ಹೊರಗಿಡಲೇಬೇಕು. ಇದು ಸರಿಯೆನ್ನುವುದಾದರೆ, ಹಿಂದೂ-ಮುಸ್ಲಿಂ ಐಕ್ಯತೆಯನ್ನು ಹಿಂಸಾಮಾರ್ಗದಿಂದ ಸಾಧಿಸಲಾಗದು. ಹಿಂದೂಗಳು ಮುಸಲ್ಮಾನರನ್ನು ಹಿಂಸಿಸಿದರೆ ಅವರು ಯಾವ ಮುಖ ಹೊತ್ತು ವಿಶ್ವ ಒಕ್ಕೂಟದ ಬಗ್ಗೆ ಮಾತಾಡಬಲ್ಲರು?...ಒಂದು ಜೀವಂತ ಪ್ರಾಣಿಯನ್ನು ಕತ್ತರಿಸಲು ಒತ್ತಾಯಿಸುವುದೆಂದರೆ ಅದರ ಜೀವವನ್ನೇ ತೆಗೆದಂತೆ. ಅದು ಯುದ್ಧದ ಕರೆ. ಸೋದರರನ್ನು ಸೋದರರೇ ಕೊಲೆ ಮಾಡುವ ಇಂಥ ಯುದ್ಧದಲ್ಲಿ ಕಾಂಗ್ರೆಸ್ ಭಾಗಿಯಾಗುವುದಿಲ್ಲ. ಖಡ್ಗದ ತತ್ವವನ್ನು ಒಪ್ಪುವ ಹಿಂದೂಗಳಾದ ಡಾ. ಮೂಂಜೆ ಮತ್ತು ಶ್ರೀ ಸಾವರ್ಕರ್ ತರಹದವರು ಮುಸಲ್ಮಾನರನ್ನು ಹಿಂದೂಗಳ ಆಧಿಪತ್ಯದಡಿ ಇರಿಸಲು ಪ್ರಯತ್ನಿಸಬಹುದು. ನಾನು ಆ ವರ್ಗದ ಪ್ರತಿನಿಧಿಯಲ್ಲ. ನಾನು ಕಾಂಗ್ರೆಸ್ಸಿನ ಪ್ರತಿನಿಧಿ. ನೀವು ಚಿನ್ನದ ಮೊಟ್ಟೆಗಳನ್ನಿಡುವ ಕಾಂಗ್ರೆಸ್ಸನ್ನು ಕೊಲ್ಲಬಯಸಿದ್ದೀರಿ. ನೀವು ಕಾಂಗ್ರೆಸ್ ಬಗ್ಗೆ ನಂಬಿಕೆಯನ್ನು ಕಳೆದುಕೊಂಡರೆ ಹಿಂದೂ-ಮುಸ್ಲಿಮರ ನಡುವೆ ನಿರಂತರ ಕಾಳಗ ನಡೆದೇ ಇರುತ್ತದೆ, ಹಾಗೂ ದೇಶವು ಯುದ್ಧ ಹಾಗೂ ರಕ್ತಪಾತಗಳನ್ನು ಮುಂದುವರಿಸುವ ದುರ್ಗತಿಗೆ ಈಡಾಗುತ್ತದೆ. ಅಂಥ ಕಾಳಗವೇ ನಮ್ಮ ವಿಧಿಯಾಗುವುದಾದರೆ, ನಾನು ಅದಕ್ಕೆ ಸಾಕ್ಷಿಯಾಗಿ ಬದುಕಿರಲಾರೆ.

...ನನ್ನ ಹೃದಯದಲ್ಲಿ ಇನ್ನೂ ಅನೇಕ ಅಂಶಗಳು ತುಂಬಿವೆ. ಈ ಸಭೆಯೆದುರು ನಾನು ಅವನ್ನೆಲ್ಲ ತೋಡಿಕೊಂಡುಬಿಡುತ್ತೇನೆ... ನಾವು ಹಿಂದೂ, ಮುಸಲ್ಮಾನರಿಬ್ಬರ ಮನಸ್ಸಿನಲ್ಲೂ ಕಿಂಚಿತ್ತೂ ಅನುಮಾನವಿರದ ಹೃದಯದ ಐಕ್ಯತೆಯನ್ನು ಸಾಧಿಸಲು ಬಯಸಿದ್ದೇ ಆದರೆ, ಬ್ರಿಟಿಷ್ ಸಾಮ್ರಾಜ್ಯದ ಸರಪಳಿಯಿಂದ ಮುಕ್ತವಾಗುವ ಪ್ರಯತ್ನದಲ್ಲಿ ಮೊದಲು ಒಂದಾಗಬೇಕು...ಕಾಂಗ್ರೆಸ್ ಈಗ ಹೋರಾಡಿ ಗಳಿಸಲು ಬಯಸುತ್ತಿರುವ ಸ್ವಾತಂತ್ರ್ಯ ಕೇವಲ ಕಾಂಗ್ರೆಸ್ಸಿಗೆ ಮಾತ್ರವಲ್ಲ, ಅದು ಇಂಡಿಯಾದ ಎಲ್ಲ ನಲವತ್ತು ಕೋಟಿ ಭಾರತೀಯರಿಗಾಗಿ ಪಡೆಯಲಿರುವ ಸ್ವಾತಂತ್ರ್ಯ. ಕಾಂಗ್ರೆಸ್ಸಿಗರು ಸದಾ ಜನತೆಯ ವಿನಮ್ರ ಸೇವಕರಾಗಿಯೇ ಉಳಿಯಬೇಕು.

...ಕಾಂಗ್ರೆಸ್‌ಗೆ ಯಾವುದೇ ಒಂದು ಗುಂಪಿನ ಅಥವಾ ಒಂದು ಸಮುದಾಯದ ಆಧಿಪತ್ಯದಲ್ಲಿ ನಂಬಿಕೆಯಿಲ್ಲ. ಈ ವಿಶಾಲ ದೇಶದಲ್ಲಿ ವಾಸಿಸುತ್ತಿರುವ ಮುಸ್ಲಿಂ,

ಹಿಂದೂ, ಕ್ರೈಸ್ತ, ಪಾರ್ಸಿ, ಯಹೂದಿ ಮುಂತಾದ ಎಲ್ಲ ಸಮುದಾಯಗಳನ್ನು ತನ್ನ ಕಕ್ಷೆಯಲ್ಲಿ ಒಳಗೊಂಡ ಪ್ರಜಾಪ್ರಭುತ್ವವನ್ನು ರೂಪಿಸುವುದರ ಬಗ್ಗೆ ಕಾಂಗ್ರೆಸ್‌ಗೆ ನಂಬಿಕೆಯಿದೆ...

ಈ ದೇಶದಲ್ಲಿ ವಾಸಿಸುತ್ತಿರುವ ಎಲ್ಲ ಮುಸಲ್ಮಾನರಿಗೂ ಇಂಡಿಯಾ ದೇಶವೇ ತಾಯ್ನಾಡು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದ್ದರಿಂದ ಪ್ರತಿಯೊಬ್ಬ ಮುಸಲ್ಮಾನನೂ ಸ್ವಾತಂತ್ರ್ಯ ಹೋರಾಟಕ್ಕೆ ಸಹಕಾರ ನೀಡಬೇಕು. ಕಾಂಗ್ರೆಸ್ ಒಂದು ಸಮುದಾಯಕ್ಕೆ ಸೇರಿದ್ದಲ್ಲ. ಅದು ಇಡೀ ದೇಶಕ್ಕೇ ಸೇರಿದ್ದು...ಕಾಂಗ್ರೆಸ್ ಹಿಂದೂಗಳ ಪರವಾಗಿ ಹೋರಾಡುತ್ತಿಲ್ಲ, ಅದು ಅಲ್ಪಸಂಖ್ಯಾತರೂ ಸೇರಿದಂತೆ ಇಡೀ ದೇಶದ ಪರವಾಗಿ ಹೋರಾಡುತ್ತಿದೆ. ಮುಸಲ್ಮಾನರ ಹತ್ಯೆಯಲ್ಲಿ ಒಬ್ಬನೇ ಒಬ್ಬ ಕಾಂಗ್ರೆಸ್ಸಿಗ ಭಾಗಿಯಾದ ಸುದ್ದಿ ಕೇಳಿಬಂದರೂ ನನಗೆ ನೋವಾಗುತ್ತದೆ. ಮುಂಬರುವ ಕ್ರಾಂತಿಯ ದಿನಗಳಲ್ಲಿ ಒಂದು ವೇಳೆ ಹಿಂದೂಗಳ ಮೇಲೆ ಮುಸಲ್ಮಾನರು ದಾಳಿ ಮಾಡಿದರೆ, ಅಥವಾ ಮುಸಲ್ಮಾನರ ಮೇಲೆ ಹಿಂದೂಗಳು ದಾಳಿ ಮಾಡಿದರೆ, ಈ ಇಬ್ಬರ ರಕ್ಷಣೆಗೂ ಕಾಂಗ್ರೆಸ್ಸಿಗರು ತಮ್ಮ ಪ್ರಾಣವನ್ನೇ ಕೊಡಬೇಕಾಗುತ್ತದೆ. ಅದು ಕಾಂಗ್ರೆಸ್ಸಿಗರ ಧರ್ಮದ ಭಾಗ ಹಾಗೂ ಅಹಿಂಸಾ ತತ್ವದ ಒಂದು ಮುಖ್ಯ ಲಕ್ಷಣ ಕೂಡ...

ಸತ್ಯಾಗ್ರಹದಲ್ಲಿ ಮೋಸ ಹಾಗೂ ಸುಳ್ಳುಗಳಿಗೆ ಅವಕಾಶವಿಲ್ಲ... ಪ್ರಾಯಶಃ ಈ ಕಾಲದಲ್ಲಿ ಯಾರೂ ಸುತ್ತಿರದಷ್ಟು ಕಾಲ ನಾನು ಇಡೀ ದೇಶವನ್ನು ಸುತ್ತಿದ್ದೇನೆ. ದನಿಯಿಲ್ಲದ ಈ ದೇಶದ ಕೋಟಿಗಟ್ಟಲೆ ಜನ ನನ್ನನ್ನು ತಮ್ಮ ಗೆಳೆಯನಂತೆ, ಪ್ರತಿನಿಧಿಯಂತೆ ಕಂಡಿದ್ದಾರೆ. ನಾನು ಕೂಡ ನನಗೆ ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ಅವರೊಡನೆ ಗುರುತಿಸಿಕೊಂಡಿದ್ದೇನೆ. ಅವರ ಕಣ್ಣಲ್ಲಿ ನಾನು ನಂಬಿಕೆಯನ್ನು ಕಂಡಿದ್ದೇನೆ ಹಾಗೂ ಆ ನಂಬಿಕೆಯನ್ನು ಹಿಂಸೆ ಹಾಗೂ ಸುಳ್ಳುಗಳ ಮೇಲೆ ನಿಂತಿರುವ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧದ ಹೋರಾಟದಲ್ಲಿ ಒಳ್ಳೆಯ ಉದ್ದೇಶಕ್ಕಾಗಿ ಬಳಸಲು ಬಯಸುತ್ತೇನೆ...

ನಮ್ಮ ನಿಜವಾದ ಹೋರಾಟ ಈ ಗಳಿಗೆಯಿಂದ ಶುರುವಾಗುವುದಿಲ್ಲ. ಈಗ ನೀವೆಲ್ಲರೂ ನಿಮ್ಮ ಅಧಿಕಾರವನ್ನು ನನ್ನ ಕೈಯಲ್ಲಿರಿಸಿದ್ದೀರಿ. ಕಾಂಗ್ರೆಸ್ಸಿನ ಬೇಡಿಕೆಗಳನ್ನು ವೈಸ್‌ರಾಯ್ ಅವರ ಮುಂದಿಟ್ಟು ಅವನ್ನು ಒಪ್ಪಿಕೊಳ್ಳುವಂತೆ ಮನವಿ ಮಾಡುತ್ತೇನೆ. ಈ ಪ್ರಕ್ರಿಯೆಗೆ ಎರಡು ಮೂರು ವಾರಗಳು ಹಿಡಿಯಬಹುದು. ಈ ಅವಧಿಯಲ್ಲಿ ನೀವೇನು ಮಾಡಬೇಕು? ನಾವೆಲ್ಲರೂ ಈ ವಿರಾಮ ಕಾಲದಲ್ಲಿ ಕೂಡಿ ತೊಡಗಿ ಮಾಡುವ ಕೆಲಸ ಯಾವುದು? ಮೊದಲನೆಯ ಕಾರ್ಯಕ್ರಮವಾಗಿ ಚರಕ ನನ್ನ ಕಣ್ಣೆದುರು ಮೂಡುತ್ತಿದೆ. ಕಾಂಗ್ರೆಸ್ ಪಕ್ಷದ ಹದಿನಾಲ್ಕು ಅಂಶಗಳ ಕಾರ್ಯ

ಸೂಚಿಯನ್ನು ಜಾರಿಗೊಳಿಸುವ ಕೆಲಸ ಈಗಾಗಲೇ ನಿಮ್ಮೆದುರಿಗಿದೆ. ಹಾಗಾದರೆ ನೀವು ಮತ್ತಿನ್ನೇನು ಮಾಡಬೇಕು? ನಾನು ಹೇಳುತ್ತೇನೆ– ಈಗ, ಈ ಗಳಿಗೆಯಿಂದಲೇ, ಪ್ರತಿಯೊಬ್ಬರೂ ನಿಮ್ಮನ್ನು ನೀವು ಸ್ವತಂತ್ರ ಗಂಡು, ಹೆಣ್ಣುಗಳೆಂದು ತಿಳಿಯಿರಿ. ಅಂದರೆ, ನೀವೀಗ ಸ್ವತಂತ್ರರು, ಇನ್ನುಮುಂದೆ ಸಾಮ್ರಾಜ್ಯಶಾಹಿಯ ಚಕ್ರದಡಿ ನೀವು ಸಿಲುಕಿಲ್ಲ ಎಂಬಂತೆ ನಡೆದುಕೊಳ್ಳಿ... ಇದೇ ಸ್ವಾತಂತ್ರ್ಯದ ಅಂತಸ್ಸತ್ವ ಗುಲಾಮನೊಬ್ಬ ತಾನು ಸ್ವತಂತ್ರ ಎಂದುಕೊಂಡ ತಕ್ಷಣ ಗುಲಾಮಗಿರಿಯ ಸರಪಳಿ ಕಳಚಿ ಬೀಳುವುದು.

ವೈಸ್‌ರಾಯ್ ಜೊತೆಗೆ ಸಚಿವ ಖಾತೆಗಳು ಮುಂತಾದ ಯಾವ ಚೌಕಾಸಿಗೂ ನಾನು ಇಳಿಯುವುದಿಲ್ಲ ಎಂಬ ಬಗ್ಗೆ ನಿಮಗೆ ಭರವಸೆ ಕೊಡುತ್ತೇನೆ. ಸಂಪೂರ್ಣ ಸ್ವಾತಂತ್ರ್ಯ ಬಿಟ್ಟರೆ ಬೇರೆ ಯಾವುದರಿಂದಲೂ ನಾನು ತೃಪ್ತನಾಗುವುದಿಲ್ಲ. ಉಪ್ಪಿನ ಮೇಲಿನ ತೆರಿಗೆ ರದ್ದತಿ, ಪಾನನಿಷೇಧ ಮುಂತಾದ ಪ್ರಸ್ತಾವಗಳನ್ನು ವೈಸ್‌ರಾಯ್ ನಮ್ಮ ಮುಂದಿಡಬಹುದು. ಆದರೆ ನಾನು ಹೇಳುತ್ತೇನೆ: 'ಪೂರ್ಣ ಸ್ವಾತಂತ್ರ್ಯ ಬಿಟ್ಟು ಬೇರೆ ಇನ್ಯಾವ ಮಾತನ್ನೂ ಆಡಬೇಡಿ.'

ಇಗೋ ಇಲ್ಲಿದೆ ನಾನು ನಿಮಗೆ ಕೊಡಲಿರುವ ಒಂದು ಪುಟ್ಟ ಮಂತ್ರ. ಇದನ್ನು ನೀವು ನಿಮ್ಮ ಎದೆಯಲ್ಲಿ ಅಚ್ಚೊತ್ತಿಕೊಳ್ಳಿ; ನಿಮ್ಮ ಪ್ರತಿ ಉಸಿರಲ್ಲೂ ಈ ಮಂತ್ರ ಮೊಳಗಲಿ. 'ಡೂ ಆರ್ ಡೈ' (ಮಾಡು ಇಲ್ಲವೇ ಮಡಿ)– ಇದೇ ಆ ಮಂತ್ರ. ನಾವು ಇಂಡಿಯಾವನ್ನು ಸ್ವತಂತ್ರಗೊಳಿಸುತ್ತೇವೆ ಅಥವಾ ಆ ಪ್ರಯತ್ನದಲ್ಲಿ ಸಾವನ್ನಪ್ಪುತ್ತೇವೆ. ಆದರೆ ಗುಲಾಮಗಿರಿ ಮುಂದುವರಿಯುವುದನ್ನು ನೋಡುತ್ತಾ ಬದುಕಿರುವುದಿಲ್ಲ. ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ, ಪ್ರತಿಯೊಬ್ಬ ಕಾಂಗ್ರೆಸ್ ಹೆಣ್ಣು ಮಗಳೂ ಈ ದೇಶವು ಗುಲಾಮಗಿರಿ ಮತ್ತು ದಾಸ್ಯದಲ್ಲಿರುವುದನ್ನು ನೋಡುತ್ತಾ ಬದುಕಿರುವುದಿಲ್ಲ ಎಂಬ ಅಚಲ ನಿರ್ಧಾರದೊಂದಿಗೆ ಈ ಸಂಗ್ರಾಮದಲ್ಲಿ ಪಾಲ್ಗೊಳ್ಳುವರು. ಇದು ನಿಮ್ಮ ಪ್ರತಿಜ್ಞೆಯಾಗಲಿ. ಜೈಲು ತುಂಬುವ ಯೋಚನೆ ಮಾಡಬೇಡಿ. ಸರ್ಕಾರ ನನ್ನನ್ನು ಸ್ವತಂತ್ರವಾಗಿರಲು ಬಿಟ್ಟರೆ, ನೀವು ಜೈಲು ಸೇರುವ ಪ್ರಮೇಯವೇ ಬಾರದು. ಸರ್ಕಾರವೇ ಕಷ್ಟದಲ್ಲಿರುವಾಗ ಅಸಂಖ್ಯಾತ ಸೆರೆವಾಸಿಗಳನ್ನು ಸಾಕುವ ಕಷ್ಟವನ್ನು ನಾನು ಸರ್ಕಾರದ ಮೇಲೆ ಹೇರಬಯಸುವುದಿಲ್ಲ. ಇವತ್ತಿನಿಂದ ಪ್ರತಿಯೊಬ್ಬ ಗಂಡೂ, ಹೆಣ್ಣೂ ತಾನು ಉಣ್ಣುವುದು, ಬದುಕಿರುವುದು ಸ್ವಾತಂತ್ರ್ಯದ ಗುರಿ ಸಾಧನೆಗಾಗಿ, ಹಾಗೂ ಅಗತ್ಯ ಬಿದ್ದರೆ ಆ ಗುರಿ ತಲುಪಲು ಮರಣವನ್ನಪ್ಪಲೂ ತಯಾರಾಗಿರುವೆ ಎಂಬ ಪ್ರಜ್ಞೆಯಿಂದಲೇ ಮುನ್ನಡೆಯಲಿ...'ಸ್ವಾತಂತ್ರ್ಯ ದೊರೆಯುವ ತನಕ ವಿರಮಿಸುವುದಿಲ್ಲ; ಈ ಗುರಿಸಾಧನೆಯ ಹಾದಿಯಲ್ಲಿ ಪ್ರಾಣ ತೆರಲೂ ಸಿದ್ಧ' ಎಂದು ನಿಮ್ಮ ಆತ್ಮಸಾಕ್ಷಿಯನ್ನೇ ಸಾಕ್ಷಿಯನ್ನಾಗಿಟ್ಟುಕೊಂಡು ದೇವರೆದುರು ಪ್ರತಿಜ್ಞೆ

ಕೈಗೊಳ್ಳಿ. ಯಾರು ತನ್ನ ಜೀವ ಕಳೆದುಕೊಳ್ಳುತ್ತಾನೋ ಅವನು ಅದನ್ನು ಪಡೆಯುತ್ತಾನೆ; ಯಾರು ಅದನ್ನು ಉಳಿಸಿಕೊಳ್ಳಬಯಸುತ್ತಾನೋ ಅವನು ಅದನ್ನು ಕಳೆದುಕೊಳ್ಳುತ್ತಾನೆ. ಸ್ವಾತಂತ್ರ್ಯವು ಹೇಡಿಗಳಿಗೆ, ದುರ್ಬಲರಿಗೆ ದಕ್ಕದು.

ಇನ್ನು ಪತ್ರಕರ್ತರಿಗೆ ಒಂದೆರಡು ಮಾತು ಹೇಳುತ್ತೇನೆ: ನೀವು ಈತನಕ ದೇಶದ ಹಕ್ಕೊತ್ತಾಯಕ್ಕೆ ಕೊಟ್ಟಿರುವ ಬೆಂಬಲಕ್ಕೆ ನಿಮಗೆ ಅಭಿನಂದನೆಗಳು. ನಿಮ್ಮ ಕೆಲಸದ ಹಾದಿಯಲ್ಲಿ ಎದುರಾಗಿರುವ ಅಡೆತಡೆಗಳು, ನಿರ್ಬಂಧಗಳನ್ನು ನಾನು ಬಲ್ಲೆ. ಈಗ ನೀವು ನಿಮ್ಮ ಸರಪಳಿಗಳನ್ನು ಕಿತ್ತೊಗೆಯಿರಿ ಎಂದು ಕೇಳಿಕೊಳ್ಳುತ್ತೇನೆ. ನಿಮ್ಮ ಕೈಯಲ್ಲಿ ಸರ್ಕಾರ ಹತ್ತಿಕ್ಕಲಾಗದ ಪೆನ್ನಿದೆ...ಒಂದು ವೇಳೆ ನನ್ನ ಮುದ್ರಣಾಲಯವನ್ನು ಮುಟ್ಟುಗೋಲು ಹಾಕಿಕೊಂಡರೂ ನಾನು ನನ್ನ ಪೆನ್ನನ್ನು ಅದುಮಿಡುವುದಿಲ್ಲ. ಹಿಂದೊಮ್ಮೆ [ಸರ್ಕಾರ] ನನ್ನ ಮುದ್ರಣಾಲಯವನ್ನು ಮುಟ್ಟುಗೋಲು ಹಾಕಿಕೊಂಡು, ಅನಂತರ ಅದನ್ನು ಮರಳಿಸಿದ ಕತೆ ನಿಮಗೆ ಗೊತ್ತಿದೆ. ಅಂಥ ನಿರ್ಣಾಯಕ ತ್ಯಾಗವನ್ನು ನಾನು ನಿಮ್ಮಿಂದ ಬಯಸುವುದಿಲ್ಲ. ಆದರೆ ನಾನು ಮಧ್ಯದ ಹಾದಿಯೊಂದನ್ನು ನಿಮಗೆ ತೋರಿಸುತ್ತೇನೆ– 'ನಾನು ಈಗಿರುವ ನಿರ್ಬಂಧಗಳ ಅಡಿಯಲ್ಲಿ ಬರೆಯುವುದಿಲ್ಲ' ಎಂದು ನೀವು ಘೋಷಿಸಿ; 'ಸ್ವಾತಂತ್ರ್ಯ ಬಂದ ಮೇಲಷ್ಟೇ ಪೆನ್ನನ್ನು ಕೈಗೆತ್ತಿಕೊಳ್ಳುತ್ತೇನೆ' ಎಂದು ಘೋಷಿಸಿ. [ವಾರ್ತಾ ಪ್ರಸಾರ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ] ಸರ್ ಫ್ರೆಡ್ರಿಕ್ ಪಕಲ್ ಅವರಿಗೆ 'ನಿಮ್ಮ ಪತ್ರಿಕಾ ಹೇಳಿಕೆಗಳು ಪೂರಾ ಸುಳ್ಳುಗಳಿಂದ ತುಂಬಿರುತ್ತವೆ, ನಾವು ಅವನ್ನು ಪ್ರಕಟಿಸುವುದಿಲ್ಲ' ಎಂದು ಹೇಳಿಬಿಡಿ. 'ನಾನು ಕಾಂಗ್ರೆಸ್ ಜೊತೆಗೆ ಇದ್ದೇನೆ' ಎಂದು ಬಹಿರಂಗವಾಗಿ ಘೋಷಿಸಿ. ನೀವು ಹೀಗೆ ಮಾಡಿದ್ದೇ ಆದರೆ, ನಿಜವಾದ ಹೋರಾಟ ಶುರುವಾಗುವುದಕ್ಕೆ ಮೊದಲೇ ದೇಶದ ವಾತಾವರಣ ಬದಲಾಗಬಲ್ಲದು.

...ಇನ್ನು [ವಿಭಿನ್ನ ಪ್ರಾಂತಗಳ]ರಾಜರುಗಳನ್ನು ನಾನು ವಿನಮ್ರವಾಗಿ ಕೇಳಿಕೊಳ್ಳುವುದು ಇಷ್ಟೆ: ನೀವು ನಿಮ್ಮ ಆಸ್ತಿಪಾಸ್ತಿಗಳನ್ನು ತ್ಯಾಗ ಮಾಡಿ. ಆ ಆಸ್ತಿಯ ನಿಜವಾದ ಟ್ರಸ್ಟಿ (ಧರ್ಮದರ್ಶಿ)ಗಳಾಗಿ. ರಾಜರುಗಳು ಜನರಿಗೆ, 'ನೀವು ಪ್ರಭುತ್ವದ ನಿಜವಾದ ಮಾಲೀಕರು ಮತ್ತು ಒಡೆಯರು; ನಾವು ನಿಮ್ಮ ಸೇವಕರು' ಎಂದು ಹೇಳಲಿ... ನಾನು ರಾಜರುಗಳನ್ನು ಕೇಳುತ್ತೇನೆ: 'ನೀವು ಎಲ್ಲ ಕಾಲಕ್ಕೂ ಗುಲಾಮರಾಗಿ ಉಳಿಯಬಯಸುವಿರೇನು? ವಿದೇಶಿ ಪ್ರಭುತ್ವಕ್ಕೆ ಮುಜುರೆ ಒಪ್ಪಿಸುವುದರ ಬದಲಿಗೆ ನಿಮ್ಮದೇ ಜನರ ಸಾರ್ವಭೌಮತ್ವವನ್ನು ನೀವೇಕೆ ಒಪ್ಪಿಕೊಳ್ಳಬಾರದು?'

...ನಾವು ಯಾವುದನ್ನೂ ಗುಟ್ಟಾಗಿ ಮಾಡಕೂಡದು. ಇದು ಬಹಿರಂಗ ಬಂಡಾಯ. ಈ ಹೋರಾಟದಲ್ಲಿ ಗುಟ್ಟು ಎನ್ನುವುದು ಒಂದು ಪಾಪ. ಸ್ವತಂತ್ರ ಮನುಷ್ಯನೊಬ್ಬ

ಗುಪ್ತ ಚಳುವಳಿಯಲ್ಲಿ ತೊಡಗುವುದಿಲ್ಲ...ನಿಮಗೆ ಸ್ವಾತಂತ್ರ್ಯ ಸಿಕ್ಕಾಗ ನಿಮ್ಮದೇ ಆದ ಸಿ.ಐ.ಡಿ. ಪಡೆಯನ್ನು ನೀವು ಇಟ್ಟುಕೊಳ್ಳುವ ಸಾಧ್ಯತೆ ಇದೆ. ಅದನ್ನು ಕೂಡ ನಾನು ಒಪ್ಪುವವನಲ್ಲ. ಆದರೆ ಈ ಹೋರಾಟದಲ್ಲಿ ನಾವು ಬಹಿರಂಗವಾಗಿ ಕೆಲಸ ಮಾಡಬೇಕು, ಓಡಿ ಹೋಗುವುದರ ಬದಲಿಗೆ ಎದೆಯೊಡ್ಡಿ ಗುಂಡುಗಳನ್ನು ಆಹ್ವಾನಿಸಬೇಕು.

ಸರ್ಕಾರಿ ನೌಕರರಿಗೂ ನಾನು ಹೇಳಬೇಕಾದ ಮಾತೊಂದಿದೆ. ನಿಮಗೆ ಇಷ್ಟವಿಲ್ಲದಿದ್ದರೆ, ಈಗಲೇ ನಿಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕಿಲ್ಲ. ದಿವಂಗತ ಜಸ್ಟೀಸ್ ರಾನಡೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಲಿಲ್ಲ, ಆದರೆ ನಾನು ಕಾಂಗ್ರೆಸ್ ಜೊತೆ ಇದ್ದೇನೆ ಎಂದು ಅವರು ಬಹಿರಂಗವಾಗಿ ಘೋಷಿಸಿದರು. ತಾನು ನ್ಯಾಯಾಧೀಶನಾಗಿದ್ದರೂ ಕಾಂಗ್ರೆಸ್ಸಿಗನಾಗಿದ್ದೇನೆ, ಬಹಿರಂಗವಾಗಿ ಕಾಂಗ್ರೆಸ್ ಸಭೆಗಳಲ್ಲಿ ಭಾಗವಹಿಸುತ್ತೇನೆ, ಆದರೆ ಅದೇ ವೇಳೆಗೆ ತನ್ನ ರಾಜಕೀಯ ದೃಷ್ಟಿಕೋನಗಳು ತಾನು ನಿರ್ವಹಿಸುತ್ತಿರುವ ನ್ಯಾಯಾಧೀಶ ಸ್ಥಾನದ ನಿಷ್ಪಕ್ಷಪಾತತೆಯನ್ನು ವಕ್ರಗೊಳಿಸಲು ಬಿಡುವುದಿಲ್ಲ ಎಂದು ಅವರು ಸರ್ಕಾರಕ್ಕೆ ಹೇಳಿದ್ದರು. ಕಾಂಗ್ರೆಸ್ಸಿನ ಪೆಂಡಾಲಿನಲ್ಲೇ ಅವರು ತಮ್ಮ ಸಾಮಾಜಿಕ ಸುಧಾರಣಾ ಸಮ್ಮೇಳನವನ್ನೂ ನಡೆಸಿದ್ದರು. ರಾನಡೆಯವರ ಹೆಜ್ಜೆಯನ್ನು ಅನುಸರಿಸುವಂತೆ ನಾನು ಎಲ್ಲ ಸರ್ಕಾರಿ ನೌಕರರನ್ನೂ ಕೇಳಿಕೊಳ್ಳುವೆ. ಸರ್ಕಾರಿ ನೌಕರರು ಕಾಂಗ್ರೆಸ್‌ನೊಂದಿಗೆ ತಮ್ಮ ಸಂಬಂಧವನ್ನು ಘೋಷಿಸುವ ಮೂಲಕ ಫ್ರೆಡೆರಿಕ್ ಪಕಲ್ ಅವರ ಗುಪ್ತ ಸುತ್ತೋಲೆಗೆ ಉತ್ತರ ಕೊಡಬೇಕು.

'ಸರ್ಕಾರದಿಂದ ನಮಗೆ ರಹಸ್ಯ ಸೂಚನಾ ಪತ್ರಗಳು ಬರುತ್ತಿವೆ. ನಾವೇನು ಮಾಡಬೇಕು?' ಎಂದು ನ್ಯಾಯಾಧೀಶರೊಬ್ಬರು ನನ್ನನ್ನು ಕೇಳಿದರು. ಆಗ ನಾನು ಹೇಳಿದೆ: 'ನಾನೇನಾದರೂ ನಿಮ್ಮ ಸ್ಥಾನದಲ್ಲಿದ್ದರೆ ಈ ಸೂಚನಾಪತ್ರಗಳನ್ನು ಕಡೆಗಣಿಸುತ್ತಿದ್ದೆ. ನೀವು ಬಹಿರಂಗವಾಗಿ ಸರ್ಕಾರಕ್ಕೆ ಹೇಳಿಬಿಡಿ– 'ನಿಮ್ಮ ರಹಸ್ಯ ಸೂಚನಾ ಪತ್ರ ತಲುಪಿತು. ಆದರೆ ನಾನು ಕಾಂಗ್ರೆಸ್ ಜೊತೆಗಿದ್ದೇನೆ. ಜೀವನ ನಿರ್ವಹಣೆಗೆ ನಾನು ಸರ್ಕಾರದ ಸೇವೆಯಲ್ಲಿದ್ದರೂ, ನಾನು ನಿಮ್ಮ ರಹಸ್ಯ ಸೂಚನೆಗಳನ್ನು ಪಾಲಿಸುವುದಿಲ್ಲ ಅಥವಾ ರಹಸ್ಯ ವಿಧಾನಗಳನ್ನು ನಾನು ಅಳವಡಿಸಿಕೊಳ್ಳುವುದಿಲ್ಲ.'

ಸೈನಿಕರೂ ಈ ಕಾರ್ಯಕ್ರಮದ ಭಾಗವಾಗಿದ್ದಾರೆ. ತಕ್ಷಣ ತಂತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಸೇನೆಯನ್ನು ಬಿಟ್ಟು ಬನ್ನಿ ಎಂದು ನಾನು ಅವರನ್ನು ಕೇಳಿಕೊಳ್ಳುವುದಿಲ್ಲ. ನನ್ನ ಬಳಿಗೆ, ಜವಾಹರ್ ಬಳಿಗೆ, ಮೌಲಾನಾ ಬಳಿಗೆ ಈಗಲೂ ಸೈನಿಕರು ಬಂದು, 'ನಾವು ನಿಮ್ಮೊಂದಿಗಿದ್ದೇವೆ. ಈ ಸರ್ಕಾರದ ಕ್ರೌರ್ಯ ಕಂಡು ಸುಸ್ತಾಗಿದ್ದೇವೆ' ಎಂದು ಹೇಳುವುದುಂಟು. ಇಂಥ ಸೈನಿಕರಿಗೆ ನಾನು ಹೇಳುತ್ತಿರುತ್ತೇನೆ:

'ನೀವು ಸರ್ಕಾರಕ್ಕೆ ಹೀಗೆ ಹೇಳಬಹುದು– 'ನಮ್ಮ ಹೃದಯ ಕಾಂಗ್ರೆಸ್ ಜೊತೆಗಿದೆ. ಆದರೆ ನಾವು ಸೇನೆಯನ್ನು ತೊರೆಯುವುದಿಲ್ಲ; ನಿಮ್ಮ ಸಂಬಳ ಪಡೆಯುವವರೆಗೂ ನಾವು ನಿಮ್ಮ ಸೇವೆ ಮಾಡುತ್ತೇವೆ. ನಿಮ್ಮ ನ್ಯಾಯಯುತ ಆದೇಶಗಳನ್ನು ಪಾಲಿಸುತ್ತೇವೆ. ಆದರೆ ನಮ್ಮ ದೇಶದ ಜನರ ಮೇಲೆ ಗುಂಡು ಹಾರಿಸಲು ಹೇಳಿದರೆ ನಾವು ಅದನ್ನು ಒಪ್ಪುವುದಿಲ್ಲ.'

ಇಷ್ಟನ್ನೂ ಮಾಡುವ ಧೈರ್ಯವಿಲ್ಲದರಿಗೆ ನಾನು ಹೇಳುವುದೇನೂ ಉಳಿದಿಲ್ಲ. ಅಂಥವರಿಗೆ ಅವರದೇ ಆಯ್ಕೆಗಳಿವೆ. ಆದರೆ ಇಷ್ಟನ್ನಾದರೂ ಮಾಡಲು ನೀವು ಸಿದ್ಧರಿದ್ದರೆ ಇಡೀ ವಾತಾವರಣದಲ್ಲಿ ಮಿಂಚಿನ ಸಂಚಾರವಾಗುತ್ತದೆ ಎಂಬುದಂತೂ ಖಾತ್ರಿ. ಸರ್ಕಾರ ಬಾಂಬಿನ ಮಳೆಗರೆಯಬಹುದು. ಆದರೆ ಜಗತ್ತಿನ ಯಾವ ಶಕ್ತಿಯೂ ಇನ್ನು ನಿಮ್ಮನ್ನು ದಾಸ್ಯದಲ್ಲಿರಿಸಿಕೊಳ್ಳುವುದು ಅಸಾಧ್ಯವಾಗುತ್ತದೆ.

ಇನ್ನು, ವಿದ್ಯಾರ್ಥಿಗಳು ಕೆಲ ಕಾಲ ಸ್ವಾತಂತ್ರ್ಯ ಚಳುವಳಿ ಸೇರಿ, ಮತ್ತೆ ವಿದ್ಯಾಭ್ಯಾಸಕ್ಕೆ ಹೋಗಬೇಕೆಂದಿದ್ದರೆ, ಅವರನ್ನು ನಾನು ಚಳುವಳಿಗೆ ಕರೆಯುವುದಿಲ್ಲ. ಅವರಿಗಾಗಿ ಕಾರ್ಯಕ್ರಮವೊಂದನ್ನು ರೂಪಿಸುವ ತನಕ, ಅವರು ತಮ್ಮ ಪ್ರೊಫೆಸರುಗಳನ್ನು, 'ನೀವು ನಿಮ್ಮ ಹುದ್ದೆಗಳಲ್ಲಿದ್ದರೂ, ನಮ್ಮನ್ನು ಸ್ವಾತಂತ್ರ್ಯ ಚಳುವಳಿಗೆ ಮುನ್ನಡೆಸಿ ಹಾಗೂ ಆ ಕುರಿತು ಪಾಠ ಹೇಳಿಕೊಡಿ' ಎಂದು ಕೇಳಲಿ. ಜಗತ್ತಿನಾದ್ಯಂತ ಸ್ವಾತಂತ್ರ್ಯ ಹೋರಾಟಗಳಲ್ಲಿ ವಿದ್ಯಾರ್ಥಿಗಳು ದೊಡ್ಡ ಕೊಡುಗೆ ನೀಡಿದ್ದಾರೆ.

...ನಾನು ಹೇಳುವುದು ಇನ್ನೂ ಬಹಳವಿದೆ. ಆದರೆ ನನ್ನೆದೆ ಭಾರವಾಗಿದೆ. ನಾನು ನಿಮ್ಮ ಅಪಾರ ವೇಳೆಯನ್ನು ತೆಗೆದುಕೊಂಡಿದ್ದೇನೆ. ನಾನು ಇಂಗ್ಲಿಷಿನಲ್ಲೂ ಕೆಲವು ಮಾತುಗಳನ್ನು ಹೇಳುವುದಿದೆ. ರಾತ್ರಿ ಇಷ್ಟು ತಡವಾದ ಮೇಲೂ ಕಿವಿಗೊಟ್ಟು ಕೇಳಿಸಿಕೊಳ್ಳುತ್ತಿರುವ ನಿಮ್ಮ ಶಕ್ತಿಗೆ, ತಾಳ್ಮೆಗೆ ಕೃತಜ್ಞತೆಗಳು. ನಿಜವಾದ ಯೋಧರು ಮಾಡುವುದು ಇದನ್ನೇ. ಕಳೆದ ಇಪ್ಪತ್ತೆರಡು ವರ್ಷ ಕಾಲ ನಾನು ನನ್ನ ಮಾತು-ಬರಹಗಳನ್ನು ಹತೋಟಿಯಲ್ಲಿಟ್ಟುಕೊಂಡು ನನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ ಕೊಂಡಿದ್ದೇನೆ... ಇವತ್ತು ಸಂದರ್ಭ ಬಂದಿರುವುದರಿಂದ ನನ್ನ ಒಳಗಿದ್ದುದನ್ನೆಲ್ಲ ನಿಮ್ಮೆದುರು ತೋಡಿಕೊಂಡು ಹಗುರಾಗುತ್ತಿದ್ದೇನೆ... ನಿಮ್ಮ ತಾಳ್ಮೆಗೆ ಇದು ಭಾರವೆನ್ನಿಸಿದರೂ ನಾನು ಈ ಕೆಲಸ ಮಾಡಿದ್ದೇನೆ. ಆ ಬಗ್ಗೆ ನನಗೆ ವಿಷಾದವಿಲ್ಲ. ನಾನು ನನ್ನ ಸಂದೇಶವನ್ನು ನಿಮಗೆ ನೀಡಿದ್ದೇನೆ. ಆ ಮೂಲಕ ಇಡೀ ಇಂಡಿಯಾಕ್ಕೇ ಈ ಸಂದೇಶವನ್ನು ನೀಡುತ್ತಿದ್ದೇನೆ.

ನನ್ನ ಅಂತರಾತ್ಮವನ್ನು ಕದಡುತ್ತಿದ್ದ ಎಲ್ಲವನ್ನೂ ನಿಮ್ಮೆದುರು. ಯಾರ ಸೇವೆ ಮಾಡುವುದು ನನ್ನ ಭಾಗ್ಯವಾಗಿದೆಯೋ ಅಂಥ ನಿಮ್ಮೆದುರು. ತೋಡಿಕೊಂಡಿದ್ದೇನೆ.

ನನ್ನನ್ನು ಜನರ 'ನಾಯಕ' ಎಂದು ಕರೆಯಲಾಗಿದೆ, ಅಥವಾ ಸೈನ್ಯದ ಭಾಷೆಯಲ್ಲಿ ಹೇಳುವುದಾದರೆ 'ದಂಡನಾಯಕ' ಎಂದು ಪರಿಗಣಿಸಲಾಗಿದೆ. ಆದರೆ ನನ್ನ ಸ್ಥಾನದ ಬಗ್ಗೆ ನನಗಂತೂ ಅಂಥ ಭಾವನೆಯಿಲ್ಲ. ಯಾರಾದರೂ ನನ್ನ ಮಾತನ್ನು ಕೇಳುವಂತೆ ಮಾಡಲು ನನ್ನ ಬಳಿ ಪ್ರೀತಿ ಬಿಟ್ಟರೆ ಬೇರೆ ಯಾವುದೇ ಅಸ್ತ್ರವಿಲ್ಲ. ನನ್ನ ಕೈಯಲ್ಲಿ ಒಂದು ಕೋಲೇನೋ ಇದೆ; ಆದರೆ ಅದನ್ನು ನೀವು ಸಲೀಸಾಗಿ ಮುರಿದು ಹಾಕಬಹುದು. ಅದು ನಾನು ನಡೆದಾಡಲು ನೆರವಾಗುವ ಕೋಲಷ್ಟೆ. ಇಂಥ ಹೆಳವನನ್ನು ದೊಡ್ಡ ಹೊರೆಯೊಂದನ್ನು ಹೊರಲು ಕರೆದರೆ ಅವನು ಸಂಭ್ರಮ ಗೊಳ್ಳಲಾರ. ಆದರೆ ನಾನು ನಾಯಕನಂತಲ್ಲದೆ, ಒಬ್ಬ ವಿನಮ್ರ ಸೇವಕನಾಗಿ ನಿಮ್ಮೆದುರು ನಿಂತಾಗ ಮಾತ್ರ ನೀವು ಈ ಹೊರೆಯನ್ನು ಹಂಚಿಕೊಳ್ಳಬಹುದು. ಸಮಾನರ ನಡುವೆ ನಾಯಕನಾದವನು ಮಾತ್ರ ಅತ್ಯುತ್ತಮ ಸೇವೆ ಮಾಡಬಲ್ಲ.

...ಈ ನಡುವೆ ಕೆಲವು ವಲಯಗಳು ನನ್ನ ಬುದ್ಧಿಶಕ್ತಿಯನ್ನಷ್ಟೇ ಅಲ್ಲ, ನನ್ನ ಪ್ರಾಮಾಣಿಕತೆಯನ್ನೂ ಅನುಮಾನಿಸುತ್ತಿವೆ. ನನ್ನ ಬುದ್ಧಿಶಕ್ತಿಯೇನೂ ನಾನು ಕಳೆದುಕೊಳ್ಳ ಬಾರದ ನಿಧಿಯೇನಲ್ಲ; ಆದರೆ ನನ್ನ ಪ್ರಾಮಾಣಿಕತೆ ಮಾತ್ರ ನನ್ನ ಅಮೂಲ್ಯ ನಿಧಿ; ಅದನ್ನು ಮಾತ್ರ ನಾನು ಕಳೆದುಕೊಳ್ಳಲಾರೆ... ಇಂಥ ಸನ್ನಿವೇಶಗಳು ಒಬ್ಬ ಶುದ್ಧ ಸತ್ಯಶೋಧಕನ ಬದುಕಿನಲ್ಲಿ, ಬೂಟಾಟಿಕೆ ಅಥವಾ ಭಯವಿಲ್ಲದೆ, ತನ್ನ ಪ್ರಜ್ಞೆಗೆ ತೋಚಿದಂತೆ ದೇಶ ಹಾಗೂ ಮಾನವಕುಲದ ಸೇವೆ ಮಾಡಬಯಸುವ ಮನುಷ್ಯನ ಬದುಕಿನಲ್ಲಿ ಬಂದೇ ಬರುತ್ತವೆ... [ಇಂದಿನ ಬ್ರಿಟಿಷ್ ವೈಸ್‌ರಾಯ್] ಲಾರ್ಡ್ ಲಿನ್‌ಲಿತ್‌ಗೌ ಜೊತೆಗಿನ ನನ್ನ ಸ್ನೇಹ ಸರ್ಕಾರಿ ಸಂಬಂಧ ಮೀರಿದ್ದು... ಆದರೆ ಸ್ವಂತದ ಯಾವ ಸ್ನೇಹ ಸಂಬಂಧವೂ ನಾವೀಗ ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಯಾದ ಲಾರ್ಡ್ ಲಿನ್‌ಲಿತ್‌ಗೌ ವಿರುದ್ಧ ಹೂಡಲಿರುವ ಕಠಿಣ ಹೋರಾಟದಲ್ಲಿ ಮೂಗು ತೂರಿಸುವುದಿಲ್ಲ.

ಇದೇ ಸಂದರ್ಭದಲ್ಲಿ [ಗೆಳೆಯ] ಚಾರ್ಲಿ ಆಂಡ್ರ್ಯೂಸ್‌ನ ಪವಿತ್ರ ನೆನಪು ನನ್ನೆದೆಯಲ್ಲಿ ಉಕ್ಕಿ ಬರುತ್ತಿದೆ... ಚಾರ್ಲಿ ಇಂಗ್ಲಿಷ್ ಸಂಸ್ಕೃತಿಯ ಉಜ್ವಲ ಪರಂಪರೆಯ ಪ್ರತಿನಿಧಿಯಂತಿದ್ದ. ನಮ್ಮಿಬ್ಬರ ನಡುವೆ ಯಾವ ಗುಟ್ಟೂ ಇರಲಿಲ್ಲ. ನಾವು ನಮ್ಮ ಮನಸ್ಸಿನಲ್ಲಿ ಇದ್ದದ್ದನ್ನೆಲ್ಲ ನಿತ್ಯ ಒಬ್ಬರಿಗೊಬ್ಬರು ಹಂಚಿಕೊಳ್ಳುತ್ತಿದ್ದೆವು... ದುರದೃಷ್ಟವಶಾತ್ ಚಾರ್ಲಿ ನಮ್ಮನ್ನು ಅಗಲಿದ್ದಾನೆ. ಚಾರ್ಲಿಯ ಆತ್ಮ ನನ್ನ ಮಾತನ್ನು ಕೇಳಿಸಿಕೊಳ್ಳುತ್ತಿದೆಯೆಂಬುದು ನನಗೆ ಗೊತ್ತು...

ಈ ಹಿನ್ನೆಲೆಯೊಂದಿಗೆ ನಾನು ಜಗತ್ತಿಗೆ ಸಾರಿ ಹೇಳಬಯಸುತ್ತೇನೆ... ಇನ್ನು ನನ್ನ ಅಂತರಾತ್ಮವನ್ನು, ನನ್ನೊಳಗಿನ ದನಿಯನ್ನು, ಅದುಮಿಡಲಾರೆ... ನನ್ನನ್ನು

ಎಂದೂ ಮೋಸಗೊಳಿಸದ ನನ್ನ ಒಳಗು ಈಗ ಹೇಳುತ್ತಿದೆ: "ನೀನು ಏಕಾಂಗಿಯಾಗಿ ನಿಲ್ಲಬೇಕಾಗಿ ಬಂದರೂ ನೀನು ಇಡೀ ಜಗತ್ತಿನ ವಿರುದ್ಧ ನಿಲ್ಲಬೇಕಾಗುತ್ತದೆ. ಜಗತ್ತು ನಿನ್ನನ್ನು ಕೆಕ್ಕರಿಸಿ ನೋಡಿದರೂ ನೀನು ಆ ಜಗತ್ತನ್ನು ದಿಟ್ಟಿಸಿ ನೋಡಬೇಕಾಗುತ್ತದೆ. ಹೆದರದಿರು. ನಿನ್ನ ಹೃದಯದಲ್ಲಿ ನೆಲೆಸಿರುವ ಆ ಪುಟ್ಟ ಚೈತನ್ಯವನ್ನು ನಂಬು. ಅದು ನುಡಿಯುತ್ತಿದೆ: 'ಗೆಳೆಯ, ಪತ್ನಿ ಹಾಗೂ ಇತರ ಎಲ್ಲರನ್ನೂ ತೊರೆ. ಆದರೆ ನೀನು ಯಾವುದಕ್ಕಾಗಿ ಬದುಕಿದ್ದೀಯೋ, ಯಾವುದಕ್ಕಾಗಿ ಪ್ರಾಣ ತೆರಲಿದ್ದೀಯೋ ಅದನ್ನು ದೃಢವಾಗಿ ಘೋಷಿಸು.'..."

ಗೆಳೆಯರೇ, ನನ್ನನ್ನು ನಂಬಿ. ನಾನು ಸಾಯಲು ಕಾತರಿಸುತ್ತಿಲ್ಲ. ನನ್ನ ಜೀವಿತಾವಧಿಯ ಪೂರ್ತಿ ನಾನು ಬದುಕಲು ಬಯಸುತ್ತೇನೆ. ನನ್ನ ಪ್ರಕಾರ, ನನ್ನ ಜೀವಿತಾವಧಿ ಕೊನೆಯ ಪಕ್ಷ ೧೨೦ ವರ್ಷ. ಅಷ್ಟು ಹೊತ್ತಿಗೆ ಇಂಡಿಯಾ ಸ್ವತಂತ್ರವಾಗಿರುತ್ತದೆ. ಜಗತ್ತು ಸ್ವತಂತ್ರವಾಗಿರುತ್ತದೆ. ಹಾಗೆ ನೋಡಿದರೆ, ನಾನು ಇಂಗ್ಲೆಂಡನ್ನಾಗಲೀ, ಅಮೆರಿಕವನ್ನಾಗಲೀ ಸ್ವತಂತ್ರ ರಾಷ್ಟ್ರಗಳೆಂದು ತಿಳಿದಿಲ್ಲ. ಅವು ತಮ್ಮ ಅರ್ಥದಲ್ಲಿ ಮಾತ್ರ ಸ್ವತಂತ್ರವಾಗಿವೆ; ಅಂದರೆ, ಅವು ಜಗತ್ತಿನ ವರ್ಣೀಯರನ್ನು ತಮ್ಮ ದಾಸ್ಯದಲ್ಲಿಟ್ಟುಕೊಳ್ಳುವ ಸ್ವಾತಂತ್ರ್ಯವನ್ನು ಮಾತ್ರ ಪಡೆದಿವೆ. ಅಮೆರಿಕ, ಇಂಗ್ಲೆಂಡ್ ದೇಶಗಳು ಈ ಜನಾಂಗಗಳ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿವೆಯೆ? ನಾನು ಹೇಳುತ್ತಿರುವ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಎಂದಿಗೂ ನೀವು ಮಿತಿಗೊಳಿಸಬೇಡಿ. ಇಂಗ್ಲಿಷ್ ಹಾಗೂ ಅಮೆರಿಕನ್ ಶಿಕ್ಷಕ, ಶಿಕ್ಷಕಿಯರು ಅಥವಾ ಆ ದೇಶಗಳ ಚರಿತ್ರೆ, ಅಲ್ಲಿನ ಅದ್ಭುತ ಕಾವ್ಯ ಇವೆಲ್ಲವೂ ಸ್ವಾತಂತ್ರ್ಯದ ವ್ಯಾಖ್ಯಾನವನ್ನು ವಿಸ್ತರಿಸಬೇಡಿರಿ ಎಂದೇನೂ ಹೇಳಿಲ್ಲ. ತಂತಮ್ಮ ದೇಶಗಳ ಶಿಕ್ಷಕ, ಶಿಕ್ಷಕಿಯರು ಹಾಗೂ ಕವಿಗಳು ಹೇಳಿಕೊಟ್ಟ ಸ್ವಾತಂತ್ರ್ಯದ ಕಲ್ಪನೆಗೆ, ತಮ್ಮ ದೇಶದ ಚರಿತ್ರೆ, ಕಾವ್ಯಗಳಿಗೆ ಆ ದೇಶದವರೇ ಅಪರಿಚಿತರಾಗಿ ಉಳಿದಿದ್ದಾರೆ. ನಿಜವಾದ ಸ್ವಾತಂತ್ರ್ಯ ಏನೆಂದು ತಿಳಿಯಲು ಅವರು ಇಂಡಿಯಾಕ್ಕೆ ಬರಬೇಕು. ನಮ್ಮ ಸ್ವಾತಂತ್ರ್ಯ ಚಳುವಳಿಯಿಂದ ಪಾಶ್ಚಾತ್ಯ ದೇಶಗಳು ಕಲಿಯಬೇಕಾದದ್ದಿದೆ.

...ನಾನು ಬ್ರಿಟಿಷರ ಅಗ್ಗೆ ಅಪಾರ ಗೌರವ ಇರಿಸಿಕೊಂಡಿದ್ದೆ. ಆದರೆ ಬ್ರಿಟಿಷ್ ರಾಯಭಾರ ಕೊಳೆತು ನಾರುತ್ತಿರುವುದರ ವಾಸನೆ ನನ್ನ ಮೂಗು ಮುತ್ತಿದೆ...ಇಂಡಿಯಾ [ಬ್ರಿಟಿಷ್ ರಾಯಭಾರಿಗಳ] ಎಲ್ಲ ವ್ಯವಸ್ಥಿತ ಪ್ರಚಾರದ ಎದುರು ತನ್ನ ದನಿ ಎತ್ತಲಿದೆ. ನಾನು ಕೂಡ ಅದರ ವಿರುದ್ಧ ದನಿಯೆತ್ತುವೆ. ಇಡೀ ಜಗತ್ತು ನನ್ನ ಕೈ ಬಿಟ್ಟರೂ ಪರವಾಗಿಲ್ಲ, ನಾನು ಹೇಳುತ್ತೇನೆ: 'ನಿಮ್ಮದು ತಪ್ಪು. ಸ್ವಾತಂತ್ರ್ಯವನ್ನು ಕೊಡಲು ಒಪ್ಪದಿರುವ ಕೈಗಳಿಂದ, ಅಹಿಂಸಾ ಮಾರ್ಗದ ಮೂಲಕ, ಇಂಡಿಯಾ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ.'

ವಿದೇಶಿ ಪತ್ರಿಕಾ ಮಾಧ್ಯಮದವರೂ ಇಂದು ಇಲ್ಲಿ ಹಾಜರಿದ್ದಾರೆ. ಇಂಡಿಯಾದ ಅಗತ್ಯ ತನಗಿದೆ ಎಂದಿದ್ದ ಸಂಯುಕ್ತ ರಾಷ್ಟ್ರಗಳ ಸಂಸ್ಥೆಗೆ ಈ ಮಿತ್ರರ ಮೂಲಕ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ– 'ನಿಮಗೀಗ ಭಾರತವನ್ನು ಸ್ವತಂತ್ರ ಎಂದು ಘೋಷಿಸುವ ಅವಕಾಶ ಸಿಕ್ಕಿದೆ; ಆ ಮೂಲಕ ನಿಮ್ಮ ಪ್ರಾಮಾಣಿಕತೆಯನ್ನು ಸಿದ್ಧ ಮಾಡಿ ತೋರಿಸುವ ಅವಕಾಶ ನಿಮಗೆ ಸಿಕ್ಕಿದೆ. ಸಂಯಕ್ತ ರಾಷ್ಟ್ರ ಸಂಸ್ಥೆ ಈ ಅವಕಾಶವನ್ನು ಕಳೆದುಕೊಂಡರೆ, ತನ್ನ ಜೀವಮಾನದ ಅವಕಾಶವನ್ನು ಅದು ಕಳೆದುಕೊಳ್ಳಲಿದೆ. ಆಗ ಸಂಯುಕ್ತ ರಾಷ್ಟ್ರ ಸಂಸ್ಥೆ ಇಂಡಿಯಾದ ಬಗ್ಗೆ ತನಗಿದ್ದ ಬಾಧ್ಯತೆಯನ್ನು ಸಕಾಲಕ್ಕೆ ನಿರ್ವಹಿಸಲಿಲ್ಲ ಹಾಗೂ ಅದು ಈ ಯುದ್ಧದಲ್ಲಿ ಸೋತಿತು ಎಂಬುದು ಇತಿಹಾಸದಲ್ಲಿ ದಾಖಲಾಗಲಿದೆ.

...ಸ್ವಾತಂತ್ರ್ಯ ಬರುವುದಾದರೆ ಅದು ಇವತ್ತೇ ಬರಬೇಕು...[ಇಲ್ಲದಿದ್ದರೆ] ನಾನು ಎಲ್ಲಿಗೆ ಹೋಗಲಿ, ಹಾಗೂ ನಲವತ್ತು ಕೋಟಿ ಭಾರತೀಯರನ್ನು ನಾನು ಎಲ್ಲಿಗೆ ಕರೆದುಕೊಂಡು ಹೋಗಲಿ? ಈ ಬೃಹತ್ ಜನಸ್ತೋಮವು ಸ್ವಾತಂತ್ರ್ಯವನ್ನು ಸ್ಪರ್ಶಿಸಿ ಅದನ್ನು ಅನುಭವಿಸದಿದ್ದರೆ, ಅದು ಹೇಗೆ ತಾನೆ ಈ ಜಗತ್ತಿನ ವಿಮೋಚನೆಯ ಕಾರ್ಯದಲ್ಲಿ ಪ್ರಜ್ವಲಿಸಿ ಬೆಳಗಬಲ್ಲದು? ಈ ಜನರಲ್ಲಿ ಇಂದು ಜೀವದ ಸ್ಪರ್ಶವೇ ಉಳಿದಿಲ್ಲ. ಅವರ ಕಣ್ಣುಗಳಲ್ಲಿ ಹೊಳಮು ಬರಬೇಕೆಂದಾದರೆ ಸ್ವಾತಂತ್ರ್ಯವು ನಾಳೆಯಲ್ಲ, ಇಂದೇ ಬರಬೇಕು. ಆದ್ದರಿಂದಲೇ ನಾನು ಕಾಂಗ್ರೆಸ್ಸನ್ನು ಈ ಕಾರ್ಯಕ್ಕೆ ಮುಡಿಪಾಗಿಟ್ಟಿರುವೆ ಹಾಗೂ ಕಾಂಗ್ರೆಸ್ 'ಮಾಡು ಇಲ್ಲವೇ ಮಡಿ' ಎಂಬ ಪ್ರತಿಜ್ಞೆಯನ್ನು ಸ್ವೀಕರಿಸುತ್ತಿದೆ.

(೭ ಆಗಸ್ಟ್ ೧೯೪೨ ಹಾಗೂ ೮ ಆಗಸ್ಟ್ ೧೯೪೨ರಂದು ಬಾಂಬೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಮಾಡಿದ ಭಾಷಣಗಳಿಂದ ಆಯ್ದ ಭಾಗಗಳು. 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೮೩, ಪು. ೧೯೮–೨೦೬)

ಕನ್ನಡಕ್ಕೆ: ನಟರಾಜ್ ಹುಳಿಯಾರ್

***

ಕರ್ನಾಟಕಕ್ಕೆ 'ಕ್ವಿಟ್ ಇಂಡಿಯಾ' ಚಳುವಳಿಯ ಕರೆ

ಆಗಸ್ಟ್ ೮, ೧೯೪೨

ಕರ್ನಾಟಕದ ಜನರು ಈ ಯಜ್ಞದಲ್ಲಿ ಭಾಗಿಯಾಗುತ್ತಾರೆಂಬ ನಂಬಿಕೆ ನನಗಿದೆ.

ಎಂ.ಕೆ. ಗಾಂಧಿ

(ಹಿಂದಿ ಭಾಷೆಯಲ್ಲಿ ಕಳಿಸಿದ ಸಂದೇಶ)

೯೫

ದಕ್ಷಿಣ ಆಫ್ರಿಕಾದ ಭಾರತೀಯರ ಹೋರಾಟ: ಟಾಲ್‌ಸ್ಟಾಯ್‌ಗೆ ಗಾಂಧೀಜಿ ಪತ್ರ

ವೆಸ್ಟ್‌ಮಿನಿಸ್ಟರ್ ಪ್ಯಾಲೇಸ್ ಹೊಟೇಲ್
೪, ವಿಕ್ಟೋರಿಯಾ ಬೀದಿ, ಲಂಡನ್
೧೦, ನವೆಂಬರ್ ೧೯೦೯

ಸನ್ಮಾನ್ಯರೆ,

ನಾನು ಬರೆದ ಪತ್ರಕ್ಕೆ ನಿಮ್ಮ ಉತ್ತರಕ್ಕಾಗಿ ಕೃತಜ್ಞನಾಗಿದ್ದೇನೆ.

ನಿಮ್ಮ ಆರೋಗ್ಯ ಮತ್ತೆ ಸುಧಾರಿಸಿರುವುದು ತಿಳಿದು ಸಂತೋಷವಾಯಿತು. ನಿಮ್ಮ ಬೋಧನೆಯ ಅತ್ಯಂತ ಮಹತ್ವದ ವಿಷಯಗಳನ್ನು ನಿಮ್ಮೊಂದಿಗೆ ಮತ್ತೆ ಚರ್ಚಿಸಲು ಅನುಕೂಲವಾದಂತಾಯಿತು.

ನನ್ನ ಅಭಿಪ್ರಾಯದಲ್ಲಿ ಟ್ರಾನ್ಸ್‌ವಾಲ್‌ನಲ್ಲಿನ ಭಾರತೀಯರ ಹೋರಾಟವು ಆಧುನಿಕ ಕಾಲದ ಮಹತ್ವದ ಕ್ರಿಯೆಯಾಗಿದೆ. ಈ ಹೋರಾಟದ ಗುರಿ ಮತ್ತು ಅದಕ್ಕಾಗಿ ಆಯ್ದುಕೊಂಡ ದಾರಿ–ಎರಡೂ ಆದರ್ಶಪ್ರಾಯವಾಗಿವೆ. ಹೋರಾಟದಲ್ಲಿ ಪಾಲ್ಗೊಂಡವರು ಕೊನೆಯಲ್ಲಿ ಯಾವುದೇ ವೈಯಕ್ತಿಕ ಪ್ರಯೋಜನವನ್ನು ಪಡೆಯದಂಥ ಮತ್ತು ಭಾಗವಹಿಸಿದವರಲ್ಲಿ ಶೇಕಡ ಐವತ್ತರಷ್ಟು ಜನಸಾಮಾನ್ಯರು ಕೇವಲ ತತ್ವಕ್ಕಾಗಿ ಕಷ್ಟನಷ್ಟವನ್ನು, ವಿಚಾರಣೆಯನ್ನು ಎದುರಿಸಬೇಕಾಗಿ ಬಂದಂಥ ಬೇರಾವುದೇ ಹೋರಾಟದ ಕುರಿತು ನನಗರಿವಿಲ್ಲ.

ಬ್ರಿಟಿಶರ ಈ ವಸಾಹತುವಿನಲ್ಲಿ ಹದಿಮೂರು ಸಾವಿರ ಭಾರತೀಯರು ವಾಸವಿದ್ದಾರೆ. ಹಲವು ವರ್ಷಗಳಿಂದ ಹಲವಾರು ಕಾನೂನು ಕಂಟಕಗಳನ್ನು ಎದುರಿಸುತ್ತ ಬದುಕು ದೂಡುತ್ತಿದ್ದಾರೆ. ಈ ವಸಾಹತುವಿನಲ್ಲಿ ವರ್ಣ ತಾರತಮ್ಯವಲ್ಲದೆ

ಒಟ್ಟಾರೆ ಏಶಿಯನ್ನರ ಬಗ್ಗೆ ಪೂರ್ವಗ್ರಹ ಪೀಡನೆಯಿದೆ. ಇದು ಬಹುಪಾಲು ವ್ಯಾಪಾರಿ ಮತ್ಸರ. ಮೂರು ವರ್ಷಗಳ ಹಿಂದೆ ಕಾನೂನೊಂದನ್ನು ಜಾರಿಗೊಳಿಸಿ ಈ ಸಮುದಾಯವನ್ನು ಅಸಹಾಯಕರನ್ನಾಗಿಸಲಾಯಿತು ಎಂದು ನಮ್ಮ ಕೆಲವರ ಭಾವನೆಯಾಗಿದೆ. ಈ ಕಾನೂನನ್ನು ಒಪ್ಪಿಕೊಳ್ಳುವುದೆಂದರೆ ನೈಜ ಧಾರ್ಮಿಕತೆಗೆ ಧಕ್ಕೆಯಾದಂತೆಯೇ ಎಂದು ನನಗನ್ನಿಸುತ್ತದೆ. ಕೆಡುಕಿನ ಸಿದ್ಧಾಂತವನ್ನು ಪ್ರತಿರೋಧಿಸ ಬಾರದು ಎಂಬ ನಂಬಿಕೆಯನ್ನು ನಾನು, ನನ್ನ ಕೆಲವು ಗೆಳೆಯರು ಈಗಲೂ ಹೊಂದಿದ್ದೇವೆ. ನಿಮ್ಮ ಬರಹಗಳ ಅಧ್ಯಯನ ನಡೆಸುವ ಸದಾವಕಾಶ ನನಗೆ ದೊರಕಿದ್ದು, ಅವು ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿವೆ.

ಈ ಶಾಸನವನ್ನು ಒಪ್ಪಿಕೊಳ್ಳುವುದಕ್ಕಿಂತ ಕಾನೂನು ಉಲ್ಲಂಘಿಸಿ ಸೆರೆವಾಸವನ್ನೋ ಇಲ್ಲವೆ ದಂಡ ತೆರುವುದನ್ನೋ ಆಯ್ದುಕೊಳ್ಳುವುದು ಉತ್ತಮವೆಂಬ ಸಲಹೆಗೆ ಬ್ರಿಟಿಶ್ ಭಾರತೀಯರು ತಲೆ ಬಾಗಿದರು. ಆದಾಗ್ಯೂ, ಒಟ್ಟಾರೆ ಪರಿಣಾಮವೆಂದರೆ, ಅರ್ಧದಷ್ಟು ಬ್ರಿಟಿಶ್ ಭಾರತೀಯರು ಹೋರಾಟದ ಬಿಸಿ ಹಾಗೂ ಸೆರೆವಾಸದ ಯಾತನೆಗಳನ್ನು ಸಹಿಸಲಾರದೆ ಹೋದರು. ಬದಲಿಗೆ, ತಮ್ಮನ್ನು ಅವಮಾನಿಸುವ ಕಾನೂನು ಜಾರಿಯಲ್ಲಿರುವ ಟ್ರಾನ್ಸ್‌ವಾಲ್‌ನಿಂದಲೇ ದೂರ ಸರಿಯಲು ಅವರು ಯೋಚಿಸಿದರು. ಸುಮಾರು ಎರಡು ಸಾವಿರದಷ್ಟು ಜನ ತಮ್ಮ ಮನಸ್ಸಿನ ಮಾತಿಗೆ ಬೆಲೆ ಕೊಟ್ಟು ಸೆರೆಮನೆಗೆ ಹೋದರು. ಕೆಲವರಂತೂ ಐದು ಸಲ ಸೆರೆಮನೆಯ ಸರಳುಗಳ ಹಿಂದೆ ಹೋದುದುಂಟು. ಈ ಸೆರೆವಾಸವು ನಾಲ್ಕು ದಿನಗಳಿಂದ ಆರು ತಿಂಗಳ ವರೆಗಿನದು. ಬಹಳಷ್ಟು ಸಲ ಕಠಿಣ ದೈಹಿಕ ಪರಿಶ್ರಮವನ್ನು ಒಳಗೊಂಡಿರುವಂಥದ್ದು. ಈ ಕಾರಣವಾಗಿ ಅನೇಕರು ಹಣಕಾಸಿನ ಮುಗ್ಗಟ್ಟಿಗೆ ಒಳಗಾದರು. ಸದ್ಯಕ್ಕೆ ಟ್ರಾನ್ಸ್‌ವಾಲ್ ಕಾರಾಗೃಹದಲ್ಲಿ ನೂರರಷ್ಟು ಸಹನಶೀಲ ಹೋರಾಟಗಾರರಿದ್ದಾರೆ.

ಇವರಲ್ಲಿ ಕೆಲವರು ಅತಿ ಬಡವರಾಗಿದ್ದು ಬದುಕಿಗಾಗಿ ದಿನಗೂಲಿಯ ಗಳಿಕೆಯನ್ನು ನೆಚ್ಚಿದವರು. ಇಂಥವರ ಹೆಂಡತಿ, ಮಕ್ಕಳು ಹೋರಾಟದ ಕುರಿತು ಸಹಾನುಭೂತಿ ಇರುವವರು ನೀಡುವ ಉದಾರ ದೇಣಿಗೆ ಮತ್ತು ಸಾರ್ವಜನಿಕ ಕಾಣಿಕೆಯ ಮೇಲೆ ಅವಲಂಬಿತರಾಗಿದ್ದಾರೆ. ಇದು ಬ್ರಿಟಿಶ್ ಭಾರತೀಯರ ಮೇಲೆ ತೀವ್ರ ಒತ್ತಡವನ್ನು ಹೇರಿದೆ. ನನಗನ್ನಿಸುವುದು ಅವರು ಸಂದರ್ಭಕ್ಕೆ ತಕ್ಕಂತೆ ಸ್ಪಂದಿಸಲೇಬೇಕು. ಹೋರಾಟ ಇನ್ನೂ ನಡೆದಿದ್ದು, ಕೊನೆ ಯಾವಾಗಲೋ ಯಾರೂ ಅರಿಯರು. ಹಾಗಿದ್ದರೂ, ದುಷ್ಟಶಕ್ತಿಯ ಎದುರು ಸಹನಶೀಲ ಪ್ರತಿರೋಧವು ಗೆಲುವು ಸಾಧಿಸುತ್ತದೆ ಎಂದು ನಮ್ಮಲ್ಲಿ ಕೆಲವರಾದರೂ ಕಂಡುಕೊಂಡಿದ್ದೇವೆ. ನಮ್ಮಲ್ಲಿನ ದೌರ್ಬಲ್ಯದಿಂದಾಗಿ ಹೋರಾಟವು ನಿಧಾನಗತಿಗೆ ತಿರುಗಿತು. ನಿತ್ರಾಣಗೊಂಡಿರುವ ನಮ್ಮಲ್ಲಿ ಸರ್ಕಾರವನ್ನು

ಎದುರಿಸುವ ಸಾಮರ್ಥ್ಯ ಉಳಿಯಲಾರದು ಎಂದು ಸರ್ಕಾರ ಭಾವಿಸಿದಂತಿದೆ. ನಮ್ಮ ನಿಲುವನ್ನು ಸಾಮ್ರಾಜ್ಯಶಾಹಿ ಅಧಿಕಾರಿಗೆ ಮನವರಿಕೆ ಮಾಡಿಕೊಟ್ಟು ಪರಿಹಾರ ಹುಡುಕಲು ನನ್ನ ಗೆಳೆಯರೊಂದಿಗೆ ಇಲ್ಲಿಗೆ ಬಂದಿದ್ದೇನೆ.

ಸರ್ಕಾರಕ್ಕೆ ಯಾವ ಮನವಿಯನ್ನೂ ಸಲ್ಲಿಸಬೇಕಿಲ್ಲವೆಂಬುದು ಸಾತ್ವಿಕ ಹೋರಾಟಗಾರರ ನಿಲುವು. ಆದರೆ, ಅಹವಾಲು ಬರುತ್ತಿರುವುದು ಸಮುದಾಯದ ದುರ್ಬಲ ಸದಸ್ಯರಿಂದ. ಇದು ಅವರ ಸಾಮರ್ಥ್ಯಕ್ಕಿಂತ ಬಲಹೀನತೆಯನ್ನೇ ಎತ್ತಿ ತೋರಿಸುತ್ತದೆ. ನೈತಿಕತೆ ಮತ್ತು ಸಾತ್ವಿಕ ಪ್ರತಿರೋಧದ ಸಾಮರ್ಥ್ಯದ ಕುರಿತು ಒಂದು ಸಾಮಾನ್ಯ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದರೆ ಈ ಹೋರಾಟವು ಜನಪ್ರಿಯವಾಗಿ, ಸಾಮಾನ್ಯರು ಆ ಕುರಿತು ಯೋಚಿಸುವಂತಾದೀತು ಎಂಬುದು ನನ್ನ ಗ್ರಹಿಕೆ. ನೈತಿಕತೆಯ ವಿಷಯದ ಕುರಿತು ನಿಮ್ಮ ಅಭಿಪ್ರಾಯವೇನು ತಿಳಿಸಿ ಎಂದು ನಿಮ್ಮನ್ನು ಆಗ್ರಹಿಸಬಹುದೆ? ಈ ಕುರಿತು ಅಭಿಪ್ರಾಯಗಳನ್ನು ಆಹ್ವಾನಿಸುವುದು ತಪ್ಪಲ್ಲವೆಂದು ನಿಮಗೆ ಮನವರಿಕೆಯಾದರೆ, ಆ ವಿಷಯದ ಕುರಿತು ಬರೆಯುವವರ ಹೆಸರುಗಳನ್ನು ತಿಳಿಸಿದರೆ ನಾನು ಅವರನ್ನು ಸಂಪರ್ಕಿಸಬಹುದು. ನಮಗಾಗಿ ನಿಮ್ಮ ಸಮಯವನ್ನು ಮೀಸಲಿಡುವ ಇನ್ನೊಂದು ಮನವಿಯನ್ನು ಮಾಡಿಕೊಳ್ಳುತ್ತಿರುವೆ. ಭಾರತದಲ್ಲಿನ ಪ್ರಸ್ತುತ ಕ್ಷೋಭೆಯ ಕುರಿತು ನೀವು ಬರೆದ 'ಲೆಟರ್ ಟು ಎ ಹಿಂದೂ' (ಹಿಂದೂವಿಗೆ ಪತ್ರ) ವನ್ನು ಗೆಳೆಯರೊಬ್ಬರು ನನಗೆ ನೀಡಿದರು. ಮೇಲ್ನೋಟಕ್ಕೆ ನಿಮ್ಮ ನಿಲುವನ್ನು ಈ ಪತ್ರವು ವ್ಯಕ್ತಪಡಿಸುತ್ತದೆ. ನನ್ನ ಗೆಳೆಯರ ಅಭಿಮತವೆಂದರೆ ಈ ಪತ್ರವನ್ನು ತಮ್ಮದೇ ಖರ್ಚಿನಲ್ಲಿ ಇಪ್ಪತ್ತು ಸಾವಿರ ಪ್ರತಿಗಳನ್ನು ಮುದ್ರಿಸಿ ವಿತರಿಸುವುದು ಮತ್ತು ಭಾಷಾಂತರ ಮಾಡಿಸುವುದು.

ಆದಾಗ್ಯೂ, ನಮಗಿನ್ನೂ ಮೂಲಪ್ರತಿ ದೊರಕಿಲ್ಲದಿರುವುದರಿಂದ, ಅದು ನಿಮ್ಮದೇ ಪತ್ರವೆಂದು ಖಚಿತವಾಗುವವರೆಗೆ ಮುದ್ರಿಸುವುದು ಸಾಧುವಾಗಲಾರದೆಂದು ತಿಳಿದಿದ್ದೇವೆ. ಇದರೊಂದಿಗೆ ಪ್ರತಿಯೊಂದರ ನಕಲನ್ನು ಕಳಿಸುತ್ತಿದ್ದು, ತಾವು ದಯವಿಟ್ಟು ಇದು ತಮ್ಮದೇ ಪತ್ರವೆಂದೂ, ನಿಖರವಾಗಿದೆಯೆಂದೂ ದೃಢಪಡಿಸಿ ಪ್ರಕಟಣೆಗೆ ಅನುಮತಿಯನ್ನು ನೀಡಿ. ಪತ್ರದಲ್ಲಿ ಇನ್ನೇನಾದರೂ ಸೇರಿಸಬೇಕೆಂದಿದ್ದರೆ ಸೇರಿಸಿ. ಇಲ್ಲಿಯೇ ನನ್ನದೊಂದು ಸಲಹೆಯನ್ನು ನೀಡುತ್ತಿರುವೆ. ಕೊನೆಯ ಪ್ಯಾರಾದಲ್ಲಿ ಪುನರವತಾರದ ನಂಬಿಕೆಯಿಂದ ಓದುಗನನ್ನು ವಿಮುಖನನ್ನಾಗಿಸುತ್ತಿದ್ದೀರಿ. ಇದರ ಔಚಿತ್ಯ ತಿಳಿಯದಾದರೂ, ಈ ಕುರಿತು ನೀವು ಅಧ್ಯಯನ ನಡೆಸಿದ್ದೀರೋ ಇಲ್ಲವೋ ಎಂಬುದರ ಅರಿವು ನನಗಿಲ್ಲ. ಪುನರುತ್ಥಾನ ಅಥವಾ ಪುನರ್ಜನ್ಮದಲ್ಲಿ ಭಾರತೀಯರಿಗಷ್ಟೇ ಏಕೆ, ಚೀನಿಯರಿಗೂ ಅಪಾರವಾದ ನಂಬಿಕೆ. ಇದೊಂದು

ವ್ಯಕ್ತಿಗತ ವಿಶ್ವಾಸವಾಗಿದ್ದು, ಬೌದ್ಧಿಕವಾಗಿ ಸ್ವೀಕಾರಾರ್ಹವಲ್ಲವೆಂದು ಯಾರಾದರೂ ಹೇಳಬಹುದು. ಇದು ಬದುಕಿನ ಮಹಾವಿಸ್ಮಯವನ್ನು ಸೂಚಿಸುವುದಷ್ಟೇ. ಟ್ರಾನ್ಸ್‌ವಾಲ್‌ನ ಸೆರೆವಾಸಿಗಳಾದ ಸಾತ್ವಿಕ ಹೋರಾಟಗಾರರಲ್ಲಿ ಕೆಲವರಿಗಾದರೂ ಈ ಅಂಶ ಸಾಂತ್ವನ ನೀಡುವ ವಿಷಯವಾಗಿತ್ತು. ಪತ್ರದಲ್ಲಿ ನೀವು ಉಲ್ಲೇಖಿಸಿರುವ ಅನೇಕ ಸಾಲುಗಳು ಶ್ರೀಕೃಷ್ಣ ಹೇಳಿರುವುದೆಂದು ಸೂಚಿಸಿದ್ದೀರಿ. ನಿಮ್ಮ ಆಕರಗಳನ್ನು ತಿಳಿಸಿದರೆ ಉಪಕೃತ.

ಈ ಪತ್ರದಿಂದ ನಿಮ್ಮನ್ನು ದಣಿಸಿರುವೆ. ನಿಮ್ಮನ್ನು ಗೌರವಿಸುವವರು, ನಿಮ್ಮ ದಾರಿಯಲ್ಲಿ ನಡೆಯಲು ಬಯಸುವವರು ನಿಮ್ಮ ಸಮಯ ವ್ಯರ್ಥಗೊಳಿಸದೆ, ಸಾಧ್ಯವಾದಷ್ಟು ಸಾರ್ಥಕಗೊಳಿಸಲು ಯತ್ನಿಸಬೇಕೆಂದು ಬಲ್ಲೆ. ಆದಾಗ್ಯೂ, ಅಪರಿಚಿತನಾಗಿದ್ದೂ ಸತ್ಯದ ದೆಸೆಯಿಂದ ನಿಮಗೆ ತೊಂದರೆ ನೀಡಿರುವೆ. ಮತ್ತು ನಿಮ್ಮ ಬದುಕಿನಲ್ಲಿ ಕಾರ್ಯಸಾಧುವಾಗಿರುವ ಅನುಭವದ ಮೇಲೆ ನಿಮ್ಮಿಂದ ಸಮಸ್ಯೆಗಳಿಗೆ ಸಲಹೆ ಮತ್ತು ಪರಿಹಾರಗಳನ್ನು ಬಯಸುತ್ತಿರುವೆ.

ಗೌರವದಿಂದ,

ನಿಮ್ಮ ವಿಧೇಯ

ಎಂ.ಕೆ. ಗಾಂಧಿ

ಟಿಪ್ಪಣಿ

ಟಾಲ್‌ಸ್ಟಾಯ್ ಬರೆದ 'ಲೆಟರ್ ಟು ಎ ಹಿಂದೂ': ೧೯೦೮ರ ಸುಮಾರಿನ ಬ್ರಿಟಿಶರ ವಿರುದ್ಧದ ಭಾರತೀಯ ಹೋರಾಟಕ್ಕೆ ವಿಶ್ವದ ನಾನಾ ಕಡೆಗಳಿಂದ ಬೆಂಬಲದ ಅಗತ್ಯವಿದೆ ಎಂದು ಅನೇಕ ಹೋರಾಟಗಾರರು ಭಾವಿಸಿದರು. ಇಂಥ ಬೆಂಬಲ ಗಳಿಸುವ ಪ್ರಯತ್ನವಾಗಿ ಕ್ರಾಂತಿಕಾರಿ ನಾಯಕ ತಾರಕನಾಥ ದಾಸ್ ವಿಶ್ವಮಾನ್ಯ ಸಾಹಿತಿ ಟಾಲ್‌ಸ್ಟಾಯ್‌ರನ್ನು ಸಂಪರ್ಕಿಸಿದರು. ಭಾರತೀಯರು ಬ್ರಿಟಿಶರ ವಿರುದ್ಧ ನಡೆಸುತ್ತಿರುವ ಹೋರಾಟಕ್ಕೆ ನೈತಿಕ ಬೆಂಬಲ ವ್ಯಕ್ತಪಡಿಸುವಂತೆ ಕೇಳಿಕೊಂಡರು. ತಮ್ಮ ಬದುಕಿನ ಕೊನೆಯ ಇಪ್ಪತ್ತು ವರ್ಷಗಳಲ್ಲಿ ಪ್ರಭುತ್ವದ ಹಿಂಸೆ, ಜನಸಾಮಾನ್ಯರ ಬದುಕಿನಲ್ಲಿ ಧರ್ಮದ ಪಾತ್ರ, ಪ್ರತಿರೋಧಗಳಂತಹ ವಿಷಯಗಳನ್ನು ಧ್ಯಾನಿಸುತ್ತಿದ್ದ ಟಾಲ್‌ಸ್ಟಾಯ್ ನಿಷ್ಕಲ್ಮಶ ಪ್ರೇಮವಷ್ಟೇ ಮಾನವ ಸಂಕುಲವನ್ನು ಕೇಡುಕಿನಿಂದ ರಕ್ಷಿಸಬಲ್ಲುದು, ಮನುಷ್ಯನಿಗೆ ನೈತಿಕತೆಯೇ ಎಲ್ಲಕ್ಕಿಂತ ಮುಖ್ಯ ಎಂದು ಪ್ರತಿಪಾದಿಸತೊಡಗಿದ್ದರು. ದಾಸ್‌ರ ಕೋರಿಕೆಯನ್ನು ತಕ್ಷಣ ಒಪ್ಪಿಕೊಂಡ ಟಾಲ್‌ಸ್ಟಾಯ್ ದಾಸ್‌ಗೆ ಒಂದು ಸುದೀರ್ಘ ಪತ್ರವನ್ನು ಬರೆದರು. ತಾರಕನಾಥರು ಆ ಪತ್ರವನ್ನು 'ಫ್ರೀ ಹಿಂದೂಸ್ತಾನ್' ಪತ್ರಿಕೆಯಲ್ಲಿ ಡಿಸೆಂಬರ್ ೧೪, ೧೯೦೮ರಂದು ಪ್ರಕಟಿಸಿದರು.

'ಲೆಟರ್ ಟು ಎ ಹಿಂದೂ: ಸಬ್ಜೆಕ್ಷನ್ ಆಫ್ ಇಂಡಿಯಾ–ಇಟ್ಸ್ ಕಾಸ್ ಅಂಡ್ ಕ್ಯೂರ್' ಎಂಬ ಶೀರ್ಷಿಕೆಯಲ್ಲಿ ಪತ್ರವನ್ನು ಪ್ರಕಟಿಸಲಾಯಿತು. ಮನುಷ್ಯನ ನೈತಿಕತೆ, ಅವನ ಹೃದಯದಲ್ಲಿಯೇ ಇರುವ ದೈವಸಾಮ್ರಾಜ್ಯ, ಪ್ರಭುತ್ವದ ದಬ್ಬಾಳಿಕೆ, ಪುನರ್ಜನ್ಮ ಮತ್ತು ಅವತಾರ, ಪ್ರೇಮದಿಂದಲಷ್ಟೇ ಎಲ್ಲವನ್ನೂ ಗೆಲ್ಲಲು ಸಾಧ್ಯವಿರುವುದು– ಹೀಗೆ ಹಲವಾರು ಸಂಕೀರ್ಣ ವಿಚಾರಗಳನ್ನು ಪತ್ರವು ಪ್ರಸ್ತಾಪಿಸುತ್ತದೆ. ಇದೇ ಕಾಲಾವಧಿಯಲ್ಲಿ ಪ್ರೇಮ, ಸತ್ಯ ಹಾಗೂ ಅಹಿಂಸೆಗಳನ್ನೇ ತಮ್ಮ ರಾಜಕೀಯ ನಂಬಿಕೆಯನ್ನಾಗಿಸಿಕೊಂಡಿದ್ದ ಮೋಹನದಾಸ ಕರಮಚಂದ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಶ್ ದಬ್ಬಾಳಿಕೆಯ ವಿರುದ್ಧ ಅಲ್ಲಿನ ಭಾರತೀಯರನ್ನು ಸತ್ಯಾಗ್ರಹದ ಮೂಲಕ ಸಂಘಟಿಸುತ್ತಿದ್ದರು. ಟಾಲ್‌ಸ್ಟಾಯ್‌ರನ್ನು ತಮ್ಮ ಮಾನಸಿಕ ಗುರುವಾಗಿ ಸ್ವೀಕರಿಸಿದ್ದ ಅವರಿಗೆ ಈ ಪತ್ರ ಹೊಸ ಸಾಧ್ಯತೆಗಳನ್ನು ತೆರೆದಿಟ್ಟು, ಹೋರಾಟಕ್ಕೆ ಹೊಸ ಮಾರ್ಗಗಳನ್ನು ಸೂಚಿಸುವಷ್ಟು ಪ್ರಭಾವಶಾಲಿಯಾಗಿ ಕಂಡಿತು. ತಮ್ಮ ಬದುಕಿನ ಕೊನೆಗಾಲದಲ್ಲಿದ್ದ, ನೈತಿಕ ಮೇರು ಎಂಬಂತೆ ವಿಶ್ವಮಾನ್ಯವಾಗಿದ್ದ, ಟಾಲ್‌ಸ್ಟಾಯ್‌ರ ಪತ್ರ ಭಾರತದಲ್ಲಷ್ಟೇ ಅಲ್ಲದೆ, ಯುರೋಪಿನಾದ್ಯಂತ ಚರ್ಚಾ ವಿಷಯವಾಯಿತು.

ಕನ್ನಡಕ್ಕೆ: **ಕೇಶವ ಮಳಗಿ**

೯೬

ನನ್ನ ಗ್ರಾಮದ ಕಲ್ಪನೆ: ಜವಾಹರಲಾಲ್ ನೆಹರೂಗೆ ಪತ್ರ

೫ ಅಕ್ಟೋಬರ್ ೧೯೪೫

ನನ್ನ ಪ್ರೀತಿಯ ಜವಾಹರಲಾಲ್,

ನಿನಗೆ ಪತ್ರವನ್ನು ಬರೆಯಬೇಕೆಂಬ ಬಯಕೆಯಿದ್ದರೂ ಇಂದು ಬರೆಯಲು ಸಾಧ್ಯವಾಗುತ್ತಿದೆ. ಕಾಗದವನ್ನು ಹಿಂದೂಸ್ತಾನಿಯಲ್ಲಿ ಬರೆಯಬೇಕೋ ಇಂಗ್ಲಿಶ್‌ನಲ್ಲಿಯೋ ಎಂಬ ವಿಚಾರ ಮನಸ್ಸಿನಲ್ಲಿ ಓಡುತ್ತಿತ್ತು. ಪತ್ರದ ಬಹುಪಾಲು ಹಿಂದೂಸ್ತಾನಿಯಲ್ಲಿಯೇ ಬರೆಯಲು ನಿರ್ಧರಿಸಿದೆ.

ಮೊದಲಿಗೆ ನಮ್ಮ ನಡುವಿನ ಭಿನ್ನಾಭಿಪ್ರಾಯಗಳ ಕುರಿತು ಬರೆಯುತ್ತೇನೆ. ಭಿನ್ನಮತವು ಮೂಲಭೂತವಾಗಿದ್ದರೆ ಅದನ್ನು ಸಾರ್ವಜನಿಕರು ಅರಿಯಬೇಕು. ಭಿನ್ನಮತವನ್ನು ಕತ್ತಲೆಯಲ್ಲಿಟ್ಟರೆ ನಮ್ಮ ಸ್ವರಾಜ್ಯ ಸಾಧನೆಗೆ ಅಡ್ಡಿಯುಂಟಾಗಬಲ್ಲುದು. ನಾನೀಗಲೂ 'ಹಿಂದ್‌ಸ್ವರಾಜ್' ಪುಸ್ತಿಕೆಯಲ್ಲಿ ಪ್ರತಿಪಾದಿಸಿದ ಸರ್ಕಾರದ ಪರಿಕಲ್ಪನೆಗೆ ಬದ್ಧನಾಗಿದ್ದೇನೆ. ಅವು ಕೇವಲ ಶಬ್ದಗಳಲ್ಲ. ಎಲ್ಲವೂ ೧೯೦೮ರಿಂದ ನನ್ನ ಅನುಭವಕ್ಕೆ ಬಂದವು. ನಾನು ನಂಬಿದ ಸತ್ಯವನ್ನು ಪುಸ್ತಕವು ದೃಢಪಡಿಸಿತು. ಅದರಲ್ಲಿ ನಾನು ಏಕಾಂಗಿಯಾದರೂ ಧೃತಿಗೆಡುವುದಿಲ್ಲ. ಏಕೆಂದರೆ, ಸತ್ಯವನ್ನು ಕಾಣಲು ಸಾಧ್ಯವಾಗುವ ಸಾಕ್ಷಿಯನ್ನಷ್ಟೇ ಅಲ್ಲಿ ದಿಟ್ಟಿಸುತ್ತಿರುತ್ತೇನೆ. ಇದನ್ನು ಬರೆಯುತ್ತಿರುವಾಗ ನನ್ನೆದುರು ಹಿಂದ್‌ಸ್ವರಾಜ್ ಪ್ರತಿಯಿಲ್ಲ. ನನ್ನದೇ ಮಾತುಗಳಲ್ಲಿ ಹೊಸ ಚಿತ್ರವನ್ನು ಬಿಡಿಸುವುದೇ ಒಳ್ಳೆಯದು ಅನ್ನಿಸುತ್ತಿದೆ. ಈಗ ಬಿಡಿಸುವ ಚಿತ್ರವು ಹಿಂದ್‌ಸ್ವರಾಜ್‌ನಲ್ಲಿ ಇರುವುದೇ ಅಥವಾ ಇನ್ನೊಂದೇ ಎಂಬುದು ಇಬ್ಬರಿಗೂ ಅನಗತ್ಯ. ನಾನು ಆಗ ಹೇಳಿದ್ದರ

ಋಜುತ್ವವನ್ನು ನಿರೂಪಿಸುವ ಆವಶ್ಯಕತೆಯಿಲ್ಲ. ಇಂದು ನನ್ನ ಅಭಿಪ್ರಾಯಗಳೇನಾಗಿವೆ ಎಂಬುದಷ್ಟೇ ನನಗೆ ಮುಖ್ಯ. ಒಂದೊಮ್ಮೆ ಭಾರತ ಮತ್ತು ಆ ಮೂಲಕ ವಿಶ್ವ ನಿಜವಾದ ಬಿಡುಗಡೆಯನ್ನು ಪಡೆದರೆ ಆರಂಭದಲ್ಲಿಯೋ ಅಥವಾ ನಿಧಾನವಾಗಿಯೋ ಜನ ಗ್ರಾಮಗಳಲ್ಲಿ ವಾಸಿಸುತ್ತಾರೆ; ಪಟ್ಟಣಗಳಲ್ಲಿ ಅಲ್ಲ. ಗುಡಿಸಲುಗಳಲ್ಲಿ ವಾಸಿಸುತ್ತಾರೆ; ಅರಮನೆಗಳಲ್ಲಿ ಅಲ್ಲ ಎಂಬ ವಾಸ್ತವವನ್ನು ನಾವು ಗ್ರಹಿಸಬೇಕು. ಅಸತ್ಯ ಮತ್ತು ಹಿಂಸೆಗಳನ್ನು ತ್ಯಜಿಸುವುದಲ್ಲದೆ ಬೇರೆ ಮಾರ್ಗ ಅವರಿಗಿರುವುದಿಲ್ಲ.

ಮಾನವಕುಲಕ್ಕೆ ಸತ್ಯ ಮತ್ತು ಅಹಿಂಸೆಗಳನ್ನು ಬಿಟ್ಟರೆ ನಾಶವೇ ಗತಿ ಎಂದು ನಾನು ಹೇಳುತ್ತೇನೆ. ಈ ಸತ್ಯ ಮತ್ತು ಅಹಿಂಸೆಗಳನ್ನು ಗ್ರಾಮದ ಸರಳ ಜೀವನದಲ್ಲಿ ಸಾಧಿಸಲು ಸಾಧ್ಯ ಮತ್ತು ಈ ಸರಳತೆಯನ್ನು ಚರಕ ಮತ್ತು ಅದು ಸೃಜಿಸುವ ಇತರ ಅರ್ಥಗಳ ಮೂಲಕ ಪಡೆಯಬಹುದಾಗಿದೆ. ವಿಶ್ವವು ಇಂದು ತಪ್ಪು ಹೆಜ್ಜೆಯಲ್ಲಿದ್ದರೆ ಅದಕ್ಕಾಗಿ ನಾನು ಹೆದರಲಾರೆ. ಪತಂಗವು ಬೆಂಕಿಯ ಸಂಗ ಬಯಸಿ ರುದ್ರ ನರ್ತನ ಮಾಡುತ್ತ ಬೆಂಕಿಯಲ್ಲಿ ಬಿದ್ದು ಸಾಯುತ್ತದೆ ಎಂಬ ಗಾದೆ ಮಾತಿನಂತೆ ಭಾರತ ಕೂಡ ಅದೇ ದಿಕ್ಕಿನಲ್ಲಿಯೇ ಹೋಗಬಹುದು. ಆದರೆ ನನ್ನ ಕೊನೆಯ ಉಸಿರಿರುವವರೆಗೂ ಭಾರತವನ್ನು ಮತ್ತು ಆ ಮೂಲಕ ಇಡೀ ವಿಶ್ವವನ್ನು ಈ ವಿನಾಶದಿಂದ ರಕ್ಷಿಸಲು ಯತ್ನಿಸುವುದು ನನ್ನ ಕಟಿಬದ್ಧ ಕರ್ತವ್ಯವಾಗಿದೆ. ನನ್ನ ಮಾತಿನ ಸಾರಾಂಶವೆಂದರೆ, ಮನುಷ್ಯ ತನ್ನ ನಿಜವಾದ ಅಗತ್ಯಗಳಲ್ಲಿ ತೃಪ್ತಿ ಹೊಂದಿ, ಸ್ವಾವಲಂಬಿಯಾಗಿರಬೇಕು. ಆತನಿಗೆ ತನ್ನ ಮೇಲೆ ನಿಯಂತ್ರಣವಿಲ್ಲದಿದ್ದರೆ ತನ್ನನ್ನು ರಕ್ಷಿಸಿಕೊಳ್ಳಲಾರ. ಹನಿ ಹನಿ ಸೇರಿ ಸಮುದ್ರವಾದಂತೆ ವ್ಯಕ್ತಿ–ವ್ಯಕ್ತಿಗಳು ಸೇರಿಯೇ ವಿಶ್ವವಲ್ಲವೆ? ನಾನು ಹೊಸದಾಗಿಯೇನೂ ಹೇಳುತ್ತಿಲ್ಲ. ಇದು ಚಿರಪರಿಚಿತ ಸತ್ಯವೇ.

ಆದರೆ, ಇದನ್ನು ಹಿಂದ್‌ಸ್ವರಾಜ್‌ನಲ್ಲಿ ಹೇಳಿದ್ದೇನೆಯೋ ಇಲ್ಲವೋ ತಿಳಿಯದು. ನಾನು ಆಧುನಿಕ ವಿಜ್ಞಾನವನ್ನು ಮೆಚ್ಚುವೆ. ಆದರೆ, ಹಳೆಯ ದೃಷ್ಟಿಯನ್ನು ಅದಕ್ಕೆ ಹೊಂದಿಸಿಕೊಳ್ಳಬೇಕೆನ್ನಿಸುತ್ತದೆ. ನನ್ನ ಗ್ರಾಮದ ಪರಿಕಲ್ಪನೆಯು ಇಂದಿನ ಗ್ರಾಮಗಳಿಂದ ಪ್ರಭಾವಿತವಾಗಿರುವುದಿಲ್ಲ. ನನ್ನ ಕನಸಿನ ಹಳ್ಳಿ ಇನ್ನೂ ನನ್ನ ಮನಸ್ಸಿನಲ್ಲಿಯೇ ಇದೆ. ನನ್ನ ಕನಸಿನ ಹಳ್ಳಿಯಲ್ಲಿ ಜಾಣ ಮನುಷ್ಯರು ವಾಸಿಸುತ್ತಿರುತ್ತಾರೆ. ಅವರು ಪ್ರಾಣಿಗಳಂತೆ ಕೊಳಕು ಮತ್ತು ಕತ್ತಲೆಯಲ್ಲಿ ಜೀವಿಸುವುದಿಲ್ಲ. ಗಂಡು–ಹೆಣ್ಣು ಒಬ್ಬರಿಗೊಬ್ಬರು ಆಸರೆಯಾಗಿಯೇ ಸ್ವತಂತ್ರರಾಗಿರುತ್ತಾರೆ. ಅಲ್ಲಿ ಪ್ಲೇಗು, ಮಲೇರಿಯಾ, ದಡಾರದ ಸುಳಿವಿರುವುದಿಲ್ಲ. ಯಾರೂ ಸೋಮಾರಿಗಳಾಗಿರುವುದಿಲ್ಲ. ಅಂತೆಯೇ, ಸಿರಿವಂತರೂ ಆಗಿರುವುದಿಲ್ಲ. ಪ್ರತಿಯೊಬ್ಬರು ತಮ್ಮ ದೈಹಿಕಶ್ರಮದ ಪಾಲನ್ನು ನೀಡಬೇಕಾಗುತ್ತದೆ.

ಇನ್ನಷ್ಟು ವಿವರವಾದ ಚಿತ್ರಣಕ್ಕೆ ನಾನು ಹೋಗುವುದಿಲ್ಲ. ರೈಲು, ಅಂಚೆ-ತಂತಿ ಕಚೇರಿ ಇತ್ಯಾದಿಗಳನ್ನೂ ಈ ಕನಸಿನ ಹಳ್ಳಿಯಲ್ಲಿ ಊಹಿಸಿಕೊಳ್ಳಲು ಸಾಧ್ಯ.

ಕಾರ್ಯಕಾರಿಣಿ ಸಭೆಯ ಕೊನೆಯ ದಿನ ಈ ವಿಚಾರವನ್ನು ವಿಸ್ತೃತವಾಗಿ ಚರ್ಚಿಸಿ ಒಂದು ನಿಲುವಿಗೆ ಬರಲು ಸಮಯ ಮೀಸಲಿಡಲು ನಿರ್ಧರಿಸಲಾಯಿತು. ಇದು ಒಳ್ಳೆಯದು. ಸಮಿತಿ ಸಭೆ ನಡೆಯುತ್ತದೆ ಇಲ್ಲವೋ, ಆದರೆ ನಾವಿಬ್ಬರೂ ಎರಡು ಕಾರಣಗಳಿಗಾಗಿ ಈ ವಿಷಯವನ್ನು ಸ್ಪಷ್ಟವಾಗಿ ಅರಿತುಕೊಂಡಿರಬೇಕು. ನಮ್ಮನ್ನು ಹಿಡಿದಿಟ್ಟಿರುವ ಬಂಧನವು ಕೇವಲ ರಾಜಕೀಯ ಕಾರ್ಯಕ್ಷೇತ್ರಕ್ಕೆ ಮಾತ್ರ ಸೀಮಿತವಲ್ಲ. ಅದು ಅಳತೆಗೆ ಸಿಗದಷ್ಟು ಆಳವೂ, ಅಪ್ರತಿಮವೂ ಆಗಿದೆ ಎಂಬುದು ಮೊದಲ ಕಾರಣ. ಹೀಗಾಗಿ, ರಾಜಕೀಯ ಕಾರ್ಯಕ್ಷೇತ್ರವನ್ನು ಕೂಡ ನಾವಿಬ್ಬರು ಸ್ಪಷ್ಟವಾಗಿ ತಿಳಿದಿರಬೇಕು ಎಂಬುದು ನನ್ನ ಮನದಾಳದ ಹಂಬಲ. ನಾವಿಬ್ಬರು ನಿಷ್ಪ್ರಯೋಜಕ ವ್ಯಕ್ತಿಗಳು ಎಂದು ಇಬ್ಬರಲ್ಲಿ ಯಾರೂ ಯೋಚಿಸುವುದಿಲ್ಲ. ಇಬ್ಬರೂ ಭಾರತದ ಸ್ವಾತಂತ್ರ್ಯಕ್ಕಾಗಿ ಬದುಕುತ್ತಿದ್ದೇವೆ ಮತ್ತು ಅದಕ್ಕಾಗಿ ಸಂತೋಷದಿಂದ ಜೀವ ಕೊಡಬಲ್ಲೆವು. ಲೋಕದ ಹೊಗಳಿಕೆ-ತೆಗಳಿಕೆ ನಮಗೆ ಬೇಕಿಲ್ಲ. ಸೇವಾನಿರತನಿಗೆ ಹೊಗಳಿಕೆಯನ್ನು ಸ್ವೀಕರಿಸಲು ಸಮಯವೆಲ್ಲಿ ಎಂಬುದು ಎರಡನೆಯ ಕಾರಣ. ಭಾರತದ ಸೇವೆಗಾಗಿ ನಾನು ನೂರಿಪ್ಪತ್ತೈದು ವರ್ಷ ಬದುಕಬೇಕು ಎಂಬ ಬಯಕೆಯುಳ್ಳವನು. ಆದರೆ, ಈಗಾಗಲೇ ವೃದ್ಧ ಎಂಬುದನ್ನು ಒಪ್ಪಲೇಬೇಕು. ನನಗೆ ಹೋಲಿಸಿದರೆ ನೀನಿನ್ನೂ ಯುವಕ. ಹೀಗಾಗಿಯೇ ನಿನ್ನನ್ನು ನನ್ನ ವಾರಸುದಾರನನ್ನಾಗಿ ಘೋಷಿಸುತ್ತಿದ್ದೇನೆ. ಆದಾಗ್ಯೂ, ವಾರಸುದಾರನನ್ನು ನಾನು ಅರಿಯಬೇಕು; ಅಂತೆಯೇ, ವಾರಸುದಾರನೂ ನನ್ನನ್ನು. ಹಾಗಾದಾಗಲಷ್ಟೇ ಸಂತೃಪ್ತಿ...

ನಾನು ಬರೆದಿರುವ ಕುರಿತು ಏನಾದರೂ ಚರ್ಚಿಸಲಿದ್ದಲ್ಲಿ ಅಂಥ ಒಂದು ಸಭೆಯನ್ನು ನಾವು ಸಂಘಟಿಸಬಹುದು.

ಆಶೀರ್ವಾದಗಳೊಡನೆ

ಬಾಪು

(ಮಹಾತ್ಮ ಗಾಂಧಿಯವರನ್ನು ಮೇ ೬, ೧೯೪೪ರಂದು ಹಾಗೂ ಜವಾಹರಲಾಲ್‌ರನ್ನು ಜೂನ್ ೧೫, ೧೯೪೫ರಂದು ಸೆರೆಮನೆಯಿಂದ ಬಿಡುಗಡೆಗೊಳಿಸಲಾಯಿತು. ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಸೆಪ್ಟೆಂಬರ್ ೧೨ರಿಂದ ೧೮ರವರೆಗೆ ಪುಣೆಯಲ್ಲಿಯೂ, ಸೆಪ್ಟೆಂಬರ್ ೨೧ರಿಂದ ೨೪ರವರೆಗೆ ಬಾಂಬೆಯಲ್ಲಿಯೂ ಸೇರಿತು. ಬಹುಪಾಲು ಸಭೆಗಳಲ್ಲಿ ಗಾಂಧಿ ಪಾಲ್ಗೊಂಡರು. ಸಭೆಗಳಲ್ಲಿ ಭಾರತವು ಸ್ವಾತಂತ್ರ್ಯ ಪಡೆದ ಬಳಿಕ ಸಾಮಾಜಿಕ-ಆರ್ಥಿಕ ಗೊತ್ತುಗುರಿಗಳು ಏನಾಗಿರುತ್ತವೆ ಎಂಬ ವಿಷಯ ಗಹನವಾಗಿ ಚರ್ಚೆಯಾದವು. ಆ ಹಿನ್ನೆಲೆಯಲ್ಲಿ ಈ ಪತ್ರದ ವಸ್ತುವಿಷಯ ಮಹತ್ವದ್ದಾಗಿದೆ.)

ಕನ್ನಡಕ್ಕೆ: **ಕೇಶವ ಮಳಗಿ**

೯೭

ಭಿನ್ನಾಭಿಪ್ರಾಯ ಮತ್ತು ಗೌರವ: ಸುಭಾಸಚಂದ್ರ ಬೋಸ್‌ಗೆ ಪತ್ರ

(ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಸುಭಾಸಚಂದ್ರ ಬೋಸ್ ಅವರ ಅವಧಿ ೧೯೩೯ರ ಸುಮಾರಿಗೆ ಕೊನೆಗೊಂಡಿತ್ತು. ಆ ವರ್ಷ ಜಬಲಪುರದ ಬಳಿಯ ತ್ರಿಪುರಿಯಲ್ಲಿ ಜರುಗಲಿದ್ದ ಅಧಿವೇಶನದಲ್ಲಿ ಅಧ್ಯಕ್ಷರ ಆಯ್ಕೆ ನಡೆಯಲಿತ್ತು. ತಮ್ಮ ಉಮೇದುವಾರಿಕೆಗೆ ತೀವ್ರ ವಿರೋಧ ವ್ಯಕ್ತವಾಗುವುದೆಂಬ ಅರಿವಿದ್ದರೂ, ಬೋಸ್ ಮತ್ತೊಮ್ಮೆ ಆ ಸ್ಥಾನಕ್ಕಾಗಿ ಸ್ಪರ್ಧಿಸುವುದಾಗಿ ಘೋಷಿಸಿದರು. ನೆಹರು, ಅಬು ಕಲಾಮ್ ಆಜ಼ಾದ್ ಸ್ಪರ್ಧೆಯಿಂದ ಹಿಂದೆ ಸರಿದಾಗ ಆಂಧ್ರಮೂಲದ ಡಾ. ಪಟ್ಟಾಭಿ ಸೀತಾರಾಮಯ್ಯನವರ ಹೆಸರು ಮುಂಚೂಣಿಗೆ ಬಂದಿತು. ಚುನಾವಣೆಯಲ್ಲಿ ಸುಭಾಸರು ಗೆಲುವು ಸಾಧಿಸಿದರೂ ಕಾಂಗ್ರೆಸ್‌ನ ಹಿರಿಯ ನಾಯಕರ ಅಸಹಕಾರದಿಂದ ಜವಾಬ್ದಾರಿಯಲ್ಲಿ ಮುಂದುವರಿಯಲಾಗಲಿಲ್ಲ. ಆ ಹಿನ್ನೆಲೆಯಲ್ಲಿ ಸುಭಾಸ-ಗಾಂಧಿ ನಡುವೆ ಸರಣಿ ಪತ್ರ ವ್ಯವಹಾರ ನಡೆದವು. ಅಂಥ ಪತ್ರವೊಂದಕ್ಕೆ ಗಾಂಧಿ ನೀಡಿರುವ ಪ್ರತಿಕ್ರಿಯೆ ಇಲ್ಲಿದೆ.)

ಬಿರ್ಲಾ ಹೌಸ್
ನವದೆಹಲಿ
ಏಪ್ರಿಲ್ ೦೨, ೧೯೩೯

ನನ್ನ ಪ್ರೀತಿಯ ಸುಭಾಸ್,

ನಿನ್ನ ಮಾರ್ಚ್ ೩೧ರ ಮತ್ತು ಅದಕ್ಕೂ ಮೊದಲಿನ ಪತ್ರ ತಲುಪಿವೆ. ನೀನು ತುಂಬ ಮುಕ್ತವಾಗಿರುವೆ. ಮಾತ್ರವಲ್ಲ, ಪತ್ರದಲ್ಲಿ ನಿನ್ನ ದೃಷ್ಟಿಕೋನವನ್ನು ಅತ್ಯಂತ ಸ್ಪಷ್ಟವಾಗಿ ವ್ಯಕ್ತಪಡಿಸಿರುವುದನ್ನು ನಾನು ಮೆಚ್ಚಿಕೊಂಡಿದ್ದೇನೆ.

ನೀನು ವ್ಯಕ್ತಪಡಿಸಿರುವ ಅಭಿಪ್ರಾಯಗಳು ನನ್ನ ಮತ್ತು ಉಳಿದವರ ದೃಷ್ಟಿಕೋನಗಳಿಗೆ ಎಷ್ಟೊಂದು ತದ್ವಿರುದ್ಧವೆಂದರೆ ಅವನ್ನು ಬೆಸೆಯುವ ಅವಕಾಶವೇ ಕಾಣುತ್ತಿಲ್ಲ. ಎಲ್ಲ ಸಿದ್ಧಾಂತದವರೂ ಯಾವುದೇ ಕಲಬೆರಕೆ ಮಾಡದೆ ತಮ್ಮ ವಿಚಾರಧಾರೆಯನ್ನು ದೇಶದ ಮುಂದಿಡಬೇಕೆಂದು ನನಗನ್ನಿಸುತ್ತದೆ. ಇದನ್ನು ಪ್ರಾಮಾಣಿಕವಾಗಿ ಮಾಡಿದಾಗ ಕಹಿಭಾವನೆಯ ಯಾವ ನಾಗರಿಕ ಯುದ್ಧಗಳೂ ಜರುಗವು.

ನಮ್ಮ ಮಧ್ಯೆ ಭಿನ್ನಾಭಿಪ್ರಾಯಗಳಿರುವುದು ತಪ್ಪಲ್ಲ. ಆದರೆ ಪರಸ್ಪರ ವಿಶ್ವಾಸ ಮತ್ತು ಗೌರವಗಳನ್ನು ಕಳೆದುಕೊಳ್ಳುವುದು ತಪ್ಪು. ಕಾಲವೇ ಇದಕ್ಕೆಲ್ಲ ಅತ್ಯುತ್ತಮ ಶಮನವಾಗಿದೆ. ನಮ್ಮಲ್ಲಿ ನಿಜವಾಗಿಯೂ ಅಹಿಂಸೆಯಿದ್ದರೆ ಯಾವ ನಾಗರಿಕ ಅರಾಜಕತೆಯೂ ಜರುಗದು, ಕಹಿಭಾವನೆಯೂ ಇರದು.

ಈ ಎಲ್ಲ ಅಂಶಗಳನ್ನು ಪರಿಗಣಿಸಿ ಹೇಳುವುದಾದರೆ, ನಿನ್ನ ದೃಷ್ಟಿಕೋನವನ್ನು ಪ್ರತಿನಿಧಿಸುವ ಕಾರ್ಯಕಾರಿಣಿಯನ್ನು ರಚಿಸಿ ಕಾರ್ಯಕ್ರಮಗಳನ್ನು ರೂಪಿಸಬೇಕು ಹಾಗೂ ಮುಂಬರುವ ಎಐಸಿಸಿಯಲ್ಲಿ ಮಂಡಿಸಬೇಕು ಎಂಬುದು ನನ್ನ ಅನ್ನಿಸಿಕೆ. ಒಮ್ಮೆ ಸಮಿತಿಯು ಕಾರ್ಯಕ್ರಮಗಳನ್ನು ಅನುಮೋದಿಸಿದರೆ ನಿನ್ನದು ಸರಾಗವಾದ ಪಯಣ. ಅಲ್ಪಮತದವರ ಕಿರಿಕಿರಿಯಿಲ್ಲದೆ ಅವನ್ನು ಅನುಷ್ಠಾನಗೊಳಿಸಲು ನೀನು ಸಮರ್ಥ. ಹಾಗೊಮ್ಮೆ, ಸಮಿತಿಯು ನಿನ್ನ ಕಾರ್ಯಕ್ರಮಗಳಿಗೆ ಅನುಮೋದನೆ ನೀಡದಿದ್ದರೆ ನೀನು ರಾಜೀನಾಮೆ ನೀಡಿ, ಸಮಿತಿ ಹೊಸ ಅಧ್ಯಕ್ಷನನ್ನು ಆಯಲು ಅನುವು ಮಾಡಿಕೊಡಬೇಕು. ಆಗ ನಿನ್ನ ವಿಚಾರಧಾರೆಗಳನ್ನು ದೇಶಕ್ಕೆ ತಿಳಿಸಲು ನೀನು ಸ್ವತಂತ್ರ. ಪಂಡಿತ ಪಂತರ ನಿಲುವಳಿ ಸೂಚನೆಯ ಹೊರತಾಗಿಯೂ ನಿನಗೆ ಈ ಸಲಹೆಯನ್ನು ನೀಡುತ್ತಿರುವೆ.

ಇನ್ನು ನಿನ್ನ ಪ್ರಶ್ನೆಗಳ ಬಗ್ಗೆ: ಪಂಡಿತ ಪಂತರು ತಮ್ಮ ನಿಲುವಳಿ ಸೂಚಿಸಿದಾಗ ನಾನು ಹಾಸಿಗೆ ಹಿಡಿದಿದ್ದೆ. ಆಗ ರಾಜ್‌ಕೋಟ್‌ನಲ್ಲಿಯೇ ಇದ್ದ ಮಥುರಾದಾಸರು ಒಂದು ಮುಂಜಾನೆ, ಹಳೆಯ ಕುದುರೆಗಳ ಬಗ್ಗೆ ವಿಶ್ವಾಸವನ್ನು ಸೂಚಿಸುವ ನಿಲುವಳಿಯನ್ನು ಮಂಡಿಸಲಾಗುವುದು ಎಂಬ ಸಂದೇಶವನ್ನು ನೀಡಿದರು. ನನ್ನೆದುರು ನಿಲುವಳಿಯ ಪಠ್ಯವಿರಲಿಲ್ಲ. ನಿನ್ನ ಚುನಾವಣೆಯ ಗೆಲುವು ಹಳೆಯ ಕುದುರೆಗಳ, ಅದರಲ್ಲೂ ಸರ್ದಾರ್ (ವಲ್ಲಭಭಾಯಿ ಪಟೇಲ್) ವಿರುದ್ಧದ ಗೆಲುವಲ್ಲ ಎಂದು ಸೇವಾಗ್ರಾಮದಲ್ಲಿ ನನಗೆ ಹೇಳಲಾಗಿತ್ತು. ಇದಾದ ಬಳಿಕ ನಾನು (ನಿಲುವಳಿಯ) ಸಾಕ್ಷಾತ್ ಪಠ್ಯವನ್ನು ನೋಡಿದ್ದು ಅಲಹಾಬಾದ್‌ನಲ್ಲಿ, ಮೌಲಾನಾ ಸಾಹೇಬರನ್ನು ಕಾಣಲು ಹೋದಾಗ.

ನನ್ನ ಪ್ರತಿಷ್ಠೆ ಗಣನೆಗೇ ಬರುವುದಿಲ್ಲ. ಅದಕ್ಕೆ ತನ್ನದೇ ಆದ ಪ್ರತ್ಯೇಕ ಮೌಲ್ಯವೆಂಬುದಿಲ್ಲ. ನನ್ನ ಗುರಿಯ ಕುರಿತು ಸಂದೇಹ ಬಂದರೆ, ನನ್ನ ಕಾರ್ಯಕ್ರಮ ಅಥವಾ ನೀತಿಯನ್ನು ದೇಶ ತಿರಸ್ಕರಿಸಿದರೆ ಆಗ ಪ್ರತಿಷ್ಠೆ ಹೊರಟು ಹೋಗಬೇಕು. ಭಾರತವು ತನ್ನ ಕೋಟ್ಯಂತರ ಜನರಿಂದ ಪ್ರಗತಿಯನ್ನೂ ಹೊಂದುತ್ತದೆ, ಅವನತಿಯನ್ನೂ ಕಾಣುತ್ತದೆ. ವ್ಯಕ್ತಿಗಳು ಅವರೆಷ್ಟೇ ದೊಡ್ಡವರಾಗಿರಲಿ, ಕೋಟ್ಯಂತರ ವಾಸಿಗಳನ್ನು ಪ್ರತಿನಿಧಿಸುತ್ತಾರೆಂಬುದನ್ನು ಬಿಟ್ಟರೆ ಮತ್ತಾವ ಪ್ರತಿಷ್ಠೆಯೂ ಅವರಿಗಿಲ್ಲ. ಹೀಗಾಗಿ, ಅದನ್ನು ಪರಿಗಣನೆಯಿಂದ ತೆಗೆದುಹಾಕೋಣ.

ದೇಶವು ಹಿಂದೆಂದಿಗಿಂತ ಇಂದು ಅಹಿಂಸಾತ್ಮಕವಾಗಿದೆ ಎಂಬ ನಿನ್ನ ವಿಚಾರವನ್ನು ನಾನೊಪ್ಪುವುದಿಲ್ಲ. ಉಸುರುವ ಗಾಳಿಯಲ್ಲಿ ನಾನು ಹಿಂಸೆಯನ್ನು ಮೂಸುತ್ತಿದ್ದೇನೆ. ಹಿಂಸೆ ಇದೀಗ ಸೂಕ್ಷ್ಮವಾದ ಆಕಾರವನ್ನು ಪಡೆದಿದೆ. ನಮ್ಮ ನಡುವಿನ ಅವಿಶ್ವಾಸವು ಹಿಂಸೆಯ ಕೆಟ್ಟ ಸ್ವರೂಪವೇ. ಹಿಂದೂ-ಮುಸಲ್ಮಾನರ ನಡುವೆ ಬೆಳೆಯುತ್ತಿರುವ ಕಂದಕವು ಇದೇ ಬಗೆಯದ್ದಾಗಿದೆ. ನಾನು ಇನ್ನಷ್ಟು ವಿವರಿಸಬಲ್ಲೆ.

ಕಾಂಗ್ರೆಸ್‌ನಲ್ಲಿಯ ಭ್ರಷ್ಟಾಚಾರದ ಸ್ವರೂಪದ ಕುರಿತು ನಮ್ಮಲ್ಲಿ ಭಿನ್ನಮತವಿದೆ ಎನ್ನಿಸುತ್ತದೆ. ಭ್ರಷ್ಟಾಚಾರ ಹೆಚ್ಚುತ್ತಲೇ ಇದೆ ಎನ್ನುವುದು ನನ್ನ ಅಭಿಪ್ರಾಯ. ಒಂದು ಕೂಲಂಕಷ ತನಿಖೆಗಾಗಿ ಕೆಲವು ತಿಂಗಳುಗಳಿಂದ ಒತ್ತಾಯಿಸುತ್ತಲೇ ಇದ್ದೇನೆ.

ಇಂಥ ಸನ್ನಿವೇಶದಲ್ಲಿ ಅಹಿಂಸೆಯ ಆಂದೋಲನ ನನಗಂತೂ ಕಾಣುತ್ತಿಲ್ಲ. ಪರಿಣಾಮಕಾರಿ ದಿಗ್ಬಂಧನದ ಅಸ್ತ್ರವಿಲ್ಲದೆ ನೀಡುವ ಅಂತಿಮ ಗಡುವು ನಿರರ್ಥಕತೆಗಿಂತ ಹಾನಿಕಾರಕ.

ನಿನಗೀಗಾಗಲೇ ಹೇಳಿದಂತೆ ನಾನೊಬ್ಬ ಹೆಚ್ಚು ಹೆಚ್ಚು ಜಾಗರೂಕನಾಗುತ್ತ, ಜಿಗುಟಾಗುತ್ತ ನಡೆದಿರುವ ವೃದ್ಧ. ನಿನ್ನ ಎದುರಿಗೆ ತಾರುಣ್ಯವಿದೆ. ಬಲಿಷ್ಠ ಆಶಾವಾದ ಯೌವ್ವನದ ಕುರುಹಾಗಿದೆ. ನೀನು ಸರಿಯಿದ್ದು, ನಾನೇ ಸರಿಯಿಲ್ಲದಿರಬಹುದು. ಇಂದಿನ ಸ್ಥಿತಿಯಲ್ಲಿ ಕಾಂಗ್ರೆಸ್ ಉತ್ತಮವಾದುದೇನನ್ನು ನೀಡಲಾರದು, ಒಳ್ಳೆಯ ನಾಗರಿಕ ಅಸಹಕಾರವನ್ನು ಕೂಡ. ಹೀಗಾಗಿ, ನಿನ್ನ ಭವಿಷ್ಯವಾಣಿ ನಿಜವಾದರೆ ನಾನು ಹಿಂದೆ ಉಳಿದುಹೋದ ಸತ್ಯಾಗ್ರಹ ಸೇನಾನಿಯಷ್ಟೇ.

ನೀನು ರಾಜ್‌ಕೋಟ್‌ನ ಚಿಕ್ಕ ಘಟನೆಯನ್ನು ಪ್ರಸ್ತಾಪಿಸಿರುವುದು ಸಂತೋಷವೇ. ನಾವು ವಿಷಯಗಳನ್ನು ಹೇಗೆ ಭಿನ್ನ ದೃಷ್ಟಿಕೋನದಿಂದ ನೋಡುತ್ತೇವೆ ಎನ್ನುವ ಮಹತ್ವದ ಅಂಶವನ್ನು ಇದು ಎತ್ತಿತೋರಿಸುತ್ತದೆ. ನಾನು ತೆಗೆದುಕೊಂಡ ಹೆಜ್ಜೆಗಳ ಕುರಿತು ನನಗಾವ ಪಶ್ಚಾತ್ತಾಪವೂ ಇಲ್ಲ. ಅದಕ್ಕೆ ರಾಷ್ಟ್ರೀಯ ಮಹತ್ವವಿದೆ ಎಂಬುದೇ ನನ್ನ ನಂಬಿಕೆ. ರಾಜ್‌ಕೋಟ್ ಪ್ರಸಂಗಕ್ಕಾಗಿ ಬೇರೆ ರಾಜ್ಯಗಳಲ್ಲಿ ನಾಗರಿಕ ಅಸಹಕಾರ

ಆಂದೋಲನವನ್ನು ಬಿಟ್ಟುಕೊಟ್ಟಿಲ್ಲ. ಬದಲಿಗೆ, ರಾಜ್‌ಕೋಟ್ ನನ್ನ ಕಣ್ಣನ್ನು ತೆರೆಸಿ ದಾರಿ ತೋರಿತು ಎನ್ನುವೆ. ಆರೋಗ್ಯ ಸುಧಾರಣೆಗಾಗಿ ನಾನು ದೆಹಲಿಯಲ್ಲಿ ಉಳಿದುಕೊಂಡಿಲ್ಲ. ಬದಲಿಗೆ, ಮುಖ್ಯ ನ್ಯಾಯಮೂರ್ತಿಗಳ ತೀರ್ಪು ಕಾಯುತ್ತ ಅರೆಮನಸ್ಸಿನಿಂದ ಇಲ್ಲಿದ್ದೇನೆ. ವೈಸ್‌ರಾಯ್ ತಮ್ಮ ಹಿಂದಿನ ತಂತಿಯಲ್ಲಿ ತಿಳಿಸಿದಂತೆ ಸೂಕ್ತ ಕ್ರಮ ಕೈಗೊಂಡು ನಿರ್ಣಯ ಪ್ರಕಟಿಸುವವರೆಗೂ ಕಾಯುವುದು ನನ್ನ ಕರ್ತವ್ಯ. ದಾಖಲೆಯ ವ್ಯಾಖ್ಯಾನಕಾರರನ್ನಾಗಿ ಮುಖ್ಯ ನ್ಯಾಯಾಧೀಶರನ್ನು ನೇಮಿಸಿರುವುದರಲ್ಲಿ ನನಗಾವ ತಪ್ಪೂ ಕಂಡಿಲ್ಲ–ಅದರಲ್ಲೂ ದಾಖಲೆಯ ಅರ್ಥವ್ಯಾಖ್ಯಾನದ ಕುರಿತು ಠಾಕೂರ ಸಾಹೇಬರು ಅನುಮಾನ ವ್ಯಕ್ತಪಡಿಸಿರುವಾಗ. ಇನ್ನೂ ಒಂದು ವಿಷಯವೆಂದರೆ, ಸರ್ ಮೌರಿಸ್ ಅವರು ಮುಖ್ಯ ನ್ಯಾಯಮೂರ್ತಿಗಳೆಂಬ ಕಾರಣಕ್ಕಾಗಿ ಈ ಕೆಲಸಕ್ಕಾಗಿ ನೇಮಿಸಿಲ್ಲ. ಬದಲಿಗೆ, ಅವರೊಬ್ಬ ತರಬೇತಿ ಪಡೆದ ನ್ಯಾಯಮೂರ್ತಿಯೆಂದೂ, ವೈಸರಾಯ್‌ರ ನಂಬುಗಸ್ಥರೆಂದು ಆರಿಸಲಾಗಿದೆ. ವೈಸ್‌ರಾಯ್ ನೇಮಿತ ನ್ಯಾಯಾಧೀಶರನ್ನು ಒಪ್ಪಿಕೊಳ್ಳುವ ಮೂಲಕ ನಾನು ಜಾಣ್ಮೆ ಮತ್ತು ಘನತೆ ಮೆರೆದಿದ್ದೇನೆಂದೇ ತಿಳಿದಿದ್ದೇನೆ. ಎಲ್ಲಕ್ಕೂ ಮುಖ್ಯವೆಂದರೆ ನಾನು ವೈಸ್‌ರಾಯ್‌ರ ಹೊಣೆಗಾರಿಕೆಯನ್ನು ಹೆಚ್ಚಿಸಿರುವುದು.

ನಾವು ನಮ್ಮ ಕಟುವಾದ ಭಿನ್ನಾಭಿಪ್ರಾಯಗಳನ್ನು ಹಂಚಿಕೊಂಡಿದ್ದರೂ ಅದರಿಂದ ನಮ್ಮ ಖಾಸಗಿ ಸಂಬಂಧ ಕೊಂಚವೂ ಹದಗೆಡಬಾರದು ಎಂಬುದರ ಕುರಿತು ನಾನು ಸ್ಪಷ್ಟವಾಗಿದ್ದೇನೆ. ಭಿನ್ನಮತವು ಹೃದಯದಿಂದ ಮೂಡಿದ್ದರೆ ಈ ಎಲ್ಲ ಭಿನ್ನಾಭಿಪ್ರಾಯದ ಕಲೆಗಳೂ ಅಳಿಸಿಹೋಗುವವು. ಅವು ಮನದಾಳದಿಂದ ಬಂದವು ಎಂಬುದೇ ನನ್ನ ನಂಬಿಕೆ.

ಪ್ರೀತಿಯಿಂದ

ಬಾಪು

ಕನ್ನಡಕ್ಕೆ: **ಕೇಶವ ಮಳಗಿ**

೯೮

ಹಿಟ್ಲರ್‌ಗೆ ಪತ್ರ

೨೪ ಡಿಸೆಂಬರ್ ೧೯೪೦

ಪ್ರೀತಿಯ ಗೆಳೆಯ,

ಬರೀ ಔಪಚಾರಿಕವಾಗಿ ನಾನು ನಿಮ್ಮನ್ನು ಸ್ನೇಹಿತ ಎಂದು ಕರೆಯುತ್ತಿಲ್ಲ. ನನಗೆ ಯಾರೂ ಶತ್ರುಗಳೇ ಇಲ್ಲ. ಕಳೆದ ಮೂವತ್ತೂರು ವರ್ಷಗಳಿಂದ ಜಾತಿ, ಮತ, ಬಣ್ಣ ಮತ್ತು ಜನಾಂಗಗಳ ಭೇದಭಾವವಿಲ್ಲದೆ ಇಡೀ ಮಾನವ ಕುಲದೊಂದಿಗೆ ಭ್ರಾತೃತ್ವ ಬೆಳೆಸುವುದೇ ನನ್ನ ಕೆಲಸವಾಗಿದೆ.

ನಿಮ್ಮ ಧೈರ್ಯಶಕ್ತಿ ಮತ್ತು ಶೌರ್ಯದ ಬಗ್ಗೆ ನಮಗೆ ಯಾವ ಅನುಮಾನವೂ ಇಲ್ಲ. ನಿಮ್ಮ ಶತ್ರುಗಳು ಹೇಳುವಂತೆ ನಿಮ್ಮನ್ನು ಮಾನವಕುಲವನ್ನು ನಾಶ ಮಾಡಲು ಹೊರಟ ಪೆಡಂಭೂತ ಎಂದು ಕೂಡ ಕರೆಯಲು ನಮಗೆ ಮನಸ್ಸಿಲ್ಲ. ಆದರೆ, ನಿಮ್ಮ ಬರವಣಿಗೆ, ಭಾಷಣಗಳು ಮತ್ತು ಅನುಯಾಯಿಗಳ ನಡವಳಿಕೆಗಳು ಮಾನವೀಯ ಗೌರವಕ್ಕೆ ಧಕ್ಕೆ ತರುವಂತಹವುಗಳು. ವಿಶ್ವಭ್ರಾತೃತ್ವದಲ್ಲಿ ನಂಬಿಕೆಯುಳ್ಳ ನನ್ನಂತಹವನಿಗಂತೂ ಅವು ಸ್ವಲ್ಪವೂ ಹಿಡಿಸುವುದಿಲ್ಲ. ಡೆನ್‌ಮಾರ್ಕಿನ ಕಬಳಿಕೆ, ಪೋಲೆಂಡ್ ಮೇಲಿನ ಅತ್ಯಾಚಾರ ಮತ್ತು ಜೆಕೋಸ್ಲಾವಾಕಿಯಾದ ಅಪಮಾನಗಳನ್ನು ನೀವು ಹೆಮ್ಮೆಯಿಂದ ನೋಡಬಹುದು. ಆದರೆ ಅವು ಮಾನವ ಕುಲದ ಮೇಲಿನ ಅತ್ಯಾಚಾರ ಎಂದು ಪರಿಗಣಿಸಲ್ಪಡುತ್ತವೆ.

ನಾವು ವಿಚಿತ್ರ ಪರಿಸ್ಥಿತಿಯಲ್ಲಿದ್ದೇವೆ; ನಾಜಿಯಿಸಂನಷ್ಟೇ ಬ್ರಿಟಿಷ್ ವಸಾಹತುಶಾಹಿಯನ್ನೂ ವಿರೋಧಿಸುತ್ತೇವೆ. ಎರಡರ ನಡುವೆ ಎಲ್ಲೋ ಅಲ್ಪಸ್ವಲ್ಪ ವ್ಯತ್ಯಾಸವಿದೆ, ಅಷ್ಟೇ. ಜಗತ್ತಿನ ಜನಸಂಖ್ಯೆಯ ಐದನೆಯ ಒಂದು ಭಾಗ ಬ್ರಿಟಿಷ್ ವಸಾಹತುಶಾಹಿಯ

ಹಿಡಿತದಲ್ಲಿದೆ. ನಮ್ಮ ಹೋರಾಟದ ಉದ್ದೇಶ ಬ್ರಿಟಿಷ್ ಜನರಿಗೆ ಘಾಸಿ ಮಾಡುವುದಲ್ಲ. ಅವರನ್ನು ಯುದ್ಧರಂಗದಲ್ಲಿ ಸೋಲಿಸುವುದೂ ಅಲ್ಲ. ಬದಲಿಗೆ, ಅವರನ್ನು ಬದಲಿಸುವುದು; ಶಸ್ತ್ರಾಸ್ತ್ರಗಳಿಲ್ಲದ ನಮ್ಮ ಹೋರಾಟ, ಅಹಿಂಸೆ, ಅಸಹಕಾರಗಳಿಂದ ಅವರು ನಮ್ಮನ್ನು ಆಳಲು ಸಾಧ್ಯವಾಗದಿರುವಂತೆ ಮಾಡುವುದು ನಮ್ಮ ಗುರಿ.

ವಿಜ್ಞಾನವನ್ನು ಬಳಸಿ ವಿನಾಶದ ಮಾರ್ಗಗಳನ್ನು ತುಂಬಾ ಪರಿಣಾಮಕಾರಿಯಾಗಿ ನೀವು ಪತ್ತೆ ಮಾಡಿಕೊಂಡಿದ್ದೀರಿ. ಬ್ರಿಟನ್ ಅಲ್ಲದಿದ್ದರೆ ಮತ್ತೊಂದು ದೇಶ ಅದೇ ವಿಜ್ಞಾನವನ್ನು ಮತ್ತಷ್ಟು ಸುಧಾರಿಸಿ ನಿಮ್ಮನ್ನು ನಾಶಮಾಡಬಹುದು. ನಿಮ್ಮ ಜನ ಅಭಿಮಾನಪಡುವಂತಹ ಪರಂಪರೆಯನ್ನು ನೀವು ರೂಢಿಸುತ್ತಿಲ್ಲ. ಎಷ್ಟೇ ಜಾಣ್ಮೆಯಿಂದ ನಿರ್ವಹಿಸಿದರೂ ಹಿಂಸೆ, ಕ್ರೌರ್ಯಗಳ ಬಗ್ಗೆ ಅವರು ಎಂದೂ ಹೆಮ್ಮೆಪಡುವಂತಿಲ್ಲ. ಆದ್ದರಿಂದ ಮಾನವಕುಲದ ಹಿತಕ್ಕಾಗಿ ನೀವು ಯುದ್ಧವನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಿಮಗೂ ಬ್ರಿಟನ್ನಿಗೂ ಇರುವ ಭಿನ್ನಾಭಿಪ್ರಾಯಗಳನ್ನು ನೀವಿಬ್ಬರೂ ಒಪ್ಪುವ ಅಂತಾರಾಷ್ಟ್ರೀಯ ನ್ಯಾಯಮಂಡಳಿಯೊಂದಕ್ಕೆ ಒಪ್ಪಿಸಿ. ಯುದ್ಧದಲ್ಲಿ ನೀವು ಜಯಶಾಲಿಯಾದರೆ ನಿಮ್ಮ ನಿಲುವು ಸರಿಯಾಗಿತ್ತು ಎಂದು ಸಾಬೀತಾಗುವುದಿಲ್ಲ. ನಿಮ್ಮಲ್ಲಿ ಸೈನ್ಯಬಲ ಮತ್ತು ವಿನಾಶಕ ಶಕ್ತಿ ಹೆಚ್ಚಿತ್ತು ಎಂದಷ್ಟೇ ಆಗುತ್ತದೆ. ಆದರೆ ನ್ಯಾಯಮಂಡಳಿಯ ತೀರ್ಪು ನಿಮ್ಮ ಪರ ಆದರೆ, ನಿಮ್ಮ ಪ್ರತಿಷ್ಠೆ ಹೆಚ್ಚುತ್ತದೆ.

('ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೭೩, ಪು. ೨೫೩–೨೫೫)

ಕನ್ನಡಕ್ಕೆ: ಬಿ.ಎ. ಶ್ರೀಧರ

ಟಿಪ್ಪಣಿ

ಗಾಂಧೀಜಿ ಡಿಸೆಂಬರ್ ೨೪. ೧೯೪೦ರಲ್ಲಿ ಅಡಾಲ್ಫ್ ಹಿಟ್ಲರನಿಗೆ ಪತ್ರವೊಂದನ್ನು ಬರೆದು ಯುರೋಪಿನಲ್ಲಿ ನಾಜಿ ಬರ್ಬರತೆಯನ್ನು ನಿಲ್ಲಿಸುವಂತೆ ಮನವಿ ಮಾಡಿದರು. ಇದು ಗಾಂಧೀಜಿ ಹಿಟ್ಲರನಿಗೆ ಬರೆದ ಎರಡನೆಯ ಪತ್ರ. ಈ ಮೊದಲು ಜುಲೈ ೨೩, ೧೯೩೯ರಲ್ಲೊಮ್ಮೆ ಅವನಿಗೆ ಪತ್ರ ಬರೆದಿದ್ದರು. ಹೆಚ್ಚುಕಡಿಮೆ ನಾಜಿಗಳಷ್ಟೇ ಕ್ರೂರವಾದ ವಸಾಹತುಶಾಹಿಯ ವಿರುದ್ಧ ತಾವು ಅಹಿಂಸಾ ಹೋರಾಟವನ್ನು ಆರಂಭಿಸಿರುವುದನ್ನು ವಿವರಿಸಿದ ಅವರು ನಾಜಿಗಳು ಕೂಡ ಯುದ್ಧವನ್ನು ನಿಲ್ಲಿಸಿ ಅಹಿಂಸೆ ಮತ್ತು ಸಂಧಾನದ ಮಾರ್ಗದಿಂದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಬೇಕೆಂದು ಮನವಿ ಮಾಡಿದರು. ಗಾಂಧೀಜಿಯವರ ಈ ಪತ್ರವನ್ನು ಬ್ರಿಟಿಷ್ ಸರ್ಕಾರ ತಡೆಹಿಡಿಯಿತು.

೯೯

ನಿಮ್ಮ ಶ್ರೇಷ್ಠ ಸಾಮರ್ಥ್ಯವನ್ನು ಅರಿತಿರುವೆ: ಅಂಬೇಡ್ಕರ್‌ಗೆ ಪತ್ರ

ಸೇವಾಗ್ರಾಮ
ಆಗಸ್ಟ್ ೬, ೧೯೪೪

ಪ್ರಿಯ ಅಂಬೇಡ್ಕರ್,

ನಿಮ್ಮ ಜುಲೈ ೩೧ರ ಪತ್ರವು ನಿನ್ನೆಯಷ್ಟೇ ತಲುಪಿದೆ. ಹಿಂದೂ-ಮುಸ್ಲಿಮರ ಪ್ರಶ್ನೆಯು ಜೀವನಪರ್ಯಂತದ ಪ್ರಶ್ನೆಯಾಗಿದೆ. ನನ್ನ ಈ ಪ್ರಶ್ನೆಯು ಬಗೆಹರಿದರೆ ದೇಶದ ರಾಜಕೀಯ ಬಿಕ್ಕಟ್ಟುಗಳೆಲ್ಲ ಕರಗಿಹೋಗುವುವು ಎಂದು ಹಿಂದೆ ಯೋಚಿಸುತ್ತಿದ್ದೆ. ಆದರೆ, ಅದು ಭಾಗಶಃ ಮಾತ್ರ ನಿಜ ಎಂದು ಅನುಭವವು ಪಾಠ ಕಲಿಸಿದೆ. ಅಸ್ಪೃಶ್ಯತೆ ನಿರ್ಮೂಲನೆಯನ್ನು ನಾನು ಹರೆಯದಲ್ಲಿದ್ದಾಗಲೇ ಆರಂಭಿಸಿದೆ. ಆದರೆ ಅದನ್ನು ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಯ ಸಮಸ್ಯೆಯ ಭಾಗವಾಗಿ ನಾನು ಗ್ರಹಿಸಿದ್ದೆ. ಆ ವಿಷಯಕ್ಕೆ ಬಹುದೊಡ್ಡ ರಾಜಕೀಯ ಮೌಲ್ಯವೂ ಸೇರಿಕೊಂಡಿದೆಯಾದರೂ ಅದಕ್ಕಿರುವ ಧಾರ್ಮಿಕ-ಸಾಮಾಜಿಕ ಮೌಲ್ಯವೇ ಶ್ರೇಷ್ಠವಾದುದು ಎಂದು ಭಾವಿಸುವೆ. ಆದರೆ, ಈ ಮಹತ್ವದ ಪ್ರಶ್ನೆಯಲ್ಲಿ ನಮ್ಮಿಬ್ಬರದು ಭಿನ್ನ ದೃಷ್ಟಿಕೋನವೆಂದು ನಾನು ಬಲ್ಲೆ. ದೇಶದ ವಿಶಾಲ ರಾಜಕೀಯದ ಭಿತ್ತಿಯಲ್ಲಿ ವಿಭಿನ್ನ ವಿಷಯಗಳನ್ನು ನಾವಿಬ್ಬರೂ ವಿಭಿನ್ನ ನೋಟದಿಂದ ಗ್ರಹಿಸುತ್ತೇವೆಂದು ನನಗೆ ಅರಿವಿದೆ. ಎರಡೂ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಾವಿಬ್ಬರೂ ಒಂದು ಸಾಮಾನ್ಯ ವೇದಿಕೆ ಕಂಡುಕೊಳ್ಳುವುದು ನನಗಂತೂ ಖುಷಿಯ ವಿಚಾರ. ನಿಮ್ಮಲ್ಲಿರುವ ಶ್ರೇಷ್ಠ ಸಾಮರ್ಥ್ಯವನ್ನು ನಾನು ಅರಿತಿರುವೆ. ನೀವು ನನ್ನ ಸಹೋದ್ಯೋಗಿ, ಸಂಗಾತಿ ಆಗಿರಬೇಕೆಂಬ ಭಾವ ನನ್ನದು. ನಿಮಗೆ ಹತ್ತಿರವಾಗಲು ನಾನು ಸೋತಿದ್ದೇನೆ ಎಂಬುದನ್ನೂ ನಾನು ಒಪ್ಪಬೇಕು. ಇಬ್ಬರೂ ಸೇರುವ ಸಾಮಾನ್ಯ ವೇದಿಕೆಯನ್ನು ನೀವು ತೋರಿಸಿದರೆ ನಾನು ಸ್ವಾಗತಿಸುತ್ತೇನೆ. ಜತೆಜತೆಗೆ, ಸದ್ಯ ನಮ್ಮ ನಡುವಿರುವ ದುರದೃಷ್ಟಕರ ವ್ಯತ್ಯಾಸಗಳನ್ನೂ ನಾನು ಪರಿಹರಿಸಿಕೊಳ್ಳಬೇಕಿದೆ.

ನಿಮ್ಮ ನಂಬುಗೆಯ
ಎಂ.ಕೆ. ಗಾಂಧಿ

ಕನ್ನಡಕ್ಕೆ: ಕೇಶವ ಮಳಗಿ

೧೦೦

ಮಾನವ ಘನತೆ ಮತ್ತು ಉದ್ದೇಶ

ಪ್ರಿಯ ಗೆಳೆಯ,

ನಿನ್ನ ಪತ್ರ ನೋಡಿದೆ. ನಾನೂ ಅನೇಕ ಹಲ್ಲಿಗಳು ಜಿರಲೆಗಳ ಬೆನ್ನಿಗೆ ಬಿದ್ದಿರುವುದನ್ನು ಗಮನಿಸಿದ್ದೇನೆ. ಹಲ್ಲಿಗಳ ಎದುರು ಜಿರಲೆಗಳ ಸಂಖ್ಯೆ ಸಣ್ಣದು. ಈ ಬಗೆಯಲ್ಲಿ ದೊಡ್ಡ ಶಕ್ತಿಗಳು ಸಣ್ಣ ಶಕ್ತಿಗಳ ಮೇಲೆ ಕಾನೂನಾತ್ಮಕ ಆಕ್ರಮಣ ಇಲ್ಲವೇ ದಾಳಿ ಮಾಡುವುದನ್ನು ನಾನು ತಡೆಯಲಾರೆ. ಅದು ಅಸಂಗತವೆನಿಸಿದರೂ ನಾನು ಗಮನಿಸುತ್ತಿದ್ದೇನೆ. ನನಗನಿಸುವಂತೆ ಪಶುಜಗತ್ತಿನ ನಿಯಮ ಮನುಷ್ಯನಿಗೆ ಅನ್ವಯವಾಗಬಾರದು. ಮನುಷ್ಯ ತನ್ನ ಸುತ್ತಮುತ್ತಲಿನ ಹಿಂಸಾತ್ಮಕ ಪರಿಸರದಿಂದ ತನ್ನೊಳಗೆ ಪಾಶವೀ ಗುಣಗಳನ್ನು ಪೋಷಿಸುತ್ತಾನೆ. ಆ ಮೂಲಕ ಹಿಂಸೆಯಲ್ಲಿ ತೊಡಗುತ್ತಾನೆ. ಇದು ಸರಿಯಲ್ಲ. ಆತ ಸಾಧ್ಯವಾದಷ್ಟು ಅಹಿಂಸಾವಾದಿಯಾಗಿಯೇ ಬದುಕಬೇಕು. ಮನುಷ್ಯ ತನ್ನ ಘನತೆ ಮತ್ತು ಉದ್ದೇಶವನ್ನು ಅರಿಯಬೇಕು. ತನಗಿಂತಲೂ ದುರ್ಬಲರ ಮೇಲೆ ಆಕ್ರಮಣ ಮಾಡದೇ ಆದರ್ಶಮಯವಾಗಿ ಬದುಕಬೇಕು. ಈ ಬಗೆಯ ಗುರಿಯನ್ನು ತಲುಪುವಲ್ಲಿ ನಿರಂತರವಾಗಿ ಯತ್ನಿಸಬೇಕು. ಈ ದಿಶೆಯಲ್ಲಿ ಪೂರ್ಣ ಪ್ರಮಾಣದ ಯಶಸ್ಸು ಮೋಕ್ಷ ಸಾಧನೆಯಿಂದ ಮಾತ್ರ ಸಾಧ್ಯ. ಇದು ಭೌತಿಕ ಅಸ್ತಿತ್ವದಿಂದ ಹೊರತಾಗಿರುವ ಒಂದು ಚೈತನ್ಯ. ಆ ಸ್ಥಿತಿಯನ್ನು ತಲುಪುವುದೇ ಮನುಷ್ಯನ ಘನತೆ ಮತ್ತು ಅಂತಿಮ ಉದ್ದೇಶ.

ನಿಮ್ಮ ವಿಶ್ವಾಸಿ

ಎಂ.ಕೆ. ಗಾಂಧಿ

(ವಿ.ಎನ್.ಎಸ್.ಚಾರಿ, ಎಗ್ಮೋರ್, ಅವರಿಗೆ ಬರೆದ ಪತ್ರ, ೯ ಏಪ್ರಿಲ್ ೧೯೨೬)

ಕನ್ನಡಕ್ಕೆ: ಎಸ್. ಬಿ. ಜೋಗುರ

೧೦೧

ಕವಿಕಲ್ಪನೆ ಮತ್ತು ಚರಕದ ವಾಸ್ತವ: ರವೀಂದ್ರನಾಥ ಠಾಕೂರ್‌ಗೆ ಪ್ರತಿಕ್ರಿಯೆ

[ರವೀಂದ್ರನಾಥ ಠಾಕೂರರು ೧೯೨೫ರ ಸೆಪ್ಟೆಂಬರ್ ತಿಂಗಳಲ್ಲಿ 'ಚರಕದ ಆರಾಧನೆ' ಎಂಬ ಲೇಖನವನ್ನು ಕಲ್ಕತ್ತದ 'ಮಾಡರ್ನ್ ರಿವ್ಯೂ' ಪತ್ರಿಕೆಯಲ್ಲಿ ಪ್ರಕಟಿಸಿದರು. ಚರಕವನ್ನು ಒಂದು ವಾಣಿಜ್ಯ ರೂಪಕವಾಗಿ ಗಾಂಧಿ ಪ್ರಸ್ತಾಪಿಸುತ್ತಿರುವುದರ ಕುರಿತು ತೀವ್ರ ಆಕ್ಷೇಪಣೆಯನ್ನು ಎತ್ತಿದರು. ಠಾಕೂರರ ಭಿನ್ನಾಭಿಪ್ರಾಯಗಳಿಗೆ ಗಾಂಧಿ ಪ್ರತಿಕ್ರಿಯೆ ಬರೆದಿದ್ದು ಒಂದೆರಡು ತಿಂಗಳುಗಳ ಬಳಿಕ. ಈ ಮಾರುತ್ತರ ಪ್ರಕಟವಾದುದು 'ಯಂಗ್ ಇಂಡಿಯಾ'ದ ನವೆಂಬರ್ ೧೯೨೫ರ ಸಂಚಿಕೆಯಲ್ಲಿ.]

ಕೆಲಸಮಯದ ಹಿಂದೆ (ಸರ್) ರವೀಂದ್ರನಾಥ ಠಾಕೂರರು ಚರಕದ ಕುರಿತು ಬರೆದ ವಿಮರ್ಶೆ ಪ್ರಕಟವಾದಾಗ ಅನೇಕ ಸ್ನೇಹಿತರು ಅದಕ್ಕೆ ಉತ್ತರಿಸುವಂತೆ ಕೇಳಿಕೊಂಡಿದ್ದರು. ಎಡೆಬಿಡದ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರಿಂದ ಆಗ ಲೇಖನವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಲಾಗಿರಲಿಲ್ಲ. ಆದರೂ ಬರಹದ ಧೋರಣೆ ಅರಿಯುವಷ್ಟು ಓದಿಕೊಂಡಿದ್ದೆ. ಲೇಖನವನ್ನು ಓದಿದ್ದವರು ಒಂದೋ ಮುನಿಸಿಕೊಂಡಿದ್ದರು; ಇಲ್ಲವೇ ನನಗೆ ಸಮಯವಿದ್ದು ಬರೆದಿದ್ದರೂ ಅರ್ಥಮಾಡಿಕೊಳ್ಳದಷ್ಟು ತಮ್ಮ ವಾದದ ಪ್ರಭಾವಕ್ಕೆ ಒಳಗಾಗಿದ್ದರು. ಇದೀಗ ಆ ಕುರಿತು ಬರೆಯಲು ಸೂಕ್ತ ಸಮಯ. ಕವಿ ರವೀಂದ್ರರ ವಿಮರ್ಶೆಗೆ ಆದಷ್ಟು ಸಮಚಿತ್ತದಿಂದ ಉತ್ತರಿಸಲು ಯತ್ನಿಸುತ್ತೇನೆ.

ಕವಿ ರವೀಂದ್ರರು ಹಾಗೂ ಆಚಾರ್ಯ ಬ್ರಜೇಂದ್ರನಾಥ ಸೀಲ್ ಇಬ್ಬರೂ ಚರಕದ ಕುರಿತು ತೆಗೆದುಕೊಂಡ ನಿಲುವಿಗೆ ಆಚಾರ್ಯ ಪ್ರಫುಲ್ಲಚಂದ್ರ ರಾಯ್ ಆಕ್ಷೇಪಣೆ ವ್ಯಕ್ತಪಡಿಸಿದ್ದರು. ಪ್ರಫುಲ್ಲಚಂದ್ರ ರಾಯ್‌ರನ್ನು ಉದ್ದೇಶಿಸಿ ಕವಿ ರವೀಂದ್ರರು ಈ ಲೇಖನ ಬರೆದಿದ್ದಾರೆ; ಹಾಗೂ ಚರಕದ ಕುರಿತು ನನಗಿರುವ ಒಲವಿನಿಂದಾಗಿ

ನನ್ನನ್ನೂ ಮೆದುವಾಗಿ ಗದರಲಾಗಿದೆ. ಕವಿಗಳು ಚರಕದ ಶ್ರೇಷ್ಠ ಹಣಕಾಸು ಮೌಲ್ಯವನ್ನು ತಿರಸ್ಕರಿಸುತ್ತಿಲ್ಲ ಎನ್ನುವುದನ್ನು ಸಾರ್ವಜನಿಕರು ಗಮನಿಸಬೇಕು. ಅವರು ವಿಮರ್ಶೆ ಬರೆದ ಮೇಲೆ ಅಖಿಲ ಭಾರತ ದೀನಬಂಧು ಸ್ಮಾರಕದ ಮನವಿಗೆ ಹಸ್ತಾಕ್ಷರ ಹಾಕಿದ್ದಾರೆ. ಮನವಿಯಲ್ಲಿರುವ ವಿಷಯವನ್ನು ಓದಿದ ಮೇಲೆಯೇ ತಮ್ಮ ಅಂಕಿತವನ್ನವರು ಹಾಕಿದ್ದಾರೆ. ಮಾತ್ರವಲ್ಲ, ಚರಕದ ಕುರಿತು ತಾವು ಲೇಖನ ಬರೆದಿದ್ದು, ಅದರಿಂದ ನಿಮಗೆ ಒಂದಿಷ್ಟು ಇರುಸುಮುರುಸಾಗಬಹುದು ಎಂಬ ಸಂದೇಶವನ್ನೂ ನನಗವರು ಕಳಿಸಿದ್ದರು. ಜನತೆ ಇದನ್ನು ಸಹ ಅರಿಯಲಿ. ಏನು ಬರಲಿದೆ ಎಂದು ಊಹಿಸಿದ್ದೆನಾದ್ದರಿಂದ ನನಗೇನೂ ಅಸಮಾಧಾನವಾಗಲಿಲ್ಲ. ಬರಿಯ ಭಿನ್ನಾಭಿಪ್ರಾಯ ಏಕೆ ಅಸಂತೋಷಗೊಳಿಸಬೇಕು? ಇಬ್ಬರು ವ್ಯಕ್ತಿಗಳು ಎಲ್ಲ ವಿಷಯಗಳಲ್ಲಿಯೂ ಏಕಮತ ಹೊಂದಲು ಸಾಧ್ಯವಿಲ್ಲದಿರುವುದರಿಂದ ಪ್ರತಿ ವಿಷಯಕ್ಕೂ ಕಿರಿಕಿರಿಗೊಳ್ಳುತ್ತ ಹೋದಲ್ಲಿ ಬದುಕು ಅಸಹನೀಯವಾಗಿಬಿಡುತ್ತದೆ. ಇದಕ್ಕೆ ಪ್ರತಿಯಾಗಿ ಮುಕ್ತ ಟೀಕೆ ನನಗೆ ಮುದವನ್ನು ನೀಡುತ್ತದೆ. ಅಸಮ್ಮತಿ ನಮ್ಮ ಗೆಳೆತನದ ಮೆರುಗನ್ನು ಹೆಚ್ಚಿಸುತ್ತವೆ. ಹೆಚ್ಚಿನ ಎಲ್ಲ ವಿಷಯಗಳನ್ನೂ ಒಪ್ಪುತ್ತ ಹೋದರೆ ಹೇಗೆ ಸ್ನೇಹಿತರಾಗಿ ಉಳಿಯಬಲ್ಲರು? ಭಿನ್ನಾಭಿಪ್ರಾಯಗಳು ಇದ್ದಷ್ಟೂ ಗೆಳೆತನವು ಅರಳುವುದು. ಆದರಿಷ್ಟೇ: ಭಿನ್ನತೆಯಲ್ಲಿ ಕಹಿ ಮತ್ತು ಕಟುತ್ವದ ಅಂಶವಿರಬಾರದು. ಕವಿಗಳ ವಿಮರ್ಶೆಯ ಕುರಿತು ಬರೆಯುವಾಗ ಅಂಥ ಯಾವ ಅಂಶಗಳೂ ಇಲ್ಲವೆಂದು ಹೇಳಲು ಬಯಸುತ್ತೇನೆ.

ಈ ವಿಮರ್ಶೆಯ ಹಿಂದೆ ಅಪಾರವಾದ ಅಸೂಯೆ ಕೆಲಸ ಮಾಡಿದೆ ಎಂದು ಗಾಳಿಸುದ್ದಿ ಹರಡಿರುವುದರಿಂದ ಈ ಮಾತುಗಳನ್ನು ಮುನ್ನುಡಿಯಂತೆ ಬರೆಯುತ್ತಿದ್ದೇನೆ. ಈ ನಿರಾಧಾರ ಅನುಮಾನವು ಬಲಹೀನತೆಯನ್ನು, ಅಸಹನೆಯನ್ನು ತೋರುತ್ತದೆಯಷ್ಟೇ. ಒಂದಿಷ್ಟು ಮನನ ಮಾಡಿಕೊಂಡರೆ ಇಂಥ ನಿಷ್ಕರುಣ ಆಪಾದನೆಯನ್ನು ತಿಳಿಗೊಳಿಸಬಹುದು. ಕವಿಗಳು ನನ್ನ ಮೇಲೇಕೆ ಮತ್ಸರಗೊಳ್ಳುತ್ತಾರೆ? ಅಸೂಯೆ ವೈರತ್ವದ ಲಕ್ಷಣ. ನನ್ನ ಜೀವನದಲ್ಲಿ ಒಂದೇ ಒಂದು ಕವಿತೆಯನ್ನೂ ಬರೆಯಲು ನಾನು ಸಫಲನಾದವನಲ್ಲ. ನನ್ನೊಳಗೆ ಕವಿಯಿಲ್ಲ. ನಾನು ಕವಿಗಳ ಅಗ್ಗಳಿಕೆಯನ್ನೂ ಬಯಸಲಾರೆ. ಅದರಲ್ಲಿ ರವೀಂದ್ರರು ಅಪ್ರತಿಮರು. ವಿಶ್ವದಲ್ಲಿ ಅವರನ್ನು ಸರಿಗಟ್ಟುವ ಕವಿಯಿಲ್ಲ. ಕವಿಗಳ ಲೋಕಮಾನ್ಯತೆ ಅಭಾದಿತ. ಆ ಸ್ಥಾನದೆದುರು ನನ್ನ 'ಮಹಾತ್ಮಗಿರಿ' ಸ್ಪರ್ಧಿಯಲ್ಲ. ನಮ್ಮಿಬ್ಬರ ಕ್ಷೇತ್ರಗಳೂ ಬೇರೆಯಾಗಿದ್ದು, ಯಾವುದೇ ಅಂಶದಲ್ಲಿಯೂ ಒಂದನ್ನೊಂದು ವ್ಯಾಪಿಸುವುದಿಲ್ಲವೆಂದು ಅರಿತುಕೊಳ್ಳಲು ಇದು ಸರಿಯಾದ ಕಾಲ. ಕವಿಗಳು ತಮ್ಮ ಚಿಂತನೆಗಳಿಂದ ಸೃಷ್ಟಿಸಿಕೊಂಡ ಭವ್ಯ

ಲೋಕದಲ್ಲಿ ಜೀವಿಸುವವರು. ನಾನಾದರೂ ಬೇರೆಯವರು ಸೃಷ್ಟಿಸಿರುವ ಚಕ್ರದ ಗುಲಾಮನಾಗಿದ್ದೇನೆ. ಕವಿಗಳು ತಮ್ಮ ಕೊಳಲಿನ ರಾಗಕ್ಕೆ ಗೋಪಿಕೆಯರನ್ನು ಕುಣಿಸಬಲ್ಲರು. ನಾನಾದರೂ ನನ್ನ ಮೆಚ್ಚಿನ ಸೀತೆಯಾದ ಚರಕದ ಹಿಂದೆ ಬಿದ್ದು, ಅದನ್ನು ಹತ್ತುತಲೆಯ ರಾಕ್ಷಸರಾದ ಜಪಾನ್, ಮ್ಯಾಂಚೆಸ್ಟರ್, ಪ್ಯಾರಿಸ್ ಇತ್ಯಾದಿಗಳಿಂದ ಬಿಡುಗಡೆಗೊಳಿಸಲು ಯತ್ನಿಸುತ್ತಿರುವವನು. ಕವಿಗಳು ಸೃಷ್ಟಿಕರ್ತರು: ರೂಪಿಸುತ್ತಾರೆ, ನಾಶ ಮಾಡುತ್ತಾರೆ, ಮತ್ತೆ ನಿರ್ಮಿಸುತ್ತಾರೆ. ನಾನಾದರೂ ಅನ್ವೇಷಕ: ವಸ್ತುವೊಂದನ್ನು ಆವಿಷ್ಕರಿಸಿರುವುದರಿಂದ ಅದಕ್ಕೇ ಅಂಟಿಕೊಳ್ಳಬೇಕು. ಕವಿ ದಿನದಿನವೂ ಹೊಸ ಮತ್ತು ಆಕರ್ಷಕ ವಸ್ತುಗಳನ್ನು ಲೋಕಕ್ಕೆ ಪ್ರದರ್ಶಿಸಬಲ್ಲರು. ನಾನೇನಿದ್ದರೂ ಹಳೆಯದರೊಳಗೆ ಅವಿತಿರುವ ಹಾಗೂ ಜೀರ್ಣಗೊಂಡ ವಸ್ತುಗಳನ್ನಷ್ಟೇ ತೋರಿಸಬಲ್ಲವನು. ಹೊಸದನ್ನು ಸೃಷ್ಟಿಸುವ, ಹೊಳಪಿನ ವಸ್ತುಗಳನ್ನು ಪ್ರದರ್ಶಿಸಬಲ್ಲ ಗಾರುಡಿಗರಿಗೆ ಲೋಕವು ಸಹಜವಾಗಿಯೇ ಗೌರವಯುತ ಸ್ಥಾನವನ್ನು ನೀಡುತ್ತದೆ. ನನ್ನ ಹರಿದಪರಿದ ವಸ್ತುಗಳಿಗೆ ನಾನು ಪ್ರಯತ್ನಪೂರ್ವಕವಾಗಿ ಮೂಲೆಯೊಂದನ್ನು ಹುಡುಕಬೇಕಾಗುತ್ತದೆ. ಈ ಕಾರಣವಾಗಿಯೇ, ನಮ್ಮಿಬ್ಬರ ನಡುವೆ ಸ್ಪರ್ಧೆಯಿಲ್ಲ. ಆದರೆ ನಾವಿಬ್ಬರೂ ನಮ್ಮ ಚಟುವಟಿಕೆಗಳಲ್ಲಿ ಪರಸ್ಪರ ಕೊಡುಕೊಳೆ ಮಾಡುತ್ತೇವೆ ಎಂದು ವಿನಯಪೂರ್ವಕವಾಗಿ ಹೇಳಬಯಸುತ್ತೇನೆ.

ನಿಜವೆಂದರೆ ಕವಿಗೆ ವಿಮರ್ಶೆ ಪರವಾನಗಿ ಇದ್ದಂತೆ. ಅದನ್ನು ಅಕ್ಷರಶಃ ತೆಗೆದು ಕೊಳ್ಳುವವರು ಅಪಾಯಕಾರಿ ಮೂಲೆಯಲ್ಲಿ ಸಿಲುಕುತ್ತಾರೆ. ದೊರೆ ಸಾಲೋಮನ್ ಹೆಣೆದುಕೊಂಡ ಎಲ್ಲ ಕೀರ್ತಿಪತಾಕೆಗಳು ಭೂಮಿಯ ಮೇಲೆ ಅರಳಿದ ನೆಲನೈದಿಲೆ ಗಳಿಗೆ ಸರಿಸಮವಾದುದಾಗಿರಲಿಲ್ಲ ಎನ್ನುತ್ತದೆ ಹಳೆಯ ಕವಿವಾಣಿ. ಈ ಕವಿಯು ಸಹಜ, ಸುಂದರ ಮತ್ತು ಮುಗ್ಧತೆಯ ನೈದಿಲೆ ಹೂವುಗಳೊಂದಿಗೆ, ತನ್ನ ಹಲವು ಒಳ್ಳೆಯ ಕೆಲಸಗಳಿಗೆ ಹೊರತಾಗಿಯೂ ಕಳಂಕಿತನಾಗಿದ್ದ ಸಾಲೋಮನ್‌ನ ವೈಭವವನ್ನು ಹೋಲಿಸುತ್ತಿದ್ದಾನೆ. 'ಸಿರಿವಂತ ದೊರೆಯೊಬ್ಬ ಸ್ವರ್ಗದ ಸಾಮ್ರಾಜ್ಯವನ್ನು ಪ್ರವೇಶಿಸು ವುದಕ್ಕಿಂತ, ಒಂಟೆಯೊಂದು ಸೂಜಿಯ ಕಣ್ಣಿನಿಂದ ಹಾದು ಹೋಗುವುದು ಸುಲಭ' ಎನ್ನುವುದು ಇನ್ನೊಂದು ಕವಿ ಪಡೆದುಕೊಂಡ ಕಾವ್ಯ ಸ್ವಾತಂತ್ರ್ಯದಿಂದ ಹುಟ್ಟಿದ ಸಾಲು. ಯಾವ ಒಂಟೆಯೂ ಸೂಜಿಯ ಕಣ್ಣಿನಿಂದ ಹಾದು ಹೋಗಿಲ್ಲವೆಂಬುದನ್ನು, ಸಿರಿವಂತನಾಗಿದ್ದ ಜನಕ ಸ್ವರ್ಗವನ್ನು ಪಡೆದನೆಂದು ನಾವೆಲ್ಲ ಬಲ್ಲೆವು. ಕವಿಗಳು ಮನುಷ್ಯನ ಹಸನ್ಮುಖವನ್ನು, ಹಲ್ಲುಗಳನ್ನು ದಾಳಿಂಬೆಯ ಬೀಜಗಳಿಗೆ ಹೋಲಿಸಿರು ವುದನ್ನೇ ನೋಡಿ. ಕವಿಯ ಅಭಿವ್ಯಕ್ತಿಯನ್ನು ಅಕ್ಷರಶಃ ತೆಗೆದುಕೊಂಡ ಪಾಪದ ಹೆಣ್ಣುಗಳು ತಮ್ಮ ಮುಖದ ಚೆಲುವನ್ನು, ಹಲ್ಲುಗಳನ್ನು ಕೆಡಿಸಿಕೊಂಡಿರಬೇಕು.

ಸತ್ಯದ ಚಿತ್ರಣವನ್ನು ನೀಡಲು ಕವಿ ಮತ್ತು ಕಲಾವಿದರು ಉತ್ಪ್ರೇಕ್ಷಿಸುವ ಅಧಿಕಾರವನ್ನು ಹೊಂದಿದ್ದಾರೆ. ಹೀಗಾಗಿಯೇ, ಕವಿಗಳು ಚರಕವನ್ನು ತಿರಸ್ಕರಿಸಿರುವುದನ್ನು ಅಕ್ಷರಶಃ ತೆಗೆದುಕೊಳ್ಳುವವರು ಕವಿಗೇ ಅನ್ಯಾಯವನ್ನು ಬಗೆಯುತ್ತಾರೆ. ಮಾತ್ರವಲ್ಲ, ತಾವೇ ಘಾಸಿಗೊಳಗಾಗುತ್ತಾರೆ.

ಕವಿ ರವೀಂದ್ರರು 'ಯಂಗ್ ಇಂಡಿಯಾ' ಪತ್ರಿಕೆಯನ್ನು ಓದಬೇಕೆಂಬ ನಿರೀಕ್ಷೆಯೇನೂ ಇಲ್ಲ. ಆದರೂ, ಚಳವಳಿಯ ಕುರಿತು ಅವರು ಗ್ರಹಿಸಿರುವುದೆಲ್ಲ ಅರಳಿಕಟ್ಟೆ ಮಾತುಗಳಿಂದ. ಹೀಗಾಗಿ, ಚರಕದ ಅತಿ ಆರಾಧನೆಯ ಕುರಿತು ಕಾಲ್ಪನಿಕವಾಗಿ ತಾವು ಊಹಿಸಿರುವುದನ್ನೆಲ್ಲ ಅವರು ತಿರಸ್ಕರಿಸಿದ್ದಾರೆ.

ಉದಾಹರಣೆಗೆ ಹೇಳುವುದಾದರೆ, ಎಲ್ಲರೂ ತಮ್ಮ ಕೆಲಸಗಳನ್ನು ಬಿಟ್ಟು ನೂಲಬೇಕೆಂದು ನಾನು ಬಯಸುತ್ತೇನೆಂದು ಕವಿಗಳು ತಿಳಿದಿರುವುದು. ಅಂದರೆ, ಕವಿಗಳು ತಮ್ಮ ಕಲ್ಪನಾವಿಲಾಸವನ್ನು, ರೈತ ತನ್ನ ಕೃಷಿಯನ್ನು, ವೈದ್ಯ ತನ್ನ ವೈದ್ಯವನ್ನು, ವಕೀಲ ತನ್ನ ಕೆಲಸವನ್ನು ಬಿಟ್ಟು ಚರಕ ನೂಲುವುದು. ನನಗೆ ತಿಳಿದಂತೆ ಎಲ್ಲವನ್ನೂ ಬಿಟ್ಟು ರಾಟೆ ತಿರುಗಿಸಿ ಎಂದು ಈವರೆಗೆ ಹೇಳಿಲ್ಲ. ಬದಲಿಗೆ, 'ಚರಕವನ್ನು ಗೌರವಿಸಿ; ಇಡೀ ದೇಶವಾಸಿಗಳು ದಿನದ ಅರ್ಧಗಂಟೆ ಮಾತ್ರ ನೂಲುವುದಕ್ಕೆ ಮೀಸಲಿಡಿ; ನೂಲುವುದನ್ನು ತ್ಯಾಗದ ಪ್ರತೀಕವಾಗಿ ನೋಡಿ' ಎಂದಿದ್ದೇನೆ. 'ಉಪವಾಸವಿರುವವರು ಜೀವನಕ್ಕಾಗಿಯೂ, ಅರೆಹೊಟ್ಟೆಯ ರೈತ ತನ್ನ ಬಿಡುವಿನ ವೇಳೆಯ ಹೆಚ್ಚುವರಿ ಗಳಿಕೆಗಾಗಿಯೂ ಚರಕದ ನೂಲು ತೆಗೆಯಿರಿ' ಎಂದು ಹೇಳಿದ್ದೇನೆ. ಕವಿಗಳು ತಮ್ಮ ದಿನದ ಅರ್ಧಗಂಟೆಯನ್ನು ಚರಕದಿಂದ ನೂಲನ್ನು ತೆಗೆಯಲು ವ್ಯಯಿಸಿದರೆ ಅವರ ಕಾವ್ಯವು ಇನ್ನಷ್ಟು ಹೊಳಪನ್ನು ಪಡೆಯಬಲ್ಲುದು. ಆಗ ಈಗಿರುವುದಕ್ಕಿಂತ ಉತ್ತಮವಾಗಿ ಬಡಜನರ ಕಥೆವ್ಯಥೆಗಳು ಕಾವ್ಯದಲ್ಲಿ ಪ್ರತಿಫಲನಗೊಳ್ಳಬಲ್ಲವು.

ಚರಕ ದೇಶದೆಲ್ಲೆಡೆ ಮಾರಣಾಂತಿಕ ಏಕರೂಪತೆ ತರುತ್ತದೆ, ಸಾಧ್ಯವಾದರೆ ತಾನದನ್ನು ತಪ್ಪಿಸಬೇಕೆಂದು ಕವಿಗಳು ಯೋಚಿಸುತ್ತಿದ್ದಾರೆ. ಸತ್ಯವೆಂದರೆ ದೇಶದ ಅಸಂಖ್ಯ ಜನರಿಗೆ ಅಗತ್ಯವಾದ ಬದುಕಿನ ಆಸಕ್ತಿ ಮತ್ತು ಸಮರೂಪತೆಯನ್ನು ಚರಕ ಸಾಧಿಸಬಯಸುತ್ತದೆ. ನಿಸರ್ಗದ ಭವ್ಯತೆ ಹಾಗೂ ವೈವಿಧ್ಯತೆಯೊಳಗೆ ಅಡಗಿರುವ ವಿನ್ಯಾಸ, ರೂಪ, ಉದ್ದೇಶದಲ್ಲಿ ಯಾರಾದರೂ ಏಕತೆಯನ್ನು ಕಂಡಾರು. ಯಾವ ಮನುಷ್ಯನೂ ಇನ್ನೊಬ್ಬನ ಪ್ರತಿರೂಪವಲ್ಲ; ಅವಳಿಜವಳಿ ಕೂಡ ಇನ್ನೊಬ್ಬನ ಪ್ರತಿರೂಪವಲ್ಲ. ಆದಾಗ್ಯೂ, ಮಾನವಕುಲಕ್ಕೆ ಅತ್ಯಗತ್ಯವಾದ ಸಾಮಾನ್ಯತೆಯಿರುತ್ತದೆ. ಸಮರೂಪತೆ ಅಥವಾ ಅದ್ವೈತವನ್ನು ಅದರೆಲ್ಲ ಸಹಜ ಮಿತಿ ಹಾಗೂ ಪರಮತರ್ಕ ಸಹಿತವಾಗಿ ವಿವರಿಸಿದವರು ಶಂಕರಾಚಾರ್ಯರು. ಇರುವುದು ಒಂದೇ ಸತ್ಯ,

ಒಂದೇ ಬ್ರಹ್ಮ. ಎಲ್ಲ ರೂಪಗಳೂ ನಶ್ವರ ಎಂದವರು ಬೋಧಿಸಿದರು. ನಾವು ನೋಡುತ್ತಿರುವುದು ಅವಾಸ್ತವ ಅಥವಾ ಅವಾಸ್ತವದ ಹಿಂದಿನ ವಾಸ್ತವ ಎಂಬ ಕುರಿತು ನಾವು ಚರ್ಚಿಸುವ ಅಗತ್ಯವಿಲ್ಲ. ನೀವು ಒಪ್ಪಿಕೊಂಡರೆ ಎರಡೂ ಸರಿ ಎಂದು ಗ್ರಹಿಸಿ, ಅಷ್ಟೇ. ನಾನು ಹೇಳುತ್ತಿರುವುದಿಷ್ಟೇ: ವೈವಿಧ್ಯತೆ ಮತ್ತು ಬಹುತ್ವದ ಹಿಂದೆ ಏಕತೆ ಹಾಗೂ ಅನನ್ಯತೆಯಿದೆ. ಹಾಗೆಂದೇ, ವಿವಿಧ ಕೆಲಸಗಳ ಹಿಂದೆಯೂ ಅತ್ಯಗತ್ಯವಾದ ಸಮರೂಪತೆಯಿದ್ದು ಅದು ಕೂಡ ಕೆಲಸವೇ ಆಗಿದೆ. ಮಾನವಕುಲದ ಬಹುಸಂಖ್ಯಾತರಿಗೆ ಬೇಸಾಯವು ಸಾಮಾನ್ಯವಾಗಿಲ್ಲವೇನು? ಅಂತೆಯೇ, ಇತ್ತೀಚಿನವರೆಗೆ ನೂಲುವಿಕೆ ಕೂಡ ಬಹುಪಾಲು ಜನರ ಕಸುಬಾಗಿತ್ತು.

ಇನ್ನು ಚರಕದ ಸುತ್ತ ಸೋಮಾರಿತನವನ್ನು ತೊರೆದ, ಸಹಕಾರ ತತ್ತ್ವದ ಬೆಲೆಯನ್ನು ಅರಿತ ರಾಷ್ಟ್ರಸೇವಕರಿರುತ್ತಾರೆ. ಇಂಥವರು ಮಲೇರಿಯಾ ವಿರುದ್ಧ ಯುದ್ಧ ಸಾರುತ್ತಾರೆ. ನೈರ್ಮಲ್ಯ ವ್ಯವಸ್ಥೆಯತ್ತ ಗಮನಹರಿಸುತ್ತಾರೆ. ಹಳ್ಳಿಗಳಲ್ಲಿನ ವಿವಾದಗಳನ್ನು ಬಗೆಹರಿಸುತ್ತಾರೆ. ಹಸುವಿನ ತಳಿಗಳ ರಕ್ಷಣೆ ಹಾಗೂ ಅಭಿವೃದ್ಧಿಯನ್ನು ಕೈಗೊಳ್ಳುತ್ತಾರೆ. ಇಂಥ ನೂರಾರು ಅನುಕೂಲಕರ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತಾರೆ. ಎಲ್ಲಿ ಚರಕದ ಕೆಲಸವು ಬೇರುಬಿಟ್ಟಿದೆಯೋ ಅಂಥಲ್ಲಿ ಹಳ್ಳಿಗರ ಸಾಮರ್ಥ್ಯಕ್ಕೆ ತಕ್ಕಂತೆ ಚಟುವಟಿಕೆಗಳು ಗರಿಗೆದರುತ್ತವೆ.

ಕವಿಗಳ ಎಲ್ಲ ವಾದವನ್ನೂ ವಿವರವಾಗಿ ವಿಶ್ಲೇಷಿಸುವುದು ನನ್ನ ಉದ್ದೇಶವಲ್ಲ. ನಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯವಿಲ್ಲದ ವಿಷಯಗಳನ್ನು ಮುಟ್ಟುವುದಿಲ್ಲ. ಆದಾಗ್ಯೂ, ಚರಕದ ಕುರಿತು ನನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತೇನೆ. ಚರಕದ ಕುರಿತು ಕವಿಗಳು ಮಾಡಿರುವ ಕುಹಕಗಳನ್ನು ನಾನೆಲ್ಲಿಯೂ ಹೇಳಿಲ್ಲ. ಚರಕದ ಉತ್ಕೃಷ್ಟತೆಯ ಕುರಿತ ನನ್ನ ಹೇಳಿಕೆಗಳು ಕವಿಗಳ ಚಾಟಿಯೇಟಿಗೆ ಘಾಸಿಗೊಂಡಿಲ್ಲ.

ಅರಳಿಕಟ್ಟೆಯ ಹರಟೆಗಳಿಂದ ಕವಿಗಳು ಆಯ್ದುಕೊಂಡಿರುವ, 'ರಾಮಮೋಹನ ರಾಯ್ ಅವರನ್ನು ನಾನು (ಅಂದರೆ ಗಾಂಧಿ) ವಾಮನನಂತೆ (ಪಿಗ್ಮಿಯಂತೆ) ನೋಡುತ್ತೇನೆ' ಎಂಬ ಮಾತು ಮಾತ್ರ ನನ್ನನ್ನು ನೋಯಿಸಿದೆ. ಮಹಾನ್ ಸುಧಾರಕರಾದ ಆ ಮಹನೀಯರನ್ನು ಕುರಿತು ನಾನೆಲ್ಲಿಯೂ ವಾಮನ ಎಂದು ವಿವರಿಸಿಲ್ಲ. ಅವರಿಗೆ ಅಗೌರವವನ್ನೂ ತೋರಿಲ್ಲ. ಅವರು ಕವಿಗಳಿಗೆ ಹೇಗೆ ತ್ರಿವಿಕ್ರಮರೋ ಹಾಗೆ ನನಗೂ ತ್ರಿವಿಕ್ರಮರೇ. ರಾಮಮೋಹನರ ಹೆಸರನ್ನು ಬಳಸಿದ ಒಂದು ಸಂದರ್ಭ ನೆನಪಿಗೆ ಬರುತ್ತಿದೆ. ನಾಲ್ಕು ವರ್ಷಗಳ ಹಿಂದೆ ಕಟಕ್‌ನ ಮರಳತಡಿಯಲ್ಲಿ, ಪಾಶ್ಚಿಮಾತ್ಯ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯದಲ್ಲಿ. ನನಗೆ ನೆನಪಿರುವಂತೆ, ಪಾಶ್ಚಿಮಾತ್ಯ ಶಿಕ್ಷಣವಿಲ್ಲದೆ ಸಾಂಸ್ಕೃತಿಕ ಉನ್ನತಿ ಸಾಧಿಸಬಹುದು

ಎಂದು ಯಾರೋ ರಾಮಮೋಹನ ರಾಯ್‌ರನ್ನು ಉಲ್ಲೇಖಿಸಿದಾಗ, ಉಪನಿಷದ್‌ಗಳ ಅನಾಮಿಕ ಲೇಖಕರ ಹೇಳಿಕೆಗಳ ಮುಂದೆ ಅವರು ವಾಮನನಂತೆ ಎಂದು ಹೇಳಿದ್ದೆ. ಇದು ರಾಮಮೋಹನರನ್ನು ನಾನು ವಾಮನನಂತೆ ಕಾಣುವುದಕ್ಕಿಂತ ಭಿನ್ನವಾದುದು. ಮಿಲ್ಟನ್ ಹಾಗೂ ಶೇಕ್ಸ್‌ಪಿಯರ್‌ಗೆ ಹೋಲಿಸಿದರೆ ಟೆನಿಸನ್ ವಾಮನನಂತೆ ಎಂದು ಹೇಳುವಲ್ಲಿ ಸಣ್ಣತನವಿದೆ ಎಂದು ನನಗನ್ನಿಸುವುದಿಲ್ಲ. ಇಬ್ಬರ ಶ್ರೇಷ್ಠತೆಯನ್ನೂ ಎತ್ತಿ ಹಿಡಿಯುವವನು ನಾನು. ಅವರಿಗೇ ತಿಳಿದಿರುವಂತೆ ನಮ್ಮ ನಡುವಿನ ಭಿನ್ನಾಭಿಪ್ರಾಯಗಳ ಹೊರತಾಗಿಯೂ ನಾನು ಕವಿಗಳನ್ನು ಮೆಚ್ಚುತ್ತೇನೆ. ಬಂಗಾಳದಲ್ಲಿ ಸುಧಾರಣಾ ಚಳವಳಿಯನ್ನು ಸಾಧ್ಯವಾಗಿಸಿದ ಮಹಾವ್ಯಕ್ತಿಗೆ ಅಗೌರವ ತೋರುವುದುಂಟೆ? ಅಂತೆಯೇ, ಶ್ರೇಷ್ಠ ಹಣ್ಣಿನಂತಿರುವ ಕವಿಗಳಿಗೂ ಕೂಡ ಅಗೌರವ ತೋರುವುದುಂಟೆ?

('ಯಂಗ್ ಇಂಡಿಯಾ', ನವೆಂಬರ್ ೧೯೨೫)

ಕನ್ನಡಕ್ಕೆ: ಕೇಶವ ಮಳಗಿ

೧೦೨

ಅಸಹಕಾರ ಚಳುವಳಿ: ಕವಿ ರವೀಂದ್ರರಿಗೆ ತಾತ್ವಿಕ ಉತ್ತರ

[ರವೀಂದ್ರನಾಥ ಠಾಕೂರರು ಸಹಕಾರ ಮತ್ತು ಅಸಹಕಾರಗಳ ಕುರಿತು ಎತ್ತಿದ್ದ ತಾತ್ವಿಕ ಪ್ರಶ್ನೆಗಳಿಗೆ ಗಾಂಧಿಯವರ ಉತ್ತರ.]

ಲಾರ್ಡ್ ಹಾರ್ಡಿಂಜ್‌ರಿಂದ ಏಶಿಯಾ ಕವಿಯೆಂದು ಕರೆಯಿಸಿಕೊಂಡ ಡಾ. ಠಾಕೂರರು ತ್ವರಿತವಾಗಿ ವಿಶ್ವಕವಿಯಾಗುತ್ತಿದ್ದಾರೆ. ಬೆಳೆಯುತ್ತಿರುವ ಪ್ರತಿಷ್ಠೆ ಅವರ ಹೊಣೆಗಾರಿಕೆಯನ್ನೂ ಹೆಚ್ಚಿಸುತ್ತಿದೆ. ಅವರ ಸರ್ವೋತ್ಕೃಷ್ಟ ಸೇವೆಯೆಂದರೆ ಕಾವ್ಯದ ಮೂಲಕ ಭಾರತದ ಸಂದೇಶವನ್ನು ವಿಶ್ವಕ್ಕೆ ಪ್ರಕಟಪಡಿಸುತ್ತಿರುವುದು. ಆ ಕಾರಣವಾಗಿಯೇ, ಕವಿಗಳು ಭಾರತವು ದುರ್ಬಲ ವಾದ ಅಥವಾ ಹುಸಿಯಾದ ಸಂದೇಶವನ್ನು ನೀಡಬಾರದು ಎಂಬ ವಿಷಯದಲ್ಲಿ ಪ್ರಾಮಾಣಿಕ ಕಾತರವನ್ನು ಹೊಂದಿದ್ದಾರೆ. ದೇಶದ ಖ್ಯಾತಿಯ ಬಗ್ಗೆ ಸಹಜವಾಗಿಯೇ ಅವರಿಗೆ ಅಸೂಯೆ. ಸದ್ಯದ ಅಸಹಕಾರ ಆಂದೋಲನದೊಂದಿಗೆ ಗುರುತಿಸಿಕೊಳ್ಳಲು ತಾವು ಹೆಣಗಾಡಿ ದಿಗ್ಭ್ರಮೆಗೊಂಡಿದ್ದಾಗಿ ಕವಿ ತಪ್ಪೊಪ್ಪಿಕೊಂಡಿದ್ದಾರೆ. ಅಸಹಕಾರದ ಗೊಂದಲ-ಕೋಲಾಹಲದಲ್ಲಿ ಅವರ ತಂಬೂರಿಗೆ ಸ್ವರ ಸಿಗುತ್ತಿಲ್ಲ. ತಮ್ಮ ಮೂರು ಪ್ರಬಲ ಪತ್ರಗಳಲ್ಲಿ ತಮ್ಮ ಅಪನಂಬಿಕೆಗಳಿಗೆ ಅಭಿವ್ಯಕ್ತಿ ನೀಡಲು ತಿಣುಕಾಡಿದ್ದಾರೆ. ಕೊನೆಗೆ, ಅಸಹಕಾರ ಆಂದೋಲನವು ಭಾರತದ ಕಾಣ್ಕೆಯ ಘನತೆಗೆ ತಕ್ಕುನಾದುದಲ್ಲ, ಅದೊಂದು ನಿರಾಕರಣೆಯ ಮತ್ತು ಹತಾಶೆಯ ಸಿದ್ಧಾಂತವೆಂಬ ನಿರ್ಣಯಕ್ಕೆ ಬಂದಿದ್ದಾರೆ. ಇದೊಂದು ಪ್ರತ್ಯೇಕತೆಯ ಅಥವಾ ಅನನ್ಯವಾದ, ಸಂಕುಚಿತವಾದ ಇಲ್ಲವೆ ನಕಾರಾತ್ಮಕವಾದ ವಿಚಾರವಾಗಿದೆ ಎಂಬ ಭಯ ಅವರದು.

ಭಾರತದ ಗೌರವದ ಕುರಿತು ಕವಿಗಿರುವ ಉತ್ಕೃಷ್ಟವಾದ ಅಸೂಯೆಯ ಕುರಿತು ಯಾವುದೇ ಭಾರತೀಯನು ಹೆಮ್ಮೆಯನ್ನೇ ಪಡಬೇಕು. ಅವರು ತಮ್ಮ ಸಂದೇಹಗಳನ್ನು ಸುಂದರವೂ, ಸ್ಪಷ್ಟವೂ ಆದ ಭಾಷೆಯಲ್ಲಿ ಬರೆದು ಕಳಿಸಿದ್ದರೆ ಒಳ್ಳೆಯದಿತ್ತು. ಕವಿಗಳ ಎಲ್ಲ ಸಂದೇಹಗಳಿಗೆ ವಿನೀತನಾಗಿ ಉತ್ತರಿಸಲು ಯತ್ನಿಸುವೆ. ಕವಿಗೆ ಹಾಗೂ ಅವರ ವಾಗ್ಮಿತೆಗೆ ಮರುಳಾದ ಓದುಗರಿಗೆ ಇದನ್ನು ನಾನು ಮನದಟ್ಟು ಮಾಡಲು ಸಾಧ್ಯವಾಗದಿರಬಹುದು. ಆದರೆ, ಅಸಹಕಾರ ಚಳವಳಿಯು ಕವಿ ರವೀಂದ್ರರು ಭಾವಿಸಿದಂಥ ಯಾವುದೇ ಭಯಗಳನ್ನೂ ಒಳಗೊಂಡಿರದ ಪರಿಕಲ್ಪನೆಯಾಗಿದೆ. ಮತ್ತು ಅಸಹಕಾರವನ್ನು ಅಪ್ಪಿಕೊಂಡಿರುವುದಕ್ಕೆ ಭಾರತವು ಅವಮಾನ ಪಡುವಂಥ ಯಾವ ಕಾರಣಗಳೂ ಇಲ್ಲವೆಂದು ಕವಿಗೆ ಮತ್ತು ದೇಶಕ್ಕೆ ತಿಳಿಸಬಯಸುತ್ತೇನೆ. ಅಳವಡಿಸಿಕೊಳ್ಳುವಾಗ ಒಂದೊಮ್ಮೆ ಅಂತಿಮವಾಗಿ ವಿಫಲವಾದಂತೆ ಕಂಡುಬಂದರೆ ಅದು ಸಿದ್ಧಾಂತದ ವೈಫಲ್ಯವೇ ಹೊರತು ಸತ್ಯದ ಸೋಲು ಅಲ್ಲ. ಅಸಹಕಾರ ಪರಿಕಲ್ಪನೆಯು ಕಾಲಕ್ಕಿಂತ ಮುಂದಾಗಿಯೇ ಬಂದಿರಬಹುದು. ಹಾಗಿದ್ದರೆ, ಭಾರತ ಮತ್ತು ವಿಶ್ವಗಳು ಕಾಯಬೇಕಾಗುತ್ತದೆ. ಆದರೆ, ಭಾರತಕ್ಕಂತೂ ಹಿಂಸೆ ಮತ್ತು ಅಸಹಕಾರಗಳ ನಡುವೆ ಆಯ್ಕೆಯ ಅವಕಾಶಗಳೇ ಇದ್ದಂತಿಲ್ಲ.

ಹಾಗೆಂದು, ಕವಿಗಳು ಅಸಹಕಾರ ಚಳವಳಿಯು ಭಾರತ ಮತ್ತು ಪಶ್ಚಿಮಗಳ ನಡುವೆ ಚೀನಾಗೋಡೆ ನಿರ್ಮಿಸುತ್ತದೆ ಎಂದು ಆತಂಕ ಪಡಬೇಕಿಲ್ಲ. ಬದಲಿಗೆ, ಅಸಹಕಾರವು ನಿಜವಾಗಿಯೂ ಗೌರವಯುತವಾದ, ಪರಸ್ಪರ ವಿಶ್ವಾಸ ಹಾಗೂ ನಂಬಿಕೆಗಳಿರುವಂಥ ನೆಲೆಗಟ್ಟನ್ನು ಒದಗಿಸಲಿದೆ. ಸದ್ಯದ ಹೋರಾಟವು ಕಡ್ಡಾಯ ಸಹಕಾರ, ಏಕಮುಖ ಸಂಯೋಜನೆ, ಶಸ್ತ್ರಾಸ್ತ್ರಗಳಿಂದ ನಡೆಸುವ ಶೋಷಣೆ, ನಾಗರಿಕತೆಯ ಹೆಸರಿನಲ್ಲಿ ಮಾರುವೇಷದ ದಬ್ಬಾಳಿಕೆಗಳ ವಿರುದ್ಧವಾಗಿದೆ. ಅಸಹಕಾರ ಹೋರಾಟವು ಒಪ್ಪಿಗೆಯಿಲ್ಲದೆ ಕೆಡುಕಿನಲ್ಲಿ ಪಾಲುದಾರರಾಗುವುದರ ವಿರುದ್ಧವಾಗಿದೆ.

ಕವಿಯ ಮುಖ್ಯ ಕಳಕಳಿ ವಿದ್ಯಾರ್ಥಿಗಳ ಕುರಿತದ್ದಾಗಿದೆ. ಸರ್ಕಾರಿ ಶಾಲೆಗಳಿಂದ ಬೇರೊಂದು ಕಲಿಕಾ ತಾಣಕ್ಕೆ ಹೋಗುವ ಮೊದಲೇ ವಿದ್ಯಾರ್ಥಿಗಳನ್ನು ಇದಕ್ಕೆ ಎಳೆಯಬಾರದಿತ್ತು ಎಂಬುದು ಅವರ ನಿಲುವು. ಅದಕ್ಕೆ ನನ್ನ ವಿರೋಧವಿದೆ. ನನಗೆಂದೂ ಸಾಹಿತ್ಯ ರಚನೆಯ ಕುರಿತು ಮಾಂತ್ರಿಕಶಕ್ತಿಯ ತರಬೇತಿ ದೊರಕಿಲ್ಲ. ಆದರೆ ಅಂಥ ತರಬೇತಿಯು ಒಂದಿಂಚು ಕೂಡ ಉನ್ನತ ಮಟ್ಟದ ನೈತಿಕತೆಯನ್ನು ಹೆಚ್ಚಿಸಲಾರದು ಎಂದು ಅನುಭವದಿಂದ ಕಂಡುಕೊಂಡಿದ್ದೇನೆ. ಸನ್ನಡತೆಯನ್ನು ರೂಢಿಸಿಕೊಳ್ಳುವುದಕ್ಕೂ ಸಾಹಿತ್ಯ ತರಬೇತಿಗೂ ಯಾವುದೇ ಸಂಬಂಧವಿಲ್ಲ. ಸರ್ಕಾರಿ ಶಾಲೆಗಳು ನಮ್ಮನ್ನು ಭಯಭೀತರನ್ನಾಗಿಸಿವೆ. ನಮ್ಮಲ್ಲಿ ಅಸಹಾಯಕತೆ ಹುಟ್ಟಿಸಿ

ದೈವರಹಿತರನ್ನಾಗಿಸಿ, ಅತೃಪ್ತರನ್ನಾಗಿ ಮಾಡಿವೆ. ಮತ್ತು ಈ ಅತೃಪ್ತಿಗೆ ಶಮನವನ್ನು ನೀಡಲು ಅಸಮರ್ಥವಾಗಿದ್ದು, ಅವಲಂಬಿತರನ್ನಾಗಿಸಿವೆ. ನಾವು ಏನಾಗಬೇಕೆಂದಿದ್ದೆವೋ– ಕಾರಕೂನರು ಮತ್ತು ವ್ಯಾಖ್ಯಾನಕಾರರು–ಅದನ್ನೇ ಮಾಡಿವೆ. ಆಡಳಿತಕ್ಕೆ ಒಳಪಟ್ಟವರ ಸ್ವಯಂ ಸಹಯೋಗದ ಮೇಲೆ ಸರ್ಕಾರವು ತನ್ನ ಯಶಸ್ಸನ್ನು ಕಟ್ಟುತ್ತದೆ. ನಮ್ಮನ್ನು ಗುಲಾಮ ಸ್ಥಿತಿಯಲ್ಲಿಡುವ ಸರ್ಕಾರದೊಂದಿಗೆ ಸಹಕರಿಸದಿರುವುದು ದೋಷಪೂರ್ಣವೇನು? ದೇಶದ ಯುವಕರು ಭವಿಷ್ಯದ ಭರವಸೆಯಾಗಿದ್ದಾರೆ. ಸರ್ಕಾರವು ಕೇಡಿನಿಂದ ತುಂಬಿದೆ ಎಂದು ನಾವು ಅರಿತುಕೊಂಡಿದ್ದೇವೆ. ಅಂಥ ಕೆಡುಕಿನ ಸರ್ಕಾರದೊಂದಿಗೆ ನಮ್ಮ ಮಕ್ಕಳ ಸಹಯೋಗ ಅತ್ಯಂತ ಅಪಾಯಕಾರಿ ಎಂದು ನಾನು ಒತ್ತಿ ಹೇಳುತ್ತೇನೆ.

ಯುವಕರು ಚಳವಳಿಯಲ್ಲಿ ಭಾಗವಹಿಸುವಂತೆ ನೀಡಿರುವ ಕರೆಗೆ ಕವಿಗಳು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಅಸಹಕಾರ ಚಳವಳಿಯ ಕುರಿತ ಅವರ ನಿಲುವಿಗೆ ಈ ನಿಲುವು ವ್ಯತಿರಿಕ್ತವಾಗಿದೆ. ನಕಾರಾತ್ಮಕವಾಗಿರುವ ಪ್ರತಿಯೊಂದೂ ಅವರಿಗೆ ಭಯಾನಕವಾಗಿ ಕಾಣುತ್ತದೆ. ಧರ್ಮದ ನಕಾರಾತ್ಮಕ ಅಂಶಗಳ ವಿರುದ್ಧ ಅವರ ಮನಸ್ಸು ಬಂಡೇಳಲು ಹಾತೊರೆಯುತ್ತದೆ. ನಾವು ಸರ್ಕಾರಕ್ಕೆ 'ಇಲ್ಲ' ಎಂದು ಹೇಳುವ ಅಧಿಕಾರವನ್ನು ಕಳೆದುಕೊಂಡುಬಿಟ್ಟಿದ್ದೇವೆ. ಸರ್ಕಾರಕ್ಕೆ 'ಇಲ್ಲ' ಎಂದು ಹೇಳುವುದು ಅವಿಶ್ವಾಸ ಸೂಚಿಸುವ ಅಪರಾಧವಾಗಿದೆ. ಈಗಿನ ಪ್ರಜ್ಞಾಪೂರ್ವಕವಾದ ನಿರಾಕರಣೆಯು ಹೊಲದಲ್ಲಿ ಬೀಜ ಬಿತ್ತುವ ಮುಂಚಿನ ಕಳೆ ಕೀಳುವ ಕೆಲಸವಾಗಿದೆ. ಬಿತ್ತನೆಯ ಮೊದಲು ನೆಲ ಹಸನು ಮಾಡುವುದು ಅತ್ಯಗತ್ಯ. ದೇಶದ ಅಸಹಕಾರ ಚಳವಳಿಯು, ಸರ್ಕಾರವು ಅದರಲ್ಲಿ ತನ್ನದೇ ರೀತಿಯಲ್ಲಿ ಪಾಲ್ಗೊಳ್ಳಲು ನೀಡಿರುವ ಆಹ್ವಾನವಾಗಿದೆ. ಅಸಹಕಾರ ಮಂಡಿಸುವುದು ಯಾವುದೇ ದೇಶದ ಹಕ್ಕಾಗಿದ್ದು, ಪ್ರತಿಕ್ರಿಯಿಸುವುದು ಉತ್ತಮ ಸರ್ಕಾರದ ಕರ್ತವ್ಯವಾಗಿದೆ. ಅಸಹಕಾರದ ಮೂಲಕ ನಿಮ್ಮ ಆರೈಕೆಯ ಕುರಿತು ನಾವು ಸಂತೃಪ್ತರಾಗಿಲ್ಲವೆಂದು ಹೇಳುವುದು ಸರ್ಕಾರಕ್ಕೆ ನೀಡುವ ಎಚ್ಚರಿಕೆಯಾಗಿದೆ.

ರಾಷ್ಟ್ರವು ಅಸಹಜವೂ, ಅಧಾರ್ಮಿಕವೂ ಆದ ಹಿಂಸಾ ಸಿದ್ಧಾಂತದ ಬದಲು, ಸಹಜವೂ, ನಿರುಪದ್ರವಿಯೂ ಆದ ಧಾರ್ಮಿಕ ಸಿದ್ಧಾಂತವಾದ ಅಸಹಕಾರವನ್ನು ಆಯ್ಕೆ ಮಾಡಿಕೊಂಡಿದೆ. ಹಾಗೊಮ್ಮೆ, ಭಾರತವು ಕವಿಗಳ ಕನಸಿನ ಸ್ವರಾಜ್ಯವನ್ನು ಪಡೆದುಕೊಳ್ಳುವುದೇ ಆದಲ್ಲಿ ಅದು ಅಹಿಂಸೆ ಮತ್ತು ಅಸಹಕಾರದ ಮೂಲಕ. ಭಾರತವು ತನ್ನ ಪ್ರತಿಜ್ಞೆಗೆ ಬದ್ಧವಾಗಿದ್ದಲ್ಲಿ ಅದು ಅಹಿಂಸೆ, ಅಸಹಕಾರಗಳ ಮೂಲಕವೇ ಗುರಿಯನ್ನು ಸಾಧಿಸುತ್ತದೆ ಎಂಬ ವಿಶ್ವಾಸವನ್ನಿಟ್ಟು ಕವಿಗಳು ಆ ಸಂದೇಶವನ್ನು

ವಿಶ್ವಕ್ಕೆ ನೀಡಲಿ. ಕವಿಗಳು ದೇಶಭಕ್ತಿಗೆ ಅರ್ಥವನ್ನು ನೀಡಲು ಹಾತೊರೆಯುತ್ತಿದ್ದಾರೆ. ಅಸಹಕಾರವು ಆ ಅರ್ಥವನ್ನು ನೀಡುತ್ತದೆ. ಭಾರತವು ಯುರೋಪಿನ ಮುಂದೆ ಮಂಡಿಯೂರಿ ಕುಳಿತುಕೊಳ್ಳುವುದು ನಾಗರಿಕತೆಗೆ ಯಾವುದೇ ಭರವಸೆಯನ್ನೂ ನೀಡದು. ಭಾರತವು ನರಳುತ್ತಿರುವ ವಿಶ್ವಕ್ಕೆ ನೀಡಲು ಶಾಂತಿ ಮತ್ತು ಸ್ವಾನುಭೂತಿಯ ಸಂದೇಶವನ್ನು ಹೊಂದಿದೆ. ಈ ಸಂದೇಶವನ್ನು ಪಸರಿಸಲು ಅಸಹಕಾರವು ದೇಶಕ್ಕೆ ವೇದಿಕೆಯನ್ನು ಒದಗಿಸಲಿದೆ.

(ಯಂಗ್ ಇಂಡಿಯಾ, ಜೂನ್ ೧, ೧೯೨೧)

ಕನ್ನಡಕ್ಕೆ: ಕೇಶವ ಮಳಗಿ

೧೦೩

ಅಂಬೇಡ್ಕರ್ ಅವರ 'ಜಾತಿವಿನಾಶ' ಚಿಂತನೆ: ಪ್ರತಿಕ್ರಿಯೆ

[ಲಾಹೋರ್ ಮೂಲದ ಜಾತ್-ಪಾತ್-ತೋಡಕ್ ಮಂಡಳವು ೧೯೩೬ರಲ್ಲಿ ಸಂಘಟಿಸಲಿದ್ದ ತನ್ನ ವಾರ್ಷಿಕ ಅಧಿವೇಶನಕ್ಕೆ ಅಧ್ಯಕ್ಷ ಸ್ಥಾನವನ್ನು ವಹಿಸಬೇಕೆಂದು ಬಿ.ಆರ್.ಅಂಬೇಡ್ಕರ್ ಅವರನ್ನು ಕೇಳಿಕೊಂಡಿತು. ಆಹ್ವಾನಕ್ಕೆ ಒಪ್ಪಿಗೆ ಸೂಚಿಸಿ, ಅಂಬೇಡ್ಕರ್ ಅವರು ಅಧ್ಯಕ್ಷ ಭಾಷಣವನ್ನು ಸಿದ್ಧಪಡಿಸಿಕೊಂಡರು. ಆದರೆ, ಮಂಡಳದ ಸದಸ್ಯರ ಮತ್ತು ಇತರ ಹಿಂದೂ ಸಮುದಾಯಗಳ ನಾಯಕರುಗಳಿಂದ ಪ್ರತಿರೋಧ ವ್ಯಕ್ತವಾದುದರಿಂದ ಅವರು ಆ ಸಮಾವೇಶದ ಅಧ್ಯಕ್ಷತೆ ವಹಿಸಿ ಉಪನ್ಯಾಸ ನೀಡುವ ಪ್ರಮೇಯ ಬರಲಿಲ್ಲ. ಅಂಬೇಡ್ಕರರು ಮೇ ೧೯೩೬ರಲ್ಲಿ ಆ ಉಪನ್ಯಾಸವನ್ನು 'ಅನ್ನಿಹಿಲೇಶನ್ ಆಫ್ ಕಾಸ್ಟ್' ಎಂಬ ಹೆಸರಲ್ಲಿ ತಮ್ಮದೇ ಹಣದಿಂದ ಹೊತ್ತಿಗೆಯಾಗಿ ಪ್ರಕಟಿಸಿದರು. ಉಪನ್ಯಾಸವನ್ನು ಮೆಚ್ಚಿಕೊಂಡ ಗಾಂಧಿ 'ಹರಿಜನ್' ಪತ್ರಿಕೆಯಲ್ಲಿ ಆ ಕುರಿತು ವಿಮರ್ಶಾತ್ಮಕ ಟಿಪ್ಪಣಿಯನ್ನು ಪ್ರಕಟಿಸಿದರು. ಅವುಗಳಿಗೆ ಅಂಬೇಡ್ಕರ್ ಉತ್ತರ ನೀಡಿದ್ದು ಈಗ ಇತಿಹಾಸ]

ಕಳೆದ ಮೇ ಮಾಸದಲ್ಲಿ ಡಾ. ಅಂಬೇಡ್ಕರ್ ಅವರು ಲಾಹೋರ್‌ನಲ್ಲಿ ಜರುಗಬೇಕಿದ್ದ ಜಾತ್-ಪಾತ್-ತೋಡಕ್ ವಾರ್ಷಿಕ ಅಧಿವೇಶನದ ಅಧ್ಯಕ್ಷತೆ ವಹಿಸಬೇಕಿತ್ತೆಂದು ಓದುಗರು ಬಲ್ಲರಷ್ಟೇ. ಆದರೆ ಅಂಬೇಡ್ಕರ್‌ರ ಅಧ್ಯಕ್ಷ ಮಾತುಗಳನ್ನು ಒಪ್ಪಲು ಸಾಧ್ಯವಿಲ್ಲವೆಂದು ಸ್ವಾಗತ ಸಮಿತಿ ಭಾವಿಸಿದ್ದರಿಂದ ಅಧಿವೇಶನವನ್ನೇ ರದ್ದುಗೊಳಿಸಲಾಯಿತು. ತಾವೇ ಆಯ್ಕೆ ಮಾಡಿದ ಅಧ್ಯಕ್ಷರ ಮಾತುಗಳು ಆಕ್ಷೇಪಾರ್ಹವೆನ್ನುವ ಕಾರಣಕ್ಕೆ ಅಧಿವೇಶನವನ್ನೇ ರದ್ದುಗೊಳಿಸುವುದು ಪ್ರಶ್ನಾರ್ಹ. ಜಾತಿ ಹಾಗೂ ಹಿಂದೂ ಗ್ರಂಥಗಳ ಕುರಿತು ಅಂಬೇಡ್ಕರ್ ಅವರ ಅಭಿಪ್ರಾಯವೇನೆಂಬುದನ್ನು ಸಮಿತಿ ಅರಿತಿತ್ತು. ಅಷ್ಟೇ ಅಲ್ಲ, ಅವರು ಹಿಂದೂಧರ್ಮವನ್ನು ತ್ಯಜಿಸಲು ನಿಸ್ಸಂದೇಹವಾಗಿ ನಿರ್ಧರಿಸಿದ್ದಾರೆಂಬುದನ್ನೂ ತಿಳಿದಿತ್ತು. ಅಂಬೇಡ್ಕರ್ ಸಿದ್ಧಪಡಿಸಿದ್ದ ಅಧ್ಯಕ್ಷೀಯ ಮಾತುಗಳಿಗಿಂತ ಕಡಿಮೆಯಾದುದನ್ನು ಅವರಿಂದ ನಿರೀಕ್ಷಿಸಲು ಸಾಧ್ಯವೇ

ಇಲ್ಲ. ಸಮಾಜದಲ್ಲಿ ವಿಶಿಷ್ಟ ಸ್ಥಾನವೊಂದನ್ನು ತನ್ನದಾಗಿಸಿಕೊಂಡಿರುವ ವ್ಯಕ್ತಿಯೋರ್ವರ ಸ್ವಂತಿಕೆಯ ದೃಷ್ಟಿಕೋನವನ್ನು ಸಾರ್ವಜನಿಕರು ಅರಿಯುವ ಅವಕಾಶವನ್ನು ಸಮಿತಿಯು ತಪ್ಪಿಸಿತು ಅನ್ನಿಸುತ್ತದೆ. ಭವಿಷ್ಯದಲ್ಲಿ ಅವರು ಯಾವುದೇ ರೀತಿಯ ಹೆಸರನ್ನು ಪಡೆಯಲಿ, ಅಂಬೇಡ್ಕರ್ ಮರೆಯಬಾರದಂಥ ವ್ಯಕ್ತಿ.

ಸ್ವಾಗತ ಸಮಿತಿಯಿಂದ ಡಾ.ಅಂಬೇಡ್ಕರ್ ಅವರೇನೂ ದಂಡನೆಗೆ ಒಳಗಾಗರು. ತಮ್ಮದೇ ಹಣದಲ್ಲಿ ಈ ಅಧ್ಯಕ್ಷ ನುಡಿಗಳನ್ನು ಪ್ರಕಟಿಸುವ ಮೂಲಕ ತಮ್ಮನ್ನು ತಿರಸ್ಕರಿಸಿರುವುದಕ್ಕೆ ಅವರು ತಕ್ಕ ಉತ್ತರವನ್ನೇ ನೀಡಿದ್ದಾರೆ...

ಯಾವ ಸುಧಾರಕರೂ ಈ ಭಾಷಣವನ್ನು ಕಡೆಗಣಿಸಲಾರರು. ಇದನ್ನು ಓದುವ ಮೂಲಕ ಕಂದಾಚಾರಿಗಳು ಲಾಭವನ್ನೇ ಪಡೆಯುವರು. ಇದರರ್ಥ ಭಾಷಣದಲ್ಲಿ ಆಕ್ಷೇಪಾರ್ಹ ಅಂಶಗಳೇ ಇಲ್ಲವೆಂದಲ್ಲ. ಗಂಭೀರವಾದ ಆಕ್ಷೇಪಗಳಿಗೆ ಅವಕಾಶವಿರುವುದರಿಂದಲೇ ಇದನ್ನು ಮನನ ಮಾಡಬೇಕು. ಡಾ. ಅಂಬೇಡ್ಕರರು ಹಿಂದೂಧರ್ಮಕ್ಕೆ ಸವಾಲಾಗಿದ್ದಾರೆ... ಸವರ್ಣೀಯರಿಂದ ತಾವು ಮತ್ತು ತಮ್ಮ ಸಮುದಾಯಗಳು ಅನುಭವಿಸಿದ ನೋವಿನಿಂದಾಗಿ ಸವರ್ಣೀಯರನ್ನು ಮಾತ್ರವಲ್ಲದೆ, ಸವರ್ಣೀಯರ ಧರ್ಮ ಮತ್ತು ತಲಾಂತರದಿಂದ ಬಂದ ಸಮಾನ ಅಂಶಗಳನ್ನೇ ಅವರು ತೊರೆಯಲು ನಿರ್ಣಯಿಸಿದ್ದಾರೆ...

ಇದೇನೂ ಅಂಥ ಅಚ್ಚರಿಯಲ್ಲ. ಯಾರೇ ಆದರೂ ಒಂದು ವ್ಯವಸ್ಥೆಯನ್ನು ಇಲ್ಲವೇ ಸಂಸ್ಥೆಯನ್ನು ಅದನ್ನು ಪ್ರತಿನಿಧಿಸುವವರ ವರ್ತನೆಯನ್ನು ನೋಡಿ ಅಳೆಯುತ್ತಾರೆ. ಹೆಚ್ಚೇನು, ಬಹುಪಾಲು ಸವರ್ಣೀಯ ಹಿಂದೂಗಳು ತಮ್ಮದೇ ಧರ್ಮದ, ಅಸ್ಪೃಶ್ಯರೆಂದು ಕರೆಯಲಾಗುವ ಜನರೊಂದಿಗೆ ಅಮಾನವೀಯವಾಗಿ ನಡೆದುಕೊಂಡಿದ್ದಾರೆಂದು ಡಾ. ಅಂಬೇಡ್ಕರ್ ಗುರುತಿಸಿದ್ದಾರೆ. ಅಸ್ಪೃಶ್ಯತೆ ಮತ್ತು ಇತರೆ ನಂಬಿಕೆಗಳಿಗೆ ಗ್ರಂಥಗಳೇ ಆಧಾರವಾಗಿವೆ ಎಂದು ಕಂಡುಕೊಂಡಿದ್ದಾರೆ. ಈ ಭಾಷಣದಲ್ಲಿ ಲೇಖಕರು ತಮ್ಮ ಮೂರು ನೆಲೆಯ ಸಮರ್ಥನೆಗೆ ಅಧ್ಯಾಯ, ಶ್ಲೋಕವನ್ನು ಉಲ್ಲೇಖಿಸಿದ್ದಾರೆ...

ನಂಬಿಕೆಗೆ ಜೀವವನ್ನೇ ಪಣವಾಗಿಡುವ ಯಾವ ಹಿಂದೂ ಸಹ ಈ ಸಮರ್ಥನೆಯನ್ನು ಕಡೆಗಣಿಸಲಾರ. ಇಂಥ ಜುಗುಪ್ಸೆಯಲ್ಲಿ ಅಂಬೇಡ್ಕರ್ ಏಕಾಂಗಿಯಲ್ಲ. ಅವರು ದೃಢ ನಿಲುವಿನ ಪ್ರತಿಪಾದಕ ಹಾಗೂ ಅಂಥವರಲ್ಲಿ ಅತ್ಯಂತ ಯೋಗ್ಯ. ಅವರು ಎಂದೂ ಬಿಟ್ಟುಕೊಡದ ವ್ಯಕ್ತಿತ್ವದವರು. ನಾಯಕರ ಸಾಲಿನಲ್ಲಿ ಅದ್ವಿತೀಯ ಏಕಾಂಗಿಯಂತೆ ಕಂಡರೂ ಸಣ್ಣ ಸಮುದಾಯದ ಪ್ರತಿನಿಧಿ. ಆದರೆ ಅವರ ಮಾತುಗಳು ದಮನಿತ ವರ್ಗಗಳ ನಾಯಕರಲ್ಲಿ ಅನುರಣಿಸುವವು...

ಸವರ್ಣೀಯರು ತಮ್ಮ ನಂಬಿಕೆ ಹಾಗೂ ವರ್ತನೆಯನ್ನು ಸರಿಪಡಿಸಿಕೊಳ್ಳಬೇಕಿದೆ. ಎಲ್ಲಕ್ಕಿಂತ ಮಿಗಿಲಾಗಿ ಸವರ್ಣೀಯರಲ್ಲಿ ಪ್ರಭಾವಶಾಲಿಗಳಾದವರು ಧರ್ಮಗ್ರಂಥಗಳ ಕುರಿತು ಅಧಿಕಾರಯುತವಾದ ವ್ಯಾಖ್ಯಾನವನ್ನು ನೀಡಬೇಕು. ಡಾ. ಅಂಬೇಡ್ಕರ್‌ರ ಸಮರ್ಥನೆಗಳು ಈ ಪ್ರಶ್ನೆಗಳನ್ನು ಎತ್ತುತ್ತವೆ:

೧. ಧರ್ಮಗ್ರಂಥಗಳೆಂದರೇನು?

೨. ಪ್ರಕಟಗೊಂಡ ಎಲ್ಲ ಗ್ರಂಥಗಳನ್ನೂ ಅವುಗಳ ಅಂತರ್ಗತ ಭಾಗವೆಂದು ತೆಗೆದುಕೊಳ್ಳಬೇಕೆ? ಅಥವಾ ಅನಧಿಕೃತ ಪ್ರಕ್ಷಿಪ್ತ ಭಾಗಗಳೆಂದು ತೆಗೆದುಹಾಕಬಹುದೆ?

೩. ಸ್ವೀಕೃತವಾಗಿರುವ, ಪ್ರಕ್ಷೇಪಗೊಂಡಿರುವ ಭಾಗಗಳು ಅಸ್ಪೃಶ್ಯತೆ, ಜಾತಿ, ಸ್ಥಾನಮಾನಗಳು, ಸಹಭೋಜನ, ಅಂತರ್‌ವಿವಾಹಗಳ ಕುರಿತು ಏನು ಹೇಳುತ್ತವೆ? (ತಮ್ಮ ಭಾಷಣದಲ್ಲಿ ಡಾ. ಅಂಬೇಡ್ಕರ್‌ರು ಈ ಎಲ್ಲವನ್ನೂ ಅಧ್ಯಯನ ನಡೆಸಿದ್ದಾರೆ.) ಈ ಪ್ರಶ್ನೆಗಳಿಗೆ ಮುಂದಿನ ಸಂಚಿಕೆಯಲ್ಲಿ ಉತ್ತರಿಸುವೆ.

(ಹರಿಜನ್, ಜುಲೈ ೧೧, ೧೯೩೬)

***

ವೇದಗಳು, ಉಪನಿಷತ್ತು, ರಾಮಾಯಣ ಮತ್ತು ಮಹಾಭಾರತವನ್ನು ಒಳಗೊಂಡಂತೆ ಪುರಾಣಗಳು ಹಿಂದೂ ಗ್ರಂಥಗಳಾಗಿವೆ. ಇದೊಂದು ಅಂತಿಮ ಪಟ್ಟಿಯಲ್ಲ, ಬೆಳೆಯುವಂಥದ್ದು. ಹೀಗಾಗಿ, ಪ್ರಕಟವಾದ ಇಲ್ಲವೆ ಹಸ್ತಪ್ರತಿಯ ಪ್ರತಿಯೊಂದೂ ಪ್ರಮಾಣ ಗ್ರಂಥಗಳಲ್ಲ. ಉದಾಹರಣೆಗೆ, ಸ್ಮೃತಿಯಲ್ಲಿರುವ ಬಹುಪಾಲು ಪಠ್ಯವನ್ನು ದೇವವಾಣಿಯೆಂದು ಒಪ್ಪಲಾಗದು. ಆದ್ದರಿಂದ ಅಂಬೇಡ್ಕರ್ ಅವರು ಉಲ್ಲೇಖಿಸುವ ಸ್ಮೃತಿ ಭಾಗವನ್ನು ಅಧಿಕೃತವೆಂದು ಮಾನ್ಯ ಮಾಡಬೇಕಿಲ್ಲ. ಹೀಗಾಗಿ ಗ್ರಂಥಗಳು, ಅರ್ಥ ಮಾಡಿಕೊಳ್ಳಲು ತೆರೆದ ಮನಸ್ಸಿನವರಾದ ಪ್ರತಿಯೊಬ್ಬರಿಗೂ ಮುಟ್ಟುವಂತಿದ್ದು, ಶಾಶ್ವತ ಪ್ರಮಾಣಗಳ ಕುರಿತಷ್ಟೇ ಕಾಳಜಿ ತೋರುವಂತಿರಬೇಕು. ಕಾರ್ಯಕಾರಣದ ಪರೀಕ್ಷೆಗೆ ಒಳಪಡದ ಅಥವಾ ಆಧ್ಯಾತ್ಮಿಕವಾಗಿ ಅನುಭವಕ್ಕೆ ಒಳಗಾಗದ ಯಾವುದನ್ನೂ ದೇವವಾಣಿಯೆಂದು ಒಪ್ಪಕೂಡದು. ಒಂದೊಮ್ಮೆ, ಪ್ರಕ್ಷೇಪಗೊಂಡ ಗ್ರಂಥದ ಆವೃತ್ತಿಯನ್ನು ಹೊಂದಿದ್ದರೂ ಅದು ವಿಮರ್ಶೆಗೆ ಒಳಪಡುವಂತಿರಬೇಕು. ಅವುಗಳ ವ್ಯಾಖ್ಯಾನಕಾರರು ಯಾರು? ಖಂಡಿತವಾಗಿ ಪಂಡಿತರಂತೂ ಅಲ್ಲ. ಕಲಿಕೆ ಇರಲೇಬೇಕೆಂಬುದು ನಿಜ. ಆದರೆ, ಅಲ್ಲಿ ಧರ್ಮ ಇಲ್ಲವಲ್ಲ! ಅದಿರುವುದು ಸಾಧುಸಂತರಲ್ಲಿ; ಅವರ ಬದುಕು ಮತ್ತು ನುಡಿಗಳಲ್ಲಿ. ಪ್ರಮಾಣ ಗ್ರಂಥಗಳ ಪ್ರಕಾಂಡ ಪಂಡಿತರು

ಎಲ್ಲವನ್ನೂ ಮರೆತು ಕುಳಿತಿರುವಾಗ ಸಾಧುಸಂತರ ಸಂಚಯಿತ ಅನುಭವವು ವ್ಯಾಪಿಸಿ ಭವಿಷ್ಯದ ಲೋಕಕ್ಕೆ ಸ್ಫೂರ್ತಿಯಾಗುವುದು.

ಧರ್ಮಕ್ಕೂ, ಜಾತಿಗೂ ಸಂಬಂಧವಿಲ್ಲ. ಜಾತಿಪದ್ಧತಿಯ ಮೂಲ ನನಗೆ ತಿಳಿಯದು. ನನ್ನ ಆಧ್ಯಾತ್ಮಿಕ ದಾಹ ತೀರಿಸಿಕೊಳ್ಳಲು ನನಗೆ ತಿಳಿಯುವುದು ಕೂಡ ಬೇಕಿಲ್ಲ. ಆದರೆ, ಆಧ್ಯಾತ್ಮಿಕ ಮತ್ತು ರಾಷ್ಟ್ರದ ಏಳಿಗೆಗೆ ಜಾತಿಯು ಮಾರಕ ಎಂಬುದು ಮಾತ್ರ ನನಗೆ ತಿಳಿದಿದೆ. ವರ್ಣ ಮತ್ತು ಆಶ್ರಮಗಳು ಸಂಸ್ಥೆಗಳಾಗಿದ್ದು ಅವಕ್ಕೂ ಜಾತಿಗೂ ಸಂಬಂಧವಿಲ್ಲ. ನಮ್ಮ ಪರಂಪರಾಗತ ವೃತ್ತಿಯನುಸಾರ ಪ್ರತಿಯೊಬ್ಬರೂ ದುಡಿದು ರೊಟ್ಟಿಯನ್ನು ಗಳಿಸಬೇಕೆಂದು ವರ್ಣವು ನಮಗೆ ಕಲಿಸುತ್ತದೆ. ಅದು ನಮ್ಮ ಹಕ್ಕು ಗಳನ್ನಲ್ಲದೆ, ಕರ್ತವ್ಯಗಳನ್ನು ಸೂಚಿಸುತ್ತದೆ. ಅದು ಮಾನವ ಕಲ್ಯಾಣಕ್ಕೆ ಪೂರಕವಾದ ವೃತ್ತಿಗಳನ್ನಷ್ಟೇ ಉಲ್ಲೇಖಿಸುತ್ತದೆಯೇ ಹೊರತು ಬೇರೆಯದನ್ನಲ್ಲ. ಅಷ್ಟೇ ಅಲ್ಲ, ಅದು ಯಾವ ವೃತ್ತಿಯೂ ಕೀಳಲ್ಲ, ಮತ್ತು ಉಚ್ಚವೆನ್ನುವ ಕಸುಬು ಯಾವುದೂ ಇಲ್ಲವೆಂದು ಹೇಳುತ್ತದೆ. ಎಲ್ಲ ಕಸುಬುಗಳೂ ಉತ್ತಮವೇ, ಮಾನ್ಯವೇ ಮತ್ತು ಸ್ಥಾನಮಾನದಲ್ಲಿ ಎಲ್ಲವೂ ಸಮಾನವೇ. ಆಧ್ಯಾತ್ಮಿಕ ಗುರುವಾದ ಬ್ರಾಹ್ಮಣನ ವೃತ್ತಿಯೇ ಆಗಿರಲಿ, ಜಾಡಮಾಲಿ ಕಸುಬೇ ಇರಲಿ ಎರಡೂ ಸಮಾನ ಮತ್ತು ದೇವರ ಮುಂದೆ ಎರಡೂ ಕೆಲಸಗಳ ಪ್ರಮಾಣವೂ ಒಂದೇ ಆಗಿರುತ್ತದೆ. ಏಕಕಾಲದಲ್ಲಿ ಇಬ್ಬರಿಗೂ ಒಂದೇ ಬಗೆಯ ಪ್ರತಿಫಲವನ್ನು ನೀಡುತ್ತದೆ. ಇಬ್ಬರೂ ತಮ್ಮ ಜೀವನೋಪಾಯಕ್ಕೆ ಅರ್ಹರೇ. ಅಷ್ಟಲ್ಲದೆ ಬೇರೇನೂ ಅಲ್ಲ. ನಿಜವೆಂದರೆ ಇಂದಿಗೂ ಹಳ್ಳಿಗಳಲ್ಲಿ ಈ ಬಗೆಯ ಆರೋಗ್ಯಕರ ಬದುಕು ಸಾಗಿಕೊಂಡು ಬಂದಿದೆ... ಈ ದುರ್ದಿನಗಳಲ್ಲಿ ಜನರು ನೀಡಿದ ದವಸ-ಧಾನ್ಯಗಳ ಮೇಲೆ ಬದುಕುವ ಮತ್ತು ಅದಕ್ಕೆ ಪ್ರತಿಯಾಗಿ ತಮ್ಮ ಆಧ್ಯಾತ್ಮಿಕ ಸಂಪತ್ತನ್ನು ಹಸ್ತಾಂತರಿಸುವ ಬ್ರಾಹ್ಮಣರನ್ನು ಕಾಣುವುದು ಕೂಡ ಕಡಿಮೆಯೇ. ಆದ್ದರಿಂದ, ವರ್ಣದ ಅಣಕುವ್ಯವಸ್ಥೆಯಲ್ಲಿ ಬದುಕುತ್ತ, ಅದರ ವ್ಯಾವಹಾರಿಕತೆಗೆ ಅಂಟಿಕೊಂಡು ನಿಯಮಗಳನ್ನು ಉಲ್ಲಂಘಿಸಿ ರುವ ಜನರನ್ನು ನೋಡಿ ವರ್ಣವ್ಯವಸ್ಥೆಯ ಕುರಿತು ತೀರ್ಪು ನೀಡುವುದು ತಪ್ಪು. ವರ್ಣವ್ಯವಸ್ಥೆಯ ಪ್ರಕಾರ ಉಚ್ಚ ಸ್ಥಾನಮಾನಗಳನ್ನು ಕೊಟ್ಟುಕೊಳ್ಳುವುದು ನಿಯಮ ವನ್ನು ಗಾಳಿಗೆ ತೂರುವ ಅಹಂಕಾರವಷ್ಟೇ. ಮಾತ್ರವಲ್ಲ, ವರ್ಣವ್ಯವಸ್ಥೆಯಲ್ಲಿ ಅಸ್ಪೃಶ್ಯತೆ ಯನ್ನು ಸಮರ್ಥಿಸುವ ಯಾವ ನಿಯಮಗಳೂ ಇಲ್ಲ. (ದೇವರನ್ನು ಮಾತ್ರ ಸತ್ಯವೆಂದು ಒಪ್ಪಿಕೊಳ್ಳುವ, ಹಾಗೂ ಅಹಿಂಸೆಯನ್ನು ಮಾನವ ಕುಟುಂಬದ ಸಂಹಿತೆಯನ್ನಾಗಿ ಒಪ್ಪಿಕೊಳ್ಳುವುದರಲ್ಲಿ ಹಿಂದೂ ಧರ್ಮದ ಸಾರ ಅಡಗಿದೆ.)

ಹಿಂದೂ ಧರ್ಮದ ನನ್ನ ವ್ಯಾಖ್ಯಾನವು ಡಾ. ಅಂಬೇಡ್ಕರ್‌ರ ಜತೆಜತೆಗೆ ಉಳಿದವರಿಗೂ ವಿವಾದಾಸ್ಪದವಾಗಿ ಕಾಣುವುದು ಎಂಬುದನ್ನು ಬಲ್ಲೆ. ಅದೇನೂ ನನ್ನ ನಿಲುವನ್ನು ಬದಲಿಸದು. ಈ ವ್ಯಾಖ್ಯಾನದ ಮೂಲಕವೇ ನಾನು ಹೆಚ್ಚುಕಡಿಮೆ ಅರ್ಧ ಶತಮಾನಗಳ ಕಾಲ ಬದುಕನ್ನು ನಡೆಸಿದ್ದೇನಷ್ಟೇ ಅಲ್ಲ, ನನ್ನ ಬದುಕನ್ನು ರೂಪಿಸಿಕೊಳ್ಳಲು ನನ್ನೆಲ್ಲ ಸಾಮರ್ಥ್ಯವನ್ನೂ ವ್ಯಯಿಸಿದ್ದೇನೆ.

ನನ್ನ ದೃಷ್ಟಿಯಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿರುವ ಗಹನವಾದ ತಪ್ಪೆಂದರೆ ತಮ್ಮ ಭಾಷಣದಲ್ಲಿ ಸಂದೇಹಾಸ್ಪದ ಪಠ್ಯಗಳನ್ನು, ಹಾಗೂ ಅಸಮರ್ಪಕವಾದವರೂ, ಅಸಮರ್ಥರೂ ಆದ ಹಿಂದೂಗಳನ್ನು ಪ್ರಮಾಣವನ್ನಾಗಿ ಸ್ವೀಕರಿಸಿರುವುದು. ಡಾ. ಅಂಬೇಡ್ಕರರು ಬಳಸಿದ ಪ್ರಮಾಣಗಳ ಆಧಾರದ ಮೇಲೆ ನಿರ್ಣಯಗಳನ್ನು ತೆಗೆದುಕೊಂಡರೆ, ಬಹುಶಃ ಪ್ರತಿ ಜೀವಂತ ನಂಬಿಕೆಯೂ ವಿಫಲಗೊಳ್ಳಬೇಕಾಗುತ್ತದೆ.

ತಮ್ಮ ಸಮರ್ಥ ಭಾಷಣದಲ್ಲಿ ಡಾಕ್ಟರರು ಕೊಂಚ ಅತಿಶಯೋಕ್ತಿಯನ್ನು ತೋರಿದ್ದಾರೆ. ಚೈತನ್ಯ, ಜ್ಞಾನದೇವ, ತುಕಾರಾಮ, ತಿರುವಳ್ಳುವರ್, ರಾಮಕೃಷ್ಣ ಪರಮಹಂಸ, ರಾಜಾರಾಮ್ ಮೋಹನ್‌ರಾಯ್, ಮಹರ್ಷಿ ದೇವೇಂದ್ರನಾಥ ಠಾಕೂರ, ವಿವೇಕಾನಂದರಂಥವರು ಶ್ರದ್ಧೆ ತೋರಿದ ಧರ್ಮವು ಅಂಬೇಡ್ಕರರ ಭಾಷಣದಲ್ಲಿ ಹೇಗೆ ಸ್ಥಾನ ಪಡೆಯಲಿಲ್ಲ? ಧರ್ಮವೊಂದನ್ನು ಅದರ ಕನಿಷ್ಠರ ನಿದರ್ಶನವನ್ನಿಟ್ಟುಕೊಂಡು ಪ್ರಮಾಣೀಕರಿಸುವುದಕ್ಕಿಂತ ಅದು ಎಂಥ ಶ್ರೇಷ್ಠರನ್ನು ನೀಡಿದೆ ಎಂಬುದರ ಮೇಲೆ ನಿರ್ಣಯಿಸಬೇಕು. ಆ ಕಾರಣಕ್ಕಾಗಿ, ಮತ್ತು ಅದೊಂದ ಕ್ಕಾಗಿಯೇ, ಮಾನದಂಡವನ್ನು ಬಳಸಬೇಕು.

('ಹರಿಜನ್' ಜುಲೈ ೧೮, ೧೯೩೬)

ಕನ್ನಡಕ್ಕೆ: **ಕೇಶವ ಮಳಗಿ**

೧೦೪

ವಿಜ್ಞಾನಿಗಳಿಗೊಂದು ಬಿನ್ನಹ

[ಗಾಂಧೀಜಿ ಬೆಂಗಳೂರಿನ ವಿಜ್ಞಾನ ಸಂಸ್ಥೆಗೆ ಭೇಟಿ ಕೊಟ್ಟಾಗ ನಿಟ್ಟುಸಿರು ಬಿಡುತ್ತಾ ಆಡಿದ ಮಾತುಗಳು]

ಇದರ ನಡುವೆ ನನಗೆ ಏನು ಸ್ಥಾನವಿದೆ ಎಂದು ನನಗೆ ಅಚ್ಚರಿ. ನನ್ನಂಥ ಹಳ್ಳಿಗನಿಗೆ ಇಲ್ಲಿ ಯಾವ ಸ್ಥಾನವೂ ಇಲ್ಲ. ನಾನಿಲ್ಲಿ ಅಚ್ಚರಿ, ಗಾಬರಿಗಳ ನಡುವೆ ಮೂಕನಾಗಿ ನಿಲ್ಲಬೇಕಾದ್ದೇ ಸರಿ. ಹೆಚ್ಚು ಹೇಳುವ ಮನಸ್ಸು ಇಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ನೀವು ಇಲ್ಲಿ ಕಾಣುವ ದೊಡ್ಡ ಪ್ರಯೋಗ ಶಾಲೆಗಳು, ವಿದ್ಯುತ್ ಉಪಕರಣಗಳು ಎಲ್ಲವೂ ನಮ್ಮ ಜನಕೋಟಿಯ ದುಡಿತದಿಂದ ಬಂದದ್ದು; ಅದರಲ್ಲೂ ಇಷ್ಟವಿಲ್ಲದ ಬಲಾತ್ಕಾರದ ದುಡಿತದಿಂದ ಬಂದದ್ದು. ಟಾಟಾ ಅವರ ಮೂವತ್ತು ಲಕ್ಷ ಹಣ ಹೊರಗಿನಿಂದ ಬರಲಿಲ್ಲ. ಮೈಸೂರು ಸರಕಾರದ ಸಹಾಯ ಧನವೂ ಹೊರಗಿನಿಂದ ಬರುವುದಿಲ್ಲ. ಎಲ್ಲವೂ ಬಿಟ್ಟಿಯದು. ಜನಕೋಟಿಯ ಹಣವನ್ನು ಹೇಗೆ ವೆಚ್ಚ ಮಾಡುತ್ತಿದ್ದೇವೆ, ಕಟ್ಟಡಗಳ ಮೇಲೆ, ಯಂತ್ರಗಳ ಮೇಲೆ ಹೇಗೆ ವೆಚ್ಚವಾಗುತ್ತಿದೆ ಎಂಬುದನ್ನು ತಿಳಿಸಿ ಹೇಳಿದರೆ ಜನರಿಗೆ ಇದು ಅರ್ಥವಾಗಲಿಕ್ಕಿಲ್ಲ. ತಮಗೆ ಕೂಡಲೇ ಲಾಭಕಾರಿ ಆಗದ ಈ ವೆಚ್ಚದ ವಿಷಯವನ್ನು ಅವರಿಗೆ ಮನಗಾಣಿಸಿ ಕೊಡುವುದು ಕಷ್ಟ. ಭವಿಷ್ಯದ ಸಂತತಿಗೆ ಇದರಿಂದ ಲಾಭ ಉಂಟು ಎಂದರೆ ಅದು ಹಳ್ಳಿಗರಿಗೆ ಹೇಗೆ ಅರ್ಥವಾಗಬೇಕು? ಇದಕ್ಕೆ ಅವರು ವಿಮುಖರಾದಾರು.

ಜನತೆಯನ್ನು ನಾವು ಎಂದೂ ಕೇಳುವುದಿಲ್ಲ... ಅವರಿಗೆ ಈ ಲೆಕ್ಕವನ್ನು ಒಪ್ಪಿಸಿದರೆ, ಈ ಎಲ್ಲ ನೌಕರಿಗಳಿಗೆ ಇನ್ನೊಂದು ಮುಖ ಇದೆ ಎಂಬುದು ಅವರಿಗೂ ತಿಳಿದುಬರುತ್ತದೆ. ಆಗ ನಿಮ್ಮ ಹೃದಯದಲ್ಲಿ ಒಂದು ಸ್ಥಾನ ಜನಸಾಮಾನ್ಯರಿಗಾಗಿ ಮೀಸಲಾಗುತ್ತದೆ. ಆ ಸ್ಥಾನವನ್ನು ಶುದ್ಧವಾಗಿ ಇಟ್ಟುಕೊಂಡರೆ ನಿಮ್ಮ ಜ್ಞಾನವನ್ನೆಲ್ಲ

ಅವರ ಉಪಕಾರಕ್ಕಾಗಿ ಉಪಯೋಗಿಸುತ್ತೀರಿ. ಅವರ ದುಡಿತವೇ ನಿಮ್ಮ ಶಿಕ್ಷಣಕ್ಕೆ ಆಧಾರ, ಅಲ್ಲವೆ? ನೀವು ಕೊಟ್ಟ ನಿಧಿಯನ್ನು ದರಿದ್ರನಾರಾಯಣರಿಗಾಗಿ ಉಪಯೋಗಿಸುತ್ತೇನೆ. ನಿಜವಾದ ದರಿದ್ರನಾರಾಯಣನನ್ನು ನಾನು ನೋಡಿಲ್ಲ. ಆದರೆ ಊಹಿಸಿಕೊಂಡಿದ್ದೇನೆ. ಈ ಹಣವನ್ನು ಪಡೆಯುವ ನೂಲುಗಾತಿಯೂ ಕೂಡ ನಿಜವಾದ ದರಿದ್ರನಾರಾಯಣ ಅಲ್ಲ. ಯಾರೂ ಶೋಧನೆ ಮಾಡದ, ದೇಶದ ದೂರದ ಮೂಲೆಗಳಲ್ಲಿ ದರಿದ್ರನಾರಾಯಣ ಇದ್ದಾನೆ.

ಈ ಪ್ರಯೋಗ ಶಾಲೆಯಲ್ಲಿ ಇರುವ ಕೆಲವು ರಾಸಾಯನಿಕ ವಸ್ತುಗಳನ್ನು ಪರಿಶೋಧಿಸಲು, ಸಂಶೋಧಿ ಸಲು ಅನೇಕ ವರ್ಷಗಳು ಬೇಕು ಎಂದು ನಿಮ್ಮ ಅಧ್ಯಾಪಕರು ಹೇಳಿದರು. ಆದರೆ ಆ ಹಳ್ಳಿಗಳಲ್ಲಿ ಸಂಶೋಧಿಸಲು ಯಾರು ಪ್ರಯತ್ನಿಸಿದ್ದಾರೆ? ನಿಮ್ಮ ಪ್ರಯೋಗ ಶಾಲೆಯಲ್ಲಿ ೨೪ ಗಂಟೆ ಪ್ರಯೋಗ ನಡೆಯುವಂತೆ ನಿಮ್ಮ ಹೃದಯದಲ್ಲಿ ಒಂದು ಮೂಲೆಯೂ ದರಿದ್ರ ಜನಕೋಟಿಯ ಲಾಭಕ್ಕಾಗಿ ಸದಾ ತೆರೆದಿರಲಿ.

ಸಾಮಾನ್ಯ ಮನುಷ್ಯನಿಗಿಂತ ನಿಮ್ಮಿಂದ ನಾನು ಹೆಚ್ಚಿನದನ್ನು ನಿರೀಕ್ಷಿಸುತ್ತೇನೆ. ಈಗ ನೀವು ಕೊಟ್ಟಿದ್ದರಿಂದ ತೃಪ್ತರಾಗಬೇಡಿ. 'ಯಥಾಶಕ್ತಿ ಕೊಟ್ಟಿದ್ದೇವೆ. ಇನ್ನು ಹೋಗಿ ಆಟವಾಡೋಣ' ಎಂದುಕೊಳ್ಳಬೇಡಿ. ದಿನದಿನವೂ ನೀವು ಭರಿಸಬೇಕಾದ ಸಾಲ ಹೆಚ್ಚುತ್ತಿದೆ. ಅದರ ಅಗಾಧತೆಯನ್ನು ಕುರಿತು ಚಿಂತಿಸಿರಿ. ನೀವು ಕೊಟ್ಟಿದ್ದಕ್ಕೆ ಸಂತೋಷ.

ನನ್ನ ಬಿನ್ನಹ ಕೇಳಿದ್ದೀರಲ್ಲ, ಈ ಬಿನ್ನಹವನ್ನು ಕೃತಿಗೆ ಇಳಿಸಿರಿ. ಬಡ ಹೆಂಗಸರು ನಿಮಗಾಗಿ ಮಾಡಿಕೊಡುವ ಬಟ್ಟೆ ತೊಡಲು ಅಂಜಬೇಡಿರಿ. ಖಾದಿ ತೊಟ್ಟರೆ ನಿಮ್ಮ ಮೇಲಧಿಕಾರಿಗಳು ನಿಮ್ಮನ್ನು ಹೊರಗೆ ಕಳುಹಿಸಬಹುದೆಂದು ಹೆದರಬೇಡಿರಿ. ಗಂಡಸರಾಗಿ ನಿಲ್ಲಿರಿ. ನಿಮ್ಮ ದೃಢ ವಿಶ್ವಾಸವನ್ನು ಲೋಕದ ಮುಂದೆ ಎತ್ತಿ ಹಿಡಿಯಿರಿ. ಮೂಕ ಜನಜಂಗುಳಿಗಾಗಿ ನಿಮ್ಮಲ್ಲಿರುವ ಕನಿಕರ ಹಾಗೂ ಉತ್ಸಾಹಗಳು ಹಣದ ಬೇಟೆಯಲ್ಲಿ ಬಾಡಿ ಹೋಗದಿರಲಿ. ನಿಮ್ಮ ತಂತಿ ಇಲ್ಲದ ಈ ಉಪಕರಣಕ್ಕಿಂತ ಮಿಗಿಲಾದ ಉಪಕರಣವನ್ನು ನೀವು ಕಂಡುಹಿಡಿಯಬಹುದು. ಅದಕ್ಕೆ ಬಾಹ್ಯ ಸಂಶೋಧನೆಯ ಅವಶ್ಯಕತೆ ಬೀಳುವುದಿಲ್ಲ. ಅಂತರಂಗದ ಸಂಶೋಧನೆ ಅದಕ್ಕೆ ಅಗತ್ಯ ಈ ಅಂತರಂಗದ ಸಂಶೋಧನೆಯ ಸಂಬಂಧವಿಲ್ಲದಿದ್ದರೆ ಎಲ್ಲ ಸಂಶೋಧನೆಯೂ ವ್ಯರ್ಥ. ಈ ಬಗೆಯ ಸಂಶೋಧನೆ ಮಾತ್ರ ಜನಕೋಟಿಯ ಹೃದಯದೊಂದಿಗೆ ನಿಮ್ಮ ಹೃದಯ ಬೆರೆಯುವಂತೆ ಮಾಡಬಲ್ಲದು.

ನೀವು ಮಾಡುವ ಎಲ್ಲ ಸಂಶೋಧನೆಗಳೂ, ಎಲ್ಲ ಅನ್ವೇಷಣೆಗಳೂ ಬಡವರ ಕಲ್ಯಾಣಕ್ಕಾಗಿ ಆಗಲಿ. ರಾಜಗೋಪಾಲಾಚಾರ್ಯರು ವಿನೋದಕ್ಕಾಗಿ ಈಗ ಹೇಳಿದಂತೆ, ನಿಮ್ಮ ಪ್ರಯೋಗ ಶಾಲೆಗಳನ್ನು 'ಸೈತಾನ ಕಾರ್ಖಾನೆ'ಗಳಾಗಿ ಮಾಡಬೇಡಿರಿ. ನೀವು ಸಂಶೋಧನೆಯ ವಿದ್ಯಾರ್ಥಿಗಳು. ನಿಮ್ಮ ಚಿಂತನೆಯ ಸಲುವಾಗಿ ನಿಮಗೆ ಬೇಕಾದಷ್ಟು ಆಹಾರವನ್ನು ನಾನು ಈಗ ಕೊಟ್ಟಿದ್ದೇನೆ.

(೧೩-೦೮-೧೯೨೧, 'ಗಾಂಧಿ ಮತ್ತು ಕರ್ನಾಟಕ' ಪುಸ್ತಕದಿಂದ.)

೧೦೫

ಸಾಹಿತಿಗಳಿಗೊಂದು ಮನವಿ

ನಾವು ನಮ್ಮ ಸಾಹಿತ್ಯವನ್ನು ಯಾರಿಗೋಸ್ಕರ ಇಟ್ಟುಕೊಳ್ಳಬೇಕು? ಅಹ್ಮದಾಬಾದಿನ ಶ್ರೀಮಂತರಿಗಾಗಲೀ, ಮಧ್ಯಮವರ್ಗದವರಿಗಾಗಲೀ ಖಂಡಿತಾ ಅಲ್ಲ. ಅವರು ತಮ್ಮ ಮನೆಗೇ ಸಾಹಿತಿಗಳನ್ನು ಕರೆಸಿಕೊಳ್ಳಬಲ್ಲರು. ದೊಡ್ಡ ದೊಡ್ಡ ಲೈಬ್ರರಿಗಳನ್ನು ತಮ್ಮ ಮನೆಗಳಲ್ಲೇ ಇರಿಸಿಕೊಳ್ಳಬಲ್ಲರು. ಆದರೆ ಬಾವಿಯಿಂದ ನೀರು ಸಾಗಿಸುತ್ತಿರುವ ಗಾಡಿಗೆ ಕಟ್ಟಿರುವ ಎತ್ತಿನ ಬೆನ್ನಿಗೆ ಬಾರಿಸುತ್ತಾ, ಬಾಯಿಗೆ ಬಂದಂತೆ ಬಯ್ಯುತ್ತಾ ಕೆಲಸ ಮಾಡುತ್ತಿರುವ ಆ ಬಡವನ ಕತೆಯೇನು? ಕೆಲವು ವರ್ಷಗಳ ಕೆಳಗೆ ನಾನು [ಕವಿ] ನರಸಿಂಹರಾವ್ ಅವರನ್ನು ಕೇಳಿದೆ: 'ಸ್ವಾಮಿ, ಅಲ್ಲಿ ಆ ಬಡವ ಆ ಕೆಟ್ಟ ಬೈಗುಳಗಳನ್ನು ಎಂದೆಂದೂ ಮರೆಯಬಲ್ಲ ರಾಗವಾದ ಹಾಡನ್ನೋ, ಗೀತೆಗಳನ್ನೋ ಕೊಡಬಲ್ಲಿರಾ?'

ಹೀಗೆ ಜೀವ ತುಂಬುವ ಸಾಹಿತ್ಯವನ್ನು ನಾವು ಒದಗಿಸಬೇಕಾದ ನೂರಾರು ಜನ ನನ್ನ ಕಣ್ಣೆದುರು ಇದ್ದಾರೆ. ಈ ಕೆಲಸವನ್ನು ಹೇಗೆ ಮಾಡುವುದು? ನಾನೀಗ ಸೇವಾಗ್ರಾಮ ಊರಿನಲ್ಲಿದ್ದೇನೆ. ಅಲ್ಲಿರುವ ಆರುನೂರು ಜನರಲ್ಲಿ ಹತ್ತು-ಹನ್ನೆರಡು ಜನಕ್ಕೆ ಮಾತ್ರ ಓದು, ಬರಹ ಗೊತ್ತು. ಇಲ್ಲಿಗೆ ಆ ಊರಿನ ಹುಡುಗನೊಬ್ಬನನ್ನು ಕರಕೊಂಡು ಬಂದಿದ್ದರೆ ಚೆನ್ನಾಗಿರುತ್ತಿತ್ತು. ಕರಕೊಂಡು ಬರಲಿಲ್ಲ. ಅವನಿಲ್ಲಿ ಬಂದಿದ್ದರೆ ಏನು ಮಾಡುತ್ತಿದ್ದನೋ! ತಾನೊಂದು ವಿಚಿತ್ರ ಪ್ರಪಂಚಕ್ಕೆ ಬಂದಿದ್ದೀನಿ ಎಂದು ಅವನಿಗನ್ನಿಸುತ್ತಿತ್ತು. ಈ ಮಾತು ಹೇಳುತ್ತಿರುವಾಗ ಏಸು ಕ್ರಿಸ್ತನ ಜೀವನ ಕುರಿತು ಡೀನ್ ಫಾರರ್ ಬರೆದ ಪುಸ್ತಕ ನೆನಪಾಗುತ್ತಿದೆ. ನಾನು ಬ್ರಿಟಿಷ್ ಆಡಳಿತವನ್ನು ವಿರೋಧಿಸುತ್ತಿರಬಹುದು; ಆದರೆ ನಾನು ಇಂಗ್ಲಿಷ್ ಜನರನ್ನಾಗಲೀ ಅವರ

ಭಾಷೆಯನ್ನಾಗಲೀ ದ್ವೇಷಿಸುವುದಿಲ್ಲ. ನಿಜ ಹೇಳಲೆ? ಅವರ ಸಾಹಿತ್ಯನಿಧಿಯನ್ನು ನಾನು ಹಾಡಿ ಹೊಗಳುತ್ತೇನೆ.

ಇಂಗ್ಲಿಷ್ ಭಾಷೆಯ ಅಪರೂಪದ ನಿಧಿಗಳಲ್ಲಿ ಫಾರರ್ ಬರೆದಿರುವ ಪುಸ್ತಕವೂ ಒಂದು. ಈ ಪುಸ್ತಕ ಬರೆಯಲು ಅವರು ಎಷ್ಟು ಶ್ರಮಪಟ್ಟಿದ್ದಾರೆನ್ನುವುದು ನಿಮಗೆ ಗೊತ್ತಿದೆಯೆ? ಇಂಗ್ಲಿಷ್ ಭಾಷೆಯಲ್ಲಿ ಜೀಸಸ್ ಕುರಿತ ಏನೇನು ಪುಸ್ತಕಗಳಿವೆಯೋ ಅವೆಲ್ಲವನ್ನೂ ಓದಿದ ಮೇಲೆ ಫಾರರ್ ಪ್ಯಾಲೆಸ್ಟೈನಿಗೆ ಹೋದರು. ಅಲ್ಲಿ ತಾನು ಬೈಬಲ್ಲಿನಲ್ಲಿ ಓದಿ ಪರಿಚಯಿಸಿಕೊಂಡಿದ್ದ ಎಲ್ಲ ಸ್ಥಳಗಳನ್ನೂ, ತಾಣಗಳನ್ನೂ ಗುರುತಿಸಿ ನೋಡಿಕೊಂಡು ಬಂದರು. ಆಮೇಲೆ ಆಳದ ನಂಬಿಕೆಯಿಂದ ಇಂಗ್ಲೆಂಡಿನ ಜನ ಸಮುದಾಯಕ್ಕಾಗಿ, ಅವರೆಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಈ ಪುಸ್ತಕ ಬರೆದರು. ಈ ಪುಸ್ತಕ [ಇಂಗ್ಲಿಷ್ ವಿದ್ವಾಂಸ] ಸ್ಯಾಮ್ಯುಯೆಲ್ ಜಾನ್ಸನ್ ಶೈಲಿಯಲ್ಲಿಲ್ಲ; ಬದಲಿಗೆ, ಅದು [ಇಂಗ್ಲಿಷ್ ಕಾದಂಬರಿಕಾರ] ಚಾರ್ಲ್ಸ್ ಡಿಕೆನ್ಸ್ ಶೈಲಿಯಲ್ಲಿದೆ. ಫಾರರ್ ಥರ ನಮ್ಮ ಹಳ್ಳಿಯ ಜನರಿಗಾಗಿ ಶ್ರೇಷ್ಠ ಸಾಹಿತ್ಯವನ್ನು ಬರೆಯುವ ಜನ ಇದ್ದಾರೆಯೆ? ನಮ್ಮ ಸಾಹಿತಿಗಳು ಭವಭೂತಿ, ಕಾಳಿದಾಸರನ್ನೋ, ಇಂಗ್ಲಿಷ್ ಲೇಖಕರನ್ನೋ ಅರೆದು ಕುಡಿದು ಅನುಕರಣೆಯ ಕೃತಿಗಳನ್ನು ಕೊಡುತ್ತಿದ್ದಾರೆ. ಅವರು ಹಳ್ಳಿಗಳಿಗೆ ಹೋಗಿ, ಅಧ್ಯಯನ ಮಾಡಿ, ಜೀವ ಹುಟ್ಟಿಸುವಂಥ ಏನನ್ನಾದರೂ ಬರೆಯಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

(ಗುಜರಾತ್ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಭಾಷಣ.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೦೬

ಖ್ಯಾತ ಕಲಾವಿದ ವೆಂಕಟಪ್ಪನವರಿಗೆ

ಗಾಂಧೀಜಿ: ವೆಂಕಟಪ್ಪನವರೆ, ನಾನೊಂದು ಸಲಹೆ ಕೊಡಲೆ? ಚರಕಾ ನಿಮಗೆ ಹಿಡಿಸಿದರೆ, ಚರಕಾದ ಮಹತ್ವ ಏನು ಎಂಬುದನ್ನು ನೀವು ಚಿತ್ರಿಸುವುದಾದರೆ ನನಗೆ ಇನ್ನೂ ಸಂತೋಷ. ಇದು ಬರೀ ಪ್ರಾರ್ಥನೆ.

('ಗಾಂಧೀ ಮತ್ತು ಕರ್ನಾಟಕ' ಪುಸ್ತಕದಿಂದ. ವರದಿ: ಯಂಗ್ ಇಂಡಿಯಾ, ೧೧-೦೮-೧೯೨೭)

೧೦೭

ಮೈಸೂರು ಅರಮನೆ ಮತ್ತು ರೈತರು

ಗಾಂಧೀಜಿ: ನೀವೇನೋ ಖಾದಿ ಉತ್ಪಾದಿಸಲು ಕ್ರಮ ಕೈಗೊಳ್ಳುವ ಭರವಸೆ ಕೊಟ್ಟಿದ್ದೀರಿ. ಇಂಥ ಭರವಸೆಗಳಿಗೆ ಮರುಳಾಗಬಾರದೆಂದು ನನಗೆ ಅನುಭವವಾಗಿದೆ. ಇದು ಬರೀ ಮಾತಿನ ಕಾಲ. ಆಡಿದಂತೆ ಮಾಡುವುದು ಇನ್ನೂ ಬಹಳ ದೂರವಿದೆ. ನಿಮ್ಮೂರಿನ ಭವ್ಯ ಅರಮನೆಗಳನ್ನೂ, ಸುಂದರ ವಾತಾವರಣವನ್ನೂ ನೋಡಿ ಸಂತೋಷವಾದರೂ, ಹೊಲದಲ್ಲಿ ಕಷ್ಟಪಡುತ್ತಿರುವ ರೈತನ ನೆನಪು ನನಗೆ ಆಗುತ್ತದೆ. ಈಗ ರಾಜ್ಯ ಆಳುತ್ತಿರುವ ವರ್ಗ ಹಾಗೂ ರಾಜಕಾರಣಿಗಳ ವರ್ಗ ತನ್ನ ಬದುಕನ್ನು ಬಡರೈತನ ದೃಷ್ಟಿಯಿಂದ ಸರಿಪಡಿಸಿಕೊಳ್ಳಬೇಕೆಂದು ನಾನು ಹಾತೊರೆಯುತ್ತಿದ್ದೇನೆ. ಇಂದು ಬಡವರಿಗೂ ನಿಮಗೂ ದೊಡ್ಡ ಅಂತರವಿದೆ. ಈ ಅಂತರ ಹೋಗಬೇಕು. ಶ್ರೀಮಂತರ ಬಂಗಲೆಗಳನ್ನೂ, ಮಹಾರಾಜರ ಅರಮನೆಗಳನ್ನೂ ನೋಡಿ ನನಗೆ ಹೊಟ್ಟೆ ಉರಿ ಇಲ್ಲ. ಆದರೆ ರೈತರಿಗೂ ಅವರಿಗೂ ನಡುವೆ ಇರುವ ಅಗಾಧ ಅಂತರವನ್ನು ಕಡಿಮೆ ಮಾಡಲು ಏನಾದರೂ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅವರ ಸುತ್ತಲೂ ಇರುವ ಬಡವರ ಬದುಕಿನ ಗುರುತು ಅವರ ಜೀವನದಲ್ಲಿ ಕಂಡುಬರಬೇಕು. ಇಂಥ ಸೇತುವೆ ಒಂದನ್ನು ಕಟ್ಟಲು ನಾನು ಹೆಣಗುತ್ತಿದ್ದೇನೆ. ನಿಮ್ಮ ಬಂಗಾರದ ಗಣಿಗಳೂ, ನಿಮ್ಮ ಭದ್ರಾವತಿ ಕಾರಖಾನೆಯೂ ಇದನ್ನು ಕಟ್ಟಲಾರದು. ಈ ಬಂಗಾರ, ಈ ಕಬ್ಬಿಣ ನಮಗೆ ಬೇಕು. ಒಳ್ಳೆಯದಾವುದನ್ನೂ ಕೆಡಿಸುವ ಉದ್ದೇಶ ನನಗಿಲ್ಲ. ಹೊಸದನ್ನು ಕಟ್ಟಿ, ಇದ್ದದ್ದನ್ನು ಉತ್ತಮಗೊಳಿಸಿ ಸುಧಾರಿಸುವುದು ನನ್ನ ಉದ್ದೇಶ. ಈ ರೀತಿ ನಿಮ್ಮನ್ನು ಬಂಧಿಸಬಹುದಾದ ಧರ್ಮಬಂಧ ಎಂದರೆ ಖಾದಿನೂಲು, ಗಂಗಾನದಿ.

(ಮೈಸೂರಿನ ಸಭೆಯಲ್ಲಿ ಆಡಿದ ಮಾತುಗಳು. 'ಗಾಂಧೀ ಮತ್ತು ಕರ್ನಾಟಕ' ಪುಸ್ತಕದಿಂದ. ವರದಿ: ಯಂಗ್ ಇಂಡಿಯಾ, ೪.೮.೧೯೨೭)

೧೦೮

ದೇವಾಲಯಗಳು ಮತ್ತು ನಾನು

ನನ್ನ ಯೌವನದ ದಿನಗಳಲ್ಲಿ ನಾನು ನನ್ನ ತಂದೆತಾಯಿಗಳು ನನ್ನಲ್ಲಿ ಮೂಡಿಸಿದ್ದ ಶ್ರದ್ಧಾಭಕ್ತಿಗಳೊಡನೆ ಅನೇಕ ದೇವಸ್ಥಾನಗಳಿಗೆ ಹೋಗಿದ್ದೆ. ಆದರೆ ಈಚಿನ ವರ್ಷಗಳಲ್ಲಿ ನಾನು ದೇವಸ್ಥಾನಗಳಿಗೆ ಹೋಗುತ್ತಿಲ್ಲ. ಅಸ್ಪೃಶ್ಯತೆಯನ್ನು ವಿರೋಧಿಸುವ ಕೆಲಸದಲ್ಲಿ ನಾನು ತೊಡಗಿದಾಗಿನಿಂದ, ಅಸ್ಪೃಶ್ಯನೆಂದು ಕರೆಯಲ್ಪಟ್ಟ ಪ್ರತಿಯೊಬ್ಬನಿಗೂ ದೇವಾಲಯಗಳು ಪ್ರವೇಶ ನೀಡದಿದ್ದಲ್ಲಿ, ನಾನು ಅವುಗಳಿಗೆ ಹೋಗುವುದನ್ನು ನಿಲ್ಲಿಸಿದ್ದೇನೆ. ಆದ್ದರಿಂದ ನಾನು ಇಂದು ಬೆಳಿಗ್ಗೆ ದೇವಸ್ಥಾನದಲ್ಲಿ ಕಂಡದ್ದು, ಘೋಷಣೆಯ ತರುವಾಯ ದೇವಸ್ಥಾನಕ್ಕೆ ಹೋಗಿದ್ದು, ಅಷ್ಟೊಂದು ಜನ ಅವರ್ಣ ಹಿಂದೂಗಳ ಮೇಲೆ ಮೂಡಿದ್ದ ನವನೂತನ ಭಾವವನ್ನೇ ನನ್ನಲ್ಲಿಯೂ ಮೂಡಿಸಿತು. ಕಲ್ಪನೆಯ ಮೂಲಕ ನನ್ನ ಮನಸ್ಸು ಕಲ್ಲು ಮತ್ತು ಲೋಹದ ಮೂಲಕ ದೇವಾಲಯಗಳು ದೇವರ ಸಂದೇಶವನ್ನು ತಿಳಿಸಲು ಪ್ರಾರಂಭಿಸಿದ ಪ್ರಾಚೀನ ಶತಮಾನಗಳಿಗೆ ಹಿಂದಕ್ಕೆ ಹೋಯಿತು. ಪ್ರತಿಯೊಂದು ವಿಗ್ರಹವನ್ನೂ ತನ್ನದೇ ಶುದ್ಧ ಹಿಂದಿಯಲ್ಲಿ ವಿವರಿಸುತ್ತಿದ್ದ ಪೂಜಾರಿಯು ಈ ವಿಗ್ರಹಗಳಲ್ಲಿ ಪ್ರತಿಯೊಂದೂ ದೇವರಾಗಿತ್ತು ಎನ್ನುವುದನ್ನು ನನಗೆ ತಿಳಿಸಲು ಇಚ್ಛಿಸಲಿಲ್ಲ ಎಂಬುದನ್ನು ನಾನು ಬಹಳ ಸ್ಪಷ್ಟವಾಗಿ ಕಂಡುಕೊಂಡೆ.

(ತಿರುವಾಂಕೂರು ದೇವಾಲಯ ಪ್ರವೇಶ ಘೋಷಣೆಯ ಸಮಾರಂಭಕ್ಕೆ ಸಂಬಂಧಿಸಿದಂತೆ ತ್ರಿವೇಂಡ್ರಂನಲ್ಲಿ ಮಾಡಿದ ಭಾಷಣದಲ್ಲಿ.)

೧೧೯

ಹಿಂದೂ ಧರ್ಮದ ಅರ್ಥ

ಹಿಂದೂಧರ್ಮದ ಅತ್ಯಂತ ಪರಿಶುದ್ಧ ರೂಪದಲ್ಲಿ ಒಬ್ಬ ಬ್ರಾಹ್ಮಣ, ಒಂದು ಇರುವೆ, ಒಂದು ಆನೆ ಮತ್ತು ಒಬ್ಬ ಶ್ವಪಚ ಎಲ್ಲರಿಗೂ ಸಮಾನ ಸ್ಥಾನವಿದೆ. ನಮ್ಮ ತತ್ವಶಾಸ್ತ್ರ ಅಷ್ಟು ಉನ್ನತವಾಗಿರುವುದರಿಂದ ಮತ್ತು ನಾವು ಅದಕ್ಕೆ ಅನುಸಾರವಾಗಿ ಜೀವನ ನಡೆಸದಿರುವುದರಿಂದ, ಇಂದು ಆ ತತ್ವ ಸಿದ್ಧಾಂತವೇ ನಮಗೆ ಅಸಹ್ಯವಾಗಿದೆ. ಹಿಂದೂಧರ್ಮವು ಇಡೀ ಮಾನವಕುಲಕ್ಕೆ ಮಾತ್ರ ಸೀಮಿತವಾದುದಲ್ಲ. ಜೀವಂತವಾಗಿರುವ ಎಲ್ಲದರ ಭ್ರಾತೃತ್ವವನ್ನು ಅದು ಒತ್ತಿ ಹೇಳುತ್ತದೆ. ಮನುಷ್ಯ ಮನುಷ್ಯನ ನಡುವೆ ನಾವು ನಿಜವಾದ ಜೀವಂತವಾದ ಸಮಾನತೆಯನ್ನು ಪುನಃಸ್ಥಾಪಿಸಿದ ಕ್ಷಣವೇ ಮಾನವನ ಮತ್ತು ಇಡೀ ಸೃಷ್ಟಿಯ ನಡುವೆ ಸಮಾನತೆಯನ್ನು ಸ್ಥಾಪಿಸಲು ನಾವು ಶಕ್ತರಾಗುತ್ತೇವೆ. ಆ ದಿನ ಬಂದಾಗ ನಾವು ಭೂಮಿಯ ಮೇಲೆ ಶಾಂತಿಯನ್ನು, ಮತ್ತು ಮನುಷ್ಯರ ಬಗ್ಗೆ ಸದ್ಭಾವನೆಯನ್ನು ಹೊಂದುತ್ತೇವೆ.

(ರಾವಬಹದೂರ್ ರಾಜರೊಡನೆ ಒಂದು ಸಂಭಾಷಣೆ.)

೧೧೦

ಇದು ಪ್ರಾಯಶ್ಚಿತ್ತದ ಚಳುವಳಿ

ಗಾಂಧೀಜಿ: ನಮ್ಮ ಸಭೆಯ ಅಧ್ಯಕ್ಷರು ೮೦ ವರ್ಷದ ಮುದುಕರು. ಇದು ಶುಭಶಕುನ. ಸುಧಾರಣೆ ಅಗತ್ಯ ಎಂದು ತಿಳಿಯುವುದರಲ್ಲಿ ಮುದುಕರೂ ಹಿಂದೆ ಬಿದ್ದಿಲ್ಲ. ಹರಿಜನರ ಬಗ್ಗೆ ನಾವು ತೋರುವ ಅಸ್ಪೃಶ್ಯತೆಯ ಭಾವವನ್ನು ಆಮೂಲಾಗ್ರವಾಗಿ ಕಿತ್ತು ಹಾಕಬೇಕು. ಇದು ಬಹಳ ಸುಲಭ. ಅಸ್ಪೃಶ್ಯತೆಗೆ ಸಾವಿರ ತಲೆ. ನಮ್ಮ ಸಮಾಜದ ಎಲ್ಲ ರಂಗಗಳಲ್ಲಿಯೂ ಅದು ತಲೆಯಾಡಿಸಿದೆ. ಅದರಿಂದ ನಾವೆಲ್ಲರೂ ಪರಸ್ಪರ ಅಸ್ಪೃಶ್ಯರಾಗಿದ್ದೇವೆ. ಒಂದು ಜಾತಿ, ಒಂದು ಗುಂಪು ಇನ್ನೊಂದಕ್ಕೆ ಅಸ್ಪೃಶ್ಯ... ಈ ಉಚ್ಚ, ನೀಚ ಭಾವನೆಯೇ ಎಲ್ಲ ಕೋಮುವಾದ, ಗಲಭೆಗಳಿಗೂ ಕಾರಣ. ಮಾನವರಲ್ಲಿ ಭ್ರಾತೃತ್ವವನ್ನು ಬೆಳೆಸಬೇಕೆಂಬುದು ನಮ್ಮ ಚಳವಳಿಯ ಉದ್ದೇಶ. ಅಸ್ಪೃಶ್ಯತೆಗೆ ದೈವೀ ಆಧಾರ ಇದೆ ಎಂದು ನಾವು ನಂಬುವತನಕ ಈ ಭ್ರಾತೃತ್ವ ಸಾಧ್ಯವಿಲ್ಲ. ಆದ್ದರಿಂದ ಸವರ್ಣ ಹಿಂದೂಗಳು ಈಗ ಒಂದನ್ನು ಆರಿಸಿಕೊಳ್ಳಬೇಕು. ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ಕತ್ತರಿಸಿ ಹಾಕಿದರೆ ಅವರು ಬದುಕಬಲ್ಲರು. ಆದ್ದರಿಂದಲೇ ಈ ಚಳವಳಿಯನ್ನು ಆತ್ಮಶುದ್ಧಿಯ ಚಳವಳಿ, ಪಶ್ಚಾತ್ತಾಪದ ಚಳವಳಿ, ಋಣವಿಮೋಚನೆ ಚಳವಳಿ ಎಂದಿದ್ದೇನೆ. ಶತಮಾನಗಳಿಂದ ಅಸ್ಪೃಶ್ಯರನ್ನು ತುಳಿದು ನಮಗೆ ಅವನತಿ ಒದಗಿದೆ. ಅಸ್ಪೃಶ್ಯತೆಯನ್ನು ನಮ್ಮ ಹೃದಯಗಳಿಂದ ಕಿತ್ತು ಹಾಕೋಣ.

('ಗಾಂಧೀ ಮತ್ತು ಕರ್ನಾಟಕ' ಪುಸ್ತಕದಿಂದ.)

೧೧೧

ಇಂಗ್ಲಿಷ್ ಬಳಕೆಯ ಕಷ್ಟಗಳು

ಇಂಗ್ಲಿಷಿನಲ್ಲಿ ಬರೆಯುವ ಎಲ್ಲ ಪತ್ರಕರ್ತರಿಗೂ ನನಗೆ ಎದುರಾಗುವ ಸಮಸ್ಯೆಗಳೇ ಎದುರಾಗುತ್ತಿರುತ್ತವೋ ಏನೋ, ಗೊತ್ತಿಲ್ಲ. ಈ ಮಾತು ಹೇಳಲು ಕಾರಣ, 'cavil' ಎಂಬ ಇಂಗ್ಲಿಷ್ ಪದವನ್ನು ನಾನು ಅಜ್ಞಾನದಿಂದ ಬಳಸಿದ ಪ್ರಸಂಗ. ವಿದ್ವಾಂಸರಾದ ಇಂಗ್ಲಿಷ್‌ಮನ್ ಒಬ್ಬರು ಬರೆದ ಪತ್ರದ ಭಾಗವೊಂದನ್ನು ನಾನು 'ಹರಿಜನ್' ಪತ್ರಿಕೆಯಲ್ಲಿ ಪ್ರಕಟಿಸಿದ್ದೆ. ಅದಕ್ಕೆ ಬರೆದ ಟಿಪ್ಪಣಿಯಲ್ಲಿ ಹೀಗೆ ಹೇಳಿದ್ದೆ:

The writer seems to cavil at the demand for Independence as distinguished from Dominion Status.

ಈ ಟಿಪ್ಪಣಿಯಲ್ಲಿ ಬಳಸಿದ 'ಕ್ಯಾವಿಲ್' ಎಂಬ ಪದದ ಬಳಕೆಯ ಬಗ್ಗೆ ನನ್ನ ಗಮನ ಸೆಳೆಯುತ್ತಾ ಆ ಇಂಗ್ಲಿಷ್‌ಮನ್ ಹೀಗೆ ಬರೆದರು: 'ನೀವು ಬಳಸಿರುವ 'ಕ್ಯಾವಿಲ್ ಎಂಬ ಪದ 'ಕುಯುಕ್ತಿಯ ಟೀಕೆ' ಎಂಬ ಅರ್ಥವನ್ನು ಸೂಚಿಸುತ್ತದೆ; ಆದರೆ ನಾನು ಪತ್ರ ಬರೆಯುವಾಗ ಆ ಅರ್ಥ ನನ್ನ ಮನಸ್ಸಿನಲ್ಲೇ ಇರಲಿಲ್ಲ.'

ಇಂಗ್ಲಿಷ್ ಪದಗಳನ್ನು ಬಳಸುವಾಗ ನಾನು ಅಪಾರ ಎಚ್ಚರಿಕೆ ವಹಿಸುತ್ತಿರುತ್ತೇನೆ. ನಾನು ಎಷ್ಟೇ ಎಚ್ಚರಿಕೆ ವಹಿಸಿದರೂ ಈ ವಿದೇಶಿ ಭಾಷೆಯ ನನ್ನ ಅಸಮರ್ಪಕ ಜ್ಞಾನವನ್ನು ಸರಿಪಡಿಸಿಕೊಳ್ಳಲಾಗಿಯೇ ಇಲ್ಲ. 'ಕ್ಯಾವಿಲ್' ಪದದ ನಿಘಂಟಿನ ಅರ್ಥ ನನಗೆ ಗೊತ್ತಿರಲಿಲ್ಲ. ಬರೆಯುವಾಗಲೋ, ಓದುವಾಗಲೋ ನನ್ನ ಕಣ್ಣಿಗೆ ಬಿದ್ದಿರಬಹುದಾದ ಈ ಪದವನ್ನು ನಾನು ಅಲ್ಲಿ ಬಳಸಿದ್ದೆನೆಂದು ಕಾಣುತ್ತದೆ. ಇಲ್ಲಿಯವರೆಗೆ ನಾನು 'ಕ್ಯಾವಿಲ್' ಎಂದರೆ 'ತೀವ್ರ ಆಕ್ಷೇಪಣೆ' ಎಂದು ಮುಗ್ಧವಾಗಿ ಅರ್ಥ ಮಾಡಿಕೊಂಡಿದ್ದೆ. ಆ ಅರ್ಥದಲ್ಲೇ ನನ್ನ ಟಿಪ್ಪಣಿಯಲ್ಲೂ ಬಳಸಿಬಿಟ್ಟಿದ್ದೆ.

ಆದರೆ ನಾನು ಚೆನ್ನಾಗಿ ಬಲ್ಲ ಈ ಲೇಖಕರು ಕುಯುಕ್ತಿಯ ಟೀಕೆ ಮಾಡುವವರಲ್ಲ ಎಂಬುದು ನನಗೆ ಚೆನ್ನಾಗಿ ಗೊತ್ತು.

ಈ ತಪ್ಪಿಗಾಗಿ ನಾನು ಅವರ ಕ್ಷಮೆ ಕೋರಿದ್ದೇನೆ. ಸದ್ಯ! ಅವರು ಈ ತಪ್ಪನ್ನು ನನ್ನ ಗಮನಕ್ಕೆ ತಂದದ್ದು ಒಳ್ಳೆಯದಾಯಿತು. ಇಂಗ್ಲಿಷ್ ಭಾಷೆ, ಅದರ ಸೂಕ್ಷ್ಮ ನುಡಿಗಟ್ಟು, ಭಾಷಾಬಳಕೆಗಳನ್ನು ಕುರಿತ ನನ್ನ ಅಜ್ಞಾನದಿಂದ ಅದೆಷ್ಟು ಜನರನ್ನು ಘಾಸಿಗೊಳಿಸಿದ್ದೇನೆಯೋ ದೇವರಿಗೇ ಗೊತ್ತು. ಅದು ಅಪ್ರಜ್ಞಾಪೂರ್ವಕವಾದುದು ಎಂಬುದು ಬೇರೆ ಮಾತು. ಒಂದು ಭಾಷೆಯನ್ನು ಬಳಸುವವರು ಹೆಚ್ಚಾದಂತೆಲ್ಲ ಭಾಷೆಯೂ ವಿಸ್ತಾರಗೊಳ್ಳುತ್ತದೆ. ಭಾಷೆಯ ಸರಿಯಾದ ಬಳಕೆ ಕುರಿತು ನನ್ನ ಕೈಲಾದಷ್ಟೂ ಸೆಣಸಾಟ ಮಾಡುತ್ತಲೇ ಇರುತ್ತೇನೆ. ನನ್ನ ಮಿತಿಗಳನ್ನು ಬಲ್ಲ ಇಂಗ್ಲಿಷ್ ಓದುಗರು ನಾನು ಬಳಸುವ ಭಾಷೆ ಎಲ್ಲಾದರೂ ನೋವುಂಟು ಮಾಡುವಂತಿದ್ದರೆ ಆ ಅಪರಾಧ ಯಾವುದೇ ಕಾರಣಕ್ಕೂ ಉದ್ದೇಶಪೂರ್ವಕವಲ್ಲ ಎಂದು ತಿಳಿಯುತ್ತಾರೆಂದು ನಿರೀಕ್ಷಿಸುವೆ.

('ಹರಿಜನ್', ೨೩ ಡಿಸೆಂಬರ್ ೧೯೩೯)

ಕನ್ನಡಕ್ಕೆ: ನಟರಾಜ್ ಹುಳಿಯಾರ್

೧೧೨

ನಾನು ನಿಮಗೆ ಹೇಳಿಕೊಡುತ್ತೇನೆ...

ಬಂಗಾಳ ಹಚ್ಚ ಹಸುರಿನ ನಾಡು. ಇಲ್ಲಿ ಸಮೃದ್ಧವಾಗಿ ನೀರಿದೆ, ಫಲವತ್ತಾದ ಭೂಮಿಯಿದೆ. ಆದರೂ ಜನ ತಮ್ಮ ಅಜ್ಞಾನದಿಂದಾಗಿ ಬಡತನ ಹಾಗೂ ಕಾಯಿಲೆಯಿಂದ ನರಳುತ್ತಿದ್ದಾರೆ. ಅಡಕೆ, ತೆಂಗು ಹಾಗೂ ಅಷ್ಟಿಷ್ಟು ಕೃಷಿಯಲ್ಲಿ ನೀವು ತೃಪ್ತರಾಗಿದ್ದೀರಿ. ಇನ್ನಷ್ಟು ತಿಳಿವಳಿಕೆಯ ಮೂಲಕ ನೀವು ಉತ್ಪಾದನೆಯನ್ನು ಹಲವು ಪಟ್ಟು ಹೆಚ್ಚಿಸಬಹುದು; ಹಳ್ಳಿಗಳನ್ನು ಶಾಂತಿ, ಸಮೃದ್ಧಿಯ ಧಾಮಗಳನ್ನಾಗಿ ಪರಿವರ್ತಿಸಬಹುದು...

ಹಳ್ಳಿಗಳಲ್ಲಿ ಹೇಗೆ ಶುದ್ಧ ನೀರನ್ನು ಪಡೆಯಬಹುದು, ನಿಮ್ಮನ್ನು ನೀವು ಹೇಗೆ ಶುಚಿಯಾಗಿಟ್ಟುಕೊಳ್ಳಬಹುದು ಎಂಬುದನ್ನು ನಾನು ನಿಮಗೆ ಹೇಳಿಕೊಡುತ್ತೇನೆ. ನಾವು ಹುಟ್ಟಿರುವ ಈ ನೆಲದ ಮಣ್ಣನ್ನು ಹೇಗೆ ಬಳಸಿಕೊಳ್ಳಬಹುದು, ನಮ್ಮ ನೆತ್ತಿಯ ಮೇಲಿರುವ ಅನಂತ ಆಕಾಶದಿಂದ ಹೇಗೆ ಪ್ರಾಣಶಕ್ತಿಯನ್ನು ಹೀರಿಕೊಳ್ಳಬಹುದು, ನಮ್ಮ ಸುತ್ತಣ ಪರಿಸರದಿಂದ ಹೇಗೆ ಶುಭ್ರವಾದ ಜೀವ ಶಕ್ತಿಯನ್ನು ಹೀರಿಕೊಳ್ಳಬಹುದು, ಸೂರ್ಯನ ಕಿರಣಗಳನ್ನು ಹೇಗೆ ಬಳಸಿಕೊಳ್ಳಬಹುದು... ಇವೆಲ್ಲವನ್ನೂ ನಾನು ನಿಮಗೆ ಕಲಿಸುತ್ತೇನೆ.

ನಮ್ಮ ದೇಶ ಬಡತನದ ಸುಳಿಗೆ ಸಿಲುಕಿದೆ. ನಾನು ಹೇಳಿಕೊಡುವ ಪಾಠಗಳಿಂದಲಾದರೂ ನೀವು ಇಲ್ಲಿನ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿ ಈ ನೆಲವನ್ನು ಚಿನ್ನದ ನಾಡನ್ನಾಗಿ ಮಾಡಬಹುದು ಎಂದು ನಂಬುತ್ತೇನೆ.

(ಜನವರಿ ೪–೬, ೧೯೪೭, ಬಂಗಾಳದ ಚಂದಿಪುರದ ಭಾಷಣಗಳಿಂದ. ಆಕರ: 'ಮೋಹನ್‌ದಾಸ್: ಎ ಟ್ರೂ ಸ್ಟೋರಿ', ಪು. ೫೮೩)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೧೩

'ಮದರ್ ಇಂಡಿಯಾ' : ಒಂದು ಪ್ರತಿಕ್ರಿಯೆ

ಕೆಲವು ಓದುಗರು ಕ್ಯಾಥರಿನ್ ಮೇಯೊ ಬರೆದ 'ಮದರ್ ಇಂಡಿಯಾ' ಪುಸ್ತಕ ಕುರಿತ ಪ್ರತಿಭಟನೆ, ವಿಮರ್ಶೆಗಳ ತುಣುಕುಗಳನ್ನು ನನಗೆ ಕಳಿಸಿದ್ದಾರೆ.

ಈ ಪುಸ್ತಕವನ್ನು ಶಕ್ತವಾಗಿ, ಜಾಣತನದಿಂದ ಬರೆಯಲಾಗಿದೆ. ಇಲ್ಲಿ ಎಚ್ಚರದಿಂದ ಆಯ್ದುಕೊಂಡಿರುವ ಹೇಳಿಕೆಗಳು ಮೇಲುನೋಟಕ್ಕೆ ಇದೊಂದು ಪ್ರಾಮಾಣಿಕವಾದ ಪುಸ್ತಕ ಎನ್ನಿಸುವಂತೆ ಮಾಡುತ್ತವೆ. ಆದರೆ ಇದು ಈ ದೇಶದಲ್ಲಿರುವ ಚರಂಡಿಗಳನ್ನು ತೆರೆಸಿ, ಪರೀಕ್ಷೆ ಮಾಡಿ, ವರದಿ ಮಾಡುವ, ಅಥವಾ ತೆರೆದ ಚರಂಡಿಗಳಿಂದ ಹುಟ್ಟುವ ದುರ್ವಾಸನೆಯನ್ನು ವಿವರವಿವರವಾಗಿ ಬಣ್ಣಿಸುವ ಏಕಮಾತ್ರ ಉದ್ದೇಶದಿಂದ ಒಬ್ಬ ಚರಂಡಿ ತಪಾಸಣೆ ಮಾಡುವ ಇನ್ಸ್‌ಪೆಕ್ಟರನ್ನು ಇಂಡಿಯಾಕ್ಕೆ ಕಳಿಸಿ ತಯಾರಿಸಿದ ವರದಿ ಎನ್ನಿಸುತ್ತದೆ. ಮಿಸ್ ಮೇಯೋ ತಾವು ಇಂಡಿಯಾಕ್ಕೆ ಹೋಗಿದ್ದೇ ಅಲ್ಲಿನ ಚರಂಡಿಗಳನ್ನು ತೆರೆದು ಪರೀಕ್ಷೆ ಮಾಡುವುದಕ್ಕೆ ಎಂದು ಹೇಳಿಕೊಂಡಿದ್ದರೆ ಅವರ ಪುಸ್ತಕದ ಈ ಜೋಡಣೆಗಳ ಬಗ್ಗೆ ನಾವು ಅಷ್ಟೇನೂ ಗೊಣಗಬೇಕಾಗುತ್ತಿರಲಿಲ್ಲ. ಆದರೆ, ಮೇಡಮ್ ಮೇಯೋ ಒಂದು ಬಗೆಯಲ್ಲಿ ಗೆದ್ದವರಂತೆ 'ಚರಂಡಿಗಳೇ ಇಂಡಿಯಾ' ಎಂದು ಒಟ್ಟಾರೆಯಾಗಿ ಹೇಳಿಬಿಡುತ್ತಾರೆ...

...ಈ ಪುಸ್ತಕವನ್ನು ಅಮೆರಿಕನ್ನರೆದುರೋ, ಇಂಗ್ಲಿಷಿನವರೆದುರೋ ಇಡುವುದರಿಂದ ಪ್ರಯೋಜನವಿಲ್ಲ ಅನ್ನಿಸುತ್ತದೆ; ಆದರೆ ಈ ಪುಸ್ತಕವನ್ನು ಪ್ರತಿಯೊಬ್ಬ ಭಾರತೀಯನೂ ಒಂದು ಮಟ್ಟದ ಲಾಭದ ದೃಷ್ಟಿಯಿಂದಲಂತೂ ಓದಬಹುದು. ಈ ಲೇಖಕಿ ತನ್ನ ಪುಸ್ತಕದಲ್ಲಿ ಮಾಡಿರುವ ಅನೇಕ ಆರೋಪಗಳ ಸಾರಾಂಶವನ್ನು ಅಲ್ಲಗಳೆಯಲು ಆಗುವುದಿಲ್ಲ. ಬೇರೆಯವರು ನಮ್ಮನ್ನು ನೋಡಿದ ರೀತಿಯಲ್ಲೇ ನಾವು ಕೂಡ ನಮ್ಮನ್ನು ನೋಡಿಕೊಳ್ಳುವುದು ಒಳ್ಳೆಯದೇ. ಈ ಪುಸ್ತಕ ಬರೆಯುವುದರ ಹಿಂದಿರುವ ಉದ್ದೇಶವನ್ನು ನಾವು ಪರೀಕ್ಷಿಸಬೇಕಾದ ಅಗತ್ಯವೂ ಇಲ್ಲ.

('ಯಂಗ್ ಇಂಡಿಯಾ', ೧೫ ಸೆಪ್ಟೆಂಬರ್ ೧೯೨೧)

ಕನ್ನಡಕ್ಕೆ: **ಎಚ್.ಎಸ್. ಶೋಯಿಂಕಾ**

ಭಾಗ : ೯

ಹೋರಾಟ, ರಾಜಕಾರಣ

'ನಾನು ಸೋಲಿನಿಂದ ಕುಸಿಯುವವನಲ್ಲ. ಬಾಲ್ಯದಿಂದಲೂ ನಾನು ಸೆಣಸಾಡುತ್ತಲೇ ಬಂದಿದ್ದೇನೆ. ಕೆಡುಕಿನಿಂದ ಒಳ್ಳೆಯದನ್ನು ಹೊರತೆಗೆಯಲು ಈ ಸೆಣಸಾಟ ಮಾಡುತ್ತಲೇ ಬಂದಿರುವೆ. ನಾವು ಕೆಸರಿನಿಂದಲೂ ಚಿನ್ನ, ವಜ್ರಗಳನ್ನು ಹೊರತೆಗೆಯಬೇಕು.'

'ಹೋರಾಟಗಾರರು ಸದಾ ಬ್ಯಾರಿಕೇಡ್‌ಗಳ ಬಳಿಯೇ ವಾಸಿಸುವುದಿಲ್ಲ.'

'ಸ್ಫೋಟದ ನಂತರ ನಾನು ನಿರ್ಮಾಣ ಮಾಡಲು ಬಯಸುತ್ತೇನೆ.'

ಮೋಹನದಾಸ್ ಕರಮಚಂದ್ ಗಾಂಧಿ

೧೧೪

ಉಪ್ಪಿನ ಸತ್ಯಾಗ್ರಹ

ಅಹ್ಮದಾಬಾದ್
ಮಾರ್ಚ್ ೯, ೧೯೩೦

ಸತ್ಯಾಗ್ರಹ ಹನ್ನೆರಡನೇ ತಾರೀಖು ಬೆಳಿಗ್ಗೆ ೬.೩೦ಕ್ಕೆ ಶುರುವಾಗಲಿದೆ. ಹಳ್ಳಿಯ ಜನ ನಮಗೆ ಊಟ ಒದಗಿಸುವ ಏರ್ಪಾಡು ಮಾಡಬಹುದು; ಅಥವಾ ಅವರು ದವಸ ಧಾನ್ಯ ತಂದುಕೊಟ್ಟರೆ ಅಡುಗೆಯ ವ್ಯವಸ್ಥೆಯನ್ನು ನಮ್ಮ ಪಾರ್ಟಿ ಜನರೇ ಮಾಡಿಕೊಳ್ಳಬೇಕಾಗುತ್ತದೆ. ಹಳ್ಳಿಯವರೇ ಒದಗಿಸಲಿ ಅಥವಾ ನಮ್ಮವರೇ ಅಡುಗೆ ಬೇಯಿಸಲಿ, ಅಡುಗೆ ಆದಷ್ಟು ಸರಳವಾಗಿರುವಂತೆ ನೋಡಿಕೊಳ್ಳಬೇಕು. ರೊಟ್ಟಿ, ಪಲ್ಯ, ಮೊಸರು... ಇಷ್ಟಿದ್ದರೆ ಆಗಬಹುದು. ಪಲ್ಯ ಕೂಡ ಒಂದಷ್ಟು ತರಕಾರಿಯನ್ನು ಬೇಯಿಸಿ ಮಾಡಿದ್ದಾದರೆ ಸಾಕು, ಅದೂ ಮೆಣಸಿನಕಾಯಿ ಮತ್ತಿತರೆ ಮಸಾಲೆ ಪದಾರ್ಥಗಳನ್ನು ಬಳಸದೆ ಮಾಡಿದ್ದಾಗಿರಬೇಕು. ಸಿಹಿತಿಂಡಿ ಮುಂತಾದವನ್ನು ತಯಾರಿಸತಕ್ಕದ್ದಲ್ಲ ಅಥವಾ ತಂದುಕೊಟ್ಟವನ್ನು ಸ್ವೀಕರಿಸತಕ್ಕದ್ದಲ್ಲ. ಹಾಗೆಯೇ ಯಾರೂ ಕೂಡ ಟೀ, ಕಾಫಿ, ಎಲೆಯಡಿಕೆ ಇತ್ಯಾದಿಗಳನ್ನು ಉಪಯೋಗಿಸತಕ್ಕದ್ದಲ್ಲ.

ನಮ್ಮ ಕಾರ್ಯಕರ್ತರು ಪ್ರತಿಯೊಂದು ಹಳ್ಳಿಯಲ್ಲೂ ಈ ಕೆಳಕಂಡ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳಬೇಕು:

೧. ಹೆಣ್ಣು, ಗಂಡು, ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಸಿ ಮುಂತಾಗಿ ವಿಭಾಗವಾರು ಜನಸಂಖ್ಯೆ.
೨. ಹಳ್ಳಿಯಲ್ಲಿರುವ ಅಸ್ಪೃಶ್ಯ ಜನಾಂಗದವರ ಸಂಖ್ಯೆ.

೩. ಹಳ್ಳಿಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆ ಇದೆಯೇ? ಇದ್ದರೆ ಅದರಲ್ಲಿ ಓದುತ್ತಿರುವ ಮಕ್ಕಳೆಷ್ಟು ಹಾಗೂ ಅವರ ಲಿಂಗವಾರು ಮಾಹಿತಿ.

೪. ಹಳ್ಳಿಯಲ್ಲಿರುವ ಮಗ್ಗಗಳ ಸಂಖ್ಯೆ.

೫. ಪ್ರತಿ ತಿಂಗಳು ಹಳ್ಳಿಯಲ್ಲಿ ತಯಾರಾಗುವ ಮತ್ತು ಮಾರಾಟವಾಗುವ ಖಾದಿಯ ಪ್ರಮಾಣ.

೬. ಖಾದಿ ಬಟ್ಟೆಗಳನ್ನು ಬಳಸುವವರ ಸಂಖ್ಯೆ.

೭. ಪ್ರತಿಯೊಂದು ಮನೆಯಲ್ಲಿ ತಿಂಗಳೊಂದಕ್ಕೆ ಬಳಕೆಯಾಗುವ ಉಪ್ಪಿನ ಪ್ರಮಾಣ.

೮. ಹಳ್ಳಿಯಲ್ಲಿರುವ ಜಾನುವಾರುಗಳ ಸಂಖ್ಯೆ.

೯. ಉಳುಮೆಯ ಭೂಮಿ ಹಾಗೂ ಒಂದು ಎಕರೆಗೆ ಪಾವತಿಯಾಗುವ ಭೂಕಂದಾಯ.

೧೦. ಹುಲ್ಲುಗಾವಲಿನ ವಿವರ.

೧೧. ಹಳ್ಳಿಯಲ್ಲಿರುವ ಮದ್ಯಪಾನಿಗಳ ಸಂಖ್ಯೆ ಹಾಗೂ ಹೆಂಡದ ಅಂಗಡಿ ಹಳ್ಳಿಯಿಂದ ಎಷ್ಟು ದೂರವಿದೆ ಎಂಬ ವಿವರ.

೧೨. ಅಸ್ಪೃಶ್ಯರಿಗೆ ಹಳ್ಳಿಯಲ್ಲಿ ದೊರಕಿರುವ ಶಿಕ್ಷಣ ಇತ್ಯಾದಿ ಸವಲತ್ತುಗಳ ಸಂಪೂರ್ಣ ವಿವರ.

ಈ ಎಲ್ಲ ಮಾಹಿತಿಯನ್ನು ಕಾರ್ಯಕರ್ತರು ಬರೆದಿಟ್ಟುಕೊಂಡು, ನಮ್ಮ ಯಾತ್ರೆ ಆಯಾ ಹಳ್ಳಿಯನ್ನು ತಲುಪಿದ ಕೂಡಲೇ ನಮ್ಮ ಕೈಗಿಡುವುದು.

(ನವಜೀವನ್, ೯.೩.೧೯೩೦, 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೪೩, ಪು. ೩೩-೩೫)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೧೧೫

ಕ್ರಾಂತಿಕಾರಿ ಹಾದಿ

ಈ ಬಹಿರಂಗ ಪತ್ರ ಬರೆದಿರುವ [ಸುಖದೇವ್] 'ಕ್ರಾಂತಿಕಾರಿಗಳು ತಮ್ಮ ಚಳುವಳಿಯನ್ನು ಹಿಂತೆಗೆದುಕೊಳ್ಳುವಂತೆ ಭಾವನಾತ್ಮಕ ಮನವಿಗಳನ್ನು ಮಾಡುವುದನ್ನು ಬಿಟ್ಟು ನೀವು ಬೇರೇನನ್ನೂ ಮಾಡಿಲ್ಲ' ಎಂದು ಹೇಳಿರುವುದು ತೀರಾ ಅನ್ಯಾಯದ ಮಾತಾಗಿದೆ. ವಾಸ್ತವ ಸತ್ಯ ಅವರು ಹೇಳಿದ್ದಕ್ಕಿಂತ ತೀರಾ ಭಿನ್ನವಾಗಿದೆ. ಕಾರಣ, ನಾನು ನಮ್ಮ ಈ ಪತ್ರಿಕೆಯ ಪುಟಗಳಲ್ಲಿ ಕಟು ವಾಸ್ತವದ ಸತ್ಯಾಂಶಗಳನ್ನು ಮತ್ತೆ ಮತ್ತೆ ಹೇಳುತ್ತಾ ಬಂದಿದ್ದೇನೆ:

೧. ಕ್ರಾಂತಿಕಾರಿ ಚಟುವಟಿಕೆ ನಮ್ಮನ್ನು ಸ್ವಾತಂತ್ರ್ಯದ ಗುರಿಯ ಸನಿಹಕ್ಕೆ ಒಯ್ದಿಲ್ಲ.

೨. ದೇಶದ ಮಿಲಿಟರಿ ವೆಚ್ಚಕ್ಕೆ ಅದು ಇನ್ನಷ್ಟು ವೆಚ್ಚವನ್ನು ಸೇರಿಸಿದೆ.

೩. ಅದು ಯಾವ ಒಳಿತನ್ನೂ ಮಾಡಿಲ್ಲ; ಜೊತೆಗೆ ಸರ್ಕಾರದ ಪ್ರತೀಕಾರಕ್ಕೂ ಹಾದಿ ಮಾಡಿಕೊಟ್ಟಿದೆ.

೪. ಕ್ರಾಂತಿಕಾರಿ ಹತ್ಯೆ ನಡೆದಾಗಲೆಲ್ಲ, ಆ ಪ್ರದೇಶಗಳಲ್ಲಿ ಕೆಲವು ಕಾಲ ಜನರ ಕಷ್ಟ ಸಹಿಷ್ಣುತೆಯ ಗುಣಗಳನ್ನು ನಾಶ ಮಾಡಿದೆ.

೫. ಸಮುದಾಯ ಜಾಗೃತಿಗೆ ಈ ಚಟುವಟಿಕೆಯು ಯಾವ ಕೊಡುಗೆಯನ್ನೂ ಕೊಟ್ಟಿಲ್ಲ.

೬. ಜನಸಮುದಾಯದ ಮೇಲೆ ಈ ಬಗೆಯ ಚಟುವಟಿಕೆ ಎರಡು ಬಗೆಯ ದುಷ್ಪರಿಣಾಮ ಬೀರುತ್ತದೆ: ಹೇಗೆಂದರೆ, ತಮ್ಮ ಮೇಲೆ ಬೀಳುವ ಹೆಚ್ಚುವರಿ ವೆಚ್ಚದ ಹೊರೆಯನ್ನೂ, ಸರ್ಕಾರದ ಸಿಟ್ಟಿನ ಪರೋಕ್ಷ ಪರಿಣಾಮವನ್ನೂ ಜನರೇ ಎದುರಿಸಬೇಕಾಗುತ್ತದೆ.

೭. ಇತಿಹಾಸ ತೋರಿಸಿಕೊಟ್ಟಿರುವಂತೆ, ಭಾರತದ ನೆಲದಲ್ಲಿ ಕ್ರಾಂತಿಕಾರಿ ಹತ್ಯೆಗಳು ಉಳಿದು ಬೆಳೆಯಲಾರವು. ಕಾರಣ ಭಾರತೀಯ ಪರಂಪರೆ ರಾಜಕೀಯ ಹಿಂಸೆಯ ಬೆಳವಣಿಗೆಯನ್ನು ಅನುಮೋದಿಸುವುದಿಲ್ಲ.

೮. ಕ್ರಾಂತಿಕಾರಿಗಳು ತಮ್ಮ ವಿಧಾನಕ್ಕೆ ಜನರನ್ನು ಪರಿವರ್ತಿಸಲು ಹೊರಡುವುದಾದರೆ, ಅದು ಸಮುದಾಯದೊಳಗೆ ಹಬ್ಬುವಂತೆ ಮಾಡಲು ಹಾಗೂ ನಂತರ ಸ್ವಾತಂತ್ರ್ಯ ಪಡೆಯಲು ನಾವು ಬಹುಕಾಲ ಕಾಯಬೇಕಾಗುತ್ತದೆ.

೯. ಒಂದು ವೇಳೆ ಎಂದಾದರೂ ಕ್ರಾಂತಿಕಾರಿ ವಿಧಾನ ಜನಪ್ರಿಯವಾದರೂ ಕೂಡ, ಇತರ ದೇಶಗಳಲ್ಲಾಗಿರುವಂತೆ ಅದು ನಮ್ಮ ತಲೆಯ ಮೇಲೇ ಎರಗುವುದು ಖಚಿತ.

೧೦. ತಮ್ಮ ಮಾರ್ಗಕ್ಕೆ ತದ್ವಿರುದ್ಧವಾಗಿರುವ ಅಹಿಂಸಾಮಾರ್ಗದ ಸಫಲತೆಯ ಬಗ್ಗೆ ಕ್ರಾಂತಿಕಾರಿಗಳು ಮೇಲುನೋಟದ ತಿಳಿವಳಿಕೆಯನ್ನಷ್ಟೇ ಹೊಂದಿದ್ದಾರೆ. ಆದರೆ, ಅಲ್ಲಲ್ಲಿ ನಡೆಯುವ ಹಿಂಸೆಗಳ ನಡುವೆ, ಹಾಗೂ ಅಹಿಂಸೆಯ ಪಾಲಕರು ಎಂದು ಹೇಳಿಕೊಳ್ಳುವವರು ಕೂಡ ಎಸಗುವ ಹಿಂಸೆಯ ನಡುವೆ ಅಹಿಂಸಾ ಮಾರ್ಗ ತನ್ನ ಕೆಲಸ ಮಾಡುತ್ತಲೇ ಬಂದಿದೆ.

೧೧. ಕ್ರಾಂತಿಕಾರಿಗಳ ಚಟುವಟಿಕೆ ಅಹಿಂಸಾ ಚಳುವಳಿಗೆ ಯಾವ ಒಳಿತನ್ನೂ ಮಾಡಿಲ್ಲವಷ್ಟೇ ಅಲ್ಲ, ಬದಲಿಗೆ ಅದು ಚಳುವಳಿಗೆ ಹಾನಿಯನ್ನೇ ಉಂಟು ಮಾಡಿದೆ ಎಂಬ ನನ್ನ ಸಾಕ್ಷ್ಯಾಧಾರದ ಹೇಳಿಕೆಯನ್ನು ಕ್ರಾಂತಿಕಾರಿಗಳು ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಇಲ್ಲಿ ಸಂಪೂರ್ಣ ಶಾಂತಿಯುತ ವಾತಾವರಣ ಇದ್ದಿದ್ದರೆ, ನಾವು ಇಷ್ಟು ಹೊತ್ತಿಗಾಗಲೇ ಗುರಿ ಮುಟ್ಟಿರುತ್ತಿದ್ದೆವು.

(ಭಗತ್ ಸಿಂಗ್ ಅವರ ಸಂಗಾತಿಯಾಗಿದ್ದ ಸುಖದೇವ್ ಅವರ ಪತ್ರಕ್ಕೆ ಗಾಂಧೀಜಿಯ ಪ್ರತಿಕ್ರಿಯೆ. ಈ ಪತ್ರ ಸುಖದೇವರ ಮರಣಾನಂತರ ಗಾಂಧೀಜಿಗೆ ತಲುಪಿತು. 'ಯಂಗ್ ಇಂಡಿಯಾ', ೨೩.೪.೧೯೩೧, 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೪೬, ಪು. ೨೯-೩೦)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೧೬

ವಿದ್ಯಾರ್ಥಿಗಳು ಮತ್ತು ಚಳುವಳಿ

ವಿದ್ಯಾರ್ಥಿಗಳು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸುವುದಿದ್ದರೆ ಕೆಲವು ನಿಯಮಗಳನ್ನು ಪಾಲಿಸಬೇಕು:

೧. ಪಕ್ಷ ರಾಜಕೀಯದಲ್ಲಿ ವಿದ್ಯಾರ್ಥಿಗಳು ಭಾಗವಹಿಸಬಾರದು. ಇಲ್ಲಿ ವಿದ್ಯಾರ್ಥಿಗಳು ಎಂದರೆ ಸಂಶೋಧಕರು, ರಾಜಕಾರಣಿಗಳಲ್ಲ.

೨. ರಾಜಕೀಯ ಮುಷ್ಕರಗಳಲ್ಲಿ ಪಾಲ್ಗೊಳ್ಳಬಾರದು.

೩. ಚರಕದಿಂದ ನೂಲು ತೆಗೆಯಬೇಕು.

೪. ಖಾದಿಯನ್ನು ತೊಡಬೇಕು, ವಿದೇಶಿ ವಸ್ತುಗಳನ್ನು ತಿರಸ್ಕರಿಸಬೇಕು.

೫. 'ವಂದೇ ಮಾತರಂ' ಗೀತೆಯನ್ನು ಹಾಡಬೇಕೆಂದಾಗಲಿ, ರಾಷ್ಟ್ರಧ್ವಜವನ್ನು ಹಾರಿಸಬೇಕೆಂದಾಗಲಿ ಬೇರೊಬ್ಬರ ಮೇಲೆ ಒತ್ತಾಯ ತರಬಾರದು.

೬. ಹಿಂದೂಸ್ಥಾನಿ ಭಾಷೆಯನ್ನು ಕಲಿಯಬೇಕು.

೭. ಅಸ್ಪೃಶ್ಯತೆಯ ಭಾವನೆ ಮತ್ತು ಮತೀಯ ಭಾವನೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳ ಬಾರದು. ಬೇರೆ ಮತಗಳು ಹಾಗೂ ಪಂಗಡಗಳಿಗೆ ಸೇರಿದವರೊಂದಿಗೆ ಗೆಳೆತನ ಬೆಳೆಸಬೇಕು. ಹರಿಜನ ಸಹಪಾಠಿಗಳನ್ನು ಸ್ವಂತ ಸಹೋದರ, ಸಹೋದರಿ ಯರಂತೆ ನಡೆಸಿಕೊಳ್ಳಬೇಕು.

೮. ತಾವು ಕಲಿಯುವ ಪ್ರತಿಯೊಂದು ಹೊಸ ಸಂಗತಿಯನ್ನು ಮಾತೃಭಾಷೆಗೆ ಅನುವಾದ ಮಾಡಿ ಸುತ್ತಮುತ್ತಲಿನ ಹಳ್ಳಿಯ ಜನಕ್ಕೆ ತಿಳಿಸಬೇಕು.

೯. ಮೋಸ, ಆಸೆ ಮತ್ತು ಭಯಗಳಿಂದ ಮುಕ್ತವಾದ, ಪರಿಶುದ್ಧವಾದ ಜೀವನ ನಡೆಸಬೇಕು.

೧೦. ಸಹವಿದ್ಯಾರ್ಥಿನಿಯರೊಂದಿಗೆ ಗೌರವದಿಂದ ನಡೆದುಕೊಳ್ಳಬೇಕು.

(ಮೂಲ ಬರಹ: 'ಕನ್‌ಸ್ಟ್ರಕ್ಟಿವ್ ಪ್ರೋಗ್ರಾಮ್: ಇಟ್ಸ್ ಮೀನಿಂಗ್ ಅಂಡ್ ಪ್ಲೇಸ್'.)

ಕನ್ನಡಕ್ಕೆ: **ಬಿ.ಎ. ಶ್ರೀಧರ**

೧೧೭

ಸ್ವಾತಂತ್ರ್ಯ ಚಳುವಳಿ ಸೇರಬಯಸುವ ಹೆಣ್ಣುಮಕ್ಕಳಿಗೆ

ಸ್ವಾತಂತ್ರ್ಯ ಚಳುವಳಿ ಸೇರಬಯಸುವ ನಮ್ಮ ಸೋದರಿಯರ ತಹತಹ ನಿಜಕ್ಕೂ ಆರೋಗ್ಯಕರ ಸೂಚನೆಯಾಗಿದೆ...

ಹೆಣ್ಣನ್ನು ದುರ್ಬಲೆ ಎಂದು ಕರೆಯುವುದು ಅಪಮಾನಕರವಾದುದು. ಅದು ಹೆಣ್ಣಿಗೆ ಮಾಡಿದ ಅನ್ಯಾಯ. 'ಶಕ್ತಿ' ಎನ್ನುವುದು 'ನೈತಿಕ ಶಕ್ತಿ' ಎನ್ನುವುದಾದರೆ, ಹೆಣ್ಣು ಈ ವಿಚಾರದಲ್ಲಿ ಗಂಡಿಗಿಂತ ಎತ್ತರದಲ್ಲಿದ್ದಾಳೆ; ಅಳತೆಗೆ ಸಿಕ್ಕದಷ್ಟು ಎತ್ತರದಲ್ಲಿದ್ದಾಳೆ. ಹೆಚ್ಚಿನ ಸಹಜ ಸ್ಫೂರ್ತಿ ಇರುವುದು ಹೆಣ್ಣಿಗೇ ತಾನೆ? ಹೆಣ್ಣಲ್ಲವೆ ಹೆಚ್ಚು ತ್ಯಾಗಜೀವಿ? ಹೆಣ್ಣಲ್ಲವೆ ಹೆಚ್ಚು ಧೈರ್ಯಶಾಲಿ? ಅಹಿಂಸೆ ನಮ್ಮ ಭವಿಷ್ಯವನ್ನು ಮುನ್ನಡೆಸಬಲ್ಲ ನಿಯಮವಾಗುವುದಾದರೆ, ಭವಿಷ್ಯವು ಹೆಣ್ಣಿನ ಕೈಯಲ್ಲಿದೆ.

('ಯಂಗ್ ಇಂಡಿಯಾ', ೧೦.೪.೧೯೩೦)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೧೮

ಸಂತನೋ? ರಾಜಕಾರಣಿಯೋ?

ಸಹೃದಯಿ ಮಿತ್ರರೊಬ್ಬರು ಏಪ್ರಿಲ್ ತಿಂಗಳ 'ಈಸ್ಟ್ ಅಂಡ್ ವೆಸ್ಟ್' ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಪ್ರತಿಯೊಂದನ್ನು ಕಳುಹಿಸಿಕೊಟ್ಟಿದ್ದಾರೆ. ಆ ಲೇಖನದಲ್ಲಿ ನನ್ನ ಕುರಿತಾಗಿ ಹೀಗೆ ಬರೆಯಲಾಗಿದೆ:

'ಶ್ರೀಯುತ ಗಾಂಧಿಯವರಿಗೆ ಸಂತ ಎಂಬ ಖ್ಯಾತಿ ಅಥವಾ ಬಿರುದು ಇದೆ. ಆದರೆ, ಅವರೊಳಗೊಬ್ಬ ರಾಜಕಾರಣಿ ಇದ್ದು, ಅವರು ತೆಗೆದುಕೊಳ್ಳುವ ತೀರ್ಮಾನಗಳಲ್ಲಿ ರಾಜಕಾರಣಿಯ ಪ್ರಭಾವ ಎದ್ದು ಕಾಣುತ್ತಿದೆ. ಈ ಕಾರಣದಿಂದಾಗಿ ಅವರು 'ಹರತಾಳ' ಅಥವಾ ಪ್ರತಿಭಟನೆಯನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದಾರೆ. ಜೊತೆಗೆ, ಅದು ಅವರ ಪಾಲಿಗೆ ಲಾಭದಾಯಕವಾಗಿರುವುದು ಮಾತ್ರವಲ್ಲದೆ, ಪ್ರಬಲ ರಾಜಕೀಯ ಅಸ್ತ್ರವಾಗಿ ಬಳಕೆಯಾಗುತ್ತಿದ್ದು, ಶಿಕ್ಷಿತ ಮತ್ತು ಅಶಿಕ್ಷಿತ ಸಮುದಾಯವನ್ನು ಕೇವಲ ಒಂದು ದಿನದಲ್ಲಿ ಒಗ್ಗೂಡಿಸುವಷ್ಟು ಪ್ರಭಾವಶಾಲಿಯಾಗಿದೆ. ಅವರು ನಡೆಸುತ್ತಿರುವ ಪ್ರತಿಭಟನೆ ಅಥವಾ ಸತ್ಯಾಗ್ರಹದಲ್ಲಿ ಅಪ್ರಯೋಜನಕಾರಿ ಅಂಶಗಳಿರುವುದನ್ನು ತಳ್ಳಿ ಹಾಕುವಂತಿಲ್ಲ. ಅದು ನೇರ ಕಾರ್ಯಾಚರಣೆ(ಡೈರೆಕ್ಟ್ ಆ್ಯಕ್ಷನ್)ಕುರಿತು ಉಪದೇಶಿಸುವುದರ ಜೊತೆಗೆ ಹಾಗೆ ಮಾಡುವಂತೆ ನಿರ್ದೇಶನ ನೀಡುತ್ತದೆ. ಇದರೊಳಗಿನ ಈ ಪ್ರಬಲ ಅಂಶ ಒಗ್ಗೂಡಿಸುವ ಕ್ರಿಯೆಗೆ ಸಹಕಾರಿಯಲ್ಲ. ಶ್ರೀಯುತ ಗಾಂಧಿಯವರು ನಿಜವಾಗಿಯೂ ಅಹಿಂಸಾವಾದಿಗಳೆ? ಅವರೊಳಗೆ ಹಾನಿಕಾರಕ ಅಂಶಗಳಿಲ್ಲವೆ? ಅವರು ಜಲಿಯನ್‌ವಾಲಾಬಾಗ್‌ನಲ್ಲಿ ನಡೆದ ಹತ್ಯಾಕಾಂಡದ ನೆನಪಿಗಾಗಿ ಸ್ಮಾರಕವನ್ನು ನಿರ್ಮಿಸುವುದರ ಕುರಿತಂತೆ ಬೆಂಬಲ ನೀಡುತ್ತಿರುವುದು, ಅವರು ಪ್ರತಿಪಾದಿಸುವ ಅಹಿಂಸಾ ತತ್ವಗಳಿಗೆ ಅನುಗುಣವಾಗಿಲ್ಲ. ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಆಕಸ್ಮಿಕವಾಗಿ ಜರುಗಿದ ದುರಂತ ಘಟನೆ. ಇದಕ್ಕಾಗಿ ನಮ್ಮ ಸರ್ಕಾರವನ್ನು (ಬ್ರಿಟಿಷ್ ಸರ್ಕಾರ) ತೀವ್ರತರವಾದ ಟೀಕೆಗೆ ಗುರಿಪಡಿಸಲಾಯಿತು. ನಮ್ಮ ಸರ್ಕಾರ ಕೂಡ ಅಲ್ಲಿ ಸ್ಮಾರಕವನ್ನು ನಿರ್ಮಾಣ

ಮಾಡಬಹುದು, ಅಷ್ಟೇ ಏಕೆ, ಶಾಂತಿ ದೇಗುಲವನ್ನೂ ಸಹ ನಿರ್ಮಿಸಬಹುದು. ಈ ದುರಂತ ಘಟನೆಯಲ್ಲಿ ಕಾರಣವಿಲ್ಲದೆ ಪ್ರಾಣಕಳೆದುಕೊಂಡ ನತದೃಷ್ಟರ ಪತ್ನಿಯರಿಗೆ ಮತ್ತು ಅವರ ಮಕ್ಕಳಿಗೆ ಆಶ್ರಯ ಕಲ್ಪಿಸಿ ನೆರವಾಗಬಹುದು.

'ಈ ಜಗತ್ತು ರಾಜಕಾರಣಿಗಳಿಂದ ಮತ್ತು ಕೀಳುಮಟ್ಟದ ಪ್ರತಿಪಾದಕರಿಂದ ತುಂಬಿ ತುಳುಕುತ್ತಿದೆ. ಇವರೆಲ್ಲರೂ ದೇಶಭಕ್ತಿಯ ಹೆಸರಿನಲ್ಲಿ ಕಾರ್ಯನಿರತರಾಗಿದ್ದಾರೆ. ಮನುಷ್ಯನ ಸಿಹಿ ಮಾತುಗಳು ವಿಷದಿಂದ ಕೂಡಿವೆ. ಇದರ ಪರಿಣಾಮವೆಂಬಂತೆ ಯುದ್ಧ ಮತ್ತು ದ್ವೇಷಗಳಿಂದ ಕೂಡಿದ ಹಾಗೂ ಅಪಮಾನಕಾರಿಯಾದ ಹತ್ಯಾಕಾಂಡ ಘಟನೆಯು ಜಲಿಯನ್‌ವಾಲಾಬಾಗ್‌ನಲ್ಲಿ ಸಂಭವಿಸಿತು. ಈ ಸಂದರ್ಭದಲ್ಲಿ ಎಲ್ಲರೂ ಕೂಡಿ ಸಹಬಾಳ್ವೆ ನಡೆಸುವಂತೆ ಬುದ್ಧ ಅಥವಾ ಏಸುಕ್ರಿಸ್ತರ ಮಾದರಿಯಲ್ಲಿ ಉಪದೇಶ ಮಾಡಲು ಸಾಧ್ಯವಿಲ್ಲವೆ? ಈ ಕುರಿತಂತೆ ಗಾಂಧಿಯವರ ವರ್ತನೆಯನ್ನು ಗಮನಿಸಿದರೆ, ಈ ಕ್ಷಣದಲ್ಲಿ ಅವರು ದೇವದೂತರಾಗುವ ಬಯಕೆಯ ಬಂಧನದಲ್ಲಿರುವಂತೆ ಕಾಣುತ್ತಾರೆ. ಆದರೆ, ಪರಿಸ್ಥಿತಿಯು ಅವರನ್ನು ಸಿಡಿದೇಳುವಂತೆ ಪ್ರಚೋದಿಸಿ ಎಲ್ಲರನ್ನು ಒಗ್ಗೂಡಿಸುವಂತೆ ಮಾಡಿದೆ. ಅವರು ಇನ್ನೂ ವಿಶಾಲವಾದ ದೃಷ್ಟಿಕೋನದಲ್ಲಿ ಭಾರತವನ್ನು ಮಾತ್ರವಲ್ಲದೆ, ಜಗತ್ತನ್ನು ಒಗ್ಗೂಡಿಸುವ ಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಿತ್ತು.'

ಲೇಖನದ ಸಂಪೂರ್ಣ ಸಾರಾಂಶವನ್ನು ನಾನಿಲ್ಲಿ ನೀಡಿದ್ದೇನೆ. ನನ್ನ ತಪ್ಪುಗಳನ್ನು ತಿದ್ದಿಕೊಳ್ಳುವಂತಹ ಅಥವಾ ನನ್ನ ತತ್ವ ಸಿದ್ಧಾಂತಗಳನ್ನು ಬದಲಾಯಿಸಿಕೊಳ್ಳಲು ನೀಡಿದ ಒಳ್ಳೆಯ ಟೀಕೆ ಅಥವಾ ವಿಮರ್ಶೆಗಳನ್ನು ಹೊರತುಪಡಿಸಿದರೆ, ಸಾಮಾನ್ಯವಾಗಿ ನಾನು ಜೀವನದಲ್ಲಿ ಅಳವಡಿಸಿಕೊಂಡಿರುವ ನಿಯಮಗಳ ಪ್ರಕಾರ, ನನ್ನ ಕುರಿತಾದ ಟೀಕೆ ಟಿಪ್ಪಣಿಗಳನ್ನು ಗಮನಿಸುವುದಿಲ್ಲ. ಏಕೆಂದರೆ, ಅವುಗಳು ನಮ್ಮ ಜೀವನತತ್ವ ಅಥವಾ ಸಿದ್ಧಾಂತಗಳನ್ನು ಕಟುವಾಗಿ ಟೀಕೆ ಮಾಡಲು ಟೀಕಾಕಾರರನ್ನು ಉದ್ದೀಪಿಸ ಬಲ್ಲವು. ಆದರೆ, ಈ ಲೇಖನದಲ್ಲಿ ನನ್ನ ವ್ಯಕ್ತಿತ್ವ ಕುರಿತಾದ ವಿಮರ್ಶೆ ಬರೆದ ಲೇಖಕರಿಗೆ ನಾನು ಕೃತಜ್ಞನಾಗಿದ್ದೇನೆ. ಏಕೆಂದರೆ, ನಾನು ಅವರನ್ನು ಬಹಳ ವರ್ಷಗಳಿಂದ ಬಲ್ಲವನಾಗಿದ್ದು, ಅವರ ವ್ಯಕ್ತಿತ್ವದ ಸೌಂದರ್ಯಕ್ಕೆ ಮಾರು ಹೋದವರಲ್ಲಿ ನಾನೂ ಒಬ್ಬನಾಗಿದ್ದೇನೆ. ಲೇಖಕರು ನನ್ನೊಳಗೆ ಒಬ್ಬ ರಾಜಕಾರಣಿಯನ್ನು ಕಂಡ ಕಾರಣಕ್ಕಾಗಿ ವಿಷಾದ ವ್ಯಕ್ತಪಡಿಸಿದ್ದಾರೆ. ಏಕೆಂದರೆ, ಅವರು ನನ್ನಲ್ಲಿ ಸಂತನ ಗುಣವನ್ನು ನಿರೀಕ್ಷಿಸಿದ್ದರು. ನನ್ನ ವಿವೇಚನೆಯ ಪ್ರಕಾರ, ಪ್ರಸ್ತುತ ಜಗತ್ತಿನ ರಾಜಕಾರಣ ದಿಂದ 'ಸಂತ' ಎಂಬ ಶಬ್ದವನ್ನು ಹೊರಗಿಡಬೇಕು. ಏಕೆಂದರೆ, ಅತ್ಯಂತ ಪವಿತ್ರವಾದ ಆ ಶಬ್ದವನ್ನು ಅತ್ಯಂತ ಹಗುರವಾಗಿ ಎಲ್ಲರಿಗೂ ಅನ್ವಯಿಸಲಾಗುತ್ತಿದೆ.

ನನ್ನ ಕುರಿತಾಗಿ ಅತ್ಯಂತ ವಿನಯದಿಂದ ಹೇಳಿಕೊಳ್ಳಬಹುದಾದರೆ, ನಾನು ಸತ್ಯಾನ್ವೇಷಣೆಯ ಓರ್ವ ಪಥಿಕ ಮಾತ್ರ. ನನ್ನ ಮಿತಿಗಳನ್ನು ನಾನು ಬಲ್ಲವನಾಗಿದ್ದು; ಆಗಾಗ್ಗೆ ತಪ್ಪುಗಳನ್ನು ಮಾಡುತ್ತಾ, ಅವುಗಳನ್ನು ತಿದ್ದಿಕೊಳ್ಳುತ್ತಾ, ಮಾಡಿದ ತಪ್ಪುಗಳನ್ನು

ಯಾವುದೇ ಮುಜುಗರವಿಲ್ಲದೆ ಒಪ್ಪಿಕೊಳ್ಳುತ್ತಾ ಸಾಗಿರುವ ವಿಜ್ಞಾನಿಯಂತಹ ಮನುಷ್ಯ. ಒಬ್ಬ ವಿಜ್ಞಾನಿ ತನ್ನ ಪ್ರಯೋಗದಲ್ಲಿ ಸ್ಪಷ್ಟವಾದ ಹಾಗೂ ನಿಖರವಾದ ಹಾಗೂ ಶಾಶ್ವತವಾದ ಫಲಿತಾಂಶಗಳನ್ನು ಪಡೆಯಲು ಯತ್ನಿಸುವ ರೀತಿಯಲ್ಲಿ ತೊಡಗಿರುವ ಮನುಷ್ಯ. ಜೀವನದಲ್ಲಿ ಇಂತಹ ಪ್ರಯೋಗಗಳಿಂದ ಮಾತ್ರ ಖಚಿತವಾದ ಸತ್ಯಾಂಶ ಗಳನ್ನು ಪಡೆಯಲು ಸಾಧ್ಯ ಎಂದು ನಂಬಿದವನು ನಾನು.

ನಾನು ಅವರ ದೃಷ್ಟಿಯಲ್ಲಿ ರಾಜಕಾರಣಿಯಾಗಿರುವುದಕ್ಕೆ ವಿಷಾದ ವ್ಯಕ್ತಪಡಿಸಿರುವ ಪ್ರತಿಕ್ರಿಯೆಗೆ ನಾನು ಉತ್ತರ ನೀಡದೆ ಸುಮ್ಮನಿರಬಹುದಿತ್ತು. ನನ್ನ ವ್ಯಕ್ತಿತ್ವದ ಒಳಗೆ ಎಂದಿಗೂ ರಾಜಕಾರಣಿ ನನ್ನ ಮೇಲೆ ಅಧಿಕಾರ ಸ್ಥಾಪಿಸಿಲ್ಲ. ರಾಜಕಾರಣ ಪ್ರಸ್ತುತ ನನ್ನ ಬದುಕಿನ ಒಂದು ಭಾಗ ಮಾತ್ರ. ನನ್ನ ಸುತ್ತ ಆವರಿಸಿಕೊಂಡಿರುವ ರಾಜಕೀಯ ಚಟುವಟಿಕೆಗಳು ಇದಕ್ಕೆ ಕಾರಣ. ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇದು ಒಂದು ರೀತಿಯಲ್ಲಿ ಹಾವಿನ ಬಿಗಿಯಪ್ಪುಗೆಯೊಳಗೆ ಸಿಲುಕಿದ ಜೀವಿಯ ಹಾಗೆ. ಅದರ ಹಿಡಿತದಿಂದ ಬಿಡಿಸಿಕೊಳ್ಳಲು ನಾವು ಸದಾ ಹೋರಾಡುತ್ತಲೇ ಇರಬೇಕು. ಇದರಲ್ಲಿ ನಾನು ಕ್ರಿಯಾಶೀಲನಾಗಿದ್ದೇನೆ. ಜಯಾಪಜಯಗಳ ನಡುವೆ, ಪ್ರಜ್ಞಾ ಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ೧೯೭೪ರಿಂದ ನಾನು ಈ ಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಹಲವು ವರ್ಷಗಳ ಯತ್ನದಿಂದಾಗಿ ನಾನು ಯಾವುದು ಸತ್ಯ, ಯಾವುದು ಮಿಥ್ಯ ಎಂಬುದನ್ನು ಅರಿಯುವ ವಿವೇಚನೆಯನ್ನೂ ಸಹ ದಕ್ಕಿಸಿಕೊಂಡಿದ್ದೇನೆ.

ಸ್ವಲ್ಪ ಸ್ವಾರ್ಥದಿಂದ ಹೇಳಬೇಕೆಂದರೆ, ನನ್ನ ಸುತ್ತಮುತ್ತ ಆವರಿಸಿಕೊಂಡಿರುವ ಸುಂಟರಗಾಳಿಯಂತಹ ಬದುಕಿನ ನಡುವೆ ನಾನು ಶಾಂತವಾಗಿ ಜೀವಿಸಲು ಇಚ್ಛಿಸುತ್ತೇನೆ. ನನ್ನ ಗೆಳೆಯರನ್ನೂ ಒಳಗೊಂಡಂತೆ, ನನ್ನ ಬದುಕನ್ನು ಹಲವು ಬಾರಿ ಪ್ರಯೋಗಕ್ಕೆ ಒಡ್ಡಿದ್ದೇನೆ. ರಾಜಕೀಯಕ್ಕೆ ಧರ್ಮವನ್ನು ಬೆಸೆಯುವ ಪ್ರಯತ್ನ ಮಾಡಿದ್ದೇನೆ. ಈ ಕುರಿತು ವಿವರವಾಗಿ ಹೇಳುವುದಾದರೆ, ನನ್ನ ಪ್ರಕಾರ ಧರ್ಮ ಎಂದರೆ, ಅದು ಕೇವಲ ಹಿಂದೂ ಧರ್ಮ ಮಾತ್ರವಲ್ಲ; ನಾನು ಗೌರವಿಸುವ ಎಲ್ಲಾ ಧರ್ಮಗಳೂ ಅದರಲ್ಲಿ ಅಡಕವಾಗಿವೆ. ಆದರೆ, ಹಿಂದುತ್ವ ಎನ್ನುವುದು ಎಲ್ಲಾ ಧರ್ಮಗಳನ್ನು ಮೀರಿ ನಿಂತ ಒಂದು ಪ್ರಜ್ಞೆ ಅಥವಾ ಭಾವನೆಯಾಗಿದ್ದು, ಬದಲಾವಣೆಯೆಂಬುದು ಅದರ ಸಹಜ ಸ್ವರೂಪವಾಗಿದೆ. ಸತ್ಯವನ್ನು ವ್ಯಕ್ತಿಯೊಂದಿಗೆ ಬೆಸೆಯುವ ಗುಣ ಅದರಲ್ಲಿ ಅಡಕವಾಗಿದೆ. ಇದರಿಂದಾಗಿ ಪವಿತ್ರವಾದ ಬದುಕನ್ನು ಬದುಕಲು ವ್ಯಕ್ತಿ ಇಚ್ಛಿಸುತ್ತಾನೆ. ಇವೆಲ್ಲವೂ ಹಿಂದುತ್ವದ ಮೂಲಭೂತ ಗುಣಗಳಾಗಿದ್ದು ಮನುಷ್ಯನ ಸಹಜ ಕ್ರಿಯೆಗಳಾಗಿವೆ; ಇದರಿಂದಾಗಿ ಅದು ಮನುಷ್ಯನನ್ನು ತಪ್ಪು ಎಸಗದಂತೆ, ಅವಿಶ್ರಾಂತವಾಗಿ ವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತಲೇ ಇರುತ್ತದೆ. ಇದು ಮನುಷ್ಯನ ಆತ್ಮ ಮತ್ತು ಸೃಷ್ಟಿಕರ್ತನ ನಡುವಿನ ಒಂದು ಬಾಂಧವ್ಯ.

ಇಂತಹ ಧಾರ್ಮಿಕ ಸ್ಫೂರ್ತಿಯಿಂದಲೇ ನಾನು ಸತ್ಯಾಗ್ರಹ ಅಥವಾ ಹರತಾಳಗಳನ್ನು ನಡೆಸುತ್ತಿದ್ದೇನೆ. ಇದು ಪಠ್ಯಗಳಿಂದ ಅಥವಾ ಗ್ರಂಥಗಳಿಂದ ಪಡೆಯುವಂತಹದ್ದಲ್ಲ. ಭಾರತದ ಆತ್ಮದೊಂದಿಗೆ ಇಂತಹ ಪ್ರಜ್ಞೆ ಮಿಳಿತಗೊಂಡಿದೆ. ಇದು ಎಲ್ಲಾ ಸುಶಿಕ್ಷಿತರನ್ನು ಒಂದುಗೂಡಿಸುತ್ತದೆ. ಇಂತಹ ಮಾಂತ್ರಿಕ ಧಾರ್ಮಿಕ ಸ್ಫೂರ್ತಿಯಿಂದ ೧೯೧೯ರ ಏಪ್ರಿಲ್ ೬ರಂದು [ಜಲಿಯನ್‌ವಾಲಾಬಾಗ್‌ನಲ್ಲಿ] ಎಲ್ಲರೂ ಒಂದುಗೂಡಲು ಸಾಧ್ಯವಾಯಿತು. ಇದರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಯಾವ ಅಡಚಣೆಯನ್ನೂ ಮಾಡುವ ಉದ್ದೇಶವಿರಲಿಲ್ಲ. ಆದರೆ, ಸೈತಾನನೊಬ್ಬ ಭಯದಿಂದ ಸರ್ಕಾರದ ಕಿವಿಯಲ್ಲಿ ಆತಂಕ ಮತ್ತು ಪ್ರಾಣಭಯವನ್ನು ಊದಿದ ಫಲವಾಗಿ ಸರ್ಕಾರವು ಮಾನವಕುಲವು ಕ್ಷಮಿಸಲಾರದಂತಹ ಕೃತ್ಯವನ್ನು ಎಸಗಿತು. ಜಲಿಯನ್‌ವಾಲಾಬಾಗ್‌ನಲ್ಲಿ ಸೇರಿದ್ದ ಅಮಾಯಕರ ಮೇಲೆ ಗುಂಡಿನ ದಾಳಿಯಾಯಿತು. ಇದಕ್ಕೆ ಪ್ರತಿಯಾಗಿ ಭಾರತವು ಮನಸ್ಸು ಮಾಡಿದ್ದರೆ, ಸೇಡು ತೀರಿಸಿಕೊಳ್ಳಬಹುದಿತ್ತು. ಅದು ಎದ್ದು ನಿಂತಿದ್ದರೆ, ಯಾರೂ ಊಹಿಸಲಾರದ ಎತ್ತರಕ್ಕೆ ಎದ್ದು ನಿಲ್ಲುತ್ತಿತ್ತು. ಆದರೆ, ಅಹಿಂಸೆಯ ಪ್ರತೀಕವಾಗಿ ಆಚರಣೆಗೆ ತಂದಿರುವ ಹರತಾಳವು ಭಾರತದ ಜನಸಮುದಾಯವನ್ನು ಹಿಂಸೆಗೆ ಇಳಿಯದಂತೆ ಮಾಡಿ, ಅವರನ್ನು ಸಂಯಮದಿಂದ ಇರಲು ಪ್ರೇರೇಪಿಸಿತು. ಇದು ನಿಜವಾದ ಧಾರ್ಮಿಕ ಪ್ರಜ್ಞೆ ಅಥವಾ ಸ್ಫೂರ್ತಿ. ಇದರ ಮೂಲಕವೇ ನೇರ ಕಾರ್ಯಾಚರಣೆಗೆ ನಾನು ಮುನ್ನುಡಿ ಬರೆದಿದ್ದೇನೆ.

ಆದರೆ ನೇರ ಕಾರ್ಯಾಚರಣೆ ಕುರಿತು ನನ್ನ ಟೀಕಾಕಾರರು ಮರುಕಪಟ್ಟಿದ್ದಾರೆ. ನೇರ ಕಾರ್ಯಾಚರಣೆಯು ಜನತೆಯನ್ನು ಒಂದುಗೂಡಿಸುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯ ಕುರಿತು ಅವರೊಂದಿಗೆ ಸಂವಾದ ಮಾಡಬಯಸುತ್ತೇನೆ. ನೇರ ಕಾರ್ಯಾಚರಣೆಯ ಕ್ರಿಯೆಗಳಿಲ್ಲದೆ ಈ ಜಗತ್ತಿನಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲ. ನಾನು 'ಪ್ಯಾಸಿವ್ ರೆಸಿಸ್ಟೆನ್ಸ್' ಅಥವಾ 'ನಿಷ್ಕ್ರಿಯ ಪ್ರತಿರೋಧ'ವನ್ನು ತಿರಸ್ಕರಿಸಿದ್ದೇನೆ. ಏಕೆಂದರೆ, ಇದು ಕೊರತೆಯಿಂದ ಕೂಡಿದ್ದು ನಿಷ್ಕ್ರಿಯತೆ ಅದರ ಆಯುಧವಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ನಿರಂತರವಾಗಿ ಜರುಗಿದ ನೇರ ಕಾರ್ಯಾಚರಣೆಯ (ಪ್ರತಿಭಟನೆಯ) ಘಟನೆಗಳಿಂದ ಅಲ್ಲಿನ ಜನರಲ್ ಸ್ಮಟ್ಸ್‌ನ ಮನಪರಿವರ್ತನೆಯಾಗಲು ಸಾಧ್ಯವಾಯಿತು. ಆತನಲ್ಲಿ ವಿವೇಕ ಮೂಡಿತು. ೧೯೦೬ರಲ್ಲಿ ಜನರಲ್ ಸ್ಮಟ್ಸ್ ಅಲ್ಲಿನ ಭಾರತದ ನಿವಾಸಿಗಳ ಮಹತ್ವಾಕಾಂಕ್ಷೆಗಳ ಕಡು ವಿರೋಧಿಯಾಗಿದ್ದ. ೧೯೧೪ರಲ್ಲಿ ಅಲ್ಲಿನ ಸರ್ಕಾರದ ದಾಖಲೆಯ ಪುಸ್ತಕದಲ್ಲಿ ಭಾರತದ ಸಮುದಾಯಕ್ಕೆ ಯಾವುದೇ ನ್ಯಾಯ ಸಿಗದಂತೆ ಹಾಗೂ ವಿಳಂಬವಾಗುವಂತೆ ನಿರ್ದಯವಾಗಿ ನಡೆದುಕೊಂಡಿದ್ದ. ೧೯೦೯ರಲ್ಲಿ ಇದೇ ವ್ಯಕ್ತಿ ಲಾರ್ಡ್ ಮೋರ್ಲೆಯವರಿಗೆ ಭಾರತೀಯರ ಹಕ್ಕುಬಾಧ್ಯತೆಗಳನ್ನು ಕಸಿದುಕೊಳ್ಳುವುದಿಲ್ಲ ಎಂದು ಭರವಸೆ ನೀಡಿದ್ದ.

ನಂತರದ ದಿನಗಳಲ್ಲಿ ಟ್ರಾನ್ಸ್‌ವಾಲ್ ಶಾಸನ ಸಭೆಯಲ್ಲಿ ಭಾರತೀಯರಿಗೆ ವಾಸಿಸುವ ಹಾಗೂ ವ್ಯವಹಾರದ ಹಕ್ಕುಗಳನ್ನು ನೀಡಬೇಕೆಂದು ಎರಡು ಬಾರಿ ಅನುಮೋದನೆ ದೊರೆತರೂ ಸಹ ಇಂತಹ ಪ್ರಕ್ರಿಯೆಗಳನ್ನು ನಾನು ಸಹಿಸುವುದಿಲ್ಲ ಎಂಬ ಪ್ರತಿಕ್ರಿಯೆ ನೀಡಿದ್ದ. ನಂತರ ನಿರಂತರವಾಗಿ ಎಂಟು ವರ್ಷಗಳ ಕಾಲ ನಡೆದ ಹೋರಾಟ ಅಥವಾ ನೇರ ಕಾರ್ಯಾಚರಣೆಗೆ ಅವನು ಮಣಿಯಬೇಕಾಯಿತು. ಪ್ರತಿಭಟನೆಯ ಭಿತ್ತಿ ಫಲಕಗಳು ಹಾಗೂ ಬ್ಯಾನರ್‌ಗಳ ಮೂಲಕ ಅಲ್ಲಿನ ಪ್ರತಿಯೊಬ್ಬ ಭಾರತೀಯ ತೋರಿದ ಪ್ರತಿರೋಧಕ್ಕೆ ೧೯೧೪ರಲ್ಲಿ ಜನರಲ್ ಸ್ಮಟ್ಸ್ ಶರಣಾಗಬೇಕಾಯಿತು. ಭಾರತದ ಚಂಪಾರಣ್ ಸತ್ಯಾಗ್ರಹದ ಸಂದರ್ಭದಲ್ಲಿ ಕೂಡ, ಹಲವು ವರ್ಷಗಳ ಕಾಲ ತಳವೂರಿದ್ದ ಬ್ರಿಟಿಷ್ ಸರ್ಕಾರದ ಅಮಾನುಷವಾದ ಕಾನೂನುಗಳನ್ನು ಇಂತಹ ಹೋರಾಟದಿಂದ ಹತ್ತಿಕ್ಕಲು ಸಾಧ್ಯವಾಯಿತು.

ತಾಳ್ಮೆಯ ಮನೋಭಾವದಿಂದ ವ್ಯಕ್ತಿಯು ದೈಹಿಕವಾಗಿ ಬಲಹೀನನಾಗಿದ್ದರೂ ಸಹ ತನ್ನ ಮನೋಬಲದಿಂದ ಹೋರಾಡುತ್ತಾ ತನ್ನ ಕಣ್ಣೆದುರಿಗಿನ ಅಸಮಾನತೆಗಳನ್ನು ಹೋಗಲಾಡಿಸಬಲ್ಲ. ಆತನಲ್ಲಿ ಸಮುದಾಯವನ್ನು ಒಗ್ಗೂಡಿಸಲು ಸಾಧ್ಯವಾಗದಿದ್ದರೂ, ಅವನೊಳಗೆ ಹೆಪ್ಪುಗಟ್ಟುವ ಆಕ್ರೋಶ ಯಾವ ಕ್ಷಣದಲ್ಲಾದರೂ ಸಿಡಿಯಬಹುದಾಗಿದೆ. ನಾನು ಇಂತಹ ಅಶಕ್ತ ವ್ಯಕ್ತಿಯೊಂದಿಗೆ ಕೈ ಜೋಡಿಸಿ, ಅಂಥವರಿಗೆ ಉಪದೇಶ ಅಥವಾ ಮಾರ್ಗದರ್ಶನ ಮಾಡುತ್ತಾ ಅವರ ಸ್ಥೈರ್ಯವನ್ನು ಹೆಚ್ಚಿಸುತ್ತೇನೆ. ಆತನಲ್ಲಿ ದೈಹಿಕವಾಗಿ ಅಲ್ಲದಿದ್ದರೂ, ಮಾನಸಿಕವಾಗಿ ನಾನೂ ಬಲಶಾಲಿ ಎಂಬ ಭಾವನೆಯನ್ನು ಮೂಡಿಸುತ್ತೇನೆ. ಇಂತಹ ಕ್ಷಣದಲ್ಲಿ ಅವನು ಹೋರಾಟಕ್ಕೆ ಅಣಿಯಾಗುತ್ತಾನೆ. ಕಳೆದುಕೊಂಡಿದ್ದ ಆತ್ಮಶಕ್ತಿಯನ್ನು ಅವನು ಮರಳಿ ಪಡೆಯುತ್ತಾನೆ. ಅವನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದು ನೆರವಾಗುತ್ತದೆ. ತಾನು ಪರಿಹಾರ ಕಾಣದ ಸಮಸ್ಯೆಗಳಿಗೆ ಉತ್ತರ ಕಂಡುಕೊಂಡ ನೆಮ್ಮದಿಯನ್ನು ಅವನು ಪಡೆದುಕೊಳ್ಳುತ್ತಾನೆ.

ನಾನು ಇದೇ ಮಾರ್ಗವನ್ನು ಅನುಸರಿಸಿ ಜಲಿಯನ್‌ವಾಲಾಬಾಗ್ ಸ್ಮಾರಕ ನಿರ್ಮಾಣಕ್ಕೆ ಸಲಹೆ ಮಾಡಿದ್ದೇನೆ. ಈ ವಿಷಯ ಕುರಿತು ಲೇಖಕರು 'ಈಸ್ಟ್ ವೆಸ್ಟ್' ಪತ್ರಿಕೆಯ ಲೇಖನದಲ್ಲಿ, ಗಾಂಧಿಯ ಮನಸ್ಸಿನೊಳಗೆ ಸ್ಮಾರಕದ ಆಲೋಚನೆ ಈ ಮೊದಲು ಇರಲಿಲ್ಲವೆಂದು ಹೇಳಿದ್ದಾರೆ. ಅಂದರೆ, ನಾನು ಆ ದುರಂತ ಘಟನೆಯನ್ನು ಮಾತ್ರ ನೆನಪಿನಲ್ಲಿ ಇಟ್ಟುಕೊಳ್ಳಬೇಕೆಂದು ಹಾಗೂ ಈ ಕುರಿತು ಬೇರಾವ ಆಲೋಚನೆಯೂ ನನ್ನೊಳಗೆ ಇರಬಾರದೆಂದು ಅವರು ಬಯಸುತ್ತಾರೆ. ನಾನು ಯಾವುದೇ ದ್ವಂದ್ವ ಅಥವಾ ಅಂಜಿಕೆಯಿಲ್ಲದೆ ಹೇಳುವುದಾದರೆ, ಇಂತಹ ದುರಂತಗಳು ನಮ್ಮ ಮನಸ್ಸಿನಿಂದ ಅಳಿಸಿಹೋಗಬಾರದೆಂಬ ದೃಷ್ಟಿಯಿಂದ, ಹಾಗೂ ಯಾವ ಉದ್ದೇಶಕ್ಕಾಗಿ ತಾವು ಪ್ರಾಣಬಿಟ್ಟೆವು ಎಂಬುದನ್ನು ಅರಿಯಲಾರದೆ ಮಡಿದ

ಅಮಾಯಕರ ಸಾವಿನ ಆ ಘಟನೆಯು ನಮ್ಮ ನೆನಪಿನ ಗಣಿಯಾಗಿರಲಿ ಎಂಬ ಉದ್ದೇಶದಿಂದ ಸ್ಮಾರಕ ನಿರ್ಮಾಣಕ್ಕೆ ನಾನು ದೃಢನಿರ್ಧಾರ ಮಾಡಿದ್ದೇನೆ. ಇದು ಘಟನೆಯಲ್ಲಿ ಪ್ರಾಣ ಕಳೆದುಕೊಂಡ ನತದೃಷ್ಟರ ಕುಟುಂಬದ ಸದಸ್ಯರಿಗೆ, ನಿರ್ಗತಿಕರಾದ ಪತ್ನಿಯರು ಮತ್ತು ಮಕ್ಕಳಿಗೆ ನೆರವಾಗಬಲ್ಲದು. ದುರಂತದಲ್ಲಿ ಮಡಿದ ಹುತಾತ್ಮರನ್ನು ಗೌರವಿಸಲು ಇದು ಸರಿಯಾದ ಮಾರ್ಗ. ಗುಂಡಿನ ಸುರಿಮಳೆಯಲ್ಲಿ ಹರಿದ ಹುತಾತ್ಮರ ರಕ್ತದಿಂದ ತೊಯ್ದ ಆ ಭೂಮಿಯನ್ನು ನಾವು ವಶಪಡಿಸಿಕೊಳ್ಳದಿದ್ದರೆ ನಮ್ಮ ಗುರಿಗೆ ಅರ್ಥವಿರುವುದಿಲ್ಲ. ಸ್ಮಾರಕವು ಹುತಾತ್ಮರ ಬಲಿದಾನವನ್ನು ನಮಗೆ ನೆನಪಿಸುತ್ತದೆ. ಇಡೀ ರಾಷ್ಟ್ರಕ್ಕೆ ಅವರ ಬಲಿದಾನ ಮಾದರಿಯಾಗುತ್ತದೆ. ಯಾವುದೇ ದುರುದ್ದೇಶವಿಲ್ಲದೆ, ನಿರಾಯುಧರಾಗಿ ಪ್ರಾಣ ತೆತ್ತ ಆ ನತದೃಷ್ಟರು ಪ್ರಜಾಪೀಡಕರಾಗಿರಲಿಲ್ಲ ಎಂಬುದನ್ನು ಜಗತ್ತಿಗೆ ಸಾರುತ್ತದೆ. ಮುಂದಿನ ತಲೆಮಾರು ಈ ದುರಂತ ಘಟನೆಯನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಹಾಗೂ ಅಮಾಯಕರ ಇಂತಹ ಸಾವು ಇತಿಹಾಸದ ವಿಸ್ಮೃತಿಗೆ ಜಾರಬಾರದು ಎಂಬುದು ನನ್ನ ನಿಲುವಾಗಿದೆ. ಶ್ರೀಮತಿ ಜಿನ್ನಾರವರು ಸ್ಮಾರಕದ ನಿಧಿಗೆ ಧನಸಹಾಯ ಮಾಡುವಾಗ ನೀಡಿದ ಪ್ರತಿಕ್ರಿಯೆ ನಿಜಕ್ಕೂ ಗಮನಾರ್ಹವಾಗಿದೆ. ಸ್ಮಾರಕಗಳು ಬದುಕಿರುವವರಿಗೆ ಕ್ಷಮಾದಾನವನ್ನು ನೀಡುತ್ತವೆ ಎನ್ನುವ ಅವರ ಮಾತು ಸ್ಫೂರ್ತಿದಾಯಕವಾಗಿದೆ. ಜಲಿಯನ್‌ವಾಲಾಬಾಗ್ ಪ್ರದೇಶದಲ್ಲಿ ನಿರ್ಮಾಣವಾಗುವ ಸ್ಮಾರಕವು ದುರಂತದಲ್ಲಿ ಮಡಿದವರ ಮತ್ತು ಕೊಂದವರ ಚಾರಿತ್ರ್ಯವನ್ನು ನಿರ್ಧರಿಸುತ್ತದೆ.

ಸಹಬಾಳ್ವೆ ಅಥವಾ ಸಹಜೀವನ ಎಂದರೇನು? ಮಾನವಕುಲದ ಇತಿಹಾಸದಲ್ಲಿ ಗೌತಮಬುದ್ಧ ಮತ್ತು ಏಸುಕ್ರಿಸ್ತರು ಇದನ್ನು ಉಪದೇಶಿಸಿಲ್ಲವೆ? ಗೌತಮಬುದ್ಧನು ಎದೆಗುಂದದೆ, ಸಹಬಾಳ್ವೆಗೆ ಆದ್ಯತೆ ನೀಡಿ, ಹಿಂಸೆಯ ವಿರುದ್ಧ ಯುದ್ಧವನ್ನೇ ಸಾರಿದನು. ಸೊಕ್ಕಿನ ಪುರೋಹಿತಶಾಹಿಯನ್ನು ಕಾರುಣ್ಯ ಮತ್ತು ಪ್ರೀತಿಯ ಮುಂದೆ ಮಂಡಿಯೂರುವಂತೆ ಮಾಡಿದನು. ಏಸುಕ್ರಿಸ್ತನು ಸಹ ಜೆರೋಸಲಂನ ದಲ್ಲಾಳಿಗಳ ಕೂಟವಾಗಿದ್ದ ಪ್ರಾರ್ಥನಾ ಮಂದಿರದಿಂದ ಹೊರಬಂದುದು ಮಾತ್ರವಲ್ಲದೆ, ಜನತೆಗೆ ಪರಿಹಾರವನ್ನು ಸೂಚಿಸಿದನು. ಇದಲ್ಲದೆ ಸ್ವರ್ಗದ ಭ್ರಮೆ ಹಾಗೂ ಧಾರ್ಮಿಕ ಮೂಢನಂಬಿಕೆಗಳನ್ನು ಅಲ್ಲಗಳೆದನು. ಈ ಇಬ್ಬರೂ ಮಹನೀಯರು ನೇರ ಕಾರ್ಯಾಚರಣೆಯ ಮೂಲಕವೇ ಧಾರ್ಮಿಕ ಸುಧಾರಣೆಗಳನ್ನು ಕೈಗೊಂಡರು. ಬುದ್ಧ ಮತ್ತು ಕ್ರಿಸ್ತ ಇಬ್ಬರೂ ಯಾವುದೇ ತಪ್ಪು ಎಸಗದಿದ್ದರೂ ಅವರನ್ನು ಶಿಕ್ಷಿಸಲಾಯಿತು. ಶಿಕ್ಷೆಗೆ ಪ್ರತಿಯಾಗಿ ಇವರು ತೋರಿದ್ದು ಪ್ರೀತಿ ಮತ್ತು ಕಾರುಣ್ಯ ಮಾತ್ರ. ಅವರಿಬ್ಬರೂ ತಮ್ಮ ಎದುರಾಳಿಗಳ ವಿರುದ್ಧ ಬೆರಳು ತೋರಲಿಲ್ಲ ಅಥವಾ ಕೈ ಎತ್ತಲಿಲ್ಲ. ಬದಲಾಗಿ ತಾವು ನಂಬಿದ್ದ ಸತ್ಯ ಮತ್ತು ನಂಬಿಕೆಗಳಿಗೆ ಶರಣಾದರು. ಗೌತಮಬುದ್ಧನು ತನ್ನ

ಕಾಲಘಟ್ಟದ ಮೌಢ್ಯ ಮತ್ತು ಪುರೋಹಿತಶಾಹಿಗಳ ವಿರುದ್ಧ ಪ್ರೀತಿ ಮತ್ತು ಕರುಣೆಯನ್ನು ತೋರದೆ ಪ್ರತಿಭಟಿಸಿದ್ದರೆ ಸಾವಿಗೆ ಶರಣಾಗಬೇಕಿತ್ತು. ಆದರೆ, ದಯೆಯ ಮೂಲಕ ಎಲ್ಲರನ್ನೂ ಶರಣಾಗುವಂತೆ ಮಾಡಿದನು. ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಬಿಡುವಾಗ, ತಲೆಯನ್ನು ಅಲಂಕರಿಸಲಾಗಿದ್ದ ತಂತಿಯ ಕಿರೀಟ ಹೊತ್ತು ಸಾಮ್ರಾಜ್ಯಗಳಿಗೆ ಸವಾಲು ಎಸೆದನು. ಆದರೆ, ತಾನು ನಂಬಿದ ತತ್ವ ಸಿದ್ಧಾಂತಗಳನ್ನು ಸಾವಿಗೆ ಹೆದರಿ ಬಲಿಕೊಡಲಿಲ್ಲ. ಕೊನೆಯ ಕ್ಷಣದಲ್ಲಿ ತನ್ನನ್ನು ಕೊಲ್ಲುತ್ತಿರುವವರನ್ನು ಕ್ಷಮಿಸುವಂತೆ ದೇವರಲ್ಲಿ ಪ್ರಾರ್ಥಿಸಿದನು. ನಾನು ಇಂದು ಅಹಿಂಸಾತ್ಮಕವಾಗಿ ಪ್ರತಿರೋಧ ಒಡ್ಡುತ್ತಿರುವ ಕ್ರಿಯೆಯ ಹಿಂದೆ ಅಂತಹ ಮಹಾ ಪುರುಷರ ಪ್ರಭಾವವಿದೆ. ಅವರು ತುಳಿದ ಹಾದಿಯಲ್ಲಿ ನಾನು ಸಾಗುತ್ತಿದ್ದೇನೆ ಎಂದು ನನ್ನನ್ನು ಟೀಕಿಸುವವರಿಗೆ ಹೇಳಬಯಸುತ್ತೇನೆ.

ಕೊನೆಯದಾಗಿ, ಲೇಖಕರು ತಮ್ಮ ಲೇಖನದಲ್ಲಿ ನಾನು ಜನತೆಯನ್ನು ಒಗ್ಗೂಡಿಸುವುದರ ಕುರಿತು ನನ್ನ ಜೊತೆ ಸಂಘರ್ಷಕ್ಕೆ ಇಳಿದಿದ್ದಾರೆ. ನಾನು ಈ ಕ್ರಿಯೆಗೆ ಬದಲಾಗಿ ಇನ್ನೂ ಉದಾತ್ತವಾದ ಹಾಗೂ ವಿಶ್ವಾತ್ಮಕವಾದ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕಿತ್ತು ಎಂಬ ಅಭಿಪ್ರಾಯಪಟ್ಟಿದ್ದಾರೆ. ಒಮ್ಮೆ ನಾನು ಅವರನ್ನು ಭೇಟಿಯಾಗಿದ್ದ ಸಂದರ್ಭದಲ್ಲಿ, 'ನಾನು ನಿಮಗಿಂತ ವಿಶಾಲ ದೃಷ್ಟಿಕೋನದ ವ್ಯಕ್ತಿ' ಎಂದು ಹೇಳಿದ್ದೆ. ಆ ಹೇಳಿಕೆಗೆ ಈಗಲೂ ಸಹ ನಾನು ಬದ್ಧನಾಗಿದ್ದೇನೆ. ನಾನು ಸ್ಥಳಿಯ ಜನತೆಯನ್ನು ಒಗ್ಗೂಡಿಸದೆ, ವಿಶ್ವವನ್ನು ಒಗ್ಗೂಡಿಸಲು ಸಾಧ್ಯವಾಗುವುದಿಲ್ಲ. ಒಮ್ಮೆ ಟಾಲ್‌ಸ್ಟಾಯ್ ಹೇಳಿದ ಮಾತುಗಳಿವು: 'ನಾವುಗಳು ನಮ್ಮ ನೆರೆಹೊರೆಯವರ ಸಹಾಯವಿಲ್ಲದೆ ಬದುಕುವುದಾದರೆ, ನಮ್ಮ ಸಹಾಯವಿಲ್ಲದ ಜಗತ್ತು ಸರಿಯಾದ ಹಾದಿಯಲ್ಲಿ ಸಾಗುತ್ತದೆ. ನಮ್ಮ ನೆರೆಹೊರೆಯವರನ್ನು ಬೇಟೆಯಾಡುವುದನ್ನು ನಿಲ್ಲಿಸುವುದರ ಮೂಲಕ, ಸರಿಯಾದ ಹಾಗೂ ವರ್ಗೀಕರಿಸಿದ ಏಕತೆಯ ವಲಯವು ಸನ್ನಿವೇಶಕ್ಕೆ ತಕ್ಕಂತೆ ತನ್ನ ವಿಸ್ತೀರ್ಣವನ್ನು ವಿಸ್ತರಿಸಿಕೊಳ್ಳುತ್ತಾ, ತನ್ನ ಅಂತಿಮ ನಿಲ್ದಾಣವನ್ನು ತಲುಪುತ್ತದೆ.' ನಮ್ಮ ದೇಶದ ಅಜ್ಞಾತ ಋಷಿಗಳು ಹೇಳಿದ, 'ಯಥಾ ಪಿಂಡೇ ತಥಾ ಬ್ರಹ್ಮಾಂಡೇ' ಎನ್ನುವ ಮಾತು ಕೂಡ ಇದೇ ಆಗಿದೆ.

(ಜಲಿಯನ್‌ವಾಲಾಬಾಗ್ ಸ್ಮಾರಕದ ನಿರ್ಮಾಣ ಕುರಿತಂತೆ ಓದುಗರೊಬ್ಬರು ಮಾಡಿದ ಟೀಕೆಗೆ ಗಾಂಧೀಜಿಯವರ ಉತ್ತರ. ೧೨. ೬. ೧೯೨೦. 'ಯಂಗ್ ಇಂಡಿಯಾ'. 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೧೭. ಪು. ೪೦೫-೬)

ಕನ್ನಡಕ್ಕೆ: **ಜಗದೀಶ ಕೊಪ್ಪ**

೧೧೯

ಯಹೂದಿಗಳು ಮತ್ತು ಪ್ಯಾಲೆಸ್ತೀನ್ ಬಿಕ್ಕಟ್ಟು

ಯಹೂದಿಗಳಿಗೆ ದೊಡ್ಡ ಅನ್ಯಾಯವಾಗಿದೆ. ಚಿತ್ರಹಿಂಸೆಗೆ ಅವರನ್ನು ಗುರಿ ಮಾಡಲಾಗಿದೆ. ಯುರೋಪಿನಾದ್ಯಂತ ಅವರ ನೆಲೆಗಳನ್ನು ಪ್ರತ್ಯೇಕಿಸಿ 'ಗೆಟೋ' ಪ್ರದೇಶಗಳೆಂದು ಅವನ್ನು ಹೆಸರಿಸಲಾಗಿದೆ. ಯುರೋಪಿನ ಅಭಿವೃದ್ಧಿಯಲ್ಲಿ ಯಹೂದಿಗಳ ಪಾಲೂ ಸಾಕಷ್ಟಿದ್ದು, ಉಳಿದವರಿಗೆ ಈ ಅಂಶ ಮನವರಿಕೆಯಾದಂತಿಲ್ಲ. ಜಗತ್ತೇ ತಮ್ಮ ನೆಲೆ ಎಂಬ ಭಾವನೆ ಬರುವಂತೆ ಯಹೂದಿಗಳನ್ನು ನಡೆಸಿಕೊಳ್ಳುವುದು ಯುರೋಪಿಯನ್ನರಿಗೆ ಸಾಧ್ಯವಿತ್ತು. ಈಗಿನ ವಿಷಮ ಸ್ಥಿತಿಯಲ್ಲಿ ಯಹೂದ್ಯರಿಗೆ ಪ್ಯಾಲೇಸ್ತೀನ್‌ನಲ್ಲಿ ತಮ್ಮ ನೆಲೆಯನ್ನರಸುವುದು ಅನಿವಾರ್ಯವಾಗಿಬಿಟ್ಟಿದೆ.

ಆದರೆ ಪ್ಯಾಲೆಸ್ತೀನ್‌ನಲ್ಲಿ ನೆಲೆಗೊಳ್ಳಲು ಅಮೆರಿಕ ಮತ್ತು ಬ್ರಿಟನ್‌ಗಳ ನೆರವನ್ನು ಕೋರಿದ್ದು ಮಾತ್ರ ಯಹೂದ್ಯರು ಮಾಡಿದ ದೊಡ್ಡ ತಪ್ಪು. ಈಗ ಉಗ್ರವಾದಿಗಳ ಬೆಂಬಲವನ್ನೂ ಪಡೆಯುವ ಮೂಲಕ ಅವರು ಇನ್ನೂ ದೊಡ್ಡ ತಪ್ಪು ಮಾಡುತ್ತಿದ್ದಾರೆ. ತಾವು ವಿಶ್ವಪ್ರಜೆಗಳು ಎಂಬ ಸಂಗತಿಯೇ ಯಹೂದ್ಯರನ್ನು ಯಾವುದೇ ದೇಶದ ಗೌರವಾನ್ವಿತ ಅತಿಥಿಗಳನ್ನಾಗಿಸಬಹುದಿತ್ತು. ಅಥವಾ ಇಲ್ಲಿ ಸಂಭವದ ಮಾತೇ ಬೇಡ; ಖಂಡಿತ ಅವರು ಜಗತ್ತಿನ ಯಾವುದೇ ದೇಶದ ಗೌರವಾನ್ವಿತ ಅತಿಥಿಗಳಂತೆ ಪರಿಗಣಿಸಲ್ಪಡಬೇಕಿತ್ತು. ಅವರ ಮಿತವ್ಯಯ ಗುಣ, ಬಹುಮುಖ ಪ್ರತಿಭೆ, ಪರಿಶ್ರಮ ಇತ್ಯಾದಿಗಳನ್ನು ಕಂಡಾಗ ಹೀಗಾಗದೆ ಇದ್ದುದು ಆಶ್ಚರ್ಯವೆನಿಸುತ್ತದೆ.

ಒಬ್ಬ ಐನ್‌ಸ್ಟೈನ್‌ನ ಸಂಶೋಧನೆ ಅಥವಾ ಇನ್ನಾರೋ ಒಬ್ಬ ಯಹೂದಿಯ ಸಂಗೀತ ಸಾಧನೆಯನ್ನು ವ್ಯಕ್ತಿಗತವಾಗಿ ನೋಡುವ ಕ್ರಿಶ್ಚಿಯನ್ ಜಗತ್ತು, ಒಬ್ಬ ಯಹೂದಿಯ ಅಪರಾಧವನ್ನು ಮಾತ್ರ ವ್ಯಕ್ತಿಗತವಾಗಿ ನೋಡಲು ತಯಾರಾಗದೆ ಇಡೀ ಸಮುದಾಯಕ್ಕೆ ಅದನ್ನು ಆರೋಪಿಸಲು ತೊಡಗುತ್ತದೆ ಎನ್ನುವುದು

ವಿಪರ್ಯಾಸವಲ್ಲದೆ ಮತ್ತೇನು? ಬೈಬಲ್‌ನ 'ಹೊಸ ಒಡಂಬಡಿಕೆ'ಯನ್ನು ತಮಗೆ ಬೇಕಾದಂತೆ ಅರ್ಥೈಸಿಕೊಂಡು ಯಹೂದಿಗಳನ್ನು ಹೀನಾಯವಾಗಿ ನಡೆಸಿಕೊಂಡ ಕಳಂಕ ಈಗ ಕ್ರೈಸ್ತರಿಗೆ ಅಂಟಿಕೊಂಡಿದೆ.

ಯಹೂದಿಗಳ ದುರಂತಕ್ಕೆ ಮರುಗುವುದನ್ನು ಬಿಟ್ಟು ನಮಗೆಲ್ಲ ಬೇರೆ ದಾರಿ ಉಳಿದಿಲ್ಲ. ಈ ವಿಪತ್ಕಾಲದಲ್ಲಿ ಅವರು ಸಮತೋಲನವನ್ನು ಕಾಯ್ದುಕೊಳ್ಳಬಹುದು ಎಂಬ ನಿರೀಕ್ಷೆಯಿತ್ತು. ಹೀಗೇನೂ ಆಗಿಲ್ಲ. ಅಮೆರಿಕನ್ ಹಣ, ಬ್ರಿಟನ್ ಯುದ್ಧಸಾಮಗ್ರಿ, ಭಯೋತ್ಪಾದಕರ ನೆರವಿನ ಮೂಲಕ ತಮಗೆ ಸ್ವಾಗತವೇ ಇರದ ಒಂದು ನಾಡಿನಲ್ಲಿ ಯಹೂದಿಗಳು ತಮ್ಮ ಭವಿಷ್ಯವನ್ನು ಅರಸುತ್ತಿದ್ದಾರೆ.

(ಹರಿಜನ್, ೨೧.೦೭.೧೯೪೬. 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೮೪, ಪು. ೪೪೦-೪೪೧)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೧೨೦

ಹೋರಾಟಗಾರರಿಗೆ ಸೂಚನೆ

ಖೇಡಾ ರೈತರ ಪ್ರಶ್ನೆಯ ಚರ್ಚೆ ಇನ್ನೂ ನಡೆಯುತ್ತಿರುವಾಗಲೇ ನಾನು ಅಹಮ್ಮದಾಬಾದ್ ಕೂಲಿಗಳ ಪ್ರಶ್ನೆಯನ್ನು ಕೈಯಲ್ಲಿ ತೆಗೆದುಕೊಂಡಿದ್ದೆನು.

ನಾನು ಬಹಳ ಸೂಕ್ಷ್ಮ ಪರಿಸ್ಥಿತಿಯಲ್ಲಿದ್ದೆನು. ಗಿರಣಿ ಕೂಲಿಗಳ ವಾದ ನ್ಯಾಯವಾಗಿದ್ದಿತು. ಶ್ರೀಮತಿ ಅನಸೂಯಾಬಾಯಿ ತನ್ನ ಅಣ್ಣನಿಗೆ ಎದುರಾಗಿ ಹೋರಾಡಬೇಕಾಗಿದ್ದಿತು. ಅವರಣ್ಣ ಗಿರಣಿ ಮಾಲೀಕರ ಮುಖಂಡರಾಗಿದ್ದರು. ನನ್ನ ಸಂಬಂಧ ಅವರೊಂದಿಗೆ ಸ್ನೇಹಮಯವಾಗಿದ್ದಿತು. ಅದರಿಂದ ಹೋರಾಟ ಮತ್ತಷ್ಟು ಕಷ್ಟವಾಯಿತು. ನಾನು ಅವರೊಂದಿಗೆ ಸಮಾಲೋಚನೆ ನಡೆಸಿ, ವ್ಯಾಜ್ಯವನ್ನು ಪಂಚಾಯಿತಿಗೆ ಒಪ್ಪಿಸಬೇಕೆಂದು ಪ್ರಾರ್ಥಿಸಿದೆನು. ಆದರೆ ಅವರು ಪಂಚಾಯಿತಿಯ ತತ್ವವನ್ನು ಒಪ್ಪಲಿಲ್ಲ.

ಆದುದರಿಂದ ನಾನು ಕೂಲಿಗಳಿಗೆ 'ಮುಷ್ಕರ ಹೂಡಿ' ಎಂದು ಸಲಹೆ ಮಾಡಬೇಕಾಯಿತು. ಹಾಗೆ ಮಾಡುವುದಕ್ಕೆ ಮುಂಚೆ, ನಾನು ಅವರ ಮತ್ತು ಅವರ ಮುಖಂಡರ ನಿಕಟ ಬಾಂಧವ್ಯವನ್ನು ಪಡೆದು ಮುಷ್ಕರವು ಜಯಶಾಲಿಯಾಗಬೇಕಾದರೆ ಅನುಸರಿಸಬೇಕಾದ ಷರತ್ತುಗಳ ವಿಷಯವನ್ನು ತಿಳಿಸಿದೆನು:

೧. ಹಿಂಸೆಯನ್ನು ಎಂದಿಗೂ ಆಚರಿಸಕೂಡದು.
೨. ಮುಷ್ಕರಕ್ಕೆ ವಿರೋಧವಾಗಿ ಕೆಲಸಕ್ಕೆ ಹೋಗುವವರನ್ನು ಹಿಂಸಿಸಕೂಡದು.
೩. ಭಿಕ್ಷೆ ಬೇಡಬಾರದು.
೪. ಮುಷ್ಕರ ಎಷ್ಟು ಸಲ ನಡೆದರೂ ಸರಿಯೆ, ದೃಢರಾಗಿ ಉಳಿಯಬೇಕು. ಮುಷ್ಕರದ ಕಾಲದಲ್ಲಿ ಪ್ರಾಮಾಣಿಕವಾಗಿ ಬೇರೆ ಏನಾದರೂ ಕೆಲಸಮಾಡಿ ತಮ್ಮ ಜೀವನದ್ರವ್ಯವನ್ನು ಸಂಪಾದಿಸಬೇಕು.

('ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ', ಕನ್ನಡ ಆವೃತ್ತಿ, ಪು. ೪೪೪)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

ಭಾಗ : ೧೦

ಒಳನೋಟ

'ವಿಶ್ರಾಂತಿ ಎಂದರೇನು? ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ಹೋಗುವುದು.'

'ಪ್ರಾರ್ಥಿಸಲು ಬಾಗಿದ ಸಾವಿರ ತಲೆಗಳಿಗಿಂತ ಕರುಣೆಯ ಸಣ್ಣ ಪುಟ್ಟ ಕೆಲಸಗಳು ಹೆಚ್ಚು ಶಕ್ತಿಶಾಲಿ.'

ಮೋಹನದಾಸ್ ಕರಮಚಂದ್ ಗಾಂಧಿ

೧೨೧

ಜೀಸಸ್, ಸಾಕ್ರಟಿಸ್

ನನ್ನ ಪ್ರಕಾರ ಏಸು ಕ್ರಿಸ್ತ ಒಬ್ಬ ಅಪೂರ್ವ ಕಲಾವಿದ. ಯಾಕೆಂದರೆ ಆತ ಸತ್ಯವನ್ನೇ ಕಂಡುಕೊಂಡ ಮತ್ತು ಅದನ್ನೇ ಎಲ್ಲರಿಗೂ ಸಾರಿದ. ಆದರೆ ಕಲಾವಿದರೆಂದು ತಮ್ಮನ್ನು ಕರೆದುಕೊಳ್ಳುವ ಬಹಳಷ್ಟು ಮಂದಿಯ ಕಲಾಕೃತಿಗಳಲ್ಲಿ ಆತ್ಮೋನ್ನತಿಯ ಸೆಳೆತವಾಗಲೀ ಚಡಪಡಿಕೆಯಾಗಲೀ ಕಾಣುವುದೇ ಇಲ್ಲ. ನಿಜವಾದ ಕಲೆಯೆಂದರೆ ಆತ್ಮದ ಅನಾವರಣವೇ.

ವೈಯಕ್ತಿಕವಾಗಿ ಹೇಳುವುದಾದರೆ, ನಾನು ಹೊರಜಗತ್ತಿನ ಗೊಡವೆ ಬಿಟ್ಟು ಒಳಗಿನ ಅನುಭೂತಿಯ ನೆರವಿನಿಂದ ನಿರಾಳವಾಗಿ ಜೀವಿಸಬಲ್ಲೆ. ಹೀಗೆ ನಾನು ಕಲೆಯ ಸಾನಿಧ್ಯದಲ್ಲಿ ಬದುಕುತ್ತಿರುತ್ತೇನೆ ಎಂದು ತಿಳಿಯುವೆ. ನಾನು ಕಲಾಕೃತಿಗಳನ್ನು ರಚಿಸದಿರಬಹುದು. ಆದರೆ ನನ್ನ ಮನೆಯ ಕೋಣೆಗಳಿಗೆ ಚಿತ್ತಾರವಿಲ್ಲದಿದ್ದರೂ, ಮನೆಗೆ ಚಾವಣಿಯೇ ಇಲ್ಲದಿದ್ದರೂ ಜೀವಿಸಲು ನನಗೇನೂ ಕಷ್ಟವೆನಿಸಲಿಕ್ಕಿಲ್ಲ. ಯಾಕೆಂದರೆ ನಾನು ರಾತ್ರಿಯ ಹೊತ್ತಿನ ಚುಕ್ಕಿಗಳ ಆಕಾಶವನ್ನು ನೋಡುತ್ತ ಹೊತ್ತು ಕಳೆಯಬಲ್ಲೆ.

ಗೋಚರವಾಗುವ ಸೌಂದರ್ಯಕ್ಕಿಂತ ಅಗೋಚರ ಸೌಂದರ್ಯವನ್ನು ಕಲೆ ತಟ್ಟನೆ ಗುರುತಿಸಬಲ್ಲದು. ಕಲೆಯಲ್ಲಿ ವಿನಾಶಕಾರಿ ಕಲೆ ಹಾಗೂ ಜೀವವನ್ನು ಪೊರೆಯುವ ಕಲೆ ಎಂಬುದಾಗಿ ಎರಡು ವಿಧ. ನಿಜವಾದ ಕಲೆ ಎನ್ನುವುದು ಕಲಾವಿದರ ಭಾವನೆಗಳ ಪ್ರಾಮಾಣಿಕ ದಾಖಲೆ ಅನಿಸುವಂತಿರುತ್ತದೆ.

ಸಾಕ್ರಟಿಸ್ ತನ್ನ ಕಾಲದಲ್ಲಿ ಸತ್ಯನಿಷ್ಠೆಗೆ ಹೆಸರಾದ ವ್ಯಕ್ತಿ ಎಂದು ಕೇಳಿಬಲ್ಲೆವು. ಆತ ರೂಪಿನಲ್ಲಿ ಇಡೀ ಗ್ರೀಸ್ ದೇಶದಲ್ಲೇ ಕಳಪೆಯಾಗಿದ್ದ. ಆದರೆ ನನ್ನ ಪ್ರಕಾರ ಸಾಕ್ರಟಿಸ್ ಬಹಳ ಸುಂದರ ಮನುಷ್ಯ. ಅವನ ಸೌಂದರ್ಯವಿದ್ದುದು ಅವನ ಅಂತರಂಗದಲ್ಲಿ; ಆತನ ಸತ್ಯಾನ್ವೇಷಣೆಯ ತಪಸ್ಸಿನಲ್ಲಿ. ಸತ್ಯಾನ್ವೇಷಣೆ ಎಲ್ಲರ ಬದುಕಿನ ಮೂಲ ಧ್ಯೇಯವಾಗಬೇಕು. ಸೌಂದರ್ಯ ಹಾಗೂ ಸತ್ವ ಆಮೇಲೆ ತಾವಾಗಿಯೇ ವ್ಯಕ್ತಿತ್ವಕ್ಕೆ ಕೂಡಿಕೊಳ್ಳುತ್ತವೆ.

('ಗಾಂಧಿ ಇನ್ ಇಂಡಿಯಾ', ಪು. ೩೭೧-೨)

ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ

೧೨೨

ಬೆಕ್ಕಿನಿಂದ ಕಲಿಯಬೇಕಾದದ್ದು

ಬೆಕ್ಕನ್ನು ಹಾಗೂ ಬೆಕ್ಕಿನ ಮರಿಗಳ ನಡವಳಿಕೆಯನ್ನು ದಿನವೂ ಗಮನಿಸುತ್ತೇನೆ. ತಾಯಿಬೆಕ್ಕು ತನ್ನ ಮರಿಗಳಿಗೆ ಕಲಿಸುತ್ತ, ಕಲಿಯಗೊಡುತ್ತ ಥೇಟ್ ಒಬ್ಬ ನುರಿತ ಶಿಕ್ಷಕಿಯ ಹಾಗೆಯೇ ನಡೆದುಕೊಳ್ಳುತ್ತದೆ ಎನ್ನುವುದು ಕಂಡುಬಂದಾಗ ಬೆರಗಾಗುತ್ತೇನೆ.

ಕಲಿಸಬೇಕಾದ್ದನ್ನು ಬೆಕ್ಕು ಸಾವಕಾಶವಾಗಿ, ವರಾತಗಳಿಲ್ಲದೆ ಕಲಿಸಿಕೊಡುತ್ತದೆ. ಅದರ ಕಲಿಕೆಯ ಕ್ರಮ ಬಹಳವೇ ಸರಳ: ಮೊದಲು ಅದು ಕಲಿಸಬೇಕಾದ್ದನ್ನು ತನ್ನ ಉದಾಹರಣೆಯ ಮೂಲಕ ತೋರಿಸುತ್ತದೆ. ಅದನ್ನು ಮರಿಗಳು ಅನುಕರಿಸಲು ಶುರುಮಾಡುತ್ತವೆ. ಹೀಗೆ ಅವು ಓಡುವುದನ್ನೂ, ಮರ ಏರುವುದನ್ನೂ, ಮರ ಇಳಿಯುವುದನ್ನೂ ಕಲಿಯುತ್ತವೆ. ಬೆಕ್ಕು ತಾನು ಬೇಟೆಯಾಡಿದ ಪ್ರಾಣಿಯನ್ನು ಮರಿಗಳಿಗೆ ತಂದುಕೊಡುತ್ತದೆ. ಮರಿಗಳಿಗೆ ಬೇಟೆಯಾಡುವುದನ್ನು ಕಲಿಸುತ್ತದೆ.

ತಾಯಿಬೆಕ್ಕು ಮರಿಗಳೊಂದಿಗೆ ಚಿನ್ನಾಟವಾಡುತ್ತದೆ; ತನ್ನ ಸಮಬಲರ ಜೊತೆ ಗುದ್ದಾಡುತ್ತಿರುವಂತೆ ನಟಿಸುತ್ತದೆ. ಮರಿಗಳನ್ನು ಅದು ಬಹಳ ಹೊತ್ತು ಒಂಟಿಯಾಗಿ ಬಿಟ್ಟಿರುವುದಿಲ್ಲ. ಜಗತ್ತಿನ ಎಲ್ಲ ಜೀವಿಗಳಂತೆಯೇ ತಾಯಿಪ್ರೇಮವನ್ನು ಅದು ತೋರುತ್ತದೆ. ಮರಿಗಳ ಮೈ ನೆಕ್ಕಿ ಸ್ವಚ್ಛಗೊಳಿಸುತ್ತದೆ. ಮರಿಗಳನ್ನು ಸುರಕ್ಷಿತವಾಗಿ ಹತ್ತಿರದಲ್ಲೇ ಮಲಗಿಸಿಕೊಂಡಿರುತ್ತದೆ. ಅವಕ್ಕೆ ಹಸಿವಾದಾಗ ಹಾಲೂಡಿಸುತ್ತದೆ.

ಇದರಿಂದೆಲ್ಲ ಕಲಿಯಬಹುದಾದ ಪಾಠಗಳಿವೆ ಅನಿಸುತ್ತದೆ ನನಗೆ. ನಾವು ಮಕ್ಕಳಿಗೆ ಏನನ್ನಾದರೂ ಕಲಿಸಬೇಕೆಂದರೆ ಸ್ವತಃ ನಾವೇ ಮಾದರಿಯಾಗಬೇಕು. ಮಕ್ಕಳು ದೊಡ್ಡವರನ್ನು ಬೇಗ ಅನುಕರಿಸಲು ಶುರುಮಾಡುತ್ತಾರೆ. ವಿವರಿಸಿದ್ದನ್ನು ಪೂರ್ತಿಯಾಗಿ ಗ್ರಹಿಸುವಷ್ಟು ಶಕ್ತಿ ಅವರಿಗಿರುವುದಿಲ್ಲ. ಅವರಿಗೆ ಪ್ರಾಮಾಣಿಕತೆಯ ಪಾಠಗಳನ್ನು ಹೇಳಿಕೊಡುವುದಾದರೆ ನಾವು ಮೊದಲು ಪ್ರಾಮಾಣಿಕವಾಗಿದ್ದು ತೋರಿಸಬೇಕು.'

(ಯರವಾಡ ಬಂದಿಖಾನೆ, ಮೇ ೨೨, ೧೯೩೨, 'ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ', ಸಂಪುಟ ೪೯, ಪು. ೪೬೬)

ಕನ್ನಡಕ್ಕೆ: **ಶ್ರೀನಿವಾಸರಾಜು ದೊಡ್ಡೇರಿ**

೧೨೩

ಅರ್ಥದ ಹುಡುಕಾಟ

Awake and arise, O traveller, it is morning now;
It is no longer night that you still slumber.

ಓ ಯಾತ್ರಿಕನೆ, ಏಳು, ಎಚ್ಚರವಾಗು, ಬೆಳಗಾಯಿತು
ಇನ್ನೂ ಗಾಢ ನಿದ್ರೆಯಲ್ಲಿ ಮುಳುಗಿರಲು ಇದೇನೂ ರಾತ್ರಿಯಲ್ಲ.

'ಓ ಯಾತ್ರಿಕನೆ, ಬೆಳಗಾಯಿತು ಏಳು. ನೀನು ಹೀಗೆ ನಿದ್ರಿಸುತ್ತಿರಲು ಇದೇನು ರಾತ್ರಿಯೆಂದು ತಿಳಿದಿರುವೆಯಾ?' ಎಂದು ಮೇಲಿನ ಸಾಲುಗಳ ಅರ್ಥವನ್ನು ಯಾರಾದರೂ ಅರ್ಥೈಸಿಕೊಂಡರೆ, ಅವರು ಸಾಲುಗಳನ್ನು ಸುಮ್ಮನೆ ಓದಿದ್ದಾರೆ ಮತ್ತು ಅವುಗಳ ಕುರಿತು ಆಲೋಚಿಸುವ ಕೆಲಸವನ್ನು ಮಾಡಿಲ್ಲವೆಂದೇ ಅರ್ಥ. ಇಂತಹ ಓದುಗ ಪ್ರತಿ ಮುಂಜಾನೆ ಬೇಗ ಏಳುತ್ತಾನೆ, ಮತ್ತು ಬೇಗನೆ ಎದ್ದಿರುವ ತನ್ನ ಬಗ್ಗೆ ತಾನು ಹೆಮ್ಮೆಪಟ್ಟುಕೊಂಡು ಸುಮ್ಮನಾಗುತ್ತಾನೆ. ಆದರೆ ಆಲೋಚಿಸಲು ಉತ್ಸುಕನಾಗಿರುವ ಓದುಗ ಪ್ರಶ್ನಿಸಿಕೊಳ್ಳುತ್ತಾನೆ: ಈ ಯಾತ್ರಿಕ ಯಾರು? 'ಬೆಳಗು' ಎನ್ನುವ ಪದದ ಅರ್ಥ ಇಲ್ಲಿ ಏನು? 'ಇದೇನೂ ರಾತ್ರಿಯಲ್ಲ' ಎಂದು ಕವಿ ಯಾವ ಅರ್ಥದಲ್ಲಿ ಹೇಳುತ್ತಿದ್ದಾನೆ? 'ಗಾಢ ನಿದ್ರೆಯಲ್ಲಿ ಮುಳುಗುವುದು' ಎಂದರೇನು? ಹೀಗೆ ಓದುಗ ಆಲೋಚಿಸತೊಡಗಿದಾಗ, ಪದ್ಯದ ಸಾಲುಗಳು ಪ್ರತಿ ದಿನವೂ ಆತನಿಗೆ ಹೊಸ ಅರ್ಥಗಳನ್ನು ನೀಡುತ್ತವೆ. ಪದ್ಯದ ಸಾಲುಗಳಲ್ಲಿ ಮೂಡಿರುವ ಯಾತ್ರಿಕ ಇಡೀ ಮಾನವಕುಲವನ್ನು ಪ್ರತಿನಿಧಿಸುವ ಯಾತ್ರಿಕನಾಗಿರುತ್ತಾನೆ. ಯಾರಿಗೆ ದೇವರಲ್ಲಿ ನಂಬಿಕೆ ಇರುತ್ತದೆಯೋ ಅವರಿಗೆ ಎಲ್ಲಾ ಕಾಲವೂ 'ಮುಂಜಾನೆ', ಅಂದರೆ, ಬೆಳಕಿರುವ ಕಾಲವೇ ಆಗಿರುತ್ತದೆ. ರಾತ್ರಿ ಎನ್ನುವುದು ಮೂರ್ಖತನದ ಪ್ರತೀಕವೂ ಆಗಬಹುದು. ಈ ಸಾಲು ಸೋಮಾರಿಯಾಗಿರುವ ಎಲ್ಲರಿಗೂ ಅನ್ವಯವಾಗುತ್ತದೆ. ಪೆದ್ದು ಪೆದ್ದಾಗಿ ತಪ್ಪುಗಳನ್ನು ಮಾಡುವ ಎಲ್ಲರಿಗೂ ಅನ್ವಯಿಸುತ್ತದೆ.

ಸುಳ್ಳು ಹೇಳುವ ಯಾವುದೇ ವ್ಯಕ್ತಿ ಅರೆ ನಿದ್ರಾವಸ್ಥೆಯಲ್ಲೇ ಇರುತ್ತಾನೆ. ಇಂತಹ ವ್ಯಕ್ತಿಗಳಿಗೆ ಎಚ್ಚರಗೊಳ್ಳಿ, ಏಳಿ, ಎದ್ದೇಳಿ ಎಂಬ ಕರೆಯಿದೆ ಈ ಪದ್ಯದಲ್ಲಿ. ಹೀಗೆ ನಾವು ಇಲ್ಲಿರುವ ಪ್ರತಿಯೊಂದು ಸಾಲುಗಳಲ್ಲಿ ಅಡಕವಾಗಿರುವ ಅರ್ಥವನ್ನು ಹುಡುಕಬಹುದು, ಮತ್ತು ಇಂತಹ ಓದಿನ ಮೂಲಕ ಮಾನಸಿಕ ನೆಮ್ಮದಿ ಪಡೆಯಬಹುದು. ಇನ್ನೂ ಬಿಡಿಸಿ ಹೇಳಬೇಕೆಂದರೆ, ಇಲ್ಲಿರುವ ಪ್ರತಿಯೊಂದು ಸಾಲನ್ನೂ ಕುರಿತು ಧ್ಯಾನಿಸುವುದರಿಂದ, ಓದುಗರು ಆಧ್ಯಾತ್ಮಿಕ ಯಾತ್ರೆಗೆ ಪೂರಕವಾದ ಅವಕಾಶವನ್ನು ಸೃಷ್ಟಿಸಿಕೊಳ್ಳಬಹುದು. ಆದರೆ, ನಾಲ್ಕು ವೇದಗಳನ್ನು ಕಂಠಪಾಠ ಮಾಡಿ ಅವುಗಳ ಅರ್ಥವನ್ನೇ ತಿಳಿಯದಿರುವವರಿಗೆ ಇದೆಲ್ಲಾ ಅನಗತ್ಯ ಹೊರೆ ಅನ್ನಿಸಲೂಬಹುದು.

ನನಗೆ ಹೊಳೆದ ಒಂದು ಉದಾಹರಣೆಯನ್ನು ನಾನಿಲ್ಲಿ ನಿಮಗೆ ಕೊಟ್ಟಿದ್ದೇನೆ. ಒಂದು ವೇಳೆ ನಾವೆಲ್ಲರೂ ಯಾವ ದಿಕ್ಕಿನಲ್ಲಿ ಮುನ್ನಡೆಯಬೇಕು ಮತ್ತು ಯಾವ ನಿಟ್ಟಿನಲ್ಲಿ ಸಾಗಬೇಕು ಎಂದು ಆಲೋಚನೆ ಮಾಡಲು ನಿರ್ಧರಿಸಿದರೆ, ಅನುದಿನವೂ ಬದುಕಿನಲ್ಲಿ ಹೊಸ ಹೊಸ ಅರ್ಥಗಳ ಶೋಧದಲ್ಲಿ ತೊಡಗುತ್ತೇವೆ; ಬದುಕಿನಲ್ಲಿ ಹೊಸ ಹೊಸ ಅನುಭವಗಳಿಗೆ ಸದಾ ತೆರೆದುಕೊಂಡಿರುತ್ತೇವೆ.

('ಡಿಸ್ಕವರಿ ಆಫ್ ಮೀನಿಂಗ್', 'ಸಿವಿಲೈಝೇಶನ್, ಪಾಲಿಟಿಕ್ಸ್ ಅಂಡ್ ರಿಲಿಜಿಯನ್', ಪು. ೮೪)

ಕನ್ನಡಕ್ಕೆ: ಸದಾನಂದ ಆರ್.

೧೨೪

ಜಾನ್ ರಸ್ಕಿನ್ ಅವರ 'ಅನ್ ಟು ದಿಸ್ ಲಾಸ್ಟ್'

ಜಾನ್ ರಸ್ಕಿನ್ ಒಬ್ಬ ಅತ್ಯುತ್ತಮ ಶಿಕ್ಷಕ, ಲೇಖಕ ಮತ್ತು ಧಾರ್ಮಿಕ ಚಿಂತಕ. ೧೮೮೦ರಲ್ಲಿ ಅವರು ಇಲ್ಲವಾದರು. ನನಗನಿಸುವಂತೆ ನನ್ನ ಆಶ್ರಮದ ಬಹುತೇಕರಿಗೆ ಅವರ ಒಂದು ಕೃತಿ ನನ್ನ ಮೇಲೆ ಗಾಢವಾದ ಪ್ರಭಾವ ಬೀರಿರುವ ಬಗ್ಗೆ ತಿಳಿದಿದೆ. ಅಷ್ಟು ಮಾತ್ರವಲ್ಲದೆ, ಆ ಪುಸ್ತಕದ ಪ್ರಭಾವದಿಂದಾಗಿ ನನ್ನ ಇಡೀ ಬದುಕಿನಲ್ಲಿಯೇ ಅನೇಕ ಬದಲಾವಣೆಗಳು ಉಂಟಾದವು. ಆ ಪುಸ್ತಕದ ಹೆಸರು 'ಅನ್ ಟು ದಿಸ್ ಲಾಸ್ಟ್.'

ನಾನು ತಿಳಿದುಕೊಂಡಂತೆ ಈ ಪುಸ್ತಕದ ಮುಖ್ಯ ಗ್ರಹಿಕೆಗಳು ಮೂರು:

೧. ಒಬ್ಬ ವ್ಯಕ್ತಿಯ ಒಳಿತು ಎಲ್ಲರ ಒಳಿತಿನಲ್ಲಿ ಅಡಗಿದೆ.

೨. ಒಬ್ಬ ಲಾಯರ್ ಮಾಡುವ ಕೆಲಸಕ್ಕೂ ಒಬ್ಬ ಕ್ಷೌರಿಕ ಮಾಡುವ ಕೆಲಸಕ್ಕೂ ಒಂದೇ ಮೌಲ್ಯವಿದೆ; ಯಾಕೆಂದರೆ, ಎಲ್ಲರಿಗೂ ತಾವು ಮಾಡುವ ಕೆಲಸದ ಮೂಲಕ ತಂತಮ್ಮ ಜೀವನ ನಿರ್ವಹಣೆ ಮಾಡುವ ಹಕ್ಕು ಇದೆ.

೩. ಶ್ರಮದ ಜೀವನ, ಅಂದರೆ ನೆಲ ಉಳುವ ಕೃಷಿಕನ ಜೀವನ ಹಾಗೂ ಕೈ ಬಳಸಿ ಕೆಲಸ ಮಾಡುವ ಕರಕುಶಲಿಗನ ಜೀವನ ನಿಜಕ್ಕೂ ಸಾರ್ಥಕ ಜೀವನ.

ಜಾನ್ ರಸ್ಕಿನ್ ೧೮೭೧ರ ಸಂದರ್ಭದಲ್ಲಿ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಪ್ರತಿ ತಿಂಗಳು ಪತ್ರಗಳನ್ನು ಬರೆಯುವ ಮೂಲಕ ಬರವಣಿಗೆಯನ್ನು ಆರಂಭಿಸಿದರು. ಈ ಪತ್ರಗಳನ್ನು ಹೊಗಳಿ ಟಾಲ್‌ಸ್ಟಾಯ್ ಬರೆದ ಬರಹವನ್ನು ನಾನು ಓದಿರುವೆ. ಆದರೆ ಆ ಪತ್ರಗಳನ್ನು ಹಾಗೂ ಬರಹಗಳನ್ನು ನನಗೆ ಸಂಗ್ರಹಿಸಲಾಗಲಿಲ್ಲ. ಇಂಗ್ಲೆಂಡಿನಿಂದ ನಾನು ರಸ್ಕಿನ್‌ರ ಕಾರ್ಯಸಾಧನೆಯ ಕುರಿತಾದ ಪುಸ್ತಕವೊಂದನ್ನು ತಂದಿದ್ದೆ. ಇದರಲ್ಲಿ ರಸ್ಕಿನ್‌ರ ಸಾಧನೆಗಳ ವಿವರದ ಜೊತೆಗೆ ಆ

ಪತ್ರಗಳ ಉಲ್ಲೇಖವೂ ಇತ್ತು. ಆ ಕುರಿತು ಇಂಗ್ಲೆಂಡಿನಲ್ಲಿರುವ ರಸ್ಕಿನ್‌ರ ಶಿಷ್ಯೆಯೊಬ್ಬಳಿಗೆ ಪತ್ರ ಬರೆದೆ. ಆಕೆ ಬೇರೆ ಯಾರೂ ಆಗಿರದೆ ಆ ಪುಸ್ತಕದ ಲೇಖಕಿಯಾಗಿದ್ದಳು. ಆಕೆ ನನಗೆ ರಸ್ಕಿನ್ನರ ಪತ್ರಗಳ ಸಂಗ್ರಹವನ್ನು ಕಳುಹಿಸಲಿಲ್ಲ. ನಾನೂ ತುಸು ಮುಜುಗರದಿಂದ ಆಕೆಗೆ ನನ್ನ ಆಶ್ರಮದಿಂದ ಹಣ ಪಡೆದು ಆ ಪತ್ರಗಳ ಸಂಪುಟ ಕಳುಹಿಸುವಂತೆ ಕೋರಲಿಲ್ಲ. ಆ ಮಹಿಳೆ ಆ ಪತ್ರಗಳ ಸಂಪುಟವನ್ನು ತನ್ನ ಗೆಳೆಯರೊಬ್ಬರಿಗೆ ಕಳುಹಿಸಿದಳು. ಆತ 'ದ ಸ್ಪೆಕ್ಟೇಟರ್' ಪತ್ರಿಕೆಯ ಸಂಪಾದಕರಾಗಿದ್ದರು. ನಾನು ಇಂಗ್ಲೆಂಡಿನಲ್ಲಿರುವಾಗ ಆತನನ್ನು ಭೇಟಿಯಾಗಿದ್ದೆ. ಆತ ನನಗೆ ನಾಲ್ಕು ಸಂಪುಟಗಳನ್ನು ಕಳುಹಿಸಿಕೊಟ್ಟ. ಅದರಲ್ಲಿ ನಾನೀಗ ಒಂದನೆಯ ಸಂಪುಟವನ್ನು ಓದುತ್ತಿದ್ದೇನೆ. ಈ ಪತ್ರದಲ್ಲಿಯ ವಿಚಾರಗಳು ತುಂಬಾ ಸೊಗಸಾಗಿವೆ. ಇಲ್ಲಿರುವ ಬಹುತೇಕ ವಿಚಾರಗಳು ನನ್ನ ವಿಚಾರಗಳೂ ಹೌದು. ಹಾಗಾಗಿಯೇ ಆಶ್ರಮದ ಕೆಲವರು ನಾನು ರಸ್ಕಿನ್ನರ ವಿಚಾರಗಳನ್ನು ಕಾಪಿ ಮಾಡಿರುವೆ ಎಂದುಕೊಂಡರೆ ಅಚ್ಚರಿಯಿಲ್ಲ. ಓದುಗರು ಯಾವುದನ್ನು ಕಾಪಿ ಎಂದು ಗುರುತಿಸುತ್ತಾರೆ? ಯಾರೋ ಒಬ್ಬರ ಕೃತಿಯಿಂದ ವಿಚಾರವೊಂದನ್ನು ಎರವಲು ಪಡೆದು ಅದು ತನ್ನದೇ ಎನ್ನುವಂತೆ ಬರೆದುಕೊಂಡಾಗ ಮಾತ್ರ ಕಾಪಿಯಾಗುತ್ತದೆ, ಅಲ್ಲವೆ?

ರಸ್ಕಿನ್ ಈ ಗ್ರಂಥದಲ್ಲಿ ಹತ್ತಾರು ವಿಚಾರಗಳನ್ನು ಚರ್ಚಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪ್ರಸ್ತುತಪಡಿಸಿರುವೆ. ರಸ್ಕಿನ್ ಹೇಳುವ ಹಾಗೆ ಒಟ್ಟಾರೆ ಶಿಕ್ಷಣವಿರದ ಸ್ಥಿತಿಗಿಂತಲೂ ಅಲ್ಪಸ್ವಲ್ಪ ದೋಷವಿರುವ ಶಿಕ್ಷಣವಿದ್ದರೂ ಸೂಕ್ತವೇ. ನಿಜವಾದ ಶಿಕ್ಷಣಕ್ಕೆ ನಾವು ಒತ್ತು ನೀಡಬೇಕು. ಪ್ರತಿಯೊಬ್ಬ ಮನುಷ್ಯನಿಗೂ ಮೂರು ಸಂಗತಿಗಳು ಮತ್ತು ಮೂರು ಸದ್ಗುಣಗಳ ಅಗತ್ಯವಿದೆ. ಯಾರು ಇವುಗಳನ್ನು ಅಳವಡಿಸಿಕೊಳ್ಳುವುದಿಲ್ಲವೋ ಅವರು ಜೀವನದ ನಿಗೂಢ ಮಹತ್ವವನ್ನು ಅರಿಯಲಾರರು. ಈ ಆರು ಸಂಗತಿಗಳೇ ಶಿಕ್ಷಣದ ಬುನಾದಿಯನ್ನು ರೂಪಿಸುತ್ತವೆ ಎನ್ನುವುದು ರಸ್ಕಿನ್ನರ ವಿಚಾರವಾಗಿದೆ:

೧. ಪ್ರತಿಯೊಂದು ಮಗು– ಅದು ಗಂಡಿರಲಿ ಹೆಣ್ಣಿರಲಿ– ಶುದ್ಧ ಗಾಳಿ, ನೀರು, ಮಣ್ಣಿನ ಬಗ್ಗೆ ತಿಳಿಯಬೇಕು. ಜೊತೆಗೆ, ಈ ಶುದ್ಧ ಗಾಳಿ, ನೀರು, ಮಣ್ಣನ್ನು ತಮ್ಮ ಅನುಕೂಲಕ್ಕಾಗಿ ಹೇಗೆ ಸಂರಕ್ಷಿಸಬೇಕು ಎನ್ನುವುದನ್ನು ಅರಿಯಬೇಕು.
೨. ಜೊತೆಗೆ, ಕೃತಜ್ಞತೆಯ ಮನೋಭಾವ, ದಾನದ ಗುಣ ಮತ್ತು ಭರವಸೆಯ ಗುಣಗಳನ್ನು ಅಳವಡಿಸಿಕೊಳ್ಳಬೇಕು.
೩. ಯಾರು ಸತ್ಯವನ್ನು ಪ್ರೀತಿಸಲಾರರೋ ಅವರು ತನ್ನನ್ನೇ ತಾನು ಪ್ರೀತಿಸಲಾರದವರು; ಪರಿಣಾಮವಾಗಿ, ಆಧ್ಯಾತ್ಮಿಕ ಆನಂದದಿಂದ ಅವರು ವಂಚಿತರಾಗುತ್ತಾರೆ.

೪. ಯಾರಿಗೆ ದೇವರಲ್ಲಿ ನಂಬುಗೆಯಿಲ್ಲವೋ ಅವರು ಸಹೃದಯಿಗಳಾಗಿರುವುದಿಲ್ಲ.

೫. ಯಾರಿಗೆ ಪ್ರೀತಿಯ ಸತ್ವ ತಿಳಿದಿಲ್ಲವೋ ಅವರಿಗೆ ಅಹಿಂಸೆಯ ಶಕ್ತಿಯೂ ಮನದಟ್ಟಾಗುವುದಿಲ್ಲ.

೬. ಎಲ್ಲಾ ಜೀವಿಗಳನ್ನು ತನ್ನ ಬಂಧುಗಳಂತೆ ಯಾರು ಪರಿಗಣಿಸುವುದಿಲ್ಲವೋ ಅಂಥವರು ಜೀವನದ ಮರ್ಮವನ್ನು ಅರಿಯಲಾರರು.

ಈ ಬಗೆಯ ಅನೇಕ ವಿಚಾರಗಳನ್ನು ರಸ್ಕಿನ್ ಪ್ರತಿಪಾದಿಸಿದ್ದಾರೆ. ಬರುವ ದಿನಗಳಲ್ಲಿ ನನ್ನ ಆಶ್ರಮವಾಸಿಗಳಿಗೆ ತಿಳಿಯುವ ಭಾಷೆಯಲ್ಲಿ ಈ ವಿಚಾರಗಳನ್ನು ಬರೆಯಬೇಕೆಂದುಕೊಂಡಿದ್ದೇನೆ. ಇಂದು ಕೇವಲ ಇದಿಷ್ಟು ಸಾರಸಂಗ್ರಹ ಸಾಕು. ಒಂದಂತೂ ನಿಜ. ನಾವು ಆಶ್ರಮದಲ್ಲಿ ಪ್ರತಿನಿತ್ಯ ಪ್ರತಿಪಾದಿಸುವ ವಿಷಯಗಳು ಹಾಗೂ ವಿಚಾರಗಳನ್ನೇ ರಸ್ಕಿನ್ ಇಂಗ್ಲಿಷ್ ಭಾಷೆಯಲ್ಲಿ ಬರೆದಿದ್ದಾರೆ. ನಾನಿಲ್ಲಿ ಎರಡು ಭಿನ್ನ ಭಾಷೆಗಳ ಕುರಿತಾಗಿ ಮಾತನಾಡುತ್ತಿಲ್ಲ. ಬದಲಾಗಿ ಇಬ್ಬರು ಲೇಖಕರನ್ನು ಕುರಿತು ಮಾತನಾಡುತ್ತಿರುವೆ. ರಸ್ಕಿನ್‌ರ ಭಾಷೆಯ ಮೇಲಿನ ಪ್ರಭುತ್ವ ಅಗಾಧವಾದುದು. ಅವರೊಂದಿಗೆ ನಾನು ಹೋಲಿಸಿಕೊಳ್ಳಲಾರೆ. ಆದರೆ ಮುಂದೊಂದು ದಿನ ಭಾಷೆಯ ಬಗ್ಗೆ ನಮಗಿರುವ ಪ್ರೀತಿಯಿಂದಾಗಿ ರಸ್ಕಿನ್ನರ ಹಾಗೆ ಬರೆಯುವವರು ಸೃಷ್ಟಿಯಾಗುತ್ತಾರೆ. ರಸ್ಕಿನ್ ಬರೆಯುವ ಇಂಗ್ಲಿಷ್ ಭಾಷೆಯ ಹಾಗೆ ನಮ್ಮ ಗುಜರಾತಿ ಭಾಷೆಯಲ್ಲಿಯೂ ಬರೆಯುವವರು ಬಂದೇ ಬರುತ್ತಾರೆ.

(ಗಾಂಧೀಜಿಯವರ ಆತ್ಮಕತೆ ಮತ್ತು ಇತರ ಬರಹಗಳಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: ಎಸ್. ಬಿ. ಜೋಗುರ

೧೨೫

ಇಸ್ಲಾಂನ ಸುವರ್ಣ ಸಂದೇಶ

ಇದು 'ದ ವಿಸ್ಡಮ್ ಆಫ್ ಈಸ್ಟ್' ಎನ್ನುವ ಕೃತಿಯ ಸಾರಸಂಗ್ರಹ. ಅನೇಕ ಮಾಲಿಕೆಗಳಲ್ಲಿ ಬಂದ ಈ ಕೃತಿ ಪವಿತ್ರ ಕುರಾನ್‌ನ ಕೆಲವು ಮುಖ್ಯಾಂಶಗಳ ಜೊತೆಗೆ, ಅರಬ್ ಚಿಂತಕರ ವಿಚಾರಧಾರೆಗಳನ್ನು ಒಳಗೊಂಡಿದೆ. ಮನುಷ್ಯನ ಒಳ್ಳೆಯತನದ ಬಗ್ಗೆ ಮಾತನಾಡುವ ಈ ಕೃತಿಯಲ್ಲಿ ವ್ಯಕ್ತಿಗಳ ಔದಾರ್ಯದ ಬಗೆಗಿನ ಮಾತುಗಳಿವೆ:

'ಯಾರು ತನ್ನ ಬಗ್ಗೆಯೇ ತಾನು ಗೌರವ ಹೊಂದಿಲ್ಲವೋ ಅಂಥವರಿಂದ ಯಾವುದೇ ಗೌರವಾರ್ಹವಾದುದನ್ನು ನಿರೀಕ್ಷಿಸಲಾಗುವುದಿಲ್ಲ.'

'ಯಾರು ತನ್ನನ್ನು ತಾನು ಅತಿಯಾಗಿ ಗೌರವಿಸಿಕೊಳ್ಳುತ್ತಾನೋ ಅಂಥವನು ತನ್ನಲ್ಲಿ ಯಾವ ತಪ್ಪನ್ನೂ ಕಾಣಲಾರ.'

'ನಮ್ಮ ದೃಷ್ಟಿಯಲ್ಲಿಯೇ ನಾವು ಸಣ್ಣವರಾಗಬೇಕೇ ಹೊರತು ಇತರರ ದೃಷ್ಟಿಯಲ್ಲಲ್ಲ.'

'ಯಾರು ಆತ್ಮಗೌರವವನ್ನು ಬಲಿ ಕೊಟ್ಟಿರುವರೋ ಮತ್ತು ಯಾರು ಮಾನ ಮರ್ಯಾದೆಯನ್ನು ಮೀರಿ, ಅವನ್ನು ಮರೆತು ನಿಂತಿರುವರೋ ಅಂತವರ ಪಾಲಿಗೆ ಜಗತ್ತಿನ ಯಾವ ಭಾಗದಲ್ಲಿಯೂ ಖುಷಿ ಎನ್ನುವುದು ದಕ್ಕಲಾರದು.'

'ನಿಜವಾಗಿ ಧಾರ್ಮಿಕನಾಗಿರುವಾತ ನಿಜವಾಗಿಯೂ ಒಳ್ಳೆಯವನಾಗಿರುತ್ತಾನೆ.'

'ಯಾವ ಮನುಷ್ಯನಿಗೆ ಶಿಕ್ಷಣವಿಲ್ಲವೋ ಆತ ಕೈಯಲ್ಲಿ ಶಸ್ತ್ರಗಳಿಲ್ಲದ ಸೈನಿಕನಂತೆ.'

'ರಾಜನಾದವನು ಜನತೆಯನ್ನಾಳುತ್ತಾನೆ. ಬುದ್ಧಿವಂತ ಜನ ರಾಜರನ್ನಾಳುತ್ತಾರೆ.'

'ಸಮಸ್ಯೆಗಳ ಸುಳಿಗೆ ಸಿಲುಕಿದಾಗ ಹೇಗೆ ಪಾರಾಗಬೇಕೆಂದು ತಿಳಿದವನು ಜಾಣನಲ್ಲ, ಸಮಸ್ಯೆಗಳ ಸುಳಿಗೆ ಬೀಳದಂತಿರುವವನೇ ನಿಜವಾದ ಜಾಣ.'

'ಹೃದಯ ಶುದ್ಧಿಯಿಲ್ಲದವನ ಧಾರ್ಮಿಕ ಆಚರಣೆ ವ್ಯರ್ಥ. ಆಚಾರವಿಲ್ಲದ ನಾಲಿಗೆಯಿಂದ ಹೃದಯ ಶುದ್ಧವಾಗಿರಲು ಸಾಧ್ಯವಿಲ್ಲ. ನುಡಿದಂತೆ ನಡೆಯದವನ ಧಾರ್ಮಿಕ ಆಚರಣೆ ನಂಬುಗೆಯನ್ನು ಸೃಷ್ಟಿಸುವುದಿಲ್ಲ.'

ಚಿನ್ನದಂಥ ಇಂತಹ ಅನೇಕ ಮಾತುಗಳು ಈ ಕೃತಿಯಲ್ಲಿವೆ.

('ದ ಎಸೆನ್ಷಿಯಲ್ ರೈಟಿಂಗ್ಸ್ ಆಫ್ ಮಹಾತ್ಮ ಗಾಂಧಿ' ಪುಸ್ತಕದಿಂದ.)

೧೨೬

ಪತ್ರಿಕೋದ್ಯಮ: ಭಾಷೆ, ನೈತಿಕತೆ, ಗುರಿ

ಯೋಚನೆ ಮಾಡದೆ ವಿಚಾರ ಮಾಡದೆ ಬರೆದ ಒಂದು ಮಾತನ್ನಾಗಲೀ, ಉದ್ದೇಶಪೂರ್ವಕವಾದ ಅತಿಶಯೋಕ್ತಿಯನ್ನಾಗಲೀ ಈ ಯಾವುದನ್ನೂ ಬರೆದುದು ನನಗೆ ನೆನಪಿಲ್ಲ. ಈ ದೃಷ್ಟಿಯಿಂದ ಆಫ್ರಿಕಾದಲ್ಲಿ ನಾವು ಹೊರಡಿಸಿದ 'ಇಂಡಿಯನ್ ಒಪೀನಿಯನ್' ಪತ್ರಿಕೆ ನಿಜಕ್ಕೂ ನನಗೆ ಆತ್ಮಸಂಯಮದ ಪ್ರಯೋಗಕ್ಷೇತ್ರವಾಯಿತು. ಅದು ಸ್ನೇಹಿತರಿಗೆ ನನ್ನ ವಿಚಾರಗಳನ್ನು ತಿಳಿಸುವ ಮಾಧ್ಯಮವಾಯಿತು. ವಿಮರ್ಶಕರಿಗೆ ಆಕ್ಷೇಪಿಸಲು ಅದರಲ್ಲಿ ಏನೂ ಸಿಕ್ಕುತ್ತಿರಲಿಲ್ಲ. ವಾಸ್ತವವಾಗಿ 'ಇಂಡಿಯನ್ ಒಪೀನಿಯನ್'ನ ಧ್ವನಿ ಟೀಕಾಕಾರರೂ ಸಹ ತಮ್ಮ ಲೇಖನಿಯನ್ನು ಸಂಯಮದಿಂದ ಉಪಯೋಗಿಸುವಂತೆ ನಿರ್ಬಂಧಪಡಿಸುತ್ತಿದ್ದಿತು.

'ಇಂಡಿಯನ್ ಒಪೀನಿಯನ್' ಇಲ್ಲದಿದ್ದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಬಹುಶಃ ಸತ್ಯಾಗ್ರಹವೇ ಸಾಧ್ಯವಾಗುತ್ತಿರಲಿಲ್ಲ. ನಂಬಲರ್ಹವಾದ ಸತ್ಯಾಗ್ರಹ ಚಳುವಳಿಯ ವರದಿಗಾಗಿಯೂ, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ನಿಜವಾದ ಸ್ಥಿತಿಯನ್ನು ತಿಳಿಯುವುದಕ್ಕೂ ಓದುಗರು ಈ ಪತ್ರಿಕೆಯನ್ನು ಎದುರು ನೋಡುತ್ತಿದ್ದರು. ನನಗೆ ಮಾನವ ಸ್ವಭಾವದ ಬೇರೆ ಬೇರೆ ಮಾದರಿಗಳನ್ನೂ, ಛಾಯೆಗಳನ್ನೂ ಅಭ್ಯಸಿಸುವ ಒಂದು ಸಾಧನವಾಯಿತು ಈ ಪತ್ರಿಕೆ. ಏಕೆಂದರೆ ಯಾವಾಗಲೂ ಸಂಪಾದಕರಿಗೂ ವಾಚಕರಿಗೂ ನಡುವೆ ಆತ್ಮೀಯವಾದ ಮತ್ತು ಶುಭ್ರವಾದ ಸಂಬಂಧವನ್ನು ಏರ್ಪಡಿಸುವುದು ನನ್ನ ಗುರಿಯಾಗಿದ್ದಿತು. ವಾಚಕರ ಹೃದಯಾಂತರಾಳದಿಂದ ಹೊರಡುವ ಭಾವಗಳನ್ನೊಳಗೊಂಡ ಪತ್ರಗಳ ಮಳೆ ನನ್ನ ಮೇಲೆ ಸುರಿಯುತ್ತಿದ್ದಿತು. ಅವು ಬರೆದವರ ಮನೋಭಾವಕ್ಕನುಗುಣವಾಗಿ ಮಿತ್ರಭಾವವನ್ನೋ, ಟೀಕೆಯನ್ನೋ, ಕಟುಭಾವವನ್ನೋ ಸೂಚಿಸುತ್ತಿದ್ದವು. ಇವುಗಳನ್ನೆಲ್ಲ ಚೆನ್ನಾಗಿ ಓದಿ, ಅರಗಿಸಿಕೊಂಡು ಪ್ರತ್ಯುತ್ತರವನ್ನು ಕೊಡುವುದು ನನಗೆ ಸೊಗಸಾದ ಶಿಕ್ಷಣವಾಯಿತು. ಈ ಪತ್ರ ವ್ಯವಹಾರದ ಮೂಲಕ ನಮ್ಮ ಜನ ನನ್ನ ಜತೆಯಲ್ಲಿ ಗಟ್ಟಿಯಾಗಿ ಆಲೋಚಿಸುತ್ತಿರುವಂತೆ ತೋರಿತು. ಇದರಿಂದ ನನಗೆ ಪತ್ರಕರ್ತನ ಜವಾಬ್ದಾರಿ ಚೆನ್ನಾಗಿ ಅರ್ಥವಾಯಿತು. ಹೀಗೆ ನಾನು ನಮ್ಮ ಜನರ ಮೇಲೆ ಹೊಂದಿದ ಪ್ರಭಾವದಿಂದ ಮುಂದಿನ ಸತ್ಯಾಗ್ರಹ

ಸಂಗ್ರಾಮ ಕಾರ್ಯಶೀಲವೂ, ಘನತೆಯಿಂದ ಕೂಡಿದುದೂ, ಎದುರಿಸಲು ಶಕ್ಯವಾದುದೂ ಆಯಿತು.

'ಇಂಡಿಯನ್ ಒಪೀನಿಯನ್' ಪ್ರಾರಂಭವಾದ ತಿಂಗಳಿನೊಳಗಾಗಿಯೇ ನಾನು ವೃತ್ತಪತ್ರಿಕೆಗಳ ಒಂದೇ ಗುರಿ ಸೇವೆಯಾಗಿರಬೇಕೆಂದು ಅರಿತೆನು. ವೃತ್ತಪತ್ರಿಕೆ ಒಂದು ದೊಡ್ಡಶಕ್ತಿ. ಆದರೆ ಹತೋಟಿಯಿಲ್ಲದೆ ನೀರಿನ ಪ್ರವಾಹ ಹಳ್ಳಗಳನ್ನೆಲ್ಲ ಮುಳುಗಿಸಿ ಪೈರನ್ನು ನಾಶಮಾಡುವಂತೆ, ಹಿಡಿತವಿಲ್ಲದ ಲೇಖನಿ ಸಹ ನಾಶಕ್ಕೆ ಸಾಧನವಾಗುತ್ತದೆ. ಹತೋಟಿ ಹೊರಗಿನದಾದರೆ ಅದರಿಂದ ಹತೋಟಿಯಿಲ್ಲದಿರುವುದಕ್ಕಿಂತ ಹೆಚ್ಚು ಅಪಾಯವಾಗುತ್ತದೆ. ಅಂಕುಶ ಒಳಗಿನಿಂದ ಬಂದಾಗ ಮಾತ್ರ ಲಾಭದಾಯಕ ವಾಗಬಲ್ಲದು. ಈ ದೃಷ್ಟಿಯಿಂದ ನೋಡಿದರೆ, ಪ್ರಪಂಚದಲ್ಲಿ ಎಷ್ಟು ಪತ್ರಿಕೆಗಳು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬಲ್ಲವು? ಆದರೆ ಆ ಪ್ರಯೋಜಕವಾದುವುಗಳನ್ನು ಹಿಡಿದೆತ್ತಿ ನಿಲ್ಲಿಸುವವರು ಯಾರು? ಅಪ್ರಯೋಜಕವೆಂದು ತೀರ್ಮಾನಿಸುವವರು ಯಾರು? ಪ್ರಯೋಜನಕರವಾದುವುಗಳೂ, ಅಪ್ರಯೋಜಕವಾದವುಗಳೂ ಒಳ್ಳೆಯದು ಮತ್ತು ಕೆಟ್ಟದ್ದು ಪ್ರಪಂಚದಲ್ಲಿರುವಂತೆ ಒಟ್ಟಿಗೆಯೇ ಇರುತ್ತವೆ. ಇವುಗಳಲ್ಲಿ ಮನುಷ್ಯ ತನಗೆ ಬೇಕಾದುದನ್ನು ಆರಿಸಿಕೊಳ್ಳಬೇಕು.

('ಆ್ಯನ್ ಆಟೋಬಯಾಗ್ರಫಿ ಆರ್ ದ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಭಾಗ–೪, ಅಧ್ಯಾಯ–೧೩, 'ಇಂಡಿಯನ್ ಒಪೀನಿಯನ್'ನಿಂದ ಆಯ್ದ ಭಾಗಗಳು.)

ಕನ್ನಡಕ್ಕೆ: **ಗೊರೂರು ರಾಮಸ್ವಾಮಿ ಅಯ್ಯಂಗಾರ್**

ಭಾಗ : ೧೧

ವಿದಾಯ

‘ನಾನು ಗೋರಿಯೊಳಗಿದ್ದರೂ ಬದುಕಿರುತ್ತೇನೆ. ಅಷ್ಟೇ ಅಲ್ಲ, ಗೋರಿಯಿಂದ ಮಾತಾಡುತ್ತಲೂ ಇರುತ್ತೇನೆ.’ (೭ ಆಗಸ್ಟ್ ೧೯೪೭)

‘ನಾನು ಸತ್ತ ಮೇಲೆ ಯಾರಾದರೂ ನನ್ನ ಶವವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಬೇಕೆಂದು ಹೊರಟರೆ –ಆಗ ಒಂದು ವೇಳೆ ನನ್ನ ಶವ ಮಾತಾಡುವಂತಿದ್ದರೆ– ನಾನು ಅವರಿಗೆ ಹೇಳಬಯಸುವ ಮಾತು: ‘ನನ್ನನ್ನು ಬಿಟ್ಟು ಬಿಡಿ. ನಾನು ಎಲ್ಲಿ ಸತ್ತಿದ್ದೆನೋ, ಅಲ್ಲೇ ನನ್ನನ್ನು ಮಣ್ಣು ಮಾಡಿ.’ (೨೯ ಜನವರಿ ೧೯೪೮)

‘ರಾತ್ರಿಯಾಗುವ ಮೊದಲು ಏನಾಗುತ್ತದೋ, ನಾನು ಬದುಕಿರುತ್ತೇನೋ ಇಲ್ಲವೋ ಯಾರಿಗೆ ಗೊತ್ತು? ನಾನು ರಾತ್ರಿ ಇನ್ನೂ ಬದುಕಿದ್ದರೆ, ನೀನು ಅದನ್ನು [ಲವಂಗದ ಪುಡಿ] ಆರಾಮಾಗಿ ಮಾಡಬಹುದು.’ (ಬೆಳಗಿನ ಜಾವ. ೩೦ ಜನವರಿ ೧೯೪೮)

ಮೋಹನದಾಸ್ ಕರಮಚಂದ್ ಗಾಂಧಿ

೧೨೭

ಕೊನೆಯ ಬೆಳಗಿನ ಪ್ರಾರ್ಥನೆ

ದಯಾಳುವೂ, ಪ್ರೇಮಮಯಿಯೂ ಆದ ದೇವರ ದೇವನೇ
ತಿಳಿದೋ ತಿಳಿಯದೆಯೋ
ನನ್ನ ಕೈ ಕಾಲು ಮೈ ಮಾತು ಕಣ್ಣು ಕಿವಿಗಳು
ಮಾಡಿರುವ ಪಾಪಗಳನ್ನು ಕ್ಷಮಿಸು...

ನಾನು ರಾಜ್ಯವನ್ನಾಗಲೀ, ಸ್ವರ್ಗವನ್ನಾಗಲೀ,
ಬಿಡುಗಡೆಯನ್ನಾಗಲೀ ಯಾಚಿಸುತ್ತಿಲ್ಲ;
ನಾನು ಬೇಡುತ್ತಿರುವುದು ಒಂದನ್ನು ಮಾತ್ರ:
ಯಾತನಾಮಯಿ ಜೀವಗಳ ನೋವನ್ನು ಕೊನೆಗಾಣಿಸು.

(೩೦ ಜನವರಿ ೧೯೪೮. ಬೆಳಗಿನ ಜಾವ ೩.೩೦ರ ಹೊತ್ತಿಗೆ ಗಾಂಧೀಜಿ ಹಾಗೂ ಅವರ ಸಂಗಡಿಗರು ಮಾಡಿದ ಬೆಳಗಿನ ಪ್ರಾರ್ಥನೆಯ ಸಾಲುಗಳು.)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೨೮

ಕೊನೆಯ ಹಗಲಿನ ಮಾತುಗಳು

೩೦ ಜನವರಿ ೧೯೪೮. ಬೆಳಗ್ಗೆ:

ಪತ್ರಕರ್ತ: ಫೆಬ್ರವರಿ ಒಂದರಂದು ನೀವು ಸೇವಾಗ್ರಾಮಕ್ಕೆ ಹೋಗುವುದು ನಿಜವೆ?

ಗಾಂಧೀಜಿ: ಯಾರು ಹೇಳಿದ್ದು?

ಪತ್ರಕರ್ತ: ಪತ್ರಿಕೆಗಳಲ್ಲಿ ಬಂದಿದೆ.

ಗಾಂಧೀಜಿ: ಹಾಂ. ಗಾಂಧೀಜಿ ಫೆಬ್ರವರಿ ಒಂದರಂದು ಹೋಗುತ್ತಾರೆಂದು ಪತ್ರಿಕೆಗಳು ಬರೆದಿವೆ. ಆದರೆ ಆ ಗಾಂಧಿ ಯಾರು ಅನ್ನುವುದು ನನಗೆ ಗೊತ್ತಿಲ್ಲ.

***

ಗಾಂಧೀಜಿ: '[ಈ ಕೆಲಸದಲ್ಲಿ] ಕೊನೆಗೆ ಕೆಲವೇ ಕೆಲವರು ಉಳಿಯಬಹುದು. ಆದರೆ ದುರ್ಬಲತೆಯೊಳಗಿಂದಲೇ ಶಕ್ತಿಯನ್ನು ಗಳಿಸಿಕೊಳ್ಳಲು ಇನ್ನು ಬೇರಾವ ಮಾರ್ಗವೂ ಉಳಿದಿಲ್ಲ. ಶಸ್ತ್ರಾಸ್ತ್ರಗಳನ್ನು ಬಳಸಿದ ಯುದ್ಧಗಳಲ್ಲಿ ಹಿಂಡುಗಟ್ಟಲೆ ಜನರು ಅಳಿದಿದ್ದಾರೆ. ಅಹಿಂಸಾ ಮಾರ್ಗದಲ್ಲೂ ಇದಕ್ಕಿಂತ ಭಿನ್ನವಾದದ್ದು ನಡೆಯುದಿರಬಹುದು. ನೀವು [ನೌಖಾಲಿಯಲ್ಲಿ ಕೋಮು ಸಾಮರಸ್ಯ ಮೂಡಿಸುತ್ತಿರುವ ಶಾಂತಿ ಪ್ರತಿಪಾದಕರು] ಮಾಡುತ್ತಿರುವ ಕೆಲಸ ಸರಿಯಾದ ಮಾರ್ಗದಲ್ಲೇ ಇದೆ. ನೀವು ಸಾವಿನ ಭಯವನ್ನು ಗೆದ್ದಿದ್ದೀರಿ, ಜನರ ಹೃದಯದಲ್ಲಿ ನೆಲೆಸಿದ್ದೀರಿ, ಅವರ ಪ್ರೀತಿ ಗಳಿಸಿದ್ದೀರಿ.'

(ಪ್ಯಾರೇಲಾಲ್ ಮತ್ತು ಸಂಗಡಿಗರು ಬಂಗಾಳದ ನೌಖಾಲಿಯ ಗಲಭೆ ಪೀಡಿತ ಪ್ರದೇಶದಲ್ಲಿ ಸಾಮರಸ್ಯ ಮೂಡಿಸಲು ಮಾಡುತ್ತಿದ್ದ ಪ್ರಯತ್ನಗಳನ್ನು ಕುರಿತು.)

***

೩೦ ಜನವರಿ ೧೯೪೮. ಮಧ್ಯಾಹ್ನ:

ಗಾಂಧೀಜಿ: 'ನಾನು ಹಿಮಾಲಯಕ್ಕೆ ಹೋದರೆ, 'ಡಬಲ್ ಮಹಾತ್ಮ' ಆಗಬಹುದು! ಈಗಿಗಿಂತ ಇನ್ನೂ ಹೆಚ್ಚು ಜನ ನನ್ನ ಬಳಿ ಬರಬಹುದು! ಆದರೆ ಈಗ ನಮ್ಮ ಸುತ್ತ ಮುತ್ತಿಕೊಂಡಿರುವ ಕಗ್ಗತ್ತಲನ್ನು, ದುಃಖವನ್ನು ಎದುರಿಸುವುದೇ ನನಗೆ ಮುಖ್ಯ...ನಾನು ಬದುಕಿರುವಾಗ, ನನ್ನ ಕೈಯಲ್ಲಿ ಎಷ್ಟಾಗುತ್ತೋ ಅಷ್ಟನ್ನು ಸರಿ ಮಾಡಲು ಪ್ರಯತ್ನಿಸುತ್ತೇನೆ...'

(ನಿರಾಶ್ರಿತನೊಬ್ಬ, 'ಗಾಂಧೀಜಿ, ನೀವು ಸುಮ್ಮನೆ ಹಿಮಾಲಯಕ್ಕೆ ಹೊರಡಿ' ಎಂದು ಹಿಂದಿನ ದಿನ ರೇಗಿದ್ದನ್ನು ನೆನೆದು, ನಗುತ್ತಾ ಗಾಂಧೀಜಿ ಹೇಳಿದ ಮಾತು.)

('ಮಹಾತ್ಮ ಗಾಂಧಿ: ದ ಲಾಸ್ಟ್ ೨೦೦ ಡೇಸ್', ಪು. ೪೮೨)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೨೯

ಕೊನೆಯ ಸಂಜೆಯ ನುಡಿ

೩೦ ಜನವರಿ ೧೯೪೮. ಸಂಜೆ ೫.೧೦

ಅಭಾ ಗಾಂಧಿ : ಬಾಪೂ, ನೀವು ವಾಚು ನೋಡಿಲ್ಲ ಎಂದು ವಾಚು ಬೇಜಾರು ಮಾಡಿಕೊಂಡಿರಬಹುದು.

ಗಾಂಧೀಜಿ : ನಾನೇಕೆ ವಾಚು ನೋಡಬೇಕು?

ಅಭಾ ಗಾಂಧಿ : ನೀವು ಟೈಮ್‌ಕೀಪರ್‍ಸ್ ಕಡೆ ಕೂಡ ನೋಡಲಿಲ್ಲ.

ಗಾಂಧೀಜಿ : ನಾನು [ಪ್ರಾರ್ಥನೆಗೆ] ಹತ್ತು ನಿಮಿಷ ತಡವಾಗಿ ಹೊರಟಿದ್ದು ನಿನ್ನ ತಪ್ಪಿನಿಂದ. ಸ್ವತಃ ದೇವರೇ ಹಾಜರಿದ್ದರೂ ಕೂಡ ತಮ್ಮ ಕೆಲಸವನ್ನು ಮುಂದುವರಿಸುವುದು ದಾದಿಯರ ಕರ್ತವ್ಯ. ಔಷಧ ಕೊಡುವ ಸಮಯ ಬಂದಾಗ ದಾದಿ ಹಿಂದೆ ಮುಂದೆ ನೋಡಿದರೆ ಬಡ ರೋಗಿ ಸಾಯುತ್ತಾನೆ. ಪ್ರಾರ್ಥನೆ ಕೂಡ ಹಾಗೇ. ಪ್ರಾರ್ಥನೆಗೆ ಒಂದು ನಿಮಿಷ ತಡವಾದರೂ ನನಗೆ ಕಿರಿಕಿರಿಯಾಗುತ್ತದೆ.

ಗಾಂಧೀಜಿಯವರ ಕೊನೆಯ ಉದ್ಗಾರ: 'ರಾಮ್...ರಾ...ಮ್'

('ಮೋಹನದಾಸ್, ಎ ಟ್ರೂ ಸ್ಟೋರಿ...' ಪು. ೬೭೯-೬೮೦)

ಕನ್ನಡಕ್ಕೆ: **ನಟರಾಜ್ ಹುಳಿಯಾರ್**

ಟಿಪ್ಪಣಿ

೩೦ ಜನವರಿ ೧೯೪೮. ಮಧ್ಯಾಹ್ನ ದೇಶದ ಗೃಹಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲ್ ಗಾಂಧೀಜಿಯವರನ್ನು ಭೇಟಿಯಾಗಲು ಬಂದರು. ಅವರಿಬ್ಬರ ಮಾತುಕತೆ ೫ ಗಂಟೆಯ ಪ್ರಾರ್ಥನಾ ಸಭೆಯ ನಿಗದಿತ ವೇಳೆ ಮೀರಿ ನಡೆಯಿತು. ಆಗ ಅಭಾ, ಗಾಂಧೀಜಿಯ ಪಾಕೆಟ್ ಗಡಿಯಾರವನ್ನು ಅವರೆದುರು ಹಿಡಿದು ಗಮನ ಸೆಳೆಯಲೆತ್ನಿಸಿದರೂ, ಗಾಂಧೀಜಿ ಪಟೇಲರ ಜೊತೆಗಿನ ಮಾತುಕತೆಯಲ್ಲಿ ಮಗ್ನರಾಗಿದ್ದರು. ೫.೧೦ರ ಹೊತ್ತಿಗೆ ಗಾಂಧೀಜಿ ಗಡಿಬಿಡಿಯಿಂದ ಮೇಲೆದ್ದು ಪ್ರಾರ್ಥನೆಗೆ ಹೊರಟಾಗ ನಡೆದ ಕೊನೆಯ ಸಂಭಾಷಣೆ.)

भाಗ : ೧೨

ಗಾಂಧೀ ನುಡಿ ಸಂಚಯ

ಪ್ರಾಮಾಣಿಕತೆಯಿಲ್ಲದ ಚಿಂತನೆ, ಮಾತು, ಬರಹಗಳು ಸಲ್ಲವು.

ಮೋಹನದಾಸ್ ಕರಮಚಂದ್ ಗಾಂಧಿ

೧೩೦

ಗಾಂಧೀ ನುಡಿ

ಪ್ರಾರ್ಥನೆಗೆ ಬೇಕಾಗಿರುವುದು ಹೃದಯ; ನಾಲಿಗೆಯಲ್ಲ.

*

ಮೆಲುವಾದ ರೀತಿಯಲ್ಲೇ ನೀವು ಜಗತ್ತನ್ನು ಅಲುಗಾಡಿಸಬಹುದು.

*

ಅಹಿಂಸೆ ಹೇಡಿಗಳ ಅಸ್ತ್ರವಲ್ಲ; ಅದು ಧೀರರ ಅಸ್ತ್ರ.

*

ಕಣ್ಣಿಗೆ ಕಣ್ಣು ಎಂಬ ನಿಯಮವನ್ನು ಪಾಲಿಸುತ್ತಾ ಹೋದರೆ ಇಡೀ ಜಗತ್ತೇ ಕುರುಡರಿಂದ ತುಂಬಿ ಹೋಗುತ್ತದೆ.

*

ಸಂಗೀತ ಕೇವಲ ಗಂಟಲಿನಿಂದ ಶುರುವಾಗುವುದಿಲ್ಲ.

*

ಮಣಗಟ್ಟಲೆ ಉಪದೇಶಕ್ಕಿಂತ ಒಂದು ಚಿಟಿಕೆ ಸಹನೆ ಹೆಚ್ಚು ಬೆಲೆಯುಳ್ಳದ್ದು.

*

ಪ್ರಜಾಪ್ರಭುತ್ವ ಮತ್ತು ಹಿಂಸೆ ಎಂದೂ ಒಟ್ಟಿಗೇ ಹೋಗುವುದಿಲ್ಲ.

*

ಇತರರಿಗೆ ದುಃಖವನ್ನುಂಟು ಮಾಡುವ ತ್ಯಾಗ ತ್ಯಾಗವೇ ಅಲ್ಲ.

*

ನೀವು ನನ್ನನ್ನು ಸರಪಳಿಯಿಂದ ಬಂಧಿಸಬಹುದು, ಹಿಂಸಿಸಬಹುದು. ಆದರೆ ನೀವು ಎಂದೆಂದಿಗೂ ನನ್ನ ಮನಸ್ಸನ್ನು ಬಂಧಿಸಿಡಲಾರಿರಿ.

*

ಅಂತಸ್ಸತ್ವವುಳ್ಳ ಧೀರರು ಏಕಾಂಗಿ ಹೋರಾಟದಲ್ಲಿ ಬೆಳಗುವರು.

*

ಪ್ರೀತಿಯ ನಿಯಮಗಳನ್ನು ಪುಟ್ಟ ಮಕ್ಕಳ ಸಂಗದಲ್ಲಿ ಚೆನ್ನಾಗಿ ಅರಿಯಬಹುದು ಹಾಗೂ ಕಲಿಯಬಹುದು.

*

ಪರಿಶುದ್ಧ ಹೃದಯದಿಂದ ಹೊರಬಿದ್ದ ಶಬ್ದ ಎಂದೂ ವ್ಯರ್ಥವಾಗುವುದಿಲ್ಲ.

*

ನಾವು ಏನನ್ನಾದರೂ ಕೊಟ್ಟಾಗ ನಮ್ಮೊಳಗಿನ ಅತ್ಯಂತ ನಿಜವಾದ ಭಾಗವನ್ನು ಕೊಡಬೇಕು.

*

ನೀವು ಹೆದರಲು ಸಿದ್ಧರಿರದಿದ್ದರೆ ಯಾರೂ ನಿಮ್ಮನ್ನು ಹೆದರಿಸಲಾರರು.

*

ಮೃಗದಂತೆ ವರ್ತಿಸುವ ಮನುಷ್ಯ ಮೃಗಗಳಿಗಿಂತ ಕೇಡಾಗಿರುವನು.

*

ಲೆಕ್ಕಾಚಾರದ ಮನಸ್ಸು ತನ್ನನ್ನು ತಾನು ಅರಿಯಲಾರದು.

*

ಬಡತನ ಅತ್ಯಂತ ಕ್ರೂರ ಹಿಂಸೆ.

*

ಎಲ್ಲದಕ್ಕೂ ಎರಡು ಮುಖವಿದೆಯೆಂದು ನಮಗೆ ಗೊತ್ತಿದ್ದರೆ, ಪ್ರಕಾಶಮಾನವಾದ ಮುಖವನ್ನೇ ನೋಡೋಣ.

*

ಮನುಷ್ಯ ತನ್ನನ್ನು ತಾನು ಅರಿಯಲು ಯಾವುದು ಸಹಾಯಕವಾಗುತ್ತದೋ ಅದೇ ಜ್ಞಾನ.

*

ಎಲ್ಲರೂ ಗುರುಗಳಾದರೆ ವಿದ್ಯಾರ್ಥಿಗಳಾಗುವವರು ಯಾರು? ಆದ್ದರಿಂದ ನಾವೆಲ್ಲರೂ ವಿದ್ಯಾರ್ಥಿಗಳೇ ಆಗೋಣ.

*

ಬಂದೂಕಿನಿಂದ ಗುಂಡು ಹಾರಿಸಿದ ನಂತರ ಬಂದೂಕಿನ ಭಯ ಇಲ್ಲವಾಗುವುದು.

*

ವಿಷ ಬೆರೆತ ಅಮೃತವೂ ವಿಷವಾಗುವುದು.

*

ಧೀರರು ಮಾತ್ರ ಕ್ಷಮಿಸಬಲ್ಲರು.

*

ವ್ಯಕ್ತಿತ್ವವನ್ನು ರೂಪಿಸದಿರುವ ಶಿಕ್ಷಣ ಸಂಪೂರ್ಣ ವ್ಯರ್ಥ.

*

ಸಮಾಜಮುಖಿಯಾಗದವನು ಒಳ್ಳೆಯ ಗೃಹಸ್ಥನಾಗಲಾರ.

*

ಸಾವಿನ ಭಯ ಸದಾ ಹಾಜರಿರುವಾಗ ಅದಕ್ಕೆ ಭಯ ಪಡುವುದೇತಕ್ಕೆ?

*

ಮನುಷ್ಯ ಒಂಟಿಯಾಗಿರುವ ಸಂದರ್ಭ ಬಂದರೂ ಅವನು ತನ್ನ ಒಳದನಿಯನ್ನು ಅದುಮಿಡಬಾರದು.

*

ಭೂಮಿ ಪ್ರತಿ ಮನುಷ್ಯನ ಅಗತ್ಯಕ್ಕೆ ತಕ್ಕಷ್ಟನ್ನು ನೀಡುವುದೇ ಹೊರತು, ಪ್ರತಿ ಮನುಷ್ಯನ ದುರಾಶೆಗೆ ಬೇಕಾದಷ್ಟನ್ನಲ್ಲ.

*

ಒಂದೇ ಬೀಜದಿಂದ ಹುಟ್ಟಿದ ಚಟುವಟಿಕೆಗಳು ಒಂದು ಮತ್ತೊಂದರ ಜೊತೆ ಬೆರೆಯುತ್ತವೆ.

*

ಯಾರು ಜಮೀನಿನಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಾನೋ, ಆ ಜಮೀನು ನಿಜಕ್ಕೂ ಅವನಿಗೇ ಸೇರುತ್ತದೆ.

*

ನಾಳೆಯೇ ಸಾಯಬಹುದು ಎಂದುಕೊಂಡು ಬದುಕಿರಿ; ಎಂದೆಂದಿಗೂ ಬದುಕಿರುವೆ ಎಂಬಂತೆ ಕಲಿಯಿರಿ.

*

ನಮ್ಮ ಆದರ್ಶಗಳನ್ನು ನಾವು ತೊರೆಯದಿದ್ದರೆ, ಅವು ಎಂದಿಗೂ ನಮ್ಮನ್ನು ತೊರೆಯುವುದಿಲ್ಲ.

*

ಮನಸ್ಸಿನಲ್ಲಿರುವುದು ಈಗಲ್ಲದಿದ್ದರೆ ತಡವಾಗಿಯಾದರೂ ಹೊರ ಬರುವುದು.

*

ನಿಜವಾದ ಆನಂದ ಹೊರಗಿನಿಂದ ಬರುವುದಿಲ್ಲ; ಅದು ಬರುವುದು ನಮ್ಮೊಳಗಿನಿಂದಲೇ.

*

ನಂಬಿಕೆಯೊಂದಿದ್ದರೆ ಮನುಷ್ಯ ಪರ್ವತವನ್ನೂ ದಾಟುವನು.

*

ಅಹಂಕಾರದ ಕತ್ತಲು ಕಾರ್ಗತ್ತಲಿಗಿಂತ ಅಭೇದ್ಯವಾಗಿರುತ್ತದೆ.

*

ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವವನು ಎಲ್ಲವನ್ನೂ ಕಳೆದುಕೊಳ್ಳುವನು.

*

ಹುಸಿ ಜ್ಞಾನದ ಬಗ್ಗೆ ಸದಾ ಎಚ್ಚರವಾಗಿರೋಣ.

*

ಭೂತ ಕಾಲ ನಮಗೆ ಸೇರಿದ್ದು, ಆದರೆ ನಾವು ಭೂತಕಾಲಕ್ಕೆ ಸೇರಿದವರಲ್ಲ.

*

ಒಳ್ಳೆಯ ಮನುಷ್ಯ ಎಲ್ಲ ಜೀವಿಗಳ ಗೆಳೆಯನಾಗಿರುವನು.

*

ರೈತರು, ಕಾರ್ಮಿಕರು ಭಾರತವನ್ನು ರೂಪಿಸುವರು.

*

ಮತ್ತೊಬ್ಬರ ಹೊರೆಯನ್ನು ಹಗುರಾಗಿಸುವವನು ಎಂದೂ ನಿರುಪಯುಕ್ತನಲ್ಲ.

*

ಬದುಕುವ ಕಲೆ, ಸಾಯುವ ಕಲೆ ಎರಡನ್ನೂ ಬಲ್ಲವನು ಮಾತ್ರ ನಿಜವಾದ ಸತ್ಯಾಗ್ರಹಿಯಾಗಬಲ್ಲ.

*

ಎಲ್ಲಿ ಪ್ರೀತಿಯಿದೆಯೋ ಅಲ್ಲಿ ಜೀವವಿದೆ.

*

ಸತ್ಯಾಗ್ರಹ ಜೀವನದ ವಿಶ್ವಾತ್ಮಕ ಸತ್ಯ.

*

ತೋರುಗಾಣಿಕೆಯ ಮೂಲಕ ನಮ್ರತೆ ಬೆಳೆಯುವುದಿಲ್ಲ; ಸರಳತೆ ಕೂಡ.

*

ಅಹಿಂಸೆಯ ಅನುಯಾಯಿಗಳಿಗೆ ಶತ್ರುವೇ ಇಲ್ಲ.

*

ಒಳ್ಳೆಯ ಸರ್ಕಾರ ಎನ್ನುವುದು ನಮ್ಮನ್ನು ನಾವೇ ಆಳಿಕೊಳ್ಳುವ ಸರ್ಕಾರಕ್ಕೆ- ಅಂದರೆ, ಸ್ವರಾಜ್ಯಕ್ಕೆ- ಪರ್ಯಾಯವೇ ಅಲ್ಲ.

*

ಸ್ವಾರ್ಥವನ್ನು ನಿಸ್ವಾರ್ಥ ಎಂದುಕೊಳ್ಳುವುದು ನರಿಯನ್ನು ಸಿಂಹ ಎಂದುಕೊಂಡಂತೆ.

*

ದುರ್ಗುಣ ಕತ್ತಲಲ್ಲಿ ಬೆಳೆಯುತ್ತದೆ, ಹಗಲಿನ ಬೆಳಕಿನಲ್ಲಿ ಮಾಯವಾಗುತ್ತದೆ.

*

ಮಾನವ ಇರುವುದು ಅವನ ದೇಹ ಎಲ್ಲಿದೆಯೋ ಅಲ್ಲಲ್ಲ, ಅವನ ಮನಸ್ಸು ಎಲ್ಲಿದೆಯೋ ಅಲ್ಲಿ.

*

ಎಲ್ಲರೂ ನಮ್ಮನ್ನು ದುರ್ಬಲರೆಂದು ಕರೆದರೂ ನಾವು ನಮ್ಮ ಆದರ್ಶಗಳನ್ನು ದುರ್ಬಲವಾಗಿಸಿಕೊಳ್ಳಬಾರದು.

*

ಗಂಗಾನದಿ ಮನುಷ್ಯನ ಮನಸ್ಸಿನಲ್ಲಿ ಹರಿಯುತ್ತದೆ; ಆದರೆ ಅವನಿಗೆ ಅದರಲ್ಲಿ ಮೀಯುವ ಶಕ್ತಿಯಿಲ್ಲ.

*

ರಾಮಾಯಣದ ಅಮೃತ ಆತ್ಮಕ್ಕೆ ಮುದ ಕೊಡುವುದು, ದೇಹದ ಕಾಯಿಲೆಯನ್ನು ದೂರ ಮಾಡುವುದು.

*

ಮಾನವನು ಸೇವೆ ಮಾಡಲಾಗದ ಒಂದು ಗಳಿಗೆಯೂ ಜೀವನದಲ್ಲಿ ಇಲ್ಲ.

*

ತನ್ನ ದುಃಖಗಳ ಬಗ್ಗೆ ಪದೇ ಪದೇ ರಾಗ ಎಳೆಯುವವನು ದುಃಖವನ್ನು ಅತಿ ಮಾಡಿಕೊಳ್ಳುತ್ತಿರುತ್ತಾನೆ.

*

ಅಜ್ಞಾನವನ್ನು ಅಡಗಿಸಿಡಲೆತ್ನಿಸಿದಷ್ಟೂ ಅದು ಇನ್ನಷ್ಟು ಹೆಚ್ಚಾಗುವುದು.

*

ಸಂತೋಷದ ಬೆನ್ನು ಹತ್ತಿ ಹೋದಷ್ಟೂ ಅದು ತಪ್ಪಿಸಿಕೊಳ್ಳುತ್ತಲೇ ಇರುವುದು.

*

ಯಾವುದನ್ನೇ ಆಗಲಿ ನಾಶ ಮಾಡುವುದು ಸುಲಭ. ಕಟ್ಟುವುದಕ್ಕೆ ಅಪಾರ ಕೌಶಲ, ಕಾಳಜಿಗಳು ಬೇಕಾಗುತ್ತವೆ.

*

ಆಕಾಶದ ಕೆಳಗೆ ಮಲಗಿದವರನ್ನು ಯಾರು ತಾನೇ ದೋಚಬಲ್ಲರು?

*

ಚಿಂತನೆ ಉಕ್ಕಿನ ಗೋಡೆಯನ್ನೂ ಸೀಳುತ್ತದೆ.

*

ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ಬಯಸುವವನು ಅನಗತ್ಯವಾದ ಯಾವ ಕೆಲಸವನ್ನೂ ಮಾಡುವುದಿಲ್ಲ.

*

ನಂಬಿಕೆಯು ಹಡಗನ್ನು ಮುನ್ನಡೆಸುತ್ತದೆ.

*

ಪ್ರಕ್ಷುಬ್ಧ ಮನಸ್ಸು ಹುಣ್ಣಿಗಿಂತ ಹೆಚ್ಚು ಯಾತನೆಯನ್ನುಂಟು ಮಾಡುತ್ತದೆ.

*

ಬಿರುಗಾಳಿ ಎಷ್ಟು ಬಿರುಸಾಗಿದ್ದರೂ, ಕಡಲು ತನ್ನ ಪ್ರಶಾಂತತೆಯನ್ನು ತೊರೆಯದು.

*

ಏನಾದರೂ ತಪ್ಪು ಮಾಡಿದಾಗ ಮನುಷ್ಯನಿಗೆ ನಾಚಿಕೆಯಾಗುತ್ತದೆ.

*

ನಮ್ಮನ್ನು ಕನಸುಗಾರರೆಂದು ಜನ ತಿಳಿದರೆ, ತಿಳಿಯಲಿ ಬಿಡಿ!

*

ಮನುಷ್ಯ ತನ್ನನ್ನು ತಾನು ಅರಿತಷ್ಟೂ ಹೆಚ್ಚೆಚ್ಚು ಬೆಳೆಯುವನು.

*

ಸತ್ಯದ ಉಪಾಸಕನಿಗೆ ಹೊಗಳಿಕೆ, ತೆಗಳಿಕೆಗಳು ಸದಾ ಇರಲೇಬೇಕು.

*

ಕೆಟ್ಟ ಸುದ್ದಿಯ ಬಗ್ಗೆ ವಿಚಲಿತನಾಗದವನು ಒಳ್ಳೆಯ ಸುದ್ದಿಗೆ ಕುಣಿದು ಕುಪ್ಪಳಿಸುವುದಿಲ್ಲ.

*

ನಾವು ಬೇರೆಯವರ ಬಗ್ಗೆ ಯೋಚಿಸಿದಾಗ. ನಮ್ಮ ಬಗ್ಗೆಯೇ ಯೋಚಿಸುವುದನ್ನು ಬಿಡುತ್ತೇವೆ.

*

ರೈಲುಗಾಡಿಯನ್ನು ಮುನ್ನಡೆಸುವುದು ಸೀಟಿಯಲ್ಲ; ಉಗಿಯಲ್ಲಿ ಹುಟ್ಟುವ ಶಕ್ತಿ.

*

ನಮ್ಮೊಳಗಿನ ದೀಪ ಉರಿದಾಗ, ಅದು ಇಡೀ ಲೋಕವನ್ನು ಬೆಳಗುತ್ತದೆ.

*

ಏಕಾಂತದ ಅನುಕೂಲಗಳು ಅನುಭವದಿಂದ ಮಾತ್ರ ಅರಿವಾಗಬಲ್ಲವು.

*

ಭಯ, ಸ್ವಾರ್ಥಗಳಿಗೆ ಗುಲಾಮನಾಗಿರುವುದು ಅತಿ ಹೀನ ಗುಲಾಮಗಿರಿ.

*

ಒಳ್ಳೆಯ ಚಿಂತನೆಗಳನ್ನು ಚಿಂತಿಸುವುದು ಬೇರೆ; ಅದನ್ನು ಕ್ರಿಯೆಗಿಳಿಸುವುದೇ ಬೇರೆ.

*

ಜನರ ಖಂಡನೆಗೆ ಹೆದರುವವರು ಎಂದೂ ಏನನ್ನೂ ಮಾಡಲಾರರು.

*

ವಿವೇಚನೆಯಿಲ್ಲದ ಅಂತಃಪ್ರೇರಣೆ ಹೆಳವನಾಗಿರುತ್ತದೆ.

*

ನಮ್ಮ ಆದರ್ಶಗಳಿಗೆ ಹತ್ತಿರವಾದಷ್ಟೂ ನಾವು ಹೆಚ್ಚೆಚ್ಚು ಪ್ರಾಮಾಣಿಕರಾಗುತ್ತೇವೆ.

*

ನಾನು ನಿಜವಾದ ಸೇವೆ ಮಾಡದಿದ್ದರೆ ಬದುಕುವ ಆಸಕ್ತಿಯೇ ಇಲ್ಲವಾಗುವುದು.

*

ಮಾನವ ತಾನು ಬಯಸಿದ್ದನ್ನೇ ಕಾಣುತ್ತಾನೆ, ಬಯಸಿದ್ದನ್ನೇ ಕೇಳಿಸಿಕೊಳ್ಳುತ್ತಾನೆ.

*

ಸಮಚಿತ್ತದ, ಸಮತಾಭಾವದ ಫಲಗಳು ಸಿಹಿಯಾಗಿರುತ್ತವೆ.

*

ಶಕ್ತಿ ದೈಹಿಕ ಸಾಮರ್ಥ್ಯದಿಂದ ಬರುವುದಿಲ್ಲ; ಅದು ಇತರರು ಸೋಲಿಸಲಾಗದ ಇಚ್ಛಾಶಕ್ತಿಯಿಂದ ಬರುತ್ತದೆ.

*

ಮಾನವ ತನ್ನ ದುಃಖಗಳ ಬಗ್ಗೆ ಮುಗುಳ್ನಕ್ಕು ಅವನ್ನು ಇಲ್ಲವಾಗಿಸಿಕೊಳ್ಳಬೇಕು; ಅತ್ತಷ್ಟೂ ಅವು ಮತ್ತಷ್ಟು ಹೆಚ್ಚಾಗುವುವು.

*

ಜಾತಿ ತೊಲಗಲೇಬೇಕು.

*

ನಾವು ಎಲ್ಲವನ್ನೂ ವಿಧಿಗೆ ಬಿಡಬಾರದು; ಹಾಗೆಯೇ ನಮ್ಮ ಪ್ರಯತ್ನಗಳ ಬಗ್ಗೆ ಒಣ ಹೆಮ್ಮೆ ಪಡಲೂಬಾರದು.

*

ಮನುಷ್ಯನಿಗೆ ತನ್ನ ಕರ್ತವ್ಯ ಏನೆಂಬುದು ಗೊತ್ತು; ಆದರೂ ಅವನು ತಾನೇನು ಮಾಡಬೇಕೆಂದು ತಿಳಿದಿದ್ದಾನೋ ಅದನ್ನು ಮಾಡುವುದಿಲ್ಲ.

*

ಕಣ್ಣು ಕಳೆದುಕೊಂಡವನು ಕುರುಡನಲ್ಲ; ತನ್ನ ತಪ್ಪುಗಳನ್ನು ಬಚ್ಚಿಡುವವನೇ ಕುರುಡ.

*

ಸೋಮಾರಿತನ ನಮಗೆ ನೋವನ್ನುಂಟು ಮಾಡಿದರೆ ನಾವು ಸೋಮಾರಿಗಳಾಗಿರುವುದಿಲ್ಲ.

*

ಕೋಪ ಮತ್ತು ಅಸಹನೆ ನಿಜವಾದ ಜ್ಞಾನದ ಅವಳಿ ಶತ್ರುಗಳು.

*

ಆತುರ ಪಡುವವರು ಗೊಂದಲ ಮಾಡಿಕೊಳ್ಳುವರು; ನಿಧಾನವಾಗಿ ಏಕಚಿತ್ತದಿಂದ ಕೆಲಸ ಮಾಡುವವರು ಸಮಚಿತ್ತ ಉಳಿಸಿಕೊಳ್ಳುವರು.

*

ಕೆಟ್ಟ ಯೋಚನೆಗಳು ಕಾಯಿಲೆಯ ಸೂಚನೆಗಳೂ ಹೌದು.

*

ಹೇಡಿಗಳು ಎಂದೂ ನೀತಿನಿಷ್ಠರಾಗಿರಲಾರರು.

*

ಅಪರಾಧವನ್ನು ಬಚ್ಚಿಡಲಾಗದು. ಅವು ಅಪರಾಧಿಯ ಮುಖದಲ್ಲಿ ಢಾಳಾಗಿ ಬರೆಯಲ್ಪಟ್ಟಿರುತ್ತವೆ.

*

ಐಂದ್ರಿಕ ಭಾವಗಳು–ಉದ್ದೇಶಗಳು ಬರುತ್ತವೆ, ಹೋಗುತ್ತವೆ, ಅವನ್ನು ಸಹಿಸಿಕೊಳ್ಳಿ

*

ಯಾರು ಅಸೂಯೆಯನ್ನು ಪೋಷಿಸುತ್ತಾರೋ ಅವರನ್ನೇ ಅಸೂಯೆ ತಿಂದು ಹಾಕುತ್ತದೆ.

*

ಅಯ್ಯೋ! ಮನುಷ್ಯ ಗೊತ್ತಿದ್ದೂ ಗೊತ್ತಿದ್ದೂ ಪತನಗೊಳ್ಳಲು ಬಯಸುತ್ತಾನಲ್ಲ!

*

ಬದುಕಿನ ಪ್ರತಿ ಕ್ಷಣಕ್ಷಣವೂ ಮೌನವೇ ಅತ್ಯುತ್ತಮ ಮಾತು ಎಂಬುದನ್ನು ಅರಿಯುತ್ತಿರುತ್ತೇನೆ.

*

ಗರ್ವ ಮನುಷ್ಯನನ್ನು ಸಂಪೂರ್ಣವಾಗಿ ನುಂಗಿ ಹಾಕುತ್ತದೆ.

*

ಒಂದು ನಿಯಮದ ಉಲ್ಲಂಘನೆ ಅನಿವಾರ್ಯವಾಗಿ ಇತರ ನಿಯಮಗಳ ಉಲ್ಲಂಘನೆಗೂ ಎಡೆ ಮಾಡಿಕೊಡುತ್ತದೆ.

*

ಪಾಪವನ್ನು ದ್ವೇಷಿಸಿ, ಪಾಪಿಯನ್ನು ಪ್ರೀತಿಸಿ.

*

ಗಾಳಿಸುದ್ದಿಗಳನ್ನು ಕೇಳಿಸಿಕೊಳ್ಳಬೇಡಿ; ಅಕಸ್ಮಾತ್ ಕೇಳಿಸಿಕೊಂಡರೆ, ನಂಬಬೇಡಿ.

*

ಅಸತ್ಯ ಆತ್ಮವನ್ನು ಕಲುಷಿತಗೊಳಿಸುತ್ತದೆ, ಸತ್ಯ ಆತ್ಮವನ್ನು ಪೋಷಿಸುತ್ತದೆ.

*

ಹಳ್ಳಿಗಳು ನಾಶವಾದರೆ ಭಾರತವೂ ನಾಶವಾಗುತ್ತದೆ.

*

ಇಂದು ನೀವೇನು ಮಾಡುತ್ತೀರಿ ಎನ್ನುವುದರ ಮೇಲೆ ನಾಳಿನ ಭವಿಷ್ಯ ನಿಂತಿದೆ.

*

ಮನುಷ್ಯನ ಬದುಕಿನ ಸಫಲತೆಯ ಗುರುತೆಂದರೆ ಅವನು ಕೋಮಲನಾಗುವುದು, ಪ್ರಬುದ್ಧನಾಗುವುದು.

*

ಮನುಷ್ಯ ತನ್ನನ್ನು ತಾನು ಹೇಗೆ ಮೋಸಗೊಳಿಸಿಕೊಳ್ಳುತ್ತಿರುತ್ತಾನೆ ಎಂಬುದನ್ನು ಪ್ರತಿ ಕ್ಷಣವೂ ಕಾಣುತ್ತಿರುತ್ತೇನೆ.

*

ಧರ್ಮ ನಮ್ಮ ನಿತ್ಯದ ಬದುಕಿನಲ್ಲಿ ಉಪಯುಕ್ತವಾಗದಿದ್ದರೆ ಅದು ಧರ್ಮ ಹೇಗಾಗುತ್ತದೆ?

*

ಧರ್ಮ ಯಾಂತ್ರಿಕವಾಗಿಬಿಟ್ಟರೆ ಅದನ್ನು ಧರ್ಮವೆನ್ನಲಾಗದು.

*

ರೋಗಗ್ರಸ್ತ ದೇಹವನ್ನು ಸಹಿಸಿಕೊಳ್ಳಬಹುದು, ರೋಗಗ್ರಸ್ತ ಮನಸ್ಸನ್ನಲ್ಲ.

*

ಶ್ರಮ ಪಟ್ಟು ಕೆಲಸ ಮಾಡದಿದ್ದರೂ ಉಣ್ಣುವವನು ಕದ್ದ ಊಟವನ್ನು ಉಣ್ಣುತ್ತಿರುತ್ತಾನೆ.

*

ಮಾತೃಭಾಷೆಯನ್ನು ಕಡೆಗಣಿಸುವವನು ತಾಯಿಯನ್ನೂ ಕಡೆಗಣಿಸುತ್ತಾನೆ.

*

ದುರಹಂಕಾರದಿಂದ ಹುಟ್ಟುವ ಮಾತು ಯಾವಾಗಲೂ ಸುಳ್ಳಾಗಿರುತ್ತದೆ.

*

ಅನಗತ್ಯವಾಗಿ ನಮ್ಮ ಬೇಕುಗಳನ್ನು ಹೆಚ್ಚಿಸಿಕೊಳ್ಳುತ್ತಲೇ ಹೋಗುವುದು ಪಾಪಕರ.

*

ಕೂಗಾಟವು ಕೂಗಾಟದಿಂದ ಕೊನೆಗೊಳ್ಳದು; ಮೌನದಿಂದ ಕೊನೆಗೊಳ್ಳುವುದು.

*

ಒಂದು ತಪ್ಪನ್ನು ಸರಿ ಮಾಡಿದ ಮೇಲೆ ಅದು ತಪ್ಪಾಗಿ ಉಳಿಯುವುದಿಲ್ಲ.

*

ನಮ್ಮ ಕರ್ತವ್ಯವನ್ನು ಮಾಡುವುದರಲ್ಲಿರುವ ಆನಂದ ಬೇರಾವುದರಲ್ಲೂ ಇಲ್ಲ.

*

ನಮ್ಮ ವಿಧಿಯ ನಿರ್ಮಾಪಕರು ನಾವೇ.

*

ನಾಲಗೆಯಿಂದ ಋಣ ತೀರಿಸಲಾಗದು; ಕಾಯಕದಿಂದ ತೀರಿಸಬಹುದು.

*

ಸ್ವಾರ್ಥ ನಮ್ಮನ್ನು ಸದಾ ಚಿಂತೆಯಲ್ಲಿ ಮುಳುಗಿಸುತ್ತದೆ.

*

ಅಹಂಕಾರಿಗಳಿಗೆ ಬೆಳಕು ದಕ್ಕುವುದೇ ಇಲ್ಲ.

*

ನಿಜವಾದ ಪ್ರೀತಿ ಎಲ್ಲ ಬಳಲಿಕೆಯನ್ನೂ ದೂರ ಮಾಡುತ್ತದೆ.

*

ನಾವು ಶೌಚಾಲಯವನ್ನು ಶುದ್ಧಗೊಳಿಸುವುದು ಅತಿ ಮುಖ್ಯ ಸೇವೆ.

*

ಅರ್ಥ ಮಾಡಿಕೊಳ್ಳದೆ ಏನನ್ನೂ ಮಾಡಬಾರದು, ಏನನ್ನೂ ಓದಬಾರದು.

*

ಯಾರಿಗಾದರೂ ಸತ್ಯವನ್ನು ಮನದಟ್ಟು ಮಾಡಬೇಕೆಂದಾದರೆ ಅಪಾರ ಧೈರ್ಯ ಬೇಕಾಗುತ್ತದೆ.

*

ಸಹಜ ಸ್ವಭಾವವೇ ಕೆಟ್ಟದ್ದರೆ ಅದನ್ನು ಅದುಮಿಡಲಾಗದು. ಅದನ್ನು ಕಿತ್ತೆಸೆಯಬೇಕು.

*

ವಿಚಾರಶೂನ್ಯ ಬದುಕು ಮೃಗದ ಬದುಕಿನಂತಿರುತ್ತದೆ.

*

ಸರಳತೆಯನ್ನು ರೂಪಿಸಿಕೊಳ್ಳಲಾಗದು, ಅದು ನಮ್ಮ ಸ್ವಭಾವದಲ್ಲೇ ಇರಬೇಕು.

*

ವಿರೋಧವಿಲ್ಲದೆ ಯಾರೂ ಮುನ್ನಡೆಯಲಾರರು.

*

ಎಂಥ ಬಿಕ್ಕಟ್ಟು ಎದುರಾದರೂ ಅದು ಪ್ರೇಮಾಗ್ನಿಯಿಂದ ದೂರವಾಗುವುದು.

*

ಮೂಢನಂಬಿಕೆ ಮತ್ತು ಸತ್ಯ ಒಟ್ಟೊಟ್ಟಿಗೇ ಹೋಗಲಾರವು.

*

ನಾವು ಪ್ರಾಮಾಣಿಕರಾಗಿದ್ದರೆ ನಮ್ಮ ತಪ್ಪುಗಳಿಂದ ಕಲಿತು ಮುಂದೆ ಸಾಗುವೆವು.

*

ಸರಳ ಸತ್ಯಗಳು ಸಾಮ್ರಾಜ್ಯಗಳಿಗಿಂತ ಶಕ್ತಿಶಾಲಿಯಾದವು.

*

ಬಿಕ್ಕಟ್ಟಿನ ವೇಳೆಯಲ್ಲಿ ನೆರವಾಗುವುದು ವ್ಯಕ್ತಿಚಾರಿತ್ರ್ಯವೇ ಹೊರತು, ಮಿದುಳಲ್ಲ.

*

ಎಲ್ಲ ನ್ಯಾಯಾಲಯಗಳಿಗಿಂತ ಅತ್ಯುನ್ನತ ನ್ಯಾಯಾಲಯವೊಂದಿದೆ: ಅದೇ ಆತ್ಮಸಾಕ್ಷಿಯ ನ್ಯಾಯಾಲಯ; ಅದು ಎಲ್ಲ ನ್ಯಾಯಾಲಯಗಳನ್ನೂ ಮೀರಿ ನಿಲ್ಲುತ್ತದೆ.

*

ತನ್ನ ಗುರಿಗಳ ಬಗ್ಗೆ ಅಚಲ ನಂಬಿಕೆಯಿರುವ ದೃಢ ಚೈತನ್ಯದ ಒಂದು ಪುಟ್ಟ ಗುಂಪು ಚರಿತ್ರೆಯ ದಿಕ್ಕನ್ನು ಬದಲಿಸಬಲ್ಲದು.

*

ಈ ಬಡತನಪೀಡಿತ ದೇಶದಲ್ಲಿ ಪಾಪಪ್ರಜ್ಞೆಯಿಲ್ಲದೆ ನಾವು ಹೇಗೆ ಹೊಟ್ಟೆ ತುಂಬ ಊಟ ಮಾಡಬಲ್ಲೆವು?

*

ನಮ್ಮ ನಾಯಕರುಗಳಿಗೆ ಇರಬೇಕಾದ ಗುಣಗಳೆಂದರೆ– ಧೈರ್ಯ, ಕಷ್ಟಗಳನ್ನು ಸಹಿಸಿಕೊಳ್ಳುವ ಶಕ್ತಿ, ನಿರ್ಭಯತೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಸ್ವಂತವನ್ನು ತ್ಯಾಗ ಮಾಡುವ ಶಕ್ತಿ.

*

ಯಶಸ್ಸು ನಿಂತಿರುವುದು ಧೈರ್ಯ, ತ್ಯಾಗ, ಸತ್ಯ, ಪ್ರೀತಿ ಹಾಗೂ ನಂಬಿಕೆಗಳ ಮೇಲೆ; ಅದು ತೀಕ್ಷ್ಣ ಕಾನೂನುಜ್ಞಾನ, ಲೆಕ್ಕಾಚಾರ, ವ್ಯವಹಾರ ಚತುರತೆ, ದ್ವೇಷ, ಅಪನಂಬಿಕೆಗಳ ಮೇಲೆ ನಿಂತಿಲ್ಲ.

*

ಯಾರಾದರೂ ತಾವೇ ಇಚ್ಛೆಪಟ್ಟು ತಾಯ್ನಾಡಿನ ಸೇವಾ ಬಲಿಪೀಠದ ಮೇಲೆ ನೀಡಲು ಬಂದ ಯಾವುದೇ ಸೇವೆಯನ್ನು ಕೃತಜ್ಞತೆಯಿಂದ ಸ್ವೀಕರಿಸಬೇಕು.

*

ಸರಳತೆಯಲ್ಲಿ ಒಳ್ಳೆಯತನ, ದೊಡ್ಡತನ ಎರಡೂ ಇವೆ; ಅವು ಹಣದಲ್ಲಿಲ್ಲ.

*

ಒಂದು ದೇಶದ ಸಂಸ್ಕೃತಿ ಅಲ್ಲಿನ ಹೃದಯ ಮತ್ತು ಆತ್ಮದಲ್ಲಿದೆ.

*

ನಾನು ಗುರುವನ್ನು ಹುಡುಕುತ್ತೇನೆ. ಆದರೆ ಆ ಗುರು ನಾನು ಒಪ್ಪಿಕೊಳ್ಳುವಂಥ ಗುರುವಾಗಿರಬೇಕು. ಆದರೆ ಎಲ್ಲಿಯತನಕ ನನಗೆ ಅರ್ಹ ಗುರು ಸಿಕ್ಕುವುದಿಲ್ಲವೋ ಅಲ್ಲಿಯತನಕ ನಾನೇ ನನ್ನ ಗುರುವಾಗಿ ಮುಂದುವರಿಯುತ್ತೇನೆ.

*

ಹಿಟ್ಲರ್ ಹರಿಸಿರುವ ಕೋಡಿಗಟ್ಟಲೆ ರಕ್ತದಿಂದ ಲೋಕದಲ್ಲಿ ಒಂದಿನಿತು ಒಳಿತೂ ಹುಟ್ಟಿಲ್ಲ.

*

ನಾವು ಅನಗತ್ಯವಾದ ಮಾತುಗಳನ್ನು ಆಡುವುದನ್ನು ಬಿಟ್ಟರೆ ಹಾಗೂ ಅಗತ್ಯವಾದ ವಿಷಯಗಳ ಬಗ್ಗೆ ಮಾತಾಡಲು ಆದಷ್ಟೂ ಕಡಿಮೆ ಶಬ್ದಗಳನ್ನು ಬಳಸಿದರೆ ನಮ್ಮ ಹಾಗೂ ಇತರರ ಬಹಳಷ್ಟು ಸಮಯ ಉಳಿಯುವುದು.

*

ಕೋಪ ಇಳಿದ ಮೇಲೆ ಮಾಡಿದ ಕೆಲಸ ಮಾತ್ರ ಉತ್ತಮ ಫಲ ಕೊಡಬಲ್ಲದು.

*

ಮೌನದ ಮೂಲಕ ನಾವು ಪಡೆಯುವ ಆನಂದ ವಿಶಿಷ್ಟವಾದುದು. 'ಮೌನ'ವನ್ನು ದೊಡ್ಡ ವ್ಯಕ್ತಿಗಳು ಮಾತ್ರ ಸಾಧಿಸುತ್ತಾರೆಂದೇನೂ ಇಲ್ಲ. ಪ್ರಯತ್ನಪಟ್ಟರೆ, ಒಬ್ಬರಿಗೆ ಸಾಧ್ಯವಾಗಿದ್ದು ಮತ್ತೊಬ್ಬರಿಗೂ ಸಾಧ್ಯವಾಗುತ್ತದೆ ಎಂಬುದನ್ನು ನಾನು ಬಲ್ಲೆ.

*

ನ್ಯಾಯವನ್ನು ಕೇಳುವವರು ನ್ಯಾಯ ನೀಡಬೇಕು, ನ್ಯಾಯವಾದದ್ದನ್ನು ಮಾಡಬೇಕು; ಅವರ ಕೈಗಳು ಶುಭ್ರವಾಗಿರಬೇಕು.

*

ಕೊನೆಗೂ ಹೃದಯವೊಂದೇ ಮುಖ್ಯ; ಉಳಿದೆಲ್ಲವೂ ಹುಸಿ...

***

ಹಿಂದಿ ಮತ್ತು ಇಂಗ್ಲಿಷ್‌ನಿಂದ: **ನಟರಾಜ್ ಹುಳಿಯಾರ್**

ಭಾಗ : ೧೩

ಗಾಂಧೀ ಜೀವನಯಾನ

ಈ ಬದುಕು ಅಲ್ಪ ಕಾಲದ ಬೆಳದಿಂಗಳು; ಉಳಿದದ್ದೆಲ್ಲ ಬರಿ ಧೂಳು.

ಮೋಹನದಾಸ್ ಕರಮಚಂದ್ ಗಾಂಧಿ

೧೩೧

ಗಾಂಧೀ ಜೀವನಯಾನ

೧೮೬೯ : ೨ ಅಕ್ಟೋಬರ್, ಪೋರ್‌ಬಂದರ್‌ನಲ್ಲಿ ಮೋಧ್ ಬನಿಯಾ ಕುಟುಂಬದಲ್ಲಿ ಜನನ.
ತಾಯಿ: ಪುತಲೀಬಾಯಿ. ತಂದೆ: ಕರಮ್‌ಚಂದ್ ಗಾಂಧಿ.

೧೮೭೬ : ಪ್ರಾಥಮಿಕ ವಿದ್ಯಾಭ್ಯಾಸ ಆರಂಭ.

೧೮೮೧ : ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ.

೧೮೮೩ : ಕಸ್ತೂರ್‌ಬಾಯಿ ಮಕಂಜಿ ಜೊತೆ ಮದುವೆ.

೧೮೮೭ : ಮೆಟ್ರಿಕ್ಯುಲೇಶನ್ ಪಾಸು.

೧೮೮೮ : ಕಾನೂನು ಅಧ್ಯಯನ ಮಾಡಲು ಇಂಗ್ಲೆಂಡಿಗೆ ಪಯಣ.

೧೮೯೧ : ಜೂನ್ ೧೦: ಬ್ಯಾರಿಸ್ಟರ್ ಪದವಿ.
ಜೂನ್ ೧೨: ಭಾರತಕ್ಕೆ ಆಗಮನ.

೧೮೯೧-೯೨ : ಮುಂಬೈನಲ್ಲಿ ವಕೀಲ ವೃತ್ತಿ ಆರಂಭ.

೧೮೯೩ : ದಕ್ಷಿಣ ಆಫ್ರಿಕಾದಲ್ಲಿ ನೆಲಸಿದ್ದ ಅಬ್ದುಲ್ಲಾ ಶೇಟ್ ಕಂಪನಿಯ ಕೇಸ್ ನಡೆಸಲು ಅಲ್ಲಿಗೆ ಪಯಣ.

೧೮೯೪ : ನಟಾಲ್ ಭಾರತೀಯ ಕಾಂಗ್ರೆಸ್‌ನ ಸಂಸ್ಥಾಪಕ ಕಾರ್ಯದರ್ಶಿ, ನಟಾಲ್ ಹೈಕೋರ್ಟ್‌ನಲ್ಲಿ ಬ್ಯಾರಿಸ್ಟರ್. ಭಾರತ ವಿರೋಧಿ ಜನಾಂಗೀಯ ಕಾನೂನಿನ ವಿರುದ್ಧ ಹೋರಾಟ.

೧೮೯೬ : ಜೂನ್ ತಿಂಗಳಿಂದ ನವೆಂಬರ್‌ವರೆಗೆ ಮರಳಿ ಭಾರತದಲ್ಲಿ.

೧೮೯೭ : ಕಸ್ತೂರಬಾ ಮತ್ತು ಮಕ್ಕಳೊಂದಿಗೆ ದಕ್ಷಿಣ ಆಫ್ರಿಕಾಕ್ಕೆ ಪಯಣ. ಗಾಂಧೀಜಿಯ ಮೇಲೆ ಬಿಳಿಯರ ಹಲ್ಲೆ. ಅದರಿಂದ ಪಾರು.

೧೮೯೯ : ಎರಡನೆಯ ಆಂಗ್ಲೋ-ಬೋಯರ್ ಯುದ್ಧದಲ್ಲಿ ಗಾಯಾಳುಗಳ ಸೇವೆಗೆ 'ಇಂಡಿಯನ್ ಆಂಬುಲೆನ್ಸ್ ಕಾರ್ಪ್ಸ್' ಸ್ಥಾಪನೆ.

೧೯೦೧ : ಭಾರತಕ್ಕೆ ಆಗಮನ.

೧೯೦೨ : ಮತ್ತೆ ದಕ್ಷಿಣ ಆಫ್ರಿಕಾಕ್ಕೆ ಪಯಣ.

೧೯೦೩ : ಜೊಹಾನೆಸ್‌ಬರ್ಗ್‌ನಲ್ಲಿ ವಾಸ. ವಕೀಲ ವೃತ್ತಿ.

'ಇಂಡಿಯನ್ ಒಪೀನಿಯನ್' ವಾರಪತ್ರಿಕೆ ಆರಂಭ.

೧೯೦೪ : ಜಾನ್ ರಸ್ಕಿನ್ ಅವರ 'ಅನ್ ಟು ದಿಸ್ ಲಾಸ್ಟ್ ಪುಸ್ತಕ'ದ ಗಂಭೀರ ಅಧ್ಯಯನ. ಈ ಪುಸ್ತಕದ ಪ್ರಭಾವದಿಂದ ಡರ್ಬಾನ್ ನಗರದ ಹೊರ ವಲಯದಲ್ಲಿ ಫೀನಿಕ್ಸ್ ವಸತಿ ಪ್ರದೇಶದ ಸ್ಥಾಪನೆ.

೧೯೦೬ : ಝುಲು ಬುಡಕಟ್ಟು ದಂಗೆಯ ಸಂದರ್ಭದಲ್ಲಿ 'ಇಂಡಿಯನ್ ಆ್ಯಂಬುಲೆನ್ಸ್ ಕಾರ್ಪ್ಸ್' ಸ್ಥಾಪನೆ.

೧೯೦೮ : 'ಸತ್ಯಾಗ್ರಹ' ಪದವನ್ನು ರೂಪಿಸಿಕೊಂಡು, ಹೋರಾಟದ ಭಾಗವಾಗಿಸಿಕೊಂಡದ್ದು.

ಭಾರತೀಯರ ಮೇಲೆ ಹೇರಿದ ರಿಜಿಸ್ಟ್ರೇಶನ್ ಕಾಯ್ದೆ ವಿರೋಧಿಸಿದ್ದಕ್ಕಾಗಿ ಜನವರಿ ೧೦ರಿಂದ ೩೦ರವರೆಗೆ ಜೈಲುಶಿಕ್ಷೆ.

೧೯೦೯ : 'ಹಿಂದ್ ಸ್ವರಾಜ್' ಪುಸ್ತಕದ ಬರವಣಿಗೆ.

ಟಾಲ್‌ಸ್ಟಾಯ್ ಅವರ 'ಲೆಟರ್ ಟು ಎ ಹಿಂದೂ' ಬರಹವನ್ನು ಗುಜರಾತಿ ಭಾಷೆಗೆ ಅನುವಾದಿಸಿ,ಭಾರತಕ್ಕೂ ತಲುಪಿಸುವ ವ್ಯವಸ್ಥೆ.

೧೯೧೦ : ಜೊಹಾನೆಸ್‌ಬರ್ಗ್‌ನ ಹೊರವಲಯದಲ್ಲಿ ಟಾಲ್‌ಸ್ಟಾಯ್ ಫಾರ್ಮ್ ಸ್ಥಾಪನೆ.

೧೯೧೩ : ಭಾರತೀಯರ ಬಗ್ಗೆ ತರತಮ ನೀತಿ ಅನುಸರಿಸಿದ್ದ ಬಿಳಿಯರ ಸರ್ಕಾರದ ಶಾಸನವನ್ನು ವಿರೋಧಿಸಿ ಸತ್ಯಾಗ್ರಹ. ೨೦೩೭ ಮಂದಿ ಗಂಡಸರು, ೩೭ ಮಹಿಳೆಯರು ಹಾಗೂ ೫೭ ಮಕ್ಕಳನ್ನು ಒಳಗೊಂಡ ಸತ್ಯಾಗ್ರಹಿಗಳ 'ಮಹಾಯಾತ್ರೆ'- ದಕ್ಷಿಣ ಆಫ್ರಿಕಾದ ಚಾರ್ಲ್ಸ್‌ಟೌನ್‌ನಿಂದ ವೋಕ್ ಸ್ರಸ್ಟ್‌ವರೆಗೆ.

ನವೆಂಬರ್ ೧೬ರಿಂದ ೧೮ನೇ ಡಿಸೆಂಬರ್‌ವರೆಗೆ ಸೆರೆಮನೆವಾಸ.

೧೯೧೪ : ಗಾಂಧೀ–ಸ್ಮಟ್ಸ್ (ದಕ್ಷಿಣ ಆಫ್ರಿಕಾದ ಜನರಲ್) ಒಪ್ಪಂದ. ದಕ್ಷಿಣ ಆಫ್ರಿಕಾ ಬಿಡಲು ಸಿದ್ಧತೆ.

ಮೊದಲನೆಯ ಮಹಾಯುದ್ಧದಲ್ಲಿ ಇಂಗ್ಲೆಂಡಿಗೆ ಸಹಾಯ ಮಾಡಲು ಇಂಗ್ಲೆಂಡಿನಲ್ಲಿ ನೆಲೆಸಿದ್ದ ಭಾರತೀಯರ 'ಆ್ಯಂಬುಲೆನ್ಸ್ ಕಾರ್ಪ್ಸ್' ಸಂಘಟನೆ.

೧೯೧೫ : ಜನವರಿಯಲ್ಲಿ ಭಾರತಕ್ಕೆ ಆಗಮನ.

ಗುಜರಾತಿನ ಅಹಮದಾಬಾದ್ ಜಿಲ್ಲೆಯ ಕೊಚ್ರಾಬ್‌ನಲ್ಲಿ ಸತ್ಯಾಗ್ರಹ ಆಶ್ರಮ ಸ್ಥಾಪನೆ.

ಗುಜರಾತ್ ರಾಜ್ಯದ ಸಬರಮತಿಯಲ್ಲಿ ಆಶ್ರಮದ ಸ್ಥಾಪನೆ.

೧೯೧೭ : ಬಿಹಾರದ ಚಂಪಾರಣ್‌ನಲ್ಲಿ ನೀಲಿ ಬೆಳೆಗಾರರ ಪರ ಹೋರಾಟ.

೧೯೧೮ : ಖೇಡಾದಲ್ಲಿ ರೈತರ ಮೇಲೆ ಹೇರಲಾದ ಕಂದಾಯದ ವಿರುದ್ಧ ಸತ್ಯಾಗ್ರಹ.

ಅಹಮದಾಬಾದ್ ಕಾರ್ಮಿಕರ ಪರ ಹೋರಾಟ.

೧೯೧೯ : ಭಾರತೀಯರ ಅಭಿವ್ಯಕ್ತಿ ಸ್ವಾತಂತ್ರ್ಯ ಕಸಿದುಕೊಂಡ 'ರೌಲಟ್ ಕಾಯ್ದೆ' ವಿರುದ್ಧ ಹೋರಾಟ.

ಭಾರತದ ಮುಸ್ಲಿಮರು ಆರಂಭಿಸಿದ ಖಿಲಾಫತ್ ಚಳುವಳಿಗೆ ಬೆಂಬಲ.

'ಯಂಗ್ ಇಂಡಿಯಾ' ಇಂಗ್ಲಿಷ್ ಪತ್ರಿಕೆ ಮತ್ತು 'ನವಜೀವನ್' ಗುಜರಾತಿ ಪತ್ರಿಕೆಯ ಸಂಪಾದಕತ್ವ

ಏಪ್ರಿಲ್ ೯–೧೧: ಕೋಸಿಯಿಂದ ಬಾಂಬೆಗೆ ರೈಲುಗಾಡಿಯಲ್ಲಿ ಹೋಗುವಾಗ ಬಂಧನ.

೧೯೨೦ : ಗಾಂಧೀಜಿಯ 'ಅಸಹಕಾರ' ಪರಿಕಲ್ಪನೆಯ ಕಾರ್ಯಕ್ರಮವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಳವಡಿಸಿಕೊಂಡದ್ದು.

೧೯೨೨ : ಚಳುವಳಿಯ ಕಾಲದಲ್ಲಿ ಜನರ ಆಕ್ರೋಶ. ಚೌರಿ ಚೌರಾ ದಂಗೆ. ೨೧ ಭಾರತೀಯ ಪೋಲೀಸರ ಕೊಲೆ; ಗಾಂಧೀಜಿಯಿಂದ ಸತ್ಯಾಗ್ರಹ ಚಳುವಳಿ ವಾಪಸ್.

೧೯೨೪ : ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆ.

೧೯೨೭ : 'ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' ಅಥವಾ 'ದ ಸ್ಟೋರಿ ಆಫ್ ಮೈ ಲೈಫ್' ಆತ್ಮಕತೆಯ ಮೊದಲ ಭಾಗದ ಪ್ರಕಟಣೆ.

೧೯೨೮ : ಕೇರಳದ ವೈಕಂ ಪಟ್ಟಣದಲ್ಲಿ ದಲಿತರ ದೇವಾಲಯ ಪ್ರವೇಶದ ಸತ್ಯಾಗ್ರಹಕ್ಕೆ ಬೆಂಬಲ.

೧೯೨೯ : ಆತ್ಮಕತೆಯ ಎರಡನೆಯ ಭಾಗದ ಪ್ರಕಟಣೆ.

೧೯೩೦ : ಉಪ್ಪಿನ ಸತ್ಯಾಗ್ರಹದ ಭಾಗವಾಗಿ ಇನ್ನೂರು ಮೈಲಿ ದಂಡಿ ಯಾತ್ರೆ

೧೯೩೧ : ಗಾಂಧೀ–ಇರ್ವಿನ್ (ವೈಸ್‌ರಾಯ್) ಒಪ್ಪಂದ.
ಲಂಡನ್‌ನ ದುಂಡು ಮೇಜಿನ ಸಭೆಯಲ್ಲಿ ಭಾಗಿ.

೧೯೩೨ : ದಲಿತರಿಗೆ ಪ್ರತ್ಯೇಕ ಮತಕ್ಷೇತ್ರ ಪ್ರಸ್ತಾವ ವಿರೋಧಿಸಿ ಉಪವಾಸ.
೪ ಜನವರಿಯಿಂದ ೨೦ ಸೆಪ್ಟೆಂಬರ್‌ವರೆಗೆ ಜೈಲು ಶಿಕ್ಷೆ.

೧೯೩೩ : ಜೈಲಿನಲ್ಲಿದ್ದಾಗಲೇ 'ಹರಿಜನ್' ಇಂಗ್ಲಿಷ್ ಪತ್ರಿಕೆಯನ್ನು ಆರಂಭಿಸಲು ಸರ್ಕಾರದಿಂದ ಅನುಮತಿ.

೧೯೩೪ : ಅಖಿಲ ಭಾರತೀಯ ಗ್ರಾಮೀಣ ಕೈಗಾರಿಕೆ ಸಂಸ್ಥೆಯ ಸ್ಥಾಪನೆ.

೧೯೩೬ : ಗುಜರಾತಿನ ವಾರ್ಧಾ ಬಳಿ ಸೇವಾಗ್ರಾಮ ಆಶ್ರಮ ಸ್ಥಾಪನೆ.

೧೯೩೭ : ವಾರ್ಧಾದಲ್ಲಿ 'ನಯೀ ತಾಲೀಂ' ಶೈಕ್ಷಣಿಕ ಕಾರ್ಯಕ್ರಮದ ಆರಂಭ.

೧೯೪೧ : 'ಕನ್‌ಸ್ಟ್ರಕ್ಟಿವ್ ಪ್ರೋಗ್ರಾಮ್: ಇಟ್ಸ್ ಮೀನಿಂಗ್ ಅಂಡ್ ಪ್ಲೇಸ್' ಕಿರುಹೊತ್ತಿಗೆಯ ಪ್ರಕಟಣೆ.

೧೯೪೨ : ಆಗಸ್ಟ್ ೮: ಕ್ವಿಟ್ ಇಂಡಿಯಾ ಚಳುವಳಿಗೆ ಕರೆ.
ಆಗಸ್ಟ್ ೯: ಸೆರೆಮನೆವಾಸ– ೬ ಮೇ ೧೯೪೪ವರೆಗೆ.

೧೯೪೪ : ಜೈಲಿನಲ್ಲಿ ಕಸ್ತೂರಬಾ ನಿಧನ.
ಹಿಂದೂ–ಮುಸ್ಲಿಂ ಏಕತೆಯ ಬಗ್ಗೆ ಜಿನ್ನಾ ಜೊತೆ ಮಾತುಕತೆ.

೧೯೪೬ : ಕ್ಯಾಬಿನೆಟ್ ಮಿಷನ್ ಜತೆ ಭೇಟಿ.
ಗಲಭೆ ಪೀಡಿತ ಬಂಗಾಳದ ಪ್ರದೇಶಗಳಿಗೆ ಭೇಟಿ.

೧೯೪೭ : ಭಾರತದ ವಿಭಜನೆ ಮತ್ತು ಭಾರತದ ಸ್ವಾತಂತ್ರ್ಯ ಘೋಷಣೆ.
೧೫ ಆಗಸ್ಟ್ ೧೯೪೭. ನಡುರಾತ್ರಿ ಕಲ್ಕತ್ತಾದ ನೌಖಾಲಿಯಲ್ಲಿ

ಕೋಮು ಗಲಭೆಯ ಬಗೆಗೆ ದುಃಖ, ತಳಮಳಗಳ ಭಾವದಲ್ಲಿ ಗಾಂಧೀಜಿ.

ಕಲ್ಕತ್ತಾದಲ್ಲಿ ಹಿಂದೂ-ಮುಸ್ಲಿಂ ಏಕತೆಯನ್ನು ಮರುಸ್ಥಾಪಿಸಲು ಉಪವಾಸ.

೧೯೪೮ : ಹಿಂದೂ- ಮುಸ್ಲಿಂ- ಸಿಖ್ಖರ ನಡುವೆ ಶಾಂತಿ ಸ್ಥಾಪನೆಗಾಗಿ ದೆಹಲಿಯಲ್ಲಿ ಉಪವಾಸ.

೨೯ ಜನವರಿ: ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ಗಾಗಿ ಒಂದು ಕರಡು ಸಂವಿಧಾನದ ರಚನೆ.

೩೦ ಜನವರಿ: ದುಷ್ಟ ನಾಥೂರಾಮ್ ಗೋಡ್ಸೆಯಿಂದ ಹತ್ಯೆ.

ಸಂಯೋಜನೆ: **ಎಚ್. ಎನ್. ಶೋಯಿಂಕಾ**

೧೩೨

ಗಾಂಧೀಜಿಯವರ ಸೆರೆಮನೆ ವಾಸಗಳು

ದಕ್ಷಿಣ ಆಫ್ರಿಕಾ

೧೦.೧.೧೯೦೮–೩೦.೧.೧೯೦೮	ಜೋಹಾನೆಸ್ ಬರ್ಗ್
೭.೧೦.೧೯೦೮–೨೫.೧೦.೧೯೦೮	ವೋಕ್‌ಸ್ರಸ್ಟ್
೨೬.೧೦.೧೯೦೮–೫.೧೧.೧೯೦೮	ಜೋಹಾನೆಸ್ ಬರ್ಗ್
೬.೧೧.೧೯೦೮–೧೨.೧೨.೧೯೦೮	ವೋಕ್‌ಸ್ರಸ್ಟ್
೨೫.೨.೧೯೦೯–೨.೩.೧೯೦೯	ವೋಕ್‌ಸ್ರಸ್ಟ್
೩.೩.೧೯೦೯–೨೪.೫.೧೯೦೯	ಪ್ರಿಟೋರಿಯಾ
೬.೧೧.೧೯೧೩–೭.೧೧.೧೯೧೩	ಚಾರ್ಲ್ಸ್ ಟೌನ್
೯.೧೧.೧೯೧೩–೧೨.೧೧.೧೯೧೩	ಡಂಡೀ
೧೨.೧೧.೧೯೧೩–೧೭.೧೧.೧೯೧೩	ವೋಕ್‌ಸ್ರಸ್ಟ್
೧೮.೧೧.೧೯೧೩–೧೭.೧೨.೧೯೧೩	ಬ್ಲೂಮ್‌ಫಾಂಟೈನ್

ಇಂಡಿಯಾ

೯.೪.೧೯೧೯–೧೧.೪.೧೯೧೯	ರೈಲ್ವೇ ಬೋಗಿ
೧೦.೩.೧೯೨೨–೨೦.೩.೧೯೨೨	ಸಬರಮತಿ ಜೈಲು
೨೧.೩.೧೯೨೨–೧೧.೧.೧೯೨೪	ಯರವಾಡ ಜೈಲು
೧೨.೧.೧೯೨೪–೫.೨.೧೯೨೪	ಯರವಾಡ ಜೈಲು (ಸಸ್ಸೂನ್ ಆಸ್ಪತ್ರೆ)

೫.೫.೧೯೩೦–೨೬.೧.೧೯೩೧	ಯರವಾಡ ಜೈಲು
೪.೧.೧೯೩೨–೮.೫.೧೯೩೩	ಯರವಾಡ ಜೈಲು
೧.೮.೧೯೩೩	ಸಬರಮತಿ ಜೈಲು
೨.೮.೧೯೩೩–೪.೮.೧೯೩೩	ಯರವಾಡ ಜೈಲು
೪.೮.೧೯೩೩–೨೩.೮.೧೯೩೩	ಯರವಾಡ ಜೈಲು
೯.೮.೧೯೪೨–೬.೫.೧೯೪೪	ಆಗಾಖಾನ್ ಪ್ಯಾಲೇಸ್ ಪ್ರಿಸನ್, ಪೂನಾ

(ಈ ಪಟ್ಟಿ ಗಾಂಧೀಜಿಯವರ ಬಂಧನ ಹಾಗೂ ಬಿಡುಗಡೆಯ ದಿನಗಳನ್ನು ದಾಖಲಿಸಿದೆ. ಮೂಲ: ಸಿ.ಬಿ. ದಲಾಲ್: ಗಾಂಧೀಜಿನಿ ದಿನವರಿ: ೧೮೬೯–೧೯೧೫; ೧೯೧೫–೧೯೪೮. ಆಕರ: 'ದ ಆಕ್ಸ್ ಫರ್ಡ್ ಇಂಡಿಯಾ ಗಾಂಧಿ', ಸಂ. ಗೋಪಾಲಕೃಷ್ಣ ಗಾಂಧಿ)

ಭಾಗ : ೧೪

ಗಾಂಧೀಜಿಯವರ ಪ್ರಿಯ ಪ್ರಾರ್ಥನೆಗಳು

ಪ್ರಾರ್ಥಿಸುವ ಮನುಷ್ಯ ತನ್ನ ಜೊತೆಗೂ, ಲೋಕದ ಜೊತೆಗೂ ಶಾಂತಿಯಿಂದಿರಬಲ್ಲ.

ಮೋಹನದಾಸ್ ಕರಮಚಂದ್ ಗಾಂಧಿ

೧೩೩

ವೈಷ್ಣವ ಜನ್ ತೋ

ಎಲ್ಲರ ನೋವನು ಬಲ್ಲವನಾದರೆ
ಗೆಲ್ಲುವೆ ನೀನು ಬಾಳಲ್ಲಿ
ಲೋಭವಿಲ್ಲದ ಉಪಕಾರವೆ ಸುಖವು
ಗರ್ವವು ಬರದಿರೆ ಮನದಲ್ಲಿ

ಸಕಲ ಜೀವದಲಿ ಗೌರವವಿರಲಿ
ನಿಂದೆ ಅಸೂಯೆ ಅಳಿದಿರಲಿ
ನಿರ್ಮಲ ನಡೆನುಡಿ ನಿಶ್ಚಲ ನಿಲುವನು
ಕಲಿಸಿದ ತಾಯಿಗೆ ಹಿತವಿರಲಿ

ಸಮಭಾವದಲಿ ದುರಾಸೆಯು ನೀಗಲಿ
ವನಿತೆಗೆ ಅಭಯದ ನೆರಳಿರಲಿ
ಸುಳ್ಳಿನ ರುಚಿಯನು ಅರಿಯದ ನಾಲಿಗೆ
ಪರಧನವನು ಬೇಡೆನಲಿ

ಥಳುಕು ಬೆಳಕುಗಳ ಮೋಹವ ಮೀರಿ
ಸ್ಥಿತ ಪ್ರಜ್ಞೆಯ ಮನ ಉದಯಿಸಲಿ
ಮನುಜ ರೂಪದಲೆ ದೇವರ ಕಂಡರೆ
ಪುಣ್ಯಧಾಮಗಳೆ ಹೃದಯದಲಿ

ಕಪಟವರಿಯದೆ ಸಾಗು ನೀ ಬೀಳದೆ
ರಾಗ ದ್ವೇಷಗಳ ಸುಳಿಯಲ್ಲಿ
ಮಮತೆಯಲ್ಲಿಯೆ ಮನುಜನಾಗುವಾ
ಪಯಣವೆ ಬಾಳಿನ ಗುರಿಯಿಲ್ಲಿ

ಗುಜರಾತಿ ಮೂಲ: **ನರಸಿಂಹ ಮೆಹ್ತಾ**
ಕನ್ನಡಕ್ಕೆ: **ಜಯಂತ ಕಾಯ್ಕಿಣಿ**

೧೩೪

ಕರುಣಾಳು ಬಾ ಬೆಳಕೆ

(ಲೀಡ್ ಕೈಂಡ್ಲಿ ಲೈಟ್)

ಕರುಣಾಳು, ಬಾ ಬೆಳಕೆ, ಮಸುಕಿದೀ ಮಬ್ಬಿನಲಿ,
        ಕೈ ಹಿಡಿದು ನಡೆಸೆನ್ನನು.
ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ,
        ಕೈ ಹಿಡಿದು ನಡೆಸೆನ್ನನು.
ಹೇಳಿ ನನ್ನಡಿಯಿಡಿಸು; ಬಲುದೂರ ನೋಟವನು
ಕೇಳೆನೊಡನೆಯೆ– ಸಾಕು ನನಗೊಂದು ಹೆಜ್ಜೆ.

ಮುನ್ನೆ ಇಂತಿರದಾದೆ; ನಿನ್ನ ಬೇಡದೆ ಹೋದೆ
        ಕೈ ಹಿಡಿದು ನಡೆಸು ಎನುತ.
ನನ್ನ ದಾರಿಯ ನಾನೆ ನೋಡಿ ಹಿಡಿದೆನು; ಇನ್ನು,
        ಕೈ ಹಿಡಿದು ನಡೆಸು ನೀನು.
ಮಿರುಗುಬಣ್ಣಕೆ ಬೆರೆತು, ಭಯ ಮರೆತು, ಕೊಬ್ಬಿದೆನು;
ಮೆರೆದಾಯ್ತು; ನೆನೆಯದಿರು ಹಿಂದಿನದನೆಲ್ಲ.

ಇಷ್ಟುದಿನ ಸಲಹಿರುವೆ ಈ ಮೂರ್ಖನನು; ಮುಂದೆಯೂ
        ಕೈ ಹಿಡಿದು ನಡೆಸದಿಹೆಯಾ?
ಕಷ್ಟದಡವಿಯ ಕಳೆದು, ಬೆಟ್ಟ ಹೊಳೆಗಳ ಹಾದು,
        ಇರುಳನ್ನು ನೂಕದಿಹೆಯಾ?
ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳಕೊಂಡ ದಿವ್ಯ ಮುಖ ನಗುತ?

ಇಂಗ್ಲಿಷ್ ಮೂಲ: **ಜಾನ್ ಹೆನ್ರಿ ನ್ಯೂಮನ್**
ಕನ್ನಡಕ್ಕೆ: **ಬಿ.ಎಂ.ಶ್ರೀ.**

೧೩೫

ಏಕ್ಲ ಚಲೋ
(ಒಬ್ಬನೇ ನಡೆ)

ನಿನ್ನ ಕರೆಗೆ ಯಾರೂ ಓಗೊಡದಿದ್ದರೇನು, ಒಬ್ಬನೇ ನಡೆ
ಒಬ್ಬನೇ ನಡೆ ಒಬ್ಬನೇ ನಡೆ ಒಬ್ಬನೇ ನಡೆ ಒಬ್ಬನೇ ನಡೆ

ಎಲ್ಲರೂ ಭಯದಲ್ಲಿ ಮುಖ ತಿರುಗಿಸಿ ನಿಂತರೇನು
ಎಲ್ಲರೂ ಭಯದಲ್ಲಿ ಮೂಕರಾಗಿ ನಿಂತರೇನು,
ಓ ಹತಭಾಗ್ಯನೆ,
ಮನ ಬಿಚ್ಚಿ, ದನಿಯೆತ್ತಿ, ನೀನೊಬ್ಬನೇ ನುಡಿ

ಎಲ್ಲ ನಿನ್ನ ಹೀಗಳೆದು ಹೋಗೆಂದು ಹೇಳಿದರೂ
ಕಾಡು ಮೇಡು ದಾಟುವಾಗ ಎಲ್ಲ ನಿನ್ನ ತೊರೆದರೂ
ಓ ಹತಭಾಗ್ಯನೆ,
ಕಾಲಡಿಯ ಮುಳ್ಳುಗಳ ತುಳಿತುಳಿದು ಮುಂದೆ ನಡೆ
ನಿನ್ನ ರಕ್ತ ಹರಿವ ಹಾದಿಯಲಿ ಒಬ್ಬನೇ ನಡೆ

ಬಿರುಗಾಳಿ ಮೊರೆವಂಥ ಕಾರ್ಮುಗಿಲ ರಾತ್ರಿಯಲಿ
ಯಾರೂ ಬೆಳಕು ತೋರದಿದ್ದರೂ
ಓ ಹತಭಾಗ್ಯನೆ,
ನಿನ್ನ ನೋವಿನ ಉರಿ ಜ್ವಾಲೆಯಲಿ
ನಿನ್ನೆದೆಯ ಬೆಳಕ ಬೆಳಗಿಸಿ ನೀನೊಬ್ಬನೇ ಉರಿ.

ಬಂಗಾಳಿ ಮೂಲ: ರವೀಂದ್ರನಾಥ ಠಾಕೂರ್
ಕನ್ನಡಕ್ಕೆ: ನಟರಾಜ್ ಹುಳಿಯಾರ್

ಟಿಪ್ಪಣಿ

ರವೀಂದ್ರನಾಥ ಠಾಕೂರ್ ಅವರ 'ಏಕ್ಲ ಚಲೋ' ಗೀತೆ ಗಾಂಧೀಜಿಯವರ ವ್ಯಕ್ತಿತ್ವದ ತಳಮಳ, ಶಕ್ತಿಗಳನ್ನು ಬಿಂಬಿಸುವ ಗೀತೆಗಳಲ್ಲೊಂದು. ಹಿಂದಿನ ಪುಟದಲ್ಲಿ ಕೊಟ್ಟಿರುವ ಅನುವಾದ ಮೂಲದ ರವೀಂದ್ರನಾಥ ಠಾಕೂರರೇ ಮಾಡಿದ ಇಂಗ್ಲಿಷ್ ಭಾಷಾಂತರವನ್ನು ಆಧರಿಸಿದೆ.

ಈಗಾಗಲೇ ಕನ್ನಡ ರಂಗಭೂಮಿಯಲ್ಲಿ ಜನಪ್ರಿಯವಾಗಿರುವ ಜಿ. ಚನ್ನಕೇಶವ ಹಾಗೂ ಶ್ರೀಧರ ಹೆಗ್ಗೋಡು ಮಾಡಿರುವ 'ಏಕ್ಲ ಚಲೋ'ದ ಹಾಡಿನ ರೂಪವನ್ನು ಕೆಳಗೆ ಕೊಡಲಾಗಿದೆ:

ನಿನ್ನ ಕರೆಗವರು ಓಗೊಡದಿದ್ದರೇನು, ಒಬ್ಬನೇ ನಡೆ
ನಿನ್ನ ಕರೆಗವರು ಓಗೊಡದಿದ್ದರೇನು, ಒಬ್ಬಳೇ ನಡೆ

ಬೆಚ್ಚಿ ಭಯದಲಿ ಅವರು
ಅರೆ ಓರೇ ಓ ತಮ್ಮಾ, ಭಯದಲಿ ಅವರು
ಅರೆ ಓರೇ ಓ ತಂಗಿ, ಭಯದಲಿ ಅವರು
ಜೀವ ಭಯದಿ ಗಂಟಲೊಣಗಿ ತೆಪ್ಪಗಾದರೆ
ನಿನ್ನ ಹೃದಯ ತೆರೆ
ನಿನ್ನ ಮನದ ಮೊರೆಯ ಸಾರುಗಟ್ಟಿ ಒಬ್ಬನೇ ನಡೆ
ನಿನ್ನ ಮನದ ಮೊರೆಯ ಸಾರುಗಟ್ಟಿ ಒಬ್ಬಳೇ ನಡೆ

ಅರೆ ಓರೇ ಓ ತಂಗಿ, ತೊರೆದರೆ ಅವರು
ಅರೆ ಓರೇ ಓ ತಮ್ಮ, ತೊರೆದರೆ ಅವರು
ಗೊತ್ತಿರದ ಕಾನನದಲಿ ನಿನ್ನ ತೊರೆದರೆ
ಕಲ್ಲುಮುಳ್ಳು ಮೆಟ್ಟು
ನಿನ್ನ ನೆತ್ತರಿನ ಹಾದಿಯಲಿ ಒಬ್ಬನೇ ನಡೆ
ನಿನ್ನ ನೆತ್ತರಿನ ಹಾದಿಯಲಿ ಒಬ್ಬಳೇ ನಡೆ

ನಿನ್ನ ಕರೆಗವರು ಓಗೊಡದಿದ್ದರೇನು, ಒಬ್ಬನೇ ನಡೆ
ನಿನ್ನ ಕರೆಗವರು ಓಗೊಡದಿದ್ದರೇನು, ಒಬ್ಬಳೇ ನಡೆ

ರೂಪಾಂತರ: **ಜಿ.ಚನ್ನಕೇಶವ-ಶ್ರೀಧರ ಹೆಗ್ಗೋಡು**

೧೩೬

ಅಬೈಡ್ ವಿತ್ ಮಿ

(ನನ್ನೊಡನಿರು ನೀ)

ನನ್ನೊಡನಿರು ನನ್ನೊಡನಿರು, ನನ್ನೊಡನಿರು ನೀ
ಇರುಳು ಇಳಿದು ಎರಗುತಿದೆ, ಕಾರಿರುಳು ಕವಿಯುತಿದೆ
ನನ್ನೊಡನಿರು ನನ್ನೊಡನಿರು ದೇವನೆ
ಕಾಯುವವರು ಕಾಣೆಯಾದರು, ಸುಖಸಂಪದ ಹಾರಿಹೋದವು
ನನ್ನೊಡನಿರು ನೀ, ಓ ದೀನ ಬಂಧುವೆ, ನನ್ನೊಡನಿರು ನೀ

ಬದುಕಿನಾ ಕಿರುದಿನವು ಅಳಿವ ಗಳಿಗೆ ಸಾರುತಿದೆ
ಲೋಕದ ಸುಖ ಮಂಕಾಗಿ, ಲೋಕದ ಸಿರಿ ಅಳಿಯುತಿದೆ
ಸುತ್ತಮುತ್ತ ಇರುವುದೆಲ್ಲ ಬದಲಾಗಿ ಕೊಳೆಯುತಿದೆ
ಓ ನೀ ಮಾತ್ರ ಹಾಗೇ ಉಳಿಯುವೆ, ನನ್ನೊಡನಿರು ನೀ

ನಿನ್ನ ಕರುಣೆ ನನಗಿರಲು ವೈರಿಗಳ ಭಯವಿಲ್ಲ
ಕೇಡಿಗೆ ಜಯವಿಲ್ಲ, ಕಣ್ಣೀರು ಕಹಿಯಿಲ್ಲ
ಸಾವಿನಾ ಕುಟುಕೆಲ್ಲಿದೆ? ಎಲೆ ಗೋರಿ, ನಿನ್ನಯಾ ಗೆಲುವೆಲ್ಲಿದೆ?
ಆದರೂ ಗೆಲ್ಲುವೆನು ದೇವ ನೀನಿದ್ದರೆ, ನನ್ನೊಡನಿರು ನೀ

ಎವೆ ಮುಚ್ಚಿದ ಕಣ್ಣೆದುರು ನಿನ್ನ ಶಿಲುಬೆಯಾ ತೋರು
ಕವಿದ ಮಂಕನು ಸೀಳಿ ಹೊಳೆಯುತ್ತಿರು
ಆಗಸದಾ ಎಡೆಗೆ ನನ್ನ ಒಯ್ಯುತ್ತಿರು

ಸಗ್ಗದ ಬೆಳಗು ಮೂಡುವುದು,
ಭೂಮಿಯ ಹುಸಿ ನೆರಳೋಡುವುದು
ಓ ದೇವನೇ, ಸಾವಿನಲಿ ಬದುಕಿನಲಿ, ನನ್ನೊಡನಿರು ನೀ
ನನ್ನೊಡನಿರು ನೀ ನನ್ನೊಡನಿರು ನೀ.

ಇಂಗ್ಲಿಷ್ ಮೂಲ: **ಹೆನ್ರಿ ಫ್ರಾನ್ಸಿಸ್ ಲೈಟ್**
ಕನ್ನಡಕ್ಕೆ: **ನಟರಾಜ್ ಹುಳಿಯಾರ್**

೧೩೭

ರಘುಪತಿ ರಾಘವ ರಾಜಾರಾಮ್

ರಘುಪತಿ ರಾಘವ ರಾಜಾರಾಮ್
ಪತಿತ ಪಾವನ ಸೀತಾರಾಮ್

ಈಶ್ವರ ಅಲ್ಲಾ ತೇರೇ ನಾಮ್
ಸಬ್‌ಕೋ ಸನ್ಮತಿ ದೇ ಭಗವಾನ್

ರಾಮ ರಹೀಮ ತೇರೆ ನಾಮ್
ಕೃಷ್ಣ ಕರೀಮ ಪಾವನ ನಾಮ್

ಸೀತಾರಾಮ್ ಜಯ ಸೀತಾರಾಮ್
ಭಜ್ ಪ್ಯಾರೇ ತು ಸೀತಾರಾಮ್

ಟಿಪ್ಪಣಿ

ಗಾಂಧೀಜಿ ದಂಡಿ ಯಾತ್ರೆಯಲ್ಲಿ ಬಳಸಿದ ಈ ಭಜನೆ ಮುಂದೆ ಅತ್ಯಂತ ಜನಪ್ರಿಯ ಪ್ರಾರ್ಥನೆಯಾಯಿತು. ತುಳಸೀದಾಸರ 'ರಾಮಚರಿತ ಮಾನಸ'ದ ಭಾಗವೊಂದನ್ನು ಗಾಂಧೀಜಿ ಮಾರ್ಪಡಿಸಿ, ಈ ಭಜನೆಯ ಮೂಲಕ ಧಾರ್ಮಿಕ ಐಕ್ಯತೆಯನ್ನು ಪ್ರತಿಪಾದಿಸಿದರು. ಈ ಪ್ರಾರ್ಥನೆಗೆ ಹಲವು ಪಂಕ್ತಿಗಳು ಮುಂದೆ ಸೇರಿಕೊಂಡಂತಿವೆ. ಇಲ್ಲಿ ಕರ್ನಾಟಕದಲ್ಲಿ ಹೆಚ್ಚು ಪರಿಚಿತವಾದ ಭಾಗವನ್ನು ಮಾತ್ರ ನೀಡಲಾಗಿದೆ.



ನಾನು ಗಾಂಧಿಯ ಅನುಯಾಯಿಯೆಂದು ಯಾರೂ ಹೇಳದಿರಲಿ.

ನಾನು ನನ್ನ ಅನುಯಾಯಿಯಾದರೆ ಸಾಕು.

ನೀವು ನನ್ನ ಅನುಯಾಯಿಗಳಲ್ಲ, ಸಹಯಾತ್ರಿಕರು;

ನನ್ನ ಸಹಪಾಠಿಗಳು, ಸಹ ಅನ್ವೇಷಕರು.

ಮೋಹನದಾಸ್ ಕರಮಚಂದ್ ಗಾಂಧಿ



ಡಾ. ನಟರಾಜ್ ಹುಳಿಯಾರ್

ಹುಟ್ಟು: ತುಮಕೂರು ಜಿಲ್ಲೆಯ ಹುಳಿಯಾರಿನಲ್ಲಿ. ವಿದ್ಯಾಭ್ಯಾಸ: ಎಂ.ಎ. (ಇಂಗ್ಲಿಷ್). ಪಿಎಚ್.ಡಿ.: 'ಆಧುನಿಕ ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ'. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ. ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ. ಗುಲಬರ್ಗಾದ ಕೇಂದ್ರೀಯ ವಿಶ್ವವಿದ್ಯಾಲಯದ ಭಾಷಾ ವಿಭಾಗಗಳ ಡೀನ್ ಹಾಗೂ ಇಂಗ್ಲಿಷ್ ವಿಭಾಗದ ಮುಖ್ಯಸ್ಥನಾಗಿ ಕೆಲ ಕಾಲ ಸೇವೆ.

ರಾಮಮನೋಹರ ಲೋಹಿಯಾ ಸಮಗ್ರ ಕೃತಿಗಳ ಸಂಪಾದಕ. 'ಲಂಕೇಶ್ ಪತ್ರಿಕೆ'ಯಲ್ಲಿ 'ಬರೆವ ಬದುಕು', 'ಗಾಳಿ ಬೆಳಕು' ಅಂಕಣ ಬರಹಗಳ ಪ್ರಕಟಣೆ. 'ಪ್ರಜಾವಾಣಿ'ಯಲ್ಲಿ 'ಕನ್ನಡಿ' ಅಂಕಣ ಬರಹಗಳ ಪ್ರಕಟಣೆ.

ಪ್ರಕಟಿತ ಕೃತಿಗಳು: ಮತ್ತೊಬ್ಬ ಸರ್ವಾಧಿಕಾರಿ, ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು, ಮಾಯಾ ಕಿನ್ನರಿ (ಕಥಾ ಸಂಕಲನಗಳು), ಕಾಮನ ಹುಣ್ಣಿಮೆ (ಕಾದಂಬರಿ), ರೂಪಕಗಳ ಸಾವು (ಕವಿತೆಗಳು), ಗಾಳಿ ಬೆಳಕು (ಸಾಂಸ್ಕೃತಿಕ ಬರಹಗಳು), ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ (ತೌಲನಿಕ ಅಧ್ಯಯನ), ಇಂತಿ ನಮಸ್ಕಾರಗಳು (ಲಂಕೇಶ್ ಹಾಗೂ ಡಿ.ಆರ್. ನಾಗರಾಜ್ ಕುರಿತ ಸೃಜನಶೀಲ ಕಥಾನಕ), ಶೇಕ್‌ಸ್ಪಿಯರ್ ಮನೆಗೆ ಬಂದ (ನಾಟಕ), ಮುಂದಣ ಕಥನ (ನಾಟಕ), ಶಾಂತವೇರಿ ಗೋಪಾಲಗೌಡ (ಜೀವನಚರಿತ್ರೆ), ಕನ್ನಡಿ (ಅಂಕಣ ಬರಹ), ಕವಿ ಜೋಡಿಯ ಆತ್ಮಗೀತ (ಕಥಾಕಾವ್ಯ), ಡಿ. ಆರ್. ನಾಗರಾಜ್ (ವ್ಯಕ್ತಿತ್ವ ಮತ್ತು ವಿಮರ್ಶೆ).

ಸಂಪಾದಿತ ಕೃತಿಗಳು: ಎಲ್ಲರ ಗಾಂಧೀಜಿ, ಹಸಿರು ಸೇನಾನಿ (ಎಂ.ಡಿ.ನಂಜುಂಡಸ್ವಾಮಿ: ಹೋರಾಟ-ಚಿಂತನೆ), ಬಾರುಕೋಲು (ಎಂಡಿಎನ್ ಬರಹಗಳು), ತೆರೆದ ಪಠ್ಯ (ಕಿ.ರಂ.ನಾಗರಾಜರ ಆಯ್ದ ಬರಹಗಳು), ಡಾರ್ಕ್ ಅರ್ತ್: ಲಂಕೇಶ್ ರೀಡರ್, ಶೇಕ್‌ಸ್ಪಿಯರ್: ಕನ್ನಡ ಸ್ಪಂದನ, ಆಫ್ರಿಕಾ ಸಾಹಿತ್ಯ ವಾಚಿಕೆ, ಲೋಹಿಯಾ ಚಿಂತನೆ, ಲೋಹಿಯಾ ಬರಹಗಳ ಕನ್ನಡಾನುವಾದಗಳ 10 ಸಂಪಾದಿತ ಕೃತಿಗಳು; ಲೋಕ ಸಾಹಿತ್ಯ ಮಾಲಿಕೆಯ 12 ಕೃತಿಗಳು; ಭಾರತೀಯ ಭಾಷಾ ನಾಟಕ ಮಾಲಿಕೆಯ 15 ಕೃತಿಗಳು.

ಪ್ರಶಸ್ತಿ: ಕರ್ನಾಟಕ ಸಾಹಿತ್ಯ ಅಕಾಡೆಮಿ ಸಾಹಿತ್ಯ ಶ್ರೀ ಪ್ರಶಸ್ತಿ-2017, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು (1994, 2002, 2009), ಮಾಧ್ಯಮ ಅಕಾಡೆಮಿ ಅಂಬೇಡ್ಕರ್ 'ಮೂಕ ನಾಯಕ' ಪ್ರಶಸ್ತಿ, ಲೋಕನಾಯಕ ಜಯಪ್ರಕಾಶ ನಾರಾಯಣ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ವಿ.ಎಂ. ಇನಾಂದಾರ್ ವಿಮರ್ಶಾ ಪ್ರಶಸ್ತಿ, 1990-2000 ದಶಕದ ಶ್ರೇಷ್ಠ ಕನ್ನಡ ಕತೆಯೆಂದು 'ಮಾಯಾಕಿನ್ನರಿ'ಗಾಗಿ ದೆಹಲಿಯ ಕಥಾ ಪ್ರಶಸ್ತಿ, ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯ ಮೊದಲ ಬಹುಮಾನ, 'ಮಯೂರ' ಮಾಸಿಕದ 'ವರ್ಷದ ಕತೆ' ಪ್ರಶಸ್ತಿ. ನಾಡಿನ ಹಲವು ವಿಶ್ವವಿದ್ಯಾಲಯಗಳಲ್ಲಿ ಇವರ ಕತೆ, ನಾಟಕ, ವಿಮರ್ಶೆ, ಜೀವನಚರಿತ್ರೆ, ಕಾದಂಬರಿ, ಪ್ರಬಂಧಗಳು ಪಠ್ಯವಾಗಿವೆ.



'ನನ್ನ ಜೀವನವೇ ನನ್ನ ಸಂದೇಶ'
ಎಂದು ಗಾಂಧೀಜಿ ಥಟ್ಟನೆ ಹೇಳಿದ್ದು
ಅವರೊಳಗಿನ ತತ್ವಜ್ಞಾನಿ ಕಂಡುಕೊಂಡ
ವಿನಮ್ರ ಸತ್ಯವಾಗಿತ್ತು.

ತಮ್ಮ ಜೀವನದುದ್ದಕ್ಕೂ ಒಳಿತನ್ನೇ
ಹುಡುಕಿ, ಒಳಿತನ್ನೇ ರೂಪಿಸಲೆತ್ನಿಸಿದ
ಗಾಂಧೀಜಿಯವರ ಧ್ಯಾನಸ್ಥ ಮಾತು,
ಬರಹಗಳ ಪ್ರಾತಿನಿಧಿಕ ಸಂಕಲನ ಇದು.
ಗಾಂಧೀಜಿ ಓದುಗರೊಡನೆ ನೇರವಾಗಿ
ಮಾತಾಡಿರುವ ಸಾವಿರಾರು ಜೀವಂತ
ಕಾಣ್ಕೆಗಳ ಈ ಬರಹಗಳು ನಮ್ಮ ಸ್ಥಗಿತ
ಆಲೋಚನೆಗಳ ದಿಕ್ಕನ್ನೇ
ಬದಲಾಯಿಸಬಲ್ಲವು.

ಗಾಂಧೀ ಚಿಂತನಾಲೋಕದ
ಅಪೂರ್ವ ಮಿಂಚು, ಮಿನುಗು, ಆಳ,
ಗಾಂಭೀರ್ಯಗಳ ಸಂಕೀರ್ಣ
ಮುಖಗಳನ್ನು ಕಾಣಿಸುವ ಇಷ್ಟೊಂದು
ವೈವಿಧ್ಯಮಯ ಗಾಂಧೀ ಬರಹಗಳ
ಪುಸ್ತಕವೊಂದು ಮೊದಲ ಬಾರಿಗೆ
ಕನ್ನಡದಲ್ಲಿ ಪ್ರಕಟವಾಗುತ್ತಿದೆ.

ಎಲ್ಲರ ಗಾಂಧೀಜಿ

ISBN: 978-81-955903-1-5

ರೂ.300

ಪಲ್ಲವ